KARNATAKA

Kabya Kalanidhi Series,

NO 9.

ABHINAVA DASAKUMARA CHARITE

BY

CHOUNDA RAJA.

Volume I (chapters I to VII inclusive.)

ಚೌಂಡರಾಜ ವಿರಚಿತ

ಅಭಿನವದಶಕುಮಾರಚರಿತೆ.

ಪ್ರಥಮಸಂಪುಟಂ (ಆಶ್ವಾಸ ೧—೭)

——:o:——

ಎಸ್. ಜಿ. ನರಸಿಂಹಾಚಾರ್

ಲೈಬ್ರೇರಿಯರ್ ಗೌರ್ನಮೆಂಟ್ ಓರಿಯಂಟಲ್ ಲೈಬ್ರೇರಿ,

ಕನ್ನಡ ಟ್ರಾನ್ಸ್ಲೇಟರ್ ಗೌರ್ನಮೆಂಟ್ ಎಜ್ಯುಕೇಷನ್ ಆಫೀಸ್, ಮೈಸೂರು

ಮತ್ತು

ಮುಂ. ಆ. ರಾಮಾನುಜ್ಜೈಯಂಗಾರ್

ಅಸಿಸ್ಟೆಂಟ್ ಮಾಸ್ಟರ್ ವಸ್ಲಿಯರ್ಮಿಷನ್ ಹೈಸ್ಕೂಲ್ ಮೈಸೂರು

ಇವರುಗಳಿಂದ ಶೋಧಿಸಲ್ಪಟ್ಟು

ಮೈಸೂರ್ :

ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿತವಾಯಿತು.

1902.

UNIVERSAL
LIBRARY
OU_200640
UNIVERSAL
LIBRARY

ಪೀಠಿಕೆ.

—:ಕವಿಚರಿತ್ರೆ:—

ಈ ಗ್ರಂಥಕರ್ತನಿಗೆ ಚಾಂಡರಾಜನೆಂದು ಹೆಸರು. ಈತನು ಭಾರದ್ವಾಜಗೋತ್ರದ ಮಧುಸೂದನನೆಂಬ ಬ್ರಾಹ್ಮಣನ ಮಗನು. ಈತನ ತಾಯಿ ಮುಲ್ಲವ್ವೆ; ಪತ್ನಿ, ಲಕ್ಷ್ಮಿ. "ಸರಸಕವೀಶ್ವರ" ನೆಂಬವನು ಅಣ್ಣನೆಂದು ಹೇಳಿಕೊಳ್ಳುತ್ತಾನೆ. ಅಲ್ಲದೆ, ತಾನು "ಉದ್ದಂಡ ಮನೋಹರಪ್ರಚುರಶಿಷ್ಯಂ" ಎಂದು ಹೇಳುತ್ತಾನೆ. "ವಿಟ್ಠಲಪದಾಂಭೋಜಾತ ಭೃಂಗಂ" "ಹರಿಪಾದಶೋಣಪಂಕರುಹಮಧುನ್ಮತ್ತಂ" ಎಂದು ಹೇಳಿಕೊಳ್ಳುವುದರಿಂದ, ಈತನು ವಿಷ್ಣುಭಕ್ತನೆಂದು ವ್ಯಕ್ತವಾಗುತ್ತದೆ. ಈತನು "ಪಂಡರೀರಾಯನಭಂಗವಿಟ್ಠಲಂ" ಎಂದು ತನ್ನ ಇಷ್ಟದೈವವನ್ನು ಸ್ತುತಿಸಿರುವುದರಿಂದ, ಬಹುಶಃ ಪಂಡರಾಪುರದವನೆಂದು ತೋರುತ್ತದೆ. ಈತನಿಗೆ "ಕವಿತಾವಿಲಾಸ," "ಕವಿರಾಜಶೇಖರ" ಎಂಬ ಬಿರುದುಗಳು ಇದ್ದಂತೆ ತೋರುತ್ತದೆ.

ಈತನು ಯಾವ ಕಾಲದಲ್ಲಿದ್ದನೋ ನಿಶ್ಚಯಿಸಿ ಹೇಳಲಾಗುವುದಿಲ್ಲ. ಈ ಕವಿಯನ್ನು ಇತರ ಕವಿಗಳು ಯಾರೂ ಸ್ತುತಿಸಿರುವಂತೆ ಕಾಣುವುದಿಲ್ಲ. ಈ ಗ್ರಂಥದಿಂದ ಉದ್ಧೃತವಾದ ಪದ್ಯಗಳೂ ಎಲ್ಲಿಯೂ ಉದಾಹೃತವಾಗಿಲ್ಲ. ಆದರೂ ಈ ಗ್ರಂಥವು ನಾಗವರ್ಮನ "ಕಾದಂಬರಿ" ಯನ್ನೂ, ನೇಮಿಚಂದ್ರನ ವಾಸವದತ್ತಾಖ್ಯಾಯಾನುರೂಪವಾದ "ಲೀಲಾವತಿ" ಯನ್ನೂ, ನೋಡಿ ಬರೆದಿರಬಹುದೆಂಬ ಊಹೆಗೆ ಅವಕಾಶವಿರುವುದರಿಂದಲೂ, ಈತನು ಕರ್ಣಾಟಕ ಪೂರ್ವಕವಿಗಳಲ್ಲಿ ಪಂಪ, ಪೊನ್ನ, ಚಂದ್ರ, ರುದ್ರಭಟ್ಟ— ಇವರುಗಳನ್ನು ಸ್ತುತಿಸಿರುವುದರಿಂದಲೂ, ಇವರುಗಳಲ್ಲಿ ಆಧುನಿಕನಾದ ರುದ್ರಭಟ್ಟನಿಗಿಂತಲೂ ಈಚೆಯವನಾಗಿರಬೇಕು.

ಈತನ ಬಂಧವು ಪೂರ್ವಕವಿಗಳ ಬಂಧವನ್ನು ಬಹುಮಟ್ಟಿಗೆ ಹೋಲುವುದರಿಂದ, ಆಕವಿಗಳ ಕಾಲಕ್ಕೆ ಸಮೀಪದಲ್ಲಿ,— ಎಂದರೆ ೧೪ನೆಯ ಶತಮಾನದಲ್ಲಿ— ಇದ್ದಿರಬಹುದು.

ಈಗ್ರಂಥವು ದಂಡಿಕವಿಯ ಸಂಸ್ಕೃತಗದ್ಯರೂಪವಾದ "ದಶಕುಮಾರಚರಿತ್ರೆ"ಯ ಕರ್ಣಾಟಕ ಚಂಪೂರೂಪವಾದ ಅನುವಾದವು. ಇದು ಲಲಿತವಾಗಿಯೂ, ಕಥಾಕೌತುಕದಿಂದ ಹೃದಯಂಗವಾಗಿಯೂ ಇದೆ.

ಓದುವವರ ಸೌಕರ್ಯಕ್ಕಾಗಿ ಈ ಗ್ರಂಥವನ್ನು ಎರಡು ಸಂಪುಟವಾಗಿ ಭಾಗಿಸಿ ಮುದ್ರಿಸಿದ್ದೇವೆ. ಈ ಪ್ರಥಮ ಸಂಪುಟದಲ್ಲಿ ಸಂಸ್ಕೃತ ದಶಕುಮಾರಚರಿತ್ರೆಯ ಪೂರ್ವಪೀಠಿಕೆಯ ಕಥಾಭಾಗವು ಅಡಕವಾಗಿದೆ.

ಈ ಗ್ರಂಥವನ್ನು ಎರಡು ಹಸ್ತಲಿಖಿತ ಪುಸ್ತಕಗಳ ಆಧಾರದಿಂದ ಮುದ್ರಿಸಿದ್ದೇವೆ. ಇವೆರಡೂ ಮೈಸೂರು ಗೌರ್ನ್‌ಮೆಂಟ್ ಓರಿಯಂಟಲ್ ಲೈಬ್ರೆರಿಯ ಪುಸ್ತಕಗಳು. ಇವುಗಳಲ್ಲಿ ಒಂದು ಓಲೆಯ ಪುಸ್ತಕ; ಮತ್ತೊಂದು ಕಾಗದದ ಪುಸ್ತಕ. ಇದು ಬಹಳ ಅಶುದ್ಧವಾಗಿದ್ದು. ಆದುದರಿಂದ ಓಲೆಯ ಪುಸ್ತಕದ ಆಧಾರದಿಂದಲೇ ಈ ಗ್ರಂಥವು ಅಚ್ಚಾಯಿತೆಂದು ಹೇಳಬೇಕು.

ಈ ಪ್ರತಿಗಳನ್ನು ನನಗೆ ದಯೆಯಿಟ್ಟು ಕೊಟ್ಟ ಗೌರ್ನ್‌ಮೆಂಟ್ ಓರಿಯಂಟಲ್ ಕ್ಯೂರೇಟರ್, ಮಾನ್ಯ ರಾ॥ ಏ. ಮಹದೇವಶಾಸ್ತ್ರಿ, ಬಿ. ಏ. ರವರ ಉಪಕಾರವು ಚಿರಸ್ಮರಣೀಯವಾಗಿದೆ.

ವಿಷಯ ವಿವರಣಂ.

		ಪುಟುದಿಸಂಖ್ಯೆ.
ಪ್ರಥಮಾಶ್ವಾಸಂ,	ಪೀಠಿಕಾಪ್ರಕರಣಂ	೧
ದ್ವಿತೀಯಾಶ್ವಾಸಂ,	ಮಗಧೇಶ್ವರಮೂಳವರಾಜಯುದ್ಧವರ್ಣನಂ, ದಶಕುಮಾರೋದಯವರ್ಣನಂ, ವಿದ್ಯಾಭ್ಯಾಸವರ್ಣನಂ	೧೭
ತೃತೀಯಾಶ್ವಾಸಂ,	ಮಾತಂಗಕ ರಾಜವಾಹನ ಪಾತಾಳಲೋಕವಿಷಯಂ, ಮಾತಂಗಕನಿಷ್ಟಸಿದ್ಧಿವರ್ಣನಂ	೪೨
ಚತುರ್ಥಾಶ್ವಾಸಂ,	ಪುಷ್ಪೋದ್ಭವಕಥಾವೃತ್ತಾಂತಂ	೬೩
ಪಂಚಮಾಶ್ವಾಸಂ,	ಸೋಮದತ್ತಕಥಾವೃತ್ತಾಂತಂ	೯೩
ಷಷ್ಠಾಶ್ವಾಸಂ,	ಅವಂತೀಸುಂದರೀದರ್ಶನವರ್ಣನಂ	೧೧೪
ಸಪ್ತಮಾಶ್ವಾಸಂ,	ಭುವನಕೋಶವಿಸ್ತಾರವೃತ್ತಾಂತಂ.	೧೪೭

——:o:——

ವಿಷಯವಿವರಣಂ.

– ದ್ವಿತೀಯ ಸಂಪುಟಂ –

		ಪುಟಾದಿಸಂಖ್ಯೆ.
ಅಷ್ಟಮಾಶ್ವಾಸಂ,	ಅಪಹಾರವರ್ಮಕಥಾವೃತ್ತಾಂತಂ	೧
* ನವಮಾಶ್ವಾಸಂ	ಅರ್ಥಪಾಲಕಥಾವೃತ್ತಾಂತಂ	೬೭
ದಶಮಾಶ್ವಾಸಂ,	ಉಪಹಾರವರ್ಮಕಥಾವೃತ್ತಾಂತಂ	೯೪
ಏಕಾದಶಾಶ್ವಾಸಂ,	ಪ್ರಮತಿಕಥಾವೃತ್ತಾಂತಂ	೧೨೨
ದ್ವಾದಶಾಶ್ವಾಸಂ,	ಮಿತ್ರಗುಪ್ತಕಥಾವೃತ್ತಾಂ	೧೪೩
ತ್ರಯೋದಶಾಶ್ವಾಸಂ,	ಮಿತ್ರಗುಪ್ತನಿರೋಷ್ಠಕಥಾವೃತ್ತಾಂತಂ	೧೮೩
ಚತುರ್ದಶಾಶ್ವಾಸಂ,	ವಿಪ್ರತಕಥಾವೃತ್ತಾಂತಂ	೧೯೬

(ಅಸಂಪೂರ್ಣಂ)

---

* ಒಂದು ಪ್ರತಿಯಲ್ಲಿ ಉಪಹಾರವರ್ಮನ ಕಥೆಯನ್ನು ನವಮಾಶ್ವಾಸವಾಗಿಯೂ, ಅರ್ಥಪಾಲನ ಕಥೆಯನ್ನು ದಶಮಾಶ್ವಾಸವಾಗಿಯೂ ಕೊಟ್ಟಿದೆ.

ಅಖಿನವದಶಕುಮಾರಚರಿತೆ.

॥ ಪ್ರಥಮಾಶ್ವಾಸಂ ॥

ಶ್ರೀಯನುದಾರದಿಂದುರವಳೊಪ್ಪಿರೆ ತಾಳ್ದ ದಶಾವತಾರಸಂ ।
ಧ್ಯಾಯಕವಿಂ ವಿರೋಧಿಬಲಮುಂ ತವೆ ಗೆಲ್ದ ಮರುನ್ನಿಕಾಯಮುಂ ॥
ಸ್ವಾಯತಸತ್ಪದಿಂ ಪೊರೆವ ಲೋಕಜನಸ್ತುತಿವೆತ್ತ ಪಂಡರೀ ।
ರಾಯನಭಂಗವಿಟ್ಟಲನಲಂಪಿನೊಳೀಗೆಮಗಿಷ್ಟಸಿದ್ಧಿಯುಂ ॥ ೧

ತರಳಕಟಾಕ್ಷಮಾತ್ರಗತಿಯಿಂ ದಿವಿಜಾಸುರಮರ್ತ್ಯರಪ್ಪನ್ನಗೋ ।
ತ್ಕರಪರಿಖೇದಮಂ ಕಳೆದು ನಾತೆ ಕೃತಾರ್ಥರೆನಲ್ಕೆ ಮಾಳ್ಪಿ ಭಾ ॥
ಸುರಸಿತಪದ್ಮಹಸ್ತೆ ಕಮಲಾಸನೆ ಸೀರಜನೇತ್ರೆ ನುಗ್ಗಸಾ ।
ಗರಸುತೆ ಸಿದ್ಧಲಕ್ಷ್ಮಿ ನಮಗೀಗೆ ವಚೋವಿಭವಪ್ರಸಿದ್ಧಿಯಂ ॥ ೨

ಪಂಚಮುಖಪ್ರಸಿದ್ಧವಜೆದುಂ ಗಜವಕ್ತ್ರಸುಖಾವಹಂ ವಿಭೋ ।
ದಂಚಿತಕಂಠನಾಗಿಯುಮಣಂ ಖಗರಾಜವಿಲೋಚನಂ ಯಶ ॥
ಸ್ಸಂಚಿತತಾರಕಾರಿಪದಮುಂ ತಳೆದುಂ ಮಿಗೆ ತಾರಕಾಪ್ರಿಯ ।
ವ್ಯಂಜಿತಜಂಟನಾಪಭವಸೀಗಮಗುವ್ಯಮತಿಪ್ರಕಾಶಮುಂ ॥ ೩

ಸಿತಗಳನಂ ದಿಗಂಬರನನಸ್ಥಿವಿಭೂಷಣನಂ ಪಿಶಾಚಸಂ ।
ತತಿಕೃತಸಂಗನಂ ಧವಳದೇಹನನುಗ್ರನನೊಲ್ದು ತನ್ನ ಸಂ ॥
ಗತಿಯೊಳತೀವಸಾಧ್ವನನೆ ಪೂತಿ ಜಗದ್ಗುರುವಾದ ದೇವಿ ಪಾ ।
ರ್ವತಿ ದಯೆಗೆಯ್ಗೆ ನಮ್ಮೊಳನುರಾಗದಿನೊಪ್ಪುವ ವಾಗ್ವಿಳಾಸಮುಂ ॥ ೪

ಸೀಮಾತೀತಜಗನ್ನಿಕಾಯವಿಲಸನ್ನಿರ್ಮಾಣಕಂ ವಿಗ್ರಜ
ಸ್ಸಾಮಾದಿಪ್ರಚುರಾಗಮಪ್ರಭವಕರ್ತ್ರಂ ದೇವತಾವಂದಿತಂ ॥
ಹೇಮಾಂಭೋಜಸುತಂ ಮರಾಳಸುರಥಂ ವಿಖ್ಯಾತವಾಣೀವನಿ
ಪ್ರೇಮಂ ಪದ್ಮಜನೆಮ್ಮೊಳಿಂಗೆ ಪುದದಿಂ ವಾಕ್ಸಿದ್ಧಿಪ್ರಸಮುತ್ಪತ್ತಿಯಂ ॥ ೫

ಜಲರುಹತಂತ್ರಸುಂದರವಿಲೋಚನನಿದ್ದೆಗೆಜಾಳಯೊನಕುಂ ।
ತಳಿ ಮಣಿವರ್ಣಾಧರಕಪ್ರೋಲೆ ಸುಧಾಕಳಶೋಪನಸ್ತಾಂಗನುಂ ॥
ಜುಳಕುಚಯುಗ್ಮೆ ಶಂಖಲತಿಕಾಸಮಕಂಠಭುಜಪ್ರಸಿದ್ಧೆ ರು ।
ಗ್ಮಿಳಿತವುರಾಳವಾಹಿನಿ ಸರಸ್ವತಿ ಮಾಚ್ಕೆ ಮುದಿಷ್ಟಸಿದ್ಧಿಯಂ ॥ ೬

ಕರುಣಂ ಕೈನಿಕ್ಕು ಮಾಚ್ಕೆಮ್ಮಯ ಮತಿಗ ಮಹಾತೇಜಮಂ ದಿವ್ಯಗಂಗಾ
ಧರಪುತ್ರಂ ತುಂಗಗಂಡಸ್ಥಳಗಳಿತಮದಾಂಬುಪ್ರವಾಹಪ್ರಕಾಮೋ ॥
ದ್ದುರಗಂಧಾಯಾತಭೃಂಗಾವಳಿವ್ಯದುನುಧುರಧ್ವಾನಸಂತೋಷಿತೋದ್ಯ ।
ತ್ಕರಿನಕ್ತ್ರಂ ಸಂತತಾರಾಧಕಜನಬಹುವಿಘ್ನಾಘನಾಶಂ ಗಣೇಶಂ ॥ ೭

ಮಣಿಮಕುಟಂ ತ್ರಿಶೂಲಡಮುರೂಪ್ಪತಖಡ್ಗಕಪಾಲಪಾಣಿ ಭೀ ।
ಷಣನದನಂ ಕರೋಟಿವನಮಾಲೆ ಭಯಂಕರಭಾಳಲೋಚನಂ ॥
ಫಣಿಕಟಕಂ ಕರಂ ತನಗೆ ರಂಜಿಪ ಭೈರವಮೂರ್ತಿ ದೇವತಾ ।
ಗಣಪತಿಸೇವ್ಯೆ ಚಂಡಿಕೆ ಮನೋವ್ಮುದಮಂ ನಮಗೀಗೆ ಸಂತತಂ ॥ ೮

ಬಿರುದಂ ಲೋಕವಿರುದ್ಧಮಂ ಕೃತಿಯೊಳುಂತೇಕಾರಣಂ ಪೇಳ್ದು ಕೊ
ಳ್ವರೊ ಸಲ್ಲಕ್ಷಣಮಾಗಿ ಪೇಳ್ದಿ ಕೃತಿಯಂ ಕೇಳ್ದರ್ ಮನಂಗೊಂಡಿವ ॥
ಚ್ಚರಿಯಾಯ್ತಂಬರಗಲ್ಕೆಮಾಡುವರುದಾಸೀನರ್ [1]ರಸಾಸ್ತಂ[1] ರಸೇ ।
ತರಮೆಂದಂದಿವು ತಾವೆ ಪೇಟಿವೆ ವೃಥಾಸಂರಂಭಮೀಗೆಯ್ವುದೋ ॥ ೯

ಕುಕವಿಯ ಕಾವ್ಯಮುಂ ಸುಕವಿ ಕೇಳ್ದ ಕರಂ ತಲೆದೂಗಿ ಮೆಚ್ಚಿ ಭಾ।
ವಕನೆನಿಸಿರ್ದುದಲ್ಲದೆ ರಸಾದ್ಭುತಮೊಸ್ಪವ ಶಬ್ದವೃತ್ತಿ ಲೌ ॥
ಕಿಕಪರನೊರ್ವನೆಂಬ ಕವಿತಾಗುಣಮಂ ಬೆದಕಲ್ಕೆ ರತ್ನಕು ।
ಕ್ತಿಕೆಯನೊಜ್ಜುದ ಪಾಲ್ಗೆ ಜೆಯೊಳೀಕ್ಷಿಸುನಂಗೆಣೆಯಾಗದಿರ್ಕುಮೇ ॥೧೦

ಅವಗುಣಕೋಟಿಯಂ ಮಜ್ಜೆದು ಸಮ್ಮಗಣಮೆಳ್ಳಿನಿತುಳ್ಳೊಡಂತದಂ ।
ಭುವನದೊಳ್ಕೆದೆ ಬಿಚ್ಚಳಿಸಿ ನಲ್ಮೆ ಮಿಗಲ್ ತಲೆದೂಗಿ ಮೆಚ್ಚಿಪೆ ॥
ಚರ್ವ ಸಿರಸೂಯರಂ ವಿಗತಮತ್ಸರರಂ ಸುಚರಿತ್ರರಂ ಬುಧ ।
ಪ್ರವರನಚಿಂತ್ಯಂ ವಿಮಲವಾಕ್ಕುಸುಮಾವಳಿಯಿಂದನಾವಗಂ ॥ ೧೧

---

1 ರಸೋತ್ಕ್ಷಂ. ಕ. ಗ.

ಸೊಂಗಶ್ವಂ ಲಕ್ಷ್ಮಣಲಕ್ಷ್ಮಿತಾಪ್ಯುತನಚಕೋನಿಷ್ಕಂಪನಂ ಪಂಪನಂ ।
ಜಗತೀಪ್ರೀತಿಕರಪ್ರಸಿದ್ಧಕವಿತಾಸಂಪನ್ನನಂ [1]ಪೊನ್ನನಂ[1] ॥
ಸುಗವೀಮಾರ್ದ್ದವಘಟಿತಬಂಧಸುಂದರಕಿರಾತಾರ್ಜ್ಜುನಪ್ರಸನಂ ಚಂದ್ರನಂ ।
ಭಗವದ್ವಿಷ್ಣುಕಥಾವತಾರರಚಿತಶ್ರೀಭದ್ರನಂ ರುದ್ರನಂ ॥ ೧೨

ದ್ವಿಜವಂಶಾಂಬುಧಿಪೂರ್ಣಚಂದ್ರನಸಮಖ್ಯಾತಂ ಭೇದಾಜಗೋ ।
ತ್ರಜನುದ್ದಂಡಮನೋಹರಪ್ರಚುರಶಿಷ್ಯಂ ದಾನಕಲ್ಪದ್ರುಮಂ ॥
ತ್ರಿಜಗನ್ಮಂಗಳಮೂರ್ತಿ ವಿಟ್ಠಲಪದಾಂಭೋಜಾತಭೃಂಗಂ ಗುಣ ।
ವ್ರಜಯುಕ್ತಂ ಕವಿತಾವಿಭಾಸನೆಸಿಪಂ[2] ಚೌಂಡಂ ದಯಾಮಂಡನಂ॥ ೧೩

ವರಮಧುಸೂದನಂ ಜನಕನೊಪ್ಪುವ ಮಲ್ಲವೆ ಮಾತೆಯಗ್ರಜಂ ।
ಸರಸಕವೀಶ್ವರಂ ತನಗೆ ವಲ್ಲಭೆ ಲಕ್ಷ್ಮಿಕ್ರಯೆಸಿಪ್ಪ ಪೆಂಪು ಬಿ ॥
ತ್ತರಿಸುವೊಡಗ್ಗಳಂ ನಿಜಮೆನಲ್ ಮಹಿಮಂ ಹರಿಪಾದಕೋಣಪಂ ।
ಕರುಹಮಧುವ್ರತಂ ಸುಕವಿ ಚೌಂಡರಸಂ ಕವಿರಾಜಶೇಖರಂ ॥ ೧೪

ದೊರಕಿದ ಶಬ್ದದಿಂ ನೆಗಲ್ದಿ ಕಾವ್ಯನುಸಿನ್ನುಮಿವಂತು ಪೇೞ್ದಿನಾ।
ದರಿಸಿ ಸಮಂತು ತಿರ್ದುಗೆ ಬುಧರ್ ನವನರ್ಥಕಿ ಗೇಡಮಾತ್ರಮಂ ॥
ನಿರವಿಸಲಂತದರ್ಕೆ ಪರಿಕೋಭೆಯುಸಗ್ಗಳಮುಪ್ಪಿನಂ ನಿರಂ ।
ತರಮೆಸಗಲ್ಕೆ ಕರ್ತೃ ಪರಿಭಾವಿಸೆ ಕೇೞ್ ಯಜಮಾನನಲ್ಲವೇ॥ ೧೫

ಸಕಲಾಂತರ್ಯಾಮಿ ಜೀವಪ್ರಕರವಿವಿಧಚೈತನ್ಯರೂಪಂ ಜಗದ್ವ್ಯಾ ।
ಪಕಭಾವಂ ವಿಷ್ಣುವೆಂದಾಗಮತತಿ ಸತತಂ ಸಾರ್ವ ಸಂಬಂಧದಿಂ ಕಾ ॥
ತುಕದಿಂದಾವಾವುದಂ ಬಣ್ಣಿಸಿದೊಡದು ಹರಿಸ್ತೋತ್ರಮೆಂದೀಗಳೀಚೆ ।
ತ್ರಕಥಾವಿಸ್ತಾರಮಂ ಬಣ್ಣಿಸಲೊಡರಿಸಿದೆಂ ಸತ್ಕವಿಶ್ರೇಣಿ ಮೆಚ್ಚಲ್॥ ೧೬

ಮೊದಲೊಳ್ ದಂಡಿಕವೀಶ್ವರಂ ದಶಕುಮಾರಾಖ್ಯಾತಚಾರಿತ್ರಮಂ ।
ಪದೆಪಿಂ ಸಂಸ್ಕೃತಭಾಷೆಯಿಂ ರಚಿಸಿದಂ ಧಾತ್ರೀಜನಸ್ತೋತ್ರಮ ॥
ಮ್ಮದಮಪ್ಪಂತವನಾಂ ಪ್ರಸಿದ್ಧಿಯವತಾರಾಕಾರಮಂ ತಾಳ್ದಿ ಸ ।
ದ್ವಿದಿತಂ ರಂಗದೊಳಾಡಿ ತೋರ್ಪ ತೆಱದಿಂ ಪೇೞ್ವಂ ಸುಕರ್ಣಾಟದಿಂ ॥

1. ರನ್ನನಂ. ಕ. 2. ಪಲಂ. ಗ.

ಅದೆಂತೆನೆ:—

ವನಮಾಲಾಪರಿಶೋಭೆಯಿಂದನಿಮಿಷೋದ್ಯತ್ಪ್ರೀತಿಯೆಂ ಶಂಖಚ
ಕ್ರನವೀನೋಜ್ಜ್ವಲದಿಂದನಂತನುಹಿತೋದಾರತ್ವದಿಂ ಶ್ರೀನಿವೇ ॥
ಶನದಿಂ ಗೋತ್ರಸುಖಾಧಿವಾಸದೊನವಿಂ ಮುಕ್ತಾದಿಜನ್ಮಪ್ರಕೀ ।
ರ್ತನವಿಂ ವಾರಿಧಿ ವಾರಿಜಾಕ್ಷನವೊಲೇಂ ಜೆಲ್ವಾಯ್ತೊ ಭೂಭಾಗದೊಳ್ ॥

ಆವಾರ್ಧಿಮೇಖಲೆಯಾವ ಭೂಮುಧ್ಯದಲ್ಲಿ

ವಿವಿಧೋದ್ಯತ್ಸುರಗಂಗೆ ಪೂರ್ಣಸಲಿಲಂ ಚನ್ನಾರ್ಕಬಿಂಬಂ ತಳರ್ ।
ನವತಾರಾನಿಕರಂ ಸಿತಾಕ್ಷತಚಯಂ ಸಪ್ತಾಬ್ಧಿ ಸುತ್ತಿರ್ದ ಸೂ ॥
ತ್ರವಿಶೇಷಂ ತನಗಾಗೆ ಲೋಕಜನಸಪ್ರಾರಂಭದೊಳ್ ಪದ್ಮಸಂ ।
ಭವನೊಲ್ದರ್ಚಿಪ ಹೇಮಕುಂಭಮೆನಿಸಲ್ ಸಾಲ್ದತ್ತು ಹೇಮಾಚಲಂ ॥

ಆಹೇರುಗಿರಿಯ ದಕ್ಷಿಣದಿಗ್ಭಾಗದೊಳ್
ಕ್ಷೋಣಿಗೆ ವಿಶೇಷಪುಣ್ಯ ।
ಶ್ರೇಣಿಯೆನಲ್ ಗ್ರಾಮನಗರಖರ್ವಡಖೇಟ ॥
ದ್ರೋಣಾಮುಖಂಗಳಿಂದ ।
ಕ್ಷೀಣಮೆನಲ್ ಮೆಱೆವುದಲ್ತಿ ಜಂಬೂದ್ವೀಪಂ ॥ ೮೦

ಆಜಂಬೂದ್ವೀಪದಲ್ಲಿ,

ಸಕಲಾವನಿಗಿದೆ ಮಣಿಮಯು ।
ಮುಕುರಮೆನಲ್ ಸಾನುರಾಗದಿಂ ಸುಕ್ಷೇತ್ರ ॥
ಪ್ರಕರತೆಯಿಂದೆಸೆದಿರ್ಪುದಿಂ ।
ಸುಕವಿಸ್ತುತಮಗಧದೇಶಮುಬ್ಬಿ ನಿವಾಸಂ ॥ ೮೧

ಸತತಂ ಪೂಂಗೆಲ್ವುದಿಂದಚ್ಯುತಸುಖಭರದಿಂ ಸಂತತಂ ಪದ್ಮಪೀತಾ ।
ನ್ವಿತದಿಂ ಸೌಂದರ್ಯದಿಂ ಕೋಮಲವೈದುತರದಿಂ ವಾರ್ಧಿಸಂಭೂತಸೀಮಾ
ಯುತದಿಂ ಸವ್ಯಕ್ಷದಿವ್ಯಾವ್ಯತಿರಸಸಹಜಾತತ್ವದಿಂ ಕಾಮಜನ್ಮ ।
ಸ್ಥಿತಿಯಿಂ ಚೆಲ್ವಾವ ದೇಶಂ ಪರಿಕಿಪ್ಪೊಡೆ ಮಹಾಲಕ್ಷ್ಮ್ಯಯಂತೊಪ್ಪಿ
ಹೋಕರ್ಪಂ ॥ ೮೨

ಮತ್ತಮುವ್ವೃತ್ತಮಾಗಿಂ ಕವಿತೆಯೊಳ್, ಕಾಯ್ದಿರಿಸುಂಬುದಾ ವೃಕ್ಷದೊಳ್, ಪೊಡೆಯಿಂಬ ಮುಕ್ಷಿಯೊಳ್, ಬಯಸ್ವುದು ನಿಕ್ಷೇಪಭಾಷೆಯೊಳ್, ಕಟ್ಟಿಂಬುದು ರಸಶೈಷದೊಳ್, ರಾಗದ್ವೇಷಂ ವಿರಹಿಗಳೊಳ್, ಖಲಸ್ತವತನಂ ತೆಲ್ಲಿಗರೊಳ್, ತಮಸ್ಸಂಕುಳಂ ಬಪುಳಪಕ್ಷದೊಳ್, ವಿಚಿತ್ರದ್ವೇಷಂ ಗೂಗೆಗಳೊಳ್, ವಿಶ್ವಾಸಭಂಗಂ ಪಿದಿಗಳೊಳ್, ನಿಂದಿಸುವ್ವುದು ಯುದ್ಧದೊಳ್, ಭೋಗಭಂಗಂ ಹಾವಡಿಗರೊಳ್, ಹಿರಣ್ಯಾಕ್ಷವಂಡಂ ವರಾಹಾವತಾರದೊಳ್, ಆಕ್ಷೇಪಮಲಂಕಾರದೊಳ್, ಅರ್ಥವಾದಂ ಸ್ತೋತ್ರದೊಳಲ್ಲದೆ ತನ್ನೊಳಲ್ಲಿನಿಸಿರ್ದುದು. ಅಂತುಮಲ್ಲದೆಯುಂ

ರತಿಲೀಲಾಭವನಂ ವನಂ ಸತತಸಂಖ್ಯೋಜ್ಜೀವನಂ ಜೀವನಂ ।
ಶ್ರುತಿಚಿನ್ಹಾನುಮತಿಭಾಜನಂ ಜನಮನಂಗಾಸ್ತ್ರಕುಲಂ ಸ್ತ್ರೀಕುಲಂ ॥
ನುತಸಸ್ಯಾದಿಸಮುದ್ಗತಂ ಧರಣಿ ಲಕ್ಷ್ಮ್ಯೇಬಂಧುರಂ ಬಂಧುರಂ ।
ಜಿತರಾಜನ್ಯಕಮೆಂದೊಡಾವಿಷಯದೊಳ್ಪಂ ಬಣ್ಣಿಸಲ್ ಬಕ್ಕುಮೇ ॥ ೨೩

ಅಂತಾವುಗಧದೇಶಕ್ಕೆ ಭೂಷಣವೆನಿಸಿ,

ನಯನಾನಂದಕರಂ ಸುಖ ।
ಚಯಸಹಿತಂ ನಿಖಿಲದೀಪತಾಯತಸಸುಖ ॥
ಪ್ರಯುತಂ ಸಜ್ಜನಚಿತ್ತ !
ಪ್ರಿಯವೆನಲೆಸೆದಿರ್ದುದಧಿಕಮೆನೆ ಕುಸುಮಪುರಂ ॥ ೨೪

ಪ್ರಕಟಿಂಬೆತ್ತಿರ್ಪ ಪೊಂಗೊಂಬೆಯ ತೆನೆಯೆಸಳ್ಗಳ್ ಕೇಸರಂ ಸೌಧಕಾಲಾ
ನಿಕರಂ ರಾಜಾಲಯಂ ಕರ್ಣಿಕೆ ವಿವಿಧಪ್ರರಂಧ್ರೀಲಸತ್ಕೌಮುಮಾರ್ಯಂ ॥
ಮುಕರಂದಂ ವಂದಿವೃಂದಂ ಮಧುಕರಪಟಲಂ ತಾನೆಸಲ್ಕೊಪ್ಪುಗುಂ ಸಾ ।
ಧ್ಯಕನಾಮಂ ರಂಜಿಸಲ್ ತತ್ಕುಸುಮಪುರಿ ಜಗತ್ಖ್ಯಾತಿಯಿಂದಂ ನಿತಾಂತಂ

ತಳರ ತೆಱಂಬೆಯುಂ ತಳೆದ ಮೂಮುರನಾಸುರನಳ್ಕಿಗೊಂಬಿನೊಳ್ ।
ಕಳೆರವದಿಂ ಕುಕಿಲ್ವ ಮುಖಿಗೋಗಿಲೆ ಪ್ರಗುಡಿಬಾರದಿಂ ಪ್ರೋರ ॥
ಳ್ವಿಳಲತೆಯಾಲತಾವಳಿಯಿಡುಂಕುಜೊಳಾವಗವಾಡಿ ಪಾಡುತಿ ।
ರ್ಪಳಿಗಳ ಪಿಂಡು ರಂಜಿಸುವಿನಂ ಮೆಱೆಗುಂ ಪ್ರದಾಪಹಿರ್ಣಂ ॥ ೨೫

ಅವಲ್ಲದೆಯುಂ,

ದೆಸೆಗೆ ಕವಿಲ್ತು ಗಂಟಿಡಿವು ನುಣ್ಬಿಸಿಱಿಂ ಪೊರೆಪೊೞ್ಕು ಕೊರ್ಬಿಯುಂ ।
ಬರ್ಸಿ ಪೊಡೆದುಂಬಿ ಪಾಲ್ದೆನೆಗಳುರ್ಬೆ ಕರಂ ತಲೆವಾಗಿ ಬಿೞ್ದಿನಿಂ ॥
ದೆಸೆವ್ರುವು ನೀೞ್ದ ತಮ್ಮ ಮುಖದೊಪ್ಪಮನೊಪ್ಪಿರೆ ನೀರ್ಗಳೊಳ್ ನಿರೀ ।
ಕ್ಷಿಸುನವೊಲಾವಗಂ ಕಣಿಕಸಂತತಿಗಳ್ ಕಳವಮಪ್ರದೇಶದೊಳ್ ॥ ೞ೭

ಕುಂದದ ಚಂದ್ರಲೇಖೆ ನಸುಗೆಂದದೆ ರಂಜಿಸ ಪುಷ್ಪಮಾಲೆ ಕುಂ ।
ದೊಂದದ ಸೋನಶಾಖೆ ತವಿಲಾಗದ ಕೆಂಗೊನೆವಾೞೆ ಸರ್ವಸಾ ॥
ಧ್ಯಂ ದಲೆನಿಪ್ಪ ಕೇಸರಿ ನಿರಂತರಮೊಪ್ಪುವ ದಮ್ಮಗುತ್ತಿ ಯೆಂ ॥
ಬಂದದನೇಕನಾಮಬಿಸೆಗುಂ ಮೃದುಬಂಧುರಗಂಧಶಾಲಿಗಳ್ ॥ ೞ೮

ಸೆಳೆನಡು ಬಳ್ಕಿ ತೋಳ್ಮೂವಲ ನುಣ್ಬೊಗರೊಪ್ಪೆ ಘನಸ್ತನಂಗಳ ।
ನ್ವಳಿಸೆ ನಿಮಿರ್ದ್ದ ವೇಣಿ ಕದಪಂ ಪುಗೆ ಮುಂದೆಡವಜ್ಜೆ ಮಿಾಱೆ ಕೈ ॥
ಗಳ ಬಳೆ ಮೆಲ್ಪಿನಿಂದುಲಿಯೆ ಸಂಭ್ರಮದಿಂ ನಸುಬಾಗಿ ಬೀಸುಗ ।
ಲ್ಗಳನಿಡುತಿರ್ಪ ಪಾಪುರಿಯರೊಪ್ಪುವರಾಕಳಮಪ್ರದೇಶದೊಳ್ ॥ ೞ೯

ಕಡುಚೆಲ್ವಿಂ ಮೆಱೆದಿರ್ಪ ಖಾಲಿವನನುಂ ಪಾಯಲ್ಕೆ ಕೀರಂ ಮೃಗಂ ।
ಗಡಣಂಗೊಂಡು ಬರಲ್ಕೆ ಸೋವ ಬಗೆಯಂ ಮಾಣ್ದಿರ್ಪರೇಕೆಂದೆನಲ್ ॥
ನುಡಿಯಂ ನೋಟಮನೆಮ್ಮೊಳೊಲ್ದ ಪದೆಪಿಂ ಮುಂ ಕಲ್ತ ಲಂಪಿಂಗೆ ಬಂ ।
ನೊಡೆ ಬಿರ್ದೂಟಮಿದೆಂಬ ನೇಹದೊಲವಿಂ ತತ್ಸಾಮರೀಸಂಕುಳಂ ॥ ೩೦

ಜಡಿಮ ಗಿಳಿಸೋವ ಹರಯದ ।
ಮುಡದಿಯರ ಶರೀರವರ್ಣರೂಪಂ ಗಂಧಂ ॥
ನಡುವಿನ ಸಣ್ಣಂ ತಮ್ಮೊಳ ।
ನೆಡೆಗೊಂಡವೊಲಿರ್ಪ ನೆಲ್ಗಳೀನೊಪ್ಪಿದುವೋ ॥ ೩೧

ಅಲ್ಲಿಂ ಬಟ್ಟಿಯಂ,

ಇದಪೂರ್ವಂ ಪುರರಿಸ್ರವೆಂ ।
ಬುದನೀಕನೊಳೀಯದಧಿಕಸಂಪದವುಂ ನೆಲಾ ॥
ವ್ವಿದೆಸುತ್ತೆ ಗಂಗೆ ಪುರವುಂ ।
ತ್ರಪ್ಪಿಣಂಗೆಯ್ಯುತಿರ್ಪಳಿನಲಗಱೆಸೆಗುಂ ॥ ೩೨

ಪುರದೊಳ್ ಭೋಗಿಗಳಿನಿತುಂ ।
ನೆರೆವಿರ್ದಪರಾನನಗೆರ್ ರಕ್ಷಕನಪ್ಪಿಂ ॥
ತೆರಳದೆನುತ್ತುಂ ಶೇಷಂ ।
ಪರಿವೇಷ್ಟಿಸಿದಂತೆ ರಂಜಿಕುಂ ಪ್ರಾಕಾರಂ ॥ ೩೨

ಗಗನೇಚರಿಯರ್ ಶ್ರಮವುಮಂ ।
ಮಿಗೆ ನೂಂಕಲ್ ನಿಲ್ವುದರ್ಕೆ ವೆಮ್ಮೆಯ್ಮೆಯು ಠಾ ॥
ವುಗಳೆಂದು ಕುಱುಸ್ರಗೊಂಡಾ ।
ಬಗೆಗಿಟ್ಟಂತೆಸೆವ್ರವಿದಶ ಕೋಂಟೆಯ ತೆನೆಗಳ್ ॥ ೩೩

ಪಗೆಗಳ ಶೃಂಗಲವುಂ ಡೊಣೆ ।
ಗೆಗೆತ್ತಿ ತತ್ಪುರವರೇಶನಾನಂದಲತಾ ॥
ಳಗೆಗಳ ಪರ್ಚಿಪ್ರದೆಂತುಂ ।
ಬಗೆಗೆನಿತುಂ ಬಿಂಕದಿಂದೆ ನಿಡುತೆಂಕಣಿಗಳ್ ॥ (?) ೩೪

ಅಂತೆಸೆವ ಪುರದೊಳ್

ಜೆಟ್ಟವನೇಱಿ ನೀರೊಳಗೆ ಪೈಕ್ಕು ತೃಣಂಬಿಡಿದೆಂಜಲಾಗಿ ನಾ ।
ಸ್ಫೋಟ್ಟನಿತಲ್ಲದೀಸ್ಫರಚತುಷ್ಪಥಮಧ್ಯದ ರತ್ನಶಾಲೆಯೊಳ್ ॥
ಕಟ್ಟಯದೇಕೆ ತೂಗುವರೊ ಮಾಣಿಕವಂ ಪ್ರೊಸಮುತ್ತನೊಳ್ಪ ನೇ ।
ಪರ್ಟ್ಟುರುನೀಲಮಂ ತೊಳಪ ಪಚ್ಚೆಗಳಂ ಮಣಿಗಾಱರಾವಗಂ ॥ ೩೫

ಅಂತು ನಿಂದೆಯನಾಂತು ಸ್ತುತಿವೆತ್ತ ಮಣಿಗಾಱರ ಪಸರದಿಂ ಮುಂದೆ
ಸಲ್ಲಲಿತರಾಜಹಂಸ ।
ಗರ್ಲ್ಲದೆ ಸುತ್ತಲ್ಕವುರಿವೆನಿಪ್ಪಂಬರಮುಂ ॥
ನಿಲ್ಲೆಂದು ನಿಲಿಸಿ ಪುರದವ ।
ರೆಲ್ಲರ್ ಕೊಳಲೆಸೆವುವಂಬರಂಗಳ ಪಸರಂ ॥ ೩೬

ಅತಿಶಯುವೆನಲುತ್ಪತ್ತಿ ।
ಸ್ಥಿತಿಲಯಮುಂ ತೋರ್ಪೆವೀಗಳೆಂಬಂತೆ ಜನ ॥
ಪ್ರತಿಬಿಂಬನುನಾಂತದಧಿಕ ।
ದ್ಯುತಿಯಿಂದೊಪ್ಪಿದುದು ಕಂಚಗಾಱರ ಪಸರಂ ॥ ೩೭

ಬಿದಿಯುತ್ಪತ್ತಿಯ ಬೀಜಮುಂ ಹರಿ ಜಗತ್ಪಂಪಾಲನಾರೆತ್ನಮುಂ ।
ಮುದನಾರತಿ ದಿಗಂಬರತ್ವಮುಚಿಯಲ್ ಸರ್ವಸ್ತ್ರಮಂ ಭಾಸ್ಕರಂ ॥
ವ್ಯದುಶೈತ್ಯೌಷಧಿಯುಂ ಶಶಾಂಕನೊಲವಿಂದಂ ರಾಜಯಕ್ಷ್ಮಕ್ಕೆ ಜಾ ।
ಡಿವ ಮರ್ದಂ ಪಸೆ ನ್ರಜ್ಞಗಂಧಳಿವರಂತಾಸಟ್ಟಿಗುತ್ತರ್ಕಳೊಳ್ ॥ ೩೯

ಅಲ್ಲಿಂ ಮುಂದೆ

ಪೂಗೊಳಲೆಂದು ಬಂದ ವಿಟಸಂತತಿಯುಳ್ಳಿದೆ* ಡಿಳ್ಳನಪ್ಪಿನಂ ।
ಪೂಗಣೆಯುಚೆರ್ ಮೂಳ್ಚಿ ಗೊಳಗಾಗಲೊಡಂ ಕಡುಪಿಂ ಸಹಾಯಿಗಳ್ ॥
ಪೂಗೊಳದತ್ತಲುಯ್ದು ಮದನಾಗ್ನಿಯನಾಱಿಸುವಂತು ಮಾಡಿದಾ ।
ಪೂಗಳನೊಪ್ಪೆ ಕಟ್ಟಿ ಪೂಸಮಾಲೆಯನೆತ್ತುವ ಮಾಲಗಾರ್ತಿಯವರ್ ॥ ೪೦

ತರತರದಿಂದೆ ಬಾಹುಲತೆ ಪುಷ್ಪಿತಪಾಮುಯೊ ಕಾಮುಮಾರ್ಗಣಂ ।
ತರುಣಿಯರಿಂದೆ ಕಟ್ಟುವಜೆದಿರ್ಮವೊ ಮೀಣ್ ನಜಸುಯ್ದೆ ಸೋಲ್ತು ಬಂ
ದುರುತರಭೃಂಗಮಾಲಿಕೆಯೊ ಪೀಟೆನೆ ದಿವ್ಯಸುಗಂಧದಿಂ ಮನೋ ।
ಹರಮೆನಿಸಿರ್ಪ ಪೊಚ್ಚ ಪೂಸಮಾಲೆಯನೆತ್ತುವರತ್ತ ಬಾಲೆಯರ್ ॥ ೪೧

ಸಾರಸುಗಂಧದಿಂದೆಸೆವ ಪೂವಿನ ಮಾಲೆಯನೀವೆನಿತ್ತ ಬಾ ।
ಬಾರೆಲೆ ಧೂರ್ತೆಯೆಂಬವರ ತೋಳ ಮೊದಲ್ಗಳನುನ್ನತಸ್ತನಾ ॥
ಕಾರಮನೆಯ್ದೆ ಕಂಡು ನಡೆಗೆಟ್ಟಿರೆ ದೂರದೊಳಿರ್ಪರೇಕೆನಲ್ !
ದೂರಿತರಲ್ತೆ ಪ್ರಪ್ಪವತಿಯರ್ ಪರಿಭಾವಿಸೆ ನೀತಿಸಂತರೊಳ್ ॥ ೪೨
ಎಂಬ ವಿಟರ ಚತುರೋಕ್ತಿಪರಿವೃತವಾದ ಮಾಲೆಗಾಱವಸರದಿಂ ಮುಂದೆ

ರತಿರೂಪಾಂಜದ್ವ್ವಜಂ ಮನ್ಮಥನಿಚಿತಪತಾಕಾಳಿ ಸಾಭಾಗ್ಯಘಂಟಾ ।
ಯುತಬದ್ಧದ್ವಾರಮೆಂಗೋರ್ದ್ಧವಚರಿತಕಥಾಲೇಖ್ಯಸದ್ಭಿತ್ತಿ ಪಾರಾ ॥
ವತಕೀರಶ್ರೇಣಿವಿಭ್ರಾಜಿತನವಣಿನಿಯಕೂಟಂ...ವಿಟಾ ।
ನ್ವಿತಕೋಳಾವೇದಿಕಾವಿಸ್ಮಯಮೆನಿಸುವುವಲ್ಲಲ್ಲಿ ವೇಶ್ಯಾಲಯಂಗಳ್ ॥ ೪೩

ಹದಿಱಿನ ಗೊಟ್ಟ ಪಂಗಿಸುನ ನಾಣ್ಗುಡಿ ಅಚ್ಚೆಯ ಮಾತು ಕೆಲ್ಲನೋ।
ಡವ ಬೆಲೆ ಟಕ್ಕಿನೊಲ್ಮೆ ಹೆರೆಹಚ್ಚದ ಮೋಹನಸತ್ಯದಾಣೆ ನಿ ॥
ಲ್ಲವ ಪುಸಿತೋಱಯಲ್ಲದುಪತಾಪಮೆನಿಪ್ಪ ಸಮಸ್ತವೈಶಿಕಂ ।
ಸುದತಿಯರಾದನೊಲ್ ಸುಱಿವ್ರದಾಪುರದೊಳ್ ಗಣಿಕಾಕದಂಬಕಂ ॥ ೪೪

ಆವೇಶ್ಯಾವಾಟಕ್ಕೆ ಸಮೀಪವಾಗಿ

ಸತತಂ ಸಂಗೀತಚಿತ್ರಂ ಸಕಲವಿವಿಧವಾದ್ಯೋತ್ಸವಂ ನೃತ್ಯವಿಭ್ರಾ ।
ಜಿತಮುದ್ಯದ್ಧೂಪಧೂಮಕ್ಷುಭಿತಮಖಿಲಪೌರಾಣಮಂತ್ರಾನುವಾದಂ ॥
ಚಿತರಮ್ಯೈಷ್ಟಷ್ಟಪದಂ ಮಂಜುಳಮಣಿಕಳಶಂ ಪೊಸವೆತ್ತಿ ಪರ್ದೇವಾ।
ಯತನಂ ಕಣ್ಗೊಪ್ಪಗುಂ ತತ್ಪುರವರದೊಳನೂನಪ್ರಸಾದಂಗಳಿಂದಂ ॥೪೫

ಅನಂತರಂ

ವಿಮಲಪ್ರಾಸಾದಭಿತ್ತಿಪ್ರಕಟಿತನಸುಧಾಕಾಂತಿಗಳ್ ಚಂದ್ರಿಕಾವಿ ।
ಭ್ರಮವೆಂಬಂತೊಪ್ಪೆ ನಾನಾವಮಣಿಮಯಕಳಶಶ್ರೇಣಿಗಳ್ ತಾರಕಾಚಿ ॥
ತ್ರಮನೆತ್ತಂ ಬೀಱಿ ಭಾಸ್ವತ್ಕುಮುದವನೆಸಲವಿಂ ಪೆಚ್ಚಿಸುತ್ತಾವಗಂ ಸಂ
ಭ್ರಮದಿಂಚೆಲ್ವಾದರಾಜಾಲಯವಭಿನವಪ್ರಾವರ್ದ್ರಿಯಂತೊಪ್ಪಿತೋರ್ಕುಂ

ಅಂತು ಪ್ರೊಗೞ್ತ್ಕೆಗಳುಂಬವಾಗಿರೆ,

ತತ್ಪುರಪತಿ ನೃಪಮೌಳಿಲ ।
ಸತ್ಪಾದಪಯೋಜನಖಿಳಜನತಾನಿಜಸಂ ॥
ಪತ್ಪೂರಕನಭಿಜನಹಿತ ।
ಸತ್ಪದನುಱಿ ರಾಜಹಂಸನೆಂಬ ನರೇಂದ್ರಂ ॥ ೪೬

ಆತಂಗೆ ಸಚಿವರಾದರ್ ।
ನೀತಿವಿದರ್ ಸದ್ಗುಣಪ್ರಸಿದ್ಧರ್ ವಿಶ್ವ ॥
ಖ್ಯಾತರೆನಿಪೇೞ್ವರುಂ ಧಾ ।
ತ್ರೀತಿಲಕರ್ ಬುದ್ಧಿವಿದರತೀವಸಮರ್ಥರ್ ॥

ಅವರೊಳೆಂದೊಡೆ—ರತ್ನೋದ್ಭವ, ಪ್ರೇಮದತ್ತ, ಕಾಮಪಾಲ, ಸುಮಿತ್ರ, ಸುಮತಿ, ಸುಶ್ರುತ, ಸತ್ಯವರ್ಮನೆಂಬೇೞ್ವರ್. ಅವರೊಳ್ ರತ್ನೋದ್ಭವಂ ವ್ಯವಹಾರಕ್ಕೆ; ಪ್ರೇಮದತ್ತಂ ತೀರ್ಥಯಾತ್ರೆಗೆ, ಕಾಮಪಾಲಂ ದೇಶಾಂತರಕ್ಕೆ ಪ್ರೇಗೆ, ಮಿಕ್ಕ ನಾಲ್ವರ್ ಪ್ರಧಾನರುಂ ತಾನುಂ

ಜನಪಂ ತನ್ನ ಭುಜಪ್ರತಾಪದಿನಮಾತ್ಯಶ್ರೇಷ್ಠರಿಂ ರಾಜ್ಯವ ।
ರ್ದ್ಧನರಿಂ ಮಿತ್ರರಿನೊಪ್ಪವಾಪ್ತ ಬಲದಿಂ ಭಂಡಾರದಿಂ ದುರ್ಗದಿಂ ॥

ಘನಸಪ್ತಾಂಗವಿಳಾಸಮಂ ಪಡೆದುಮಂತೀಕಾಂಗವೀರಂ ದಲಿಂ ।
ಬಿನ[1]ವೊಪ್ಪಂಬಡೆವಂ[1] ನೃಪಾಲತಿಲಕಂ ಭೂಪಾಲವಿದ್ಯಾಧರಂ ॥ ೪೯
ಆತನ ಸತಿ ಗುಣವತಿ ಧೈ ।
ರ್ಯಾತಿವಿಳಾಸವರಿವೆ(?)ಸೆವ ರತಿ ವರಹಂಸ ॥
ವ್ರಾತಗತಿ ಲೋಕನುತವಿ ।
ಖ್ಯಾತೆಯೆ ವಸುಮತಿಯೆನಿಪ್ಪ ವನಿತಾರತ್ನಂ ॥ ೫೦
ಆಕಾಂತೆ ಒಂದು ದಿನಂ ನಿಜಕಾಂತಸಹಿತಂ
ಎಳವಾವಿಂ ಕ್ರೌಂಗಿನಿಂ ಸತ್ಕದಳಿಯಿನರನೇಱಿಲ್ಗಳಂ ದಾಡಿವಿಳಾಸಂ ।
ಕುಳದಿಂ ಚೆಂದೆಂಗಿನಿಂ ಸಂಪಗೆಯಿನಸುಕೆಯಿಂ ಬಕ್ಕೆಯಿಂ ಮಾತುಳುಂಗಂ ॥
ಗೆಳನುದ್ಯದ್ದಾಡ್ಮಹೆಯಿಂ ಪೂದುಱಿಗಲ ಲತೆಯಿಂ ಕೋಕಿಲಧ್ವಾನದಿಂ ಕಂ।
ಗೊಳಪೊಂದುದ್ಯಾನಮಂ ಭೋಂಕೆನೆ ವ ನದೊಲನಿಂ ಕಾಂತೆ ಪೊಕ್ಕಳ್ ನಿತಾಂತಂ ॥ ೫೧
ಅಲ್ಲಿ
ವೃದುತರಮಾರ್ಗದಿಂ ಜಗವನಂಡಲೆವ್ರದ್ಧತಸತ್ವವೃತ್ತಿಯಿಂ ।
ಮುದನಶಿಲೀಮುಖಂಗಳನಿಸಿರ್ದುವೊಱಿದ ಶಿಲೀಮುಖಪ್ರಭೆ ॥
ತದ ಕಡುಪಿಂಗೆ ಸಿಲ್ಕ್ವವ್ರದಿದಾವ ವಿಳಾಸವೆನಲ ತ್ತೆ ತುಂಬಿಗ ।
ಳ್ಕದ ನಱುಗಂಪು ಪೊಂಪ್ರಳಿಸೆ ಪೆಂಪೆಸೆದಿರ್ದುದು ಚಂಪಕವ್ರಜಂ ॥ ೫೨
ನಿರವಧಿಯಿಂ ಕುಳವ್ರುದಕಮಂ ನಡುನೆತ್ತಿಯೊಳಾಂತು ತನ್ನ ಕ ।
ಣ್ಣುರಿಗುಪಕಾಂತಿಯಂ ಪಡೆದನಿಲ್ಲಭವಂ ಬಿಸಿಲೊಳ್ ಪೊದಟ್ಟಿ ಬಿ ।
ತ್ತರಿಪೆಳನೀರ್ಗಳಂ ತಳೆದು ಕೈತ್ಯನುನೆಲ್ಲರೊಳೀವ ಪೆರ್ಮೆಗಾ ।
ರ್ದೊರೆಯೆವುಗೆಂಬವೋಲ್ ವನದೊಳಗ್ಗದ ತೆಂಗಿನ ಸಾಲ್ಗಳೊಪ್ಪುಗುಂ ॥
ಅಂತೆಸೆವ ಉಪವನದ ಮಧ್ಯದಲ್ಲಿ
ಇದೆವಿಾಂಗಳ್ ವಿಾಂಗಳುದ್ಯದ್ಭ್ರಮರವನೊಳಕೊಂಡಬ್ಜವಬ್ಜಂ ವಳಕ್ಷೌ ।
ಚ್ಛದಹಂಸಂ ಹಂಸವುತ್ಯದ್ಭ್ರತಲಲಿತಲಸತ್ಪಕ್ಷರಂ ಪಕ್ಷರಂ ಬೇ ॥
ಗದಿನೈಳಚ್ಛಾಗಕ್ಕೆ ನೈರ್ಮಲ್ಯಮನೆಸಗೆ ಕರತ್ಕಾಲದಾಕಾಶಮೇಲ್ತಿಂ ।
ದುದೆನಲ್ ಚೆಲ್ವಾಪ ಪದ್ಮಾಕರಮನೊಲವಿನಿಂ ಕಂಡು ಕೊಂಡಾಡುತಿರ್ದಳ್ ॥

1. ವೋಪೆಂಬಗೆವಂ, ಕ, ಗ.

ಶತಪತ್ರನೇತ್ರಹಸ್ತ ।
ಸ್ಥಿತಿಯಂತಿರೆ ಚಕ್ರಸಂಯುತಂ ಮಾಸದವೋಲ್ ॥
ಸಿತಪಕ್ಷಬಹುಳಪಕ್ಷಾ ।
ಗತಿಯಿಂ ರಂಜಿಸುದಖಂಡಮಂಬುಜಷಂಡಂ ॥ ೫೫

ಅಂತೆಸೆವ ಪುಂಡರೀಕಷಂಡಮುಂ ವಸುಮತೀದೇವಿಯೆವೆಯಿಕ್ಕದೆ ನೋ
ಲ್ಪಿನಮಲ್ಲಿ

ತಿಳಿಗೊಳದಿಂಬಿನಿಂ ಮಱಿಯನಿಟ್ಟು ಸರೋಜದ ಬೀಜರಾಜಿಯುಂ ।
ಫಳಲನೆ ತಂದು ಚಂಚುಪುಟದೊಳ್ ನಿಜಚಂಚುವನಿಟ್ಟು ಕೊಟ್ಟು ಕೋ ।
ಮಳಸಿತಪಕ್ಷಮಂ ಪೊದಿಸಿ ಲಾಲಿಪ ಹಂಸೆಯ ಪುತ್ರವಾತ್ಸಲಮಂ ।
ಲಳನೆ ಸಮಂತು ಕಂಡು ಮಿಗೆ ಚಿಂತಿಸಿದಳ್ ಸುಕುಮಾರಲಾಭಮಂ ॥ ೫೬

ಚಿಲಿಪಿಲಿಗುಟ್ಟು ನುಣ್ಪೊದಳ್ಗಳಿಂ* ಕಿವಿಗಿಂಪನೊಡರ್ಚಿ ಗೆಜ್ಜೆಗಳ್ ।
ಫಲಿಕೆನಿಪಂತಿರೆಯ್ದಿ ಬಿಗಿಯಪ್ಪಿ ಕುಚಂಗಳನಾಂಡು ಸೋಂಕಿಲೊಳ್ ॥
ಮಲಗಿ ಮನಕ್ಕೆ ಸನ್ಮದನನೀವ ಕುಮಾರಕನಂ ಮದೀಯಸ ।
ತ್ಕುಲಗೃಹದೀಪನಂ ಪಡೆವ ಸೈಪಿನ ಸುಗ್ಗಿಯದೆಂದು ಸಾರ್ದುವೋ ॥ ೫೭

ಪಕ್ಷಿ ವೊದಲಾಗಿ ಭವಮುಃ ।
ಖಕ್ಷಯಕಾರಣಮಿದೆಂದು ತನ್ನಯ ಶಿಶುವಂ ॥
ರಕ್ಷಿಸುತಿರ್ದಪ್ರದದಱಿನ ।
ತಿಕ್ಷೀಣನುದಾಯ್ತು ಭಾವಿಸಲ್ ಮಜ್ಜನ್ಮಂ ॥ ೫೮

ಎಂದು ಮತ್ತಂ,

ಇಷ್ಟಸುಖಾಮಭೋಗವು ।
ನಿಷ್ಟಂ ಸುತರಿಲ್ಲದರ್ಗೆನುತ್ತತಿಚಿಂತಾ ॥
ದಷ್ಟಾಂಗಿ ಸುಯ್ದು ಹಾ! ಹಾ! ।
ಕಷ್ಟ ವಿಧಾತ್ರಿ! ಯೆನುತ್ತೆ ಮೂರ್ಛೆಗೆ ಸಂದಳ್ ॥ ೫೯

ಅಂತು ಮೂರ್ಛೆವೋದರಸಿಯನರಸನೆಂತಾನುಮೆಚ್ಚಿ ತಿಯಿಸಿ ನಿಜನಿವಾಸ
ಮಂ ಪೊಗಿಸೆ ತನ್ನ ಮನದನ್ನೆಳಪ್ಪ ಕಮಳನಿಯೆಂಬ ತಾಂಬೂಲಕರಂಕವಾ
ಹಿನಿ ತತ್ಕಾಂತೆಯಂ ಸಂತೈಸುತ್ತುಮಿರ್ಕೆಯಿರೆ

ತರುಣಿಯ ಮಾಸಿದಂಗಲತೆ ಸೂಸಿದ ಳುಂತಳವೊಯ್ಯನೊಯ್ಯನೋ ।
ಸರಿಸುವ ಭಂಗಿ ಕೈಯ ಸೆಳೆ ಬಾಡಿದ ಸ್ತನಮುಡಿ ಶೂನ್ಯಹಾರಮು ॥
ಚ್ಚರಿಯೆನಿಪಂಗದಾಸೊವಡು ಜಾಡ್ಯದ ಮೆಯ್ ಕಡುಲಜ್ಜೆ ಕಜ್ಜಳಂ ।
ಪರೆದಲರ್ಗ್ಣಳಿಂಬಿನಿತು ಬೇಟಿವೆ ಮಾಣಿಕವಾಂತ ಭಾವಮಂ ॥ ೬೦

ಅಂತು ವಸುಮತೀದೇವಿ ಪ್ರಷ್ಪವತಿಯಾಗಿ ಚತುರ್ಥಸ್ನಾನಾನಂತರಂ

ಇಂದುಕಳಾಧಿದೇವತೆ ಮನೋಹರನಿರ್ಮಲಪೂರ್ಣಚಂದ್ರಿಕಾ ।
ಚಂದನದಣ್ಪನುತ್ಪನ್ನತಾರಕಸಂಕುಳಪುಷ್ಪಮಾಲಿಕಾ ॥
ವ್ಯಂದಮನಬ್ಜಿಫೇನಧವಳಾಂಬರಮಂ ಮನಮೊಲ್ದು ತಾಳ್ದಳಿಂ ।
ಬಂದವೆನಲ್ಕೆ ಬೆಳ್ವಸದನಂ ಮೆಱೆದಿರ್ದುದು ತಲ್ಲತಾಂಗಿಯಾ ॥ ೬೧

ಅಂತು ಬೆಳ್ವಸದನಂಗೊಂಡು ನಯನಕಾಂತಿಕಾಮುದಿಯಿಂ ಪ್ರಿಯ ನಯನಕುಮುದವನ ವಿಕಾಸವನೆಯ್ದಿಸುತ್ತುಂ, ದಂತವನೀಚಿದರ್ಪಣದಿಂ ಕಾಂತನ ಕವನೀಯತೆಯುಂ ಕಾಲ್ಯರಿಸುತ್ತುಂ, ತನುಪ್ರಭೆಯಿಂ ವನೋವಲ್ಲಭನ ಮುದಮನೊದವಿಸುತ್ತುಂ, ಮಂಗಳಪ್ರಚ್ಛದಾಚ್ಛಾದಿತ ಸಕಲಧೂಪಧೂಮಗಂಧಾಧಿವಾಸಿತವಪ್ಪ ನಿಜವಲ್ಲಭನ ಶಯ್ಯಾತಳಕ್ಕೊಯ್ಯನೆ ಬರ್ಪುದುಂ

ಇಂದಿನ ನಡೆಯಿಂದಿನ ನುಡಿ ।
ಯಿಂದಿನ ನಿಜಮುಖವಿಕಾಸವಿಂದಿನ ನಗೆಗ ॥
ಣ್ಣಿಂದಿನ ಮನದನುರಾಗವಿ ।
ದೆಂದಿನ ಪರಿಯಲ್ತೆನುತ್ತೆ ನೃಪನೀಕ್ಷಿಸಿದಂ ॥ ೬೨

ಅಂತರಸು ಕಾಂತೆಯ ಮುಖಾರವಿಂದವುಂ ನೋಡಿ ಹರ್ಷವಾರ್ಧಿಪರಿಕಾಲಿಮಸಗೆ

ಮಿಸುನಿಯ ಕಡಗೆದ ಕೀಲಂ ।
ಸಿಸಿನಂಗೆಯ್ವಂತೆ ಪೊರೆದಲಕ್ತ ಕರಾಗಂ ॥
ಪಸರಿಸುವ ಪಸ್ತಮಂ ಪಿಡಿ ।
ದು ಸಮೀಪಕೊಯ್ದು ಕರೆದನಬಲೆಯನರಸಂ ॥ ೬೩

ಅಂತು ಕರೆದು ಪರ್ಯಂಕದೊಳ್ ಕುಳ್ಳಿರಿಸಿ

ಸೊಗಸಿನ ಲಲ್ಲಿ ಕೋಮಲಕಚಗ್ರಹಣಂ ಪ್ರಳಕಂಗಳುಣ್ಮವ ।
ಪ್ಪುಗೆ ಮೈದುಚುಂಬನಂ ಸರಸತುಂಗರದಚ್ಛದಪೀಡನಂ ರುಚಿ ॥
ದ್ವಿಗುಣಿತಕಾಮುಕೇಳಯೆನಿಪಿಂತಿವು ಚಿತ್ತ ಸುಖಾನುರಾಗಮಂ ।
ಬಗೆಗೊಳಿಸಲ್ಕೆ ಕೂಡುತತಿಸೌಖ್ಯಸುಧಾಂಬುಧಿಯೊಳ್ ಮುಳುಂಗಿದರ್ ॥೬೪

ಅಂತು ಸುಸಿಲೆಸಕದಿಂ ವಸುಮತೀನಲ್ಲಭೆಯುಂ ವಸುಧಾಧಿಪತಿಯುಂ ಬಳಿಲ್ದು

ವಿಳಸದಮರಾಪಗಾಸ ।
ತ್ಪುಳಿನಸ್ಥಳದಲ್ಲಿ ಹಂಸಿಹಂಸರ್ ನಿದ್ರಾ ॥
ವಿಳರಾಗಿರ್ದಂತೆಸೆದರ್ ।
ಸುಳಳಿತಮೃದುತಲ್ಪದಲ್ಲಿ ತದ್ದಂಪತಿಗಳ್ ॥ ೬೫

ಅಂತು ನಿದ್ರಾಸಕ್ತರಾಗಿರ್ಪಾಗಳ್ ಬೆಳಗಪ್ಪ ಜಾವದೊಳ್ ವಸುಮತೀದೇವಿ

ಸುರಕರಿಯನಿಂದುವಂ ಕೇ ।
ಸರಿಯುಂ ದುಗ್ಧಾಬ್ಧಿಯುಂ ದಿವಾಕರನುಂ ಬಂ ॥
ಧುರಪ್ರಪ್ಪವಾಲೆಯಂ ವಾ ।
ರಿರುಹಾನನೆ ಕನಸಿನೊಳ್ ಮನಂ ಮಿಗೆ ಕಂಡಳ್ ॥ ೬೬

ಅಂತು ಸುಸ್ವಪ್ನಮುಂ ಕಂಡು ಸುಖನಿದ್ರೆದಿಳಿದು ಕುಳ್ಳಿರ್ದರಸಂಗೆ ತದ್ವಿಶೇಷನಮುಂ ಪೇಟಿಲರಸಂ ಬೆಳಗಾಗಲೊಡಂ ಪ್ರರೋಹಿತರಂ ಕರೆಯಿಸಿ ತದ್ವೃತ್ತಾಂತವಮುಂ ಪೇಳಲೊಡಂ

ಕರಿಯಿಂ ಶಶಿಯಿಂ ಹರಿಯಿಂ ।
ಶರನಿಧಿಯಿಂ ರವಿಯಿನೆಸೆವ ಪ್ರಪ್ಪದಿನಧಿಕಂ ॥
ಕರುಣಿ ಪರಾಕ್ರಮಿ ಪ್ರಾಜ್ಞಂ ।
ಸ್ಥಿರತೇಜಂ ನೃಪತಿ ಪುಟ್ಟುಗುಂ ಸುಕುಮಾರಂ ॥ ೬೭

ಎಂದು ಸ್ವಪ್ನಫಲಮುಂ ಪೇಳ್ದಿ ಪ್ರರೋಹಿತಂಗೆ ಕರ್ಪೂರತಾಂಬೂಲಾದಿದಾನಸನ್ಮಾನದಿಂ ಕಳಿಪಿ ಬಳಿಕಾದಿನಂ ಮೊದಲಾಗಿ ವಸುಮತೀದೇವಿ ನಾನಾವ್ರತನಿಯಮದಿಂದಿರ್ದಿನಂ ಪಲವು ದಿನಂ ಕಳೆಯೆ

ನಡೆಯೊಳಡಿಯಿಟ್ಟು ಪೆಂಪಿನ ।
ನಡುವಿನೊಳೆಸೆಗೆಯ್ದು ನುಡಿಯೊಳೆಡೆಸಂವಲಗೆ* ॥
ಣ್ಣಡೆವಿಡಿದು ನೆಲಸಿ ಚೆಲ್ವಂ ।
ಪಡೆದೆಸೆವತ್ತಲಸನ್ಯತ್ತಿ ತತ್ಕೋವುಲಿಯಾ ॥ ೬೪

ಅನಂ ಕನುಳಿನಿ ಕಂಡಿಳಾಪತಿಯು ಸಮುಯುಂಬಡೆದೇಕಾಂತಕ್ಕೆ ಬಂದು

ವನಿತೆಯ ಗರ್ಭಚಿಹ್ನವುತಿಕಾತುಕಮೆಂತನೆ ರತ್ನನೂಪುರ ।
ಧ್ವನಿಗಲಸಿತ್ತು ಮಂದಗತಿಯೊಳ್ನಡು ಕಾಂಚಿಗೆ ತಿಣ್ಣವಾದುದಾ ॥
ನನರುಚಿ ಚಂದ್ರನೆಂಬುಪಮೆಗೊಪ್ಪಿದುದುಚ್ಚಕುಚಾಗ್ರಿಮಕ್ಕೆ ಕ ।
ರ್ನನುನಯವಾಗುದಂಗಲತೆ ಕಾಂತಿಯನಾಂತುದಿಳಾಧಿನಾಯಕಾ ॥ ೬೫

ಎಂದು ನಿರ್ಭರಗರ್ಭವಾರ್ತೆಯಂ ಪೇೞ್ದು ಸೀಮಂತಸಮಯಮೆಂಬು
ದುಮರಸನವಳ್ಗೆ ಪಸಾಯನಂಗೊಟ್ಟು ಪರಮಾನಂದಮುಂ ತಳೆದು,

॥ ಮನೋಜ್ಞೆ ॥

ಮಹೀತಳಾಧೀಶ್ವರಂ ನಿಜವಸೋರವಾಗರ್ಭದಿಂ ।
ಮಡೋತ್ಸವಾನಂದಮುಂ ತಳೆದು ಗರ್ಭಸೀಮಂತದಿಂ ॥
ಸುಹೃದ್ವಿಧಾನಪ್ರಿಯಾಸ್ಪದವಿದಕ್ಕೆನುತಾತ್ಕ್ಷಣಂ ।
ಪ್ರಹಾರವರ್ಮಾಖ್ಯನಂ ಕರೆಯಲಟ್ಟಿದಂ ಭೂಭುಜಂ ॥ ೬೦

ಆತನು ತನಗೆ ಪ್ರಾಣಮಿತ್ರನಪ್ಪ ಮಿಥಿಲಾಪತಿ ಪ್ರಹಾರವರ್ಮನಂ ನಿಜ
ಕಾಂತೆ ಪ್ರಿಯಂವದೆ ಸಹಿತಂ ಬಪ್ಪುದೆಂದು ಕರೆಯೆ ಕಳಿಪಿ

ಸಕಲಸುವಸ್ತ್ರಮಂ ಸಕಲನಿರ್ಮಲಸನ್ನುತರತ್ನಕೋಟಿಯಂ ।
ಸಕಲಸುವಸ್ತುವಂ ತಳೆದು ತನ್ನ ಮನೋರಮೆಯುಂ ಸುತರ್ಕಳುಂ ॥
ಪ್ರಕಟಿತಸೇನೆಯುಂ ಬೆರಸು ಬಂದನನೇಕವಿಭೂತಿಯಿಂದೆ ಕಾ ।
ತುಕಮೆನಿಸಲ್ ನೆಗೞ್ದಿ ಮಿಥಿಲಾಪತಿ ಪ್ರಪ್ಪುರಕ್ಕೆ ರಾಗದಿಂ ॥ ೬೧

ಅಂತು ಬಂದ ಪ್ರಹಾರವರ್ಮನಂ ರಾಜಹಂಸಂ ಪುರಸ್ಪ್ರವೇಶಂಮಾಡಿಸಿ
ವೆಸುಮತೀದೇವಿಯ ಸೀಮಂತಸಂಭ್ರಮದಿನಿರಲೊಡಂ

ಪದಸಂಘಟ್ಟನೆಯಿಂ ಶಿಲೋಚ್ಚಯಕುಲಂ ನುಗ್ಗಾಗೆ ಸೇನಾಸುಭಾ ।
ರದಿನುರ್ವೀತಳವುಱ್ಗೆ ದುರ್ದಮಧನುರ್ಜ್ಯಾರಾವದಿಂ ಸಿಂಧುಗಳ್ ॥

ಕೆದಡಲ್ ತುಂಗಪತಾಕೆಯಿಂ ಗಗನವಾದಂ ತೀವೆ ಮೇಲೆತ್ತಿ ಮು ।
ತ್ತಿದನೊತ್ತಂಬದೆ ರಾಜಹಂಸಪುರಮಂ ಶ್ರೀವಾಳವಕ್ಷ್ಮೋಣಿಪಂ ॥ ೭೦

ಅಂತು ಪೂರ್ವವಿರೋಧಿ ವಾಳವದೇಶಾಧೀಶ್ವರನಪ್ಪ ಮಾನಸಾರಂ ಕು
ಸುಮಪುರಮಂ ಮುತ್ತಿ

ಕವಿ ಕವಿನೂಂಕು ನೂಂಕಗಟಿ ಲಂಘಿಸಿ ಕೋಂಟೆಯನೇಱಿಯಾಳ್ದಳಂ
ತಿವಿ ತಿವಿಯೆಂದು ಲಗ್ಗೆವಱೆಯಂ ಪೊಣೆವಬ್ಬರನುರ್ವಿಯುರ್ವಿಯಂ ॥
ಕಿವಿಗಿಡಿಸುತ್ತಿರಲ್ ದನಿಯಿದೇನೆನುತುಂ ಕಲಿ ರಾಜಹಂಸನ ।
ಶ್ವವನೊಸೆದೇಱಿಯೆಕ್ಕತುಳದಿಂ ಪೊಱಮಟ್ಟರಿಯೊಳ್ ಪೊಣಬರ್ದಿದಂ ॥ ೭೫

ಆವ್ಯತಿಕರದೊಳ್ ತನ್ನಾಪ್ತಬಲವೆಲ್ಲಮುಂ ಪೊಱಮಟ್ಟಿಸುವುದುಂ ಮಾಱು
ದ ಮುಕ್ತ ಕರಮುಕ್ತ ಯಂತ್ರಮುಕ್ತ ಮುಕ್ತಾಮುಕ್ತವೆಂಬ ಶಸ್ತಾ
ಸ್ತ್ರಪ್ರಯೋಗದಿಂ, ಕೇಶಾಕೇಶಿ ನಖಾನಖಿ ದಂತಾದಂತಿ ಕಚಾಕಚಿ ಮು
ಷ್ಟ್ಯಾಮುಷ್ಟ್ಯಿಯೆಂಬ ಸಂಕಾಳೆಯುದ್ಧದಿಂ, ನಿರ್ವಿಚಾರಜೀವಿತರಾಗಿ ಕಾದು
ವಾಗಳ್ ಮಾಗಧೇಶ್ವರಂ ಮಾನಸಾರನನಭಿಮಾನಹೀನನಪ್ಪಂತು ವಿರಥನಂ
ಮಾಡಿ ಮುಂದುಗಾಣದೆ ಬೆಂಗೊಟ್ಟೋಡುವಂತೆ ಭಂಗಂಬಡಿಸಿ ಪಡೆಯೆಲ್ಲ
ಮುಂ ಪ್ರಡಿಗುಟ್ಟಿ ಮುಂದುಗೆಡಿಸಿ ಬಂದ ಬಟ್ಟೆಯಂ ಪತ್ತಿಸಲನಂ ಕೈ ಪಱಿವ
ಕರಿಯಂತೆ ಸತ್ವಂಗುಂದಿ ಪೋಗುತುಂ

ಬಲವೆಲ್ಲಂ ಕಡಿಖಂಡನಾಯ್ತಪಜಯಂ ವೈವೆರ್ಚಿರಲ್ ದುರ್ಯಶಂ ।
ತಲೆದೋಱಿತ್ತಭಿಮಾನವೊರ್ಗುಡಿಸುತಿನ್ನೇನೆಂದು ಮದ್ರಾಜ್ಯದೊಳ್ ॥
ನೆಲಸಿಪ್ಪೆಂ ಸುಡು ಜೀವದಾಸೆಯನೆನುತ್ತುಂ ಮಾನಸಾರಂ ವನ ।
ಸ್ಥಲಮಂ ಪೊಕ್ಕತಿರೋಷದಿಂದೆ ಸತತಂ ತಾಳ್ದಂ ತಪೋನಿಷ್ಠೆಯಂ ॥ ೭೮

ದುರ್ಗಮವೈರಿಜಯಕ್ಕಿದು ।
ಮಾರ್ಗಂ ನಿಜವೆಂದು ಮಾನಸಾರನೃಪಾಲಂ ॥
ದುರ್ಗಿಯನುಪಾಸ್ತಿಗೆಯ್ಯು ।
ತ್ತಾರ್ಗವಮುರ್ವೀಚರನೆನಿಪ್ಪರಣ್ಯದೊಳಿರ್ದಂ ॥ ೭೯

ಅಂತು ಮಾನಸಾರಂ ಕಾನನಮುಂ ಪೊಕ್ಕುಂ ಇತ್ತಲಾರಾಜಹಂಸಂ ನಿಧಿ

ಪುರುಷಂ ನೀತಿಯುಂ ಪರಿದಂತೆ ಮುನ್ನಮೆ ಉನ್ನತಪ್ರಭಾವದಿಂ ಸನ್ನುತಿ
ವಡೆದಿರ್ದಂಗೆ ಜಯಪ್ರನೋದಂ ಸಮನಿಸುವುದುಂ

ಸುರಕರಿ ಬಂದು ಪಟಿ್ದ ಸರೋವರಮುಂ ಮುದನುಕಿರ್ದ ಪೊಕ್ಕು ಪು ।
ಷ್ಕರದಿನೊಲ್ದು ಪುಷ್ಕರಮನೀಂಟಿ ಸರೋಜಮನೆತ್ತಿ ಕಿಪ್ಪು ನಿ ॥
ರ್ಝರನಿಲೀಲೆಯಂ ಮೆಱೆವನ್ನೆಗಂ ಪ್ರತಿಪಕ್ಷಬಲಾಬ್ಧಿಯಂ ನೆಲಂ ।
ಬಿರಿಯೆ ಕಲಂಕಿ ಸತ್ವದೊವವಂ ತಳೆದಂ ಕಲಿ ವಾಗಧೀಶ್ವರಂ ॥ ೨೬

ತನ್ನೆಸವಿಂಗೆ ತನ್ನ ವಿಭವಕ್ಕೆ ನೆಗಚ್ತೆಯ ತನ್ನ ಚೆನ್ನ ಸಂ ।
ಪನ್ನತೆಗಂಪು ತನ್ನ ಕುಲದಾಯತಿಗೊರ್ಪವ ಮಾಚ್ಕೆಯಿಂ ಕಳಾ ॥
ಸನ್ನತವಾಪ್ತ ಬಂಧುಜನಮಚ್ಚರಿಯೊಂದೆನಲುತ್ಸವಂ ಮಿಗಲ್ ।
ತನ್ನಯ ಚಿತ್ತವಲ್ಲಭೆಗೆ ಗೆಂಟಗೆಗಟ್ಟಿದನುರ್ವರಾಧಿಪಂ ॥ ೨೭

ಅಂತು ರಮಣೀಯಮಪ್ಪಂತು ನಿಜರಮಣಿಗೆ ಸೀಮಂತಮನೆಸಗಿ
ಸಕಲದಿಗಂತರಕ್ಕಖಿಳಗೂಢಚರರ್ಕಳನಟ್ಟಿ ಖಾತ್ರವ ।
ಪ್ರಕರ[1]ದ ಸದ್ಭ[1]ಲಾಬಲತೆಯಂ ತಿಳಿಯುತ್ತನುರಾಗಲಕ್ಷ್ಮಿಯಂ ॥
ಸುಕರಮೆನಲ್ ಮುಖಾಂಬುಜದೊಳಾಂತು ನೆಗಳ್ದ ನಿಜಾತ್ಮಮಿತ್ರನಂ ।
ತಿಕದೊಳರಲ್ ಸುಖಂಬಡೆದು ರಂಜಿಸುತಿರ್ದನಭಂಗವಿಕ್ರಮಂ ॥ ೨೮

॥ ಗದ್ಯಂ ॥

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗನಿಟ್ಟಲಪದಾಂಭೋಜಮತ್ತಮಧುಕರ
ವಧೂಸೂದನನಂದನ ಸರಸಕವಿ ಚಾಂಡರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಪೀಠಿಕಾಪ್ರಕರಣಂ

ಪ್ರಥಮಾಶ್ವಾಸಂ.

---

1. ದವರ್ಬ. ಕ. ಗ.

ಶ್ರೀವಸುಮತೀವರಂ ಸಕ ।
ಲಾವನಿಯಂ ಪಾಲಿಸುತ್ತನೂನವಿಲಾಸಂ ॥
ಭೂವಿನುತಿವೆತ್ತನರ್ಥಿಜ ।
ನಾವಾಸಂ ಪದೆದಭಂಗವಿಟ್ಟಿಲಭೃತ್ಯಂ ॥ ೧

ಅದಲ್ಲದೆಯುಂ

ಪೌರವಿಲಾಸಿನೀನಯನಕಾಂತಿ ಕವಲ್ಪರಿದೊಪ್ಪತಿರ್ದ ಶೃಂ ।
ಗಾರರಸಪ್ರವಾಹದೊಳನಂತನೃಪಾಲಕಸತ್ಕಿರೀಟನೀ ॥
ರೇರುಹಜಾಳದೊಳ್ ವಿವಿಧಸತ್ಕವಿಸಂಕುಲಮಧ್ಯದೊಳ್ ಮುಹೋ ।
ದಾರದೆ ರಾಜಹಂಸನೃಪನೇನೆಸೆದಿರ್ದನೊ ಸತ್ಸಭಾಗ್ರದೊಳ್ ॥ ೨

ಅಂತು ಮನೋನುರಾಗದಿಂ ಮೈಮೆನಡೆದು ಸಕಲರಾಜಪುತ್ರನೇತ್ರಪುತ್ರಿಕೆಗಳಂ ಕೃತಾರ್ಥಂ ಮಾಡುತ್ತುಂ ಸುಖಸಂಕಥಾವಿನೋದದಿಂ ಸಭಾಭವನದೊಳ್ ಸಿಂಹಾಸನಾಸೀನನಾಗಿ ಕುಳ್ಳಿರ್ದುವಾಸಮಯದೊಳೊರ್ವ ದೌವಾರಿಕಂ ಬಂದು ನಿಟಿಲತಟಘಟಿತಹಸ್ತಸಂಪ್ರಟನಾಗಿ

ಪೊಸಜಡೆ ಮಿಂಚುವೋಲ್ ಕುಣಿವ ಕುಂಡಲಮಿಟ್ಟ ವಿಭೂತಿಸೆಳ್ಳುಗುರ್।
ಕುಸಿದೊಡಲಾಂತ ಲಾಕುಳಕಮಂಡಲುವೃಟ್ಟಮಲಾಂಬರಂ ಶ್ರಮ ॥
ಪ್ರಸವನುಖಂ ಮನೋಹರವಿಲಾಸನನಾಂತಿರೆ ಚೆಲ್ವ ಮುಗ್ಧತಾ ।
ಪಸನತಿಸಂಭ್ರಮಂಬೆರಸು ಬಾಗಿಲೊಳಿರ್ದನುರ್ವರಾಧಿಪಾ ॥ ೩

ಎಂದು ದೌವಾರಿಕಂ ಬಿನ್ನಪಂಗೆಯ್ಯಲರಸನಾತನಂ ಬರಿಸೆಂಬುದುಂ

ಮೆಲ್ಲನೆಯಿಡುತೆ ತನ್ನಂ ।
ಬಲ್ಲವರಱಿದಪ್ಪರೆಂದು ಶಂಕಿಸು-ತೆ ಮುನಂ ॥
ಪಲ್ಲವಿಸೆ ನಡೆದು ಬರೆ ಭೂ ।
ವಲ್ಲಭನಾಕ್ಷಣದೊಳಱಿದನಾತನ ಕುಱುಪಂ ॥ ೪

ಅಂತಱಿದುವಱಿಯದಂತೆ

ನಸುನಗುತೆ ಕೈಗಳಂ ಮುಗಿ ।
ದೊಸೆದಿಲ್ಲಿಗೆ ಬನ್ನಿ ಮೆಂದು ಕುಳ್ಳಿರಿಸಿ ಸಭಾ ॥
ವಸಥದೊಳೊಳ್ನುಡಿಯಿಂ ಮು ।
ನ್ನಿಸಿದಂ ಕುಟಿಲೋಪಚಾರದಿಂ ಭೂಪಾಲಂ ॥ ೫

ಅಂತು ಕಿಱಿದು ಬೇಗಮಿರ್ದು ರಾಜಲೋಕನುಂ ಬೀಱ್ಕೊಟ್ಟು ಓಲಗದಿಂದೆೞ್ದೀಕಾಂತಕ್ಕೆ ಕುಟಿಲತಾಪಸನಂ ಕರೆದಿದೇಂ ಚಟುಲಚರಣಾ! ಈಪರಿಯೊಳ್ ಬರ್ಪುದಕ್ಕೆ ಕಾರಣಮೇನೆಂದು ಕೇಳ್ವುದುಮವನಿಂತೆಂದಂ:—

ಅವನಿಪ ಬಿನ್ನಪಂ ನಿಜವಿರೋಧಿನೃಪಾಲಕರಾಜ್ಯದೊಳ್ ವಿಶೇ ।
ಷವನಱಿದಾಗಳಾಗಳಱಿದರ್ಥವನೊಪ್ಪಿಸಲೆನ್ನ ನಟ್ಟಲಾಂ ॥
ವಿವಿಧವಿಳಾಸದಿಂ ಬೆಸೆವ ಮಾಳವದೇಶಮನೆಯ್ದಲಲ್ಲಿ ಮಾ ।
ಳವನೃಪನೊಂದು ಕಾರ್ಯ್ಯವನೊಡರ್ಚಿದೊಡಾನಱಿದಿಲ್ಲಿಗೆಯ್ದಿದೆಂ ॥ ೬

ಅದಾವುದೆನೆ:—

ನಿನ್ನೊಡನಂದು ಕಾದಿ ಮುಱಿದೋಡಿದ ಬನ್ನದ ಬೇಗೆಯಿಂದವಂ ।
ತನ್ನ ಪುರಕ್ಕೆ ಪೋಗದೆ ಮಹಾವನಮಂ ತವೆ ಪೊಕ್ಕು ದುರ್ಗ್ಗಯಂ ॥
ಕೆನ್ನೆಮುಪಾಸ್ತಿಗೆಯ್ದು ಪಡೆದಂ ಗದೆಯಂ ಪದೆಪಿಂ ರಿಸ್ರಕ್ಷಯಾ ।
ರ್ಥನ್ನಿಜಸೇನೆಯಂ ನೆರಪಿ ಬಂದಪನಿಲ್ಲಿಗಿಳಾಧಿನಾಯಕಾ ॥ ೭

ಎಂದೀವಿಶೇಷಮಂ ಪೇೞಿಲೆಂದೀವೇಷದಿಂ ಬಂದೆನೆಂಬುದುಮಾತನಂ ಪ್ರೀತಿಯಿಂ ಮನ್ನಿಸಿಯರಸಂ ಮಗುೞಿಂತೆಂದಂ:—

ಅಕ್ಕಟ! ಮಾಳವಂ ಮಗುೞ್ದು ಚೇಷ್ಟಿಸಿ ಬರ್ಪೊಡೆ ಕೊಂದು ಬಾರದಿಂ
ತುಕ್ಕೆವದಿಂದೆ ನೀಂ ಬರಲಿದೇಕವರುಂ ಮುಳಿದಿಲ್ಲಿಗೆಯ್ತರ್ ॥
ಪೊಕ್ಕಿಭಂ ಮೃಗಾಧಿಪತಿಯಿರ್ಕೆಗೆ ಬಂದವೊಲಾಂತು ನೀಜ್ಜಿ ಪೋ ।
ಱ್ದಿಕ್ಕದೆ ಮಾಣ್ಬನೇ ಎನುತೆ ಗರ್ಜಿಸಿದಂ ಮಗಧಕ್ಷಿತೀಶ್ವರಂ ॥ ೮

ಅಂತು ಕೋಪಮುಂ ತಳೆದಾತನಂ ಕಳುಪಿಯನಂತರಂ ತನ್ನ ನಾಲ್ವರ್ ಸಚಿವರುಂ ಕರೆಯಿಸಿ ತದ್ವೃತ್ತಾಂತಮುಂ ಪೇೞ್ದಿದಕ್ಕೇನಂ ಮಾಜ್ಪೆವೆಂದು ಸುಮಿತ್ರನ ಮೊಗಮುಂ ನೋಡಲಾತನಿಂತೆಂದಂ:—

ಹಿಂದಣ ಸೋಲವೊಂದು ವನವಾಸದ ಸೇದೆಯದೊಂದು ಪೆಂಡಿರಂ ।
ನಂದನರಿಂದಗಲ್ದಖಿಲದೊಂದು ಮನೋಗತವೈರವೊಂದಿದೊಂ ॥
ದೊಂದತಿದುಃಖಕಾರಣಮಿವೆಲ್ಲವಱಿಂ ಕಡುನೊಂದು ದೈವದಿಂ ।
ದೊಂದು ಗದಾಯುಧಂಬಡೆದನಿಂ ತಡೆದಿರ್ದನೆ ಮಾಗಧೇಶ್ವರಂ ॥ ೯

ಎಂದ ಮಾತಂಕೇಳ್ದಾತಂಗಾತಂ ಮಿಗಿಲಾದಖಿಲಮುಬ್ಬೆಗಮುಂ ಪುಟ್ಟಿ ಪುದೆಂದು ನಸುನಗುತ್ತುಂ ಸುಮತಿಯ ಮುಖಮಂ ನೋಡಲಾತನಿ ತೆಂದಂ:—

ನುತಸಾಮಭೇದದಾನೋ ।
ದ್ಯತದಂಡವೆನಿಪ್ಪನಾಲ್ಕುಮತದೊಳ್ ಕಾಲೋ ॥
ಚಿತಮಾವುದಂತದಂ ನಿ ।
ಶ್ಚಿತಮಪ್ಪಂತೆಸಗು ದೇವ ನೀನಱಿಯದುದೇ ॥ ೧೦

ಎಂದ ಮಾತಂ ಮನದೆಗೊಂಡು ಸತ್ಯಧರ್ಮನ ಮೊಗಮಂ ನೋಡಲಾತ ನಿಂತೆಂದಂ:—

ಅಪಜಯಮಕ್ಕೆ ಮೇಣ್ವಿಜಯಮಕ್ಕೆ ವಿರೋಧಿನೃಪಾಲರೆತ್ತಿ ಬಂ ।
ದಪರೆನೆ ಕೇಳ್ದು ತನ್ನ ಪುರಮಂ ಪೊಱಮಟ್ಟದಟಂ ನಿಜಾರಿಭೂ ॥
ವಿಪರೆರ್ದೆಯಳ್ಕಿ ತಳ್ತ ಱಿದನೇಕಯುಗಂ ಹರಹಾಸ ಚಂದ್ರಮಾ ।
ತಪಸಮಕೀರ್ತಿಯಂ ಪಡೆದು ಬಾಳ್ವುದೆ ದಲ್ ನೃಪನೀತಿ ಭೂಪತೀ ॥ ೧೧

ಆಮಾತಂ ಕೇಳ್ದರಸಂ ಸಂತಸಂಬಟ್ಟು ಸುಶ್ರುತನ ಮುಖಮಂ ನೋಡಲಾತನಿಂತೆಂದಂ:—

ಎನಿತು ರಿಸ್ರವಿಜಯವಮಾಗಿ ।
ರ್ದ ನರೇಂದ್ರಂ ದುರ್ಗವರ್ಗಮಂ ಪಾಲಿಸ್ಪುದೇ ॥
ಕೆನೆ ಸಿಂಹಂ ಗಜವಿದಳನ ।
ನೆನಿಸಿರ್ದುಂ ಬಹಳಗುಹೆಯನಾಶ್ರಯಿಸುವವೋಲ್ ॥ ೧೨

ಎಂದು ಪೇಳ್ದಿವರ ಮಾತೆಲ್ಲವುಂ ಕೇಳ್ದು ಅವರವರಿಚ್ಛೆಯಂ ಮಾಟ್ಪೆನೆಂದು ರತ್ನಶಿಖರಿಯೆಂಬ ದುರ್ಗಕ್ಕೆ ಸ್ವೀಸನೂಹವುಂ ಕಳಿಪಿ ತಾಂ ಶುಭದಿನಶುಭಮುಹೂರ್ತದಿಂ ಪೊಱಮಟ್ಟು,

ದೆಸೆ ಬೆಸಲಾದುದೋ ಧರಣಿಯಿಂದುದೊ ಪನ್ನಗವಲ್ಲಭಂಗೆ ಲೆ ।
ಕ್ಕಿಸಲರಿದೆಂಬಿನಂ ಮುನಗಜಾಳಿ ಹಯಾಳಿ ರಥಂ ಪದಾತಿ ಘಾ ॥
ರ್ಮಿಸೆ ಪಗೆಯಂ ಪಡಲ್ವಡಿಸಲೆಂದು ಮಹಾದ್ಭುತದೇಱ್ಗೆಯಿಂ ನೆಲಂ ।
ಕುಸಿಯೆ ಚತುರ್ಬಲಂ ಬೆರಸು ತನ್ನಯ ರಾಜ್ಯದ ಸೀಮೆಗೆಯ್ದಿದಂ ॥೧೩

ಅಂತು ರಾಜಹಂಸನಿದಿರಾಗಿ ಬಿಟ್ಟುದಂ ಮಾನಸಸಾರಂ ಕೇಳ್ದು

ಪ್ರಾರ್ಜವಿರೋಧದಿಂ ನಿಜಪರಾಕ್ರಮದಿಂ ಪರರಾಜ್ಯಕಾಂಕ್ಷೆಯಿಂ ।
ದೋರ್ಬಲಮುರ್ಕಿನಿಂ ವಿಭವಮುತ್ಸರದಿಂ ಜಸದೇಱ್ಗೆಯಿಂ ಗದಾ ॥
ಗರ್ವದೊಳುಬ್ಬಿ ದಿಗ್ವಿತತಿ ಕಂಪಿಸೆ ಮಾಳವಭೂಮಿಪಾಲಕಂ ।
ಸರ್ವಬಲಾನ್ವಿತಂ ನಡೆದು ಮಾಗಧನೊಳ್ ಮುಳಿದೊಡ್ಡನೊಡ್ಡಿದಂ ॥ ೧೪

ಅಂತುಭಯಬಲಂ ಪ್ರಭೂತಪ್ರಭವದಿಂದಭಿಮುಖಮಾರ್ಪ್ಪುದುಂ

ಕರಿಗೆ ಕರಿ ತುರಗದೋಳಿಗೆ ।
ತುರಂಗತತಿ ತೇಗೆರ್ ತೇರ್ ಪದಾತಿಗೆ ಸುಭಟರೋ ॥
ತ್ಕರಮಣಿಯನೊಡ್ಡಿ ಕಾದ ।
ಲ್ಕುರನಣಿಸಿತ್ತಿ ಮಗೆ ತಮಗೆನುತ್ತು ಭಯಬಲಂ ॥ ೧೫

ಅಂತುರವಣಿಗ್ರದಂ ಕಂಡು

ಬಾನ್ಗಲಿಯ ಕಾಲ ತೊಡರ ಮು ।
ಪಾವೀರರ್ ಚೂಣಿಬವರನುಂ ಕೆಣಕಲ್ ಕೋ ॥
ಪಾವಿಷ್ಟರಾಗಿಯುಗ್ಗಡ ।
ರಾತ್ರತರುರವಣಿಸಿ ಕುದುರೆಯುಂ ಪೊಳೆಯಿಸಿದರ್ ॥ ೧೬

ಗಱಿಸನ್ನೆಯಿಂದೆ ಕರೆಕರೆ ।
ದುಱಿವಾಳ್ಗಳನುಭಯಬಲದ ಬಿರುದರ್ ಬಿಲ್ಲುಂ ॥
ಬಿಱಿಗಾಗಿ ನೋಡೆ ಕಣ್ಗಳ ।
ಬಱಿನಂ ಕಳೆದೆಚ್ಚು ಮೆಚ್ಚಿಪರ್ ಬಿಲ್ಲಾಳ್ಗಳ್ ॥ ೧೭

? ಕಿಱುಸ್ರವ ಕಿವಿ ಕಡುನೊಗರಂ ।
ಪಱಿವ ನೊಗಂ ಸುಭ್ರಡದ್ ವಾಳಾಗ್ರಂ ನುಂ ॥

ದುಜುವಾಯ್ದು ತವಕವೊಪ್ಪವ ।
ಕುಜುಪಿನ ಕುದುರೆಗಳನಾರ್ದು ಬಿಟ್ಟರ್ ಸುಭಟರ್ ॥ ೧೪

ಪ್ರಷ್ಕರಬಂಧ್ರದ ಫೂತ್ಕೃತಿ ।
ಪ್ರಷ್ಕರಭಾಗಕ್ಕೆ ಪ.ಱಿ ಸದ್ಭಟತತಿಯುಂ ॥
ನಿಷ್ಕರುಣಂತಪತಿಯೆಂ ।
ನಿಷ್ಕಂಟಕವಾಗಿ ಮಾಡಿವತ್ತಿ ಭಯೂಧಂ ॥ ೧೫

ರಣವಾರ್ಧಿಯೊಳರಿಯ ಶಿರೋ ।
ಮಣಿಯಂ ತವೆ ಮಾಱುಗೊಳ್ವ ಪೆರ್ಬಡಗೆಂಬಂ ॥
ತಣಿಯೊಡ್ಡಿದಾಳ್ಗಳಿಲ್ಲಂ ।
ಪೆಣನೊಡ್ಡಾಗಲ್ಕೆ ಪರಿದುವಗ್ಗದ ತೇರ್ಗಳ್ ॥ ೧೬

ಕಲಿಗಳನನುರಿಯರೊಡನಿರೆ ।
ಕಳುಗ್ರವ ತೆಱದಿಂದೆ ಕೊಂತದಿಂ ಕೋದು ನಭ ॥
ಸ್ಸ್ಥಳಕೆತ್ತಿ ತಮ್ಮ ಬಾಹು ।
ಬಳವುಂ ರಣದಲ್ಲಿ ಕೊಂತಕಾಱರ್ ಮೆಱೆದರ್ ॥ ೧೭

ಱಳಿಪಿಸಿ ಪ್ರಾಯ್ವ ಖಡ್ಗಲತೆ ವಿಂಬಚು ಭಟರ್ಕಳ ಬೊಬ್ಬೆಯಬ್ಬರಂ ।
ಮೊಳಗು ಪ್ರೌನಲ್ವಸಂಗಿ ಸುರಿತರ್ಪ ರುಣಾಂಬು ಸುವೃಷ್ಟಿ ಬಲ್ಪು ಪೆ ॥
ರ್ಬೆಳಸೆನೆ ಸಂಗರಾಂಗಣದೊಳಾಂತರ ಪಂದಲೆರಾಸಿಯುಂ ಮರು ।
ಳ್ಗಳ ಬಳಗಕ್ಕೆ ಬೀಱುತೆ ಪಟಿಂಚಿದರಿರ್ವ್ವಲುರ್ವರಾಧಿಪರ್ ॥ ೧೮

ಅಂತು ಮಾಳವಮಾಗಧರ್ ಪಾಳ್ಮೆಯಱಿದಾಳ ಕಾಳಿಗವುಂ ನಿಲಿಸಿ ೬೩
ಮಾಲವನರಥವನುರ್ವೀ ।
ಪಾಲಂ ಮಗಧೇಶ್ವರಂ ನಿಜಾಸ್ತ್ರಗಳಿಂ ॥
ಕೀಲಿಸುತೆ ಮುಟ್ಟಿವಂದರ ।
ಕಾಲಂ ಕಡುವುಳಿದು ಬರ್ಪ ತೆಱದಿಂದಾಗಳ್ ॥ ೧೯

ಅಂತು ಬರ್ಪುದಂ ಕಂಡು ಮಾಳವಂ ತನಗೆ ಸೋಲಂ ಬರ್ಪುದೆಂದಾಳ್ವ
ಮುಖಮುಂ ನೋಡಿ ಫೋಳೆಂದು ಕವಿಯೆ ಮಾಗಧನಾಳ್ ಕಂಡು

ಮೂಳವನೆಂಬನಲೆ ನ ।
ಮ್ಮಾಳವನೆಂದಾರ್ದು ಸುಭಟರೆಚ್ಚರ್ ಘಟೆಯುಂ ॥
ಗಾಳಿ ಮುಸಗಲ್ಕೆ ಮಗಧನ ।
ಧಾಳಿ ಮುಹಾಮೇಘದಂತೆ ಪರಿದತ್ತಾಗಳ್ ॥ ೮೪

ಅಂತು ತೆರಳ್ದುದಂ ಕಂಡು ಮತ್ತೆ

ಪಿಂದಣ ಸೋಲನುಂ ನುಱಿದು ಲಜ್ಜೆಯನೊಲ್ಲದೆ ಮತ್ತೆ ಬಂದನೇ ।
ಪಂದೆಗಳೋಜನೆಂದು ಮಿಡುಕುಳ್ಳದಟರ್ ಕಡುಕೆಯ್ದು ಬಾಣದಿಂ ॥
ಸ್ಯಂದನಮುಂ ತುರುಂಗಚಯಮುನುಂ ನಿಜದೇಹಮುನೆಚ್ಚೊಡಾನೃಪಂ ।
ನೊಂದು ರಥಾಗ್ರದಿಂ ನೆಗೆದು ದಿವ್ಯಗದಾಯುಧನುಂ ತುಡುಂಕಿದಂ ॥ ೮೫

ಅಂತು ದೇವತೆ ಕೊಟ್ಟ ಗದಾದಂಡನನುಚಿತದವುರಿಯಂ ನಿಮಿಚಿ ಪುಲ್ಲಿಯಂ ತೆಲ್ಲೆಸಿ ಗೊಂತೆಯನಂ ದಂಡೆಗೊಳಿಸಿ ಚಾರಣಾಕೃತಿಯಿಂ ಪಿಡಿದಾಗಳ್

ಕುಡುಮಿಂಚಂ ಸೂಸುತುಂ ಬಲ್ಸಿಡಿಲ ಬಳಗಮುಂ ಕಾಱುತುಂ ಕೆಂಡವುಂ ಸಾಲಿಡುತುಂ ಸಂಹಾರಕಾಲಾಗ್ನಿಯನುಗುಬುತುವೆಂಟುಂ ದಿಶಾಭಿತ್ತಿಯುಂ ಭೀಳಿಡಿಸುತ್ತುಂ ಕೋಟಿಸೂರ್ಯದ್ಯುತಿಯನೊಡೆಯುತುಂ ಭೈರವಾಟೋಪಮುಂ ಕೀಲ್ಪಿಡಿಸುತ್ತುಂ ರೌದ್ರಮಾದತ್ತಧಿಕತರಗದಾದಂಡನುದ್ಯತ್ಪ್ರಚಂಡಂ ॥

ಅಂತಿರ್ದ ಗದಾದಂಡನುಂ ಬೀಸಿ

ಕುದಿದುರ್ಕಲ್ವೀಡ ಮುನ್ನೆವ್ಮನುವಱಿಯದುದಾಸೀನದಿಂ ಕಾದಿಯಾಂ ಸೋಲ್ತುದು ವೋಘಂ ಪೋಗು ಪೋಗೆಂದೆನುತೆಗಜಱಿ ಬೊಬ್ಬಿಟ್ಟು ಧೀಂಕಿಟ್ಟು ದುಷ್ಟಂ ॥ ಗದೆಯಂ ಬೀಸಿಟ್ಟೊಡಾಮೂಗಧನೃಪನ ರಥಂ ನುಗೆನ್ ಜಾತ್ಯಶ್ವಜಾಳಂ । ಮುದವಮಾತಂಗವ್ರಜಂ ಬೆಬ್ಬಿಱಿ ನುಱಿದೊಱಗಳ್ ಬಿಚ್ಚಿದ ಪತ್ತಿಪ್ರತಾನಂ ॥ ೮೬

ಅಂತು ಚಾತುರ್ಬಲಮಂ ವಿಲಯಮಾಗ್ಗಿ ಪರ್ವಿದಂತೆ ಸರ್ವಸಂಹಾರಮಾಡಲರಸಂ ಶಿರೋಭಾಗದೊಳ್ ಗಾಯಮಂಬಡೆದು ಮೂರ್ಛೆವೋಗೆ

ರಥದೊಳಿೞಿಗಿರ್ದ ನರಸಂ ।
ಮಿಥಿಳಾಪತಿ ಸಿಲ್ಕಿದಂ ಪ್ರಧಾನರ್ ನಾಲ್ವರ್ ॥
ಪ್ರಥನದ ಬೆಸೆಯಿಂದುಱಿದರ್ ।
ಶಿಥಿಲವೆನಲ್ ಸೇನೆ ಪರಿದುಬೆೞ್ದಿಸೆಗಾಗಳ್ ॥ ೨೪

ಕಿಸಲಯ ರಾಜಿಯಂ ತಳೆದ ಕಲ್ಪಕುಜಂ ನವಸಾಂಧ್ಯರಾಗದಿಂ ।
ಮಿಸುಗ್ರದಯಾಚಲಂ ವಿವಿಧವಿದ್ರುಮವಲ್ಲರಿಯಿಂ ಕರಂ ವಿರಾ ॥
ಜಿಸುವ ಮಹಾರ್ಣವಂ ಮೆಱೆವನ್ನೊಲ್ ಮೆಱೆದತ್ತು ಗದಾಭಿಘಾತದಿಂ ।
ಬಸವಱಿದಿರ್ದ ಭೂಪತಿಯನಾಂತ ರಥಂ ರಣವುದ್ಧ್ಯಭೂಮಿಯೊಳ್ ॥ ೨೫

ಪಟುಭಟರಬ್ಬಿದರರಸಂ ।
ನಿಟಿಲದ ಗಾಯಕ್ಕೆ ತೇಂಕಿ ಮೈಮಱೆದಂ ದು ॥
ರ್ಘಟವುಱಿವ್ರದೆಂಬವೊಲ್ ಸಂ ।
ಕಟದಿಂ ರತ್ನಾಚಲಕ್ಕೆ ಸರಿದರ್ ಸಚಿವರ್ ॥ ೨೬

ಇತ್ತಲ್

ಇಂದು ತಪಃಫಲಂ ಸಫಲಮಾದುದು ನುದ್ಗದೆಯಿಂ ವಿರೋಧಿ ತೀ ।
ರ್ದಂ ದಲಿಮೆಯ್ದಿ ಮುಗ್ಗಿತು ಜಯಂ ನಮಗಾಯ್ತೆನುತುರ್ಬಿ ಗರ್ಬದಿಂ॥
ದುಂದುಭಿಶಂಖಕಾಹಳೆಯ ಗಾವರದಿಂ ನಿಜಪತ್ತನಕ್ಕೆ ಸಾ ।
ನಂದದಿನೆಯ್ದಿದಂ ಪ್ರಜನನಂಗಳದಿರ್ವರೆ ಮಾಳವೇಶ್ವರಂ ॥ ೨೭

ಅಂತು ಮಾಳವೇಶ್ವರಂ ತನ್ನ ಪತ್ತನಮಂ ಪೊಕ್ಕು

ಅನುವರದೊಳ್ ಸಿಲ್ಕಿದನಂ ।
ಜನಪತಿಗಳ್ ಭಂಗವಡಿಸಲಾಗದೆನುತ್ತುಂ ॥
ಘನತರನೀತಿವಿದಂ ಭೋಂ ।
ಕನೆ ಬಿಟ್ಟಂ ಬೇಟ್ಟಿಪ್ಪುದಿತ್ತು ಮಿಥಿಳೇಶ್ವರನಂ ॥ ೨೮

ಅಂತಾಮಾಳವೇಶ್ವರಂ ತನಗೆ ಸಿಲ್ಕಿದ ಪ್ರಹಾರವರ್ಮನಂ ಬಿಟ್ಟು ಕಳುಪಿ ಜಯಪ್ರಮೋದದಿಂದಿರಲಿತ್ತಲ್

ಮಾಗಧನ ಸಚಿವರಿತ್ತಲ್ ।
ಬೇಗದೆ ರತ್ನಾಚಲಕ್ಕೆ ಪೋಗಿ ನೃಪಂ ದೇ ॥
ವಾಗಾರಮನೆಯ್ದಿದನೆಂ ।
ದಾಗಳ್ ವಸುಮತಿಗೆ ಪೇೞ್ದರುಬ್ಬಿಗದಿಂದಂ ॥ ೩೩

ಅಂತು ಪೊಡವಿಪತಿ ಮಡಿದನೆಂದು ವಸುಮತಿಗೆ ಪೇೞ್ವುದುಂ ವಸುಮತಿ ಸುಮತಿಯಪ್ಪದಱಿಂದಾಸಚಿನಿಗರ್ಿಂತೆಂದಳ್:—

ಭಂಡಣದೊಳ್ ಜಯಾಪಜಯವೆಂಬುದುಸಿದ್ದಮದೊಂದು ಕುಂಬೆ ಪೇೞ್
ಗಂಡಗುಣಂಗಳುಳ್ಳವರ್ಗದಂತಿರಲೊಪ್ಪವ ಕೊಯ್ಯಲಾದೊಡೊ ॥
ಲ್ದುಂಡುಜೆ ಪುಯ್ಯಲಾದೊಡೆ ಪಲಾಯನಸಂಡಿತರಾದ ಗಾದೆಯಂ ।
ಕಂಡಪೆವೀಗಳೆಂದಬಲೆ ಕೋಪಿಸಿದಳ್ ಸಚಿವಪ್ರಧಾನರಂ ॥ ೩೪

ಎಂದು ಮತ್ತಮವಂತಿರಲರಸನೊಡನೆ ಪೋಗಲ್ವೇಳ್ಕೆನಗಿಂಧನಸಂದೋಹಮಂ ಸಮಕಟ್ಟುವೆಂಬುದುಂ, ಸಚಿವರ್ ಸನ್ಯಾನಿಸಿ ದೇವಿಯರ ಗರ್ಭದ ಭರ್ಕಂ ನಿಭರರಾಜ್ಯವನಾಳ್ವನೆಂದಾಗಾಮಿಕಾರ್ಯಮಂ ಪೇೞ್ದು ನಿಲಿಸಿ ಬೊಡಂ ನಿಲ್ಲದೆ ಜೀವದಾಸೆಯನೊಲ್ಲೆನೆಂಬುದುನುವರ್ ಚರಣಕಮಲದೊಳ್ ಶಿರೋಭಾಗಮಂ ಸಾಚುರ್ವುದುಮಾಕೆ ತನ್ನೊಳಿಂತೆಂದಳ್:—

ಏಕೆ ದುರಾತ್ಮರ ಮಾತಂ ।
ನೂಕುವೆನಾಂ ಕಂಡ ಬುದ್ಧಿಯುಂ ಕಾಶ್ಟಂ ನಿ ॥
ವ್ಯಾಕುಲದಿನಿಂದಿನಿರುಳೆಂ ।
ದಾಕಾಂತೆಯನಾತ್ಯವಚನಮುಂ ಮನ್ನಿಸಿದಳ್ ॥ ೩೫

ಅಂತು ಮನ್ನಿಸಿ ನೀಂ ಪೇೞ್ದುದಂ ಮಾಡ್ಪೆನೆಂದವರನತ್ತಲ್ ಕಳುಪಿದಳ್. ಇತ್ತಲ್

ಮಡುಗಟ್ಟಿ ಸುರಿವ ನೆತ್ತರ ।
ಕಡಲೊಳ್ ತೇಂಕಾಡುತಿರ್ಪ ರಥದೊಳ್ ಗಾಯಂ ॥
ಬಡೆದೆನಸು ಬೞಲುತಿದರ್ಂ ।
ಪಡುನೇಸಱ ತೆಱದೆ ರಾಜಹಂಸನರೇಂದ್ರಂ ॥ ೩೬

ಅಂತಿರ್ದರಸನ ವರೂಥನುಂ ತುರಗಂಗಳ್ ತರುಗಳಂ ದುರಂತರಮಪ್ಪರ
ಣ್ಯಮಾರ್ಗದೊಳ್ ತಮ್ಮಿಚ್ಛೆಯಿಂ ಕೊಂಡೋಡಿ ಪೋಗೆ ಮುಂದೆ
ಭೂಮಿಗೆ ಶರನಿಧಿ [1]ಸೆಱಗೆಂ[1] ।
ಬಾನುಮಾತಂತಿರ್ಕೆ ಪೆರ್ಚಿದೀವಟವೃಕ್ಷಂ ॥
ಸೀವುಸಾಸ್ಥಾನವಿದೆನಲಟ ।
ವೀವುಧ್ಯದೊಳಿರ್ದುದಭ್ರಮಂ ಚುಂಬಿಸುತುಂ ॥ ೩೭

ರವಿರಥಮುದಯಾಚಲಮಂ ।
ದಿವಸಾಂತ್ಯದೊಳೊಡಿ ಸಾರ್ದವೋಲ್ ವಟಕುಜದೊ ॥
ಪ್ಪವ ಬೀಲಿಲೊಗ್ಗಿನೊಳ್ ನೃಪ ।
ನ ವರೂಥಂ ನಿಲ್ಕೆ ಪೋಗದಿರ್ದತ್ತಾಗಳ್ ॥ ೩೮

ಅಂತು ನಿಲ್ಕಿದ ಸಮಯದೊಳ್
ಕಡೆವಗಲೊಳ್ ನಿಜಾಂಗಮತಿರಕ್ತದೊಳೊಪ್ಪಿರೆ ಬಲ್ಪುಗೆಟ್ಟು ತೇರ್ ।
ಪೊಡೆಗೆಡೆಯಲ್ ತುರಂಗತತಿ ಮುಗ್ಗೆ ಸರೋಜಮುಖಂ ನಿರೋಧಮಂ ॥
ಪಡೆದಿರೆ ಮುಂಡಲಾಗ್ರಕರದುಗ್ರತೆ ಕುಂದಿರೆ ರಾಜಹಂಸನಂ ।
ಗೆಡೆಗೊಳಲಾರ್ದೆನೆಂಬ ಬಗೆಯಿಂದಿನನೆಯ್ದಿದನಸ್ತಶೈಲಮಂ ॥ ೩೯

ಅಂತಿನನಸ್ತಮಾಗಲೊಡಂ
ಏಕೆಲೆ ದೇವ ನಿನ್ನೊಳಿಡಗಣ್ಣ ಬಲಗಣ್ಣ ಸರಿಯೆನ್ನದಿಂತು ದೋ ।
ಷಾಕರನಂ ಸಮಂತು ತಡೆಗೇಱಿಸಿ ಕೊಂಡು ಮದೀಯಕಾಂತನಂ ॥
ಪೌಕೃತನಂತಿರಸ್ತಗಿರಿಗೆಯ್ದಿಪೆನೆಂದಭವಂಗೆ ವಾಸರ ।
ಶ್ರೀ ಕರಕಂಜಮುಂ ಮುಗಿವವೋಲ್ ಮುಗಿದಿರ್ದುವು ಪದ್ಮಸಂಕುಳಂ ॥ ೪೦

ಕುಜಮೆಲ್ಲಂ ಬಗೆಯಲ್ ತಮಾಲಮಗಮೆಲ್ಲಂ ನೀಲಶೈಲಂ ನದೀ ।
ವ್ರಜಮೆಲ್ಲಂ ಯಮುನಾಜಲಂ ಕವಲುಮೆಲ್ಲಂ ಕೋಮಲೇಂದೀವರಂ ॥
ಪ್ರಜೆಯೆಲ್ಲರ್ ಪುರುಷೋತ್ತಮರ್ ಬೆಸಗೆಳೆಲ್ಲಂ ಕೃಷ್ಣವರ್ತ್ಮಕೆಯೆಂ ।
ದು ಜಗಂ ಬಣ್ಣಿಸಲುರ್ವಿ ಮುರ್ವಿ ಪದೆಪಿಂ ಪರ್ವಿತ್ತು ಸರ್ವೋರ್ವಿಯಂ

1. ಸವಿಯೆಂ. ಕ, ಗ.

ಬಗಿದು ಪುಗಲರಿದು ನೋಡ ।
ಲ್ಬಗೆಯಲಿ ಕಣ್ ಸಲ್ಲದೊಯ್ಯನಡಿಯಿಡೆ ಚಿತ್ತ ॥
ಕ್ಕೊಗೆಗುಮತಿಭೀತಿಯೆನಲು ।
ರ್ದಿಗೆ ದಟ್ಟೈಸಿದುರ್ದಂಧಕಾರಾಕಾರಂ ॥ ೪೦

ಭುವನಕ್ಕೆ ಲೋಚನೇಂದ್ರಿಯ ।
ವಿವಿಧವ್ಯಾಪಾರಮಿನ್ನದೇಕೆನಲಾಕಾ ॥
ಶವನವಸಿಯನೆಣ್ದೆಸೆಯಂ ।
ಕವಿದೆಸೆದತ್ತಂಧಕಾರಮದ್ಭುತಭೂರಂ ॥ ೪೧

ನೋಡುವೊಡಂಜನಗಿರಿಯಿಾ ।
ಸಾಡುವೊಡದು ಲವಣವಾರ್ಧಿ ಸಕಲಜನಂ ಕೊಂ ॥
ಡಾಡುವೊಡೆ ರವಿಶಶಾಂಕರ ।
ನೋಡಿಸಿ ಪೆಸರ್ವಡೆದ ತಿಮಿರಮೇನೊಪ್ಪಿದುದೋ* ॥ ೪೨

ಸೋಂಕಿಂ ಸ್ಥಾವರಮು ಮಾ ।
ತಂ ಕೇಳ್ವುದಱಿಂದೆ ಜಂಗಮುಂಗಳನಱಿವರ್ ॥
ತಾಂ ಕಾಣ್ಕೆಗರಿದೆನಲ್ ಬಗೆ ।
ಗೇಂ ಕಡುನುಂದೈಸಿ ನಿಂದುದೋ ಘನತಿಮಿರಂ ॥ ೪೩

ಅಂತು ದುಸ್ತರಮಪ್ಪ ಕಲ್ತಿಲೆ ಪರ್ಬಿರಲಿತ್ತಲ್ ವಸುಮತೀದೇವಿ ಮುರ
ಣಾರ್ಥಮರಮನೆಯಂ ಪೊಱಮಟ್ಟು
ವನದೇವತೆ ವನದೊಪ್ಪಮ ।
ನನುನಯದಿಂ ನೋಲ್ಪೆನೆಂದು ಬಂದಳೊ ಪೇೞಂ ॥
ದೆನೆ ರಾತ್ರಿಯೊಳೊರ್ಬಳೆ ಕಾಂ ।
ತನ ಸಹಗಮನಕ್ಕೆ ಶಾವನಱಿಸುತೆ ಬಂದಳ್ ॥ ೪೪

ಅಂತಱಿಸುತ್ತುಂ ಗಹನಗಹ್ವರದೊಳ್ ವಿಹ್ವಲೆಯಾಗಿ ಬರುತ್ತುಂ
ದೆಸೆಯೆಂಟುಂ ಪಿಱ್ಗಿಸುತ್ತಗ್ಗಳಮೆನೆ ಪರೆದಿರ್ಪಳ್ಳಿಗೊಂಬೇೞ್ಕ್ಗಿಯಿಂದಾ।
ಗಸಮುಂ ಪೊತ್ತಿರ್ಪ ಮೇಲ್ಗೊಂಬಿನಶಶಿಕಿರಣಂ ಬಾರಿಸಲ್ ಬಾರದೆಂಬಂ ॥
ತೆಸೆವ ಚ್ಛಾಯಾವಿಲಾಸಂ ತುಱುಗಿದ ತನಿವಣ್ ಸ್ಯೆತು ಪಾತಾಳಮುಂ ಭೀ ।

ದಿಸೆ ಕಾಲೂಱಿಪರ್ ಬೇಗರ್ಳ್ ನಟಿಸುವ ವಟುಭೂಜಾತನುಂ ಕಾಂತೆ ಸಾರ್ದರ್ಳ್ ॥ ೪೬

ಅಂತು ಸಾರ್ದಿದೆನ್ನ ಬಗೆಗೆ ತಕ್ಕ ಠಾವೆಂದು ವಟವಿಟಪಿಯ ಕೆಲದ ಕಿಱುಗೊಂಬಿನೊಳ್ ಸೆಜಗಂ ಕಟ್ಟಿಯುಱಿಲನಿಕ್ಕಿ ಕೊಳಲುಜ್ಜಗಿಸುತ್ತುಮಿರಲಿತ್ತಲರಸಂ

ತಂಗಾಳಿ ಬೀಸಲಾಹ್ಲಣಂ ।
ಮುಂಗದೊಳಸು ಪಸರಿಸಲ್ಕೆ ನೃಪನೆಚ್ಚತ್ತಾ ॥
ವಂಗೆ ಪ್ರಗಲರಿದೆನಿಪ್ಪ ವ ।
ನಾಂಗಣದತ್ತೀಕೆ ಬಂದೆನೆಂಬವಸರದೊಳ್ ॥ ೪೭

ಅಂ ತನುನಂ ನಿವೇದಿಪೆನೆಲೇ ವನದೇವತೆಯೆನ್ನ ಜನ್ಮಜ ।
ನ್ಮಾಂತರದಲ್ಲಿ ಕೂರ್ತೆನಗೆ ನಚ್ಚಿನ ಮೆಚ್ಚಿನ ಮೂಗಧೀಶ್ವರಂ ॥
ಕಾಂತನೆಅಪ್ಪನಕ್ಕೆನುತೆ ಗೋಣ್ಗುಱಿಲಿಕ್ಕಿ ಕೊಳುತ್ತುಮಿರ್ಪ ತ ।
ತ್ಕಾಂತೆಯ ಮಾತುಗೇಳಲಿನಿಸಾದುದು ಭೂಪತಿಗಾವನಾಂತದೊಳ್ ॥ ೪೮

ಅದಂ ಕೇಳ್ದು

ಈರಾತ್ರಿಯೊಳೆಂಜದೆ ಕಾಂ ।
ತಾರಕ್ಕೆಯ್ತಂದಳಾವಳೆಂಬರಸನ ಗಂ ॥
ಭೀರರವನುಱ್ಕೆ ವಸುಮತಿ ।
ನಾರಿಯದಂ ಕೇಳ್ದು ನೋಡಿದರ್ ನಾಲ್ದೆಸೆಯುಂ ॥ ೪೯

ಅಂತು ಪೂರ್ವಪರಿಚಯವಮಪ್ಪ ಗಂಭೀರಧ್ವನಿಯುಂ ವಸುಮತಿ ಕೇಳ್ದಾದೆಸೆಯಂ ನೋಡಿ

ಈರವಮೆನ್ನರಸನ ಗಂ ।
ಭೀರಧ್ವನಿಯಂತೆ ತೋಪ್ರ್ದಲ್ಲದೊಡೇಂ ಘೋ ॥
ರಾರಣ್ಯದೊಳಗೆ[1]... ।
...[1]ಧ್ವನಿಯಾದೊಡಂ ಪರೀಕ್ಷಿಪೆನೆಂದಳ್ ॥ ೫೦

1. ದಿಪ್ಪ ಕಿರೊರುದ್ಧ್ವನಿ. ಕ ; ಯಾನೆಸೆದಿರ್ಪಾರಧ್ವನಿ. ಗ.

ಪತೆಱದಿಂದೀತಾಣಂ ।
ಳೀತನುವಂ ಬಿಡುವೆನೆಂಜಲೀಕೆನಗಂತಾ ॥
[1]ಭೂತ[1]ಪ್ರೇತಂಗಳೆನು ।
ತ್ತಾ ತರುಣಿ ತದೀಯರವದ ದೆಸೆಗೈತಂದಳ್ ॥ ೫೧

ಅಂತು ಬಂದು ನೋಱ್ಪಿನಂ
ನೀರ್ಗೆಳಸಿ ತೇಂಕುವಶ್ವಂ ।
ಬೀರ್ಗಳ್ ಪರಿದಿರ್ದ ಬೀಱಲೊಳ್ ಸಿಲ್ಕಿದ ಬ ॥
ಲ್ದೀರ್ಗದೆಯ ಘಾತಿಯಿಂ ನಸು ।
ನುಗ್ಗಿದ ತನುವೆಸೆನ ನೃಪನನಳೀಕ್ಷಿಸಿದಳ್ ॥ ೫೨

ಅಂತು ಮಗುಳ್ದು ಮೂರ್ಛೆಯನೆಯ್ದಿದ ನೃಪನ ವರೂಥಮನಾಕೆಯೆ ಯ್ದಲೊಡಂ,

ತಲೆದೋಱೆ ಪ್ರಳಕವುಲರ್ಗ* ।
ಣ್ಗಳೊಳಾನೆಂದಾಶ್ರು ಪೊಣ್ಮೆ ದಟ್ಟೈಸಿದ ಕ ॥
ಲಿ ಲೆಯಾದೊಡವೇಂ ಚಿತ್ತೊ ।
ಜ್ಜ್ವಳವೋಹರಸಾತಿರೇಕವುಱಿಪಿತ್ತಾಗಳ್ ॥ ೫೩

ಅಂತು ಶಂಕಿಸುವುದುಂಟಾದೊಡಂ ಸಾತ್ವಿಕಭಾವಂ ಶಂಕಿಸದೆ ಮುಂದಿ ವರಿದು ಪತಿಯೆಂಬುದನಱಿವ್ರತ್ತಿರೆ ಬಂದು ಕೋವುಳಕರದಿಂ ಭೂವಿಭಾಶನ ಸಕಲಾವಯವಂಗಳನಂಟ ನೋಡಿ,

ಎನ್ನಂತೆ ಧನ್ಯಳಾವವ ।
ಳೆನ್ನಧಿಪತಿ ತಪ್ಪದೆನ್ನ ನೋಂಪಿಯ ಫಲಮೇ ॥
ಸನ್ನಿದನಾಯ್ತಿನುತಂಗನೆ ।
ತನ್ನೆರಸನೆನೊಲ್ದು ಕಂಡು ಹರ್ಷಮನಾಂತಳ್ ॥ ೫೪

ಅಂತು ಹರ್ಷವಾರ್ಧಿಯೊಳ್ ಮುಱುಂಗಿ ಇಲ್ಲಿರ್ದೊಡೇನಿರ್ಪುದು, ಆ ರಸನಂ ನಮ್ಮಪುರಕ್ಕೆ ಕೊಂಡು ಪೋಪಂತೆ ಮಾಡಲ್ವೇಱ್ಪುದೆಂದು

---

1. ಯಾತ. ಕ.

ಅಡಿಗೊಮ್ಮೆ ಬೆಚ್ಚುತುಂ ಕ ।
ಣ್ಣುಡಿವೆಳಗಿಂ ಮುಬ್ಬನೋಡಿಸುತ್ತುಂ ಮನದೊಳ್ ॥
ಗುಡಿಗಟ್ಟುತ್ತಿರುಳೊರ್ಬಳಿ ।
ನಡೆತಂದಳ್ ಕಾಂತೆ ರತ್ನಶೈಲಕ್ಕಾಗಳ್ ॥ ೫೫

ಶೋಕಾವೇಶಂ ಹಪಹೋ ।
ದ್ರೇಕಂ ಭಯರಸಮನೊತ್ತಲಪ್ಪುದಱಿಂ ನು ॥
ತ್ತಾ ಕಾನನನುಂ ಕಳೆದವ ।
ಳೇಕಾಕಿನಿಯಾಗಿ ರತ್ನಗಿರಿಗೆಯ್ತಂದಳ್ ॥ ೫೬

ಅಂತು ಬಂದು ರತ್ನಗಿರಿಯಂ ಪೊಕ್ಕೆಲ್ಲರಂ ಕರೆಯಿಸಿ

ಇಂದುಕಳೆಯಾಂತರಣ್ಯದೊ ।
ಳೊಂದಾಲದ ಮರದ ಬೀಜಲೊಗ್ಗಿನೊಳರಸಂ ॥
ಸ್ಯಂದನಯುತನಲ್ಲಿರ್ದಪ ।
ನೆಂದೆಲ್ಲರ್ಗುಸಿರ್ದಳಬಲೆ ಸಂಭ್ರಮದಿಂದಂ ॥ ೫೭

ಅಂತುಸಿರ್ವುದುಂ ಸಚಿವರ್ ಸಂತಸಂಬಟ್ಟು ಪುರಜನಪರಿಜನಂ ಬೆರಸು,

ಜ್ಯೋತಿರ್ಮಯಮಾಯ್ತೆನಲವ ।
ನೀತಳಮೆಂಬಂತೆ ಮಿಱುಯೆ ಕರದೀಪಮುಸಂ ॥
ಖ್ಯಾತಂ ಜನವೈತಂದ ।
ತ್ತಾ ತರುವಿನೊಳರ್ದ ನೃಪನನಿದಿರ್ಗೊಳ್ಳಲೊಲವಿಂ ॥ ೫೮

ಅಂತು ಪೊಱಮಟ್ಟು

ಶ್ರುತಿನಿಕರದಂತೆ ಶಾಖಾ ।
ನ್ವಿತದಿಂ ಸೇನಾಗ್ರದಂತೆ ನಾನಾಪತ್ರೋ ॥
ನ್ನತಿಯಿಂ ನರರಂತೆ ಪಯ ।
ಸ್ಸ್ಥಿತಿಯಿಂ ಮಿಱುದಿರ್ಪ ವಟಕುಜಕ್ಕೆಯ್ತಂದರ್ ॥ ೫೯

ಬಿಂಜದಡವಿಯೊಳಿರ್ದಾತಿ ।
ಸಂಜೆವುಗಿಲ್ದುಱುಗಲಂತೆ ರುಧಿರಾರುಣದಿಂ ॥
ರಂಜಿಸುತಿರ್ಪಿನಮೆಯ್ದಿ ।
ತ್ತಂಜಲಿಹಸ್ತಂಗಳಿಂದಮಭಿಜನವುನಿತುಂ ॥ ೬೦

ಅಂತು ಸಚಿವರ್ ಬೆರಸು ಸರ್ವಜನಂ ಬಂದು,

ಗೆದ್ದದಕಂಠಂ ನವರೋ ।
ವೋದ್ದವುತನು ಬಾಷ್ಪಲುಳಿತಲೋಚನನೆನುನಿತಂ ॥
ತರ್ಗತಚಿಂತಂ ರಂಜಿಸೆ ।
ಸದ್ಗುಣಿಯೆನಿಸರಸನಂ ನವುಸ್ಕರಿಸಿರ್ದರ್ ॥ ೬೧

ಅಂತು ನವುಸ್ಕರಿಸಿ ರಾಜಹಂಸರಾಜನಂ ಪರಿವೇಷ್ಟಿಸಿದ ತರಳತಾರಾನಿ
ಕಾಯದಂತೆ ಪುರಜನಂ ಪರಿಜನಂ ಬಂದಾಲದ ಬೀಲೊಳ್ ಸೆಕ್ಕಿದ ಗಾಲಿ
ಯಂ ತೆಗೆದರಸನಂ ರತ್ನಾಚಲಕ್ಕೆ ಕೊಂಡು ಬಂದು ಸಕಲೌಷಧಿಗಳಿಂ
ಶಸ್ತ್ರವಣಮಂ ಮಾಣಿಸಲ್ ಬಲಿಕಂ

ಅಪಜಯದ ಚಿಂತೆ ಚಿತ್ತ ।
ಕ್ಕುಪತಾಪವುನೆಸಗೆ ಪೋಗಿ ಗುರುಸನ್ನಿಧಿಯೊಳ್ ॥
ತಪಮಂ ಚರಿಸುವೆನೆಂದಾ ।
ನೃಪನೆಯ್ದಿದನೊರ್ವೆ ವಾಮದೇವರ ಗಿರಿಯಂ ॥ ೬೨

ಅಂತು ರಾಜಹಂಸಂ ತನ್ನ ಕುಲಗುರುವಪ್ಪ ವಾಮದೇವರಿರ್ಪ ಶಾಂತಾ
ಚಲಕ್ಕೆ ಬಂದು ತದಾಶ್ರಮಮಂ ಪೊಕ್ಕು

ನಸುಮುಗಿದಕ್ಷಿ ನಾಸಿಕಬೊಳೊಂದಿರೆ ನಿಶ್ಚಲಚಿತ್ತವೃತ್ತಿ ನೀ ।
ಳ್ದಸಿತಜಟಾಳಿ ನುರ್ಗಿದ ಬಹಿರ್ವಿಷಯಸ್ಪೃತಿ ನೂತ್ನಮೂರ್ತಿ ನೇ ॥
ರ್ಪೆಸೆದಿರೆ ನೈಷ್ಠಿಕವ್ರತಮನೋವಿ ಜನಾಶ್ರಯದ ಕಣ್ಣನಂಗತಾ ।
ಪಸನಪ್ರೌಲಿದ ತನ್ಮುನಿಗೆ ವಂದಿಸಿದಂ ಮಗಧಕ್ಷಿತೀಶ್ವರಂ ॥ ೬೩

ಅಂತು ವಂದಿಸಿ ಕೈಗಳಂ ಮುಗಿದು ನಿಂದಿರ್ಪುದಂ ವಾಮದೇವರ್ ಕಾರು
ಣ್ಯಾಕಟಾಕ್ಷದಿಂ ನಿರೀಕ್ಷಿಸಿ ಪರಸಿಯರಸಂ ಬಂದ ಕಾರ್ಯಮೆನೆಂದು ಬೆಸ

ಗೊಳ್ವುದುಮಾತಂ ತನಗಾದಪಜಯವನ್ಯತ್ತಾಂತಮಂ ಪೇಳ್ದಿ ತಪಕ್ಕುಪದೇಶಂಗುಡಿವೆಂಬುದುಮಾಮುನಿ ತನ್ನೊಳಿಂತೆಂದಂ:—

ಪೂಜಾಭಂಗಂ ತನಸಿಗೆ ।
ತೇಜೋಭಂಗಂ ಬುಧಗೆ ಸಂಗರಭಂಗಂ ॥
ರಾಜಗೆ ಮರಣದಿಂ ಮಿಗಿ ।
ಲೀಜನ್ಮದೊಳಿದು ಮುನಿ ನುಗುಳ್ದಿಂತೆಂದಂ:— ॥ ೬೪

ಎಲೆಯರಸ ತಪದಿಂ ಕ್ಷಪಿಸಿ ರಿಪ್ರವಂ ಸಾಧಿಸುವುಪದೇಶಮುಪದೇಶದಂ; ಅದಂ ಬಿಟ್ಟು

ಎಲ್ಲಾ ತಪದಿಂದಧಿಕಂ ।
ಬಲ್ಲಗೆ ಗೃಹಸ್ಥಮಾರ್ಗಮದಱಿಂದೆಲೆ ಭೂ ॥
ವಲ್ಲಭ ನಿನ್ನಯ ಪುರದೊಳ್ ।
ಸಲ್ಲೀಲೆಯೊಳಿರ್ದುದೆಂದು ಮುನಿಪತಿ ಪೇಳ್ದಿಂ ॥ ೬೫

ಎಂದು ಪೇಳ್ವುದುಂ ದುರ್ಮ್ಮಾನಂ ತೀರ್ದೊಡೆನಗೆ ರಿಪ್ರುಜಯೋಪಾಯಮುಮಿವ್ರದೆಂದರಸಂ ವಾಮದೇವರಂ ಬೆಸಗೊಳೆ

ಸುಮತಿ ವಸುಮತಿಯ ಗರ್ಭದ ।
ಕುಮಾರಕಂ ಸಕಲವೈರಿಯಂ ತನ್ನ ಪರಾ ॥
ಕ್ರಮದಿಂದೆ ಗೆಲ್ದ ವುತ್ತಂ ।
ಸಮಸ್ತದೇಶಕ್ಕೆ ಮುಖ್ಯನಪ್ಪನವೋಘಂ ॥ ೬೬

ಎಂದಾಗಾಮಿಕಾರ್ಯ್ಯಮುಂ ಪೇಳ್ದು ಮುನಿಪಂ ಜನಪನಂ ಬೀಳ್ಕೊಟ್ಟೊಡೆ ಆತಂ ಮುನಿವಾಕ್ಯಂ ತಪ್ಪದೆಂದು ಪ್ರೀತಿಯಿಂ ತನ್ನ ರತ್ನಾಚಲದೊಳಿರ್ದ ಜನಲೋಕವುಂ ಪುಷ್ಪಪುರಕ್ಕೆ ತಂದು ಪ್ರಹಾರವರ್ಮನುಂ ಮನ್ನಿಸಿ ನಿಜರಾಜ್ಯಕ್ಕೆ ಕಳುಪಿ ಸುಖಸಂಕಥಾವಿನೋದದಿಂದಿರಲ್, ಇತ್ತ

ಚಾದಗೆ ಕಾವ್ಮುಗಿಲ್ವನಿಯನುಜ್ಜ್ವಲವರ್ಣಚಕೋರನೊಲ್ದು ಚಂ ।
ದ್ರೋದಯವುಂ ರಥಾಂಗಮುನಿಕಂ ಪಗಲಂ ಪಿಕರಾಜೆ ಚೈತ್ರವುಂ ॥

ಸಾದಿಯನೆಯ್ದೆ ಪೂರ್ವ ತೆಱದಿಂ ನಿಜಕಾಂತೆ ಸುಖಪ್ರಸೂತೆಯು ।
ಪ್ಪಾದಿನನಂ ಕರಂ ಪಡೆದು ಪಾರ್ದಿಸಿದಂ ನೃಪರೂಪಮನ್ಮಥಂ ॥ † ೬೫

ಅಂತಿಪ್ರ್ದುಂ ವಸುಮತಿ ದೇವಿಗೆ ನವಮಾಸಂ ತುಂಬಿ

ಇಂದುವನಾಸುಧಾಂಬುನಿಧಿ ತಣ್ಗದಿರಂ ಶಶಿಲೇಖೆ ಚೈತ್ರನಂ ।
ನಂದನಲಕ್ಷ್ಮಿ ಕಾಮಶರನಂ ಲತೆ ಪೂರ್ಣಸರಂ ಮುರಾಳನಂ ॥
ಮುಂದಸವಿಾರನಂ ಮಳಯಮೇಖಲೆ ಪೆತ್ತ ಪೊಲಾಕೆ ಪೆತ್ತಳಾ ।
ನಂದನನಂ ಕುಮಾರಹರಿಚಂದನನಂ ಸುಚರಿತ್ರವೃಂದನಂ ॥ ೬೪

ಜನಮಿತ್ರಂ ಪ್ರಾವರ್ಧರಾಜಂ ಭುಜಶಿಖರಲಸತ್ಸರ್ವಭೌಮಂ ಜಗನ್ಮೋ
ಹನಸೌಮ್ಯಂ ಲೋಕಜೀವಂ ಕವಿಕುಲವಿಭವಂ ರಾಜಹಂಸಾತ್ಮಜಂ ನ ॥
ಮ್ಮನಿಬಗ್ರ್ದಿತಂ ಪ್ರಿಯಂ ಮತ್ಸಮನೆನುತೆ ಸನುಸ್ತಗ್ರಹಂ ತತ್ಕುವೂರಂ।
ಗೆ ನಿತಾಂತಂ ಪ್ರೀತಿಯಂ ಸೈತೆಸಗುವೆವೆನಲಿನ್ನಾತನಿಂ ಖ್ಯಾತನಾವೊಂ॥೬೯

ಅಂತು ಸಮಸ್ತಗ್ರಹಾನುಗ್ರಹವಿಗ್ರಹಂ ಪುಟ್ಟಿಪ್ರ್ದುಂ ಪುರೋಹಿತರ್ ಬೞಿದು

ಅರಸಾ ನಿನ್ನ ಮನೋರಥ ।
ಮುರಿಗಳ ಹೃಚ್ಛಲ್ಯಮುಭಿಜನಂಗಳಭೀಷ್ಟಂ ॥
ಗರುಜನದ ಕಾಮ್ಯಫಲವಂ ।
ಕುರಿಸಂದದಿನುದಯನಾದನಾತ್ಮತನೂಜಂ ॥ ೭೦

---

† ಈ ಕಡೆ "ಗ" ಪುಸ್ತಕದಲ್ಲಿ ಮಾತ್ರ — ಇದುನಿಖಿಲಬುಧಜನಮನೋವನಜವನ .....ಅಭಿನವದಶಕುಮಾರಚರಿತೆಯೊಳ್ ಮಗಧೇಶ್ವರಮೂಳವರಾಜ ಯುದ್ಭವಪ್ರಕರಣಂ ದ್ವಿತೀಯಾಶ್ವಾಸಂ ಸಮಾಪ್ತಂ.

॥ ತೃತೀಯಾಶ್ವಾಸಂ ॥

ಶ್ರೀಧರಣೀಮುಖತಿಲಕಂ ।
ಸೌಧಾಗ್ರದಕಳಿಕವೆನಲ್ ವಸುಮತಿಯುದರದೊ ॥
ಳಾದಯುವಾರಧಿಯುರಿನೃಪ ।
ಸೂದನಜನಿಸಿವನಭಂಗವಿಟ್ಟಲಭೃತ್ಯಂ ॥

ಮೇಲಣ ಕಂದಪದ್ಯವು ಈ ಗ್ರಂಥಕರ್ತನದಲ್ಲವೆಂದು ತೋರಿ ಬರುವುದರಿಂದಲೂ, ಸಂಸ್ಕೃತ ದಶಕುಮಾರಚರಿತೆಯಲ್ಲಿ ಇಲ್ಲಿ ಅಧ್ಯಾಯವಿಭಾಗವಿಲ್ಲದರಿಂದಲೂ, ಈಭಾಗವನ್ನು ಕೆಳಗೆ ಕೊಟ್ಟಿದೆ.

ಎಂದು ಪುರೋಹಿತರ್ ಪೇಳ್ದುದುಂ

ಗುಡಿಯುಂ ಕಟ್ಟರೊ ಭೇರಿಯುಂ ಪ್ರೊಯಿಸಿರೋ ಕಾರಾಗೃಹಾಂತಸ್ಥರಂ।
ಬಿಡಿರೋ[1] [ಮೋಕ್ಷಗಣಕಾಳಯಂ]ಕರೆಯಿರೋಬೇಪ್ಪಿಗೆ್ಬೇಪ್ಪಿಷ್ಟಮುಂ॥
ಕುಡಿರೋ ಕುಂಕುಮಗಂಧದೊಳ್ಕುಸುಗಳಂ ಪ್ರೊಯೆ್ವಾಯ್ಗೆನುತ್ತುತ್ಸವಂ।
ಬಡಿಯುತ್ತಾಕ್ಷಣವೆಯ್ದಿದಂ ನೃಪವರಂ ತತ್ಪ್ರೀತಿಕಾಗೇಹನುಂ ॥ ೭೦

ಬಾಗಿಲೊಳಿಲ್ಲರಂ ನಿಲಿಸಿ ಬಂದು ನಿಜಾನ್ವಯರತ್ನನಂ ಮುಹಾ ।
ಭೂಗನನಾತ್ಮಸಂಭವನನೊಪ್ಪಿರೆ ಕಂಡನುರಾಗದಿಂ ಸುಧಾ ॥
ಸಾಗರದೊಳ್ ಮುಟಿಯಿಂಗಿ ಪ್ರೊಸತೆಂದು ವಿಳಾಸಿನಿಯರ್ ಪಸಾಯಮುಂ ।
ಬೇಗದೊಳೀಲ್ದಿಕೊಳಿ್ವಡನರ್ಗೆ್ಗಂನಗುತೊಪ್ಪಿದನೋ ನೃಪಾಲಕಂ॥ ೭೧

ಅಂತು ಸಂತೋಷಂ ಮುಖದೊಳ್ ತುಳಿಂಕಲರಸಂ ತತ್ಕಾಲೋಚಿತ ಕರ್ಮಮುಂ ಕೂರ್ಮೆಯಿನೆಸಗಿ ಸಕಲದಾನದಿಂ ಸರ್ವರಂ ಸನ್ಮಾನಂಗೆಯ್ದು ದ್ವಾದಶದಿನದೊಳ್ ರಾಜನಾಹನನ್ತೆಂದು ನಾಮಕರಣಮುಂ ಮಾಡಲ್ ಬಟ್ಟಿಯಂ

ಎಳವೆಯೆ ದಿವಸಕ್ರಮದಿಂ ।
ಬಳಿವಂತಿರೆ ಮಾತೃಪಿತರ ಹೃದಯಾಂತರದೊಳ್ ॥
ಬಳೆಯುತ್ತಿರೆ ಸಂತೋಷಂ ।
ಬಳೆಯುತ್ತಿರ್ದಂ ನೃಪಾತ್ಮಜಂ ಚೆಲ್ವಿಸೆಯಲ್ ॥ ೭೨

ಬೆಂಜೋಲೆ ಮುಖಮುಹು ಮಾಗಾಯ್ ।
ಪೆಂಜೆಯುಮುರಳಿಲೆಯೆಸಿಲ್ವ ಕಿಸುಪುಲಿಯುಗುರ್ಗಳ್ ॥
ಗೊಂಡೆಯದುಡಿದಾರಂ ಭೂ ।
ಮಂಡಲಪತಿಯಾತ್ಮಜಂಗೆ ರಂಜಿಸುತಿರ್ಕುಂ ॥ ೭೩

॥ ಉತ್ಸಾಹವೃತ್ತ ॥

ಚೆಂದದಿಂದೆ ಚೆನ್ನ ಪ್ರೊನ್ನ ಗೆಜ್ಜೆಗಟ್ಟಿ ರಂಜಿಪೊಂ ।
ದೊಂದು ಕಾಲನಾಡಿಸೈ ಕುಮಾರ ಎಂದು ಕಾಂತೆಯರ್ ॥

1. ಮುಹೂರ್ತಿಕರ್. ಕ, ಗ.

ಮುಂದೆ ನಿಂದು ತಪ್ಪಳಕ್ಕಿಯಾಡಿಸಲ್ ವಿಲಾಸದಿಂ ।
ಮಂದಹಾಸವಣ್ಮಿ ಪೊಣ್ಮಲಾಡಿದಂ ಕುಮಾರಕಂ ॥ ೭೮

ಅಂತೊಪ್ಪುವ ಕುಮಾರನ ಬಾಲಲೀಲೆಯಿಂದರಸಂ ಸುಖಿಂಬಡೆಯುತಿಪ್ಪುದುಂ

ಪತಿಹಿತವರೆನಿಪ ಸಚಿವರ ।
ಸತಿಯರ್ ನಾಲ್ವರ್ ಮಹೋತ್ಸವಂ ಮಿಗೆ ದೈವ ॥
ಸ್ಥಿತಿಯಿಂ ಪುತ್ರರನೆರಡೆರ ।
ಡು ತಿಂಗಳಿಂ ಹಿಂಚಿ ಪಡೆದರನುನಯಮೆಸೆಯಲ್ ॥ ೭೯

ಅಂತು ನಾಲ್ವರ್ ಸಚಿವರ್ ತಂತಮ್ಮ ಪುತ್ರಗೆ ಜಾತಕರ್ಮಮುಂ ಮಾಡಿ ದ್ವಾದಶದಿನದೊಳ್ ಪ್ರಮತಿ, ಮಿತ್ರಗುಪ್ತ, ಮಂತ್ರಗುಪ್ತ, ವಿಶ್ರುತನೆಂದು ನಾಮಕರಣಮುಂ ಮಾಡಿ,

ಹಿಂದಣಪರಾಧಮದು ತ ।
ಮ್ಮಿಂದಂ ಪರಿಹರಿಸಲೆಂದು ಮಗಧೇಶಂಗಾ ॥
ನಂದದಿನಿತ್ತರ್ ತಮ್ಮಯ ।
ನಂದನರಂ ನಾಲ್ವರಂ ಮನಂ ಮಿಗೆ ಸಚಿವರ್ ॥ ೮೦

ಅಂತಿತ್ತ ಕುಮಾರರ್ವೆರಸು ಕುಸುಮಾಸ್ತ್ರಂ ಕುಸುಮಬಾಣಂಗಳಂ ಪೊರೆವಂತೆ ಪೊರೆಯುತಿರ್ಪು

ಧನಿಕಂ ಸೌಜನ್ಯಮುಂ ಯೌವನಸುಭಗಲಸನ್ಮೂರ್ತಿ ಸರ್ವಿದ್ಯೆಯುಂ ಭೋಗಿನಿತಾಂತಾರೋಗ್ಯಮುಂ ಭೂತಳಪತಿ ವಿವಿಧಾದಾರ್ಯಮುಂ ತ್ಯಾಗಿ ಸತ್ವಾ ।
ತ್ರನಿಧಾನಪ್ರೌಢಿಯುಂ ತಾಮೆಸೆವತಿಶಯದಿಂ ಪೆತ್ತವೋಲ್ ಪೆತ್ತನಾನಂ ।
ದನಿವಾಸೋಲ್ಲಾಸದಿಂ ನಂದನರನಧಿಕರಂ ರಾಜಹಂಸಹ್ರಿಕೇಶಂ ॥ ೮೧

ಅಂತಾನಂದಸಂದೋಹಂ ಸಂಸ್ಫೂರ್ಣಮಾಗಿರ್ಪಿನಮಿತ್ತಲ್ ವಾಮದೇವರ ಶಿಷ್ಯಂ ವಿದ್ಯಾನಿಧಿಯೆಂಬನೊಂದು ದಿವಸಂ,

ನಿರ್ಭೇದ್ಯಚಿತ್ತನಿಂದ್ರಹ ।
ವಿರ್ಭಾಗಪ್ರದನವೋಕ್ಷವಾಜ್ಮನಿಶಿಷ್ಯಂ ॥

ದಭೇದ್ಯಂಧನಕ್ಕೆ ಪ್ರಯೋಗು ।
ತ್ತರ್ಭಕನಂ ತಳೆದ ವೃದ್ಧಸತಿಯಂ ಕಂಡಂ ॥ ೨೪

ಎಲೆ ವೃದ್ಧೆ ಫೋರಕಾನನ ।
ದೊಳಿರ್ಬಳೀಂ ತೊಲುತಿರ್ಪೆ ನೀನಾರ್ಗೆ ಕರ ॥
ಸ್ಥಳದ ಶಿಶುವಾವನೆಂದೊಡೆ ।
ತಳವೆಳಗಾಗುತ್ತಿ ಪೇಳಿಲುದ್ಯತೆಯಾದಳ್ ॥ ೨೫

ಅದೆಂತೆಂದೊಡೆ—

ರಿಪುರಾಜವ್ರಾತನಾನಾಮಣಿಮಕುಟರುಚಿಚ್ಛಾಜಿತಾಂಘ್ರಿದ್ವಯಂ ದಿ ।
ಗ್ದಿ ವ್ಯಪಸತ್ಪಂ ಮೇರುಶೈಲೋಪಮಭುಜಶಿಖರಂ ಗೋತ್ರಭೃತ್ಸಾವ್ಯಕಲ್ಯಾ
ಣಪರಂ ಸರ್ವಾವನೀಮಂಡಲಪತಿ ಸಮರಾರಂಭಕಾವೂರಿ ಸತ್ವ ।
ಪ್ಪ ಪುರೇಶಂ ರಾಜಹಂಸಂ ಮಗಧವಿಷಯಕಾಂತಾವನೋಜೀವಿಶೇಷಂ ॥

ಆತಂಗೆಸೆವಂ ಸಚಿವಂ ।
ನೀತಿವಿವಂ ದೀರ್ಘದರ್ಶಿ ರತ್ನೋದ್ಭವನೆಂ ॥
ಖ್ಯಾತಂ ವ್ಯವಹಾರಪರ ।
ಪ್ರೀತಿಯಿನಂಭೋಧಿಪರಿಸರಕ್ಕೆ ಗತಂದಂ ॥ ೨೬

ಅಂತು ಸಮುದ್ರಮಧ್ಯದ ಸುವರ್ಣದ್ವೀಪಮನೆಯ್ದಿ ರತ್ನದತ್ತನೆಂಬ ವ್ಯವಹಾರಿಯು ಸಖ್ಯಂಮಾಡಿರ್ದುದುಮಾತಂ ರತ್ನೋದ್ಭವನ ಸೌಜನ್ಯಸನ್ಮಾ
ಗ-ಕ್ಕೆ ಸಂತಸಂಬಟ್ಟು ತನ್ನ ಮಗಳ್ ಹೇಮಪ್ರಭೆಯಂ ಕರೆಸಿ,

ಶುಭದಿನಮುಹೂರ್ತದೊಳ್ ನಿಜ ।
ವಿಭವಂ ಕೈಗಣ್ಮೆ ಸಚಿವರತ್ನೋದ್ಭವನೆಂ ॥
ಬಭಿನವಮೂರ್ತಿಗೆ ಪೇಮ ।
ಪ್ರಭೆಯಂ ಗುಣಿ ರತ್ನದತ್ತನಿತ್ತನಲಂಪಿಂ ॥ ೨೭

ಅಂತು ರತ್ನದತ್ತಂ ತನ್ನ ಮಗಳಂ ಕುಡುವುದುಮಾತನಲ್ಲಿ ಕಿಱಿದುದಿನ ವಿರ್ದುದುಂ ಹೇಮಪ್ರಭೆಯಂತರ್ವತ್ನಿಯಾಗೆ ರತ್ನೋದ್ಭವಂ ರತ್ನದತ್ತಂ ಗಿಂತೆಂದಂ:—

ಪಿರಿದು ದಿನಮಾಯ್ತು ಬಂದೆ !
ಮ್ಮರಸನ ಸಾರಣ್ಗೆ ಪೋಗವೇೞ್ವುದುವದಱಿಂ ॥
ದಿರದೆನ್ನಂ ಕಳಿಪ್ರುವುದೆಂ ।
ದುರುಮುದದಿಂ ಪೇೞ್ದಿನಲ್ತೆ ಮುನಿಕುಲತಿಲಕಾ ॥ ೪೨.

ಅಂತು ಪೇೞ್ವುದುಂ ರತ್ನದತ್ತಂ ರತ್ನೋದ್ಭವಂಗೆ ರತ್ನಖಚಿತಾಭರಣ ದಿವ್ಯವಸ್ತ್ರಮುಂ ಕೊಟ್ಟು ಪೇಮಪ್ರಭೆಯ ಗರ್ಭದರ್ಭಕಂಗೆನ್ನಂ ದಾದಿಯಾಗಿ ಕಳುಪಲಿಂತು ಮೂವರುಂ ಬಂದು ಬಹಿತ್ರಮನೇಱಿ ಬರುತಿರ್ಪನ್ನೆಗಂ ಸಮುದ್ರಮಧ್ಯದಲ್ಲಿ

ಪಡಗೊಡೆಯೆ ಪಲಗೆಯೊಂದಂ ।
ಪಿಡಿದಬಲೆಯನೆನ್ನ ಕಾಂಕ್ಷೆಯೊಳ್ ತಳ್ಕಿಸಿ ಕೊಂ ॥
ಡೆಡವಿಡದೆ ಪುಣ್ಯದಿಂದಂ ।
ತಡಿಗೆಯ್ದಿದೆನೆಯ್ದಿ ಕುಳ್ಳಿರಿರ್ಪಾಕ್ಷಣದೊಳ್ ॥ ೪೪

ಆಹೇವಮಪ್ರಭೆ ಗರ್ಭಘಾತದಿಂ ಪ್ರಸವವೇದನೆ ಮಸಂಗಿ ಮಗನಂ ಪಡೆಯಲಾಕೆಯನೊಂದು ತಮಾಲಗುಲ್ಮದೊಳಿರಿಸಿಯಾಕೂಸಿನ ಮೆಯ್ಯುಮಾಸಂ ತೊಳೆಯಿ ಬಿಸುನೀರ್ಗುಪಾಯಮುಂ ನೆನೆಯಲಿಲ್ಲಿಗೆ ಬಂದೆನೆಂದಾವೃದ್ಧೆ ಪೇೞ್ವ ಸಮಯದೊಳ್

ಕಟತಟದೊಳೊಸರ್ವ* ಮದದಿಂ ।
ವಿಟಪಿಗಳಂ ಕಿೞ್ತು ಬಿಸುಡುತುಂ ತನ್ಮದದು ॥
ತ್ಕಟದಿಂದೊಂದಿಭಮೆಯ್ತರ ।
ಲಟವಿಯೊಳಾಶಿಶುವನುೞಿದು ಪೋದಳ್ ಭಯದಿಂ ॥ ೪೫

ಅಂತಾವೃದ್ಧೆ ಹೇವಮಪ್ರಭೆಯಿರ್ದಲ್ಲಿಗೆ ಪೋಗಿಯಲ್ಲಿಂದಾಕೆಸಹಿತಂ ಬೆದಱುತೋಡಿ ಪೋದಳ್. ಇತ್ತಲಾನೆ ಅರ್ಭಕನಂ ಪಿಡಿದಡಸುವೆನೆಂದನುಮಾನಿಸುವಾಗಳ್,

ವಾರಣಮನೊಂದು ರಿಪುಕಂ ।
ಠೀರವನಾರ್ದೆಟ್ಟಿ ಪೊಯ್ದು ಕುಂಭಸ್ಥಳಮಂ ॥

ಕೂರುಗುರ್*ಳಿಂದವ್ರಂಕಿ ವಿ ।
ದಾರಿಸಲಾಶಿಶುವನುಳಿದು ಬಿಲ್ದಿತ್ತು ಗಜಂ ॥ ೪೬

ಅಂತಾಗಜಂ ಬೀಸುತುಂ ಪಿಡಿದಿದ್ ಪ್ರೋತಕನಂ ಭೀತಿಯಿಂ ಮೇಗಣ್ಗೆ
ಈಡಾಡಲಾಶಿಶುವೊಂದು ಮರನ ಕವಲ್ಗೊಂಬಿನೊಳ್ ಸಿಲ್ಕಲಲ್ಲಿ
ಪ್ರಬಿ್ಕ್ಕಿ ಪಲ್ಗಳಂ ಕಿಱಿ ।
ದಿಬ್ಬಿದಿಯಂ ತುಳಿಸಿ ಕಣ್ಣಿನರೆನುಚ್ಚಿ ಬಿಸಿಲ್ ॥
ಪಬಿ್ಕರೆ ಕಾಯುತ್ತಿರ್ದುದು ।
ಕೊಬಿ್ದದ ವೃಕ್ಷಾಗ್ರದಲ್ಲಿ ಮುಕ್ಕಟರಾಜಂ ॥ ೪೭

ಅಂತಾಕೋಡಗಂ ಪಣ್ಣಿಂದೆತ್ತು ತಂತಾಶಿಶುವಂ ತೆಗೆದು ವಾಸಿಸಿ ನೋಡಿ ಪಣ್ಣಿಲ್ಲದುದನಱಿದಲ್ಲಿಯೆ ಇರಿಸಿ ಕಾಪೇಯಗತಿಯಿಂದತ್ತಲ್ ಪೋದುದು. ಇತ್ತಲ್ ಮುನಿಶಿಷ್ಯಂ ನಿಂದಿವೆಲ್ಲವನಲ್ಲಿಯೆ ಗುಲ್ಮದ ಮಱೆಯೊಳ್ ನೋಡುತಿರ್ದ್ ಸಿಂಹಂ ಪೋದುದನಱಿತು ಮರದ ಮೇಲಣ ಶಿಶುವಂ ತೆಗೆದು ವಾವುದೇನರ ಸವಿಾಪಕ್ಕೆ ತರಲವರಿದೆಲ್ಲಿಯು ಶಿಶುವೆಂಬುದುಂ ತತ್ಪ್ರಪಂಚವುಂ ಪೇಳಲಾವುನಿಯೊಬ್ಬಾಲಕನಂ ನೀಂ ನನ್ಮಕ್ಕರಸಂಗೆ ಕೊಟ್ಟು ಬಾಯೆಂಬುದುಮಾತಂ ಪೂರ್ವವಿಶೇಷನುಂ ಪೇಳ್ದಿರಸಂಗೆ ಕುಮಾರನಂ ಕೊಟ್ಟೊಡಾತಂ ಪ್ರೀತಿನಟ್ಟು ಪುಷ್ಪೋದ್ಧವನೆಂದು ಪೆಸರನಿಟ್ಟು ವಸುಮತೀದೇವಿಯ ಕೆಯ್ಯೊಳ್ ಕುತ್ತೆ,

ಭೂದೇವತೆ ಷಡ್ಕೃತುಗಳ ।
ನಾದರದಿಂ ಸಲಸುವಂತೆ ವಸುಮತಿ ಚಿತ್ತಾ ॥
ಮೋದದಿನಱುನರ್ ಕುವರರ ।
ನೋದಿಸುತುಂ ಸಲಸ್ರತಿವರ್ಳತಿಕಾತುಕದಿಂ ॥

ಅಂತಿರ್ದ್ ವಸುಮತೀದೇವಿಯೊಂದು ದಿವಸಂ,

ಸರಸಿಜಲೋಚನಂ ಶಶಿಮುಖಂ ಹರಿಮಧ್ಯವಿಭೇಂದ್ರಯಾನನುಂ ।
ದ್ದುರಕುಚಕೋಕಮಾತ್ತತಿನಿರದ್ಯುತಿವೇಣಿ ವದಾಳಿಕುಂತಳಂ ॥
ಸುರುಚಿರಚಂಪಕಾಭತನುವೊಂದೆಡೆಯೊಳ್ ನೆಲಸಿರ್ದುದಿಂತಿದ ।
ಚ್ಚರಿಯೆನಲೆಯ್ದಿದಳ್ ವಸುಮತೀವಧು ಕಾಂತಸಭಾಂತರಾಳಮುಂ ॥ ೪೮

ಅದಲ್ಲದೆಯುಂ

ನಳನಳಿಪ ಕಲ್ಪಲತೆ ಸ ।
ತ್ಫಳಿವುಂ ತಳೆದಿರ್ದ ತೆಱದಿನೊಪ್ಪುವ ನನಕೋ ॥
ಮುಳಬಾಳಕನೊರ್ಬನತಿ ।
ವಿಳಾಸದಿಂದೆತ್ತಿಕೊಂಡು ನಗುತೆಯ್ತಂದಳ್ ॥ ೮೦

ಆಂತಾಕಾಂತೆ ಬಂದು ಕಾಂತನಂಕಮಲನಂಕರಸಿರ್ದ್ದುಮುರಸನೀಪ್ಪೊಸ
ಕುಮಾರಕನೆತ್ತಣವನೆಂದು ಬೆಸಗೊಳ್ವುದುಂ,

ನಸುನಗೆ ಮಿನುಂಗೆ ಮೊಗದೊಳ್ ।
ಪಸರಿಸೆ ನಿಜದಂತಕಾಂತಿ ನೃಪವರಸಭೆಯೊಳ್ ॥
ವಸುಧಾಧಿಪಂಗೆ ನಲವಿಂ ।
ದುಸಿರ್ದ್ದಳ್ ವಸುಮತಿ ಕುಮಾರಲಾಭವ ಹದನಂ ॥ ೮೧

ಅದೆಂತೆನೆ—

ತರಳತರತಾರಹಾರದ ।
ಕಿರಣಂ ಧವಳಿಸೆ ದಿಗಂತಮುಂ ಯೌವನನಿ ॥
ಭರದೆಸೆವ ಕಾಂತೆಯೆನಗಿಂ ।
ದಿರುಳೊಲವಿಂ ಕನಸಿನಿಂದೆ ತೋಱಿನಳೊರ್ವಳ್ ॥ ೮೨

ಅವಲ್ಲದೆಯುಂ ಪಾರಿಜಾತಪ್ರಸೂನಾವತಂಸೆಯುಂ, ಪಳಿಕುವೆಸೆದ ಪಾ
ದುಕೆಯುಂ, ನಿಸ್ತುಲಸ್ಥೂಲಮುಕ್ತಾಹಾರೆಯುಂ, ಕುಂಡಲಮಂಡಿತಗಂಡಸ್ಥ
ಳಿಯುಂ, ಚಾರುಚಂದನಚರ್ಚಿತೆಯುಂ, ನನ್ಯದಿವ್ಯಶರೀರೆಯುಮೆನಿಪ ವ
ನಿತೆ ಕನಸಿನೊಳ್ ಬರಲಾನದಂ ನೆನಸೆಂದು ಬಗೆದು ನೀನಾವಳಿಲ್ಲಿಗೇಕಾರ
ಣಂ ಬಂದೆಯೆಂದೊಡೆ—

ದೇವಿಯರೇ ಚಿತ್ತವಿಸಿಂ ।
ಭಾವಿಸೆ ಗಂಧರ್ವಲೋಕಸಂಭವೆಯಾ ರ ॥
ತ್ನಾವಳಿಯೆಂಬೆನ್ನ ಪೆಸರ್ ।
ಭಾವಿಸಲಾಂ ಬಂದ ಕಾರ್ಯವುಂ ಬಿನ್ನವಿಪೆಂ ॥ ೮೩

ಎಂದಿಂತೆಂದಳ್ —

ನಿನ್ನ ಧಿನಾಥನ ಸಚಿವಂ ।
ಸನ್ನುತನುತಿ ಕಾಮಪಾಲನೆಂಬಾತಂ ಕೇ ॥
ಳಿನ್ನಯ ಕೆಯ್ಯೊಳ್ ಕೊಟ್ಟಂ ।
ಚಿನ್ನೆಸವೀಸುತನನೆಂದು ತೋಱಿದಳಿವನಂ ॥ ೯೪

ಅಂತು ತೋಱಿ ಮತ್ತಮಿಂತೆಂದಳ್ —

ಆಕಾಮಪಾಲನೆಮ್ಮೊಡ ।
ನೀಕುವರನನುಯ್ದು ರಾಜಹಂಸನ ನಿಜಕಾಂ ॥
ತಾಕರದೊಳೀಂಪ್ರದೆಂದಂ ।
ಸಾಕಿವನಂ ದೇವಿ ಕೊಳ್ಳಿನುತ್ತುಂ ಕೊಟ್ಟಳ್ ॥ ೯೫

ಅಂತು ಕುಮಾರನನೆನ್ನ ಮಗ್ಗುಲೊಳಿರಿಸಿ ಪೋದಳ್. ಅನ್ನೆಗಂ

ಆರೊಡನೆ ಮಾತನಾಡಿದೆ ।
ನಾರಿಲ್ಲಿಗೆ ಬಂದರೆಂದು ನಿದ್ರೆಯಿನೆಚ್ಚಿ ॥
ತ್ತಾರಂ ಕಾಣದೆ ಮಗ್ಗುಲೊ ।
ಳೋರಂತೆಸೆದಿರ್ದ ನನ್ಯಸುತನಂ ಕಂಡೆಂ ॥ ೯೬

ಎಂದರಸಂಗರಸಿ ಪೇಳ್ದುದುಮರಸಂ ಸಂತುಷ್ಟನಾಗಿ ಕಾಮಪಾಲನೇ ನಾದನೋ ಎಂದು ಚಿಂತಿಸಿ ಕುಮಾರಂಗರ್ಥಪಾಲನೆಂದು ಪೆಸರಿಟ್ಟು ಸಪ್ತ ಸ್ವರಂಗಳಂ ಪರಿಪಾಲಿಸುವ ಭರತಜ್ಞನಂತೆ ಧರಣೀಶಂ ಪರಿತೋಷದಿಂದಿರಲ್ ಕಿಱಿದು ದಿನದಿಂ ಮೇಲೆ,

ಮತ್ತೊಂದು ದಿನಂ ಮುನಿಶಿ ।
ಷ್ಯೋತ್ತಮನರ್ಚನೆಗೆ ಪತ್ರಪ್ರಷ್ಪಮನುಯ್ಯಲ್ ॥
ಮೊತ್ತದರಣ್ಯಕ್ಕೆಯ್ದಂ ।
ದೆತ್ತಿಸಿ ಕೊಂಡಿರ್ದದೊಂದು ಶಿಶುವಂ ಕಂಡಂ ॥ ೯೭

ಅಂತೊರ್ಬಳೆತ್ತಿ ಕೊಂಡಿರ್ದ ಶಿಶುವಂ ವಾಮದೇವರ ಶಿಷ್ಯಂ ಕಂಡು

ಎಲ್ಲಿಯುನೀಕುಮಾರಕ ।
ನೆಲ್ಲಿಯುನಳ್ ನೀನರಣ್ಯಮಧ್ಯದೊಳಪ್ಪೆ ॥
ಕೆಲ್ಲಿಗೆ ಪ್ರೋದಪೆಯೆಂದು ಮು ।
ಹೋಲ್ಲಾಸದೊಳೆನಗೆ ಪೇಳ್ವುದೆಂದನಲಂಪಿಂ ॥ ೯೪

ಅಂತು ಕೇಳ್ವುದುಮವಳಂತೆಂದಳ್:—

ಮಗಧಧರಣೀಶ್ವರಂಗಾ ।
ವಗಮಾದಂ ಪ್ರೀಮದತ್ತನೆನಿಸುವ ಸಚಿವಂ ॥
ಜಗಮುಱಿಯೆ ತೀರ್ಥಯಾತ್ರೆಯ ।
ಬಗೆಯಿಂದೊಂದಗ್ರಹಾರಮುಂ ಸಾರ್ದಿರ್ದಂ ॥ ೯೫

ಅಂತಾಪ್ರೀಮದತ್ತಂ ತೀರ್ಥಯಾತ್ರೆಗೆ ಪ್ರೋಗುತ್ತುಂ ಧರ್ಮಪುರಮೆಂಬ ಅಗ್ರಹಾರಮುಂ ಸಾರ್ದು ಯಜ್ಞಶರ್ಮನೆಂಬ ದ್ವಿಜೋತ್ತಮನ ಸಖ್ಯಮಾಡಿಕೊಳಲಾತಂ ಕೆಲವು ದಿನಸಮಿಂ ಮೇಲೆ ತನ್ನಮಗಳ್ ಕಾಳಯೆಂಬಳಂ ಕುಡಲವಳ್ಗೆ ಪ್ರತಿಪ್ರೋತ್ಪತ್ತಿಯಿಲ್ಲದಿರಲವಳಂ ಕಿಱಿಯಳಪ್ಪ ಕಾಳಿಂದಿಯುಂ ಮಗುಳ್ದು ಪ್ರೀಮದತ್ತಂಗೆ ವಿವಾಹಂಮಾಡಲವಳ್ಗೆ ಸುಕೃತಫಲದಿಂ ಸುತನಪ್ಪದುಂ ಬಳಿಕ್ಕೆ ಪ್ರೀಮದತ್ತಂ ಯಜ್ಞಶರ್ಮನಿಂ ಕಳುಹಿಸಿಕೊಂಡು ಪೂರ್ವಸಂಕಲ್ಪಿತಮಪ್ಪ ತೀರ್ಥಕ್ಕೆ ಕಾಳಿ ಕಾಳಿಂದಿನಿ ತತ್ಕುಮಾರನಾತಂಗೆ ದಾದಿಯಪ್ಪ ನಾನಿಂತೆಲ್ಲರುಂ ಸರಯೂನದಿಗೆ ಪೋಗಿ ಸ್ನಾನಕ್ಕನುಗ್ಗೈವ ಸಮಯದೊಳ್,

ತನಗೆ ತನೂಜಭರಿಲ್ಲಂ ।
ಬನುಶಯದಿಂ ಮಗನನೆತ್ತಿ ಕೊಂಡಿರ್ದೆನ್ನಂ ॥
ಮುನಿದು ನದಿಯೊಳಗೆ ನೂಂಕಿದ ।
ಳನವರತಂ ಪರರ ಲೇಸನಾಂತಪರೊಳರೇ ॥ ೯೬

ಅಂತವಳ್ ಮಗನನೆನ್ನಂ ನದಿಯೊಳ್ ನೂಂಕಲಾನುಮಿವನುಂ ಮಡ್ಡವಿನೊಳ್ ಬಿಟೆಂದ್ದಾನೀಶಿಶುವಂ ಬಿಡದಿರ್ಪಾಅವಸ್ಥೆಯೊಳಿರ್ಂದು ಬೀರ್ಪಱಿದು ಬಿಬ್ಬಿ ವಜ್ಜಿಯ ಮರಂ ತೆಪ್ಪದಂತೆ ಬರ್ಪುದುಂ ಕಂಡದಂ ಪಿಡಿವನ್ನೆಗಂ

ಪೋಪಿಲೊಳಗಿದ್ದ ದುಷ್ಟ ।
ವ್ಯಾಳಂ ಮುಳಿದೆನ್ನ ಕೈಮನೊಡಲ್ ಮುತ್ತೀ ॥
ಬಾಳಕನೆ ಪುಣ್ಯದಿಂ ತ ।
ತ್ಕೊಳವನಾಂ ಸಾರ್ದೆನಿನ್ನು ಸೈರಿಸಲಾರೆಂ ॥ ೧೦೧

ಇನಿತು ಪೊಬ್ಬುಮುದಕದೊಳಿರ್ದ ಕಾರಣಂ ವಿಷವೇಱದಿರ್ದುದು. ಈಗಳಸು ನೆತ್ತಿಗೇಱುವ ಪ್ರದೀಕುಮಾರನಂ ರಕ್ಷಿಸುವುದೆಂದು ಮುನಿಕುಮಾರನ ಕಯ್ಯೊಳ್ ಕುಡಲಾತನೀಯಿಸಿಕೊಂಡು ನಿನಗೆ ವಿಷಾಪಹಾರವುಪ್ಪಿಷಧಿಯುಂ ತಂದೀವೆನೆಂದಾತಂ ಪೋಗಲ್ ವಿಷಮೂರ್ಛೆಯಿಂ ಸಸುವರ್ತಿನಿಳಯುಮನೆಯ್ದಲಾಮುನಿಶಿಷ್ಯಂ ಕುಮಾರನಂ ತಂದು ವಾಮದೇವಗೆ ತೋಱಿ ತದ್ವೃತ್ತಾಂತಮುಂ ಪೇಱೊಡವರೀತನಂ ಭೂತಳೇಶ್ವರಂಗೆ ಕೊಟ್ಟು ಬಾಯೆಂದು ಕಳುಪಿದೊಡಾತಂ ರಾಜಹಂಸಂಗೆ ಕೊಟ್ಟು ಕುಮಾರಾಗಮ ಸಂಬಂಧಮುಂ ಪೆಱೊಡರಸಂ ಪರಿತೋಷಚಿತ್ತನಾಗಿ ಈಕುಮಾರಂ ಪ್ರೀವದತ್ತನ ಮಗನಪ್ಪುದಱಿಂ ಸೋಮದತ್ತನೆಂದು ಪೆಸರನಿಟ್ಟು ಅಷ್ಟದಿಕ್ಪಾಲಕರಿಂ ಪರಿವೇಷ್ಟಿಸಿರ್ದ ಭೂಮಿಯಂತೆ ಭೂಮೀಶ್ವರಂ ಸುಖದೊಳಿರ್ದನೊಂದು ದಿನಂ

ಮೆಟ್ಟಿದ ಕೆರ್ದು ಪೆಬರ್ದಿದಿರ ಬಿಲ್ ಸುಲಿಸಲ್ ಕುಣಿವಿಸಿ ಕಾಗಿನೊ ।
ಳ್ವಟ್ಟಿಯ ಕುಪ್ಪಸಂ ತಲೆಯ ಸುತ್ತಿನ ನೇಣ್ ಪೆಱಗೆಯ್ದಿ ಬರ್ದ ನಾಯ್ ॥
ಕಟ್ಟಿದ ಕಲ್ಲಿ ಕೆಂಗಱಿಯ ಕೋಲ್ ಬೆರಸೆಯ್ದಿದನೊರ್ವ ಬೇಂಟೆಯೊಳ್ ।
ದಿಟ್ಟಿಗೆ ಚೆಲ್ವನಾಗಿ ನೃಪನೋಲಗಮುಂ ಮೃಗಯಾನಿವೇದಕಂ ॥ ೧೦೨

ಅಂತೊರ್ವ ಬೇಂಟೆಗಾಱುಂ ಬಂದು ರಾಜಹಂಸಂಗೆ ಪೊಡೆಮಟ್ಟು ಇಂತೆಂದಂ:—

ವ್ಯಾಧನಿವನೆನ್ನ ದಿರ್ ಭುವ ।
ನಾಧಿಪ ಮೃಗಸಮಿತಿ ಪೆಚ್ಚಿ ಖಡ್ಗಾಶ್ರಯಮುಮಂ ॥
ಬಾಧಿಸುತಿರ್ಪ್ಪುದತಿನಿ ।
ರ್ಬಾಧೆಯೆನಲ್ ಮಾಬ್ಪುದಲ್ತೆ ಬೇಂಟೆಗೆ ಕಾಲಂ ॥ ೧೦೩

ಪಳ್ಳದ ನೀರ್ ಪರಿಗುಂದಿದು ।
ದೆಲ್ಲಂ ಬೆಳಸುಡುಗಿದತ್ತು ದಾವಾಗ್ನಿಯ ಬ ॥
ಲ್ಪಲ್ಲಲ್ಲಿ ತೋಱುದುದು ಭೂ ।
ವಲ್ಲಭ ನಡೆ ಬೇಂಟೆಯಾಡಲಿಂತಿದು ಸಮಯಂ ॥ ೧೦೪

ಗಿರಿಗಳ ಪಕ್ಕವಂ ಕಡಿದು ಗೋತ್ರವಿರೋಧಿಯೆನಿಪ್ಪ ನಾವುವುಂ ।
ಧರಿಸಿದ ಬೇವವಲ್ಲಭನ ಪತ್ತನಕೀಗಳೆ ದಾಱುಯಿಟ್ಟು ಸು ॥
ಟ್ಟುರಿಪ್ರವೆನೆಂದು ಪರ್ವತವರಂ ಕರದೀಪಸಹಸ್ರಸಂಖ್ಯೆಯಿಂ ।
ದಿರುಳೆಡೆಗಾಳಗಕ್ಕೆ ನಡೆವಂತೆಸ್ರ್ದಿರ್ದುದು ದಾವಪಾವಕಂ ॥ ೧೦೫

ಎಂದು ಬಿನ್ನವಿಸಿದ ಬೇಂಟೆಕಾಱನನರಸಂ ಮನ್ನಿಸಿ ಕ್ರೂರಮೃಗಂಗಳ ಬಾಧೆಯುಂ ಪರಿಹರಿಸಿಗೊಡೆ ದೋಷಮೇನುಂ ಒಪ್ಪರ್ದಿಲ್ಲಿಂದು ಭಾವಿಸಿ ಯಾಗಳ್ ಪ್ರಿಯನಟ್ಟಿ ಕಾಸ್ರಗಾಡ ಬೇಡವನೆಯಂ ಕರಸೆ,

ಸಿಂಗದ ಕೇಸರಂ ಪ್ರಲಯಯುಗುರ್ ಚಮರೀಮೃಗವಾಳಜಂ ಮಟೇ ।
ಭಂಗಳೆ ಮುತ್ತು ಪೀಲಿಪ್ರೋಜೆ ಪೂತಿಯ ಬೆಕ್ಕುಳುವಂದಿನುಳ್ ವರಾ ॥
ಹಂಗಳ ದಾಡೆ ಕತ್ತುರಿಯ [1]ಹುಲ್ಲಿ[1]ಗಳೊರ್ವೊರ್ದಲಾದ ವನ್ಯಸಾ ।
ರಂಗಳ ಭಾರದಿಂ ನಡೆದು ಬಂದನದೊರ್ವ ಪ್ರಳಿಂದನಾಯಕಂ ॥ ೧೦೬

ಅಂತು ಬಂದು ಕಂಡ ಪ್ರಳಿಂದನಾಯಕನಂ ಮನ್ನಿಸುವುದುನುವಂ ತಾಂ ನಾಸದೊಳಿರ್ದ ಜಾಯಿಲನಂ ತೋಱಿಸಿ,

ರಾಹುವಿನಂತೆ ಋಕ್ಷಪತಿವೈರಿ ನಿಶೀಥಿನಿಯಂತೆ ಪ್ರಂಡರೀ ।
ಕಾಹಿತಕಾರಿ ದುಷ್ಟಶಿಶುಪಾಲಕನಂತಿರೆ ಕೃಷ್ಣಸಾರತೇ ॥
ಜೋಪರಕಾರಣಂ ಕುರುಕುಲಾಧಿಪನಂತೆ ವೃಕೋದರಾರಿ ಕೇಳ್ ।
ಸಾಹಸಮಲ್ಲನೆನ್ನ ದಟಿನಂಕದ ಜಾಯಿಲನುರ್ವರಾಧಿಪಾ ॥ ೧೦೭

ಎಂದು ಬಿನ್ನವಿಸಿದನಂ ಮನ್ನಿಸೆಯನಂತರಂ

ತೊಗರಂ ಪಿಂಡುಗಲಂಕೆ ಸಾಳುವನ ಸಂಗಂ ಜಾಯಿಲಂ ಸೂಜಿವಾ ।
ಲಿಗನುದ್ದಂಡನೊಱಂಟನಂಟಿಬಲಿಲಂ ಜೂಗಂ ಜವಂ ರಕ್ಕಸಂ ॥

---

1. ಹುಂತಿ. ಕ॥

ಪೊಗೆಗಣ್ಣಂ ಕಲಿ ಬಂದಿಕಾಱನಟಿಂ ವೇಗಾಯ್ದುನೆಂದೆಂಬ ಕು ।
ನ್ನಿಗಳಂ ಪಾಸದೊಳಿಟ್ಟು ಕಾಡೊಡೆಯರಂದೆಯ್ದಿತ್ತು ಕಾಂತಾರಮುಂ ॥೧೦೪

ಹಂದಿಗೆ ಸಾಳುವಂ ಮರೆಗೆ ಜ ಯಿಲನೇಣಕುಲಕ್ಕೆ ಚಂಚುವಾ ।
ಲಂ ದಣಿದಿರ್ದ ಕೊಂಡಗುಱುಗೀತೊಗರಂ ರುರುಸಂಕುಳಕ್ಕೆ ಜಾ ॥
ಗಂ ದಿಟವುಲ್ತ ಪೂರಿಯಲೆ ಭೂಪತಿ ನೋಡೆ ಸ್ವಪೆ ತೋರ್ಪ್ ನಿಂತು ನೋ ।
ಡೆಂದತಿಭೂಷೆಯಂ ನುತಿಯುತಿರ್ದನೊರ್ಬ ಪ್ರಳಿಂದನಾಯಕಂ ॥ ೧೦೫

ಅಂತು ಪಸಾಯಂಗೊಟ್ಟು ನತೆಸನ್ನೆಗಂ

ಇದೆ ಮರೆ ಹಿಕ್ಕೆಯಿಕ್ಕಿದೆಡೆ ಪುಲ್ಲೆಯ ಬಾಯ ಕಜುಂಕೆ ಸೊಸಿನ ।
ತ್ತಿದೆ ಕೆಸಱೊಳ್ ಪ್ರಾರಱ್ದು ನತೆಗೊಂಡುದು ಹಂದಿಯ ಹಿಂಡು ಮುಂದೆ ನೋ
ಡದೆ ಹೊಲಸಟ್ಟು ನಾತ್ರಿಪುದು ಪೆರ್ಬುಲಿಯಿರ್ದ ಪ್ರದಕ್ಕೆನುತ್ತೆ ಪೆ ।
ರ್ಚಿದ್ದ ವನದಲ್ಲಿ ಪಜ್ಜೆಗಲ್ಯಿಂ ನತೆಗೊಂಡುದು ಪಿಲ್ಲಸಂಕುಲಂ ॥ ೧೦೬

ಆಸಮುದಾಯದೊಳ್

ಮುರಿದ ಕೊರಲ್ ನಿನಿವರ್ ಕೆವಿ ಕೆತ್ತುವ ಮೆಯ್ ಕಡೆವಾಯ ಪುಲ್ಲೆಸಳ್ ।
ತರಳವಿಲೋಚನಂ ಸೊಪ್ಪಡನಾಲಿಸಿ ಬೆಚ್ಚಿ ಬಿಗುರ್ತು ಬೇಗದಿಂ ॥
ಸರಳಿಸಿ ಪುತ್ತ್ ನಿಂದುಪೆ ಗಂ ನತೆನೋಳ್ಪ್ ತಿಭೀತಿ ತಮ್ಮೊಳ ।
ಚ್ಚರಿವೆರ್ದಿರ್ದ ಪುಲ್ಲೆಗಳನೀಕ್ಷಿಸಿವಂ ಭುವನಾಧಿನಾಯಕಂ ॥ ೧೦೭

ಅವಲ್ಲದೆಯುಂ

ಚರಿಸದೆ ಮೇಸ್ವುಗೊಳ್ಳದಿನಿಸಿಕ್ಕೆಯನೊಲ್ಲದೆ ನಿದ್ದೆಯಿಲ್ಲದೊ ।
ಳ್ಮಾರನ ನೆಲಿಲ್ಗೆ ಬಾರದೆ ಮೃಗಾಳಿಗೆ ಸೇರದೆ ನೀರ್ಗೆ ಪೋರದು ।
ದ್ದುರಮದನಾಗ್ನಿಗಳ್ಕು ತನುತಾಪದ ಬೇಗೆಗೆ ಬಳ್ಕು ಪಲ್ಲಭಾ ।
ವಿರಹದೊಳಿರ್ದೊಂದು ಹರಿಣಂ ಬರೆದೊತ್ತಿದ ಚಿತ್ರವೆಂಬಿನಂ ॥ ೧೦೮

ಪುಲ್ಲೆಯ ಹಿಂಡನೊಂದು ಪುಲಿಗೆಂಟಿಱೊಳೊಯ್ಯನೆ ಕಂಡು ಪಜ್ಜೆಯಂ।
ಮೆಲ್ಲನೆ ಮೆಟ್ಟಿ ಪುಲ್ಲೊಳಿ ಹುಮುಂಗಿ ಪಮುಂಗಿಸುದಕ್ಕೆ ಲಂಘಿಸಲ್ ।
ತಲ್ಲಳದಿಂ ಕುನುಂಗಿ ನೆಸೆ ನೀಂಟಿಸಿ ನೀಳ್ದ ಕೊರಲ್ಗೆ ಪಾಯ್ದು ತ ।
ಳ್ಪಿಲ್ಲದೆ ನೆತ್ತರಂ ಪದೆವ ಪೀರ್ದೆ ಚೆದಿಕ್ಕಿದುದಿಕ್ಕೆದಾಣದೊಳ್ ॥ ೧೦೯

ಅದಂ ಕಂಡು

ಮಿಳಿಗಳನೊತ್ತು ಗೆಳೆ ಮುರನನೇಱಿ ಕೆಲಂಬಿಡದಿತ್ತ ಜಾಱು ಬಂ।
ದೊಳಪ್ಪಗದಿರ್ ಬಿಡೋ ಪಿಡಿದ ನಾಯ್ಗಳನಟ್ಟಿಱಿಯಿತ್ತಲಿತ್ತ ಪೋ ॥
ಯ್ತೆಲೆಲೆ ತೋಪಕಟ್ಟಿ ಕೆಡೆಪ್ಪೋ ಬಲೆಗಾನಿರೆ ಸೋಡೆನಿಪ್ಪ ತ।
ತ್ಕಳಕಳವುಣ್ಮೆ ಬೇಡವನೆ ಬೊಬ್ಬಿಱಿದಾಡಿದುದಂದು ಬೇಂಟೆಯಂ ॥ ೧೧೪

ಪುಲಿವಲೆ ಕೊಂಬು ಕಣ್ಣಿ ಮಿಡಿಗಣ್ಣಿ ತೊವಲ್ವಲೆ ಸಿಕ್ಕ್ದಕಕ್ಕ ಪೆ।
ಱೊಲವಲೆ ಸಂದ ಹಾಸುವಲೆ ನೀರ್ವಲೆ ಮೇಲ್ವಲೆ ಸೊಕ್ಕುಮದ್ದು ಪೆ॥
ಬ್ಗಲೆ ಬಿಡುವಾರುಗೋಡುವಲೆಯೆಂಬಿನಿತಂ ಪೊಱಿಗಟ್ಟಿ ಕಾನನ।
ಸ್ಥಲದೊಳಗಲ್ದು ತೋಹುವಿಡಿದೊಡ್ಡಿದರೆಯ್ದೆ ಪ್ರಳಯಾದನಾಯಕರ್ ॥ ೧೧೫

ಆಸಮಯದೊಳ್

ಮುಸ್ತಾ ಕಂಗಮನೆತ್ತಿ ಬೇಗೆರ್ಗಳನಿತಂ ತಿಂದುಗ್ರದಾಹಂ ಮಿಗಲ್ ।
ವ್ಯಸ್ತಾ ಂಬುಪ್ಲವವಾದ ಪೆಗೆ೯ಱಿಗಳೊಳ್ ಪೊಯ್ದುಲ್ಲಿ ವ ಯಂ ನಾಯ್ಗಳಂ ॥
ಹಸ್ತಾ ಲಂಬಿತವಾದುವಂ ಬಿಡುಬಿಡೆಂದಾರ್ದರ್ದ ಬೇಡರ್ಕಳಂ ।
ಹಸ್ತಿವ್ಯಾಜದೊಳೊಕ್ಕಲಿಕ್ಕಿ ಕೆಡಪಿತ್ತಂದೊಂದೆ ನಿಂಬೆಕ್ಕಲಂ ॥ ೧೧೬

ಅದಂ ಕಂಡು,

ಜವದಿಂ ಬೆಂಗೊಟ್ಟು ಪ್ರೋಪೆಕ್ಕಲನನಳವಿಯೊಳ್ ಕಂಡು ತದ್ರಾಜಹಂಸಂ।
ಕವಲಃಬಿಂದೆಚ್ಚೊಡಂತುರ್ಬಿನ ನಡುಪಣೆಯೊಳ್ ಮೂಡೆ ನಾಲ್ದಾಡೆಯಾ
ದಂ ॥ ತೆವ್ಪೊಲಾಬೇಡರ್ಕಳಂ ಸೀಟ್ಪಿಗಿಬಗಿಯೆ ನೃಪಂ ಕೊಂದಪೆಂ
ಪಂದಿಯಲ್ತೆಂ । ದು ವನಂ ಘೋಳೆಂಬಿನಂ ಬೊಬ್ಬಿಱಿದು ಕೆಡಪ್ರತಿರ್ದತ್ತು
ಭಿಲ್ಲಪ್ರತಾನಂ ॥ ೧೧೭

ಅದಲ್ಲದೆಯುಂ

ಮಿಳಯಿಂದಂ ಪೊಱಿವಟ್ಟು ಮೆಯ್ಯುಱಿದು ಕೆಂಗಣ್ಣಿಕ್ಕಿ ಕಂಡಾಳ್ಗಳಂ।
ನೆಲನಂ ಗರ್ಜಿಸಿ ಪೊಯ್ದು ಬಾಯ್ದೆಱೆದು ಪ್ರರ್ಬಿಕ್ಕುತ್ತೆ ವಾಲಾಗ್ರಮುಂ ॥
ಮುಳಿಸಿಂ ದಾಡೆಗಳಿಂದೆ ಕಚ್ಚಿ ಸೆಳೆಯುತ್ತು ತ್ಕೋಪದಿಂ ಪಾಯ್ವ ಪೆ ।
ಱ್ಗುರಿಯಂ ದಂಡೆಯೊಳಾಂತು ನೂಂಕಿ ತಿವಿದಂ ವಿಕ್ರಾಂತಕಂ ವೀರನಂ ॥

ಮತ್ತಂ

ಕತ್ತಲಿಸಿದರ್ ಪೇರಡವಿಯೊಳ್ ಸಲೆ ಕೋಲ್ಮಿಗಜೆಳ್ಮಿಗಂಗಳಂ
ಮಿತ್ತುವಿಸಂದದಿಂ ತವಿಸಿ ಪನ್ನಗಲೋಕದ ಜೀವರಾಶಿಗಳ್ ॥
ಪೊತ್ತುವ ಮಾಜ್ಕೆಯಿಂ ತಿದಿಗಳಿಂ ಪೊಗೆದಪ್ಪರೊ ಭಿಲ್ಲರೆಂಬಿನಂ ।
ಪುತ್ತನಗುಬ್ದ ಪೆರ್ಗರಡಿಗಳ್ ಪೊಗಮಿಟ್ಟಿಸೆಗುಂ ವನಾಂತದೊಳ್ ॥ ೧೦೯

ಅಂತನೇಕವಿಧದಿಂದಿಪರ್ ವ್ಯಗಂಗಳನರಸಂ ಬೇಂಟೆಯಾಡೆ

ಹರಿ ಕರಿ ಹಂದಿ ಬೆಳ್ಕಿರಲೆ ಪೆರ್ಬುಲಿ ಹುಲ್ಲೆ ಲುಲಾಯಸಂಕುಳಂ ।
ಮುರಿ ವೃಕರಾಜಿ ಗಂಡಭೃಗ ಶಾಲ್ಮಲಿಸಂತತಿ ಕೊಂಕ ಪೆರ್ಮೊಲಂ ॥
ಕರಡಿ ರುರುಪ್ರತಾನಮುಡು ಬೆಳ್ಳಲಿ ಪೆರ್ದರಿಯಂಗಿ ಪೆರ್ಣಿಲ್ ।
ಮುರದಣಿಲೆಂಬಿವಂ ಕೆಡಪಿಯೇಂ ತಿರುಗಿತ್ತೊ ಕಿರಾತಸಂಕುಳಂ ॥ ೧೧೦

ಅಂತುಕಿರಾತವರ್ಗಸಹಿತಂ ಬೇಂಟೆಯಾಡಿಯರಸಂ ತಿರುಗುವಾಗಳ್ ಮುಂಬೆ,

ಬೇಂಟೆಯು ನಾಯ್ಗಳಂ ಪೊಱಮಿವ ಪೆರ್ಬಲೆಯಂ ಸಮುಕಟ್ಟುತಿರ್ಪ ಬ ।
ಲ್ಪುಂಟಗೆಗೊಲ್ಲಳಂ ಬಸಿವ ದೀಹವನೋವ್ರವ ನೇರ್ಪುವೆತ್ತ ಕೈ ॥
ದೊಂಟಿಯನೊಪ್ಪಿ ಕಟ್ಟುವ ಕರಂ ಪದನಾಗಿರೆ ಬಿಲ್ಲ ನಾರಿಯಂ ।
ತಾಂಟಿಸಿ ನೋಲ್ಪಿ ಬೇವಸದೊಳಿರ್ದುದು ಪಳ್ಳಿಯ ಭಿಲ್ಲಸಂಕುಳಂ ॥೧೧೧

ಅಂತಿರ್ದು ದೊಂದು ಭಿಲ್ಲವಳ್ಳಿಯಂ ಕಂಡರಸಂ ನಿಲ್ವುದುಮಲ್ಲಿಯಪ್ಪಳಿಂದರ್

ಕತ್ತುರಿಯು ನಾಭಿಯಂ ಪೊಸ ।
ಮುತ್ತುಗಳುಂ ಮುತ್ತಪಸ್ತಿ ದಂತವನೊಲವಿಂ ॥
ದಿತ್ತರ್ ಕಣ್ಗೆಗಳನರಸಾ ।
ಚಿತ್ತವಿಸೆಂದೆನುತೆ ಶಬರನಾಯಕರಾಗಳ್ ॥ ೧೧೨

ಅಂತು ಬಂದು ಕಂಡ ಬೇಡನಡೆಯೊಳ್,

ಮುಗಿಲ ಮಱೆಯಬ್ಜಮಿತ್ರಂ ।
ಪಗಲ ಸುಧಾಸೂತಿ ಮುಸುಳಿಸಿರ್ಪಂತವರೊಳ್ ॥
ಸೊಗಸುವ ಶರೀರಕಾಂತಿಯೊ ।
ಳ್ಹೊಗೆದಿರ್ದಂ ನವಕುಮಾರಕಂ ನೃಪನಿದಿರೊಳ್ ॥ ೧೧೩

ಅಂತಿವರ್ ಕುಮಾರನಂ ಕಂಡು--ಇವನೆಲ್ಲಿಯವನೆತ್ತಣಿಂ ಬಂದನೀತಂ ನಿಮ್ಮ ಕುಲದೊಳ್ ಪ್ರಭ್ಯಲ್ತಕ್ಕಾತನಲ್ಲಿಂವರಸಂ ಬೆಸಗೊಳಲಲ್ಲಿಯೊಬ್ರಂ

ಜನಪಂ ಪ್ರಹಾರವರ್ಮಂ ।
ವನದೊಳ್ ಮುಂಗಟ್ಟು ಪೋಪ ಪದದೊಳ್ ಕಮಲಾ ॥
ನನೆಯೊಬ್ಬಳ ಕೈಯೊಳ್ ಬ ।
ಲ್ಪಿನೊಳೀತನನೀಜ್ಜ ಕೊಂಡೆವವನಿಪತಿಲಕಾ ॥ ೧೨೪

ಎಂದು ಮತ್ತಮಿಂತೆಂದಂ:—

ಈತಂ ದೇವಗೆಯೆ ತ ।
ಕ್ಕಾತಂ ಚಿತ್ತವಿಭ್ರದೆಂದು ತದ್ಬಾಲಕನಂ ॥
ಪ್ರೀತಿಯೊಳತ್ತಂ ಕೂರ್ತು ಕೆ ।
ರಾತವರಂ ನೃಪವರಂಗೆ ಮನದುತ್ಸವದಿಂ ॥ ೧೨೫

ಅಂತು ಕುಡುವುದುಂ ಕಿರಾತಂಗೆ ಅರಸಂ ಬೀಜ್ಜುದಂ ಕೊಟ್ಟು ಕುಮಾರನನೊಡಗೊಂಡು ಪ್ರಭಪ್ರವೀರಮಂ ಮಾಡಿ ಬೀಡವಡೆಯಂ ಕಳುಹಿ ಆಸ್ಥಾನಮಂಟಪಕ್ಕೆ ಬಂದು ಪ್ರಸುಮತಿಯುಂ ಕರೆಸಿ ಕುಮಾರಂ ಬಂದ ವೃತ್ತಾಂತಮುಂ ಪೇಜ್ಜಾತನನಪಹಾರವರ್ಮನೆಂದು ಪೆಸರನಿಟ್ಟು ನವನಿಧಿಗಳಂ ಪಡೆದ ದಿನಸ್ಪತಿಯುಂತವನೀಶಂ ಸುಖದೊಳಿರ್ದುದುಂ ಮತ್ತೊಂದು ದಿನಂ

ಆವಾಮವೇವಶಿಷ್ಯಂ ।
ನಿವಾರಮನುಜ್ಜ ಬಗೆಯಿನೊಂದು ವನಸೆತ್ತೀ ॥
ಮಾನಸಿಗೆ ಬಂದು ಕಂಡಂ ।
ಕೋವಿದನತಿದು ಖಿಯಪ್ಪ ವೃದ್ಧಾಂಗನೆಯುಂ ॥ ೧೨೬

ಬಾಗಿನ ಬೆನ್ನೆಲಿಜ್ಜ ಕಿವಿ ಬತ್ತಿದ ಗಲ್ಲಮುವಿವರ್ ಪಲ್ ಕರಂ ।
ತೂಗುವ ಮುಂತೆ ನೀರ್ದುವಿನ ಕಣ್ಮಿಲರೆಯ್ದಿ ತೆರಳ್ದ ತೋಳ್ಗಳಿಂ ॥
ಬಾಗಿರೆ ಮುಜ್ಜ ಮೆಯ್ವಡೆದು ಬಿಂಜದೊಳಂಜದೆ ನಿ ದುದೆಂಬಿನಂ ।
ಬೇಗೆಯು ಬೆಂಕೆಗಳ್ಕಿ ಕುಳಿರ್ವಳ್ಳದೊಳಿರ್ದ ಮುಮುಂಕಿಯೊಪ್ಪಿದಳ್ ॥ ೧೨೭

ಅಂತಿದ್ ವೈದ್ಯೆಯಂ ಮುನಿಶಿಷ್ಯಂ ಕಂಡು
ಎಲೆ ವೈದ್ಯೆ ವನದೊಳೀಕಿಂ ।
ತಪ್ಪುತೊರ್ಬಳೆ ಕುಳ್ಳಿರಿಪೆ-ಯೆಂದೊಡೆ ಮತ್ತಂ ॥
ಬಲಿಲುತ್ತೆ ಸುಯ್ದು ಮನನುಂ ।
ನಿಲಿಸಿ ಬಲಿಕ್ಕುಸಿರ್ವುದಕ್ಕೆ ಬಗೆಯುಂ ತಳಿದಳ್ ॥ ೧೮೪

ಅದೆಂತೆಂಬೊಡೆ:—

ಸಕಲಧರಾಧಿನಾಥನನರತ್ನ ಕಿರೀಟವಿರಾಜಿತಾಂಘ್ರಿಪಂ ।
ದುಕನತಿಮಿತ್ರರಾಜರಮಣೀಯಫಲಪ್ರದನುರ್ವ್ಯಪಾರಿಜಾ ॥
ತಕನಭಿಯಾತಿಭೂಪಗಜನಾಜಿರಥಾಪ್ತ ಪದಾತಿವರ್ಗಭಂ ।
ಜಕನೆನಲೊಪ್ಪುವಂ ಮಗಧವಲ್ಲಭನುಗ್ರವಿರೋಧಿದುರ್ಲಭಂ ॥ ೧೮೫

ಅಂತಾನುಗಧವಲ್ಲಭನಪ್ಪ ರಾಜಹಂಸಂ ತನ್ನರ್ಧಾಂಗಿಯುಪ್ಪ ವಸುಮತಿಯು ಸೀಮಂತಕ್ಕೆನ್ಮರಸನಪ್ಪ ಪ್ರಹಾರವರ್ಮನಂ ತನಗತಿಮಿತ್ರನಪ್ಪದಱಿಂ ಕರಸಲಾತಂ ತನ್ನರಸಿಯಪ್ಪ ಪ್ರಿಯಂವದೆಯುಮಿವರ್ ಕುಮಾರರ್ ಸಹಿತ ಸಕಲಬಲನುಂ ಕೂಡಿಕೊಂಡು ಪುಷ್ಪಪುರಕ್ಕೆ ಬರ್ಪುದುಂ,

ಅರಿನೂಳವೀಶ್ವರಂ ನಿಜ ।
ವಿರೋಧದಿಂ ಬಂದು ಮುತ್ತೆ ಮಗಧೋರ್ವೀಶಂ ॥
ಧುರದೊಳ್ ಮಿಡುಮ್ಮುಱಿದಂ ನ ।
ಮ್ಮರಸಂ ಸಿಕ್ಕಲ್ಕೆ ಬಿಟ್ಟು ಕಳುಪಿದನಾತಂ ॥ ೧೮೬

ಅಂತು ಬಿಟ್ಟು ಕಳುಪಲಿನ್ಮರಸಂ ಕುಟುಂಬಸಹಿತಂ ತನ್ನ ಮಿಥಿಲಾಪುರಕ್ಕೆ ಪ್ರೋಗುತಿರ್ದಾಗಳೊಬ್ ದೂತನಿದಿರ್ವಂದು

ದುರುಳಂ ಪ್ರಹಾರವರ್ಮಂ ।
ಪರನೃಪತಿಯ ಕೆಯ್ಗೆ ಸಿಕ್ಕಿದಂ ರಾಜ್ಯಕ್ಕಾ ॥
ನರಸೆಂದು ವಿಕಟವರ್ಮಂ ।
ಬರವಸದಿಂ ಪಟ್ಟಬದ್ಧನಾದನಿಳೀಶಾ ॥ ೧೮೭

ಅಂತು ನಿನ್ನ ದಾಯಾದ್ಯನಪ್ಪ ವಿಕಟನರ್ಮಂ ಪಟ್ಟವುಂ ಕಟ್ಟಿಕೊಂಡು ದಲ್ಲದೆಯುಂ ನೀಂ ಬರ್ದ್ದಂ ಕೇಳ್ದು ಬಲವಂ ಕೂಡಿಕೊಂಡು ಕೊಲಲ್ ಬರುತಿರ್ಪನೆಂದು ಬಂದ ದೂತಂ ಪೇಟಿಲರಸಂ ರಾಜಮಾರ್ಗಂಬಿಟ್ಟು ಅರಣ್ಯಮಾರ್ಗದೊಳ್ ಪೋಗುತಿರ್ಪಾಗಳ್

ಕ್ರೂರವ್ಯಾಘ್ರನೇಭಕೇಸರಿಮುಖಾಕೋಳಾಹಳಾಂದೋಳಭೋ ।
ರಾರಣ್ಯಾಂತದೊಳದ್ದಭೇದದೊದವಿಂ ಬರ್ನ್ನೆಗಂ ಕಾವುರ್ಕ ॥
ಜ್ಯಾರಾವಂ ವಿಗೆ ಬಾಣಮುಂ ಸುರಿಯುತುಂ ವ್ಯಾಧರ್ಕಳೆಯ್ತಂದು ಸಂ ।
ಹಾರಂಮಾಡಿದರೆಮ್ಮ ಭೂಪಬಲಮುಂ ಬೆಂಬತ್ತಿ ಬೆಂಬಿಲ್ವಿನಂ ॥ ೧೩೨

ಅಂತು ಬೆಂಬತ್ತಿ

ಭಿಲ್ಲರ್ಗಳ್ಕಿದ ಮೃಗಮುಡು ।
ವಲ್ಲಭನಂ ಸಾರ್ದೊಡಲ್ಲಿ ಪಾವಿನ ಭಯದಿಂ ॥
ತಲ್ಲಣಿಸುನಂತಿರಾಯ್ತನ ।
ಗಿಲ್ಲಿ ವಿಪತ್ತೆಂದು ನೃಪತಿ ದುಃಖಿತನಾದಂ ॥ ೧೩೩

ಅಂತು ದುಃಖಿತನಪ್ಪಂತು ಕಿರಾತವತೆ ಪ್ರಹಾರವೆರ್ಮನ ಬಲಮುಂ ನಿವರ್ಮೂಲಮುಂ ಮಾಱ್ಪಾಗಳಾನಂಬೆಯೆನ್ನ ಕೈಯ್ಯೊಳಿದ್ದ ಕುಮಾರಸಹಿತ ವೋಡಿ ಬಂದಿಲ್ಲಿರ್ದ್ದುಂ,

ಆದೊರ್ಂದು ಕ್ಷೀರವಕ್ತ್ರಂ ।
ಶಾದೂರ್ಲಂ ಮೇಲೆವಾಯಲಾನಂಜಿ ಕರಂ ॥
ಸಾದುರ್ ವನದಿಂ ಕರಾಗ್ರದೊ ।
ಳಿದ್ದ ಕುಮಾರನನರಣ್ಯದೊಳ್ ಬಿಸುಡಲೊಡಂ ॥ ೧೩೪

ಅಂತಾಶಿಶು ಸವಿಾಪದೊಳಿದ್ದ ಕಪಿಲಾಸವದೊಳ್ ಪ್ರಗುವ್ರುದುಮಲ್ಲಿಗಾ ಪುಲಿ ಪಾಯಲೊಡಂ

ಮುನ್ನಂ ಶರಯಂತ್ರಮನ ।
ತ್ಯುನ್ನತಿಯಿಂ ಶಬರರೊಲ್ದು ಕಪಿಲಾಸವದೊಳ್ ॥
ಚಿನ್ನೆಸೆಯೆ ಮಾಡಿರಲ್ ಯಂ ।
ತ್ರಂ ನೆಳ್ನನೆ ಪುಲಿಯ ಗೋಣನಱಿಯಿತಾಗಳ್ ॥ ೧೩೫

ಅದಂ ಮುಖೆಯೊಳ್ ನೋಡುತ್ತಿರ್ದ ಶಬರರ್ ಬಂದು ಪುಲಿ.ಕೆಡೆದುದಂ ಕಂಡು ಕುಮಾರನಂ ಕೊಂಡು ಪೋದರೆಂದು ವೈದ್ಯ ಪೇಟಿಲ್ ಮುನಿಶಿಷ್ಯಂ ಕೇಳ್ದಾಶ್ಚರ್ಯಂಬಟ್ಟಾಬೇಡರ ಪೋದ ದಾರಿಯುಂ ತೋಱುವೆನಲಲ್ಲಿಯೆ ಪೋದರೆಂದು ವೈದ್ಯ ಪೇಟಿಲಾಮಾರ್ಗದೊಳಾಂ ಪೋಗಿ ನೋಱ್ಪೆನೆಂದು ಮುನಿಶಿಷ್ಯಂ ಪೋಗಿ ನೋಡಿ

ಎಲ್ಲಿಂದ ಬಂದೆಯೆಂಬರೊ !
ಕೊಲ್ಲಿವನಂ ಬೇಹುಕಾಱನೆಂಬರೊ ಪಾವರ್ಂ ॥
ಮೆಲ್ಲಿದನೆಂಬರೊ ಧರೆಯೊಳ್ ।
ಭಿಲ್ಲರ್ ಕಡುಮೂರ್ಖರೆಂದು ಚಿಂತಿಸುತಿರ್ದಂ ॥ ೧೩೬

ಅಂತು ಚಿಂತಿಸುತುಂ ನಡೆಯೆ ಮುಂದೆ

ಅಡವಿಯೊಳಾರ್ದು ಬೇಡನಡೆ ಬೇಂಟೆಯನಾಡಿ ಶರಪ್ರಘಾತದಿಂ ।
ಕೆಡೆಪಿದ ಬೆಳ್ಮಗಂಗಳ ಕಳೀವರಮುಂ ಪ್ರೋಸಕಿಬಿಂನಿಂದಮಂ ॥
ಸುಡು ಕಡಿ ಬಿಚ್ಚುರ್ ಬಲ್ಪಿಡಿದು ಕೊಯ್ ಕೊಱ್ಱ ತನ್ನವರ್ಗೀಯೆನಿಪ್ಪ ನಾ।*
ಣ್ಮುಡಿಗಳನಾಲಿಸುತ್ತುವಿರದೆಯ್ದಿದನಾಮುನಿ ಭಿಲ್ಲಸಂಘಮಂ ॥ ೧೩೭

ಅಂತೆಯುಂದವನ್ನೆಗಮಾಬೇಡನಡೆಯೊಳ್ ಕಲಂಬರ್

ಚಿಕ್ಕವನಂ ಬೇಂಟೆಗೆ ಬಲಿ ।
ಯಿಕ್ಕುವವೋ ಗುಱಿಯನೊಡ್ಡಿ ಕೆಡೆ ಪ್ರವವೋ ಮೇ ॥
ಲಕ್ಕೆ ಬಿಸುಟೆಸಿಯನಾನ್ಬವೊ ।
ಚಿಕ್ಕನೆ ಯೆರಡಾಗಿ ಸೀಳ್ವಿವೋ ಎನುತಿರ್ದರ್ ॥ ೧೩೮

ಅದೆಂತೆಂಬುದಂ ಕೇಳ್ದಲ್ಲಿಗೊಂದುಪಾಯಮಂ ಕಾಣಲ್ವೇಳ್ಕುವೆಂದು ಪರಪ್ರಾಣಾರ್ಥಂ ಪುಸಿದೊಡೆ ದೋಷಮಿಲ್ಲೆಂದು

ಎಲೆ ಮಗನೆ ಪಡೆದೊಡಲ್ಗದ ।
ವಲಂ ಪುಟ್ಟಿಸುತುವೆಲ್ಲಿಗೆಯ್ದಿದೆಯೋ ಎಂ ॥

ದಲಿತೆ ಪಡೆದಂತೆ ದುಃಖಿದೊ ।
ಳಳವಡಿಸಿದನೊಂದು ನಟನೆಯಂ ಮುನಿಶಿಷ್ಯಂ ॥ ೧೩೯

ಅಂತಪಿಲುತ್ತೆ ಒರುತ್ತಿರ್ದುದಂ ಕಂಡು ಕಿರಾತವಡೆ ಈಕುಮಾರಕನೀತ
ನ ಮಗನಾಗದೆ ಮಾಣನೆಂದಲ್ಲಿ ಕೆಲಬರ್ ಕರುಣಿಸಿ ಕಣ್ವನಿಯಂ ತೊಡೆದು
ಕುಮಾರನಂ ಕುಡಲಾಮುನಿಕುಮಾರಂ ಕೊಂಡು ಬಂದು ವೈದ್ಧಿಯಿರ್
ತಾಣದೊಳವಳಂ ನೋಡಿ ಕಾಣದೆ ವಾಮದೇವರ ಸವಿಾಪಕ್ಕೆ ಕೊಂಡು
ಬಂದು ತಚ್ಚಿತ್ರವಮಂ ಪೇಳ್ದೊಡೆಯಿತಂ ರಾಜಹಂಸನ ಮಿತ್ರಪುತ್ರನೀತ
ನನಾತಂಗೆ ಕೊಟ್ಟುಬಾಯೆಂದು ಕಳುಪಲಾತಂ ಬಂದು ಮಾಗಧಂಗೆ ಕೊ
ಟ್ಟು ತದಾಶ್ಚರ್ಯಮಂ ಪೇಳ್ದೊಡರಸಂ ಸಂತಸಂಬಟ್ಟು ಪ್ರಹಾರವರ್ಮ
ನ ದೆಸೆಗೆ ಸುಯ್ದು ಕುಮಾರಂಗುಪಹಾರವರ್ಮನೆಂದು ಪೆಸರಿಟ್ಟು ವಸು
ಮತಿಯ ಕೈಯೊಳ್ ಕೊಟ್ಟು ದಶದಿಙ್ಮಂಡಲದಿಂ ಪ್ರಸಿದ್ಧಿವಡೆದಿರ್ಪಂತೆ ದ
ಶಕುಮಾರರಂ ಪಡೆಯೆ

ಖಗಭೂಷರ್ ಸಲೆ ದಕ್ಷಯಾಗದೊದವಿಂ ಭಂಗಕ್ಕೆ ಪಕ್ಕಾಗಲಿಂ ।
ಬೊಗೆದಿರ್ದರ್ ದಶಸೂರ್ಯರೆಂಬ ತೆಱದಿಂ ಪದ್ಮಾನುರಾಗಪ್ರಭೂ ॥
ತಗುಣಂ ವಿಶ್ರುತದೇಹದೀಪ್ತಿ ಪರರಾಜದ್ವೇಷಮೊಪ್ಪಲ್ ಪ್ರತಾ ।
ಪಿಗಳೀಂ ಪೆಂಪಿಸೆದಿರ್ದರೊ ದಶಕುಮಾರರ್ ಕೌತುಕಪ್ರೇಮದಿಂ ॥ ೧೪೦

ಅಂತು ದಶಕುಮಾರರ್ ರಾಜವಾಹನ, ಪ್ರಮತಿ, ಮಿತ್ರಗುಪ್ತ, ಮಂತ್ರ
ಗುಪ್ತ, ಸುಶ್ರುತ, ಪುಷ್ಪೋದ್ಭವ, ಅರ್ಥಪಾಲ, ಸೋಮದತ್ತ, ಪ್ರಹಾ
ರವರ್ಮ, ಉಪಹಾರವರ್ಮರ್. ಅಂತಿರ್ದ ದಶಕುಮಾರರಂ ಭೃಂಗಿ ಛೇತಾ
ಳ ವೈತಾಳಿ ಮರುಜರಿಯೆಂಬ ಶಸ್ತ್ರವಿದ್ಯೆಯೊಳಂ ಸಮಪಾದ ವೈಷಮ ಮಂ
ಡಲಾಲೀಢ ಪ್ರತ್ಯಾಲೀಢ ಮೆಂಬ ಧನುರ್ವಿದ್ಯೆಯೊಳಂ, ಚತುರಶೀತಿಪದವಿ
ಧಾನವಾದ ಗಜಶಿಕ್ಷೆಯೊಳಂ, ಪಂಚಧಾರಾಸಂಚಿತಮಾದಶ್ವಾರೋಹಣದೊ
ಳಂ, ಸ್ವರ್ಣನಾಭ ಚಿತ್ರಕವಾತ್ಸ್ಯಾಯನವಿರಚಿತಕಾಮಶಾಸ್ತ್ರದೊಳಂ,
ಶಬ್ದಾರ್ಥಾಲಂಕಾರವ್ಯಾಕರಣಚ್ಛಂದೋವಿಲಾಸವೆಂಸೆವ ಶಬ್ದಶಾಸ್ತ್ರದೊ
ಳಂ, ಮತ್ತಮನೇಕನೀತಿಶಾಸ್ತ್ರದೊಳಂ, ಪ್ರವೀಣರಪ್ಪಂತು ಮಾಡಿ ರಾಜ
ಹಂಸಂ ಸುಖದೊಳಿರ್ದಂ. ಅದೆಂತೆನೆ—

ಸುಲಲಿತಮಪ್ಪಿನಂ ದಶಕುಮಾರಕರೊಪ್ಪುವ ಬಾಲಲೀಲೆಯಂ ।
ನಲವಿನೊಳಾವಗಂ ಪದೆದು ಭಾವಿಸಿ ತನ್ನಯ ಚಿತ್ತದುತ್ಸವಂ ॥
ಫಲಭರಮಾಗಿ ಚಿಲ್ವಿಸೆಯುಲಿಂದ್ರಿಯಪಕ್ಷಕುಲಂ ನಿರಂತರಂ ।
ಚಲಿಸದೆ ರಂಜಿಸಿರ್ದನಿಳಿಯೊಳ್ ನಿಜವಾಗಲಘಂಗವಿಕ್ರಮಂ ॥ ೧೪೧

॥ ಗದ್ಯಂ ॥

ಇದು ನಿಖಿಲಬುಧಜನಮನೋಮನಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗನಿಟಿಲಪದಾಂಭೋಜಮತ್ತಮಧುಕರ
ವಿಧುಸೂದನನಂದನ ಸರಸಕವಿ ಚಾಂಡರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ವಂಗಧೇಶ್ವರ ಮೂಳವರಾಜ ಯುದ್ಧವರ್ಣನಂ,

ದಶಕುಮಾರೋದಯವರ್ಣನಂ, ವಿದ್ಯಾಭ್ಯಾಸವರ್ಣನಂ,

ದ್ವಿತೀಯಾಶ್ವಾಸಂ.

ಶ್ರೀವನ್ಮೆಗಧವಸುಧೀರತಿ ।
ಕಾವೆಂ ರಿಪುರಾಜಮೌಳಿಮಾಣಿಕ್ಯರುಚಿ ॥
ಸೋತ್ತೇವಾಂಘ್ರಿದ್ವಿತಯಂ ನಿ ।
ಸ್ನೇವದಿನೊಪ್ಪಿದನಭಂಗವಿಟ್ಟಲಭೃತ್ಯಂ ॥ ೧

ಅದಲ್ಲದೆಯುಂ

ಸುತಸೇವಾಯಾತವೀರಾದ್ಭುತರಸಜಲದೊಳ್ ಚಾಮರಗ್ರಾಹಿಣೀಡ ।
ಸ್ತತರಂಗಶ್ರೇಣಿಯೊಳ್ ಪಾತಕಜಯಜಯಕೋಳಾಹಳಧ್ವಾನದೊಳ್ ಸ ॥
ನ್ನತನಾನಾಭೂಪಮೌಳಿವ್ರಜಸರಸಿಜದೊಳ್ ಬಂಧುಸಂದೋಹಗಂಭೀ ।
ರತೆಯೊಳ್ ಸೌಭಾಗ್ಯಕೋಭಾಪುಳಿನದೊಳಿಸೆದಂ ರಾಗದಿಂ ರಾಜಹಂಸಂ ॥ ೨

ಅಂತು ಸಕಲರಾಜಲೋಕಂಬೆರಸೊಡ್ಡೋಲಗಂಗೊಟ್ಟರ್ಮ

ಸಮುಚಿತಯೌವನೇಭಮದಲೇಖೆಯೊ ಯೌವನಸ್ರಷ್ಟ್ರಭೃಂಗಕಾ ।
ಳಮುವೊ ವಿಲಾಸಯೌವನಸುಧಾಕರಲಕ್ಷ್ಮ್ಮಿಯೊ ಪೇೞೆನಲ್ ಕರಂ ॥
ವಿಮಳಮುಖಾಬ್ಜದೊಳ್ ವೊಳೆವ ತುಸ್ಪಲಿ ವಿಸ್ತಾಸೆಯೊಳೊಸ್ಪತಿರ್ಪ ವಿ।
ಕ್ರಮಯುತನಂ ನಿಜಾತ್ಮಸುತನಂ ಪದೆದೀಕ್ಷಿಸಿದಂ ನೃಪಾಲಕಂ ॥ ೩

ಅಂತರಸಂ ಕುಮಾರನಂ ನೋಡಿ ಯುವರಾಜಪಟ್ಟಕ್ಕೆ ಕಾಲವಾದುದೆಂದು ಮನೆದೊಳ್ ಭಾವಿಸಿ ಮಂತ್ರಿಗಳ್ವೆರಸು ಶುಭದಿನಶುಭಮುಹೂರ್ತದೊಳ್

ಕಂದರ್ಪಂಗದಟೇಱೆ ಮೆಂದಪವನಂ ಸಂತೋಷಮಂ ಪೇಱೆ ಮಾ ।
ಕಂದಂ ಪ್ರಾಗುಡಿದೋಱೆ ಸಂತತವಸಂತಂ ಸೌಖ್ಯಮಂ ಬೀಱೆ ಸಾ ॥
ನಂದಂ ಮಂತ್ರಿಗಳಪ್ಪುದಾಯ್ತೆನೆ ಕುಮಾರಂಗಾರ್ಪಿನಿಂ ತನ್ನ ಪೆಂ ।
ಪಿಂದಾರ್ಯಂ ಯುವರಾಜಪಟ್ಟಮನಲಂಪಿಂ ಕಟ್ಟುದಂ ಭೂಭುಜಂ ॥ ೪

ಅಂತು ರಾಜಹಂಸಂ ರಾಜವಾಹನಂಗೆ ಯುವರಾಜಪಟ್ಟಮಂ ಕಟ್ಟಿ ದಶ ಕುಮಾರರಂ ದಿಗ್ವಿಜಯಕ್ಕೆ ಕಳಪಲೆಂದು

ದಿಗಿಭಂ ಘೀಲ್ಲಿಡೆ ನಾಗಲೋಕದಹಿಗಳ್ ಬೆಂಡೇಱೆ ಭೂಭಾಗದೊಳ್ ।
ಭಗಣಂ ಬೀಱೆ ಮರುತ್ತರಂಗಿಣಿ ಮುಱಲ್ ತೋಱಿಲ್ ತುಱುಂಕಾಡೆ ಗೋ॥
ತ್ರಗಿರಿವ್ರಾತಮುಳಂಕೆಗಟ್ಟು ನಡುಗಲ್ ಶ್ರೀರಾಜಹಂಸಾಜ್ಞೆಯಿಂ ।
ದೊಗೆದತ್ತಂದು ಸುಪರ್ಣ-ಕೋಣಪತಿಯಿಂ ಪ್ರಸ್ಥಾನಭೇರೀರವಂ ॥ ೪

ಅಂತು ಪ್ರಯಾಣಭೇರಿಯಂ ಪೊಯಿಸಿ,

ಗುಡಿ ಗೂಡಾರಂ ಪಟಂ ಕೊಟ್ಟಗೆ ವೆಗಲ್ಪೊಱೆ* ಪೆರ್ಬಂಡಿಗಳ್ ಪೆಂಪ್ರವೆತ್ತಂ
ಗಡಿ ನಾನಾವಸ್ತ್ರರತ್ನಾಭರಣವಿತತಿ ವೈದ್ಯರ್ ಪೋಲಂ ಬಲ್ಲವರ್ಗಳ್ ॥
ಬಿಡುದಾಣಕ್ಕಾಪ್ತವರ್ಗಂ ಸಹಿತವನಿಪನುಂ ಸೇನೆಯಂ ಕೊಟ್ಟು ತೇಜಂ ।
ಬಡೆಯಲ್ ತತ್ಪುತ್ರರಂ ದಿಗ್ವಿಜಯಮನೆಸಗಲ್ ಕೂರ್ತು ಬೀಱೊಟ್ಟನಾಗಳ್

ಮತ್ತಂ

ಕರಿತುರಗರಥಪದಾತಿಯ ।
ನರಸಂ ನಲವಿಂ ಕುಮಾರಕರ್ಗಿತ್ತು ದಿಶಾಂ ॥
ತರಮುಂ ಜಯಿಸಿಮೆನುತ್ತಾ ।
ದರದಿಂ ಬೀಱೊಟ್ಟನಾರ್ಪಿನಿಂ ಶುಭದಿನದೊಳ್ ॥ ೭

ಅಂತು ಬೀಱೊಡಲ್ ದಶಕುಮಾರರನೇಕಸೇನಾಸಮನ್ವಿತರ್ ಶುಭಶಕುನದಿಂ ಪೊಱವಟ್ಟು ಬರ್ದಾಗಳ್

ಇದು ದಲೆ ದಿಗ್ವಿಜಯಕ್ಕುಪಕ್ರಮಮೆನಲ್ ಸೇನಾಪದೋದ್ಭೂತಧೂ ।
ಳಿ ದಿಸಾಧೀಶ್ವರರಾಜಮಂಡಲಮನಾರ್ಪಿಂ ಮುತ್ತಿ ಬೆಂಕೊಂಡು ನೀ ॥
ರದಮಾರ್ಗಕ್ಕಿರದೆತ್ತಿ ಧೂಳಿಮಯವಾಗಲ್ ಮಾಡಿ ಬಲ್ಪಿಂ ವಿಯ ।
ನ್ನದಿಯಂ ಪೂಬ್ದಿಱೆ ಸೈನ್ಯಲೋಕದೊದವಂ ವ್ಯಾಪ್ತಿತ್ತ ಗರ್ಬಪ್ಪಿನಂ ॥

ಸುರಪತಿ ಬೆಚ್ಚಲ್ಗನ್ನಿ ಸೆಡೆಯಲ್ ಯಮುಸಳ್ಕಿರಲುಗ್ರರಾಕ್ಷಸಂ ।
ದೊರೆಗಿಡಲಬ್ಜಿಪಂ ಬೆದಱಲೀಕ್ಷಣಧರಂ ನಡೆಗುಂದಲೆಯ್ದಿ ಕಿ ॥
ನ್ನರಪತಿ ಬಳ್ಕಲೀಶನತಿಭೀತಿಯೊಳೊಂದಿರೆ ದಿಗ್ಗಜಕ್ಕೆ ಭೀ ।
ಕರಮೆನೆ ರಾಜವಾಹನನೃಪಂ ನಡೆಗೊಂಡೆಡೆಯೊಳ್ ನಿರಂತರಂ ॥ ೯

ಪಟುಭಟಪದೋತ್ಥಧೂಳೀ ।
ಪಟಳಂ ಕವಿದಂಧಕಾರಮಂ ಪ್ರಟ್ಟಿಸೆ ವಿ ॥
ಸ್ಫುಟಮುಕುಟರತ್ನರುಚಿಯಿಂ ।
ಕಟಕಂ ನಡೆಗೊಂಡುದಖಿಳಧಾತ್ರೀಪತಿಯೂ ॥ ೧೦

ಅಂತು ನಡೆಗೊಂಡು ತನ್ನ ರಾಜ್ಯಮಂ ಕಳೆದು ಹೇಮಕೂಟದ ತಳ್ಪಲ ಮಧ್ಯಸ್ಥಾನದೊಳ್ ಬೀಡಂಬಿಟ್ಟೊಡ್ಡೋಲಗಂಗೊಟ್ಟು ಕುಳ್ಳಿರ್ದಾಗಳ್

ನೊಸಲೊಳಗಿಟ್ಟ ಚೆಲ್ವ ತಿಲಕಂ ಪಿಡಿದಗ್ಗದ ಸೋಡುಗೋಲ್ ವಿಲಂ ।
ಬಿಸುವುಪವೀತಮೆಂಬಿ ಬಿಱುಗಾಯದ ಛೋರ್ಕೆಯೆಂಬಿಲ್ವ ಧೋತ್ರಮೀ ॥
ಱಿಸಿವೆಡಗೈಯ ಬಿಲ್ ಬೆರಳ ದರ್ಭೆ ಮಹಾದ್ಭುತಮುಂ ಮನಕ್ಕೆ ಸೂ ।
ಚಿಸಲತಿಸಂಭ್ರಮಂ ಬೆರಸು ಬಂದನದೊರ್ವಸಮಂ ದ್ವಿಜಾಧಿಪಂ ॥ ೧೧

ಅಂತೊರ್ವ ಬ್ರಾಹ್ಮಣಂ ಬಂದು ಮಂತ್ರವಿಲ್ಲದಕ್ಷತೆಯಂ ಕೊಟ್ಟೊಡೆ–ಇದೇನೈ ವಿಪರೀತಮೇಷಮೆಂದಾತನಂ ರಾಜವಾಹನಂ ಕೇಳ್ವುದುಮಾತನಿಂತೆಂದಂ:—

ಅಜುನೀರ್ವಳ್ಳಂ ನೆಲಿಲ್ಲಂದಿದ ತರುನಿಚಯಮುಂ ಧೂಳಡರ್ದುರ್ಬಿ ನಿಚ್ಚಂ ॥
ಪಜಿಗೆಟ್ಟಪಾರ್ಸೆ ನಿಶ್ಚೇಷ್ಟೆಯ ತನುವನಿಶಂ ಬೋಧನಾಧ್ಯಾನವೇನುಂ ॥
ಮುಜಿದುಂ ಮಾಡಲ್ಮನಂ ಬಾರದ ಬಗೆ ಮಿಗೆ ಸರ್ವೋರ್ವಿಯೊಳ್ ಕೂಡೆ ನೋಡಲ್ । ಒಬನಾಗಲ್ ಪಾರ್ವರಾಗಲ್ ಕೆಲಬರೊಲೆದರಣ್ಯಕ್ಕೆ ಪಕ್ಕಾಗಿ ಬಂದರ್ ॥ ೧೨

ಅಂತು ಬಱನಪ್ಪೆಯಟ್ಟೆ ಕಂದಮೂಲಫಲಂಗಳಂ ಮೆಲ್ದು ಜೀವಿಪೆವೆಂದು ಕೆಲಂಬರ್ ಬ್ರಾಹ್ಮಣರೊಡಗೂಡಿ ಶಿಶುವಾಗಿರ್ದೆನ್ನನೆತ್ತಿ ಕೊಂಡೆವ್ಮ ತಾಯ್ತಂದೆಗಳರಣ್ಯಕ್ಕೆ ಬಂದು

ಮಾತಂಗವೈರಿಸತ್ವಂ ।
ಮಾತಂಗಕನೆಂಬನಿರ್ನಾವನದೊಳ್ ವಸು ॥
ತಾತ್ತತನ ಪೆಸರಿಟ್ಟುಂ ವಸು ।
ತಾತ್ತಂ ಪೊರೆದೆನ್ನನೊಲ್ದು ನರಪತಿತನಯಗಾ ॥ ೧೩

ಅಂತು ಪೆಸರಿಡಲಾವಮಾತಂಗಕನೆಮ್ಮಿಲ್ಲಗರ್ಗಲ್ಪ ಜೀವನೋಪಾಯಮುಮಂ ಮಾಡುತಿರ್ಪನ್ನಂ ಕೆಲವ್ರದಿನದಿಂ ಮೇಲೆ

ಜನಕಂ ಮಾತೆ ಸಹೋದರರ್ ಕುಲಜರಾಪ್ತರ್ ಬಂಧುಗಳ್ ಸಂತತಂ ।
ವನವಾಸವ್ಯಥೆಯಿಂದವರ್ ಮಡಿದರಾನೀಬೇಡರೊಳ್ ಕೂಡಿ ಕಾ ॥
ನನದೊಳ್ ಬೇಂಟೆಯನಾಡಿ ಕಳ್ದಡವಿದು ದ ಪ್ಕರ್ಮಕ್ಕೆ ಪಕ್ಕಾದ ಜೀ ।
ವನದಿಂದಿರ್ದಪೆನುರ್ವರಾಧಿಪತಿ ಕೇಳ್ ಸಂಸರ್ಗಮೇಗೆಯ್ಯದೋ ॥ ೧೪

ಎಂದಾದ್ವಿಜಾಧಮಂ ಪೇೞ್ದೊಡೆ ಮತ್ತಮರಸನನಿತುಂ ಗಾಯದ ಕಲೆಗೆ ಕಾರಣಮೇನೆಂದು ಕೇಳಲಾತನಿಂತೆಂದಂ:—

ನೆರೆದಿರ್ದ ಪುರನನಿಱಿಯ ಲ ।
ಕಿರಾತತತಿ ಪ್ರೌಢ ಪದದೊಳಿರೊಳ್ ಪೂರ್ವಂ ॥
ಬರುತಿರ್ದನೊರ್ವನಾತನ ।
ನರವರಿಸದೆ ಕೊಲ್ವೆವೆಂದು ಮುತ್ತಿದ ಪದದೊಳ್ ॥ ೧೫

ಗೋವಿಂಗಂ ಪೂರ್ವಂಗಂ ।
ಸಾವಡಸಲ್ ತನ್ನ ಜೀವದಾಸೆಯನುಜ್ಝಿದೊ ॥
ಲ್ವಾವಂ ಕಾದಪನಾತಂ ।
ಕೈವಲ್ಯಾಂಗನೆಯ ಕಾಂತನಪ್ಪನವೋಢಂ ॥ ೧೬

ಎಂಬುದಂ ಕೇಳ್ದಱಿವೆನಸ್ವದಱಿಂದಾತನಂ ಕೊಲಲೀಸದೆ ಮೇಲೆ ಬಿ ದ್ದೊಡಾತನಂ ಬಿಟ್ಟೆನ್ನನಿಱಿಯಲಾಂ ಗತಜೀವಿತನಾಗೆ

ಸಲೆ ಕಾಯ್ದುರ್ಕಿನ ದಾರೆಯಂ ಬಿಡು ನವದ್ವಾರಂಗಳೊಳ್ ಕಾಯ್ದ ಕಾ।
ವಲಿಯೊಳ್ ಕುಳ್ಳಿರಿಸೊಯ್ದು ಬಾಲವೃಱುತ್ರಂ ಕೇವಾಗಿ ತೀವಿರ್ದ ಸೀಂ ॥
ಬುಜಿವಂ ಬಾಯ್ಗಱಿ ನೂಂಕು ಪಾಕುಳದ್ರೊಳೀಜಲ್ದೊಡೀಜು ಶಸ್ತ್ರಾ
ಸ್ತ್ರದು । ಯ್ಯಲೆಯಂ ಕೊಯ್ ಕೊಱಿಯೆಂಬ ಕಾಲಯವನಂ ಕಂಡೆಂ
ಧರಾಧೀಶ್ವರಾ ॥ ೧೭

ಪಂಚಮುಖಾಘಾತಕೆಯಂ ।
ವಂಚಕನಂ ನುಡಿದು ಪ್ರಸವನಂ ಸಂಗರದೊಳ್ ॥

ಹಿಂಬಳುವನಂ ಪಲಿಗೊಂಡದ ।
ಸಂಚದೊಳಿಕ್ಕಾವ ಕಾಲಮೇಲಿದ ತೆಱದಿಂ ॥ ೧೪

ಎಂಬ ಘೋರಮುಖನಪ್ಪ ಕಾಲನ ಸಮೀಪಕ್ಕಾಂ ಪೋಗಲಾತನೆನ್ನಂ ನೋಡಿ —

ಈತಂ ಬ್ರಾಹ್ಮಣನಂ ಕಾ ।
ದಾತಂ ಕೃತಕೃತ್ಯನೀತನಂ ತಂದವರಾರ್ ॥
ಭೂತಳಕೆ ಪೋಗೆನುತ್ತುಂ ।
ಪ್ರೇತೇಶಂ ಮಗುಳ್ದು* ಕಳುಪಿದಂ ಪದಪೆನ್ನಂ ॥ ೧೫

ಅಂತಾಯಮನೆನ್ನಂ ಕಳುಪಲಾಂ ಬರ್ಪಾಗಳ್ ಮುಂದೆ ನಾಂ ಕಾದ ಬ್ರಾಹ್ಮಣನೆನ್ನ ಕಳೀವರಮುಂ ಸಂಸ್ಮರಿಸಲೆಂದಿರ್ಪಾಗಳ್

ಗಣನೆಗರಿದೆನಿಪ ದುಷ್ಕೃತ ।
ಗಣಮಂ ಪರಿಹರಿಸುವಿಷ್ಟ್ಯದೈವಕ್ಕೆ ಸಲ ॥
ಕ್ಷಣಭಜನೆಯೆಸೆಯೆ ದಂಡ ।
ಪ್ರಣುತಂ ತಾನಾದನೇಽ್ವಿ ತೆಱದಿಂದೆಟ್ಟಿಂ ॥ ೧೦

ಅಂತಾನೆಯ್ದಿದಂ ಕಂಡಾಬ್ರಾಹ್ಮಣಂ ತನಗೆ ಪ್ರಾಣವಿರ್ಡಿಸಿದಂತೆ ಸಂತಸಂಬಟ್ಟಾತನೆನ್ನಂ ಮನೆಗೆ ಕೊಂಡೊಯ್ದು ಶಸ್ತ್ರಹತಿವ್ರಣಮುಂ ಮಾಣಿಸೆ ಬಳಿಕ್ಕೆ ನಾಂ ಪೋದಪೆನೆನೆ ಮತ್ತಂ ಕಿಱಿದು ದಿನಮಿರಿಸಿಯಾತನಿಂ ಮುಂತೊ್ರವದೇಶಮಂ ಕೈಕೊಂಡು ಆತನಂ ಕಳುಪಿ ಬಳಿಕ್ಕೆನಗೆ ವೈರಾಗ್ಯಂ ಪುಟ್ಟಲೀಹೇವಾಕೂಟಪ್ರದೇಶಕ್ಕೆ ತಪಂಬಡಲ್ ಬಂದಿರ್ದೆಂ. ಇನ್ನೀಕಾಂತದೊಳೊಂದು ಕಾರ್ಯಮಂ ಪೇಳ್ದಿಪೆನೆನಲರಸಂ ವಿಸ್ಮಯಂಬಟ್ಟು ವಿಕಾಂತನುಂ ಬಳಿಕ ಪೇಳೆಂದಾತನಂ ಕಳುಪೆ

ದಿನಯಾತ್ರಾನಿಗಮಕ್ರಮಕ್ಕೆ ವಿಘನುಂ ಸಪತ್ನ ಶ್ವಮಿನ್ನೊಂದು ವಾ ।
ಹನಮುಂ ತಂದು ಸನುಂ ತುರಂಗವೆನಿಪಂತಾಂ ಮಾಡ್ಪೆನೆಂಬೊಂದು ಭೂ ॥
ವನೆಯಿಂದುತ್ಸವರಾಗಮುಂ ತಳೆದು ಸೂರ್ಯಂ ಪಶ್ಚಿಮಾಂಭೋಧಿಯಂ ।
ಮನವೊಲ್ದೆಯ್ದಿದನೆಂದು ಬಣ್ಣಿಸೆ ಜಗಂ ಚೆಲ್ವಾಯ್ತು ಸಂಧ್ಯಾಗಮಂ ॥ ೧೧

ಮೂಡಣ ವಾರ್ಧಿಯೊಳೊಪ್ಪುವ ।
ಬಾಡಬಶಿಖಿ ಪಶ್ಚಿಮಾಬ್ಧಿಯೌರ್ವಾನಳನಂ ॥
ನೋಡಲ್ ಬರ್ಪಂತಿರ್ದುದು ।
ನೀಡುಂ ಕೆಂಪಡರ್ದು* ಸಂಜೆಯೊಳ್ ರವಿಬಿಂಬಂ ॥ ೬೦

ಅಂತು ಸಂಧ್ಯಾಕಾಲದೊಳೋಲಗಮಂ ವಿಸರ್ಜಿಸಿ ಸಂಧ್ಯಾವಂದನಾದಿ ಕ್ರಿಯೆಗಳಂ ಮಾಡಿ ಕುಳ್ಳಿರ್ದು ದೌವಾರಿಕನಂ ನೋಡಿ ಏಕಾಂತಮುಂ ಪೇ ೞ್ವೆನೆಂದ ಬ್ರಾಹ್ಮಣನಂ ಕರೆಯೆನಲವನಾತನಂ ಕರೆವುದುಂ

ಮೆಯ್ಯ್ ಕೃತಪ್ರಣ್ಯವೆನುತೆನು ।
ತೊಯ್ಯನೆ ಪದವಿ ಡುತೆ ಬಂದು ನೃಪತಿಗೆ ನಲವೀ ।
ಕ್ಕೈಯೆತ್ತಿ ಪರಸಿ ನಿನಗೇ ।
ಗೆಯ್ಯುಲ್ವೀಕ್ಕೆಂದೊಡರಸ ಚಿತ್ತವಿಸೆಂದಂ ॥ ೬೧

ಅಂತರಸಂಗಾಬ್ರಾಹ್ಮಣನಿಂತೆಂದಂ:—

ಸಕಲಾಭರಣಾನ್ವಿತೆ ಕ ।
ನ್ನಿಕೆಯೊರ್ಬಳ್ ನನ್ನ ಬಱಿಗೆ ಬಂದೆನಗೀಮಾ ॥
ಣಿಕವಂ ಕೊಟ್ಟೆನ್ನಿದಿರೊಳ್ ।
ಮುಕುಳಿತಕರಕಮಳಿಯೊಗಿ ಮತ್ತಿಂತೆಂದಳ್ ॥ ೬೨

ನಾಳೆ ಮಗಧೇಶನಣುಗನ ।
ಪಾಳಿಯುವಿಾತಾವನೆಯ್ದಿ ಬಿಡುಗುಂ ತದ್ಭೂ ॥
ಪಾಳಂ ಸತ್ಕ್ರಮದಿಂ ಪಾ ।
ತಾಳಕ್ಕೆಯ್ತಂದು ನಿನಗೆ ರಾಜ್ಯಮನೀವಂ ॥ ೬೩

ಅದಲ್ಲದೆಯುಂ,

ನಿನ್ನ ಶರೀರಂ ವಂಶಂ ।
ಚೆನ್ನಾದಪ್ರದೆನಗೆ ನೀನೆ ಪತಿಯಾದಪೆ ಮು ॥
ತ್ತನ್ನಗಲೋಕಂ ನಿನಗ ।
ಳ್ಕುಂ ನೆಟ್ಟನೆ ನಂಬು ಮದ್ವಚೋವೃತ್ತಕಮುಂ ॥ ೬೪

ಎಂದಾಕನ್ಯಕೆ ಪೇೞ್ದೊಡೆನ್ನ ಶರೀರಂ ವಂಕಲಂ ಪೊಸತಪ್ಪವಾಯುಂ ನಾಗಲೋಕದ ರಾಜ್ಯವುಪ್ಪ ಕ್ರಮಂ ನಿನಗವೆನಗಂ ಸಂಗವುಮುಪ್ಪನುವೇತೆಱಿದಿಂದಪ್ಪುದೆಂದಾಂ ಕೇಳೆಲ್ ಮಗುೞಿಂತೆಂದಳ್—

ಈಗುಡೆಯೊಳ್ ಮಹಾಗ್ನಿತ್ರಿತಯಂ ನೆಲಸಿರ್ದಪ್ರದಲ್ಲಿ ಮಂತ್ರನಾ ।
ನಾಗವುಮಿರ್ಪ ಪ್ರಸ್ತಕವುವುಂಟಿದಱುದಿಯ ವುಂತ್ರಜಾಪ್ಯದಿಂ ॥
ಬೇಗದೊಳಗ್ನಿಯಂ ಪ್ರಗು ವುಗುೞ್ದು ತದುರ್ವಿಪನೊಂದು ಮಂತ್ರಸಂ ।
ಯೋಗದೊಳಿತ್ತುವಂ ನಿಜಶರೀರವನಿಂತಿವೋಷ್ಠವಾಚಕಂ ॥ ೞಿ

ಅಂತು ನಿನ್ನ ಶರೀರಂ ಪೊಸತಾಗೆ ತತ್ಕುಮಾರಂ ತನ್ಮಾರ್ಗದೊಳೆ ನಿನಗೀವನೆಂದವಳ್ ಪೇೞ್ದೊಡಿವಂ ನೀನಱಿದಂದವೆಂತೆಂದೊಡೆ ಆವಳ್ ಮಗುೞ್ದಿಂತೆಂದಳ್—

ಇನಿತಂ ಮದೀಯಪಿತನೊ ।
ಲ್ದೆನಗಱಿಪಿ ತಪಕ್ಕೆ ಪೋದನಾನೀಪದನಂ ॥
ನಿನಗಱಿಪಿದೆನೆಂದು ತಪಂ ।
ಗನೆ ಪೋದಳ್ ಬಱಿಕ ನಾಗಲೋಕಕ್ಕರಸಾ ॥ ೞಿ

ಅಂತವಳ್ ಪೋದಳ್. ಅವಳ್ ಪೇೞ್ದ ತೆಱದಿಂ ಬೇವರ್ ಬಿಜಯಂಗೆಯ್ದಿರ್. ಮೇಲಪ್ಪ ಕಾರ್ಯಮಂ ನೀವೆ ಒಲ್ಲಿರೆಂದು ಬ್ರಾಹ್ಮಣಂ ಪೇೞ್ದೊಡರಸನದಂ ಮನದೆಗೊಂಡು

ಎನ್ನಿಂ ಸಜ್ಜನ್ಮವೆನ್ನಿಂ ಮುದನಸಮಶರೀರಂ ಲಸತ್ಪ್ರಾಯವೆನ್ನಿಂ ।
ದೆನ್ನಿಂದುದ್ವಾಹವೆನ್ನಿಂ ಭುಜಗಭುವನನಾಥತ್ವಮಾಯ್ತೆಂಬ ವ್ಯೋಲ್ ಮಾ
ಲ್ಪೆನ್ನಿಸ್ಸಂದೇಹವೀತಂಗಿನಿತು ಘನಯಶೋಲಾಭಮುತ್ಕೀರ್ಣಧರ್ಮಂ ।
ತನ್ನಿಂ ತಾನೇೞ್ದಿರಲ್ ನೂಂಕುವರೊಳರೆ ಎನುತ್ತು ರ್ವಿದಂ ರಾಜಪುತ್ರಂ ॥

ಅದಲ್ಲದೆಯುಂ,

ಮಾನವಜನ್ಮದೊಳ್ ಜನಿಸಿ ನಿತ್ಯಮನಿಂದ್ಯಪರೋಪಕಾರವುಂ ।
ದಾನಮನರ್ಥಪಾಲನೆಯನುಳ್ಳಿ ಮಿಗಲ್ ಮಿಗೆ ಮಾಡದಿರ್ಪವಂ ॥
ಮಾನವನಲ್ತವಂ ತೊವಲ ಬೊಂಬೆ ತೆರಳ್ಚಿದ ಲಿಪ್ಪದಕ್ಕೆ ದು ।
ಸ್ಸ್ಥಾನದ ಹುಲ್ಲ ಹಾಹೆ ಪಸಿಗೋಣೆಯ ಚಿತ್ರವೆನಲ್ಕೆ ಸಾಲದೇ ॥ ೞಿಂ

ತರುಲತೆಗಳಖಿಲಪ್ರಷ್ಪಂ ।
ಪರೋಪಕಾರಕ್ಕೆ ಸಲ್ವುದಂ ಕಂಡು ನರರ್ ॥
ಪರಹಿತನಿರತಮನಸಗದಿರ್ಪೊಡೆ ।
ಮರದಿಂದಮಿಕಷ್ಟರಲ್ತೆ ಧರಣೀತಳದೊಳ್ ॥ ೫೧

ಪಾತಾಳಲೋಕವಿಜಯಂ ।

ವಾತಂಗಕನಿಷ್ಟಸಿದ್ಧಿಯಾಯೆರಡುಂ ಮು ॥
ತ್ಪ್ರೀತಿಸಕಲಾವನೀಪ ।
ಖ್ಯಾತಿಯೆನುತ್ತಮನಿಪಾಲತನಯಂ ನಲಿದಂ ॥ ೫೨

ಅನ್ನೆಗಂ

ಪದೆಪಿಂದಂಬರಲಕ್ಷ್ಮಿ ಕ್ರಮೆಯಿಚ್ಚಿಕೊಳಲೆಂದೆತ್ತುಕ್ಯದಿಂ ಕಜ್ಜಳಂ ।
ಪುದಿದೊಪ್ಪಿರ್ದ ಕರಂಡನುಂ ತೆಗೆದು ತನ್ನುತ್ಸಾಹದಿಂ ಮುಚ್ಚುಳಂ ॥
ಮುದದಿಂದಂ ತೆಗೆಯುತ್ತುಮಿರ್ಪ ಪದದೊಳ್ ಕೈತಪ್ಪಿ ಬಿಟ್ಟಿಂಜನಂ ।
ಕೆದಱುತ್ತಿಂಬಿನನುಬಿರ್ದ ಮರ್ಬು ಪರಿದತ್ತೆತ್ತಂ ದಿಶಾಭಿತ್ತಿಯೊಳ್ ॥ ೫೩

ಅಂತು ಪರ್ಬಿದ ಕ್ಷಿತಿಲೆಯೊಳ್

ಸೋದರರಂ ವಂಚಿಸಿ ಸ ।
ತ್ಕೋದಯದಿಂ ನಿರ್ವಿಚಾರದಿಂ ಪರಚಿತ್ತಾ ॥
ಹ್ಲಾದಮನೆಸಗಲ್ ನೃಪಸುತ ।
ನಾದರದಿಂದಾಯುಧಾನ್ವಿತಂ ಪೊಱವಟ್ಟಂ ॥ ೫೪

ಅಂತು ಪೊಱವಟ್ಟಾಬ್ರಾಹ್ಮಣಂ ಪೇೞ್ದ ಮಹಾಗುಹಾದ್ವಾರಕ್ಕೆ ಬಂದು

ಧಾತ್ರೀತಳಪತಿ ಕಡುಪಿಂ ।
ರಾತ್ರಿಯೊಳಾಬ್ರಾಹ್ಮಣಾನ್ವಿತಂ ಗುಹೆಯುಂ ಪೊ ॥
ಕ್ಕಾತ್ರೀತಾಗ್ನಿಯು ಕುಂಡದ ।
ಮತ್ರಂಗಳ್ಗೆಱಗಿ ಪುಸ್ತಕಮನೀಕ್ಷಿಸಿದಂ ॥ ೫೫

ಅಂತು ಗುಡಿಯೊಳಿರ್ದಗ್ನಿಯಂ ಕೆಲದ ಪುಸ್ತಕಮಂ ಕಂಡು ಮಾತಂಗ ಕನಂ ನೋಡಿ ನೀಂ ಕನ್ಯಾಸೂಚಿತನುಪ್ಪ ಕಾರ್ಯಮನುದ್ಯೋಗಿಸೆನೆ

ಮನಸಿಜನ ರೂಪು ನಿಜಯೌ ।
ವನದೇವಿಗೆ ವಿವಾಹಸಿದ್ಧಿ ರಾಜ್ಯದ ಲಾಭಂ ॥
ತನಗಪ್ಪುದೆಂಬ ಹರ್ಷದೊ ।
ಳನುಮಾನಿಸದಗ್ನಿಯಲ್ಲಿ ಭೋಂಕೆನೆ ಬಿಟ್ಟಿಂ ॥ ೫೬

ಮಾತಂಗಕದ್ವಿಜಂ ಕ ।
ನ್ಯಾತತ್ವವೆನಿಪ್ಪ ಮಂತ್ರದಿಂದುರಿಯಂ ನಿ ॥
ರ್ಭೀತಿಯಿನಪ್ಪಲ್ ಕಿರ್ಚಿಂ ।
ದಾತನು ಭಸ್ಮಾವಶೇಷನಾದತ್ತಾಗಳ್ ॥ ೫೭

ಅದನರಸಂ ಕಂಡು ವಿಸ್ಮಯಸಾಂತನಾಗಿ ತತ್ಪುಸ್ತಕದೊಳಿರ್ದ ಮಂತ್ರಮಂ ನೋಡಿ

ಮೃತಸಂಜೀವನಮಂತ್ರದಿಂ ನೃಪಸುತಂ ದಿವ್ಯಾಂಬುವಂ ಮಂತ್ರಿಸು ।
ತ್ತತಿಕ್ಷಿಪ್ರಂ ಮಿಗಲಗ್ನಿಯೊಳ್ ತಳಿಯೆ ನಿದ್ರಾಸಕ್ತನಾಗಿರ್ದವಂ ॥
ಮತಿವೆತ್ತೀಲ್ವವೊಲಂಗಸೌಷ್ಠವವಿಲಾಸಂ ಯೌವನಂ ನಿರ್ಮಲಾ ।
ಕೃತಿಯೊಪ್ಪತ್ತಿರಲಗ್ನಿಕುಂಡದೊಳಗಿಂದೆದ್ದಿಂ ನಗುತ್ತಾದ್ವಿಜಂ ॥ ೫೮

ಅಂತೆದ್ದು ಬಂದ ಮಾತಂಗಕದ್ವಿಜನನರಸಂ ತಳ್ಕೈಸಿ ಕೊಂಡು ಸಂತೈಸಿ ಪಾತಾಳಭುವನಮಾರ್ಗಮಂ ನೋಡಿ

ಪ್ರತಿಪಕ್ಷಪ್ರಚುರಾವನೀಶವಿಲಸದ್ಭಾತುರ್ಬಲಪ್ರಾಣಮಾ ।
ರುತಪೀತಾಹಿ ವಿರೋಧಿಭೂಪತಿಮನೋವೇಶ್ಯಾಭುಜಂಗಂ ರಿಪು ॥
ಕ್ಷಿತಿನಾಥಾನ್ವಯಚಂದ್ರರಾಹು ಸುಖಸಂಪದ್ಯೋಗಿ ಪಾತಾಳಮಂ ।
ನುತಮಾತಂಗಕಕಂಧರಸ್ಥಿತಕರಂ ಪೊಕ್ಕಂ ಮಹೀಪಾಳಕಂ ॥ ೫೯

ಅಂತರಸಂ ಮಾತಂಗಕಸಹಿತಂ ಪಾತಾಳಭುವನಮಂ ಪೊಕ್ಕು ತನ್ನಾಗ ಕನ್ಯಾಭವನನನುನೆಯ್ದಿ

ಮುಕರಪತಾಕನಾಪ್ರ್ ವನಿತಾಕೃತಿವೆತ್ತುದೊ ಪೂರ್ಣಚಂದ್ರಚಂ ।
ದ್ರಿಕೆ ಸತಿರೂಪನಾಂತುದೊ ವಸಂತವಿಲಾಸಮಗಣ್ಯಪುಣ್ಯಕ ॥
ನ್ಯಕೆಯೆನಿಸಿರ್ದುದೋ ಸಕಲವೋಹನವಿದ್ಯೆ ಭುಜಂಗರಾಜಬಾ ।
ಲಕಿವೆಸರಿಂ ನೆಗಪ್ಪಿದೆನೆ ಕಣ್ಗೆಸೆದಿರ್ದುದು ರೂಪು ಕಾಂತೆಯಾ ॥ ೪೦

ಪಾಲುವ ತುಂಬಿಯಂ ಕಳಿವ ಪ್ರಾಗಣೆಯಂ ಮುಗಿವಬ್ಜಮಂ ತವಂ ।
ದೋಜಲಗಲ್ವ ಚಕ್ರಯುಗಮಂ ನಸುಬಾಡುವ ಕಲ್ಪವಲ್ಲಿಯುಂ ॥
ನೀಱೆಯ ಕುಂತಳಕ್ಕ ನಯನಕ್ಕೆ ಮುಖಕ್ಕೆ ಕುಚಕ್ಕೆ ತೋಳ್ಗೆ ಕೈ ।
ವಿಾಱಿ ಸಮಾನವೆಂದೊಡುಪಮಾಪರಿಹೀನವದಾಗದಿರ್ಪುದೇ ॥ ೪೧

ಅಂತು ರೂಪಿಂಗಗ್ಗಳವಾದ ನಾಗಕನ್ಯೆಯಂ ಕಂಡರಸಂ ನೀಂ ಪೇೞ್ದ ಬಾಲಕಿಯಿಾಕೆಯಾಗದೆ ಮಾಣಳೆಂದು ಮಾತಂಗಕನಂ ಕೇಳಿೞ್ದಾತಂ ಲ ಜ್ಜೆಯಿಂ ತಲೆವಾಗಿರಲದಱಿನಱಿದು ಮುನ್ನಮೆ ತಾಂ ಪೇೞ್ದಿಳಿಸ್ಪದಱಿಂದಾ ಕನ್ಯೆಯಂ ಮಾತಂಗಕಂಗೆ ವಿವಾಹಮಂ ಮಾಡಿ ತದ್ರಾಜ್ಯದೊಳ್ ಪಟ್ಟಮಂ ಕಟ್ಟಿ ಯನಂತರಂ ತನ್ಮಾತಂಗಕನಿಂದರಸಂ ಕಳುಪಿಸಿ ಕೊಳ್ವ್ವಗಳಾಮಾತಂ ಗಕನಿಂತೆಂದಂ:—

ನಿನ್ನಿಂದಾವಿರ್ಭವಿಂ ಕೂಡಿದೆವಿಹಿಭುವನಂ ಕೈಗೆ ಸಾರ್ದತ್ತು ದೇವ ।
ಗಿನ್ನೊಂದಂ ಬಿನ್ನಪಂಗೈದಪೆನೆನಿತು ಪಿಪಾಸೋದಯಂ ಕ್ಷುಬ್ಧಯಂ ಕ್ಷೀ॥
ಕನ್ನಿದ್ರಾಬಾಧೆ ಪಿಂಗಿರ್ದುದು ನಿಜವಿಭವಿಂ ಸಂತಸಂ ದಿವ್ಯಮಾಣಿ ।
ಕ್ಯನ್ನೀನೇ ಭೂಜನಂ ಚಿತ್ತವಿಸೆನುತೊಲವಿಂ ರತ್ನಮಂ ಕೊಟ್ಟನಾಗಳ್ ॥

ನಾಡಾಡಿಯು ಮಾಣಿಕಮೆಂ ।
ದೀಡಾಡದಿರಲೆ ಕುಮಾರ ಮನದುತ್ಸವದಿಂ ॥
ಜೂಡಾಮಣಿಯಂ ಮಾಡ್ಪುದು ।
ಪಾಡಿಸದೆಳವೆಱಿಯನಾಂತ ರುದ್ರನ ತೆಱದಿಂ ॥ ೪೨

ಎಂದು ಪೇೞ್ದಿದ್ದ ಮಾತಂಗಕಂ ತನಗೆ ನಾಗಕನ್ಯೆಕೆ ಕೊಟ್ಟ ಮಾಣಿಕ್ಯ ಮುಂ ಕುಡಲದಂ ಕೈಕೊಂಡು ಅತನಿಂ ಕಳುಪಿಸಿಕೊಂಡು ರಾಜವಾಹನಂ ತ ಳರಲುದ್ಯುಕ್ತನಾಗಿ ಖಡ್ಗದ್ವಿತೀಯನಾಗಿ

ಉದಯದೊಳೇಱ್ಗೆವೆತ್ತ ರವಿ ವಾರಿಧಿಯಂ ಪೊಱಮಟ್ಟಿನೆಂಬಿನಂ ।
ಮುದವದರಿಪ್ರತಾನವನಿತಾನಯನೋತ್ಪಲಚಂಡಭಾಸ್ಕರಂ ॥
ವಿದಿತವಲೋಪಕಾರನಿಧಿ ಸಾಹಸಕೇಸರಿ ಶಸ್ತ್ರಶಾಸ್ತ್ರಕೋ ।
ವಿದನಹಿಲೋಕದಿಂ ಪದೆಪಿನಿಂ ಪೊಱಮಟ್ಟಿನಭಂಗವಿಕ್ರಮಂ ॥ ೪೪

॥ ಗದ್ಯಂ ॥

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗನಿಟ್ಟಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚೌಂಪರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಮಾತಂಗಕರಾಜವಾಹನಪಾತಾಳಲೋಕವಿಜಯಂ

ಮಾತಂಗಕನಿಷ್ಪತ್ತಿವರ್ಣನಂ

ತೃತೀಯಾಶ್ವಾಸಂ.

– ಪುಷ್ಪೋದ್ಭವಚರಿತಂ –

ಶ್ರೀಲೀಲಾವಸಥಂ ಪೂ ।
ತಾಲದಿನೇಕಾಕಿಯಾಗಿ ಪೊಱವಮಟ್ಟು ಮಹೀ ॥
ಪಾಲಂ ಕುಳ್ಳಿರ್ದನುಸಮ ।
ಲೀಲೆಯೊಳೊಪ್ಪಿದನಭಂಗವಿಟ್ಠಲಭೃತ್ಯಂ ॥ ೧

ಅಂತು ಪೊಱವಮಟ್ಟೊಂದು ಚಂದ್ರಕಾಂತಶಿಲಾಂತದೊಳ್ ಕುಳ್ಳಿರ್ದು ಮನತಿದೂರದೊಳ್

ವ್ಯಾಯಾನುಶ್ರಮದಿಂ ಪಡಿಲ್ದವಯವಂ ಸ್ವೇದಾಂಬು ತಳ್ತಂಗಮು ।
ತ್ಯಾಯಾಸವ್ಯಥೆಯಂ ನಿರೂಪಿಸುವ ವಕ್ತ್ರಾಬ್ಜಂ ಸಮುತ್ಫುತ್ತಕಾ ॥
ಕ್ಷೇಯಂ ರಂಜಿಸುವೊರ್ಬ ವಿಕ್ರಮಭುಜಂ ಸಂರಂಭದಿಂ ಬಿರ್ದುಂ ।
ಶ್ರೇಯಃಕಾಯನಿದಾವನೆಂದು ನರಪಂ ಸಂಪ್ರೀತಿಯಿಂ ನೋಡಿದಂ ॥ ೨

ಅಂತು ನೋಡಿ ಮತ್ತಂ

ಅವಯನಸೌಷ್ಠವಮಂಗ ।
ಚ್ಛವಿ ಶಿಷ್ಟವಿಲಾಸಗಮನನುಜಸುಭಲಂಪಿಂ ॥
ತವಕವಿದುಂ ದಲ್ ಪ್ರಪ್ಫೋ ।
ದ್ಭವನೆಂಬುದನಱಿಪದಿರದು ಮನ್ಮಾನಸದೊಳ್ ॥ ೩

ಎಂದು ಬಗೆಯುತ್ತೆ ನೋಡಲ್ ।
ಮುಂದರಸಂಗಧಿಕಸೌಖ್ಯಮಿದಿರ್ವರ್ಗವೊಲಾ ॥
ನಂದದೆ ನಲಿದೀಕ್ಷಿಸುತುಂ ।
ಬಂದಂ ಪುಷ್ಪೋದ್ಭವಂ ಮುದಕ್ಕುಗಳೊಗೆಯಲ್ ॥ ೪

ಅಂತು ಪುಷ್ಪೋದ್ಭವಂ ಬಂದು ಪೂತಾಳದ್ವಾರದ ಚಂದ್ರಕಾಂತಶಿಲಾತಲದೊಳಿರ್ದ ರಾಜವಾಹನನನಂ ಕಂಡು,

ನಯನದೊಳೆಶ್ರುವಾರಿ ಪುಳಕಂ ನಿಜದೇಹದೊಳುತ್ಸವಂ ಮನೋ ।
ಜಯದೊಳನೂನಕಾಂತಿ ಮುಖಮಂಡಲದೊಳ್ ಗುರುಭಕ್ತಿ ಚಿತ್ತದೊಳ್ ॥
ಪ್ರಿಯಮಖಿಳಾಂಗದೊಳ್ ನಲಿಯೆ ಸಿದ್ಧವನೋರಥನಿಂದು ದೇವರಂ ।
ಪ್ರಿಯನೊಸೆದೀಕ್ಷಿಸಲ್ ಪತಿದೆನೆಂದು ಮನಂ ಮಿಗೆ ಮೆಯ್ಯನಿಕ್ಕಿದಂ ॥ ೫

ಅಂತು ಮೆಯ್ಯಿಕ್ಕಲೊಡಂ

ಆನಂದಾಶ್ರು ತುಜಿಂಕೆ ನಿ ।
ಜಾನನದೊಳ್ ರೋಮಪುಳಕಮುಣ್ಮಿ ಶರೀರಂ ॥
ತಾನುಮೆ ಪೊರೆಯೇಱುತ್ ನೃಪ ।
ಸೂನು ನಿಜಾನುಜನನಪ್ಪಿಕೊಂಡನಲಂಪಿಂ ॥ ೬

ಅಂತರಸನಪ್ಪಿಕೊಂಡೊಡೆ ಪ್ರಷ್ಠೋದ್ಭವನಿಂತೆಂದಂ:—

ದೇವಗೆ ದಾಸನಲ್ಲದೆ ।
ಭೂವಿಸೆ ಮತ್ತೊರ್ಬನಲ್ತು ತಳ್ಕೈಸಿಕೊಳೆ ॥
ಲ್ಕಿವ ಸನುನೆಂದು ಮತ್ತೆ ಪ ।
ದಾವನತಮುಖಾಬ್ಜನಾಗಲಿತ್ತಿದನರಸಂ ॥ ೭

ಅಂತರಸಂ ಪರಮೋತ್ಸಾಹದಿಂ ಶಿರವಂ ಪಿಡಿದೆತ್ತಿ ಪತ್ತಿರಿ ಕುಳ್ಳಿರಿಸಿ

ನಿಷ್ಪಂದದೃಷ್ಟಿಯಿಂ ಸುಖ ।
ಬಾಷ್ಪಾಂಬು ತುಜಿಂಕೆ ದಶನರುಚಿ ಹರ್ಷಲತಾ ॥
ಪುಷ್ಪದವೋಲ್ ಪಸರಿಸಲೇಂ ।
ಪ್ರಷ್ಠೋದ್ಭವ ಸುಖವೆ ಎಂದು ನರಪತಿ ಕೇಳ್ದಂ ॥ ೮

ಅಂತು ಕೇಳಲೊಡಂ

ಧರೆಯೊಳ್ ಜ್ಯೇಷ್ಠ ಭ್ರಾತೃವೆ ।
ಗುರು ದೈವಂ ಮಾತೃ ಪಿತೃವೆನಿಪ್ಪದಱಿಂ ದೇ ॥
ವರನಗಲ್ದಿರ್ದಿನಗೆ ಸುಖಂ ।
ದೊರೆಕೊಳ್ಳುದುಮುಂಟೆ ದೇವ ನೀನಱಿಯುದುದೇ ॥ ೯

ಎಂದು ಪೇಱೊಡರಸಂ ಪರಿತೋಷಂಬಟ್ಟು ಬಱಿಕಿಂತೆಂದಂ:—

ಆನಲ್ಲಿಂ ಪೋದ ಬಱಂ ।
ಕ್ಕೇನಂ ಬಗೆದಿರ್ದಿರೆಲ್ಲರೆಲ್ಲಿಗೆ ಪೋದಿರ್ ॥
ನೀನೆಲ್ಲಿರ್ದ ವೆ ಪೇೞೆಂ ।
ವಾನರಪತಿ ಕೇೞ್ದನಲ್ತೆ ಪ್ರಷ್ಪೋದ್ಭವನಂ ॥ ೧೦

ಅಂತು ಕೇೞಲೊಡಂ ಪ್ರಷ್ಪೋದ್ಭವನಿಂತೆಂದಂ:—

ದೇವರ ಕೆಯ್ಯಿಂ ಬೀೞ್ಕೊಂ ।
ಡಾವೆಲ್ಲರ್ ಪೋಗಿಯಾಯೆರುೞ್ ಸಲೆ ಸುಖನಿ ॥
ದ್ಯಾವಿಷ್ಟರಾಗಿ ಬೆಳಗಿನ ।
ಜಾವದೊಳರ್ದಿರ್ದೆವೈದೆ ಬೆಳಗಾಯಾ ತ್ತಗೞ್ ॥ ೧೧

ಅಂತು ಬೆಳಗಾಗಲೊಡಂ ಸಂಧ್ಯಾವಂದನಾದಿಕ್ರಿಯೆಗಳಂ ಮಾಡಿ,

ಕವಳಾನಂದಕರಂ ತಮೋವ್ರಜಹರಂ ಚಕ್ರಪ್ರತಿಷ್ಠಾಪರಂ ।
ಸುಮನಃಪ್ರೀತಿಯುತಂ ಮಹೋದಯನುತಂ ಪೀತಾಂಬರಾಲಂಕೃತಂ ॥
ನಮಿತಾಶಾವಮುಖಶೋಭಿತಂ ಬಹಳದೋಷಾರಾತಿ ಲಕ್ಷ್ಮೀಕ್ಷಣಂ ।
ತಮಿತಪ್ರಾಭವಮೂರ್ತಿ ಸೂರ್ಯನುದಯಂಗೆಯ್ದಂ ಧರಾಧೀಶ್ವರಾ ॥ ೧೨

ಕುವಲಯದಿನಿಗೆ ದಿವಾಶ್ವಾಸಂ ।
ಸಮನಿಸೆ ಕವಳಿನಿ ನಗುತ್ತೆ ಕೋಕಂಗಳ್ಗ ॥
ದ್ಭ್ರಮರಧ್ವನಿಯುಂ ತೋಱುಸೆ ।
ಸುಮಸುಖಮಾಯ್ತುಂವಳತಿರಜೋಗುಣವೆಸೆಯಲ್ ॥ ೧೩

ಕಾಯಕ್ಲೇಶಮದೆನ್ನೊಳಾಗೆ ಜಗದೊಳ್ ಮುರ್ಬರ್ಬಿರ್ ಮೈವೆರ್ಚಿದ ।
ನ್ಯಾಯಂ ಕೈಮಿಗಲೆನ್ನ ಕಾಂತನನಲಂಪಿಂ ಕೂಡಿದಳ್ ಪಶ್ಚಿಮಾ ॥
ಶಾಯೋಷಿತ್ತುಪಿಲಾತ್ಮೆಯೆಂದು ದಿವಸಶ್ರೀ ಬೈದು ಬೆಂಬತ್ತಿದಳ್ ।
ಛಾಯಾಸಂಕುಳದಿಂದೆನಲ್ಕೆ ಪಡುವಲ್ ಮುಂತಾದುವೆಲ್ಲಂ ನೆಸಲ್ ॥ ೧೪

ಅಂತುದಯವಾಗಲೊಡಂ ನಿಮ್ಮಡಿಗಳಂ ನೋಡಲಾಸ್ಥಾನಮಂಟಪಕ್ಕೆ ಬಂದು ಕಾಣದೆ ಸಜ್ಜೆವನೆಯುಂ ನೋಡಿಯಲ್ಲಿಯುಂ ಕಾಣದೆ

ಸಂಗಸುಖಕ್ಕೆ ಕೂರ್ತು ವನದೇವತೆಯೊಯ್ದಳಿಂ ಮೇಣ್ ಭುಜದ್ವಯಾ ।
ಲಿಂಗನದಾಸೆಯಿಂ ಖಚರಕಾಂತೆಯರೊಯ್ದರೊ ಯಾವನಕ್ಕೆ ಮೇ ॥
ಣಂಗವಿಸಲ್ಕೆ ಕಿನ್ನರಿಯರೊಯ್ದರೊ ಮೇಣ್ ಕಡುಪಿಂ ನಿಶಾಟರೊಳ್ ।
ಸಂಗರವಾಯ್ತೊ ಪೇೞೆನುತೆ ಚಿಂತಿಸುತಿರ್ದೆ ವಿಳಾಧಿನಾಯಕಾ ॥ ೧೫

ದಿಗಧಿಪರಂ ತೆರಳ್ಚುವೆಱೊ ನಾಗನಿವಾಸದ ಶೇಷನಂ ಬರಲ್ ।
ತೆಗೆವೆವೊ ಗೋತ್ರಪರ್ವತಮನಿರ್ಕಡಿಮಾಪ್ಪೆವೊ ಮೇಘಮಾರ್ಗಮಂ ॥
ಒಗಿವೆವೊ ವಾರ್ಧಿಯಂ ಮುಳಿದು ಪೀವೆವೊ ಭೂಮಿಯನೆಯ್ದೆ ಪೊಕ್ವೆವೋ ।
ಬಗೆಮಿಗೆ ಪೇೞಿಮೆಂಬ ಕಡುಪಂ ತಳೆದಿರ್ದೆ ವಿಳಾಧಿನಾಯಕಾ ॥

ಎಂದಾವಮಾತಿಂಗರಸನ ನೊಗದೊಳ್ ಮುಗುಳ್ನಗೆ ಮಿನುಂಗಲದನಱಿದು ಪುಷ್ಪೋದ್ಭವನಿಂತೆಂದಂ:—

ಆಪವನಾರಗವಂ ಸೇ ।
ನಾಪತಿಯೇಕಾಕಿ ಬಡವನಧಿಕಂ ಕಿಱಿಯಂ ॥
ತಾಪಸನುದ್ಧತನೆನ್ನದೆ ।
ಕೋಪಂ ಸಮನಲ್ತೆ ಜೀವರಾಶಿಯೊಳೆಲ್ಲಂ ॥ ೧೬

ಅಂತಸ್ತಾಪದಿಂದಾದ ಕೋಪನಮಂ ತಱ್ಗಿಸಿ ಕೊಂಡು
ಸರ್ವೋರ್ವಾಯದೊಳಱಿಯಲ್ ।
ನಿರ್ವಾಹಮದಲ್ಲದಿಲ್ಲವೆಂತೆನಲಾವಿ ॥
ನ್ನೊರ್ವೊರ್ವೊರೆಯ್ದಿ ದೆಸೆಗಳೊ ।
ಳುರ್ವೀವಲ್ಲಭನನಱಿಸೆ ಪೋಪುದೆ ಕಜ್ಜಂ ॥ ೧೭

ಅಂತು ದೇವರನಱಿಸಪೋಪುದಂ ನಿಶ್ಚಯಂಮಾಡಿ ಮಗಧೇಶ್ವರಂಗೆ ತದ್ವಿಶೇಷಮಂ ಪೇೞ್ದಿಟ್ಟ ಬಲಮೆಲ್ಲನುಂ ಪುಷ್ಪಪುರಕ್ಕೆ ಕಳಿಪಿ

ಎಣ್ಬಟ್ಟಿಗಳೊಳ್ ನೃಪನಂ ।
ಕಾಣ್ಬನ್ನಂ ತೊಱಿಲಿಮೆಂದು ಮನದೊಳಗಱಿಲಿಂ ॥
ದೆಣ್ಬರುವನಪ್ಪಿಯುಂ ಬಿಸು ।
ಗಣ್ಬಿನಿಯಿಂದೊಂದು ದೆಸೆಗೆ ಪೊಱಮಟ್ಟಾಗಳ್ ॥ ೧೮

ಎಲ್ಲಿಡೆಯೊಳಜಸಿ ಕಾಣದೊ ।
ಡೆಲ್ಲರ್ ಚಂಪಾಪುರಕ್ಕೆ ಬಂದೊಲವಿಂ ಮು ॥
ತ್ತಲ್ಲಿಂ ಮೇಲಣ ಕಾರ್ಯಮು ।
ನುಲ್ಲಾಸದೊಳಱಿಸಲೆಂದು ಕಳಿಪಿದೆನವರಂ ॥ ೨೦

ಅಂತವರೆಲ್ಲರಂ ಕಳಿಪಿಯಾನೊಂಬೆಸಗೆ ಪ್ರೌಢಿಮಟ್ಟಾಗಳ್
ಸರಸೀಜಾತಸಖಂ ಸಹಸ್ರಕರದಿಂ ಸರ್ವೋರ್ವಿಯೊಳ್ ಕೆಂಡಮುಂ ।
ಪರಪುತ್ತಿರ್ದನೊ ಮೇಣ್ ದವಾನಳಶಿಖಾಸಂತಾನಮಿಂತೀಗಳು ॥
ರ್ವರೆಯೊಳ್ ಮೂರ್ತಿಯನಾಂತು ನಿಂದುದೊ ದಿಟಂ ಪೇಳೆಂಬಿನಂ ಕಾ
ಯ್ವ ನಿ । ರ್ಘರದಿಂ ಕೈಮಿಗೆ ಬಂದುದಗ್ಗಳನಿದಾಘಂ ಮೂಘಸಂಹಾರಕಂ ॥
ಖರಕರತಾಪದಿಂದವನಿ ಹೊಪ್ಪಳಿಸಿತ್ತ ಖಿಳಾದ್ರಿಗಳ್ ಭಯಂ ।
ಕರವೆನೆ ಕಾಯ್ದ ಕರ್ಬುನದವ್ರೋಲ್ ಕಿಡಿವೆತ್ತು ವನೌಕಹವ್ರಜಂ ॥
ಮುರುಟಿದುವಧ್ವಗರ್ ಮಿಡುಕಿ ಕಿಚ್ಚಿನ ಕೀಡೆಗೊಲಾದರಾದಿಶಾಂ ।
ತರವಣಲಾಶೆಯಾದುವೆನಲೀಗ್ರೋಗಕ್ಕೆಂ ಕಡುಪಂ ನಿದಾಘದಾ ॥ ೨೨

ವನಮೃಗರಾಜಿಗಳ್ ತೃಷೆಯ ಕೋಟಲೆಯಿಂ ವನವೆಲ್ಲವುಂ ತೊಬಿ ।
ಲ್ದಿನಕಿರಣಂಗಳಿಂ ಕೆಡೆದು ಚೇಷ್ಟಿಸಿ ಕಂಡು ಮರೀಚಿಕಾಜಲ ॥
ಕ್ಕನುನಯದಿಂ ಕರಂ ಪರಿದು ಲಂಘಿಸಿ ತವ್ಮಿರ್ದೆಯಾಱೆ ತಾಜುತ ।
ಟ್ಟೆನಲಸುವಿಂದಗಲ್ದುವೆನಲಿಲ್ಲಿ ದುರಾಸೆಯೊಳಾರೊ ಬೀಜಿದರ್ ॥ ೨೩

ನಿರವಧಿನಿದಾಘದುರ್ಭರ ।
ಪರಿತಾಪದೊಳಾರಿದು ಕರಿದು ವನಗಜಕುಂಭಂ ॥
ಬಿರಿಯೆ ತಳತಳಿಸಿದುವು ರವಿ ।
ಕಿರಣದ ತತ್ತಿಗಳಿನಲ್ಕೆ ಮುತ್ತುಗಳಾಗಳ್ ॥ ೨೪

ಅಂತುಗ್ರವಾದ ನಿದಾಘದೊಳಾಂ ಪ್ರೋಗುತ್ತಿ
ಮೆಯ್ಮಱಸುಂದಿ ಪಲ್ಮಾಣಗಿ ಕಣ್ ಕುಳಿದುಗ್ರನಿದಾಘತಾಪದಿಂ ।
ಬಾಯ್ಮಿಗೆ ಬತ್ತಿ ನಾಲಗೆ ಸುರುಳ್ದಿರ್ದೆಯಾಱೆ ಮನಂ ಕಟಿಲ್ದು ಮೆ ॥
ಲ್ಸಯ್ಮಿಗಿಲಾಗಿ ದೃಷ್ಟಿ ಪರಿಗುಂದಿ ಸನುಂತಸು ಪ್ರೋಪರಂದದಿಂ ।
ಕೆಯ್ಮುಡಿಸನ್ನೆಯೆನ್ನೊಳಿಸೆಯಲ್ ಕಡುನೀರಡಸಿರ್ದೆನುರ್ವಿಪಾ ॥ ೨೫

ಅಂತು ತೃಷಾಪೀಡಿತನಾಗಿ ಪೋಪಾಗಳ್ ಮುಂದೆ

ಇಭಸಂಹಾರಿರವಪ್ರತಿಧ್ವನಿಗುಹಾರವ್ಯಂ ಜರತ್ತಪಸ ।
ಕ್ಷುಭಿತಂ ಕೂರ್ಮವ್ಯಗಪ್ರ ಕೀರ್ಣಕಟಕಂ ನಿತ್ಯಾಂಧಕಾರಂ ಮಣಿ ।
ಪ್ರಭವಸ್ಥಾನನಿಕುಂಜಮೆನ್ನಿದಿರೊಳಂದೊಪ್ಪಿರ್ದುದಾನ್ನತ್ಯದಿಂ ।
ನಭವನುಂ ಚುಂಬಿಸುತಿರ್ದುದೊಂದು ಕುಧರಂ ಭೂಪಾಲವಿದ್ಯಾಧರಾ ॥ ೬೬

ಮತ್ತಮಾಪರ್ವತಂ ಸರ್ವಜ್ಞನಂತೆ ಬಹಳಗುಹಾನ್ವಿತಮುಂ, ರಾಜಧಾನಿಯಂತೆ ಚಿತ್ರಶಾಲಾಭಿರಾಮವನುಂ, ಋಷಿಸಭಾಮಂಡಲದಂತೆ ಭೃಗುವಿರಾಜಿತಮುಂ, ರಂಗಶೋಭೆಯಂತೆ ಶೃಂಗಾರವಿಲಾಸಮುಂ, ದ್ವಿಜರಾಜೆಯಂತೆ ಸದ್ವಂಶಭೂಷಣನುಂ, ವಿಳಾಸಿನೀಜನದಂತೆ ತಮಾಳಪತ್ರವಿರಾಜಿತಮುಂ, ಕೈಲಾಸಗಿರಿಯಂತೆ ಪಂಚಾಸ್ಯಸಂಚಿತನುಂ, ನಭೋತ್ಪಾತಕದಂತೆ ಪ್ರತಿಸೂರ್ಯವಿಜೃಂಭಿತಮುಂ, ಭಾರತದಂತೆ ಸಕಲಮುಖಮಂಡಿತವ್ಯಾಳಮುಂ, ದಿವಸಶ್ರೀಯಂತೆ ಪತಂಗಪಥರಂಜಿತಮುಮೆನಿಸಿರ್ದುದು. ಅಂತು ಮಲ್ಲದೆಯುಂ,

ಬೆತ್ತದ ಕಂಕಣಂ ಬಳಪದೋಲೆ ಕುರುಳ್ಗಳವಟ್ಟ ಕಾಡ ಹೂ ।
ಕತ್ತರಿಪೀಲಿಯುಳ್ಳುಡೆ ವನೇಭಜವರ್ಮಕ್ತಿ ಕಪಾರಯಷ್ಟಿ ಬಾ ॥
ಗೊತ್ತಿದ ಬಿಲ್ಸರಲ್ ಕದಕದಿಪ್ಪ ಕುಚಂ ಸುಲಿಪಲ್ಲ ಕಾಂತಿ ಚೆ ।
ಲ್ವಿತ್ತಧರಂ ಮನಂಗೊಳಿ ಪ್ರಳಂದಿಯರೊಪ್ಪುವರಾಮಹಾದ್ರಿಯೊಳ್ ॥ ೬೭

ಮಱುಸಿಂಗಂಗಳ ಕಾಸಮಂ ತಿವಿದು ಮತ್ತೇಭಕ್ಕೆ ಬಿಟ್ಟಂತವಂ ।
ತಱುಸಲ್ವನ್ನೆಗಮಾಗಳಾಗಜದಕುಂಭಸ್ಥಾನದೊಳ್ ನೆತ್ತರಂ ॥
ಸುಱಿಸುಱ್ಟಿಂದಿರದೀಂಟಿ ದೋರೆರಸಿಸಿಮುತ್ತಂ ಸುತ್ತಲುಂ ಚೆಲ್ಲಿ ಕಾ ।
ಜೆಱೆಯಂ ಬಂದೊಸೆದಾಯ್ದುವಂ ಶಬರಿ ಮೆಚ್ಚಲ್ ಮಾಡುವಳ್ ಹಾರವುಂ ॥

ಆರುಣಾಕ್ಷಂ ರೌದ್ರರೂಪಂ ಘುರುಘುರಿತಮುಖಿಂ ಶೀರ್ಣಕೃಂಗಂ ಶಿಲಾನಿ ।
ಷ್ಠುರದೇಹಂ ದೀರ್ಘವಾಳಂ ಕಠಿನಖುರಪ್ರಟಂ ರೇಣುಭಾಳಸ್ಥಳಂ ಘ ॥
ರ್ಘರನಾದಂ ವೃತ್ತಕಂಠಂ ಕುಸುಮಧವಳರೋಮಂಥಫೇನಂ ಕರಂ ಭೀ ।
ಕರಮಾಗಲ್ಕೊಪ್ಪಗುಂ ಕಾನನದೊಳಭಸಮಾನಂ ಲುಲಾಯಪ್ರತಾನಂ ॥

ಪುತ್ತಡರ್ದರ್ದವಿಯ್ ಪೊದಳುಗೊಂಡ ಜಟಾವಳಿ ಕೆಯ್ಯ್ ಕಾಲುಗುರ್ ।
ಸುತ್ತಿ ಕಟಂಕಟೀಯಮೆನಲಾದ ಬಸಿಚ್ಚ್ ಪರಮಾತ್ಮರೂಪದೊಳ್ ॥
ಪತ್ತಿದ ಶಾಂತದೃಷ್ಟಿ ಶಶಿಕಾಂತಶಿಲಾಬ್ರುಸಿ ಕಪ್ಪ್ಯನುತ್ತಾನಮೊ ।
ಪ್ಪತ್ತಿರೆ ಜೇರ್ಣತಾಪಸಕುಲಂ ಮೆಱೆದಿರ್ದುದು ತನ್ಮಹಾದ್ರಿಯೊಳ್ ॥ ೫೦

ಅಂತು ಸ್ರೊಗಲ್ತೆ ಗಟಿಯಿಂಬಮಾದ ಪರ್ವತನುಂ ಕಂಡು

ತಪ್ಪಿಲ ತರುತತಿ ನೋಡಲ ।
ನೆಳ್ಪವೆನಲ್ ಕುಸುಮಫಲಮನಾಂತುಪವನಮುಂ ॥
ಕೇಪ್ಪಿಡಿಸುತಿರ್ದುದಿಲ್ಲಿಯೆ ।
ನೋಲ್ಪೆಂ ನೀರಿರದೆ ಮಾಣದೆಂದೆಯ್ದಲೊಡಂ ॥ ೫೧

ಮತ್ಪ್ರಾಣಸಮೂಹಕ್ಕೆ ಲ ।
ಸತಿ ಪ್ರೀತಿಯನೊದವಿಸುತ್ತುಮಿರ್ದುದನಾನು ॥
ಧೃತ್ಪ್ರಮದಮೆಸೆಯೆ ಕಂಡೆಂ ।
ತತ್ಪ್ರಸ್ತದೊಳಮರನದಿಗೆ ಸೆಣಸುವ ಕೊಳನಂ ॥ ೫೨

ಜಳಪಹ್ನಿಧ್ವಾನದಿಂ ಲಹ್ನಿ ಕ್ರಮ ವಿವಿಧಸುಖಾಸೀನದಿಂ ಕೋಕಕೋಳಾ ।
ಹಳಶೋಭಾಯಾನದಿಂ ಪಂಕಜಕುವಲಯಸಂತಾನದಿಂ ತೀರಪುಷ್ಪಾ ॥
ವಿಳಲೀಲೋದ್ಯಾನದಿಂ ನಿರ್ಮಳಮಣಿಮಯಸೋಪಾನದಿಂ ಖೇಚರೀಸಂ ।
ಕುಳಕೇಳೀಸ್ಥಾನದಿಂ ರಂಜಿಸ್ಪುದು ಲಹರಿಕೋದ್ದಂಡನುಂಭೋಜಷಂಡಂ ॥

ಅಂತೆಸೆವ ಸರೋವರಮುಂ ಕಂಡು

ಪಿರಿಯಕೊಳನುದಕಮುಂ ಕಂ ।
ಡುರವಣೆಯಿಂ ಪೊಕ್ಕು ತೇಂಕಿ ಮೊಗೆಮೊಗೆದೊಲವಿಂ ॥
ದೆರಡಳ್ಳಿ ಪಿಟ್ಟಿಗೆ ತೇಗು ।
ಬ್ಬರಿಸಲ್ ಕುಳಿರ್ವನುಳಜಲಮನೀಂಟಿದೆನರಸಾ ॥ ೫೪

ಕರಚರಣಂದೊಳೆದು ಮನಂ ।
ಪರಿತೋಷನನೆಯ್ದಿ ತಂಪು ದೇಹದೊಳೊಲ್ದಾ ॥
ವರಿಸಿ ಕುಳಿಕೊರ್ಡೆ ಸುಖೋ ।
ತ್ಕರದಿಂ ಕುಳ್ಳರ್ದೆನೊಂದು ನಿಮಿಷಮಿಳೀಶಾ ॥ ೫೫

ಅಂತು ಕುಳ್ಳಿರ್ದು ರಮಣೀಯದಿಂದರಲ್ದರುಣಸರೋಜದೊಳ್ ಮೊರೆ
ವ ಮಧುಕರಗಾನಕ್ಕೆ ಕಾಣಿವಂತೆ ಸುಖಿವ ಕಳಿಹಂಸೆಗಳಿಂ, ಕಲಹ್ಲಾರಕಿಂಜ
ಲ್ಕಪರಾಗದಿಂ ಮುಂಜು ಮುಸಗೆ ಸಂಜೆಯಾಯ್ತೆಂದಂಜುವ ಚಕ್ರವಾಕಂಗಳಿಂ,
ಬೆಳ್ಮುಗಿಲ್ದುಱುಗಲಂ ತರತರದಿಂ ತೇರಯಿಸುವ ತೆರೆಗಳಿಂ, ಪಥಿಕಾರಿಶ್ರಾಂ
ತಿಯಂ ಪರಿಹರಿಸಲ್ ಕರೆವಂತೆ ರವಂ ಮಿಗುವ ನೀರ್ವಕ್ಕಿಗಳ ಕೂಜಿತಂಗ
ಳಿಂ, ಹಿಮಶೈಲಂ ಕರಗಿ ಸರಸಿಯಾವಂತೆಸೆವ ಪ್ರಾಗ್ಭೊಳದ ರಮಣೀಯತೆ
ಯಂ ಮನಂ ದಣಿಯೆ ನೋಟ್ಪಾಗಳ್

ಅತಿಕಾಯಂ ಸಾಹಸಾಂಕಂ ಮುಕುಳಿತಕರಸ್ಫೀರೇರುಷಂ ತೀವ್ರಚಿಂತಾ
ನ್ವಿತಚಿತ್ತಂ ಬದ್ಧವೇಣೀಜಟಿಲತನಭಯಂ ಸಂತತಂ ಕುಂಡಲಾಂದೋ ॥
ಳಿತಕರ್ಣಂ ದಿವ್ಯತೇಜೋವಮುನಭಿನವರೂಪಂ ಲಸಚ್ಚೈಲಶೃಂಗ ।
ಸ್ಥಿತನಿರ್ದಂ ಛಾಯೆ ನೀರೊಳ್ ಪೊಳೆಯೆಪದೆಪಿನಿಂ ಕಂಡೆನಾಗಳ್ ನರೇಂದ್ರಾ॥

ಅಂತು ನೀರೊಳ್ ಪೊಳೆದ ನೆಲಂ ಕಂಡು ಪರ್ವತಮುಂ ನೋಟ್ಪುದುಂ

ಶೃಂಗಾಗ್ರದಿಂ ನೆಲಕ್ಕೆ ಮ ।
ನಂಗುಂದದೆ ಬಿದ್ದು ಜೀವಮಂ ತೊಱೆವೆನೆನ್ದು ॥
ತ್ತಂಗವಿಸಿ ಬೀೞ್ವತಿರ್ದನ ।
ನಂಗೆಯ್ದಿಂದಾಂತೆನೊವ್ದನಂ ನೃಪತಿಲಕಾ ॥ ೩೨

ಅಂತು ಬೀೞ್ವಾತನಂ ನಾಂ ಕೆಯ್ಯೊಳಾಂಪ್ರದುಂ

ಏಕೆಲೆ ತಂದೆಯಾಂತೆ ಗತಭಾಗ್ಯನನೂರ್ಜಿತಪಾಪಕರ್ಮನಂ ।
ಭೀಕರಜೀವವಂಚಕನನುಗ್ರನನಿಷ್ಟಸುಹೃದ್ವಿಯೋಗಿಯಂ ॥
ಲೌಕಿಕಬಾಹ್ಯನಂ ಬಗೆಯೆ ಕಲ್ಲಿರ್ದೆಯನಂ ಮಿಗೆ ಕಷ್ಟಚಿತ್ತನಂ ।
ಶೋಕಶರೀರನಂ ಸುಖವಿದೂರನನುತ್ಕಟದುಃಖಭಾರನಂ ॥ ೩೪

ಭಾವಿಸೆ ಚಿನ್ತಾನಳನಿಂ ।
ಜೀವುದಱಿಂ ಪ್ರಿಯರ ಸಂಗದಿಂದಗಲ್ದು ಕರಂ ॥
ನೋವ್ದಱಿಂದಡವಿಗಳೊಳ್ ।
ಸಾವುದೆ ಲೇಸಲ್ತೆ ನೀತಿವಂತರ ಮತದಿಂ ॥ ೩೫

ಅದಱಿಂದಂ ಪಾತಕನಂ ।
ಬರ್ದುಕಿಸದಿರ್ ಮುರಳಿ ನೂಂಕೆನುತ್ತಾತಂ ಮ ॥
ತ್ಪದಯುಗಳಕ್ಕೆ ಱಗಿದೊಡೆ ।
ತ್ತಿದೆನೆನ್ನಯ ಕಣ್ಣೊಳುದಕಮುಳ್ಳೈಡುವಿನಂ ॥ ೪೦

ಅಂತಾಮರಣನಿಶ್ಚಯದಿಂ ಮಿಗಿಲಾದ ಸುಖಮೆನ್ನೊಳಾಗಲೆಂತಾನುಂ ಸಂತೈಸಿಕೊಂಡಾತನನಾನಿಂತೆಂದೆಂ:—

ಇನಿತಲಿಲೇತಱಿಂ ನಿನಗೆ ಸಂಭವಿಸಿತ್ತೆಲೆ ತಂದೆ ಪೇೞೆನಲ್ ।
ಮನದೊಳಟಿಲ್ದು ನಿಂದು ಬಿಸುಸುಯ್ದು ಕರಂ ಬೆಱಿಗಾಗಿ ಪೂರ್ವಮಂ ॥
ನೆನೆದು ವಿಧಾತೃಕಲ್ಪನೆಯನಾವನೊ ವಿಾಱುನನೆಂದು ಮತ್ತೆ ಭೋಂ ।
ಕೆನೆ ತಿಳಿದೆನ್ನ ನೀಕ್ಷಿಸಿ ನಿಜಸ್ಥಿತಿಯಂ ನುಡಿಯಲ್ಕೊಡರ್ಚಿದಂ ॥ ೪೧

ಸಕಲಧರಣೀಶಮಣಿಮಯ ।
ಮಕುಟಸ್ಖಲಿತಪಾದಪೀಠನಭಿನವಲಕ್ಷ್ಮೀ ॥
ಮುಕುರಂ ಮಗಧೋರ್ವೀಪಾ ।
ಲಕನೆಸೆವಂ ರಾಜಹಂಸನೆಂಬ ನರೇಂದ್ರಂ ॥ ೪೨

ಆತನ ಸಚಿವರೊಳತಿವಿ ।
ಖ್ಯಾತಂ ರತ್ನೋತ್ಪತ್ತಿವಂ ದಲೆಂದೆನ್ನ ಪೆಸರ್ ॥
ಮಾತೇಂ ರತ್ನವ್ಯವಹಾ ।
ರಾತುರದಿಂ ವಾರ್ಧಿಗೆಯ್ದಿದೆಂ ನಲವಿಂದಂ ॥ ೪೩

ಹರಿ ತನ್ನಳಿಯಂ ತಾನಾ ।
ಹರಿಯಳಿಯಂ ತನ್ನೊಳೊಲ್ದು ಹರಿಯಿರ್ಪಂ ತಾಂ ॥
ಹರಿಯೊಳಗಿರ್ಪನೆನಲ್ ಸಾ ।
ಗರದಾಧಿಕ್ಯನುನಂದಾವನಭಿವರ್ಣಿಸುವಂ ॥ ೪೪

ಅಂತೆಸೆವ ಸಮುದ್ರಮಧ್ಯದಲ್ಲಿ ಸುವರ್ಣದ್ವೀಪಮನೆಯ್ದಿರ್ಪುದುನುಲ್ಲಿ ರತ್ನದತ್ತನೆಂಬ ವಣಿಗ್ವರಂ ತನ್ನ ತನುಜೆಯುಪ್ಪ ಹೇಮಪ್ರಭೆಯುನೆನಗೆ ಕೂಡಲವಳ್ಗಮೆನಗಮನುದಿನಂ ನವಪ್ರಿಯಮಾಗಿ,

ಸಮುಯುತಾವನಂ ಸಮಭ್ರೀ ।
ಸಮಸಾಖ್ಯಂ ಸಮಗುಣಂ ಸಮಪ್ರೀತಿ ಸಮ ॥
ಪ್ರಮದಂ ಸಮಸತ್ವಂ ಸಲೆ ।
ಸಮನಿಸಿತಿವರ್ಗಕ್ಕೆ ದಯಾಂಬುನಿಧಾನಾ ॥ ೪೫

ಅಂತು ಸಮಸುಖದಿಂದಿರಲ್ ಕಿಱುದು ದಿನದಿಂ ಮೇಲೆ ತತ್ಕಾಂತೆಯುಂತ
ರ್ವತ್ನಿಯಾಗಲಾರತ್ನದತ್ತನಿಂ ಕಳಿಪಿಸಿಕೊಂಡು ಮನೋವಲ್ಲಭೆಯುಮಾ
ಕೆಯ ದಾದಿಯುನುಮಾನುಮಿಂತು ಮೂವರುಂ ಪಡಂಗನೇಱಿ ನಡುವಗಲೊಳ್
ಬಪರ್ವಾಗಳ್,

ಇನ್ನೇವೇಱ್ಪಿನೆನಣ್ಣ ಬಲ್ಸಿಡಿಲಪ್ಪೊಯ್ಲಂ ಮಾರಿಯುದ್ರೇಕಮುಂ ।
ಖಿನ್ನಪ್ರೀತಿಯನೆಯ್ದೆ ಪೆರ್ಚಿದೆರ್ದೆಗಿಚ್ಛಂ ವಾರ್ಧಿಯೊಳ್ ತದ್ಬಹಿ ॥
ತ್ರನ್ನೀರ್ಪೊಯ್ದು ಮುಜುಂಗಲಾಂ ಬರ್ದುಕಿದೆಂ ಪಾಪಿಷ್ಠನಾಗಿರ್ದನ ।
ನ್ನೆನ್ನರ್ಥಾಂಗಿ ಬಲೊಕ್ಕ ತೀರ್ದ ಬಗೆಯಂ ಕೈಕೊಂಡೆನಾಂ ತೀರದೊಳ್ ॥

ಪ್ರಿಯತಮೆಯನಗಲ್ದ ಶರೀ ।
ರಿಯೆ ಜೀವನವೇವುದೆಂದು ಮರಣಮನಾಂ ನಿ ॥
ಶ್ಚಯಮಂ ಮಾಡುವೆ ಪದದೊಳ್ ।
ಬಯಲ ರವಂ ಪುಟ್ಟತಂತರಿಕ್ಷದೊಳಾಗಳ್ ॥ ೪೬

ಅದೆಂತೆನೆ:—

ಪದಿನಾಱು ವರ್ಷದಿಂದೀ ।
ಮದನಾದ್ರಿಯೊಳಿೊಲ್ದ ಕಾಶ್ಮೆ ರತೊನ್ನೀದ್ಭವ ನೀಂ ॥
ಸುದತಿಯನೆಂದೆಂದಾಕಾ ।
ಶದ ವಾಕ್ಯಂ ಪುಟ್ಟತದ್ಭುತಧ್ವನಿಯಿಂದಂ ॥ ೪೭

ಅದುಕಾರಣಮಿಾಕಾಮಗಿರಿಗೆ ಬಂದು ಪದಿನಾಱು ವರ್ಷಂ ತುಂಬಿತ್ತೆನ
ಗಿನ್ನು ಮರಣಮೆ ಶರಣಮೆಂಬನ್ನೆಗಂ

ಪಿತನೆಂಬುದನಱಿದತಿದುಃ ।
ಖಿತನಾದೆಂ ದೇಸೆಗೆಟ್ಟು ಮಚ್ಚಿತ್ತದೊಳೀ ॥

ಕತೆಯಂ ಕೇಳ್ದವರಳ್ಕಿದೆ* ।
ಧೃತಿಗುಂದದೆ ಬಲ್ಪುವಿಡಿದು ಸೈರಿಸಿದಪ್ಪುದೇ ॥ ೪೯

ಅಂತು ತತ್ಪ್ರಪಂಚಮಂ ಪೂರ್ವದೊಳ್ ಕೇಳ್ದಱಿವಿನಿದಱಿಂದಾತನೆನ್ನ ಪಿತನೆಂದಱಿದು ಆಶ್ವಾಸಿಸುವೆನೆಂದನುಮಾನಿಸುವಾಗಳ್ ಮತ್ತೊಂದು ದೆಸೆಯಲ್ಲಿ

ಎನಗಾರಿರ್ದಪರಕ್ಕ ಮುಪ್ಪಿನವಳೆಂ ಕಣ್ಗಿಟ್ಟ ಬಿಟ್ಟಂತು ಕಾ ।
ನನದೊಳ್ ವಹ್ನಿಮುಖಕ್ಕೆ ಸಲ್ವ ಬಗೆಯಂ ಕೈಕೊಳ್ವರೇ ಪೇೞಿಳಾ ॥
ವನಿತಾರತ್ನವೆ ಕಾಮರಾಜವಿಜಯಂ ಕೈಸೂಱೆವೋಯ್ತಕ್ಕಟಂ ।
ಬಿನಿತಾರ್ತಧ್ವನಿ ಕೇಳಲಾಯ್ತೆನಗೆಲೇ ರಾಜಾಧಿರಾಜೋತ್ತಮಾ ॥ ೫೦

ಅಂತು ಪೊದಲ್ದಾರ್ತಧ್ವನಿಯಂ ಕೇಳ್ದು ರತ್ನೋದ್ಭವನನೊಂದಶೋಕತರುವಿನ ನೆಲಿಲೊಳ್ ಕುಳ್ಳಿರಿಸಿಯಾಧ್ವನಿಯ ಬೞಿವಿಡಿದೈದಿ ನೋಲ್ಪಿನ್ನೆಗಂ

ಜಗುಳ್ದ* ಕಚಾಗ್ರಮುಂ ಸಸಿನೆಗೈದು ಕುಚಂಗಳನುತ್ತರೀಯದಿಂ ।
ಬಿಗಿದು ಪೊದಲ್ದ ಮುಂಜೆಱಗನೊಪ್ಪಿರೆ ಸೆಕ್ಕಿಯಳುರ್ವ ಕುಂಡವ ॥
ಗ್ನಿಗೆ ಬಲವಂದು ತನ್ನ ನಿಜದೇವತೆಯಂ ನೆನೆದಿರ್ಕ್ಕರಂಗಳಂ ।
ಮುಗಿದು ಚಿತಾಗ್ನಿಯಂ ಪ್ರಗುವಳಂ ಮಿಗೆ ಕಂಡೆನಿಳಾಧಿನಾಯಕಾ ॥ ೫೧

ಅಂತಗ್ನಿಪ್ರವೇಶಮುಂ ಮೂರ್ಪಿಳಂ ಕಂಡು

ಭರವಸದಿಂದೆಯ್ದಿ ಪೊದ ।
ಲ್ದಿರಿಯೊಳ್ ಬೀೞ್ವಿವಳ ಬಾಹುಲತೆಯುಂ ಪಿಡಿಯಲ್ ॥
ತರಳತರಭೀತಿರಸಮಂ ।
ಕುರಿಸಲ್ ತತ್ತರುಣಿಯೆನ್ನನಂದಿಂತೆಂದಳ್ ॥ ೫೨

ಅಡವಿಯೊಳಿಂತು ಬಂದು ಪರನಾರಿಯನಗ್ನಿಮುಖಪ್ರವೇಶಿಯಂ ।
ಪಿಡಿವ್ರದು ನೀತಿಯಲ್ತು ಬಿಡು ತನ್ಮ ಮನಃಪ್ರಿಯನಂಗಸಂಗಮಂ ॥
ಪಡೆದಪೆನಿಂದು ವಾಸವನಿವಾಸದೊಳೆಂದುಸಿರ್ವನ್ನೆಗಂ* ಕೆಲಂ ।
ಬಿಡಿದಬಿತಿರ್ವ ವೈದ್ಯಸತಿಯೆನ್ನಡಿಯೊಳ್ ಪೊರಳ್ದಳ್ ನೃಪೇಶ್ವರಾ ॥ ೫೩

ಆಂತಾವ್ಯದ್ದಸತಿಯೆನ್ನಡಿಯೊಳ್ ಪೊರಳಿ

ಏಳ್ತಾಯೆ ಕಿಱಿಯನಡಿಯೊಳ್ ।
ಬೀೞ್ತಿರ್ದನುಚಿತವಿಾಸರೋಜಾನನೆ ತಾ ॥
ನೇೞ್ತಿಂದಳೀಕೆ ಶಿಖರಿಗೆ ।
ಪೇೞ್ತಿಡೆಯದೆನಲ್ಕೆ ಪೇೞಲುದ್ಯತೆಯಾದಳ್ ॥ ೫೮

ಅದೆಂತೆನೆ:—

ಭೂ ಪ್ರೋಗಲಿಲ್ಕೆ ಸುವರ್ಣ ।
ದ್ವೀಪಂ ಶರನಿಧಿಯ ನಡುವೆ ಮೆಱೆದಿರ್ಪುದು ತ ॥
ದ್ದ್ವೀಪದೊಳಿರ್ಪಂ ಸಕಳಕ ।
ಳಾಪತಿ ಸಲೆ ರತ್ನದತ್ತನೆಂಬ ಧನಾಢ್ಯಂ ॥ ೫೯

ಆಧನಿಕನಣುಗಿಯಿಾಪ್ರ ।
ಣ್ಯಾಧಿಕೆ ಪೆಂಪೆಸೆವ ಪೆಸರ ಹೇಮಪ್ರಭೆ ಬಿಂ ॥
ಬಾಧರೆ ಲಾವಣ್ಯರಸಾಂ ।
ಭೋಧಿ ಕಳಾವತಿ ನೆಗಲ್ದಿ ಕನ್ಯಾರತ್ನಂ ॥ ೬೦

ಇವಳನುಱೆ ರತ್ನದತ್ತಂ ।
ವಿವಿಧಾಲಂಕಾರಸಹಿತವೊಲವಿಂ ರತ್ನೋ ॥
ದ್ಭವನೆಂಬ ಮಗಧನೃಪಸಚಿ ।
ವವರಂಗಿತ್ತಂ ಜಸಂ ಪದಿನುರ್ಡಿಸುವಿನಂ ॥ ೬೧

ಅಂತು ರತ್ನದತ್ತನೀಕನ್ಯಕೆಯಂ ರತ್ನೋದ್ಭವಂಗೆ ಕುಡಲಿರ್ವರ್ಗ
ನ್ಯೋನ್ಯಸ್ನೇಹಂ ಕೈಮಿಕ್ಕಿರೆ

ಕಾಮನ ತೂಣೀರಂ ಸುಮ ।
ನೋಮಾರ್ಗಣಗರ್ಭದಿಂ ಮನಂಗೊಳಿಪಂತೀ ॥
ಶ್ಯಾಮೆಗೆ ಗರ್ಭಂ ಮೆಱೆಯುಲ್ ।
ಕಾಮಿಸಿದಂ ಕಾಂತನೆಸೆವ ತನ್ನಯ ಪುರಮುಂ ॥ ೬೨

ಅಂತೀಕೆ ಪ್ರಾರ್ಥಗರ್ಭವಂ ತಳೆಯಲಿಕೆಯು ವಲ್ಲಭನಪ್ಪ ರತ್ನೋದ್ಭವಂ ತನ್ನ ಪತ್ತನಕ್ಕೆ ಪ್ರೋಗಲ್ ರತ್ನದತ್ತನಿಂ ಕಳಿಪಿಸಿ ಕೊಂಡುವಿಾಕೆಯ ನೊಡಗೊಂಡಾಂ ಸಹಿತವುಂಭೋಧಿಯೊಳ್ ಬಹಿತ್ರವುನೇಱಿ ಬರ್ಪಾಗಳ್

ಮೈನಾಕಗಿರಿ ಮಹಾಂಬುನಿ ।
ಧಾನದೊಳಲ್ದಿಂತೆ ತಬ್ಬಿಹಿತ್ರಂ ಮುಂಬಿಗಲ್ ॥
ಮಾನಿನಿಯಂ ತಳ್ಕಿಸಿಕೊಂ ।
ಡಾನೊಯ್ಯನೆ ಪುಣ್ಯದಿಂದೆ ತಡಿಗೇಱಿಂದೆಂ ॥ ೫೯

ಅಂತು ತಡಿಗೆ ಬಂದೀಕೆಯ ಬಱಿಲ್ಕೆಯಂ ನಾನಾಱಿಸುತ್ತಿರೆ ತನ್ನ ಪತಿಯಂ ಕಾಣದೆ ಮುಂಬಿಂಗಿದನೆಂದನುನಾನಿಸಿ

ಗಹಗಹನೆ ನಕ್ಕು ನೋಡಾ ।
ನಿಹಪರಸೌಖ್ಯಕ್ಕೆ ಬಾಹ್ಯವಾಗಿಯುವಿನ್ನು ॥
ಮ್ಮಹದಿಂ ಜೀವಿಪೆನೆಂದೇ ।
ಕೆ ಹೀನಬುದ್ಧಿಯನೊಡರ್ಚಿದವೆನೊ ವಿಧಾತ್ರಾ ॥ ೬೦

ಎಂದು ರತ್ನೋದ್ಭವಂ ಮುಂಬಿಂಗಿ ತಾನುಱಿದಿರ್ದುದರ್ಕೆ ಪೇಸಿ ಮರಣೋಪಾಯವಂ ನೆನೆಯುತ್ತಿರೆ,

ಹೇಮಪ್ರಭೆ ನೀಂ ಕೂಡುವೆ ।
ಕಾಮಾದ್ರಿಯೊಳಧಿಕನಪ್ಪ ರತ್ನೋದ್ಭವನಂ ॥
ವಾಮೆ ಪದಿನಾಱು ವರ್ಷ ।
ಕ್ಕೀಮಾತಂ ನಂಬಿರೆಂದುದಾಕಾಶರವಂ ॥ ೬೧

ಅಂತಶರೀರವಾಕ್ಯಮಂ ಕೇಳ್ದುದಱಿನೀಕೆಯು ಮರಣಚಿಂತೆಯಂ ಬಿಡಿಸಿ ಕಾಮಶೈಲಕ್ಕೆ ಪೋಗಲುದಿರ್ಪಾಗಳ್

ನೀರೊಳ್ ಬಂದ ಬಬಿಲ್ಕೆಯಿ ।
ನೋರಂತಿರೆ ಬೇನೆ ಮುಸಗಿ ಹೇಮಪ್ರಭೆ ವಿ ॥
ನಾರದಿನಾಗಳ್ ಪಡೆದಳ್ ।
ವಾರಿಜಸಖನಂತಿರೆಸೆವ ಪುತ್ರನನೊಲವಿಂ ॥ ೬೨

ಅಂತು ಪತೆದು

ಇನ್ನುಸಿರ್ವುದೇನೊ* ತತ್ಸುತ ।
ನನ್ನೊೀಡಲ್ ಪಡೆದಳಿಲ್ಲ ಪಾಪಿಷ್ಠೆಯೆನ ॥
ಪ್ಪೆನ್ನಯ ಕೆಯ್ಯೊಳ್ ಕುಡಲಾಂ ।
ಬೆನ್ನೀರ್ಗೆಂದೊಂದು ಪ್ರರವನಜಸಲ್ ಪೋದೆಂ ॥ ೬೩

ಅಂತಾಶಿಶುವಿನ ಮೆಯ್ಯ್ ಮಾಸಂ ತೊಳೆಯಲ್ ಬಿಸುನೀರಂ ದೊರಕಿಸ ಲೆಂದೊಂದು ಪ್ರರದ ದಾರಿಯೊಳ್ ಬರುತಿರ್ಪಾಗಳ್

ಪಾಪಹರಮೂರ್ತಿ ಕಟ್ಟಿದ ।
ಕೌಪೀನಂ ಮಿಱುಪ ಜಡೆಗಳೊಪ್ಪುವ ಹರಯಂ ॥
ಲೇಪನವಿಭೂತಿ ರಂಜಿಪ ।
ತಾಪಸಸುತನೆನ್ನನಂದು ಭೋಂಕೆನೆ ಕಂಡಂ ॥ ೬೪

ಅಂತೆನ್ನಂ ಕಂಡೀಬಾಲಕನೆಲ್ಲಿಯವನೆಂದಾಮುನಿಕುಮಾರಂ ಕೇಳ್ದ ಸಮು ಯದೊಳ್

ಕಾಡಾನೆ ಸೊರ್ಕಿ ತರುಗಳ ।
ನೀಡಿಱಿಯುತ್ತೆನ್ನಿದಿರ್ಗೆ ಬರಲೆನಗೆ ಭಯಂ ॥
ಮೂಡೆ ಕರದೆಳೆಯುಮಗನಂ ।
ನೋಡದೆ ಬಿಸುಟೀಕೆಯಿರ್ದ ತಾಣಕ್ಕೊಗೆದೆಂ ॥ ೬೫

ಅಂತಾಮಗನಂ ಬಿಸುಟೀಕೆಯ ಸಮೀಪಕ್ಕೆ ಬಂದೆಲ್ಲಿಯುಮಿರಲಣ್ಮದಾ ಕಾಶವಾಕ್ಯಮುಂ ಕೇಳ್ದೀಕಾಮುಕೈಲಕ್ಕೆ ಬಂದೀಕೆಯ ಕಾಂತಾಗಮನಮುಂ ಚಿಂತಿಸುತಿರ್ದಿರ್ಪೊೞ್ತಿಂಗೆ ಪದಿನಾಱು ವರ್ಷಂ ತುಂಬೆ

ನನ್ನಿಯ ಬರಿಸಂ ತುಂಬಿ ।
ತ್ತೆನ್ನರಸಂ ಬಾರನೆಂದು ಶಿಖಿಯಂ ಪುಗುವಳ್ ॥
ತನ್ನ ಮನದುರಿಗೆ ಸೈರಿಸ ।
ದಿನ್ನೀನೆಂ ಪೇೞ್ವೆನೆಂದು ಸುೞ್ಟನೆ ಸುಯ್ದಳ್ ॥ ೬೬

ಎಲೆಯರಸ ವೃದ್ಧೆಪೇಳ್ದಿದಱಿಂದೆಮ್ಮ ತಾಯೆಂದಱಿದಾಕೆಯನೆಂತಾನುಂ
ಸಂತಯಿಸಿ ನಿನ್ನ ವಲ್ಲಭನಂ ತೋಱುವಪೆಂ ಬಾಯೆಂದಶೋಕತರುವಿನ ತ
ಲದೊಳಿರ್ದ ರತ್ನೋದ್ಭವನಂ ತೋಱಿಸೆ

ಭೋಂಕೆನಲೊರ್ಬರೊರ್ಬರ ಮುಖಂಗಳನೀಕ್ಷಿಸಿ ಬಾಷ್ಪವಾರಿಯೊಳ್
ತೇಂಕಿದರಪ್ಪಿಕೊಂಡರತಿಸಮ್ಮದದಿಂ ವಿಗೆ ದುಃಖಭಾರಮುಂ ॥
ನೂಂಕಿದರಂತರಿಕ್ಷವಚನಂ ದಿಟಮಾಯ್ತು ಸಮಸ್ತಭಾಗ್ಯಮಿಂ ।
ದಂಕುರಿಸಿತ್ತೆನುತ್ತೆ ಮಗುಳ್ದಿನ್ನ ಮುಖಾಬ್ಜವನೊಲ್ದು ನೋಡಿದರ್ ॥ ೬೭

ಅಂತು ನೋಡಿ ಎಲೆ ಮಹಿಮ ನೀನಾರೆಂದೆನ್ನಂ ಬಿಸಗೊಳಿ

ವಾರಣಮಂ ಕಂಡಂಜೆ ಮ ।
ಹಾರಣ್ಯದೊಳೀಕೆ ಬಿಸುಟು ಪೋದ ಕುಮಾರಂ ॥
ಕಾರಣದೊಳಿಲ್ಲಿಗೆಯ್ದಿದೆ ।
ನಾರಯ್ಯಲ್ ನಿನ್ನ ಪುತ್ರನೆಂದೆಱಗಿರ್ದೆಂ ॥ ೬೮

ಇವನೇವೇಟ್ಟಿವೆಂ ಭಾಗ್ಯದೇಳ್ಗೆ ರವನಾನಂದಾರ್ಣವಂ ಮೇರೆದ ।
ಪ್ಪಿದ ಚೆಲ್ವಂ ನಿಜಪುಣ್ಯಪುಂಜವೆನಿಸುಂ ಕೈಸಾರ್ದುದಂ ಮುಂಗಳಾ ॥
ಸ್ಪದಸಂಸಾರಸುಖಂ ಫಲಂಬಡೆದುವಂ ಚಿತ್ತೋತ್ಸವಂ ಕೆಚ್ಚುಗ ।
ಟ್ಟಿದುದಂ ಮಾನಸಜನ್ಮಸಾರದೊದವಂ ನೇತ್ರಾಬ್ಜಸಾಫಲ್ಯಮುಂ ॥ ೬೯

ಇಂದಿನ ಸೌಖ್ಯವಿಂದಿನ ಮುಹೋನ್ನತಿಯಿಂದಿನ ಭಾಗ್ಯದೇಳ್ಗೆ ಮ ।
ತ್ತಿಂದಿನ ಚಿತ್ತದುಜ್ಜ್ವಳಿಕೆಯಿಂದಿನ ಪುಣ್ಯಫಲಂ ಸಮಂತು ನ ॥
ಮ್ಮಿಂದಿನ ಮೆಯ್ಮೆಯಿಂದಿನನುರಾಗಸುಖಂ ಪರಿಭಾವಿಸಲ್ ಕರಂ ।
ಚಿಂದನುದಾಯ್ತೆನುತ್ತೆ ಮನದುತ್ಸವವಾರಿಧಿಯೊಳ್ ಮುಬ್ಬಿಂಗಿದರ್ ॥ ೭೦

ಅಂತೆನ್ನಂ ತೆಗೆದು ಮುಹುರ್ಮುಹುರಾಲಿಂಗನಮೂರ್ಧಘ್ರಾಣನಂ ಗೆ
ಯ್ದು ಸಂಪೂರ್ಣಮನೋರಥರಾದ ತಾಯ್ತಂದೆಗಳ್ಬೆರಸು ಚಿತ್ತೋತ್ಸವ
ವುಂದುವರಿಯಲಲ್ಲಿಂದೆ ತೆರಳ್ದ ಬರ್ಹಾಗಳ್ ಮುಂದೆ

ನುತಸಾಮಧ್ವನಿ ಹೋಮಧೂಮಪವನಂ ಸಂಭಾಷಣಂ ಮಂತ್ರಜಾಂ ।
ಕೃತಿಯಾಹ್ವಾನವಿಸರ್ಜನಸ್ಥಿತಿ ಮಹಾದೇವಾರ್ಚನಂ ತಾಪಸ ॥

ಪ್ರತಿಪತ್ತಿವ್ರತಮಾತ್ತ ನಿತ್ಯನಿಯಮಂ ಕಾಲತ್ರಯಜ್ಞಾನಮು ।
ಗ್ರತಪಂ ಶಾಂತರಸಪ್ರವಾಹಮೆಸೆಯಲ್ ಚೆಲ್ವಾಯ್ತು ಋಷ್ಯಾಶ್ರಮಂ ॥೭೧

ಮತ್ತಮುಲ್ಲಿ ವ್ಯಗವಾಜಿಯು ಮೆಯ್ಯನುಗುರ್ಗಳಿಂ ತುಱಿಸಿ ಕಂಡೂತಿಯುಂ ಕಳಿವ ಪುಂಡರೀಕಂಗಳಿಂ, ಕಂಠೀರವಕಿಶೋರಂಗಳಂ ಕರದೊಳಟ್ಟಿಯ್ಯನುಯ್ಯಲಾಡಿಸುವ ಕಾಡಾನೆಗಳಿಂ, ಬಿಸಿಲುರವಣೆಗೆ ಬಸವಳಿವ ವಿಷಾಹಿಗೆ ಪತತ್ರಪಲ್ಲವಮಂ ಜಲ್ಲರಿವಿಡಿವ ಕಲಾಪಿಗಳಿಂ, ಜರತ್ತಾಪಸರ್ಗೆ ಚರಣಪರಿಚರ್ಯಮಂ ಮಾಪ್ಪಿ ವನಚರಂಗಳಿಂ, ಮುನಿಕುಮಾರರ ಕೆಯ್ಯಂ ಪಿಡಿದು ಮೆಲ್ಲನಡಿಯಿಡಿಸುವ ಭಲ್ಲೂಕಂಗಳಿಂ, ಕವಲ್ಗೊಂಬಿನೊಳ್ ಕವುಂಡಲಮುಂ ನೇಲಿಲ್ ತುಮುಂಕವಂತೆ ತಳೆದಿರ್ದ ಸಾರಂಗಂಗಳಿಂ, ಋಷಿಕುಮಾರಿಯರ್ಗೆ ನೆರೆವಾಗಿ ಚರಿಯಿಪ ಹರಿಣಿಗಳಿಂ, ಪಣ್ಣಶಾಲೆಯೊಳ್ ಪರಿದ ಪುಷ್ಪರಜಮುಂ ಸಮುಖಿ ತೊಡೆವ ಚಮರೀವ್ಯಗಂಗಳಿಂ, ಹೋಮಧೇನು ಪಂಕ್ತಿ ಮುವಪ್ಪಂತು ಕಾದಿರ್ದ ಗೋಲಾಂಗೂಲಂಗಳಿಂ, ತಾಪಸಕುಮಾರರೊಡನೆ ಚಾಪಳತೆಯಿಂ ಶಾಸ್ತ್ರಾನುವಾದನಂಗೆಯ್ವ ರಾಜಕೀರಂಗಳಿಂ, ಅಗ್ನಿಹೋತ್ರರಕ್ಷಣಾರ್ಥಂ ಬೂತ್ಕೋಲಿಯಂತಿರ್ದ ಎಯ್ಯುಪಂದಿಗಳಿಂ, ನೀವಾರಾಂಕುರಕ್ಕೆ ಶ್ರಮವಪ್ಪಂತು ಲಾಂಗೂಲಪದ್ಧತಿಯುಂ ಮಾಪ್ಪಿ ವರಾಹಂಗಳಿಂ, ಶಾಂತರಸವಾಧಿ ಮೇರೆವಪ್ಪಿದಂತಿರ್ದುದು. ಅಂತುಮುಲ್ಲದೆಯುಂ

ಶ್ರುತಿಮಾರ್ಗಶ್ರವಣಂ ಪುರಾಣಕಥನಂ ಷಟ್ತರ್ಕಸಂಭಾಷಣಂ ।
ಸ್ಮೃತಿಚಿಂತಾವ್ಯಸನಂ ಸದುಪ್ತಪುರುಷಾರ್ಥಾಳಾಪಕಂ ಪೆಂಪ್ರವೆ ॥
ತ್ತಿತಿಹಾಸಸ್ಮೃತಿನಿಸ್ಮಯಂ ಸಕಲಧರ್ಮಾರ್ಥರ್ನೈರೂಪಣ ।
ಸ್ಥಿತಿ ವೈಶೇಷಿಕದಿಂದದೇಂ ಮೆಱೆವುದೋ ಚೆಲ್ವಾಗಿ ಋಷ್ಯಾಶ್ರಮಂ ॥

ಅಂತೆಸೆವ ಋಷ್ಯಾಶ್ರಮಮುಂ ಪುಗಲದಱೊಳ್

ಉರಿಗಣ್ಣೋಜಿದ ಶಂಕರಂ ಫಣಿಕುಲಂ ತಳ್ತುರ್ದೀಶಂ ಮಹಾ ।
ಗರಳಂ ಪೊರ್ದಿದ ಶಂಭು ಚರ್ಮವಸನಂ ಮೆಯ್ವೆರ್ದಂಧಾರಿ ಕೂ ॥
ರ್ಕರೆವೆಣ್ಣಾಗದ ರುದ್ರನೆಂಟೆರ್ಯನಂಟಿರ್ಪಂಗಮುಂ ತಾಳದಂ ।
ಬರಗಂಗಾಧರನೆಂಬ ಪೆಂಪುವಡೆದಂ ಸರ್ವಜ್ಞಯೋಗೀಶ್ವರಂ ॥ ೭೩

ಅಂತಿರ್ದ ಸರ್ವಜ್ಞರೆಂಬ ಯೋಗೀಶ್ವರರಂ ಕಂಡವರಿಂ ಪ್ರಸಾದಮುಂ ಪಡೆದು ನಿರವಧಿಪರಿಚರ್ಯಮಂ ಮಾಡುತ್ತಿರಲಾಂ ಸಂಸಾರಿಯಸ್ಪರ್ಶದಿಂದ ರ್ಥಸಂಬಂಧದಿಂ ಜೀವಿಸುವನೆಂಬುದನವರಱಿತು ಕರುಣಿಸೆ

ಕರುಣಾಳುಗಳಪ್ಪುದಱಿಂ ।
ಪರಿಚರ್ಯೆಯ ತುಷ್ಟ್ಯಯಿಂ ಮುನಿಶ್ರೇಷ್ಠಂ ನಿ ॥
ರ್ಧರಶಾಂತದೃಷ್ಟ್ಯಯಿಂದಾ ।
ದರದಿಂ ಕರೆದೆನಗೆ ಕೊಟ್ಟರೊಂದೌಷಧಿಯಂ ॥ ೭೪

ಅಂತೌಷಧಿಯಂ ಕೊಟ್ಟು ಮತ್ತಮಿಂತೆಂದರ್:—

ಅಡಿಗಡಿಗೆ ನಿಧಾನಂಗಳ್ ।
ಪೊಡವಿಯೊಳಡಿದಿರ್ಪುದಱಿನೀಯೌಷಧಿಯಿಂ ॥
ಪಡೆದಂಜನದಿಂ ಧನಮುಂ ।
ತಡೆಯದೆ ಪಡೆಯೆಂದು ಬೆಸಸಿದರ್ ಮುನಿನಾಯ್ಕರ್ ॥ ೭೫

ಅದಕ್ಕಾಂ ಮಹಾಪ್ರಸಾದಮೆಂದು ಔಷಧಿಯಿಂದಂಜನಂಬಡೆದು ನೋಲ್ಪಾಗಳ್

ನೋಡಿದ ತಾಣಂ ಕನಕದ ।
ಬೀಡಾಗಿರೆ ಕಂಡು ಚಿತ್ತದಾರ್ತಂ ಪಿಂಗಲ್ ॥
ತೋಡಿದೆನರ್ಥಮನೇನಂ ।
ಮಾಡದೊ ಸನ್ಮುನಿಪಸಂಗವಮಾಪದ್ಭಂಗಂ ॥ ೭೬

ಅಂತು ಭರತಕುಲದಂತೆ ಗಾಂಗೇಯಸಂಪತ್ತಿಯಂ ಪಡೆದು ದೇವರಂ ಕಾಣ್ಬುಪಾಯಮಂ ಚಿಂತಿಸುತಿರ್ಪನ್ನೆಗವೊಂದು ದಿವಸಂ

ಮಿಸುನಿಯ ಗಗ್ಗರಂ ಸಸಿನಗೊಂಬಿನ ಚಾರಿಯೆಬಿಲ್ವ ಗಂಟೆಗಳ್ ।
ಮಿಸುಗ್ರರಗೆಜ್ಜೆ ಮಿಂಡಿಗೆಗಳಂ ಮಿಗೆ ಜುಂಬಿಪ ವಾಲವೊಪ್ಪಿ ನಿಂ ॥
ದೆಸೆವೆಳಸಣ್ಣರೋಮತತಿ ಕೊರ್ಬಿದ ಮೆಯ್ ಮಿಗೆ ಹೇಱುವೆತ್ತನ ।
ಡ್ಪಸಹಿತಮಾವನಸ್ಥಳಮನೆಯ್ದಿದನೊರ್ವ ಮಹಾವಣಿಗ್ವರಂ ॥ ೭೭

ದಾವಣಿಗೊಂಟೆಯುಂ ಪೊಡೆವ ಕಾಪ್ಪಿರುಳಿಂ ಪರಿವಾಯ್ವ ಪೇರ್ಗಳಂ ।
ಠಾವಱಿದೊಟ್ಟಲೊಟ್ಟುವ ಸಮಸ್ತಳೆದೊಳ್ ಗುಡಿವೊಯ್ವ ಬೆನ್ನ ಪು ॥
ಪ್ಪೊನ್ನೀರ್ವವ ನೀಗೊರ್ಮೆಳಕ್ಕೆ ಬಲಿಲ್ವೆಲ್ಲಿಗಳಂ ಪೊಡೆವಕ್ಕಿಯಂ ಕರಂ ।
ಭಾವಿಸೆ ಸೇರೆಗೊಂಡಡುನ ಬೋಲಿಗರಿಂದೆಸೆದಂ ವಣಿಗ್ವರಂ ॥ ೭೪

ಅಂತಲ್ಲಿಗೊರ್ಬ ವಣ್ಣವ್ಯವಹಾರಿ ಬಂದು ಬೀಡುಬಿಡುವುದುಮದಱೊಳೊರ್ಬನನೀತನಾರೆಂದಾಂ ಕೇಳ್ವುದುಮಾತನಿಂತೆಂದಂ:—

ವಿಭವಧನೇಶಂ ಪದ್ಮ ।
ಪ್ರಭನೆಂಬಂ ಹೇವುದತ್ತನಣುಗನ ಪರದಂ ॥
..... ।
ಶುಭಚರಿತಂ ಸಲೆ ಪರೋಪಕಾರಚರಿತ್ರಂ ॥ ೭೫

ಎಂದು ಪೇಳ್ವಿದುಮಾನಾತನಲ್ಲಿಗೆ ಪೋಗಿ ಮೃದುಸಂಭಾಷಣಂಗೆಯ್ದಲಾತಂ ಪ್ರೀತಿವಟ್ಟಿ ಕಿಱಿದು ದಿನಮಿರ್ದಲ್ಲಿಂ ತಳದುರ್ ಪೋಪಾಗಳೆನ್ನಂ ಕರೆದು

ಎನ್ನ ನಿಜಮಿತ್ರನಾದೊಡ ।
ನೆನ್ನೊರ್ಗೊಡವಂದು ತತ್ಪುರಶ್ರೀಯನಲಂ ॥
ಪಿನ್ನೊಡಿಯುವಂತೀಶ್ವರ ।
ನುನ್ನತಸಂಪದಮನೀಕ್ಷಿಪುದು ನಲವಿಂದಂ ॥ ೭೬

ಎಂದು ಪೇಟೊಡ್ಡಂತಗೆಯ್ವೆನೆಂದಾತನಿಂ ಕೆಲವೆಲ್ಲಿಗಳನೀಸಿಕೊಂಡು ಅಸಂಖ್ಯಾತನಸ್ತುವಂ ತುಂಬಿ ಸರ್ವಜ್ಞರಂ ಬೀಳ್ಕೊಂಡು ಪದ್ಮಪ್ರಭನೊಡನೆ ಬಂದವಂತೀಪುರವಮುಂ ಕಂಡು

ಅತನು ಪುರಾಧಿಪಂ ತಳವಱಿಂ ಶಶಿ ಪೆರ್ಗಡೆ ಮುಂದನೂರುತಂ ।
ರತಿ ನಗರಾಧಿದೇವತೆ ವಸಂತನಶೇಷಗುಣಪ್ರಬೋಧಕಂ ॥
ಕೃತಕನಗಾಳಿ ಕೋಂಟೆ ಮುಕರಂದರಸಂ ನದಿಯಾದ ತತ್ಪುರ ।
ಸ್ಥಿತಿಯ ವಿಲಾಸಮುಂ ಬಗೆದು ಬಣ್ಣಿಸುವಂ ಶುಕರೂಪನಲ್ಲವೇ ॥ ೭೭

ಆರವುಣೀಯಸುಪ್ತ ಪುರವುಧ್ಯದೊಳೊಪ್ಪುವ ದೇವತಾಗೃಹ ।
ದ್ವಾರಸವುಚ್ಚಳದ್ವಿವುಳಗುಗ್ಗುಳಧೂಪದ ಧೂವು ವುಂಡಲಾ ॥
ಕಾರವುನಾಂತು ವಾರನಿತಾವುಣಿವುಂಟಪಗೋಪುರಂಗಳೊಳ್ ।
..... ವೆಱುಗುಂ ಕಳಕಂಠಸಣಾಯವೆಂಬಿನಂ ॥ ೪೦

ವುಲ್ಲಿಗೆನಳಿಳ ಪರ್ಬಿದೆಳವಾವೆಳವೂವಿನ ಕೆಂದಳಿರ್ಗಳಂ ।
ವೆಲ್ಲನೆ ಚಂಚುವಿಂ ಕರ್ದುಕಿ ಬಗ್ಗಿಪ ಕೋಕಿಲೆ ಕೋಕಿಲಸ್ವನ ॥
ಕ್ಕಲ್ಲಿಯೆ ವೂರ್ಛೆವೋಪ ವಿರಹಿಪ್ರಕರಂ ವಿರಹಿಪ್ರತಾನವುಂ ।
ಫಲ್ಲಶರಂಗಳಿಂದಿಸುವ ವುನ್ಮಥನಿಂದೆಸೆಗುಂ ಬಹಿರ್ವನಂ ॥ ೪೧

ಅಂತು ಪೊಗಟ್ಟ ನೆಗೞ್ತೆ ವಡೆದವಂತೀಪ್ರರವುಂ ಪೊಕ್ಕು ಪದ್ಮಪ್ರಭನಂ ಕಾಣಿಸಿಕೊಂಡಾತನಿಂ ಕೃತಪ್ರೀತನಾಗಿ ಪರಿತೋಷವುನೆಯ್ದಿ ತಾಯ್ತಂದೆಗಳಂ ಸಕಲವಸ್ತುವಂ ಕ್ಷೇವುದಲ್ಲಿರಿಸಿ ಪ್ರತಿದಿನಂ ಹೇವುದತ್ತನನನುವರ್ತಿಸಿ ಕೊಂಡಿರ್ಪನವುಹೇವುದತ್ತಂ

ಸ್ವರಗತಿಚೇಷ್ಟೆಗಳತ್ಯಾ ।
ದರದೀಪ್ತಸ್ಥಾನಶಾಂತಿದಿಙ್ಮಂತ್ರವುನೋ ॥
ಹರಕಾಲವೆಂಬ ಶಕುನದ ।
ಪರಿವಿಡಿಯಂ ಹೇವುದತ್ತನೋದುತ್ತಿರ್ದಂ ॥ ೪೪

ಅಂತಾಹೇವುದತ್ತಂ ಶಕುನಶಾಸ್ತ್ರವುನೋದುವುದಂ ಕೇಳ್ದಾತನಿಂದೆವ್ಮಗ್ರಜನ ವಾರ್ತೆಯನಱಿಯಲ್ಬಪ್ಪುದೆಂದಾತನನಿಂತೆಂದಿಂ:—

ಎನ್ಮ್ಮರಸನೆಂದು ಬಂದಪ ।
ನೆನ್ಮ್ಮ ವುನೋರಥವದೆಂದು ನೆರೆದಪ್ಪುದೆಂದೀ ॥
ನಿನ್ಮ್ಮ ನಿಮಿತ್ತದಿನಱಿದೆನ ।
ಗುವ್ಮ್ಮಹವುಂ ಹೇವುದತ್ತ ವೂಱಿಪ್ಪುದು ನಲವಿಂ ॥ ೪೫

ಎಂದೊಡಾತನಂತೆಗೆಯ್ವೆನೆಂದೊಂದು ದಿನವೆನ್ನನೊಡಗೊಂಡೊಂದು ವನಕ್ಕೆ ಪೋಗಿ ಪಕ್ಷಿಯ ನಿವಿತ್ತವುಂ ಹೇವುದತ್ತಂ ನೋಱ್ಪಾಗಳಾನಾವನವಿಸ್ತಾರವುಂ ನೋೞ್ಪೆನೆಂದು ತೊಱಿಲ್ವಾಗಳ್

ಮನಸಿಜನುತ್ತಮಾರಣಮೊ ಕಾಮನ ಕಾರ್ಮುಕಗೇಹವೋ ಮನೋ ।
ಜನ ಕೃತಕಾದ್ರಿಯೋ ಕುಸುಮಬಾಣನ ಸಜ್ಜೆಯೊ ಕಂತುರಾಜನಿಂ ॥
ಬಿನ ರತಿಶಾಲೆಯೋ ಮದನನೊಡ್ಡಿದ ಕಾಮುಕಕಂಠಪಾಶವೋ ।
ನನೆಕೊನೆವೋದ ಮಾಮರನೊ ಪೇಟೆನೆ ರಂಜಿಸಿದತ್ತು ಮಾಮರಂ॥ ೪೬

ಮತ್ತಮದು ರಾಜಭವನದಂತು ಜಾಳಕವಿಳಾಸವುಂ, ಗ್ರಹಚಾರದಂತು ಪರಾಗಸಂಪೂರ್ಣಮುಂ, ಮುನಿಸಭಾವುಂಡಳದಂತು ಶುಕಪರಿಪ್ರೀತಿಯುಂ, ವಿಳಾಸನೀಜನದಂತು ದ್ವಿಜಚ್ಛೀದಮನೋಹರವುಂ, ಕಲ್ಯಪಾನ ಗೃಹದಂತು ಮಧುಪಪರೀತವುಂ, ವಿಕಸಿತಕವುಳದಂತು ವನನುಧ್ಯಸ್ಥಿತ ಮುಮೆನಿಸಿರ್ಪುದು. ಅಂತುಮಲ್ಲದೆಯುಂ

ಆಸಹಕಾರದ ಕೆಲದೊಳ್ ।
ವಾಸವನಂತನಿಮಿಷಾವೃತಂ ಗಗನದವೋಲ್ ॥
ದೇಸೆ ಮಿಗುವಬ್ಜಹಂಸಾ ।
ವಾಸಂ ಮೆಱೆದಿರ್ಪ ಪೂಗೊಳಂ ರಂಜಿಸುಗುಂ ॥ ೪೭

ಅಂತು ನೈರ್ಮಲ್ಯವಿಲಾಸವಮಾದ ಪೂಗೊಳನ ತಡಿಯೊಳ್

ವನಲಕ್ಷ್ಮಿ ತನ್ನ ಘನಲೋ ।
ಚನದೊಪ್ಪಮನಂಬುಜಕ್ಕೆ ಮಿಾಂಗಳ್ಗೀಯ ॥
ಲ್ಕನುನಯದಿಂ ಬಂದಿರ್ದಪ ।
ಳಿನೆ ಪೊಗೊಳನಲ್ಲಿ ಕಾಂತೆ ಸಂತಸಮಿರ್ದಳ್ ॥ ೪೮

ಮದನಸರೋಜಿನೀಪರಿಮಳಕ್ಕೆ ಅಗಿರ್ದಳಯೆಂಬ ಚೆಲ್ವನೊ ।
ಲ್ದೊದವಿಪ ಕುಂತಳಂ ಚಿಕುರಬಂಧುರಬಂಧಮಹಾಂಧಕಾರಮುಂ ॥
ಬೆದಱಿಸುತಿರ್ಪ ಪಾಂಗಮರುಣಾಧರಧಾತುರಸಾನುಲೇಪನಂ ।
ಪ್ರದಿದ ಕಪೋಲಭಿತ್ತಿ ಮೆಱೆಗುಂ ಪದೆಪಿಂ ಮೃಗಶಾಬನೇತ್ರೆಯಾ ॥ ೪೯

ಅಂತಿರ್ದ ಕಾಂತೆಯಂ ಮೆಲ್ಲನೆ ಸಾರ್ದು

ಅನುರಾಗಂ ಮುಖಪದ್ಮದೊ ।
ಳನುತಾಪಂ ಚಿತ್ತದೊಳ್ ವಿಳಾಸಾದಿಗುಣಂ ॥

ತನುವಿನೊಳತಿಚಿಂತಾಸ್ಥಿತಿ ।
ಮನದೊಳ್ ಪೆಚ್ಚಿರ್ದ ಸತಿಯನೊಸೆದಿಕ್ಷಿಸಿದೆಂ ॥ ೪೦

ಅಂತಾಕಾಂತೆಯಂ ಕಂಡು ನೀನಿಲ್ಲಿಯೊರ್ವಳಿ ಇಪ್ಪುದಕ್ಕೆ ಕಾರಣಮೇನೆಂದಾಂ ಕೇಳಲೊಡಂ

ನಯನತ್ರಿಭಾಗದಿಂದೆ ।
ನ್ನಯ ಮೊಗಮಂ ನೋಡಿ ಮಗುಳ್ದು* ಮಱವಟ್ಟಂತಾ ॥
ಶ್ರಯಮಿಲ್ಲದ ಲತೆ ತೆಂಗಾ ।
ಳಿಯೊಳಲ್ಲಾಡುವೊಲಾಕೆ ಕಣ್ಣೆಸೆದಿರ್ದಳ್ ॥ ೪೧

ಅಂತೆನ್ನಂ ನೋಡಿ ಲಜ್ಜೆಯೊಳ್ ಮುಖಮಿಂಗಿ ಬಿಸುಸುಯ್ದಿಂತೆಂದಳ್:—

ಕೇಳಿಲೆ ಪರೇಂಗಿತಜ್ಞಾ ।
ನಾಲಯ ಬಲ್ಪಿಂದವಂತಿದೇವಂ ಗುಣಸ ॥
ಲ್ಲೀಲಂ ತನ್ನಯ ಮಗನಾ ।
ಜ್ಞಾಲಂಬದಿನಿರ್ಪನಲ್ತೆ ಕಾಪಿನ ಮನೆಯೊಳ್ ॥ ೪೨

ಅಂತವಂತೀಶ್ವರನ ಮಗನಪ್ಪ ದರ್ಪಸಾರಂ ತಮ್ಮ ತಂದೆಯಪ್ಪವಂತೀಶ್ವರನಂ ಸೆಱೆಯೊಳಿಟ್ಟು ತನ್ನ ಪ್ರಧಾನಿಯಪ್ಪ ಚಂಡವರ್ಮನ ಮೇಲೆ ರಾಜ್ಯಭಾರಮುಂ ನಿಲಿಸಿ ತಾನಖಿಳಭೂಮಿಯಂ ಪಡೆವೆನೆಂದು ತಪಂಗೆಯ್ಯಲ್ ಪೋದಂ. ಈಗಳ್

ಜನವಱಿಯೆ ಚಂಡವರ್ಮಂ ।
ಗನುಜನೆನಲ್ ಮೆಱೆವ ದಾರವರ್ಮಂ ಪದಿಪಂ ॥
ತನಗೆ ವಧುವಾಗಬೇಕೆಂ ।
ದನುನಯದಿಂ ಕಾಡುತಿರ್ಪನಾನೊಲ್ಲದೊಡಂ ॥ ೪೩

ಯುವತಿಯರುಂ ಕವಿತೆಯುಮು ।
ತ್ಸವದಿಂ ಸ್ವೀಚ್ಛೆಗಳನೆಯ್ದಲತಿಸುಖಮಕ್ಕುಂ ॥
ತವಕದ ಬಲ್ಪಿಂದೆಱೆಯಲ್ ।
ಭುವನದೊಳತಿವಿರಸವಾಗದಿಪ್ಪುದೆ ಕೆಳೆಯಾ ॥ ೪೪

ನಲವಿಂ ಬೆರಸದೆ ಭೀತಿಯ ।
ಬಲದಿಂ ಬೆರಸಲ್ಕೆ ಕಾಂತೆಯರ್ಗನುರಾಗಂ ॥
ಪಲಿದಾಗೆ ಪುರುಷಂಗೌಷಧಿ ।
ಗುಳ್ಗೆಯವೊಲ್ ಮನಕ್ಕೆ ಹೇಯಮುಂ ಪುಟ್ಟಿಪುಗುಂ ॥ ೯೫

ಎಂದು ಮತ್ತಮಿಂತೆಂದಳ್:—

ಬಂದೆಡೆಗೆಱಗಿದ ಚಿತ್ತವು ।
ನೊಂದೆಡೆಗೆಱೆದುಯ್ವೆನೆಂದು ಬಯಸುನೆ ಮನುಜಂ ॥
ಬಂದ ತೊಱೆಯುದಕಮುಂ ಬ ।
ಲ್ಪಿಂದಂ ಶೈಲಾಗ್ರಿವುಕ್ಕೆ ತಿರ್ದದೆ ಮಾಣಂ ॥ ೯೬

ಅದಂ ಕೇಳ್ದಾಂ ನಿನ್ನ ಚಿತ್ತಮೆಲ್ಲಿರ್ದಪ್ಪುದು, ನೀನಾರ್, ಪೆಸರೇನೆಂದು ಕೇಳ್ವುದುಮಾಕೆ ಲಜ್ಜೆಯಿಂ ತಲೆಗುತ್ತಿಂತೆಂದಳ್:—

ವಿನಯನಿಧಿ ಹೇಮಗುಪ್ತನ !
ತನೂಜೆಯಾಂ ಬಾಲಚಂದ್ರಿಕಾಖ್ಯೆಯೆನುತ್ತಾ ॥
ನನವುಂ ಬಾಗಿ ಮಗುಳ್ದಾ ।
ಯ್ಯನೆ ಮನ್ಮುಖಮುಂ ನಿರೀಕ್ಷಿಸುತ್ತಿಂತೆಂದಳ್:— ॥ ೯೭

ಎಲೆ ಸೊಬಗ ನಿನ್ನ ನೆಮ್ಮಯ ।
ನಿಲಯದೊಳಂ ಪೊಮೆಂ ಕಂಡೆನೆಂದು ಮೊದಲ್ಗೊಂ ॥
ಡಲರಂಬನೆನ್ನನುಱೆ ಕೋ ।
ಟಲೆಗೊಳಿಸುತ್ತಿರ್ಪನೆಂದು ಲಜ್ಜಿತೆಯಾದಳ್ ॥ ೯೮

ಅಂತು ಲಜ್ಜಿತೆಯಾದುದಂ ಕಂಡು ಮತ್ತಮಾನಿಂತೆಂದೆಂ:—

ಸತಿಯರ ಚಿತ್ತಮನಱಿಯಲೆ ।
ಪಿತಾಮಹಂಗರಿದು ಮನುಜರಳವಲ್ತೆಂಬು ॥
ನ್ನತಿಯುಳ್ಳೊಡೇನೊ ನಾನಿ ।
ನ್ನ ತೀವ್ರಚಿಂತೆಯನಗಲ್ವವೆಂ ಕಮಳಾಕ್ಷೀ ॥ ೯೯

ಎಂದೆಂತಾದೊಡಂ ನಿನ್ನ ಚಿತ್ತಕ್ಲೇಶಮುಂ ಪರಿಹರಿಸುವಂತು ದಾರುವರ್ಮನಂ ಕಾಲನಿಳಯವನೆಯ್ದುವಂತೊಂದುಪಾಯಮುಂ ಪೇಳ್ವೆನದೆಂತೆನೆ—

ಇಂದು ಮೊದಲಾಗಿ ನಿನ್ನೊಡ ।
ವಂದಿರ್ದಂ ಬೊವ್ಮರಕ್ಕಸಂ ಮಹಾತ್ಮಾರಂ ॥
ಕಂದೆಱೆದು ನೋಡಲೀಸಂ ।
ಸಂದೆಗಮಿಲ್ಲೆಂದು ಪೇೞ್ವುದೆಲ್ಲರೊಳಬಲೇ ॥ ೧೦೮

ಅದಲ್ಲದೆಯುಂ

ಇಂದುವದನೆ ನಿನ್ನ ಸಂಗದೊ ।
ಳೊಂದಿರುಳಿರ್ದುಬಿದನಾದೊಡಾತಂ ನಿನಗೊ ॥
ಲ್ದೆಂದಿಂಗಂ ನಿಜವಲ್ಲಭ ।
ನೆಂದುಸಿರ್ದನೆನುತ್ತೆ ಪೇೞ್ವುದೆಲ್ಲರೊಳಬಲೇ ॥ ೧೦೯

ಇದಂ ಕೇಳ್ದು ದಾರುವರ್ಮನಂಜಿದೊಡಂಜಲಿ ಅಂಜದಿರ್ದೊಡೆ ಬಟ್ಟಿಕಂ

ಕರಿಕಳಭನನುದ್ಧತಕೇ ।
ಸರಿ ಸೀೞ್ದಿ ಸಿಱುಂಬುಳಾಡುವಂತಿರೆ ಖಳನಂ ॥
ಕರಚರಣಘಾತದಿಂ ಸಂ ।
ಹರಿಸಿ ಯಮಾಲಯವನೆಯ್ದಿಪೆಂ ಕಮಳಾಕ್ಷೀ ॥ ೧೧೦

ಎಂದಾಕೆಗೆ ಪೇೞ್ದು ಕಳಪಿಯಾಂ ಹೇಮದತ್ತನ ಸಮೀಪಕ್ಕೆ ಪೋಗಿ ಶಕುನವೃತ್ತಾಂತಮಂ ಕೇಳ್ದೊಡಾತನಿಂತೆಂದಂ:—

ಭೋರೆನೆ ಮುಟ್ಟುನ್ನತಗತಿ ।
ಚಾರವನೆನ್ನಿದಿರೊಳೆಸಗಿದತ್ತದಱಿಂ ನೀ ॥
ನೀರೞ್ದು ದಿನಸದೊಳ್ ವಿ ।
ಸ್ತಾರಮೆನಲ್ ಕಾಣ್ಬೆಯಲ್ತೆ ನಿಮ್ಮಗ್ರಜನಂ ॥ ೧೧೧

ಎಂದು ಪೇೞ್ದೊಡಾಮಾತಿಂಗೆನುರಾಗಂ ಮನದೊಳುಕ್ಕಿ ಯಾಹೇಮದತ್ತನುಮಾನುಂ ನಿಜನಿವಾಸಕ್ಕೆ ಬರ್ದುದುಂ,

ಮನೆಯೊಳ್ ಮುಂತಣಬೊಳ್ ಪುರ ।
ವನಿತಜೊಳುರ್ವೀ ಶಭವನದೊಳ್ ಸಚಿವನಿಕೇ ॥
ತನಬೊಳ್ ಬೇಗಂ ಪರೆದುದು ।
ವನಜಾನನೆ ಬಾಲಚಂದ್ರಿಕೆಯ ವೃತ್ತಾಂತಂ ॥ ೧೦೪

ಅಂತಾಸುದ್ದಿ ಪರೆದೊಡಂ ದಾರುವರ್ಮನದಂ ವಿಚಾರಿಸಬೆ ಬಾಲಚಂದ್ರಿಕೆಯ ಧ್ಯಾನದೊಳರ್ಪನದೆಂತೆನೆಃ—

ಕಳವಿಂದಿರ್ಪಂಗಂ ಸತಿ ।
ಯಳಿಪಿಂದಿರ್ಪಂಗಮತಿದರಿದ್ರಂಗೆಂ ಕ ॥
ಳ್ಗಿಳಸಿರ್ಪಂಗಂ ಮಿಗೆ ತಾ ।
ನಜಿವ ಭಯಂ ತೋಱಿದೆಂಬುದಿದು ಸಿದ್ಧಾಂತಂ ॥ ೧೦೫

ಇದು ತಾವಿದು ತಾವಲ್ತಿಂ ।
ತಿದು ಸೌಮ್ಯವುಸಸೌಮ್ಯವಿದು ಗುಣಂ ದುರ್ಗುಣವು ॥
ಪ್ಪುದಿದಾಗದಿದೆಂಬ ವಿವೇ ।
ಕದ ಬಗೆಯಂ ಬಗೆಯರಲ್ತಿ ಕಾಮುಕರಿಳೆಯೊಳ್ ॥ ೧೦೬

ಅದು ಕಾರಣವಾಗೆ ಭಯರಸಂ ತೋಱಿದೆ ಪ್ರಿಯರಸಂ ಮೇರೆದಪ್ಪೆ ಮೆಯ್ಮಱೆದು ಮಱೆದಿರಲ್ ಮಱುದಿನಸಂ

ಕಿರಣಸನೂಹವನೊಲವಿಂ ।
ಭರದಿಂ ಪೊಱೆಗಟ್ಟಿ ಪದೆಪಿನಿಂದಂಬರವಂ ॥
ಪರಿಹರಿಸಿ ಪಡುವಣಬ್ಧಿಯ ।
ನರವಿಂದಸಖಂ ವಿಲಾಸದಿಂದಂ ಪಾಯ್ದಂ ॥ ೧೦೭

ಅಂತಸ್ತಮಾನವಾಗಲೊಡಂ,

ಕಪ್ಪರವೀಳೆಯಂ ಕುಸುಮಮಾಲಿಕೆ ಕತ್ತುರಿಗೆಂದದಣ್ಕೆ ಚೆ ।
ಲ್ವಪ್ಪವುಳಾಂಬರಂ ಮಣಿಮಯಾಭರಣಂ ಪುದಿದುದ್ಗುಚಿತ್ರದಿಂ ॥
ದೊಪ್ಪುವ ಪಟ್ಟೆಯಂ ಪದೆಪಿನಿಂ ಸತಿಗಿತ್ತೊಡಗೊಂಡು ಬೇಗದಿಂ ।
ಬಪ್ಪುದನುತ್ತಮಂ ಕೆಲನರಿಂ ಕರೆದಟ್ಟಿದನಾಕುನೂರಿಯಂ ॥ ೧೦೮

ಅಂತಾಕೆಯನವಂ ಕರೆಯಲಟ್ಟಿದುದನಾನಱಿದು

ಮಿಗೆ ಸ್ಫುರದ್ಧೀರೆಯಂ ಮು ।
ಲ್ಲಗಂಟಿನಿಂದುಟ್ಟು ಮೇಲೆ ಪೆಣ್ಣ್ಣಡೆಯಂ ದಿ ॥
ಟ್ಟಗೆ ಸೊಗಸಲುಟ್ಟು ಬಱಿಕೊ ।
ಯ್ಯಗೆ ಸಾರ್ದೆಂ ಬಾಲಚಂದ್ರಕಾಂತಃಪುರವನುಂ ॥ ೧೦೯

ಅಂತು ಸಾರ್ದು ನಾನಾಕೆಯುಂ ದಾರುವರ್ಮನಲ್ಲಿಗೆ ನಡೆಯಲ್ ಪೇಳ್ದು

ಮೃಗಶಾಬನೇತ್ರೆಗಾನಡ ।
ಪಗಿತ್ತಿಯೆಂಬಂತಿರೆಲೆಯ ಮಡಿಸಿ ಕೊಡುತ್ತುಂ ॥
ಮೊಗದೊಳ್ ಮುಳಿಸೊಗೆಯಲ್ ಪಿಂ ।
ದುಗೊಂಡು ಪೋಗಿರ್ದೆನವನ ಬಾಗಿಲೊಳರಸಾ ॥ ೧೧೦

ಅಂತಾವಿರ್ಬರುಂ ಬಾಗಿಲೊಳಿಸ್ರ್ದುದುಂ ದ್ವಾರಿಕರ್ ಪೋಗಿ ಪೇಟೆ ರಕ್ಕಸನ ಭಯಕ್ಕಂಜಿ ಸಕಳಪರಿವಾರಮುಂ ಕಾಪುವೇೞ್ದು ದಾರುವರ್ಮ ನೆಮ್ಮಂ ಕರಸೆ

ವೃದುಚಿತ್ರಂ ಜಾಳಕಂ ಪುತ್ರಿಕೆ ಶುಕತತಿ ಪಾರಾವತಂ ರಾಜಹಂಸ ।
ಚ್ಛದತಳ್ಪಂ ತಾಳವೃಂತಂ ಕುಸುಮವಿತತಿ ತಾಂಬೂಲಕಂ ಕಂಪ್ರನೀರ್ ತೀ॥
ವಿದ ಚಂದ್ರಗ್ರಾನಕುಂಭಂ ವೇಱೆದು ಸೊಗಸಿನಿಂದಿರ್ಪ ತತ್ಕಾವುಕೇಳ್ದೀ ।
ಸದನಕ್ಕಾನೇೞ್ದಿರಲ್ ಭೋಂಕೆನೆ ಮನದೊಲವಿಂ ಕಂಡನಾದಾರುವರ್ಮಂ॥

ಅಂತು ಕಂಡು

ಮೊಗದೊಳ್ ಪಸರಿಸೆ ರಾಗಂ ।
ನಗೆ ಮೊಳೆಯಲ್ ಕೆರೆವಿತತಿ ತವಕಿಸೆ ಧೃತಿಯುಂ ॥
ಮಿಗೆ ಕುಂದಲಾತನಂಗದೊ ।
ಳಿಗೆಯಲ್ ಬಹುವಿಧವಿಕಾರಮಾನದನಱಿದೆಂ ॥ ೧೧೨

ಅಂತು ಮನದೊಳ್ ತವಕಂಗೆಯ್ದುೞಿದು ಕಣ್ಣ್ನಿಯಿಂ ಸಕಲನಾರನಾರಿಯರಂ ಕಳುಪಿಯಾನಿರ್ದೊಡಂ ನಾಣ್ಚಿದೆ

ಇನಿತು ದಿನಂ ಕಾಡಿದೆ ಧೂ ।
ತೆನ್ನಿನ್ನನಾನಿಂದು ಬಿಡುವೆನೇ ಎನುತುಂ ಭೋಂ ॥
ಕೆನೆ ನಿಱುಗೆ ಪಾಯಲಾನಿ ।
ನ್ನೆನಿತಂ ಸೈರಿಸುವೆನೆಂದು ಮುಸುಕಂ ಮಾಣ್ದಂ ॥ ೧೧೩

ಅಂತೆನ್ನ ಮುಸುಕಂ ತೆಗೆದು ಅಡಪವಂ ಕೆಲದೊಳಿಟ್ಟು

ಇಂದು ಕೃತಾಂಕವುಂದಿರಮನೆಯ್ದಿಪೆನೆಂದ ಱಿ ದಾರುವರ್ಮನಂ ।
ಮೂದಲೆವಾಯ್ದು ಮುನ್ನುರನನೊತ್ತಿ ನೆಲಕ್ಕೆಱೆದಿಕ್ಕಲವಂತನಂ ॥
ನೊಂದು ಕರುಳ್ಗಳಂ ರುಧಿರಮುಂ ನೆಱೆ ಕಾಱಿ ಬಲ್ಲು ಬಿಲ್ದಿನೆ ।
ನ್ನಿಂದಮಿನಲ್ಕೆ ಕೊಂದು ಬಲಿಕಾಂ ಪೊಱಮಟ್ಟೆನಿಳಾಧಿನಾಯಕಾ ॥ ೧೧೪

ಅಂತು ಪೊಱಮಡುತುಂ

ತರುಣಿಗೆ ಕ್ಷೋಂಪಿಸಿದೊಡೆ ಬೊ ।
ಮ್ಮರಕ್ಕಸಂ ದಾರುವರ್ಮನಂ ಮುಳಿಸಿಂ ಸಂ ॥
ಹರಿಸಿದನೆನುತಾಂ ಪೊಱಮಡೆ ।
ನೆರೆದಿರ್ದವರತ್ತಲಿತ್ತಲೋಡಿದರೆಲ್ಲರ್ ॥ ೧೧೫

ಆಕಳಕಳದೊಳ್ ಬಾಲಚಂದ್ರಿಕೆಯುಮಾನುಂ ಪೊಱಮಟ್ಟು ಪೋದೆವು. ಆತನ ಮರಣವಾರ್ತೆ ಕರ್ಣಪರಂಪರೆಯಿಂ ಚಂಡವರ್ಮನ ಕಿವಿಗೆಯ್ದೆ

ಮುನಿದೆಯ್ದೆ ಬಾಲಚಂದ್ರಿಕೆ ।
ನೆನೆದಳೆ ಹಾ! ದಾರುವರ್ಮ ನಿನ್ನಯ ಸಾವಂ ॥
ಮನಸಿಜನಿಭಾಂಗ ಹಾ! ಹಾ! ।
ಎನುತುಂ ಗುಣಿ ಚಂಡವರ್ಮನಂದೆಯ್ತಂದಂ ॥ ೧೧೬

ಅಂತು ಬಾಯುಱಿಯುತ್ತುಂ ಬಂದಾತನ ಕಳೇಬರವುಂ ಕೃಪಾನುವಿಂ ಗೊಪ್ಪಿಸಿ ಬಲಿಯಂ

ತನತನಗೆ ಬೇಡಬೇಡೆಂ ।
ದೆನೆ ಸೊಕ್ಕಿಂ ಬಾಲಚಂದ್ರಿಕೆಯನಾರ್ಪಿಂದಿಂ ॥
ಬಿನೊಳರಿಸಿ ಬೊವ್ಮ್ಮರಕ್ಕಸ ।
ನನುವಾನಿಸದೊದೆಯೆ ದಾರುವಮೆಂ ತೀರ್ದಂ ॥ ೧೧೩

ಎಂದು ಜನವಾದಂ ನೆಲೆಗೊಂಡಿರಲಾಂ ವಿಪ್ರವೇಷದೊಳಿರ್ದು ಕೆಲವು ದಿನದಿಂ ಮೇಲೆ ಹೇವುದತ್ತನಂ ಸಾರ್ದು ಬಾಲಚಂದ್ರಿಕೆಯಂ ಬೇಡಲಾತನಿಂತೆಂದಂ:—

ಈಕನ್ಯಕೆಯನದೊರ್ಪಿಂ ।
ಸೋಕಿರ್ಪಂ ಬೊವ್ಮ್ಮರಕ್ಕಸಂ ಬ್ರಾಹ್ಮಣ ನೀ ॥
ನೇಕೆ ಮರುಳಾಗಿ ಪರಿಣಯ ।
ನಾಕಾಂಕ್ಷೆಯೊಳೀವೆ ಜೀವವಂ ವಿಧಿಗೊಲವಿಂ ॥ ೧೧೪

ಎಂದು ಪೇಳ್ದೊಡೆ ಆಬ್ರಹ್ಮರಾಕ್ಷಸನನಿಂತಾದೊಡಂ ಸಂತವಿಟ್ಟು ಕನ್ಯೆಯನೆಱವೆನೆಂದೊಡಾಂ ಕುಡುವೆನೆಂದು ಹೇವುದತ್ತಂ ಶುಭಲಗ್ನವಂ ನಿಶ್ಚಯಂಮಾಡಿ,

ತಳವರ್ಗಂದರ್ ತೋರಣಂ ವೇದಿಕೆ ವಿವಿಧಪತಾಕಾಳಿ ಭೃಂಗಾರಕುಂಭಂ,
ಕಳಸಂ ವೀಳ್ಯಪ್ಪಟ್ಟು ವಾದ್ಯಪ್ರತತಿ ಸಕಲಧಾನ್ಯಾಂಕುರಂ ಸತ್ಪಭಾನುಂ ॥
ಡಳವೇವೋಲ್ಚಾರ್ಣಂ ಮಂಗಳಜಯನಿನದಂ ಪೆರ್ಚಲತ್ಯುತ್ಸವಂ ಕಂ ।
ಗೊಳಿಸಲ್ ಗೃಹ್ಯೋಕ್ತದಿಂ ಕನ್ಯಕೆಯನೊಲವಿನಿಂದೀಯಲುದ್ಯುಕ್ತನಾದಂ॥

ಅಂತನುಗೆಯ್ದುಂ ಲಗ್ನಕಾಂ ಬಂದು ಮಜ್ಜನಂಬುಗುವಾಗಳ್

ಕುಸುಮಿತವಾದ ಪದ್ಮಲತೆಯೊಳ್ ಪೊಸಕೇದಗೆಯೊಳ್ಳಿಸಳ್ಗಳೂ ।
ಳ್ವಿಸೆವಿನಮುಣ್ಮಿ ಪೊಣ್ಮಿದನಿತಲ್ಲದೆ ತುಂಬಿಗಳುಂ ಪೊದಲ್ದಿ ಲಾ ॥
ಲಿಸದಪುವೆಂಬಿನಂ ಸುದತಿಯರ್ ಪದೆದೆನ್ನಯ ದೇಹಮೆಯ್ದೆ ಝೋಂ ।
ಪಿಸುತಿರೆ ಪೂಸಿದರ್ ಮೃದುಕರಾಂಬುಜದಿಂ ನವಗಂಧತೈಲಮಂ ॥ ೧೧೫

ಅನಂತರಂ

ಹರಜೂಟದೊಳೊಲವಿಂದಂ ।
ಎರಗಂಗಾವಾರಿ ಸುರಿವ ತೆಱದಿಂದಂ ಮು ॥

ಚ್ಚಿರದೊಳ್ ಪೊಂಗಳಸಂಗಳ ।
ನರುಣಾಧರೆಯರ್ ಜಲಾಭಿಷೇಕಂಗೆಯ್ದರ್ ॥ ೧೨೧

ಅಂತು ಮಜ್ಜನಂಗೆಯ್ಸಿ ಮಧುಪರ್ಕಮಂ ಪೂಡಿಸಿ

ಸೌಭಾಗ್ಯಪಟ್ಟಮಂ ತಾ ।
ಳ್ದಿ ಭಾಳದೊಳೆಂದು ಕುಂಭಿಕುಂಭದ ಪೊಂಗಿಂ ॥
ಶೋಭೆವೆಡೆದಿದ ನೊಸಲೊಳ್ ।
ಶ್ರೀಭೂಸುರರೊಲ್ದು ಕಟ್ಟದರ್ ಬಾಸಿಗಮಂ ॥ ೧೨೨

ಅಂತು ಬಾಸಿಗಂಗಟ್ಟಿ

ಸತಿಯೆ ಪದನಖದ ದೀಧಿತಿ ।
ಸಿತಾಕ್ಷಿನವಕಾಂತಿ ನಡುವೆ ದಟ್ಟೈಸಿತ್ತೆಂ ॥
ಬತಿಶಯಗುಣದಿಂ ವ್ಯದುಶು ।
ಭ್ರತೆಯಿಂ ಮೆಱೆದಿರ್ಪ ಸೀರೆಯಂ ತೆಱೆವಿಡಿದರ್ ॥ ೧೨೩

ಅಂತು ತೆಱೆವಿಡಿದು

ಆಯತವೇ ಆಯತವ ।
ತ್ಯಾಯತವೇ ಆಯತಂ ಸಮಂತಾಯತವೇ ॥
ಆಯುತಪ್ರಖ್ಯಾಹವೆನ ।
ಲ್ಕಾಯುವತಿಯ ಮೊಗಮನೊಲ್ದು ನೋಡುತ್ತಿರ್ದಂ ॥ ೧೨೪

ಅಂತು ತೆಱೆದೆಗೆಯಲೊರ್ಬರೊರ್ಬರ ಮೊಗಮಂ ನೋಡ್ಪಿ ಸಮಯದೊಳ್ ಪೇಮದತ್ತಂ ಕೈನೀರೆಱೆಯೆ

ಇನನುದಯಂಗೆಯ್ಯಲೊಡಂ ।
ವನಜಂ ನೀರೇಱುವಂತೆ ತತ್ಕೋಮಳೆಯಾ ॥
ನನಕಮಳವರಳಲೆನ್ನಯ ।
ಮನವೆಂಬುದ್ಭ್ರಾಮರಮೆಱಗಲೆಳಸಿತ್ತಾಗಳ್ ॥ ೧೨೫

ಎಡೆವಿಡದೆ ಪುಳಕವುಣ್ಮಲೆ ।
ಕಡುಲಜ್ಜೆಯೆನಿಪ್ಪ ಮಡುವಿನೊಳ್ ಕಂಪಿಸುತುಂ ॥

ದಡದಡಿಸಿ ಬೀಳ್ವೆನೆನ್ನಂ ।
ಪಿಡಿಯೆಂಬಂತಾಕೆ ನೀಡಿದಳ್ ನಿಜಕರಮಂ ॥ ೧೮೬

ಸುದತೀರತ್ನಂ ಕೈಸಾ ।
ರ್ದುದು ಪುಣ್ಯದ ಫಲಮೆನುತ್ತೆ ಪದೆಪಿಂ ಕಾಂತಾ ॥
ಮೃದುಕರತಳಮಂ ಪಿಡಿದೆಂ ।
ಮುದನಂ ತಿರುಗೊಯ್ದು ಕರ್ಬುವಿಲ್ಲಂ ಪಿಡಿಯಲ್ ॥ ೧೮೭

ಅಂತು ಪಾಣಿಗ್ರಹಣಂಮಾಡಿಯಥೋಕ್ತ ಹೋಮಮಂಬೇಳ್ದನಂತರಂ ಸಪ್ತ ಪದಿಗಳಂ ಮೆಟ್ಟಿಸಿ ಬಳಿಕ್ಕ ಚತುರ್ಥದಿನಸದೊಳ್

ಶಿರದೊಳ್ ತಳ್ತ ಸಿತಾಕ್ಷತಂ ಗಗನಗೆಂಗಾಂಭಃಕಣಂ ಬಾಸಿಗಂ ।
ತರುಣೇಂದುದ್ಯುತಿ ರೋಚನಾತ್ತ ತಿಲಕಂ ಭಾಳಾಂಬಕಂ ಗೌರಿ ತ ॥
ತ್ತರುಣೀರತ್ನಮೆನಲ್ಕೆ ನಾಂದಿನುಖದೊಳ್ ವಿದ್ವದ್ಗಣಸ್ತೋತ್ರಮಂ ।
ಕುರಿಸಲ್ ಪೆಂಪಿನುಮಾಮಹೇಶ್ವರನನೋಲ್ ಪುಷ್ಪೋದ್ಭವಂ ರಂಜಿಪಂ ॥

ಎಂದು ಸಕಲಬಂಧುಜನಂ ವಂದಿಜನಂಗಳುಂ ಸ್ತೋತ್ರಮುಂ ಮಾಡಲಲ್ಲಿ ಕೆಲಂಬರ್,

ಜನಜಮುಖಿಯಂ ಭಯಂಬಿ ।
ಟ್ಟನುನಯದಿಂ ಮುದುವೆಯಾದ ಪೂರ್ವಂ ನಿನ್ನಾ ॥
ಜನನೊದೆದ ಬೊಮ್ಮರಕ್ಕಸ ।
ನೆನುತಿರ್ದತ್ತಳಿಪಥರಜನವನವರತಂ ॥ ೧೮೯

ಈಪ್ರಪ್ತೋದ್ಭವನೆಂಬ ಮ ।
ಹಾಪುರುಷಂ ಬ್ರಹ್ಮರಾಕ್ಷಸಂ ಮಿಗೆ ಮಾಯಾ ॥
ರೂಪಿಂದೆ ದಾರುವರ್ಮನ ।
ಹೀಪತಿಯಂ ಕೊಂದನಿವಳ ದೆಸೆಯಿಂದೊಲವಿಂ ॥ ೧೯೦

ಎಂದು ಜನಾನುವಾದಂ ನೆಗಚೆ ಬಳಿಕಲ್ಲಿಯೆ ಪೂರ್ವರೂಪಂ ನಟಿಸಿ

ಮೊಗಮಂ ನೋಡಿ ನಿಜಾಪ್ತಿ ಲಲ್ಲಿ ನುಡಿಯುಂ ಕೇಳ್ದಟ್ಟಿ ಹಿಂ ಕರ್ಣಮಾ।
ವಗೆವೊಲ್ದಂಗವನಪ್ಪಿ ತೋಳ್ಗಳಧರೋದ್ಯತ್ಸಾರಮಂ ಪೀರ್ದು ನಾ ॥

ಲಗೆ ಪೆಂಪಿಂದೊಡಗೂಡಿ ನಲ್ಮೆ ತಣಿವಂ ಪೆತ್ತಿರ್ಪ್ಪ ದಿಲ್ಲಿಂಬ ಕೂ ।
ರ್ಮಿಗೆ ಜನ್ಮಾಲಯವಾವ ಕಾಂತೆಯೊಲವಂತಿರ್ತುಂತೆನಲ್ ಬರ್ಕುಮೇ ॥

ಇಂತು ಸುಖಮಿರ್ದು ಬಟ್ಟಿಯುಂ ನಿನ್ಮ್ಮಡಿಸುನಲಿಸಲ್ ಬಂದು

ನಯನಂ ಮಾಡಿದ ಪುಣ್ಯವೆಂತುಟೊ ನಿಜಶ್ರೀಪಾದವಂ ಕಂಡೆನೆ ।
ನ್ನಯ ಜನ್ಮಂ ಸಫಲಕ್ಕೆ ಬಂಗುದು ಸವುಸೊ್ತರ್ವೀರ್ತಳಂ ಕೈಗೆ ನಿ ॥
ಶ್ಚಯದಿಂ ಸಾರ್ದುಬೆನುತ್ತೆ ಭಕ್ತಿಭರದಿಂ ಮೆಯ್ಯಿಕ್ಕಿರಲ್ ತಮ್ಮನಂ ।
ಪ್ರಿಯದಿಂ ಮನ್ನಿಸಿದಂ ನೃಪಾಲತಿಲಕಂ ಶ್ರೀವಾಗಧೋಽರ್ವೀಶ್ವರಂ ॥

ಅಂತು ಮನ್ನಿಸಿ ಮತ್ತಮಿಂತೆಂದಂ:—

ಇನಿಯಳ ಸಂಗಮಂ ತೊಱೆದು ಪೆಂಪಿನ ತನ್ನ ಶರೀರಸೌಖ್ಯಮಂ ।
ನೆನೆಯದೆ ತಂದೆತಾಯ್ಗಳರವಂ ಪರಿಭಾವಿಸದೆನ್ನ ಭಕ್ತಿಯಿಂ ॥
ನನೆಕೊನೆನೋ್ಗಿಯಿಂತಱಿಸಿ ಬಂದವನಾವನೆನುತ್ತೆ ತಮ್ಮನಂ ।
ಮನವೊಸೆದಪ್ಪಿ.....ನಭಂಗವಿಕ್ರಮಂ॥ ೧೩೩

॥ ಗದ್ಯಂ ॥

ಇದು ನಿಖಿಲಬುಧಜನನುತೋಜನವಿವಾಕರಕಿರಣಪ್ರತಿಮಪ್ರಸನ್ನ
ಶ್ರೀನುದಭಂಗವಿಚ್ಛಿಲಪವಾಂಭೋಜಮಿತ್ತಮಧುಕರ
ಮಧುಸೂದನನಂದನ ಸರಸಕವಿ ಚಾಂಡರಾಜ ಪರಚಿತವಪ್ಪ

ಅಭಿನವ ದಶಕುಮಾರಚರಿತೆಯೊಳ್

ಪುಷ್ಪೋದ್ಭವಕಥಾವೃತ್ತಾಂತಂ,

ಚತುರ್ಥಾಶ್ವಾಸಂ.

— ಸೋಮದತ್ತಚರಿತಂ —

ಶ್ರೀ ತಳೊತ್ತಪ್ಪವ ವಕ್ಷಂ ।
ಭೂತಳಪತಿ ನಿಜಸಹೋದರಾನ್ವಿತನೆಲ್ದಿಂ ॥
ಕಾತುಕದಿಂ ಶಚಿಕಾಂತಶಿ ।
ಲಾತಳದಿಂ ಪದೆದಭಂಗವಿಟ್ಟಲಭೃತ್ಯಂ ॥ ೧

ಅಂತಲ್ಲಿಂದೆಲ್ದಿ ಪ್ರಪ್ಪೋವ್ಭವನ ವೊಗಮುಂ ನೋಡಲಾತನಿಂಗಿತವನ ಱಿದಿಂತೆಂದಂ: —

ವಿಜಯಶ್ರೀಕುಚನುಲ್ಕಿ ಕಾಭರಣ ಕೇಳೆ ವಿಜ್ಞಾಪನಂ ದೇವ ನೀಂ ।
ಬಿಜಯಂಗೆಯ್ವುದವಂತಿಪತ್ತನಕೆ ತತ್ಸೌಂದರ್ಯಮುಂ ನೋಡಿ ದಿ ॥
ಗ್ವಿಜಯಂಮಾಱ್ಪಿದೆನಲ್ಕದಂ ಮನದೆಗೊಂಡಾನಂದದಿಂ ಸದ್ಗುಣ ।
ವ್ರಜಯುಕ್ತಂ ತಳರ್ದಂ ವಿನೋದನಿಭವಂ ಶ್ರೀಮಾಗಧಕ್ಷ್ಮೋಣಿಪಂ ॥ ೨

ಅಂತಲ್ಲಿಂ ತಳರ್ದವಂತೀಶ್ವರಕ್ಕೆ ಬರ್ಪಾಗಳ್ ಮುಂದೆ

ಕಾಳವ್ಯದಂಗಕಾಹಳರವಂ ಪದೆದೂಱ್ವಿ ಪಿಶಾಚಕೋಟಿ ಭೇ ।
ತಾಳರ ಬೊಬ್ಬಿ ರಕ್ಕಸರ ತಿಂತಿಣಿ ಭೂತಭಯಂಕರಸ್ವನಂ ॥
ಕಾಳಿಕರಾಳಭೈರವಿಯರಾರ್ತರವಂ ಪುದಿದೊಪ್ಪತಿರ್ದ ದು ।
ರ್ಗಾಳಯಮುಂ ಮನೋವುದದೊಳೀಕ್ಷಿಸಿದಂ ನೃಪಕಾಳಭೈರವಂ ॥ ೩

ತಲೆಗಳ ಹೂಜೆ ಬಲ್ಗರುಳ ತೋರಣಮುಕ್ಷಿಗಳಕ್ಷತಂ ಬೆರ । ಕ ಲ್ಗಳ ನಿಡುರಾಸಿ ನಾಲಗೆಯ ಪಂದರಮಿಕ್ಕಿದ ಕೈಗಳೋಲಿ ಮುಂ ॥
ದಲೆಯ ಬಣಂಬೆ ದಿಟ್ಟಿಗೆ ಭಯಂಕರಮುಂ ವಿಗೆ ವಾಲ್ಪಿ ಕಾಳಿಕಾ ।
ನಿಳಯಮನುರ್ವರಾಧಿಪತಿ ಕಂಡನತೀವಮನೋನುರಾಗದಿಂ ॥ ೪

॥ ರಗಳೆ ॥

ಅಂತಿರ್ದ ದುರ್ಗಾಲಯಂ ಮನೋಹರಮಾಗಿ ।
ತಿಂತಿಣಿಯ ಮುರುಳ್ಪಡೆಗಳಿಂ ಭಯಂಕರಮಾಗಿ ॥

ಭೂತಬೇತಾಳದಳ್ಳುರಿದಾಡುವಾಟದಿಂ ।
ಪ್ರೇತನಿಯರಲೆದು ರುಧಿರವನೆಱೆವಿನ ಕಾಟದಿಂ ॥
ನರಮಾಂಸವುಂ ಬೇಪ್ಪಿ ರಕ್ಕಸರ ನೆರವಿಯಿಂ ।
ಮುರುಳ ನಡುವಿಟ್ಟ ನೆತ್ತರ ತೋರ ಹರವಿಯಿಂ ॥
ಕಿಡಿಗಣ್ಣ ದಡಿಗಜಟ್ಟಿಗರ ಗರ್ಜನೆಗಳಂ ।
ನಿಡುಗರುಳ ಮಾಲೆಯುಂ ತಳೆದಸುರಮುನಿಗಳಿಂ ॥
ಬೊಮ್ಮರಕ್ಕಸರೊಡನೆ ನಗುವ ಶಾಕಿನಿಯರಿಂ ।
ಸುಮ್ಮಾನದಿಂ *ತೊಳಲ್ವ ವೀರಡಾಕಿನಿಯರಿಂ ॥
ಅರಿದರಿದು ಗುಡಿಸಿದರ್ ಕೊರ್ಬಿದರ್ ಕುಜ್ಜಿಗಳ್ಳಂ ।
ಅರೆಗಣ್ಗಳಿಸುವ ಕೋಣನ ತಲೆಯ ಮುಜ್ಜಿಗಳ್ಳಂ ॥
ಪುರುಷಾರ್ಥಸಿದ್ಧಿಯುಂ ಪಡೆವಧಿಕಸಿದ್ಧರಿಂ ।
ಪರಮಾಯುವಂ ಬಯಸುವತಿತಪೋವೃದ್ಧರಿಂ ॥
ದೆಸೆವ ದುರ್ಗಾನಿಲಯವುಂ ಮಹೋದ್ಯೋಗದಿಂ ।
ವಸುಧಾಧಿಪಂ ಪೊಕ್ಕನತಿಮನೋಹರಾಗದಿಂ ॥ ೬

ಉರಿಯಂ ಸೂಸುವ ಭಾಳನೇತ್ರಮಹಿರಾಜೋತ್ತುಂಡಲಂ ಕ್ರೂರಖಿ ।
ಕರದಂಷ್ಟ್ರಾಂಕುರಮಸ್ತ್ರಶಸ್ತ್ರಭಯದೋದ್ಯತ್ಪಾಣಿ ಸನ್ಮಿಶ್ರಕಾ ॥
ಭರಣಂ ಕೇಸರಿವಾಹನಂ ಮೃದುಜಟಾಸಂತಾನಮೊಪ್ಪಿರ್ಪ ಭಾ ।
ಸುರದುರ್ಗಾಂಬಿಕೆಯುಂ ನನುಸ್ಕರಿಸಿದಂ ವಿಕ್ರಾಂತಕಂಠೀರವಂ ॥ ೭

ಅಂತು ತಾನುಂ ಪುಷ್ಪೋದ್ಭವನುಂ ದುರ್ಗಾಂಬಿಕೆಗೆ ನಮಸ್ಕರಿಸಿ ಸ್ತೋತ್ರಜಪಧ್ಯಾನದಿಂ ಕಣ್ಗಳಂ ಮುಗಿದಿರ್ಪಾಗಳ್

ಅತಿರಭಸೋನ್ಮುಖಂ ಬಹಳಕಾರ್ಯಧುರಂಧರನವ್ರತಕ್ರ್ಯನು ।
ದ್ಧತರಿಪುಸೈನ್ಯಸಾಗರಘಟೋದ್ಭವನೂರ್ಜಿತಭಾಗ್ಯವೈಭವಂ ॥
ಕತಿಪಯಸೇನೆಯುಂ ತಳೆದಬೊರ್ಬ ಕುಮಾರಕನೊಲ್ದವುತ್ಕ್ರ್ಷೇ ।
ವಿತೆಯೆನಿಸಿರ್ಪ ದುರ್ಗೆಗೆ ನನುಸ್ಕರಿಸಲ್ ಪದೆದಲ್ಲಿಗೆಯ್ದಿದಂ ॥ ೮

ಅಂತೊರ್ವ ಕುಮಾರಕಂ ಬಂದು ದುರ್ಗಾಲಯದ ಪೊಱಗೆ ಪರಿವಾರಮಂ ನಿಲಿಸಿಯೊರ್ಬನೆ ಒಳಗಂ ಪೊಕ್ಕು

ವಿಳಸದ್ಭೃಂಗಾಂಬಿಕಂ ಭೂಸುರವಮಣಿಮಕುಟಂ ಪೊಸಪೊಸೋದ್ಯದ್ಭುಜಂ ನಿ।
ರ್ಮಳಚಂಚತ್ಕುಂಡಲಂ ಕುಂಕುಮವಿಳಯಜಕಸ್ತೂರಿಕಾಲಿಪ್ತವಕ್ಷಂ ॥
ಸ್ಫುಳವೊಪ್ಪಂಬೆತ್ತ ದುರ್ಗಾಂಘ್ರಿಗೆ ನಲಿದು ನಮಸ್ಕಾರಮಂ ಮಾಡಿದಂ ನಿ।
ಶ್ಚಳಚಿತ್ತಂ ಭಕ್ತಿಯಿಂ ಕೌತುಕಮೆನಿಪ ಮಹಾಸ್ತೋತ್ರದಿಂದಾರ್ಯಪುತ್ರಂ॥

ಅಂತು ನಮಸ್ಕರಿಸಿಯಿಂತೆಂದಂ:—

॥ ಸ್ವಾಗತೆ ॥

ರಾಜವಾಹನನೃಪಾಲಕನಂ ನಿ ।
ರ್ವ್ಯಾಜದಿಂ ಪಡೆದು ಕಂಡೊಡೆ ನಿನ್ನಂ ॥
ಪೂಜೆಯಿಂ ಬಹಳಮಾಕ್ತಿ ಕದಿಂದಂ ।
ಭೋಜನೇತ್ರ ನನದುಗಿ ನಿಶಾಂತಂ ॥ ೯

ಎಂದು ಪರಸಿಕೊಳ್ವಾಮಾತಂ ರಾಜವಾಹನಂ ಕೇಳ್ದು

ಬೆಡಗಿದುವೆ ಸೋಮದತ್ತನ ।
ನುಡಿಸುವೊಲಿರ್ದುಪ್ರದೆನುತ್ತು ಮುಲಗರ್ಣ್ಣಡೆಯಂ ॥
ಪೊಡವಿಪತಿ ತೆಱೆದು ನೋಡಿದ ।
ನಡಿಗಡಿಗುಣ್ಮಲ್ಕೆ ಬಹಳತನುಪುಳಕಂಗಳ್ಕ ॥ ೧೦

ಅಂತು ಧ್ಯಾನಮಂ ಬಿಟ್ಟು ಕಣ್ದೆಱೆದು ನೋಡಿ

ಇದಪೂರ್ವದರ್ಶನಂ ಸೋ ।
ಮದತ್ತನಂ ಕಂಡೆನೆಂಬ ಮಾತಂ ಕೇಳ್ದು ॥
ಬಿರ್ದ ನಯನಜಲದೊಳಾತಂ ।
ಪದಕಮಳಕ್ಕೆಱಗಿ ಬಲಿಕ ನಲಿದೀಕ್ಷಿಸಿದಂ ॥ ೧೧

ಅಂತು ಸೋಮದತ್ತಂ ರಾಜವಾಹನನ ಮುಖಕಮಲಮಂ ನೋಡಿ

ಇಂದೆನಗೆ ಭಾಗ್ಯದೇವತೆ ।
ತಂದಿತ್ತಳೆ ದೇವ ನಿಮ್ಮ ಪದಕಮಳಮನೆಂ ॥
ಪಾದೊಲ್ದು ಸೋಮದತ್ತಂ ।
ವಂದಿಸಿದಂ ಮಗುಳ್ದು ಮಗುಳ್ದು ನೃಪತಿಗಲಂಟಿಂ ॥ ೧೨

ಅಂತು ವಂದಿಸುವುದುಂ ರಾಜವಾಹನಂ ಸೋಮದತ್ತನಂ ತಕ್ಕೈಸಿ
ಕೊಂಡು ಪತ್ತಿರೆ ಕುಳ್ಳಿರಿಸಿ

ಈರಾಜ್ಯಪದವಿದೆತ್ತಣ ।
ದೀರಭಸಂಗೆಯ್ವ ಸೇನೆಯೆತ್ತಣ್ಣೆನುತುಂ ॥
ಆರಾಜಸೂನು ಬೆಸಗೊಳ ।
ಲೋರಂತಿರೆ ಸೋಮದತ್ತನುಸಿರಲ್ ಬಗೆದಂ ॥ ೧೩

ದೇವರ ಪಾದಪಲ್ಲವನಮನೆಯ್ದೆಸೆಯೊಳ್ ಪದೆದೀಕ್ಷಿಸುತ್ತಿ ನಾಂ ।
ಭೂವಳಯಕ್ಕೆ ದರ್ಪಣಮೆನಿಪ್ಪ ಲಸತ್ಕುಸುಮಾಪುರಪ್ರದೇ ॥
ಶಾವನಿಯೊಳ್ ಬರುತ್ತುಮಿರೆ ಮುಂದೆ ಪಸುದ್ದಳಿದೊಂಗಲಿಂದೆ ಕೋ ।
ಭೂನಪಮಪ್ಪ ದೊಂದು ವನಮಿರ್ದುದು ಕೇಳ್ ಭುವನಾಧಿನಾಯಕಾ ॥ ೧೪

ಆವನವನೆಯ್ದಲನಱೊಳಗೆ

ಉದಯಗಿರೀಂದ್ರದೊಳ್ ದಿನಕರಂ ಪದೆಪಿಂದುದಯಿಪ್ಪನೆಂಬ ಮಾ ।
ತದು ಪುಸಿಯೆಂಬಿನಂ ಕಿರಣಜಾಲದಿನೆಯ್ದೆಸೆಯಂಧಕಾರಮಂ ॥
ಬೆದಱಿಸುತಿರ್ಪುದೊಂದು ಪೊಸನಾಣಿಕಮೆನ್ನಿ ದಿರಲ್ಲಿ ಬಚ್ಚಿರ ।
ಲ್ಕಿದು ಪೊಸತಾನ ಕಾರಣದಿನಿಲ್ಲಿಗೆ ಬಂದುದೆನುತ್ತಿ ನೋಡಿದಂ ॥ ೧೫

ಇದು ಮಾಂಸಖಂಡಮೆಂದೋ ।
ವದೆ ಗಿಡುಗಂ ತಂದು ಬಿಸುಟುದೋ ಪದೆಪಿಂ ಮೀ ॥
ಣಿದಮೂಲ್ಯಮೆಂದು ದೈವಂ ।
ಮುದದಿಂದೆನಗಿತ್ತುದೋ ಎನುತ್ತೀಕ್ಷಿಸಿದೆಂ ॥ ೧೬

ಅಂತು ನೋಡಿ

ಫಣಿರಾಜವಿಶಾಲಲಸ ।
ತ್ಫಣಾಗ್ರದಂತೆಸೆವ ಹಸ್ತಕಂಕಣದೊಳ್ ಕೇ ॥
ವಣಿಸಲ್ಕಕ್ಕುದೆನುತ್ತಾ ।
ಮಣಿಯುಂ ತೆಗೆದೆಂ ನೃಪಾಲಕುಲಮಣಿದೀಪಾ ॥ ೧೭

ಅಂತಾಮಾಣಿಕವಂ ಕೊಂಡು ಬರ್ದಾಗಳ್

ತನಗೆ ಮಣಿ ದೊರಕದೆಂಬೊಂ ।
ದನುತಾಪದೆ ತಪನನೆಯ್ದಿದನೊ ಶರನಿಧಿಗೆಂ ॥
ಬಿನವೆಸೆವ ರಾಗದಿಂ ಭೋಂ ।
ಕೆನಲಪರಾಂಭೋಧಿಗಿಳಿದನಬ್ಜಸಹಾಯಂ ॥ ೧೪

ಅಂತು ಸೂರ್ಯನಸ್ತಮಾನವಾಗಲೊಡಂ,

ತೊಲ್ಪ* ಭಟರ್ಕಳಬ್ಬರಣೆ ಕುಂಜರಬೃಂಹಿತಮಶ್ವಹೇಷಿತಂ ।
ಪಲವು ಪದಾತಿವಾದ್ಯರವಮುತ್ಕಲಕಸ್ಫುಟತಾಡನಸ್ವನಂ ॥
ಜಲಧರವೆಂಬೊಲೆನ್ನ ಕಿವಿಗೆಯ್ತರಲಾಂ ಪಟೆದೊಂದು ವಾಹಿನೀ ।
ಕಳಕಳವೆಂದು ನಿಶ್ಚಯಿಸಿದೆಂ ಬಗೆಯೊಳ್ ನೃಪರೂಪಮನ್ಯಥಾ ॥ ೧೫

ಅಂತಾಕಳಕಳವಂ ಕೇಳ್ದಾರಾತ್ರಿಯೊಳಿೂರ್ಬನೆ ಪಾಳಿಯಮುಂ ಪ್ರಗು
ವುದುಂ ಪಾಳಿಯುವೇಱಿ ಂದು.....ಕುಸುಮಪುರದ
ಪೊಱಮೞಿಲ ದೇವಾಲಯದೊಳ್ ನಿದ್ದೆಗೞ್ದು ಬೆಳಗಾಗಲೊಡಂ
ಇಕ್ಕಿದ ಯಜ್ಞೋಪವೀತ್ರವೆರಡುಂ ಕೈಯ್ದೊಳ್ ಪೊಸದಭೆಗೆ ಕೌಂಕುಮೆಯೊಳ್ ।
ಸಿಕ್ಕಿದ ಪುಸ್ತಕಂ ಪಿಡಿದ ಪೀಲಿಯು ನುಸ್ಸೊಡೆಯುಟ್ಟಭೋತ್ರವೆ ॥
ಯ್ದುಕ್ಕುಱಿಸಿರ್ದ ಕುಕ್ಷಿ ನಡುಕಂ ಮಿಗುವಂಗಮಗುಬಿರ್ಸುತ್ತಿರಲ್ ।
ಚೆಕ್ಕನೆ ಬಂದನೊರ್ವ ಬಡಪಾರ್ವನರಾತಿಚಮೂಭಯಂಕರಾ ॥ ೧೦

ಅಂತೊರ್ಬಂ ಬಡಪಾರ್ವಂ ದಾನಾರ್ಥಿಯಾಗಿ ಬಂದು ದಾನವುಂ ಜೇಡ
ಲೊಡಂ ಕಂಡು

ಕುಡುವನೊ ಕುಡನೋ ಎನುತುಂ ।
ನಡುನಡುಗುತ್ತಂಜಿ ಬಂದು ಬೇಱ್ಪಿವನಿಂದಂ ॥
ಕುಡದಿರ್ಪವನತಿಕಷ್ಟಂ ।
ಪೊಡವಿಯೊಳೆಂಬುಕ್ತಿಯಂ ವಿಚಾರಿಸಿ ಬಱಿಯಂ ॥ ೧೧

ಅಪ್ರತಿದಾನವೆನುತ್ತುಂ ।
ಸುಪ್ರೀತಿಯೊಳೆನ್ನ ಕೆಯ್ಯ ಮಾಣಿಕವಂ ತ ॥
ದ್ವಿಪ್ರಂಗೆ ಕೊಟ್ಟು ಪದಪ ।
ದ್ಮಪ್ರಣತಶರೀರನಾದೆನವನಿಪತಿಲಕಾ ॥ ೧೨

ಅಂತು ಬ್ರಾಹ್ಮಣಂಗೆ ರತ್ನಮುಂ ಕುಡಲಾತಂ
ತನು ನಯವೇಱೆ ವಕ್ತ್ರಕಮಲಂ ಸುನಿಕಾಸಮನೆಯ್ದೆ ಚಿತ್ತಸಂ।
ಜನಿತನುದಂ ಕವಲ್ವರಿಯೆ ವಿಸ್ಮಯಸಂಭ್ರಮವುರ್ವೆ ಭೂಸುರಂ ॥
ಮನವೊಸೆದೆನ್ನನೊಲ್ದು ಪರಸುತ್ತನುರಾಗದೊಳಿತ್ತ ದಾನದಿಂ।
ನಿನಗೆ ಶುಭೋದಯಂ ಮಿಗುಗೆನುತೊಲವಿಂ ತಳರ್ದಂ ಮಹೀಪತೀ ॥೬೩

ಅಂತಾಬ್ರಾಹ್ಮಣನೆನ್ನಂ ಪರಸಿ ರತ್ನಮುಂ ಕೊಂಡು ಪೋಗಿಯಾಮುನ್ನ ಕಳಕಳವಂ ಕೇಳ್ದ ಪಾಳಿಯವಂ ಪೊಕ್ಕು

ಛಾಂದಸನಧಿಕದರಿದ್ರಂ।
ಮಂದಂ ಜಿಹ್ವಾನಲಂಪಟಂ ಗತಭಾಗ್ಯಂ ॥
ಸೌಂದರರತ್ನಮನರವ।
ರ್ಗಂದೊಲವಿಂ ವಾಜಿಲೆಂದು ತೋಱಿದನರಸಾ ॥ ೬೪

ಅಂತಾರತ್ನಮನವರವರ್ಗೆ ತೋರ್ಪುದುಂ,

ಈಪಾರ್ವಂಗೀರತ್ನಮು।
ದೀಪರಿಯಿಂ ಬರ್ಪುದರ್ಕೆ ಕಾರಣಮೀನೆಂ ॥
ದಾಪಾಳಿಯದೊಳ್ ತೊಪಿಲ್ವ ಮು।
ಪಾಪಿಶುನರ್ ಪಿಡಿದು ಕಟ್ಟಿದರ್ ಕಡುಬೇಗಂ ॥ ೬೫

ಅಂತಾಪಾರ್ವನಂ ನಿರ್ಬಂಧಿಸುವುದುಮಾತಂ ಕೊಟ್ಟಾತನಂ ತೋಱೆನೆಂದೆನ್ನನವರ್ಗೆ ತೋರ್ಪುದುಂ;

ಅಱುವರ್ ಕಳ್ಳರ ಕೂಡಲಾತನಿವನಂ ಕಟ್ಟಾರ್ಪಿನಿಂ ಮಾಣಿಕಂ।
ಕುಱುಪಾಯೆಂದು ಕೆಲಂಬರೆನ್ನನಗಟಂ ಕಾರಾಗೃಹಕ್ಕಯ್ದು ಕಾ ॥
ಲ್ಕೊಱೆವಂತಾಸುರವಪ್ಪಿನಂ ನಿಗಡಮಂ ಸಾರ್ಚಲ್ಕಿದೇನೆಂದು ಸೈ।
ವೆಱಿಗಾಗಿರ್ದಿನದಲ್ತೆ ಪೂರ್ವವಿಧಿಯಂ ಮಾಱಿಲ್ಕದೇಂ ಬರ್ಕುಮೇ ॥ ೬೬

ಅಂತೆನ್ನಂ ಸಂಕಲೆಸುನಿಕ್ಕಿ ಮಾಣಿಕವಂ ಕೊಂಡಾಬ್ರಾಹ್ಮಣನಂ ಬಿಟ್ಟರ್.

ಇತ್ತಲಾಂ ಕಾರಾಗೃಹದೊಳಗೆ
ಮೆಯ್ಗಳ್ ಬೆಳತುರ್ ಕಾಲ್ಗಳ್।
ಕೆಯ್ಗಳ್ ಬಡವಾಗಿ ಕಱುಕು ಪತ್ತಿದ ಪುಬ್ಬಿಂ ॥

ಬಾಯ್ಗಡಿಸಿದ ಕಿಣಿವಲ್ಲಿಂ ।
ಸುಯ್ಲೊಳಗಾಗಿರ್ದರಲ್ಲಿ ಸಂಕಲೆಯೆನರ್ಗಳ್ ॥ ೮೩

ಅಂತು ಸಂಕಲೆಯಲ್ಲಿರ್ದಿರುವರಂ ಕಂಡು ನೀವಾರೆತ್ತಣವರೆಂದಾಂ ಬೆಸಗೊಳ್ವುದುಂ,

ಕುಸುಮಸ್ರರಿಗೊಸ್ಪವರಸಂ ।
ಕುಸುಮಾಯುಧಮೂರ್ತಿ ಧರ್ಮಶೇಖರನೆಂಬಂ ॥
ಕುಸುಮಾವತಿಯಂ ಪಡೆದಂ ।
ಕುಸುಮಂ ಪರಿಮಳಮನೊಲ್ದು ಪಡೆವವೊಲಾತಂ ॥ ೮೪

ಅಂತಾಕುಸುಮಸ್ರರದೊಡೆಯನಪ್ಪ ಧರ್ಮಶೇಖರನ ಮಗಳೆಂ ಲಲಿತಪುರದ ದೀರ್ಘಬಾಹುಕಂ ಬೇಡೆ ಧರ್ಮಶೇಖರಂ ಕುಡದಿರ್ದುದುಮಾದೀರ್ಘಬಾಹುಕಂ ಬಲ್ಪಿಂ ಕೊಳಲೆಂದು

ಕುಸುಮಾವತಿಯಂ ಕೊಳಲೆಂ ।
ದು ಸೇನೆಯಂ ನೆಱಪಿ ದೀರ್ಘಬಾಹುಕನಾಗಳ್ ॥
ಕುಸುಮಸ್ರರದರಸನಂ ಮು ।
ತ್ತಿ ಸಾಹಸಮೆಱವೆನೆಂದು ಕಾನೆಲ್ತಿಂದಂ ॥ ೮೫

ಅಂತೇಲ್ತಿಂದು ದೀರ್ಘಬಾಹುಕನಲ್ಲಿ ಬಿಡಲೆಮ್ಮರಸನಪ್ಪ ಧರ್ಮಶೇಖರನೆಮ್ಮಂ ಕಂಡು

ಧರೆಯೊಳಮೂಲ್ಯಂ ದನುಜಾ ।
ಮರಲೋಕದೊಳಿಲ್ಲಿನಿಪ್ಪ ಮಾಣಿಕವೇಱುಂ ॥
ಟರಿನೃಪನ ಮನೆಯೊಳೆಂದೆ ।
ಮ್ಮರಸಂ ಕಳಲಟ್ಟಿದಂ ಬಱಿಕ್ಕಱುವರವುಂ ॥

ಅಂತಾವಱುವರುಂ ಬಂದು

ನವರತ್ನದ ಮನೆಯುಂ ಕ ।
ನ್ನವಿಕ್ಕಿ ಮಾಣಿಕವನುಯ್ವ ಪದದೊಳ್ ಕಾದಿ ॥
ರ್ದವರಱಿದು ಪಿಡಿದು ಮಾಣಿ ।
ಕ್ಯವನಾಱುಂ ಕಂಡರಱಿಸಿಯೊಂದಂ ಕಾಣರ್ ॥ ೮೬

ಅಂತಾವೇಟಿಮಾಣಿಕವಂ ಕೊಂಡು ಪ್ರೋಗ.ತ್ತೆ ನಿಕ್ಕುವಲ್ಲಿಯೊಂದು ಮಾಣಿಕ್ಯವಂ ಬೀಸಲಿಕ್ಕಿದೆವು. ಅದು ದೈವಯೋಗದಿಂ ನಿನಗೆ ಬಂದುದ ಱಿಂ ನೀನೆವ್ಮಂತು ಕಳ್ಳನಾದೆಯೆಂದವರ್ ಪೇಳ್ದಿ ವುತ್ತಂ

ಕಳವಿಂ ಕುಸುಮಪ್ರರೀಕ್ಷಂ ।
ಗೆಲಲಿರ್ದಪೆನೆವ್ಮನೆಂದು ಲಲಿತಪ್ರರೀಕ್ಷಂ ॥
ಮುಳಿದೆತ್ತಿ ನಾಳಿ ಲಗ್ಗೆಯ ।
ನುಲಿಯುತ್ತುಂ ಮಾಲ್ಪೆನೆಂದು ಗರ್ಜಿಸುತಿರ್ದಂ ॥ ೩೦

ಅಂತು ಗರ್ಜಿಸುವ ದೀರ್ಘಬಾಹುಕಂ ಕಡೆವೇಂಟಿಗೆ ಪ್ರೋಗಿರ್ದಪನೆಂದವರ್ ಪೇಳ್ವಿ ಸಮಯದೊಳ್

ಅಂಬರಗಂಗಾತೀರದೊ ।
ಳಂಬಿಂದೋಲಾಡುತಿರ್ಪ ಹಂಸಂ ವರುಣಾ
ಶಾಂಬುಧಿಗೆ ಪಾಱಿ ಪ್ರೋದ ।
ತ್ತೆಂಬಂತಿನನಪರಜಲಧಿಗೆಯ್ದಿದನಾಗಳ್ ॥ ೩೧

ಇಂದಿರೆ ಪದ್ಮವುಂದಿರದೊಳಿರ್ದು ಮಹಾಪ್ರಣಯಪ್ರಕೋಪದಿಂ ।
ದೊಂದಿರುಳಿಕ್ಕೆ ಮುಚ್ಚಳ್ವಳನಾಪುಗಿಲೊಳ್ ತೆಱಪಾಗೆ ಸೂಚ್ಪೆ ಕೈ ॥
ಷಣ್ಣಂ ದಯೆಯಿಂದೆ ಬಂದು ಬಿಗಿಯಪ್ಪಿ ಧರಾಂಗನೆಯಂ ತದಂಗಕಾ ।
ಷಣ್ಣ್ಯರ್ಥಂ ದಿಟದಿಂ ಕವಲ್ತುದೆನೆ ಪರ್ವಿದುದರ್ವಿಯ ಚಿತ್ತಮುಂ ತಮುಂ॥

ಅಂತಳವಿಗಲಿದ ಕಲ್ತಿಲೆಯೊಳ್
ಅಲಘುಭುಜಬಲದಿನಾಗಳ್ ।
ಫಲಿಲನೆ ಪದೆದೆಲ್ಲರಂಘ್ರಿಯೊಳ್ ಸಾರ್ಚಿದ ಸಂ ॥
ಕಲಿಗಳನಿರ್ಕ್ಕರದಿಂದಂ ।
ಬಳೆಯಂ ನುರ್ಗೊತ್ತುವಂತೆ ನುರ್ಗಿದನಾಗಳ್ ॥ ೩೨

ಅಂತವರಱುವರ ಸಂಕಲೆಯುಮುಂ ಮುಱಿದವರ್ಬೆರಸು ದೀರ್ಘಬಾಹುವಿನ ಪಾಳಿಯದಿಂ ಪೋಱುವಟ್ಟು ಕುಸುಮಪ್ರರವುಂ ಪುಕ್ಕು ಧನರ್ಮಖೇಷರನುಂ ಕಾಣ್ಬುದುವನೊಡನೆಯವರಿಂತೆಂದರ್:—

ಈತನತಿವಿಕ್ರಮೋದಯ ।
ನೀತಂ ಪದೆದೆನ್ನ ಕಾಲ ಸಂಕಲೆಯಂ ನಿ ॥
ಭೀತಿಯೊಳುಡಿಪು ಬಿಸುಟ್ಟಂ ।
ಭೂತಳಪತಿ ನಿನ್ನ ಭುಜಬಲಕ್ಕೆ ಸಹಾಯಂ ॥ ೩೬

ಎಂದವರ್ ಬಿನ್ನಪಂಗೆಯ್ಯಲಾಧರ್ಮಶೇಖರನೆನ್ನಂ ಮನ್ನಿಸಲಾತನೊಳಂತೆಂದೆಂ:—

ಎಲೆ ಧರ್ಮಶೇಖರೇಶ್ವರ ।
ಮುಳಿದೆಯ್ತಂದಿರ್ದ ದೀರ್ಘಬಾಹುಕನಂ ನೋ ॥
ರ್ಬಳದಿಂ ಸಂಹರಿಸುವೆನ ।
ಗ್ಗಳವೆನಿಸಿರ್ದಧಿಕಚಿಂತೆಯಂ ಬಿಸುಡೆಂದೆಂ ॥ ೩೭

ಆಮಾತಿಂಗಾತಂ ಪ್ರೀತಮನಸ್ಕನಾಗಿ ತನ್ನ ಚಾತುರಂಗಬಲವನೆನ್ನೊಡನೆ ತೆರಳವೇೞ್ದು

ಕತ್ತರಿಗೊಂಡ ಕರ್ಣಮೆಳನೀಲದ ನುಣ್ಪಮರ್ದ*ಶ್ಲಿ ವಕ್ಷಮಂ ।
ಪತ್ತಿದ ಕಂಧರಂ ಮೃದುಸಟಾವಳಿ ಸುಯ್ಲಿನರಳ್ವ ಘೋಣವು ॥
ದ್ವೃತ್ತಮನಂ ನಯಂಬಡೆದ ರೋಮಚಯಂ ನಿಮಿವೆ-ತ್ತ ವಾಳವು ।
ತ್ಯುತ್ತಮಲಕ್ಷಣಂ ಮೆಱೆವ ವಾರುವವಂ ಪದೆದಿತ್ತನಾನೃಪಂ ॥ ೩೮

ಸೊಗಸೆಸೆಯೆ ಬೆಂಗೆವಾಯ್ದೊ ।
ಯ್ಯಗೆ ಮುಡದಿಂದೌಂಕಿ ವಾಘೆಯಂ ಸಡಿಲೆ ಬಿಡಲ್ ॥
ವ್ಯಗಕೌಶಿಕಸಂಭವವೇ ।
ಗಗತಿಯಿನೊಪ್ಪಿದು-ದಾತುರಂಗಮರತ್ನಂ ॥ ೩೯

ಅಂತೆಸೆವ ಜಾತ್ಯಶ್ವಮನೆನಗೆ ಕುಡಲೊಡಂ
ವಿತತದೃಢಾಸನಂ ನವಖಲ್ವಿನಗುಣಾಂಕಿತಬದ್ಧದೃಷ್ಟಿ ಲೇ ।
ಪಿತಲಸದೂರು ಕಿಂಚಿದನುವಕ್ರಮಜಾನು ಋಜುಪ್ರಸನ್ನಸು ॥
ಸ್ಥಿತತನುವೆನ್ನೊಳೊಪ್ಪೆ ಗತಿ ಧಾರೆ ಲಯಂ ಜವಮಣ್ಮ ಬಲ್ಮೆಯಂ ।
ಕೆತವೆನಿಸಿರ್ದ ಚಿತ್ರಗತಿಯಂ ಮೆಱೆದೆಂ ಸುಕುಮಾರಶೇಖರಾ ॥ ೪೦

ಅಂತೆನ್ನ ತೊಡೆಗಳವಟ್ಟ ಕುದುರೆಯಂ ಬೆಂಗೆವಾಯ್ದು ಕಿಱಿದು ಸೇನೆ ಸಹಿತಂ ಪೊಱಮಟ್ಟು ಬೇಂಟೆಯಿಂ ಬರುತಿರ್ದ ದೀರ್ಘಬಾಹುಕನೊಳ್ ಪೊಣರ್ಚಲ್ ಪೋಪನ್ನೆಗಂ

ಪೆಱ್ಬುಲಿ ಪಾಯೆ ಕಂಠಗತಜೀವಿತರಾದವರಕ್ಕಲಂ ಕನ ।
ಲ್ದುರ್ಬಿ ಪಿಸುಳ್ದ ದೊಂಡೆಗರುಳಂ ತಳಿದಿರ್ದವರಾರ್ದು ಭಲ್ಲುಕಂ ॥
ಜರ್ಬಿಯವುಂಡೆ ಬಲ್ಮಿದುಳಿಪ್ಪಿಲ್ವ ಶಿರಂಗಳನೊತ್ತು ತಿರ್ಪವರ್ ।
ಸರ್ಬವ್ಯಗಂಗಳಂ ಕೆಡಪಿ ಬರ್ಪವರೊಪ್ಪಿದರುರ್ವರಾಧಿಪಾ ॥ ೪೧

ಅಂತು ಬೇಂಟೆಕಾಱವಡೆ ಬಸ್ಪುದಂ ಕಂಡು ದೀರ್ಘಬಾಹುಕನ ಬರವಂ ನಿಶ್ಚಯಂಗೆಯ್ದು ಸಂಶಯಾಸ್ಪದಮಿಲ್ಲದಂತು ತನ್ನ ಪಾಳೆಯದಿಂದಿದಿರ್ವರ್ಪ ಸೇನೆಯೆಂಬಂತೆ ನಂಬುಗೆ ಪುಟ್ಟುವಂತೆ ಪೋಗಿ ತನ್ನ ಭಟನಂ ಸಮ್ಮುಖದೊಳ್ ಕಂಡು

ಬಿಡುಬಿಡು ನಿನ್ನ ಬಲ್ಗುದುರೆಯಂ ಕಡುಪಿಂ ಪಿಡಿದಿರ್ಪಡಾಣೆಯಂ ।
ಜಡಿ ಮಱೆದಿರ್ದಿನೆಂದಿರದಿರೆಂದು ನಿಜಾಶ್ವಮನಾಂಕೆ ಮಾಳಿಯಂ ॥
ನಿಡಿಲೆಱಿಪಂದದಿಂದೆಱಗೆ ಸೈವೆಱಿಗಾಗಿ ಮಹಾಗ್ರಹೋಚ್ಚಯಂ ।
ಪೊಡೆದನ್ನೊಲಾಗೆ ಮೂರ್ಛೆಗೊಳಗಾದನಟಿಲ್ ಮಿಗೆ ದೀರ್ಘಬಾಹುಕಂ ॥

ಅಂತು ಮೂರ್ಛಿತನಾದುದಂ ಕಂಡಾಂ ಶಿರಶ್ಛೇದಂಗೆಯ್ಯಲೊಡಂ ಕಳಕಳಂ ಪೊಸ್ಮೆ

ಎಲೆ ಕಳ್ಳರ್ ಪಾಯ್ದರಲ್ತ ಲ್ತ ಸವಸದೆ ಬಯಲ್ ಬಂದುದಲ್ತಲ್ತು ಕೇಳ್ ಮು।
ದ್ಬಲವೀಗಳ್ ಬಂದುದಲ್ತಿದು ಕುಸುವುಸ್ರರೀನಾಥಸೈನ್ಯಂ ಮಹಾದೋ ॥
ರ್ಬಲದಿಂದೇಟ್ಟಿಂದು ನಮ್ಮುರ್ವಿಪನನದಟಿನಿಂ ತೀರ್ಚಿತೆಂದಂತತಿವ್ಯಾ ।
ಕುಳಚಿತ್ತರ್ ದೀರ್ಘಬಾಹುಕ್ಷಿತಿಪನ ಸುಭಟರ್ ಮುಂಗೆಡುತ್ತಿರ್ದರಾಗಳ್ ॥

ಅಂತು ಮುಂಗೆಟ್ಟು ಸುತ್ತಲುಂ ಪರಿದು ಪೋಪ ರಿಪುಸೈನ್ಯಮುಂ ಕಂಡು ಗರುಡನಹಿನಿಚಯಮುಂ ಸಂ ।
ಹರಿಸುವ ತೆಱದಿಂದೆ ದೀರ್ಘಬಾಹುಕನ ಮಹೋ ॥
ದ್ಧುರಸೇನೆಯನಾರ್ಪಿಂದಾ ।
ವರಿಸಿ ಕೊಲಲ್ಮಸಗಿದೆಂ ನೃಪಾಲಕತಿಲಕಾ ॥ ೪೪

ಅಲ್ಲಿ ಬೆರಲಂ ಕಚ್ಚಿದರಂ ಪರಿಹರಿಸಿ, ಮುರನನೇಱಿದರಂ ಮುರಳಿ ನೋಡ
ದೆ, ಹಲ್ಲಂ ಕಿಱಿದರಂ ಕೊಲ್ಲದೆ ಬಿಟ್ಟು, ಹುತ್ತವನಡರ್ದರಂ ಹತ್ತೆ ಸಾರದೆ,
ನೀರ್ಗಾಂತರ್ಗಳ್ಳಿಯುಂ ತೋಱದೆ, ಲಿಂಗವನಪ್ಪಿದರಂ ಹಿಂಗಳೆದು, ನೀರಂ
ಪ್ರೊಕ್ಕಗೆ ಬೀರವಂ ತೋಱದೆ, ಬಿಡುದಲೆಯವಗೆ ಕಡುಸುವೀಱದೆ, ಹು
ಲ್ಲಂ ಹಿಡಿದಗೆ ಬಲ್ಲಾಳ್ತನವಂ ತೋಱದೆ, ನಿರಾಯುಧರಂ ಧುರದೊಳ್
ಮುಟ್ಟದೆ, ಶರಣೆಂದವರ ಶಿರವಂ ಕಾದು, ಮಾಱುಾಂತರಂ ತಾಱುತಟ್ಟಪ್ಪಿ
ನಂ ಮಾಡಿ,

ಜವನಜೆಯುಟ್ಟುವಂತೆ ಕಡೆಗಾಲದ ನಂಜಿನ ಗಾಳಿ ಬೀಸುವಂ ।
ತವಿರಳಮೇಘವಹ್ನಿ ಕವಿನಂತಸಿತೋರಗನಟ್ಟಿ ನುಂಗುವಂ ॥
ತವಚಱಿದೆತ್ತಲುಂ ಪರಿದು ಭೀತಿಯೊಳೋಡುವ ದೀರ್ಘಬಾಹುಸೈ
ನ್ಯವನಡವಾಯ್ದು ಸಂಹರಿಸಿದೆಂ ನಿಜಸಾಹಸದಿಂ ಮಹೀಪತೀ ॥ ೪೫

ಅಂತು ರಣಾವೇಶದಿಂದಾಂತ ಭಟಸಂತಾನವುಂ ಕೃತಾಂತಮುಂದಿರವುಂ
ಪುಗಿಸುವಾಗಳ್

ಪಿರಿದುಂ ದೈವವಿಘಾತಿಯಿಂದೆ ಸುಖವಂ ಕಾಣ್ಬಾಸೆ ಮಾಣ್ದೆರ್ದೊಡೇಂ ।
ಗಿರಿಯೊಳ್ ತಾಪಸವೃತ್ತಿಯಿಂ ಕ್ಷಪಿಸಿ ಜೀವಂ ಪೋಗದಿಂದಿನ್ನಿದು ॥
ರ್ಮರಣಕ್ಕಿಂತೊಳಗಾದೆನೇ ವಿಧಿಯೆ ಮುನ್ನಾನಾವನಂ ದುಃಖಸಾ ।
ಗರದೊಳ್ನೂಂಕಿದೆನೆಂದೊರಲ್ವ ದನಿಯಂ ಕೇಳ್ದೆಯ್ದಿದೆಂ ಭೂಪತೀ॥ ೪೬

ಆಧ್ವನಿಯಂ ಕೇಳ್ದಲ್ಲಿಗೆಯ್ದಿ ನೋಲ್ಪಿನ್ನೆಗಂ
ವುಂಗಳವುಮೂರ್ತಿ ತಾಪಸಶಿರೋಮಣಿಯಾಗವುಚಕ್ರವರ್ತಿ ಶು ।
ದ್ಧಾಂಗನಬಾಧಕಂ ಕುಲವಧೂಸಹಿತಂ ಮುಖಸೂತ್ರಸಚ್ಛಿ ಖಾ ॥
ಸಂಗತನತ್ಯಪೂರ್ವದುರಿತಾಂಬುಧಿಬಾಧಕಬಾಡಬಾನಳಂ ।
ಸಂಗರಬಾಧೆಗಳ್ಕಿ ಶಿವಧೋಯೆನುತಿರ್ದನದೊರ್ಬ ಭೂಸುರಂ ॥ ೪೭

ಮತ್ತಾ ತಂ ಬಾಡಬನಾಮಧೇಯನಾಗಿಯುಂ ಜಡಾಕರನಿವಾಸಿಯಲ್ತು;
ತಿಲಕಾಲಂಕೃತನಾಗಿಯುಂ ಮಹಾರಣ್ಯವುಲ್ತು; ರಾಮಾನ್ವಿತನಾಗಿಯು
ಮುಯೋಧ್ಯೆಯಲ್ತು; ಕಾಕಪಕ್ಷವಿಳಾಸಿಯಾಗಿಯುಂ ಬಲಿಭುಕ್ಕಲ್ಲೆನಿಸಿರ್ದ
ಭೂಸುರನಂ ಕಂಡೆನ್ನ ಕೈದುವಂ ಕೀೞಾಳಿನ ಕೆಯ್ಯೊಳ್ಕೊಟ್ಟುವುದೀ
ರ್ವರುವುಂ ನನುಸ್ಮರಿಸಿ

ಈವೇಷಮೆತ್ತಣದು ಸವು ।
ರಾವನಿಗೆಯ್ತಪ್ಪುದೆತ್ತಣದು ನೀವೀರಾ ॥
ಜಾವಸಥಪ್ರರೋಹಿತರೋ ।
ಭೂವಿಸಲರಿದೆಮಗೆ ಪೂರ್ವ ನಿಮ್ಮಯ ಬರವಂ ॥ ೪೮

ಎಂದು ನಿಮ್ಮಿರವೆಲ್ಲಿ, ಇಲ್ಲಿಗೆತ್ತಣಿಂ ಬಂದಿರೆಂದು ಭಕ್ತಿಪುರಸ್ಸರಂ ಕೇಳ್ಲಾಗಿ ದ್ವಿಜೋತ್ತಮನಿಂತೆಂದಂ:—

ಏನಂ ಪೇೞ್ವುದೊ ಪೂರ್ವಮನೆನೆದೊಡಗ್ನಿಜ್ವಾಲೆ ಕೈಕೊಂಡು ಹೃ ।
ತ್ಸ್ಥಾನಂ ಭೋಂಕೆನೆ ಭಸ್ಮವಾಗಲಸು ಬೇಗಂ ಪಾಱಿ ದಿಗ್ಭ್ರಾಂತಿಯಿಂ ॥
ದೇನುಂ ತೋಱದೆ ಪೋಪುದಾದೊಡಮದಂ ಪೇೞ್ದಿಪ್ಪೆನೆಂದಾದ್ವಿಜಂ ।
ತಾನೆಂತಾನುಮನಸ್ವಿಯಿಂದುಸಿರ್ವುದರ್ಕುದ್ಯೋಗಮುಂತಾಳ್ದದಂ ॥ ೪೯

ಅದೆಂತೆನೆ

ಮಗಧಕ್ಷ್ಮಾತೀಶ್ವರಂ ಸ ।
ತ್ವಗುಣಾನ್ವಿತರಾಜಹಂಸನೆಂಬಂ ವಿಶ್ವೋ ॥
ರ್ವಿಗೆ ಮೆಱೆವ ವಸುಮತೀಕಾಂ ।
ತೆಗೆ ಕಾಂತಂ ವಿವಿಧರಿಪ್ರನೃಪಾಲಕೃತಾಂತಂ ॥ ೫೦

ಆತನರಮನೆಯ ಸಚಿವರ್ ।
ನೀತಿವಿದರ್ ಸಕಲಧರ್ಮಶಾಸ್ತ್ರೈಕಮುವಿ ॥
ಖ್ಯಾತರ್ ನಾನಾಭೋಗಪ ।
ರೀತರ್ ಪದಿನೆಣ್ಬರುಂ ವಿನೋದವಿಳಾಸರ್ ॥ ೫೧

ಅವರೊಳ್ ಪ್ರಸಿದ್ಧಿವಡೆದೊ ।
ಪ್ಪವನಾತಂ ಪ್ರೇಮದತ್ತನೆಂಬಾತಂ ಪಾ ॥
ಪವಿದೂರತೀರ್ಥಯಾತ್ರಾ ।
ವ್ಯವಸಾಯದೊಳೊಂದಿ ಪದಿಪಿನಿಂ ಪೊಱಮಟ್ಟಂ ॥ ೫೨

ಅಂತು ಪೊಱಮಟ್ಟನೇಕದೇಶಮಂ ಕಳೆದೊಂದು ಧರ್ಮಪುರಮೆಂಬ ಅಗ್ರಹಾರಕ್ಕೆ ಬಂದು ಯಜ್ಞಶರ್ಮನೆಂಬ ದ್ವಿಜೋತ್ತಮನ ಮನೆಯೊಳ್ ಕಿಱಿದುದಿನವಿರಲ್

ಆತನ ಸಚ್ಚಾರಿತ್ರ ।
ಖ್ಯಾತನ ಸದ್ಗುಣಕೆ ನಾಡೆ ಸಂತೋಷಂಬು ॥
ಪ್ಪೈತಂಗೆ ಯಜ್ಞಶರ್ಮಾಂ ।
ಪ್ರೀತಿ ಮಿಗಲ್ ಕಾಳಯೆಂಬ ಮಗಳಂ ಕೊಟ್ಟಂ ॥ ೫೩

ಅಂತಾಕಾಳಯುಂ ಪಾಣಿಗ್ರಹಣವಂ ಮಾಡಿ ಕಿಱಿದುದಿನಮಿರಲಪಳ್ಳಿ ಸಂತತಿಯಿಲ್ಲದಿರ್ಪುದಱಿಂ ಮಗುಳ್ದು ಯಜ್ಞಶರ್ಮನೆಂಬಂ

ಅವಳನುಜೆಯಂ ವಿಲಾಸೋ ।
ತ್ಸವದಿಂ ಕಾಳಂದಿಯೆಂಬಳಂ ಕೊಟ್ಟಂ ಭೂ ॥
ದಿವಿಜನಿಧಿಯೂಕೆಯೊಳ್ ನಿ ।
ತ್ಯವಿನೋದದಿನಿರ್ದನನುದಿನಂ ತತ್ಸಚಿವಂ ॥ ೫೪

ಅಂತಾಕೆಗಮಾತಂಗಮತಿಸ್ನೇಹಂ ಸಲುತ್ತಿರಲ್ ಕೆಲವು ದಿನದಿಂ ಮೇಲೆ

ಹೃದಯದೊಳೆನುರಾಗಾಂಕುರ ।
ಮುದಯಿಸೆ ಸಂತೋಷಮಖಿಳಬಂಧುಜನಕ್ಕಂ ॥
ಮುದಯಿಸೆ ಪರಮೋತ್ಸವದಿಂ ।
ದುದಯಿಸಿದಂ ತನಯನವಳ್ಗೆ* ವಿಕ್ರಮನಿಳಯಾ ॥ ೫೫

ಧನಧಾನ್ಯಬಂಧುಮಿತ್ರರ ।
ವನಿತಾತತಿ ರಾಜ್ಯಮೆಂಬುವೀವುದೊ ಮುದ್ದಿಂ ॥
ಬಿನದವನೊಡರ್ಚಿಯಾಡುವ ।
ತನಯಂ ಸಂಸಾರಶರಧಿಸೀಮೆಯೆದಲ್ತೇ ॥ ೫೬

ಅಂತವಗೆ ಪ್ರತೊತ್ಪತ್ತಿಯಾಗಲೊಡಂ ಪೂರ್ವನಿಶ್ಚಿತಮಪ್ಪ ತೀರ್ಥಕ್ಕೆ ಪೋಗಲೆಂದು ಯಜ್ಞಶರ್ಮನಿಂ ಕಳಪಿಸಿಕೊಂಡು ಕಾಳ ಕಾಳಂದಿ ತತ್ಕುವಾರನಾತನ ದಾದಿ ಸಹಿತಂ ಸರಯೂನದಿಗೆ ಪೋಗಿ ತಂತವುಗೆ ರಮ್ಯಸ್ಥಾನನುಂ ನೋಡಿ ಸ್ನಾನವುಂಗೆಯ್ವಾಗಳ್

ಉರಿ ಹರಿದಪ್ಪದೆನ್ನೊಡಲೊಳುಳ್ಳಿರ್ದೆ* ಬೆಂದಪ್ಪದೆನ್ನ ಗಂಟಲಂ ।
ಸೆರೆಬಿಗಿದಪ್ಪದೊಂದು ನುಡಿಯುಂ ತಲೆದೋಱಿದು ಚಿತ್ತದುತ್ಸವಂ ॥

ಮುಱಿಪಿಟಪು ಭಾಗ್ಯದೇವಿಕ್ಕೆ ಬಯಲಾಯ್ತು ಸಮಸ್ತಮೆಂದಂ ಮನೋವಮುದಂ।
ಬಱಿಡೆನಿಸಿತ್ತು ಮತ್ತುಸಿರ್ವುದೇನೊ ವಿಧಿಪ್ರತಿಬಂಧಕಾರ್ಯಮುಂ ॥ ೫೩

ಎಂದು ಸ್ತ್ರೀಪುರುಷರಿರ್ಬರುಂ ಬಿಸುಸುಯ್ಯಲಾನಿನಿತು ದುಃಖಕ್ಕೆ ಕಾರಣಮೇನೆಂಬುದುಂ ಮತ್ತಮೂದ್ವಿಜೋತ್ತಮನಿಂತೆಂದಂ:—

ಕನಸಿನ ಸಿರಿ ಕಾರ್ಮುಗಿಲೊ ।
ಡ್ಡಿನ ಚಿತ್ರಂ ಸತಿಯರೊಲ್ಮೆ ಮಿಂಚಿನ ಡಾಳಂ ॥
ಜನಪತಿಯು ಕೂರ್ಮೆಯಿನಲಾ ।
ತನೊಳಾಯ್ತಾತ್ಮಜನ ಸೌಖ್ಯವಿನ್ನೇವೇೞ್ವೆಂ ॥ ೫೪

ಅದೆಂತೆನೆ—

ಹೃದಯದ ತಾಪದಿಂ ಸವತಿಮುಚ್ಚರದಿಂ ತನಗಾತ್ಮಜಾತರಿ ।
ಳ್ದ ಘನಕೋಪದಿಂ ಪರರ ಪೆಱರ್ಗೆಯಂ ಕಡುಕೆಯ್ದು ಕಾಣಲಾ ॥
ಎದ ಬಲದಿಂದೆ ಪೆತ್ತವರ್ಗೆ ದುಃಖಮನೋವದೆ ಮಾಡಿ ಕಾಳಿ ನೂಂ ।
ಕಿದಳೊಡಸಂದು ಬಂದ ತೊಱೆಯೊಳ್ ಮಗನಂ ಪಗೆಯೆಂಬ ಮಾಟ್ಕೆಯಿಂ ॥

ಅಂತು ಕಾಳಿ ತೊಱೆಯೊಳ್ ಮಗನಂ ನೂಂಕಿ ತಾನಲ್ಲದಂತಪಿತ್ತೆ ಬರಲ್ ಇಂಗಿತಸ್ವಭಾವದಿಂದವಳೆ ನೂಂಕಿದಳೆಂದು ಪ್ರೇಮದತ್ತನಱಿದು

ಹಾ! ಮಗನೆ ಹಾ! ಕುಮಾರಕ ।
ಹಾ! ಮುದ್ದುಗ ಹಾ! ವಿಳಾಸನಿಧಿ ಹಾ! ಗುಣಿ ಹಾ! ॥
ಹಾ! ಮಕ್ಕಳ ಮಾಣಿಕವೆಂ ।
ದಾವೋಹದೊಳಾತನೆಯ್ದೆ ದುಃಖಿತನಾದಂ ॥ ೫೦

ಅದಲ್ಲದೆಯುಂ,

ಬಿಟ್ಟವನೇಱಿ ಪೋಪಱಿಗೆ ಬೀೞ್ವೆನೊ ಪೆರ್ದೊಱಿಗೆನ್ನ ಜೀವಮುಂ ।
ಕೊಟ್ಟು ಕೃತಾರ್ಥನಪ್ಪೆನೊ ದವಾಗ್ನಿಗೆ ಬೀೞ್ವೆನೊ ತನ್ನ ಜಿಹ್ವೆಯಂ॥
ತೊಟ್ಟನೆ ಕಿಬ್ಬಿ ಕೊಳ್ವೆನೊ ನದೀತಟದೊಳ್ ಪದೆದನ್ನ ಪಾನಮುಂ ।
ಬಿಟ್ಟು ಶರೀರವಂ ತೊರೆದು ಗೆಲ್ವೆನೊ ಸಂಯ್ಯತಿಯುಂ ನಿರಂತರಂ ॥ ೫೧

ಎಂದು ಚಿಂತಿಸಿ ಮತ್ತಂ ಮನ್ಮಾರ್ಗಕ್ಕಾತ್ಮವಿಘಾತಂ ಕರ್ತವ್ಯಮು ಱ್ತೆಂದು,

ಮೃದುತರ ಲೋಳಿವಾಯ್ ತಳವರ್ ದಟ್ಟಿಡಿ ಮೆಲ್ನಗೆ ಮುದ್ದುಗೆಯ್ತುವಿಂ।
ಪೊದವಿದ ನುಣ್ಪೊದಲಿನ್ನಿಡಿ ಮುದಂ ಮಿಗೆ ತಪ್ಪಳಿಗಾಡುವಾಯತಂ ॥
ತುದಿವೆರಲುಯ್ಯಲಾಟಮಿನಿತುಂ ಪದೆದೊಪ್ಪುವ ಸತ್ಕ್ಕವಾರನಿ ।
ಲ್ಲದ ತನುವೇವುದೆಂದು ತಪಮಂ ಚರಿಸಲ್ಬಗೆದಂ ಮಹಾದ್ರಿಯೊಳ್ ॥ ೬೦

ಸುತರುಳಿಗೊಡೆ ಸಂಸಾರ ।
ಸ್ಥಿತಿ ಸುಖಮವರಿಲ್ಲದಂದು ಸಂಸಾರಿಗೆ ದು ॥
ರ್ಗತಿ ತಪ್ಪದಪ್ಪುದದಱಿಂ ।
ಯತಿಮಾರ್ಗಂ ಸೌಖ್ಯಮುಲ್ಲ ಭಾವಿಪ್ರೌಢರಸಾ ॥ ೬೧

ಅಪ್ಪಪ್ಪೆನೆ ಮಿಗೆ ಪರಿತಂ ।
ದಪ್ಪುವ ಚೈಮುಂಡೆನಲ್ ನೊಸಲ್ಗೆಳಸುವ ಕೈ ॥
ತಪ್ಪಳಿಗುಟ್ಟಲ್ ಕುಣಿಕುಣಿ ।
ದಪ್ಪುವ ಬಾಲಕನನುಱಿದು ಜೀವಿಪರೊಳರೇ ॥ ೬೨

ಉಡಿಗಂಟೆ ಮುಱಿವು ಮಾಗಾಯ್ ।
ಸೂಡವರ್ಕ್ಕಿನ ಬೊಟ್ಟು ಪೊಳೆವ ಕಿಱುಜಡೆದುಱಿಗಲ್ ॥
ಸಡಗರದ ಗೆಜ್ಜೆಯಂದುಗೆ ।
ಕಡುಚೆಲ್ವಾಗಿಪ್ಪ ಸುತನಡಂಗಿದನರಸಾ ॥ ೬೩

ಕೈಪೆಯಿನಗಲ್ದ ಭೂಪತಿಯ ಪಟ್ಟಣದಿಂ ವನವಾಸವಗ್ಗಳಂ ।
ಕಪಟಿಯ ಸಂಗದಿಂ ಪುಲಿಯ ಸಂಗಮತೀವಸುಖಂ ದರಿದ್ರದಿಂ ॥
ಕ್ಷಪಿಸುದಱಿಂದೆ ಲೇಸು ಮರಣಂ ಸುತರಿಲ್ಲದ ಬಾೞ್ಕೆಯಿಂ ಮಹಾ ।
ತಪದೊಳನಾರತಂ ತಪವನಾಂಪುದು ಸೌಖ್ಯಮಿದಲ್ತೆ ಸತ್ಪಥಂ ॥ ೬೪

ಎಂದು ಪುತ್ರವಿಯೋಗದಿಂ ಶರೀರಮಂ ನೀಗಲೆಂದು

ಶೋಕಧ್ವನಿ ಕಾರ್ದೂಲಮು ।
ಡಾಕಳಕಳ ವನಗಜಾಸ್ಯಸ್ಫೂತ್ಕೃತಿ ಘನಭ ॥
ಲ್ಲೂಕವಿಕರಾಳಹೂಂಕೃತಿ ।
ಭೀಕರವೆನಿಸಿರ್ಪರಣ್ಯಮಂ ಮಿಗೆ ಪೊಕ್ಕಂ ॥ ೬೫

ರವಿಚರಿದಾತ್ರತಪಸಂಕುಳಪ್ರಚುರನಿರ್ಭೇದ್ಯಂ ಜರದ್ವ್ಯಾಳ ಪ್ರಸಿಂ ।
ಹವನೇಭಾಕುಳವುಗ್ರವಿಗ್ರಹಕಿರಾತಸ್ತೋಮಸಂಕೀರ್ಣಮೂ ॥
ಣ್ಯ ವಿಲಾಸಂ ವೆಱೆದಿರ್ಪ್ಪುದೊಂದು ವನವಂ ಪೊಕ್ಕಲ್ಲಿ ನಿಶ್ಯಂಕೆಯಿಂ ।
ಯುವತೀಸಂಯುತನೊಪ್ಪವೆತ್ತ ತಪವಂ ಕೈಕೊಂಡನುತ್ಸಾಹದಿಂ ॥ ೬೪

ಅಂತು ಘೋರಾರಣ್ಯಮುಂ ಪೊಕ್ಕು ದಶೇಂದ್ರಿಯಮುಂ ದಶವಾಯುವುಂ ನಿರ್ಬಂಧಿಸಿ ಕಣ್ಗಳಂ ಮುಗಿದು ಕೆಯ್ಯೊಡ್ಡಿ ವಾಯುವಶದಿಂ ಬಂದುದೆ ಆಹಾರವೆಂದು ಪದ್ಮಾಸನದೊಳಿರ್ದು ಪದಿನಾಲ್ಕು ವರ್ಷಂ ತುಂಬೆ

ಇಂದೀರೇೞ್ಬರಿಸಂ ಮಿಗೆ ।
ಸಂದತೊಳ್ದನಕನವ್ರತಂ ಬಿಡದಸುವಂ ॥
ಪಿಂದಿಕ್ಕುವೆನೆಂದಿರೆ ಸಲೆ ।
ಬಂದೆಸಗಿತ್ತದ್ಭುತಾಶೆ ನಿನ್ನಿನ ದಿವಸಂ ॥ ೬೫

ಯಮನಿಯಮಾಸನಾದಿವಿವಿಧಕ್ರಮದಿಂ ಗಿರಿತಳ್ಪದೊಳ್ ಮನೋ ।
ರಮಣಿಯುತಂ ತಪಶ್ಚರಣಮಂ ತಳೆದಿನ್ನೊಡಲಂ ಬಿಸುಟ್ಟು ಸಂ ॥
ಯಮಿನಿಗೆ ಪೋಪೆನೆಂದು ತನುವಂ ಕ್ಷಪಿಸುತ್ತಿರಲೊಂದಪೂರ್ವಸಂ ।
ಭ್ರಮದೊಳೆ ಗಾಳಿ ತೀಡಿತದನೇವೊಗೞ್ದಪ್ಪದೊ ವಿಕ್ರಮೋದಯಾ॥ ೬೬

ಅದೆಂತೆನೆ:—

ಪೊಡೆಯುತ್ತುಂ ಗಿರಿಶೃಂಗಮಂ ನೆಗೆಸುತುಂ ವ್ಯೋಮಕ್ಕೆ ಭೂಜಂಗಳಂ।
ಕೆಡಪುತ್ತುಂ ಗುಹೆಯೊಳ್ ಪ್ರತಿಧ್ವನಿಗುಡುತ್ತುಂ ನಿಮ್ನಗಾಸ್ಥಾನದೊಳ್ ॥
ತೊಡರುತ್ತುಂ ಮೆಳೆವಕ್ಕೆಯೊಳ್ ಮೃಗವನಂದೊಡ್ಡೊಡ್ಡಿಸುತ್ತಾರ್ಪ್ಪುದು।
ಗ್ಗಡದಿಂ ತೀಡಿದುದೊಂದು ಘೋರಪವನಂ ಚಿತ್ರಾವಹಂ ನಾಡೆಯುಂ ॥ ೬೭

ಅಂತು ಬಿಱುಗಾಳಿ ತೀಡಲ್ಪಡೆಯೊಳ್

ನಿಮ್ಮಯ ಸುತನಂ ಕಣ್ಣಿಟ ।
ರುಮ್ಮಳಮಿನ್ನೇಕೆ ನಾಳೆ ಪಗಲೆನುತಾಗಳ್ ॥
ತಮ್ಮಿರ್ಬರ ಮನದುತ್ಸಾ ।
ಹಮ್ಮಿಗಲೋದೋಲೆ ಬಿಟ್ಟುದಾತನ ಕರದೊಳ್ ॥ ೬೮

ಅಂತಾತನೊಡ್ಡಿದ ಕರತಲದೊಳೊಂದೋಲೆ ವಾಯುವಕದಿಂ ಬೀಟ್ಟು ದುಮುದಂ ಕಣ್ದೆಱೆದು ನೋಡಿ

ಇದು ಮತ್ಪ್ರಣಪ್ರತಿಷ್ಠಾಪಕಮಿದು ಮುದವಾರಾಶಿಪೂರ್ಣಂದು ನೋಡಲ್ಕಿದಱರ್ಥಂ ಸಾರ್ಥಕಣಾರ್ಮೃತಮಿದಱಿ ಲಸದ್ದರ್ಶನಂ ಮತ್ತನೂಜಾ ॥ ಭ್ಯುದಯಂ ಪೆಂಪಿಂದಿದೇಂ ಪಿಂದುದು ಸಕಲಸುಖಂ ವುಂದಿದಿರ್ವಪ್ಪುದಂ ಪೇ । ಟ್ಟಿದೆನುತ್ತಾ ಪತ್ರನಂ ಕೂರ್ತವಯವದೊಳಲಂಪಿಂ ಸಮುಂತೊತ್ತಿ ಕೊಂಡಂ

ಅಂತಪೂರ್ವಮಪ್ಪ ಪತ್ರಮಂ ಕಂಡು ಹರ್ಷವಿಷಾದಂಗಳನೊಂದನೊಂದಟ್ಟಿ ವುಗುಳ್ದು ಪುತ್ರಸ್ಮರಣದುಃಖಮಂ ಕೈಕೊಂಡು ಸಂತೈಸಿಕೊಂಡಿಂತೆಂದಂ:— †

ಜಗದೊಳ್ ಪುತ್ರವಿಹೀನರ ।
ಮೊಗಮಂ ನೋಡಲ್ಕೆ ದೋಷವುಕ್ಕದಱಿಂದಂ ॥
ಮಿಗೆ ಪಾತಕಿಯಾನೆನ್ನಂ ।
ಬಗೆವರೆ ನುಡಿಸುವರೆ ಭಾಗ್ಯವಂತರ್ ಧರೆಯೊಳ್ ॥ ೭೫

ಅಂತೆಂಬುದುಂ;

ಎನಗನುರಾಗಮುರ್ವಿ ತನು ಕೊರ್ವಿ ಮುದಕ್ಕುಗಳುನ್ಮೆ ಕೂಮೆರ್ ಭೋಂ ಕೆನೆ ಪೊಱಪೊಣ್ಮೆ ಮೋಹರಸಮುಕ್ಕೆ ಮುದಂ ಕುಡಿಯಿಕ್ಕೆ ಭಕ್ತಿ ಭೂ ॥ ವನೆ ತಲೆದೋಱೆ ವಕ್ತ್ರಕಮಲಂ ನಯವೇಱೆ ಮನಂ ತಳಿರ್ತು ಱು । ಪ್ಮನೆ ಪುಳಕಂ ಕವಲ್ತು ಬಿಗಿದೆಮ್ಮವುಜನ್ಮವು(?)ನುರ್ವರಾಧಿಪಾ ॥ ೭೬

ಅಂತಿರ್ದವರೆಮ್ಮ ತಾಯ್ತಂಬೆಗಳೆಂಬುದನಱಿದಲ್ಲಿಗೆ ಬಂದ ವೃತ್ತಾಂತವುಂ ಕೇಳ್ವೆನೆಂದು ಸೈರಿಸಿಕೊಂಡು ಮತ್ತಮಿಂತೆಂದೆಂ:—

ಈದೀರ್ಘಬಾಹುವಿರ್ದೆಡೆ ।
ಗಾದರದಿಂ ಬಂದಿರೇಕೆ ಪೇೞಿಮೆನಲ್ಕಾ ॥

ಈಕಡೆ ಮೂಲಪ್ರತಿಗಳಲ್ಲಿ ಕಥಾಸಂದರ್ಭಕ್ಕೆ ಅನುಚಿತವಾದ

† ಪಲವಾಳಾಪದೊಳೇಂ ಕೇ ।
ಳಲೆ ಸೊಬಗ ತದೀಯಪುತ್ರನುಂ ನೀನೆ ವನ
ಸ್ಥಲದೊಳ್ ತಪದುಜ್ಜ್ವಗದಿಂ ।
ನೆಲಸರ್ದಾಪ್ಪೇವುದತ್ತನುಂ ನಾನೆಂದಂ ॥ ಎಂಬ ಪದ್ಯವೊಂದಿದೆ.

ಹಾದ್ಯೆವಮೆ ಎಂದಧಿಕವಿ ।
ಪಾದಂ ವಿಗೆ ಕೇಳಿನುತ್ತು ವನನಿಂತೆಂದಂ ॥ ೭೭

ವಾಯುವಶದಿಂದೆ ಬಂದ ಕು ।
ಭಾಯತವೆಂದೆನಿಪ ಪತ್ರಭಾಷಿತದಿಂದಾ ॥
ಹಾಯೆಂದು ಪೆರ್ಚಲಿನ್ನೊಳ್ ।
ಗೇಯರಸಂ ನೆಲಸಿದತ್ತು ಮನದುತ್ಸವದಿಂ ॥ ೭೮

ಅದೆಂತೆನೆ:—

ವನನೃಗರಾಜಿಗಳ್ ಪದೆದು ವೆಯ್ಮ್ಮಜಿಯಲ್ಕರಿಕೆಳ್ದ ಕಾಟ್ಪೊಲಂ ।
ನನೆಕೊನೆವೋಗೆ ಬಿಲ್ಲತತಿ ಬಲ್ಪೆಱಗಾಗಿರೆ ಮತ್ತೆ ಪಂಚನು ॥
ಸ್ವನನೊಗೆವಪ್ಪಿ ಲಾಣೆವಣಿಯಿಂ ಪೊಸದೇಸೆಯೆನಲ್ಕೆ ಕೋಕಿಲ ।
ಧ್ವನಿಯನದಿರ್ಪಿಯೆನ್ನ ಮನಮುಕ್ಕಿರಿ ಪಾಡಿದೆನಾವನಾಂತದೊಳ್ ॥ ೭೯

ವಲ್ಲಕಿಯಂ ಕಾವುನ ಪೂ ।
ವಿಲ್ಲ ಗುಣಧ್ವನಿಯನಿಂಪುಕೆಗೆಯ್ದು ಕುಜಂಗಳ್ ॥
ಪಲ್ಲವಿಸಲೆನ್ನ ಚಿತ್ತಸು ।
ಖೋಲ್ಲಾಸಂ ಪೆರ್ಚಿ ಪಾಡಿದೆಂ ನಲವಿಂದಂ ॥ ೮೦

ಅಂತಾಪುತ್ರನಂ ನಾಳೆ ಮಧ್ಯಾಹ್ನಕ್ಕೆ ಕಾಣ್ಬೆನೆಂಬ ಹರ್ಷಾತಿರೇಕದಿಂ ಪಾಡುತಿರ್ಪಾಗಳ್

ಈಭೂಪಂ ಬೀಂಟಿಗೆ ಬಂ ।
ದಾಭೂಧರದಲ್ಲಿ ಪಾಡುತಿರ್ದೆನ್ನಂ ಕು ॥
ಡಾಭೋಗವಾಗೆ ಕಿನ್ನರ ।
ಲಾಭಂ ತನಗಾಯ್ತೆನುತ್ತೆ ಪಿಡಿದೆಯ್ತಂದಂ ॥ ೮೧

ಎಂದು ಪೇಚ್ಚಿದುಂ

ಎನ್ನಯ ಕಣ್ಮಿಲರ್ಗಳ* ನೀ ।
ರೆನ್ನಯ ಮುಂಗಾಣಲೆಸೆದಿರಲ್ ಕಂಡವರ್ಗಳ್* ॥
ನಿನ್ನೊಳ್ನಿನಿತೀಕೆ ದುಃಖಂ ।
ಚೆನ್ನಿಗ ನೀನಾರೆನಲ್ ತೊದಳ್ಮಗೆ ನುಡಿದೆಂ ॥ ೮೨

ಕಾಳ ತೊಱೆಯೊಳಗೆ ನೂಂಕಿದ ।
ಬಾಳಕನೆಂಬಾತನಾನೆನುತ್ತಂಭ್ರಗೆ ಮು ॥
ದ್ಬಾಳವನೀಡಾಡಲ್ ಪದೆ ।
ದಾಳಿಂಗಿಸಿದರ್ ವಿಳಾಸದಿಂದವರೆನ್ನಂ ॥ ೪೩

ತಂದೆಯಲಗ್ಗರ್ಣ್ಣಳೊಳಾ ।
ನಂದಾಶ್ರು ತುಟಿಂಕೆ ತಾಯ ಮೊಲೆಯೊಳ್ ಪಾಲ್ ಜು ॥
ಮ್ಮೆಂದೆಚ್ಚು ಪಾಯಲಿರ್ದರ್ ।
ನಂದನನಂ ನೋಡಿಯಪ್ಪಿ ಹರ್ಷಿತರಾದರ್ ॥ ೪೪

ಅಂತು ಹರ್ಷಿತರಾಗಿ

ಕ್ಷೋಣೀತಲದೊಳ್ ತ್ರಿಜಗ ।
ತ್ಪ್ರಾಣಂ ಪವನಂ ದಲೆಂಬುದೆನ್ನೊಳ್ ದಿಟಮಾ ॥
ಯ್ತೂಣೆಯಮಿಲ್ಲದೆ ಮಕ್ಕಳ ।
ಮಾಣಿಕವಂ ಕಂಡೆವೆಂದೆನುತ್ತವರೊಸೆದರ್ ॥ ೪೫

ಅಂತು ಸಂತಸದಂತವನೆಯಿದ್ದ ತಂದೆತಾಯ್ಗಳನಾಂದೋಳಾರೂಢರಪ್ಪಂ ತುಮ್ಬುಡಿ ಬರ್ಪಾಗಳ್ ದೀರ್ಘಬಾಹುಕನಂ ಕಾಲಮುಂದಿರವನೆಯಿದ್ದಿಸಿದೊಸಗೆಯಂ ಕುಸುಮಸುಪ್ರದೇಶಂ ಕೇಳ್ದಿನಗಿದಿರ್ವಂದೊಡಾತಂ ಸಹಿತಂ ದೀರ್ಘಬಾಹುಕನ ಲಲಿತಪುರಕ್ಕೆ ನಡೆದು

ಅಂಜದೆ ಒಂದು ಕಾಣ್ಬುದು ಸಮಸ್ತಜನಂ ಸಚಿವರ್ಕಳೊಲ್ಮೆಯಿಂ ॥
ಕುಂಜರವಾಜಿಕೋಶತತಿಯುಂ ಪದೆದೊಪ್ಪಿದ ಪದಪ್ಪತ್ತಿಶೋಭೆಯಿಂ ॥
ರಂಜಿಪುದಾವಗಂ ಪುರವನೆಂದು ನೃಪಾಲಯಮುಂ ವಿಳಾಸದಿಂ ।
ಸಂಜನಿತಪ್ರಿಯುಂಬೆರಸು ಪೊಕ್ಕನತೀವನುನೋನುರಾಗದಿಂ ॥ ೪೬

ಅಂತು ದೀರ್ಘಬಾಹುಕನರಮನೆಯಂ ಧರ್ಮಶೇಖರಸಹಿತಂ ಪೊಕ್ಕು ಪುರಜನಪರಿಜನನಂ ತಂದು ಧರ್ಮಶೇಖರಂಗೆ ಕಾಣಿಸಲಾತಂ ಪ್ರೀತಿವಟ್ಟು

ಎನ್ನ ಫಲವಿಂದು ಸಂದ ।
ತ್ತೆನ್ನ ಮನೋರಥಫಲಂ ಕರಂ ಸಾದ್ಯಂದು ಮು ॥
ತ್ತೆನ್ನ ಕುಲಮೊಳ್ಪವೆತ್ತುದು ।
ನಿನ್ನಿಂದೆನಗೆಂದು ಧರ್ಮಶೇಖರನೊರೆದಂ ॥ ೪೭

ಎಂದು ಸಂತೋಷಂಬಟ್ಟಪೆ ಮುಹೂರ್ತವಾಗೆ ತನ್ನ ಮಗಳಪ್ಪ ಕುಸುಮಾವತಿಯನೆನಗೆ ಕೊಟ್ಟಲ್ಲಿಯೆ ಪಟ್ಟವಂ ಕಟ್ಟ ಕಾಂ ಕುಸುಮಪುರಿಗೆ ಪೋದಂ. ಇತ್ತಲ್

ಪೊಸತೆನಿಸಿದರ್ ರಾಜ್ಯವನಲಂಪ್ರ ಮಿಗುತ್ತಿರೆ ಸಂತವಿಟ್ಟು ಮು ।
ನ್ನಿಸಿ ಸಚಿವರ್ಕಳಂ ಪ್ರರಜನಕ್ಕುಡಲಿತ್ತು ಭವತ್ಪ್ರಪಂಚಮಂ ॥
ಕುಸುಮ ತೀಕ್ಷನಂದನೆಗೆ ಪೇಟ್ದಿ ನಿಜಾಂಘ್ರಿಸರೋಜಮಂ ನಿರೀ ।
ಕ್ಷಿಸುವನುರಾಗದಿಂ ಕಿಱುದು ವಾಹಿನಿಯಂ ತಳರ್ಚಿಂ ಮಹೀಪತೀ ॥ ೪೪

ಅಂತು ಪೊಱವಟ್ಟು ದುರ್ಗಾಪ್ರಾರ್ಥನೆಯಂ ಮಾಡಿಯೊಡವಂದ ಸೇನೆಯುಂ ಮಗುಳ್ದು ಕಳಿಪಿ ದೇವರಂ ಕಾಣ್ಬನ್ನೆವೇಕಾಕಿಯಾಗಿ ಪೋಪೆನೆಂಬನ್ನೆಗಂ

ಕಂಗೆಟ್ಟಂಗಕ್ಷಿಗಳ್ ದಿಗ್ಭ್ರಮೆ ಮಿಸುಪ ನರಂಗೆಯ್ದಿರ್ಬರ್ಟ್ಟಿ ದಾರಿ ।
ಭ್ರಂಗರ್ಥಂ ಶೂನ್ಯಚಿತ್ತಂಗಧಿಕವರವನೀವಿಷ್ಟರೈವಂ ಕರಂ ವೈ ॥
ದ್ದಂಗಾದಿವ್ಯಾಮೃತಂ ತೋರ್ಪವೊಲೆನಗೆ ಭವನ್ಮೂರ್ತಿಯಿಂದಿಲ್ಲಿ ತೋಱು
ತ್ತಂ ಗಶ್ರೀಯೊಳ್ ವಿಳಾಸಂ ಮೆಱೆದುದೆನುತೆ ಮೆಯ್ವೆರ್ದಂ ಸೋಮದತ್ತಂ

ಜಗದಂಬಿಕೆಯೆನಿಸುವ ದು ।
ರ್ಗೆಗೆ ಪರಕೆಯನೀವೆನೆಂಬ ಕತದಿಂ ನಿಮ್ಮಂ ॥
ಘ್ರಿಗಳಂ ಕಂಡೆನೆನುತೆ ಮು ।
ತ್ತುಗಳಂದಱ್ಚಿಸಿದೆನಂಬಿಕಾಪದಯುಗಮಂ ॥ ೪೦

ಅಂತು ದುರ್ಗಾಂಬಿಕೆಗೆ ಪರಕೆಯನೊಪ್ಪಿಸಿಯುಪಾರಪರಿಣಾಮದಿಂ ಸೋಮದತ್ತಂ ರಾಜವಾಹನನನಂಘ್ರಿಗಳನೋಲೈಸುತ್ತಿರೆಯಿರೆ

ಬಾಹುಬಲದಿಂ ತಳರ್ದತ್ತಿ ।
ಸಾಹಸದಿಂ ಕೊಂಡ ರಾಜ್ಯವಂ ವಿಪುಳನವ ॥
ಸ್ನೇಹದ ಸತಿಯಂ ಬಿಟ್ಟೀ ।
ವೋಹದೊಳೀಪ್ತಿಂದೆಯೇಕೆ ಪೇಟ್ ಸುಕುಮಾತಾ ॥ ೪೧

ಎಂದು ಬುದ್ಧಿವೇಱ್ದು ಪೊಸರಾಜ್ಯವನೀಪರಿ ನಿರಾಧಾರನುಪ್ಪಂತಿರೆ ಇರಿಸಲಾಗದು, ಇಂದೆ ಭೋಗಾನವಂತಿಪ್ರರಮಂ ಪೊಕ್ಕುಬಪೆನೆಂದು ಸೋಮದತ್ತನಂ ಕಳಿಪಲಾತಂ ಬೀಜಕ್ಕೆಂಡು ಪೋಗೆ

ಇನಿತು ಸಮರ್ಥರಾರೊ ಪರರಾಜ್ಯವನಿಬ್ಬಿಳಿಗೊಂಡು ಶೌರ್ಯದಿಂ ।
ಜನಪತನೂಜೆಯಂ ಮದುವೆಯಾಗಿ ವಿರೋಧಿಯನಿಕ್ಕಿ ಮೆಟ್ಟಿಯೊ ॥
ಬ್ರಹ್ಮನೆ ಮಗುಳ್ದೆಮ್ಮನೀಕ್ಷಿಸಲನೂನಮಹೋತ್ಸವದಿಂ ತಳರ್ದನೆಂ ।
ದನುಜನನಾವಗಂ ಪೊಗಳ್ದಿ ಮೆಚ್ಚಿದನಲ್ತೆ ಯಭಂಗವಿಕ್ರಮಂ ॥ ೯೦

॥ ಗದ್ಯಂ ॥

ಇದು ನಿಖಿಲಬುಧಜನಮನೋಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚೌಂಡರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಸೋಮದತ್ತಕಥಾವೃತ್ತಾಂತಂ

ಪಂಚಮಾಶ್ವಾಸಂ.

— ರಾಜವಾಹನವಿಜಯಂ —

ಶ್ರೀವಕ್ಷಸ್ಸ್ಥಳನವಿಳಕ ।
ಳಾವಿನುತುಂ ಸೋಮವದತ್ತನಂ ಕಳಿಪಿ ಕಳಾ ॥
ಕೋವಿದನಲ್ಲಿಂದೆಟ್ಟಿಂ ।
ಪಾವನಗುಣನಿಧಿಯಭಂಗವಿಟ್ಮಲಭೃತ್ಯಂ ॥ ೧

ಅಂತು ರಾಜವಾಹನಂ ದುರ್ಗಾಲಯಮುಂ ಪ್ರಭುವಟ್ಟವಂತೀದೇಶಕ್ಕಭಿಮುಖನಾಗಿ

ಪಲವು ನದೀನದಪ್ರಕರಮುಂ ಪಲವದ್ರಿಗಳುಂ ವನಂಗಳುಂ ।
ಪಲವನನಂತದೇಶಮನನಂತಪುರಂಗಳನಂತನಂತಸು ॥
ಸ್ಥಲಮನಿತೆಲ್ಲಮುಂ ಕಳಿದು ರಾಜಕುಮಾರಕನೊಲ್ದು ಪ್ರೌಢ್ಯನು ।
ಜ್ಜ್ವಲಮೆನಿಸಿರ್ಪವಂತಿವಿಷಯಾಂತರಮುಂ ನಿಜಸೋದರಾನ್ವಿತಂ ॥ ೨

ಕೃತಯುಗದೊಂದು ಗೂಳಿಯವೊ ಮರ್ತ್ಯರ ಕೆಯ್ವಲನೋ ವಿಲೋಚನಾ । ವೃತವೊ ಕೊಳಂಗಳೀ ಸಿರಿಯ ತಾಯ್ವನೆಯೋ ವನವೋ ವಸಂತದೇ ॥ ವತೆಯೊ ವಿಳಾಸಿನೀಜನವೊ ಕಾಮಶರಾಳಿಯೊ ಪೇಱೆನಲ್ಕೆಸ । ನ್ನುತವಪೆದೊಪ್ಪುಗುಂ ವಿಷಯಸಂತತಿಯಿಂ ವಿಷಯಂ ನಿರಂತರಂ ॥

ಅದಲ್ಲದೆಯುಂ

ವಿರಹಂ ಕೋಕಂಗಳೊಳ್ ಸತ್ಕುಲಪತಿ ದಿವದೊಳ್ ಬಂಧನಂ ನವ್ಯಪುಷ್ಪೋ । ತ್ಕರದೊಳ್ ದುಷ್ಟಸ್ವಭಾವಂ ತುರಗದೊಳರಿಸಂಮರ್ದನಂ ವಿಷ್ಣುಸತ್ತಂ । ತರದೊಳ್ ವ್ಯಾಜಂ ಮಹಾಲಂಕೃತಿಯೊಳಧರಸಂಜೀವನಂ ಸಂತತಂ ನಾ । ಗರಿಕಾದಿಪ್ರಾಥರೊಳ್ ಸಂದೆಸೆವುದನುದಿನಂ ಸಲ್ಲವಾನಾಜೊಳಿಂದುಂ ॥ ೪

ಆವಿಷಯಕ್ಕೆ ನೂತ್ನಮಣಿದರ್ಪಣದಂತೆ ಲಸದ್ವಿಭೂತಿಸಂ । ಭಾವಿತನಿರ್ಮಳಪ್ರಚುರವೃತ್ತಮೆನಿಪ್ಪ ಜನಪ್ರಸನ್ನಸಾ ॥

ಖ್ಯಾವಹಮುಂ ನಿಮಿರ್ಚಿ ನನರತ್ನ ಸುವರ್ಣ ವಿಕೀರ್ಣದಿನ್ಯಹ ।
ವ್ಯಾವಳಿಯಿಂ ವಿಚಿತ್ರಮೆನೆ ರಂಜಿಪ್ರುದಲ್ಲಿಯುವಂತಿಕಾಪುರಂ ॥ ೫

ಅಂತಾಪುರಮುಂ ಪುಟ್ಟಿವರೆ

ಸುಲಲಿತಚಂದ್ರಕಾಂತಕಲಶಂಗಳಿನಂಗನೆಯರ್ ವಿಳಾಸದಿಂ ।
ಕುಳಿರ್ವ ಜಲಂಗಳಂ ಮೊಗೆದು ಪಾಂಥಜನಕ್ಕೆ ಱೆಯುತ್ತಿರಲ್ಕೆ ಬೀ ॥
ತಳಜಲಮಿಲ್ಲಮುಂ ಸವಿಯೆ ತಮ್ಮ ಮುಖೇಂದುವಿರೀಚಿಯಿಂದಮಾ ।
ಕಳಶಮನೈದೆ ತೀವಿ ಪಥಿಕರ್ಗೆಱೆವರ್ ತೃಷೆ ಪಿಂಗುವನ್ನೆಗಂ ॥ ೬

ಬಿಸಿಲಿಂ ಬೆಂಡಾದವರ್ ತತ್ತೃಷೆಗೆ ಪರಿದು ನೀರಲ್ಕೆಯಿಂ ನಿಲ್ಗೆ ಕೈಮು ।
ಟ್ಟುಸಿರಂ ನುಂಗಿದರ್ ನಾಸಾಪುಟಮುರಳೆ ಬೆಮರ್ ಚುಮ್ಮಿನುತ್ತುಣ್ಮೆ ಕೈ
ಕಂ ॥ ಪಿಸೆ ಗೆಂಟಲ್ ತಟ್ಟುತಾಱಲ್ ತನು ತಣಿದು ಕುಳಿಕೊರ್ದೆ ಪಂಚೇಂ
ದ್ರಿಯಂ ರಾ । ಗಿಸೆ ತಾಪಂ ಪಿಂಗಿ ಪಾಂಥರ್ ಕುಳಿವರ್ ಸಲಿಲಮುಂ ಪೀದುರ್
ತೇಗುತ್ತಿ ಪ್ರೋಪರ್ ॥ ೭

ಅಂತಾಪ್ರವೆಯೊಳ್ಗಾತಪತಾಪಮುಂ ಕಳೆದಲ್ಲಿಂ ತಳವಾರ್ಗಳ್ ಮುಂದೆ
ರಾಜಶುಕಂ ಕರ್ದುಂಕೆ ರಸಧಾರೆಗಳಿಂದೆಸೆದಿರ್ಪ ದಾಡಿಮಿ ।
ರಾಜೆಗಳಿಂ ಪಿಕಾಳಿ ಕುಟುಕಲ್ ಸೊನೆಬಿಂದುಗಳೊಸ್ಪುವಾಮ್ರಧಾ ॥
ತ್ರೀಜದಿನುಳ್ಳರಲ್ದಲರ್ಗಳೊಳ್ಮಿಗಂಪನೊಜುಲ್ದು ಪೀರ್ದ ಭೃಂ ।
ಗೀಜಯನಾದದಿಂ ಪಲೆಪಿನಿಂ ಮೆಱೆಗುಂ ಪುರವಾಬಹಿರ್ವನಂ ॥ ೮

ಅಂತಾಪುರದ ಬಹಿರ್ವನದ ವಿಳಾಸಮಂ ನೋಡುತ್ತುಂ ಬರೆವರೆ ಮುಂದೆ

ಅಗಱಿಂ ಪ್ರಾಕಾರದಿಂ ಡೆಂಕಣಿಯಿನನುಪನುದ್ಯಾರದಿಂ ಸತ್ಪತಾಕಾ ।
ಳಿಗಳಿಂದಾಳ್ವೀರಿಯಿಂ ಕೊತ್ತಳದಿನಿಡುಸರಳ್ಗಂಡಿಯಿಂ ಖಂಡಿಯಿಂದಂ ॥
ಬಗೆಗೊಳ್ವಂ ಬೀಱಿ ನೋಡುತ್ತ ತಿಗಡಿಗೆ ಸಿರಂದೂಗುತುಂ ಪೈ ಮೆಯಿಂದಂ ।
ಪುಗುತಂದಂ ಕೂರ್ತವಂತೀಪುರದೊಳಗನಿಳಾಕಾಮಿನೀಜೀವತೇಕಂ ॥ ೯

ಅಂತು ಪುರಮುಂ ಪೊಕ್ಕು ರಾಜವಾಹನಂ ಪ್ರಪ್ಲೋವ್ಯವನ ಮೊಗಮುಂ ನೋಡಿ— ಈ ಪಟ್ಟಣಮನಾಳ್ವರಸನ ಪೆಸರೇನೆಂದು ಕೇಳ್ವುದುಮಾತನಿಂ ತೆಂದಂ:—

ಈಪುರಹಮನಾಳ್ವನಾನತ ।
ಭೂಪಾಲಕಮೌಳಿಮುಕುಟಮಂಡಿತಚರಣಂ ॥
ಚಾಪಲರಿಪುನೃಪಮಥನಭು ।
ಜಾಪರಿಪನವಂತಿದೇವನೆಂಬ ನರೇಂದ್ರಂ ॥ ೦೦
ಆಭೂಪನರಸಿ ಗುಣಗಣ ।
ಶೋಭಾನ್ವಿತೆ ಪೆಂಪಿನಿಂ ಸುರೇಂದ್ರನ ಸತಿಸ್ತೋಲ್ ॥
ಸೌಭಾಗ್ಯವಂತೆ ಮಂಗಳ ।
ವೈಭವೆ ಮಾದೇವಿಯೆಂಬ ವನಿತಾರತ್ನಂ ॥ ೦೧
ಅವರಿರ್ವರ್ಗೊರ್ಮಲವಿಂ ಸಂ ।
ಭವಿಸಿರ್ದಂ ಕೀರ್ತಿಸಾರನಿಂ ಪಿರಿಯುಂ ಭೂ ॥
ಭುವನಪತಿ ದರ್ಪಸಾರಂ ।
ನವನೀತಿಪ್ರಾರ್ಥನತುಳಗರ್ವಾರೂಢಂ ॥ ೦೨
ಆದರ್ಪಸಾರನನುಜೆ ಕೈ ।
ಕೋದರಿ ಶಶಿಮುಖಿಯವಂತಿಸುಂದರಿ ಲೋಕೋ ॥
ನ್ಮಾದಿನಿ ಘನಕುಚೆ ಸಕಲಗು ।
ಣೋದವಸಿತೆ ಪೆಸರೊಳಿಸೆನ ಕನ್ಯಾರತ್ನಂ ॥ ೦೩
ಆಕೆಗಮೆನ್ನರಸಿಗಮು ।
ವ್ಯಾಕುಳದಿಂದತಿಸಖಿತ್ವಮೆಸೆದಿರ್ಪುದು ಪ ॥
ದ್ಮಾಕರಕೆ ರಾಜಹಂಸಾ ।
ನೀಕಕ್ಕನವರತಸಂಗವೊಪ್ಪುವ ತೆಱದಿಂ ॥ ೦೪

ಎಂದು ಪುಷ್ಪೋದ್ಭವಂ ಪೇೞಿಲ್ ರಾಜವಾಹನಂ ಕೇಳುತ್ತುಂ ಪುಷ್ಪೋದ್ಭವನ ಪಿತೃಮಾತೃಗಳಿರ್ದ ಮನೆಗೆ ಬಂದವರ್ಗೆ ನಮಸ್ಕರಿಸಿ ತನಗೆ ಪೊಡೆವಟ್ಟ ಬಾಲಚಂದ್ರಿಕೆಯಂ ಪರಸಿ ಬೞಿಯಂ

ಹಿಮಜಲದಿಂ ಕರಚರಣಾ ।
ಗ್ರಮುಖಪ್ರಕ್ಷಾಲನಂಗಳಂ ಮಾಡಿ ಸುಗಂ ॥
ಧನುಯಂಬುವನೀಂಟಿ ಪಥ ।
ಶ್ರಮಮಂ ಕಳೆದಂ ನೃಪಾಲತನಯುಲಲಾಮಂ ॥ ೦೫

ಅನಂತರಂ ಮಜ್ಜನಭೋಜನಾದಿವ್ಯಾಪಾರಮುಂ ಮಾಡಿ ದೇಶಾಂತರವೃತ್ತಾಂತಮುಂ ರತ್ನೋದ್ಭವ ಹೇಮಪ್ರಭೆ ಬಾಲಚಂದ್ರಿಕೆಯುಗೆ ಪಟ್ಟಿದ ಪಲವು ದಿನಮೆಲ್ಲರಱುವಂತು ತಾನುಂ ಪುಷ್ಪೋದ್ಭವನುಂ ವಿಪ್ರವೇಷದಿಂದಿರಲ್

ಎಂದಿನ ತೆಱದಿನವಂತೀ ।
ಸುಂದರಿಯೋಲಗಕೆ ಬಾಲಚಂದ್ರಿಕೆ ಪೋಗಿ ॥
ರ್ದಿಂದಂದಿನ ವಾರ್ತೆಗಳಂ ।
ಬಂದೊಲವಿಂ ಪೇೞ್ದಿಳುವ ರಾಧೀಶ್ವರನೊಳ್ ॥ ೧೬

ಅಂತು ಪ್ರತಿದಿನಂ ಪುಟ್ಟಿದ ವಾರ್ತಾವಿಶೇಷಮುಂ ಪೇೞುತ್ತೊಂದುದಿವಸಂ ರಾಜವಾಹನನುಂ ಪುಷ್ಪೋದ್ಭವನುಂ ಕುಳ್ಳಿರ್ದಾಗಳಾಬಾಲಚಂದಿಂತೆಂದಳ್:—

ಭಾವನ ಗುಣಮನವಂತೀ ।
ದೇವಿ ಕರಂ ಕೇಳ್ದು ಮೆಚ್ಚಿ ಕಾಣಲ್ವೇೞ್ಕೆಂ ॥
ದಾವಸಿತೆ ಪೊಱಗಣುಪವನ ।
ದೋವರಿಗೇೞ್ತಿಪ್ಪುದೆಂದು ಪೇೞ್ದಿಳ್ ನಿಮ್ಮಂ ॥ ೧೭

ಎಂದೊಡೀಪ್ರಸಂಗಕ್ಕೆ ಕಾರಣಮೇನೆಂದು ರಾಜವಾಹನಂ ಕೇಳ್ದೊಡಾಕೆ ಇಂದಾಂ ತಳ್ವಿ ಪೋಗಲೆನ್ನನವಂತಿಸಾಂದರಿ ನೋಡಿ

ವನಜಮುಖಿ ನಿನ್ನ ಬರವೇ ।
ಕಿನಿತುಂ ಪೋಟ್ಟಾದುದೆಂದು ಪೇೞೆನಲಾಂ ಕೇಳ್ ॥
ವಿನಯವತಿ ನಮ್ಮ ಪೊಸಭೂ ।
ವನ ಪದಪರಿಚರ್ಯೆಯಿಂದೆ ನಾಂ ತಳ್ವಿರ್ದಿಂ ॥ ೧೮

ಎಂದೊಡಾತನೆಲ್ಲಿಂದಂ ಬಂದನೆಂದಾಕೆ ಕೇಳ್ದೊಡೆ ಆಂ ಮುನ್ನಱಿದಿರ್ದ ದೇಶಾಂತರವೃತ್ತಾಂತಮುಂ ಪೇೞ್ದು ಮತ್ತಮನೇಕಗುಣಂಗಳಂ ಪೇೞಲಾ ಸುಭಗವಮೂರ್ತಿಯಂ ನಾಳೆ ಪುಷ್ಪಾಪಚಯವ್ಯಾಜದಿಂ ವನಕ್ಕೆ ಬಂದು ನೋೞ್ಪೆನಾತನನುಪವನವಿಳಾಸಮಂ ನೋಡುತ್ತಿರಲ್ ಪೇೞೆಂದಳೆಂದು ಪೇೞ್ದೊಡದರ್ಕರಸಂ ಹರ್ಷಂಬಟ್ಟು ಮುಱುದೆವಸಂ,

ಪಸುರ್ದಳಿರ್ಗಳಿನಲರ್ದೊಪ್ಪುವ ।
ಕುಸುಮಂಗಳನೊಲೆದ ಫಲವಿಶಾನಂಗಳಿನೊ ॥
ಲ್ಪಿಸೆವ ಶುಕಪಿಕರವಂಗಳ ।
ನೆಸೆದಿರ್ಪುದ್ಯಾನಮಂ ನೃಪಾಲಂ ಪೊಕ್ಕಂ ॥ ೧೯

ಅಲರ್ದಲರ್ದೊಂಗಲಂ ಕುಣಿಸುತುಂ ಸೊನೆಸೋನೆಯನೆಯ್ದಿ ಸೂಸುತುಂ
ತಳಿರ್ಗಳಿಂಬಿನಿಂ ನುಸುಳುತುಂ ಮುಕರಂದಮನಪ್ಪುತುಂ ಕೊಳಂ ॥
ಗಳ ತಡಿಯೊಳ್ ವಿಹಾರಿಸುತೆ ಪಾಡುವ ಸೋಗೆಗಳಂ ಬಿದಿರ್ಚುತುಂ ।
ಪಲವು ವಿನೋದದಿಂ ಸುಳಿವ್ರುದಾಬನದೊಳ್ ಮಿಗೆ ಮುಂದಮೂರುತಂ ॥ ೨೦

ತಮುಂದಮೂರುತನಸಿದಿರ್ಗೊಳುತ್ತುಂ ನೋಡಲ್ ಮುಂದೆ,

ತಲ್ಲಣದಿಂ ಸಮುಂತುದಯಮಾಗಲೊಡಂ ಪರಿತಂದು ತುಂಬಿ ತಂ ।
ಪಿಲ್ಲನುನೀಜ್ಜಿ ಕೊಂಡಸ್ರವೆನುತ್ತಿರವಂತಿಗೆಜಾಜಿವೊಲ್ಲಿಗಳ್ ॥
ಮಲ್ಲಿಗೆ ತಮ್ಮ ತಮ್ಮ ನಱುಗಂಪನೆ ಬೈತಿಡಲಿತ್ತವೋಲ್ ವನ ।
ಕ್ಕಲ್ಲೆಸೆಗುಂ ಕದಂಬವಿನಿಪೋಗರಗಂಪೆಸೆದಿರ್ಪ ಚಂಪಕಂ ॥ ೨೧

ಕಾಸುಮಂ ತ್ರೀವಿರೆ ಪೊರ್ದುಗುಂ ಮಧುಪಸಂಗಕ್ಲೇಶಮೆಂದಂತವಂ ।
ಬಿಸುಟತ್ಯದ್ಭುತದಿಂ ಮೊದಲ್ತುದಿವರಂ ಕಾಯ್ವಣ್ಣಳಂ ಪೀಱಿ ಕ ॥
ಕ್ಕಸೆದೊಪ್ಪಂ ಬಡೆದಿರ್ಪ ಬಕ್ಕೆವಲಸಂ ಮುಂ ಕೊಂಡು ಪದ್ಮೋದ್ಭವಂ ।
ರಸವಸ್ತು ಪ್ರಕರಂಗಳಂ ಬಱಿಕದೇಂ ಮಾಡಲ್ ಮನಂದಂದನೋ ॥ ೨೨

ಪದೆದು ಸುಧಾಂಶು ರಾಹುಭಯದಿಂದನುದರ್ಶಂ ಮಡಗಿಟ್ಟ ನೀಲ್ಪು ಪೋ।
ಗದ ತೆಱದಿಂ ಸಯಂಬಡೆದ ಪಚ್ಚೆಯ ಕುಪ್ಪಿಗೆಯೊಳ್ ಸುರಕ್ಷೆಯೆಂ ॥
ಬುದನಱಿದಿಂಬಿನಿಂ ಮೆಱೆವ ಕೋಮಳಕಾಂತಿಯನಾಂತು ನಾಡೆ ಭೂ ।
ಜದೊಳೊಲೆದಾಡುತಿರ್ಪ ಪಸುಗರ್ಮಿಯ್ಗಳನೀಕ್ಷಿಸಿದಂ ಕುಮಾರಕಂ ॥ ೨೩

ತಳಿರ್ನೆಯೊಳ್ ಪೊರಳ್ದು ಸೊನೆವಿಂಡುಗಳೊಳ್ ನಸುನಾಂದು ಗಂಡುಗೋ
ಗಿಲೆಗಿಳತುಂಬಿಗಳ್ಗಳಿದು ತೆಂಕಣ ಗಾಳಿಗೆ ಕಂಪಿಸುತ್ತೆ ಪೂ ।
ಗಳೆನುಱಿ ನೂಂಕಿ ಚೈತ್ರವಿಟನೊಳ್ ವಿರಹಾತುರೆಯಾದ ಕಾಂತೆವೋಲ್ ।
ವಿಳಸಿತಮಾಗಿ ಮಾನುರದೊಳಿರ್ದುವು ಮಾವಿನ ಪಣ್ಗಳೋಳಿಗಳ್ ॥ ೨೪

ತನಿವದನಾಗಿ ಕೆಂಪನೊಳಕೊಂಡು ಸುಗಂಧಮನಾಂತು ತುಂಬಿಯೊ ।
ಪ್ಪಿನಿರಸಮುಬ್ಬಿ ಸದ್ವಿಜಪರೀಕ್ಷಿತವಲ್ಲದ ಮುನ್ನ ಪೀರ್ದು ಮಾ ॥
ವಿನ ತನಿವಣ್ಗಳಂ ಸೊಬಗರಾವವರಾಗಳೆ ತಮ್ಮ ಕೂರ್ತ ಕಾ ।
ಮಿನಿಯರ ಪೆಂಪುವೆತ್ತ ಧರಸೇವೆಯ ಭಾವನೆಯೊಳ್ ಮುಂಜಿಂಗಿದರ್ ॥ ೮೫

ಮತ್ತಮದು ವನದೇವತೆಯರ್ ವನಕೇಳಿಗೆ ವಂದ ಮೆಲ್ಲಡಿವಜ್ಜೆಗಳನ
ಱಿಸ್ರವ ಪಿಂಜರಿತಪರಾಗಪುಂಜದಿಂ, ಕಲಕಂತಂಗಳೊಳ್ಗೊನಗರ್ಗಳಂ ಕ
*ರ್ದುಂಕಿ ಸುರಿವ ಸೊನೆವೊನಲಿಂದಗ್ಗಳವಾದ ಕೋಲ್ಕೆಸಱಿಂ, ಗಿಳಿವಿಂಡು
ಗಳ್ ಕಱಿವಣ್ಗಳಂ *ಕರ್ದುಂಕೆ ಇನಿದುಮೊಸರ್ವ ದಾಡಿಮಿಾರಸಂಗಳಂ, ಮೆ
ಲ್ಲೆಲರ್ ತೀಡೆ ವಲ್ಲಿಗಳಿಂದೊಕ್ಕ ಮೊಲ್ಲೆಮಲ್ಲಿಗೆಯರಲಿಂ, ಖಚರೀನಿಚಯಂ
ಗಗನಮನಡರಲ್ ಬಱಿಲ್ಕೆಯಂ ಕಳೆಯೆ ಪಟ್ಟಿದ್ದು ಪೋದ ಪಲ್ಲವದ ಪಾಸಿ
ಕೆಗಳಿಂ, ಬಂಡುಂಡು ಮುಂಡಳಿಸಿ ರುಂಕಾರಂಗೆಡುವ ಮಱಿಸಱಿವೆಗಳಿಂ,
ಕಂದರ್ಪನ ಬೇಹಿನಂತಂದು ಸುಱಿವ ಮಂದಮಾರುತನಿಂ, ಚೆಂದಂಬಡೆದಿ
ರ್ದ ವನಮುಂ ನೋಡುತ್ತುಂ ಒರೆ, ಅಲ್ಲಿ

ಮದನಂ ಮುಂ ಮರುಳಾಗಿ ಶಂಕರನ ಭಾಳಾಕ್ಷಾಗ್ನಿಗಂದೇಕೆ ನಿ ।
ಲ್ಕಿದನೀವಾಮರದೊಳ್ಪುವೆತ್ತ ನೆಲೆಲೊಳ್ ನಿಂದಿರ್ದೊಡಾಕಿಚರ್ಗ ತ ॥
ನ್ನಿದಿರ್ವಂದಾಗಳೆ ಶೈತ್ಯಮಾಗಿ ಪದಿಪಿಂ ಮಂದಾನಿಲಂ ಚಂದ್ರಿಕಾ ।
ಭ್ಯುದಯಂಬೋಲ್ ಶಿಖಿರೂಪಮುಂ ತಳೆಯದೇ ಸಾಮಿಪ್ಯಸಂಪತ್ತಿಯಿಂ ॥

ಎಂಬ ಮಹಿಮೆಗಳುಂಬುವಾದ ಬಂದು ಮಾವುರನ ನೆಲಂ ಕೊಂಡಾಡಿ
ತತ್ಪಲ್ಲವಾಸನನುನಲಂಕರಿಸಿ ಪುಷ್ಪೋದ್ಭವನಿಂ ಪರಿಚರ್ಯೆಯಂ ಮಾಡಿಸಿಕೊ
ಳುತಿರ್ಪಾಗಳ್,

ರಣಿತಂ ನೂಪುರಚಾಪಳಧ್ವನಿ ಕಳಾಪಾನೂನಸತ್ಕಿಂಕಿಣೀ ।
ಕ್ವಣಿತಂ ಕುಂತಳಗಂಧಮೋಹಸುಖಯಾನೋನ್ಮತ್ತ ಭೃಂಗೀರವಂ ॥
ಮಣಿಕೇಯೂರಸುಕಂಕಣಪ್ರಚುರನಾದಂ ಚಾರುಸಲ್ಲಾಪಭಾ ।
ಷಣಶಬ್ದಂ ಧರಣೀಶ್ವರಂಗೆ ಮುದಮಾಗಲ್ ಕೇಳಲಾಯ್ತಾ ಕ್ಷಣಂ ॥ ೮೭

ಅಂತಾಧ್ವನಿಯಂ ಕೇಳ್ದಾದೆಸೆಯಂ ಯುವರಾಜಂ ನೋಲ್ಪಿನಂ,
ಹಿಮಕೃತ್ಪಚ್ಚಿ ಯೊ ಕಾರ್ಮುಗಿಲ್ಗಳೊ ರಥಾಂಗಶ್ರೇಣಿಯೋ ಕಾಮುಬಾ ।
ಣನೊ ಪೇೞೆಂಬಿನಮಾಸ್ಯಕೋವಮಳತೆಯಿಂ ಭೃಂಗಾಳಕಾನೀಕದಿಂ ॥

ದಮುರ್ದು*ತ್ತುಂಗಕುಚಂಗಳಿಂ ಲಸದಪಾಂಗಜ್ಯೋತಿಯಿಂ ಚಿತ್ತವಿ ।
ಭ್ರಮಣಂ ಸಾಲಿಡುತಾವನಕ್ಕೆ ಮುದದಿಂದೆಯ್ದಿತ್ತು ಕಾಂತಾಜನಂ ॥ ೫೪

ಧ್ವನಿಯಂ ಕೋಗಿಲೆಗಳ್ಗೆ ಮೆಲ್ನುಡಿಗಳಂ ಕೀರಾಳಿಗಳ್ಗಾತ್ಮಕಂ ।
ಪನವಂ ಕೋವುಲವಲ್ಲಿಗಳ್ಗಲಸಯಾನಪ್ರೌಢಿಯಂ ಹಂಸೆಗ ॥
ಳ್ಗೆ ನವೀನಂ ಮಿಗೆ ನೋಟಮಂ ವನಮೃಗಕ್ಕಾನಂದಸೌಭಾಗ್ಯಮುಂ ।
ಘನವಂ ತದ್ವನದೇವಿಯುರ್ಗೆ ಸಲಿಸುತ್ತೆಯ್ದಿತ್ತು ಕಾಂತಾಜನಂ ॥ ೫೫

ಚಾಪಲದೃಷ್ಟಿಯಿಂ ಕೆಲವು ಶಾಖಿಗಳೊಳ್ ಕೆಲವಂಘ್ರಿಪಂಗಳೊಳ್ ।
ತೂಪಿಱಿದುನ್ನತಸ್ತನದ ಸೋಂಕುಗಳಿಂ ಕೆಲವುಂ ಕುಜಂಗಳೊಳ್ ॥
ನೂಪುರರಂಜಿತಾಂಘ್ರಿತಳಸಂಗಮದಿಂ ಕೆಲವುಂ ದ್ರುವೊಳ್ ಪಿಕಾ ।
ಳಾಪೆಯರೊಲ್ದು ಪಲ್ಲವಮನಿತ್ತೊಲವಿಂ ನಡೆತಂದರಿತ್ತಿಯೆಂ ॥ ೫೬

ಅಗಲದ ಚಕ್ರವುಂ ಕಠಿನವುಲ್ಲದ ವಾಣಿಕಮುಂ ತೆರಳ್ಕೆಯಿಂ ।
ಮುಗಿಯದ ಪದ್ಮವುಂ ಜೆಳಗುಗುಂದದ ವಿಂಜುಗಳಿಂ ಪೊದಳ್ದಿ ಸಂ ॥
ಪಗೆಗರಿಯಲ್ಲದಾಱಡಿಗಳಂ ಸ್ಮರನೆಂಬ ವಿಧಾತ್ರನೀಗಳೀ ।
ಕೆಗಳ ಶರೀರದೊಳ್ ಪಡೆದವೋಲ್ ಮೆಱೆದತ್ತ ಬಲಾಕದಂಬಕಂ ॥ ೫೭

ಅಂತು ಮಱುವಿಂಬಿನ ತುಱುಗಲಂತೆಯುಂ, ಇಂದುಕಳೆಯ ಸಂಜಣಿ
ಯಂತೆಯುಂ, ಅರಲ ಸರಲ ಹೊರಳಿಯಂತೆಯುಂ, ಕುಡಿಲತೆಯ ಗಡಣದಂ
ತೆಯುಂ, ಪಸುರಡಕೆಯ ಸಸಿಯಂತೆಯುಂ, ಚಂದ್ರಿಕೆಯ ಗಡಣದಂತೆ
ಯುಂ, ಚಿತ್ತಜಪತಾಕೆಯ ವೊತ್ತದಂತೆಯುಂ, ತೆಂಬೆಲರ ಬಂಬಲಂತೆ
ಯುಂ, ವಸಂತನ ಪೊಸಬೀಡಿನಂತೆಯುಂ, ವನದೇವತೆಯ ಮನೆದೇವತೆ
ಯಂತೆಯುಂ, ವಿಲಾಸದಿಂ ಬಪ್ಪ ವಿಲಾಸಿನೀಜನದ ನಡುವೆ

ಮೇಲುದನೊಯ್ಯನೋಸರಿಸುತುಂ ಕುರುಳಂ ಬೆರಲಿಂದಮುರ್ಚುತುಂ ।
ತೋಳ ವಿಲಾಸಮಂ ಮೆಱೆಯುತುಂ ಕಡೆಗಣ್ಣಿಳಗಂ ತುಱುಂಕುತುಂ ॥
ಸೋಲವನೀಯುತುಂ ವಿಟರೊಳೆಣ್ದೆಸೆಯೊಳ್ ಮುಡಿಗಂಪುವೀಱುತುಂ ।
ಲೀಲೆಯೊಳಂದವಂತಿವಧು ಬಂದಳನಂಗನಿಧಾನವೆಂಬಿನಂ ॥ ೫೮

ಮತ್ತಮವಳಾಸಾದಮಸ್ತಕರೂಪವರ್ಣನಮೆಂತೆಂದೊಡೆ:—

ಪೊಸಮುತ್ತನುಗುಳ್ವ ನವಶು ।
ಕ್ತಿಸ್ಪಂಪ್ರುಟಂ ಕಡಲ ವಿದ್ರುಮಂ ಸೋಂಕಲೊಡಂ ॥
ನಸುಗೆಂಪುವೆತ್ತುವೆಂಬಂ ।
ತೆಸೆಗುಂ ನಖದೀಪ್ತಿ ಮೆಱೆವ ಪದಯುಗಮನಳಾ ॥ ೩೩

ಮದನನ ಬಾಣನಿಷಂಗಂ ।
ಸುದತಿಯ ಕಾಲ್ವಿಡಿದು ಪೆಂಸ್ಮುವಡೆಯಲ್ ಬಂದಿ ॥
ರ್ದುದೊ ಪೇಟೆಂಬ ವಿಳಾಸಂ ।
ಸ್ಪದದಿಂ ಮೆಱೆದಿರ್ಪವಳ ಜಂಘಾಕಾಂಡಂ ॥ ೩೪

ಕಾಮುನ ನಿಳಯಕ್ಕೊಲವಿಂ ।
ಸೋಮಂ ಶುಭಲಗ್ನದೊಳ್ ಪ್ರತಿಷ್ಠಿಸಿದ ಲಸ ॥
ತ್ಕೋವಿಳರಂಭಾಸ್ತಂಭನಿ ।
ಕಾಮುಮೆನಲ್ ಮೆಱೆವುವಾಕೆಯೂರುದ್ವಿತಯಂ ॥ ೩೫

ಮದನಶಬರಾಸ್ತ್ರತತಿಗೆ ।
ಳ್ಕದ ವಿಟಮೃಗಸಮಿತಿಯಡರ್ದು ಬರ್ದುಕುವ ಶೈಲಾ ॥
ಗ್ರದ ತೆಱದಿನೊಪ್ಪತಿಕುರ್ದಂ ।
ಸುದತಿಯ ಗುರುತರನಿತಂಬಮತ್ಯುನ್ನತಿಯಿಂ ॥ ೩೬

ಮಡದಿಯ ಸೆಳೆನಡು ತನ್ನಯ ।
ಬಡತನದಿಂ ಹರಿಯ ಮಧ್ಯಮಂ ನಯದಿಂ ಕಿ ॥
ಲ್ಪಿಡಿಸುತ್ತಿರ್ಪುದನಱಿದುಂ ।
ಪಿಡಿಗೊಳಗಾಗಿರ್ಪುದೆಂಬುದದು ಪುಸಿಯಲ್ತೇ ॥ ೩೭

ವಿಟರ ಚಳನೆಯನಕ್ಷರಂ ।
ಚಟುಲತೆಯಿಂ ತಿರುಗುತಿರ್ಪ ಲಾವಣ್ಯರಸೋ ॥
ತ್ಕಟಕೂಪವೆಂಬ ತೆಱದಿಂ ।
ಕುಟಿಲಾಳಕಿಗೆಸೆದುದಲ್ತಿ ನಾಭೀಗರ್ತಂ ॥ ೩೮

ನಾರಿ ನನೆವಿಲ್ಲ ನುಣ್ಪಿನ ।
ನಾರಿಯನೊಲ್ದೀಗಳಂತು ಪಡೆದಪಳೆನೆ ಭೃಂ ॥

ಗೀರುಬಿರರುಚಿಯಿನೆಸೆಗುಂ ।
ನಾರಿಯ ನಿಡುಬಾಸೆ ಕೋವುಳಚ್ಛವಿಯಿಂದಂ ॥ ೩೯
ಶಶಿಕಿರಣಮೆನಾಯ್ದೊಯ್ದ ।
ಳ್ಪಸೆಯಲ್ ಪೋಣಿಸಿದ ತೆಂದ ಮುಕ್ತಾಹಾರಂ ॥
ನಸುಸೋಂಕೆ ಮುಗಿದುವೆಂಬಂ ।
ತೆಸೆಗುಂ ಕುಚಕಮಲಕುಟ್ಮಲಂ ಕೋವುಳಿಯಾ ॥ ೪೦
ಸಲ್ಲಲಿತವಿಮಲಸುವರ್ಣೊ ।
ವೆಲ್ಲರಿಯಂ ತಳೆದು ಪದೆಪಿನಿಂ ಮೆಲ್ಲೆಲರಿಂ ॥
ಪಲಾಡುವ ಲತೆಗಳವೆನೆ ।
ಸೆಳ್ಳುಗುರಿಂದೆಸೆವುವವಳ ನಿಡುನಳಿತೋಳ್ಗಳ್ ॥ ೪೧
ಇಂಬಿನ ಕಂಬುಗ್ರೀವಮಿ ।
ದೆಂಬರ ಮಾತಿರ್ಕ್ ಮುಕ್ತಿಕಗ್ರೀವಂ ತಾ ॥
ನೆಂಬುಪಮೆವೆತ್ತು ಕೋಭಾ ।
ಡಂಬರಮುಂ ಪಡೆದುದವಳ ಕೋಮಲಕಂಠಂ ॥ ೪೨
ಅನುರಾಗರಸವಿಲಾಸಿನಿ ।
ಯಿನಿಯನ ಮೇಲ್ವ್ಯಯಲೆಂದು ತದ್ವದನನಿಕ್ಕೇ ॥
ತನದ ಪ್ರೊಸಂತಿಲೊಳಿರ್ದಪ ।
ಳೆನೆ ಸತಿಯೊಳ್ಪಟ್ಟಮು ಕೆಂಪು ರಂಜಿಸುತಿರ್ಕುಂ ॥ ೪೩
ವದನಸಿತಾಂಬುಜದೊಳ್ ಕೊಂ ।
ಡದಂತು ತರತರದ ಕೋಳ್ಗಳಿಂದೊಪ್ಪುವ ವ ॥
ಜ್ರದ ಕೇಸರಮೆಂಬುಪವೆ ।
ಪದೆದುವೆನಲ್ ಮೆಱೆವುವವಳ ದಂತದ್ಯುತಿಗಳ್ ॥ ೪೪
ಕ್ಷ್ಮೋಣಿಯನಲೆಯಲ್ ಸುಮನೋ ।
ಬಾಣಂ ಕುಸುಮಾಸ್ತ್ರವಿತತಿಯಂ ಮುಸಿವ ಲಸ ॥
ಚ್ಛಾಣಮೆನಲೆಸೆಯುತಿರ್ಕುಂ ।
ಮೋಣಿಕ್ಯಾಧರೆಯ ನುಣ್ಪುವೆತ್ತ ಕಪೋಲಂ ॥ ೪೫

ಪಱಿಮೆಗಳಿಂಜಲಿಸದ ಮು ।
ನ್ನಿಱಿದು ವಸಂತಂ ಸುಗಂಧನುಂ ಬೈತಿಟ್ಟಾ ॥
ನಱುಗಂಪಿನ ಕುಪ್ಪಗೆಯಿಂ ।
ಬೆಱಿಕಮನೊಡರಿಸುವುದವಳ ನಾಸಾನುಕುಳಂ ॥ ೪೬

ಲಳನಾರತ್ನವಿದೆನಿಸಿ ।
ಪೆಂಳಿಯಳ ಕಣ್ಬುಗುವುದರ್ಕೆ ಸನುಯಂಬಡೆಯಲ್ ॥
ನೆಲಸಿರ್ಪಂಜನರೇಖಾ ।
ವಿಳಾಸನುಂ ಪಡೆದುವನಳ ತಳ್ತಿವೆದುಱುಗಲೆ ॥ ೪೭

ಅಂಬುಜಪತ್ರಕ್ಕೆಱಿಗಿದ ।
ತುಂಬಿಯ ವುಱಿಯೆಂಬ ತೆಱಿದಿನಬ್ಜಾಕ್ಷಿಯ ಕ ॥
ಣ್ಗಿಂಬಾಗಿರ್ದುವು ಸರ್ವ್ವರ ।
ಕಣ್ಬುಗೆ ಕರಿಯಾಲಿ ನೀಲಮಣಿಸನ್ನಿಭದಿಂ ॥ ೪೮

ತಿಂಗಳ ಬೆಳಗಿನ ರಸದಿನ ।
ನಂಗಂ ಪೂಗಣೆಯನುರ್ದಿ ಚಿತ್ರಿಸಿದನೊ ಕರ ॥
ಣಂಗಳ ಸೀಮೆಯೆನಲ್ ನಿಡು ।
ಗಂಗಳ ಬಿಳಿಯಾಲಿ ರಂಜಿಕುಂ ಕೋವುಳಿಯಾ ॥ ೪೯

ಎಲೆ ಚಂದ್ರವದನೆ ನಿನ್ನಯ ।
ಕೆಳಿಯನ ಬಲ್ಪಗೆಯ ವುಱಿಗಳಿಂದಬ್ಜಭವಂ ॥
ವುಳಿದೊಸ್ಪಗೊಟ್ಟ ರಾಹುವಿ ।
ನೆಳವುಱಿಯೆನಲಡರ್ದ* ಪ್ರಬು ರಂಜಿಸ್ರವವಳಾ ॥

ಕಿವಿಯೆಂದು ಬರೆಯುತುಂ ಮೊದ ।
ಲ ವರ್ಣಮುಂ ವುಱಿದು ಕಡೆಯ ವರ್ಣಮನುಂಗೋ ॥
ದ್ಭವನನರ್ತು ಬರೆದನೆಂಬಂ ।
ತೆ ವಿಳಾಸಂಬೆತ್ತುವವಳ ವರ್ಣಿತಕರ್ಣಂ ॥

ಅಲರ್ವಿಲ್ಲನೋಜೆಯಿಂದಾ* ।
ಲಲನೆಯ ಸನುಮಾಯಕೋಭೆಯನಿತಂ ಬರೆಯಲ್ ॥

ಕಲಿಯಲಳವಟ್ಟ ಚಿತ್ರದ ।
ಫಲಕವೆನಲ್ ಪೊಳೆವುದೆಸೆವ ಪಿಱಿನೊಸಲವಳಾ ॥ ೫೦

ನಾಸಾಚಂಪಕಗಂಧ ।
ಕ್ಕಾಸುರದಿಂದಱಿಯದೆಱಗಿದೆಳದುಂಬಿಗಳೊ ॥
ಲ್ದಾಸೊರ್ಕಿ ನೆಲಸಿದಪ್ಪವೆನೆ ।
ದೇಸೆಯನಾಂತವಳ ಕುಟಿಲಕುಂತಳವೆಸೆಗುಂ ॥ ೫೧

ಲೇಸಿನಿಸುವಾಲಿಯರಳಂ ।
ಸೂಸುವ ನವಮೋಹದಂತೆ ಕುಸುಮಾವಳಿಯಿಂ ॥
ಬಾಸಣಿಸಿ ಮೆಱೆವ ಸೋರ್ಮುಡಿ ।
ಭಾಸುರವೆನಿಸಿರ್ದುದವುಳಕವುಳಾನನೆಯಾ ॥ ೫೨

ತಿಲಕಂ ತಮಾಲಪತ್ರಾ ।
ವಲಿಚಿತ್ರಕವೆಸೆವ ಒನದೊಳಿರಲಲ್ಲದೆ ಪೇಱ್ ॥
ತಿಲಕಂ ತಮಾಲಪತ್ರಾ ।
ವಲಿಚಿತ್ರಕಮಿನಳ್ಗೆ* ಮೆಱೆವ್ರದಚ್ಚರಿಯಲ್ತೇ ॥ ೫೩

ಅದಲ್ಲದೆಯುಂ

ಕನ್ನೆಯ ಚರಣದ ಸೊಬಗಿಂ ।
ತೆನ್ನರ ಮಕುಟಕ್ಕೆ ಸಾರ್ವುದೆಂದುಲಿವಂತ ॥
ತ್ಯುನ್ನತಪದದೊಳ್ ಮೆಱೆಗುಂ ।
ರನ್ನದ ನೇವುರದ ದನಿ ಸರೋಜಾನನೆಯಾ ॥ ೫೪

ಮಾರನರಮನೆಯ ರತ್ನದ ।
ತೋರಣವೆಂಬಂತೆ ಮೆಱೆವ ನವರತ್ನದ ಕಿ ॥
ಮ್ಮಾರರುಚಿ ಮೆಱೆಯೆ ಮೇಖಲೆ ।
ನೀಱಿಯ ಸೆಳೆನಡುವಿನೊಳ್ ಮನಂಗೊಳಿಸಿರ್ಪುಂ ॥ ೫೫

ಈಲಲಿತಬಾಹುಯುಗದ ಸು ।
ಶೀಲಿಂಗನದಿಂ ಮೃದುತ್ವವಂ ಪಡೆದಬೆವೆಂ ॥

ದಾಲಿಂಗಿಸಿದ ಮಣಿಯೆನೆ ।
ಬಾಲೆಯ ನವರತ್ನಕಂಕಣಾಂಗದಮಿರ್ಕುಂ ॥ ೫೪

ಇರುಳಿನಿತು ತಿಮಿರಮುಂ ಸಂ ।
ಹರಿಸಲ್ಕೆ ಸಹಸ್ರಕರವನಾಂತಿರ್ಪಂ ಭಾ ॥
ಸ್ಮರನೆಂದು ನಗುವವೋಲ್ ಭಾ ।
ಸುರಕಾಂತಿಯಿನೆಸೆವ್ರವಳ ಮಣಿಕಟಕಂಗಳ್ ॥ ೫೫

ಅಲರಂಬಿಂಗಣಸಂ ಮಣಿ ।
ಕುಲದಿಂ ಸವೆದಂಗಸಂ ಪದಂಗೊಳಿಸಿದವೋಲ್ ॥
ತಳತಳಿಸಿ ಪ್ರೊಳೆಯುತಿರ್ಕುಂ ।
ಲಲನೆಯ ಪೆಂಪೆಸೆವ ಬೆರಳ ಮಣಿಮುದ್ರಿಕೆಗಳ್ ॥ ೫೬

ಸಸಿಮೊಗದೊಳ್ ನಕ್ಷತ್ರಂ ।
ವಿಸುಸ್ರದು ಮರ್ಯಾದೆಯೆಂದು ಸಕಲಜನಂ ಭಾ ॥
ವಿಸುತಿರೆ ನುಣ್ಪೆಳಗಿಂ ರಂ ।
ಜಿಸುಗುಂ ನಾಸಾಗ್ರದಲ್ಲಿ ಮೂಕುತಿಯವಳಾ ॥ ೫೭

ನಿಡುಗಣ್ಪೆಳಗಿನ ಪೂರಂ ।
ಕಡುಪಿಂ ಕಡೆಗೋಡಿವರಿಯೆ ಕಾಂಚಿದಾನುಂ ॥
ತಡೆಯಲ್ಕಿರದಡರ್ದುದೆನಲ್ *।
ಮಡದಿಗೆ ಚೆಲ್ವಾಯ್ತು ತೋರ ಮುತ್ತಿನ ಹಾರಂ ॥ ೫೮

ಸಕಲಾಭರಣದ್ಯುತಿಕ ।
ಣಿರ್ಕೆಯಾದುದೇನಱಿಯಾಯ್ತು ವದನಸರೋಜಂ ॥
ವಿಕಸಿತವಾದುದಱಿಂದೆಂ ।
ಬ ಕೂರ್ಮೆಯಿಂ ಮುತ್ತಿನೋಲೆಯೊಪ್ಪಿದುವವಳಾ ॥ ೫೯

ಅದಲ್ಲದೆಯುಂ

ನಡುವಿಂಗೊಳ್ನಡೆ ದೇಹಕಾಂತಿಗಳಕಂ ವಕ್ತ್ರಕ್ಕೆ ಪೊದದ್ವಯಂ ।
ಮುಡಿಗುತ್ತುಂಗಕುಚಂ ಭುಜಕ್ಕೆ ನಯನಂ ದಂತಕ್ಕೆ ನೈತಂಬಿ ॥

ಟ್ಟಿಡೆಗಳ್ ಮೆಲ್ನುಡಿಗೊಪ್ಪವೆತ್ತ ಧರವಾರ್ದಿಂ ಬಲ್ಲವರ್ ಭಾವಿಸಲ್ ।
ಕಡುಪಿಂದಂಜವವೆಂದೊಡೇ*ಪ್ರೊಗಟಿಪ್ಪುದೋ ರೂಪಂ ವಿಚಿತ್ರಾಂಗಿಯಾ ॥

ಮತ್ತಮಾಕೆ ವನದೇವತೆಯಂತೆ ಮಂಗಳಪ್ರವೋದಪ್ರಸವಮುಖವಿಕಾಸಿತೆಯುಂ, ದಿನಲಕ್ಷ್ಮ್ಮಿಯಂತೆ ಸುಭಗಮೂರ್ತಿವಿಳಾಸಿಯುಂ, ಮೇಘಸಮಯಮಯೂರಿಯಂತೆ ಕಳಾಪಕಾಂತಿಕಮನೀಯೆಯುಂ, ಸರೋವರದಂತೆ ಹಂಸಕವಿಜೃಂಭಿತಪದಪ್ರಚಾರೆಯುಂ, ರಾಮಕಟಕದಂತಂಗಜಬಾಹುಸಾರಂಭೆಯುಂ, ಯೋಗಿನಿಯಂತೆ ಮುಕ್ತಾಹಾರಪ್ರಭಾವೆಯುಂ, ವರ್ಷಾಗಮದಂತೆ ಪಯೋಧರಪರಿಪೂರ್ಣಯೌವನೆಯುಮೆನಿಸಿದೇಱುಂಜವ್ವನೆಯ ಸೌಭಾಗ್ಯರೂಪಾತಿಶಯಮತ್ಯಾಶ್ಚರ್ಯಮೆನಿಸಿದುದು. ಅಂತುಮಲ್ಲದೆಯುಂ,

ತರುಣತಮಾಲಕುಂತಳೆ ಮನೋಹರಕಲ್ಪಲತಾಂಗಿ ಪಲ್ಲವಾ ।
ಧರೆ ಸರಸೀಜಕುಟ್ಮಲಕುಚದ್ವಯೆ ಕೋಕಿಲನಾದೆ ಹಂಸಮಂ ॥
ಧರಗತಿ ಚಂಪಕಾಮಳತನುಪ್ರಭೆ ಕೈರವನೇತ್ರೆ ದಿಟ್ಟಿಗ ।
ಚ್ಚರಿವಡೆದಳ್ ಮನೋಭವನೃಪಾಲನ ಕೇಣಿಯ ತಾಣವೆಂಬಿನಂ ॥ ೬೫

ಅಂತು ಮನೋಹರಂಬಡೆದವಂತಿಸೌಂದರಿ ವನನುಧ್ಯದೊಳ್ ನಿಂದು

ತರತರದ ಪುಷ್ಪಲತಿಕೋ ।
ತ್ಕರವಂ ನೋಡುತ್ತವಂತಿಸೌಂದರಿ ವೇಣೀ ॥
ಧರವನುಗುರ್ಚಲ್ ಬಿಂಬಾ । ೬೬
ಧರೆಯರ್ ಪುಷ್ಪಾಪಚಯವನೆಸಗಿದರಾಗಳ್ ॥

ಈಲತೆಯೆನಗೀಲತೆ ನಿನ ।
ಗೀಲತೆ ತನಗೆಂದು ಪೂತ ಲತೆಗಳ ಪೂವಂ ॥
ಬಾಲೆಯರೆಲ್ಲರ್ ಮುದದಿಂ ।
ಕೇಳೀವನದಲ್ಲಿ ತಿಱಿಯುತಿರ್ದರಲಂಪಿಂ ॥ ೬೭

ಅಂತಾಕೆಯರೆಲ್ಲರುಂ ಪೂದಿಱಿವ್ರದಂ ಕಂಡನಂತಿಸೌಂದರಿ

ಪರಿಮಳಿಪ ಸಂಪಗೆಯ ಕಂ ।
ಪರಿ ಋಧುಕರವಿತತಿಗೆಂಬರದನಱಿವೆನೆನು ॥
ತ್ತರುಣಾಧರೆ ತಿಱಿದಳ್ ತ ।
ತ್ತರುಣಾಳಸನುಳಕಕ್ಕೆ ಸಂಪಗೆಯರಲಂ ॥ ೬೮

ನನೆಜಾಜಿಯ ನರವಿಂದಾ ।
ನನೆ ಜಾಣೆಸೆಯಲ್ಕೆ ತಿಱಿದು ಕಾವುನೊಳುಱೆ ಕಾ ॥
ಯ್ದುನಿತೆ ನಡೆನೋಲ್ಪ ವಿಟರಂ ।
ವನಿತೆಗೆ ಪೊಡಮಡಿಪಳೆಸೆನ ತನ್ನಯ ಸೊಬಗಿಂ ॥
ಪಡ್ವಳಯ ಪ್ರೋಗಸಿ ಬರುತಿ ।
ಪ್ಪಡ್ವಳಯಂ ಸೋವಿ ತಿಱಿದಳಾಪಡ್ವಳಯ್ಗೊಕ್ ॥
ದೊಡ್ಡಲರಂ ಕಾಂತೆ ಕನ ।
ಲ್ದೊಡ್ಡಲನಂಗಂ ವಿಟರ್ಕಳಂ ಗುಱಿಮಾಡಲ್ ॥ ೬೦
ಪುನ್ನಾಗದಲರ್ಗಳಿಂ ಪಂ ।
ಪುನ್ನಾಗವಿಳಾಸಗತಿಯವೊಪ್ಪುವನಂತೀ ॥
ಕನ್ನೆ ಗಣನೆಗಳ ಪೂವ ।
ಕ್ಕನ್ನೆಗವೆಂದೊಲ್ದು ತಿಱಿದಳೆಂದುಪವನದೊಳ್ ॥ ೬೧
ಬಿರಿಮುಗುಳೊಳ್ಕಳಿದುವೆಂದೆಂ ।
ಬಿರಿ ಮುದದಿಂ ಬನ್ನಿ ಕೊಯ್ವೆನೆಂದಖಿಳಕಲಾ ॥
ಧರೆಯರೊಡಗೂಡಿ ಬಿಂಬಾ ।
ಧರೆಯನುವಿಂ ತಿಱಿದಳೆಸೆವ ವೊಲ್ಲೆಯ ಮುಗುಳಂ ॥ ೬೨
ಗುರುಕುಚೆ ತನ್ನಯ ತೊಡವಿಂ ।
ಗುರುಕುಚದೊಳ್ ಕೊಯ್ದಳಿಂಗಜಂಗೆನುರಾಗಾಂ ॥
ಕುರವಗ್ಗಲಿಸಲ್ ನಲವಿಂ ।
ಕುರವಕದಲರಂ ವಿಳಾಸಿನೀಜನಸಹಿತಂ ॥ ೬೩
ಪಾದಪರಿಚರಿಯಶೋಕದ ।
ಪಾದಪದೊಳ್ ಕೊಯ್ದಳೊಪ್ಪೆ ಗೊಂಚಲ್ಮಗಳಂ ॥
ಕಾದಲರನಂಗನಿದಿರೊಳ್ ।
ಕಾದಲವಳ್ ತನ್ನನೆನಗೆ ತನಗೆಂದಾಗಳ್ ॥ ೬೪
ಪಿಕಚಂಚನ್ನಾಟ ಕಳಾ ।
ಪಿಕಚಂ ವೆಱಿಯಲ್ಕೆ ಫಲವನಾಯ್ದಳ್ ವಿಟಜೀ ॥

ವಕುಳಂ ತಲೆಗೇಱುತ್ತಿರೆ ।
ಪಕುಳಿಂಗಳೊಳಲರ್ಗಳಂ ಮುದಂ ವಿಗೆ ವನದೊಳ್ ॥ ೭೫
ಕಾವುಂಗಸೆಮಱರಂ ಕಳಿ ।
ಕಾಮುಕುಳವೆನಿಸ್ಪಮುಗುಳಲರ್ಗಳನುತ್ತುಂ ॥
ರಾಮಾಂತರ್ಗತೆ ನಲಿದಾ ।
ರಾಮಾಂತದೊಳಾಯ್ದಳೊಲ್ದ ಮಲ್ಲಿಗೆಯಲರಂ ॥ ೭೬
ನೆರವಿನಗಾಯ್ತನ್ಯರನಿ ।
ನ್ನೆಱಪಿನಬೇಕೆಂದು ಕಾವುನಲರಂಬಿಸೆಯಲ್ ॥
ತಿಱುವಂ ನೇವರಿಸಲ್ಕಾ ।
ರ್ತಿರುನಂತಿಗೆಯಲರನಬಲೆ ಬನದೊಳ್ ತಿಱುದಳ್ ॥ ೭೭
ಪಾದರಿಯಲರ್ಗಳ ನಂಗಂ ।
ಪಾದರಿಸಲ್ ತಕ್ಕುದೆಂದು ಕೊಯ್ದುಳ್ ದಿವ್ಯಾ ॥
ವೋದವೆಸೆಯಲ್ಕೆ ನಿಜಸಂ ।
ವೋದಮೆನಲ್ ಕಾಂತೆ ತದ್ವನಾಂತದೊಳೊಲವಿಂ ॥ ೭೮

ಮುಡಿ ಜಗುಳಲ್ ಕುರುಳ್ ಕವಿಯೆ ತುಂಗಕುಚದ್ವಯವೊಡ್ಡುಗುಂದೆ ಕ ।
ರ್ದಡರ್ದುರುಕಕ್ಷನೊಪ್ಪಿಯಲರ್ಗಣ್ಮುಮುಗುಳೊಪ್ಪವನೀಯೆ ಕಾಂಚಿಬಿ
ಟ್ಟುಡೆ ಸಡಿಲಲ್ ನಿತಂಬಯುಗಳಂ ನಡುಗಲ್ ವಳಿ ತೆಪ್ಪಿತೆಪ್ಪನೊ ।
ಳ್ನಡು ಸೆಡೆಯಲ್ಕೆ ಕೈನೆಗಪಿ ಪೂದಿಱುದಳ್ ಸತಿ ಸೌಕುಮಾರ್ಯದಿಂ ॥ ೭೯

ಅಂತು ಪ್ರಪ್ಪಾಪಚಯವನೆನೆಸಗಿಯನಂತರಂ,

ನವಹಾರಂ ನೂಪುರಂ ಮೇಖಲೆ ಪೊಸಕಡಗಂ ಜಾಳಿಯುಂ ಸೂಸಕಂ
ಚಿಕೆ । ಲ್ವವತಂಸಂ ಜಂಪೆಯುಂ ಮೂಕುತಿ ಚಳಕಿಗೆ ತೋಳ್ಬಂದಿ ಮಿಂ
ಚೋಲೆ ಕೊಪ್ಪೊ ॥ಪ್ಪವಿನಂ ಗೈವೇಯಕಂ ಪೊಂಜರಿಗೆಯೆನಿಪುವಂ ಪೂಗ
ಳಿಂ ಮಾಡಿ ನಾನಾ । ಯುವತೀಸಂತಾನಕಂ ಸಿಂಗರಿಸೆ ಪಬೆಪಿನಿಂ ಕಾಂತೆ
ಕಣ್ಗೆಡ್ಡಮಾದಳ್ ॥ ೮೦

ಅಂತು ಕೆಳದಿಯರುಂ ತಾನುಂ ಸಿಂಗರಂಗೆಯ್ದು ಅವಂತಿಸೌಂದರಿ ಬಾ
ಲಚಂದ್ರಿಕೆಯ ಪೆಗಲೊಳ್ ಕೆಯ್ಯನಿರಿಸಿ,

ಮಿಸುಗುವ ದುಂಡುಮಲ್ಲಿಗೆಯ ತಾರಮನೊಪ್ಪಿರೆ ತಾಳ್ದ ಮೂಲತೀ ।
ಕುಸುಮದ ಜಾಳಿಯಂದಳಿದು ಮೊಲ್ಲೆಯ ಕಂಕಣವಿಕ್ಕಿ ಚಂಪೆಕ ॥
ಪ್ರಸವದ ಕರ್ಣಪೂರಕಮನಾಂತು ವಿಲಾಸಮನೆಯ್ದೆ ಬೀಱುತ ।
ಚಿತ್ತಿಸಿದ ಮನೋಜರಾಜನಧಿದೇವತೆ ಬರ್ಪವೊಲಾಕೆಯೊಪ್ಪಿದಳ್ ॥ ೪೧

ಅಂತು ಪದವಿನ್ಯಾಸದಿಂದುಪವನಮಂ ಕೃತಾರ್ಥಂಮಾಡುತುಂ ಮಾಕಂದ ವೀಥಿಯೊಳ್ ಬರುತಿರ್ಪಾಗಳ್ ಮುಂದೆ,

ವಿನುಳಾಕರ್ಷಂ ವ್ಯೋಮಯಾತ್ರಾಗತಿಯಿನತಿಬಲಿಷ್ಠತನೀ ಚೂತ ಭೂಜಾ । ತನುಧೂಧ್ಯಚ್ಛಾಯೆಯೊಳ್ ಕಾಯದೊಳೊದಗಿದ ಸಂತಾಪಮಂ ಲೋಪಿಪೊಂದು ॥ ದ್ಯಮದಿಂ ಬಂದಿರ್ದನೋ ಪೇೞೆನಲವಯವಕೋಭೂಪ್ರಭೂಜಾಳದಿಂ ವಿ । ಶ್ವಮನಸ್ಸಂಪ್ರೀತಿಯಂ ಪೆರ್ಚಿಸುತನುನಯದಿಂದೊಪ್ಪಿದಂ ರಾಜಪುತ್ರಂ ॥ ೪೨

ಅಂತಾಮಾಮರದ ನೆಲೆಯೊಳ್ ಮುಂಗಳಾಕಾರನಾಗಿರ್ದ ಮಾನನಿಧಾನನನಂತಿನಿಂದರಿ ಭೋಂಕನೆ ದೂರದೊಳ್ ಕಂಡು,

ಸ್ತನಕಲಶಂಗಳಿಂದಧರಪಲ್ಲವದಿಂ ಪುಲಕಾಕ್ಷತಂಗಳಿಂ ।
ವಿನುತಕಪೋಲದರ್ಪಣದಿನೂರ್ಜಿತನೂಪುರಶಬ್ದವಾದ್ಯದಿಂ ॥
ಮನದನುರಾಗದಿಂ ನಯನದೀಧಿತಿಮಂಗಳರತ್ನದೀಪದಿಂ ।
ವನಿತೆ ವಿಳಾಸವೊಪ್ಪೆ ಯುವರಾಜನನಂದಿದಿಗೊರ್ಂಡಳಾಯಿಂ ॥ ೪೩

ಅಂತಿದಿಗೊರ್ಂಡು

ಎತ್ತಣಿನೆಯ್ದಿದಂ ಮದನನಿಕ್ಷ್ವಾಧನುರ್ಲತೆಯಂ ಪ್ರಸೂನಕಾ ।
ಯತ್ತಕರಂಗಳಂ ಮಕರಕೇತನಮಂ ರತಿಯಂ ಸವಿಸ್ತಾರನಂ ॥
ಮತ್ತೆ ವಸಂತನಂ ಮಱಸಿಯೆಂದು ಕರಂ ಬಿರಿಗಾಗಿ ನೋಡಿದಳ್ ।
ಚಿತ್ತದ ಸಂಭ್ರಮಂಬೆರಸು ಕಾಂತೆ ಕಲಾಧರನಂ ಕುಮಾರನಂ ॥ ೪೪

ಮದನನನಸಂಗನೆಂಬವ ।
ರೆದೆಬಲ್ಲಿದರಕ್ಕ ಬಲ್ಲರಿನ್ನಾದೊಡೆ ನೋ ॥
ಟ್ಟಿದು ಸುಭಗಮೂರ್ತಿಯಂ ಕಾ ।
ಣದೆ ಕೇಳ್ದೆ ಪುಸಿಯನುಸಿರುತಿರ್ಪ್ರದು ಲೋಕಂ ॥ ೪೫

ಎಂದಾತನ ಸುಭಗತ್ವಮನೆಯೆಯಿಕ್ಕಲೆ ನೋಡುತ್ತಿರಲ್ ಬಾಲಚಂದ್ರಿಕೆ ರಾಜಪುತ್ರನಿದಿರ್ಗೆ ವಂದು

ಭಾವನನೀಕ್ಷಿಸಲೆಮ್ಮಬು ।
ದೇವಿಯರೈತಂದರೆಂದು ತತ್ಕಾಮಿನಿ ತ ॥
ದ್ಭಾವವ ನಱಿಪಲ್ ಕೇಳ್ದಂ ।
ದಾವಧುವನಿದಿರ್ಗೊಳಲ್ಕೆ ಭೂಪತಿಯೆಚ್ಚಿಂ ॥ ೪೬

ಅಂತೆಚ್ಚಿ ಮುಟ್ಟಿವಂದವಂತಿಸುಂದರಿಯಂ ಕಂಡು

ಮೆಲ್ಲಡಿಗಳ್ ನೊಂದಪ್ರವೆ ।
ನ್ನಲ್ಲಿಗೆ ಬಪ್ಪೊಂದು ಭಾಗ್ಯಮಾಯ್ತೆನಗೆಂದು ॥
ತ್ಪುಲ್ಲಾಸ್ಯನಾಗಿ ಧರಣೀ ।
ವಲ್ಲಭನುಪಚರಿಸಲೆಚ್ಚಿನಾಕೆಯನಾಗಳ್ ॥ ೪೭

ಅಂತು ತನಗಿದಿರೇಚ್ಚಿಯು ವರಾಜನನವಂತಿದೇವಿ ಕಂಡು

ನಸು ತಲೆವಾಗಿ ಕೆಯ್ಯು ಮುಱುಗೊಯ್ದು ಮುಖಾಬ್ಜಮನೊಯ್ಯನೊ
ಯ್ಯನೀ । ಕ್ಷಿಸಿ ಕಡೆಗಣ್ಗಳಿಂ ತಡತಡಂ ಮಿಗೆ ಮೆಲ್ನುಡಿಯಿಂದಿಳೀಶ ಭಾ ॥
ವಿಸದಿದಿರೇಚ್ಚಿಪಿರ್ ಕೆಳದಿಯಂ ಪ್ರತಿನೂಡಿಯೆನುತ್ತವಂತಿ ಮು ।
ನ್ನಿಸಿ ಮೃದುಪಲ್ಲವಾಸನದೊಳೊಪ್ಪಿರೆ ಕುಳ್ಳಿರವೇಚ್ಚಿಳಾತನಂ ॥ ೪೮

ಅಂತು ಕುಳ್ಳಿರಲ್ವೇಟ್ಟಿಂದ ಮತ್ತಂ

ವನಿತೆಯರೆಲ್ಲರೊಳ್ ಸುಕೃತಮಂ ಮಿಗೆ ಮಾಡಿದಳಾವಳೆನ್ನವೋಲ್ ।
ಮನಸಿಜಮೂರ್ತಿಯಂ ಸುಭಗನಂ ಮೃದುಕೋಮಲಕಾಯನಂ ಪ್ರಸ ॥
ನ್ನನನಭಿರಾಮನಂ ಪದೆದು ಕಾಣ್ಬನಿತರ್ಕೆ ಸಮಂತಿದೆಲ್ಲವೊ ।
ಳ್ಪಿನ ಕಣಿ ಬಾಲಚಂದ್ರಿಕೆಯು ಕಾರಣದಿಂ ದೊರೆದತ್ತು ನಿಶ್ಚಯಂ ॥ ೪೯

ಎಂದು ಮತ್ತಂ ಬಾಲಚಂದ್ರಿಕೆಯೊಳಿಂತೆಂದಳ್—

ಅನುನಯಮೆಪ್ಪ ಚೆಲ್ವ ಹರೆಯಂ ಹರೆಯಕ್ಕಳವಟ್ಟ ರೂಪು ರೂ ।
ಪಿನ ಪ್ರೌಸದೇಸೆಗೊಪ್ಪುವ ಗುಣಂ ಗುಣಮುಂ ಮಿಗುತಿರ್ಪ ನೂತ್ನಸ ॥
ದ್ವಿನಯನುನಾರತಂ ವಿನಯಮುಂ ಕೆಳಿಗೊಳ್ವ ಮೃದೂಕ್ತಿ ರಾಜಪು ।
ತ್ರನೊಳಿಸೆದಿರ್ಪಿನಂ ಕೆಳೆಯರಲ್ಲದರಾರೊ ಸರೋರುಹೇಕ್ಷಣೇ ॥ ೫೦

ಎಂದು ನುಡಿಯುತ್ತಿರ್ದನ್ನೆಗಂ,

ಲೇಸಿಂಗೆ ವಿಘ್ನ ಸಂತತಿ ।
ಯಾಸುರಮೆನಿಸಿರ್ದುದಲ್ತೆ ಕರ್ಣಕಠೋರಂ ॥
ತ್ರಾಸಕರಂ ಘನದುಃಖಾ ।
ವಾಸಂ ಮಿಗೆ ಕೇಳಲಾಯ್ತು ಶಂಖಧ್ವನಂ ॥ ೯೧

ಆಶಂಖಧ್ವನಿಯಂ ಕೇಳ್ದ ಕೆಳದಿಯರ್– ಅವಂತೀಶ್ವರನಾರೋಗ್ಯಕ್ಕೆ ಕುಳ್ಳಿರ್ಪ ಸಮಯವಾಯ್ತು, ಅಕ್ಕ, ನಿನ್ನ ನಿನ್ನಿಗಮಱಿಸುತಿರ್ದರೇಂ? ಪೋಪಮೆಂದನುವಿಸಲೆಂತಾನುಂ

ಮನಮುಂ ಚೈತನ್ಯಮುಂ ಚಿತ್ತಮನೆಸಪ ಸಮುಸ್ತೇಂದ್ರಿಯವ್ಯಾಪ್ತಿಯುಂ ಭೂ । ವನೆಯುಂ ತಳ್ತಿರ್ದಹಂಕಾರಮನಱಿವನಿತಂ ಬುದ್ಧಿಯುಂ ಕೂರ್ತುತದ್ಭೂ ॥ ಪನ ಕೈಗಂಬೊಪ್ಪಗೊಟ್ಟಾಳಿಯರನುವಿಸಲೆಂತಾನುಮಲ್ಲಿಂ ತಳರ್ದಂ । ಗನೆ ಪೋಗುತ್ತೊಪ್ಪಿದಳ್ ಲೆಪ್ಪದ ಕರುವಿನವೋಲ್ ಮೂರ್ತಿವೈಚಿತ್ರ್ಯದಿಂದಂ ॥ ೯೨

ಅಂತಾಕೆಯತ್ತಲ್ ಪೋದಳ್. ಇತ್ತಲರಸಂ ಪುಷ್ಪೋದ್ಭವನ ಮೊಗಮುಂ ನೋಡಿ

ಅಲರಂಬಾಕೆಯ ಚೆಂದದಿಂ ಸುಱಿದುದೋ ಮಿಂಚಂಗನಾಭಂಗಿಯಿಂ ।
ನೆಲಸಿತ್ತೋ ತ್ರಿಜಗನ್ಮನೋಮಯಸುಖಂ ಸ್ತ್ರೀವೇಷದಿಂ ಬಂದು ಸಂ ॥
ಚಲಿಸಿತ್ತೋ ಮಲಯಾನಿಲಂ ಸತಿಯ ರೂಪಂ ತಾಳ್ದುದೋ ಕಾಮಿನೀ ।
ಥಲದಿಂ ಚಂದ್ರಿಕೆ ಮೂರ್ತಿವೆತ್ತುದೊ ದಿಟಂ ಪೇೞೆಂದನಾಭೂಭುಜಂ ॥ ೯೩

ಅದಲ್ಲದೆಯುಂ

ಮಲಯಸಮೀರನೊಲ್ದು ಪಡೆದಂ ಮದನಂ ಪೊರೆದಂ ಸುಧಾಕರಂ ।
ತಳರಡಿ ರಂಜಿಸಲ್ ನಡೆಪಿದಂ ರತಿ ತನ್ನ ವಿಳಾಸದೇೞ್ಗೆಯುಂ ॥
ನಲವಿನೊಳತ್ತಳೊಲ್ದು ಮುದು ಮೆಲ್ನುಡಿಯಂ ಕಲಿಸಿಟ್ಟನಲ್ಲದಂ ।
ದೆಳೆಯಳ ಸೌಕುಮಾರ್ಯಮಿನಿತಪ್ಪುದೆ ಭೂಮಿಯೊಳೆಂದನಾನೃಪಂ ॥ ೯೪

ಪ್ರಿಯು ಕೇೞ್ ಚಿತ್ತವಶೀಕೃತಂ ವಿಮಳಕಾಯಸ್ತಂಭನಂ ಲೋಚನೇಂ ।
ದ್ರಿಯಸಮ್ಮೋಹನಮುತ್ಪ್ರಸೂರ್ವನ್ಯದುವಾಕ್ಯೋಚ್ಚಾಟನಂ ದುಷ್ಟಹೃ ॥

ಚ್ಛನೆಯವಿದ್ವೇಷಣಮಿಾಗಳಾಯ್ತೆನಗವಳ್ ವೆಯ್ದೊೀಱಿಲಿನ್ನೀನನಾ ।
ಕೆಯು ಮಂತ್ರಂ ಕಡೆಯಲ್ಲಿ ಮಾಪ್ಪುದದನಿನ್ನಾರ್ ಬಲ್ಲರರ್ ಬಲ್ಲಿದರ್ ॥ ೯೫

ಇಂದುನಿಭಾಸ್ಯೆ ಪೋಗಲೆನಗಾಮ್ರದ ತಣ್ಪುರಿಯಾಯ್ತು ಕಾವುದೇ ।
ವಂ ದಯೆಗೆಟ್ಟನೆಯ್ದೆ ಪಗೆಯಾಯ್ತೆ ಲತಾದರ್ ವಿಕಂ ಕನಲ್ದುದಾ ॥
ಚಂದನನುಷ್ಣಮಾದುದಿಳೆ ಕಾದಸ್ರದೆಸ್ದೆಸೆ ಕತ್ತಲಿಟ್ಟುದಿಂ ।
ತೊಂದಡಸಿದೊರ್ದೆೀಡಡಸಿತೆಂಬುದನೆನ್ನೊಳ ಕಂಜೆನೀಕ್ಷಣಂ ॥ ೯೬

ಎಂದರಸಂಗೆ ಕಾವುಸಂತಾಪಂ ಪ್ರವೇಶಿಸಿದಾಗಳ್

ಖಗತತಿ ಗೂಡನೈದೆ ಪೊಣರ್ವಕ್ಕಿಗಳಕ್ಕೆಯನೈದಲಂಬುಜಂ ।
ದುಗುಡವನೈದಲುತ್ಪಳಿನಿ ಹಾಸ್ಯಮನೈದಲೊಱಿಲ್ಲ ಪಾಣ್ಬರೊಂ ॥
ಯ್ಯಗೆ ನಿಜಸೂಚಿತಗ್ರಹವನೈದೆ ವಿಯೋಗಿಗಳಂಗಚಾಸ್ತ್ರದ ।
ನ್ನಿಗೆ ಗುಱಿಯಾಗಲೈದೆ ಪಗಲಿಂದಿನಸನ್ನೈದಿದನಸ್ತಶೈಲಮಂ ॥ ೯೭

ಪಗಲತಿಮಿತ್ರನೊಳ್ ಸುರತಗೋಷ್ಠಿಯ ಕರಂ ದ್ವಿಜರಾಜಪಾದದೊಳ್ ।
ಪಗೆ ಮಧುಪಪ್ರಸಂಗಮನಿತಂ ಜಡಸಂಗತಿ ಕಂಟಕತ್ವಮೆಂ ॥
ಬಗೆಯಿತದುರ್ಗುಣಕ್ಕೆ ನೆಲೆಯಪ್ಪುದ ಸ್ಫೋಟಿಸಿ ಕೆಟ್ಟಳೆಂದಣಂ ।
ನಗುವನ್ರೊಲೀನರಲ್ದವೊ ಸುಧಾಕರಸಂಗಮುದಲ್ಲಸಿತೋತ್ಪಲಂ ವಲಂ ॥

ಮಿಡುಕುವ ಗಂಟಲಿರ್ದೆಸೆಗೆ ಜೋಲ್ದು ಮರಳ್ದ ದೆಱಿಂಕೆ ಬಿಟ್ಟ ಬಾ ।
ಯಡಸಿದ ಕಣ್ಣ ನೀರ್ಗಳರೆಯುಚ್ಚಿದ ಕಣ್ ಬಿಸುಸುಯ್ದ ಸುಯ್ಲಿನಿಂ ॥
ಕಡುಬಡವಾದ ತಮ್ಮ ತನು ರಂಜಿಸೆ ಕೋಕಕುಳಂ ವಿಯೋಗದಿಂ ।
ಮಡದಿಯನೆಲ್ಲಿಯುಂ ತಿರುಗಿ ಕಾಣದೆ ನಿಂದುದದೊಂದು ತಾಣದೊಳ್ ॥ ೯೮

ನೀಱಿಯನಂಬುಜದೊಳ್ ನೀ ।
ರೇಱುವ ನೆಯ್ದಿಲ್ಗಳೊಳ್ ಕೊಳಂಗಳ ತಡಿಯೊಳ್ ॥
ಪೂಱಿ ಪರಿದಱಿಸಿ ಕಡುಬಾ ।
ಯ್ಗಾಱುತ್ತಿರ್ದತ್ತು ಜಾತಶೋಕಂ ಕೋಕಂ ॥ ೯೯

ನಳಿನೀಬೀಜಮನೊಲ್ಲದೆ ।
ಕುಳುನರ್ಕ್ಕಪ ಎಂಬ ದನಿಗಳೊಳ್ ಸಲ್ಲದೆ ಪೂ ॥

ಗೊಳದೊಳ್ ನಿಲ್ಲದೆ ವಿರಹಾ ।
ನಿಳನಿಂ ತಿರುಗಿತ್ತು ಚಕ್ರವಾಕಾನೀಕಂ ॥ ೧೦೧

ಅಂತು ಸೂರ್ಯಾಸ್ತಮಯಮಾಗಲೊಡಂ,

ಚಿತ್ತಜನೆಂಬ ಘಟ್ಟವಳನೊಸ್ಪವ ಚಂದನಚರ್ಚೆಯಿಕ್ಕಿದಂ ।
ಕತ್ತುರಿಯುಂತೆಯಂ ಘುಸೃಣಕೇಸರನೆಂ ಶಶಿಕಾಂತಶಾಣದೊಳ್ ॥
ಬಿತ್ತರದಿಂದೆನಲ್ಕೆ ನಸುನುಣ್ಗಜಿಯಂ ಕಿಸುಸಂಜೆಗೆಂಪನಾ ।
ಳ್ದತ್ತುದಯಾದ್ರಿನುಸ್ತ ಕದೊಳುಣ್ಮುವ ಪೂರ್ಣಶಶಾಂಕಮುಂಡಲಂ ॥ ೧೦೨

*ಕೆಂದಳಿಬೊಂಗಲಾಗೆ ಕಿಸುಸಂಜೆ ಸಿತಾಕ್ಷತೆಯಾಗೆ ತಾರಕಾ ।
ವೃಂದವಲಂಕೆ ರಂಜಿಸುದಯಾದ್ರಿಕನತ್ಕಲಶಾಗ್ರದಲ್ಲಿ ಪೆಂ ॥
ಪಿಂ ದೆಸೆವೆಣ್ಗಳರ್ಚಿಸಿದ ಕಾಮನ ಗೆಲ್ವಿಯ ರತ್ನದರ್ಪಣ ।
ಕ್ಕಂದೆಣೆಯಾಗುತ್ತು ಪರಿ್ದ ತನೆಃಪರಿಮಂಡನಮಿಂದುಮಂಡಲಂ ॥ ೧೦೩

ಸತತಂ ಸದ್ಯಾಗ್ನಿನೇತ್ರಂ ಸುರಗಿರಿವೃಷಭಾರೋಹಣಂ ತಾರಕಾದ್ರಿ ।
ಧಿತಿಗೆಂಗಾವಾಸ್ತಕಂ ಲಾಂಛನವಿಷಸಹಿತಂ ಪೂರ್ವದಿಕ್ಪಾರ್ವತೀಸಂ ॥
ಯುತನುದ್ಯದ್ವಿಸ್ಫುಟತ್ಪೋಭಂಜಕನಭಿನವಶೀತಾಂಶುಜಾಟೋತ್ತಮಾಂಗಾ।
ವೃತಹಾಸಂ ಪರಿದಂತೇನೆಸೆದುದೊ ಪಡೆಪಿಂ ಕಾಮುದೀಶ್ರೀವಿಲಾಸಂ ॥

ಕಿಸುಸಂಜೆ ಪಿಡಿದ ಜವನಿಕೆ ।
ಮಿಸುಗುವ ತಾರಾಳಿ ಪರೆದ ಪುಷ್ಪಾಂಜಲಿಯಾ ॥
ಗಸಮೆಸೆವ ರಂಗವಾಗಲ್ ।
ಶಶಿಪ್ರಭಾನಾಟ್ಯಮೇಂ ಮನಂಗೊಳಿಸಿದುದೋ ॥ ೧೦೫

ಅಂತಳುಂಬನಾದ ಕಾಮನುದೀವಿಳಾಸನೆಂಬೊಳ್ ರಾಜವಾಹನಂ ಕಾಮಪರವಶನಾಗಿ

ಇನ್ನೊಮ್ಮೆಯ್ತಪ್ಪಳೋ ಬಾರಳೊ ಬನಕೆನುತುಂ ಸುಯ್ವೆ ನಂತಾ
ಪದಿಂದಂ । ತನ್ನಂಗಂ ಕಾದು ಕಾಮಜ್ವರವೊಗೆತರೆ ಬೆಂಡಾಗಿಯಾಹಾರ
ವುಂ ಬಿ ॥ ಟ್ಟಿನ್ನೊಳ್ ಮಾತೇಕೆನುತ್ತುಂ ನುಡಿಯನುಜಿದು ದಿಗ್ಭ್ರಾಂತಿ
ಕೈಕೊಂಡು ಕಾಮಾ । ಸ್ತ್ರನ್ನಟ್ಟತ್ತಂದು ಮೂರ್ಚ್ಛಾಗತಿಗೆ ತನುವ
ನೊಲ್ದಿತ್ತನಾರಾಜಪುತ್ರಂ ॥ ೧೦೬

ಅಂತು ಮೂರ್ಛೆಗೊಳಿಗಾದುದಂ ಪ್ರಪ್ಫೋದ್ಭವಂ ಕಂಡು

ಪಲ್ಲವತಲ್ಪದೊಳ್ ಮಲಯಜದ್ರವಮುಂ ತಳಿದುರ್ವರೀಕ್ಷಣಂ ।
ಮೆಲ್ಲನೆ ಸೈತು ಕುಳ್ಳಿರಿಸಿ ಕೋಮಳಬಾಳಮೃಣಾಳನಾಳಮುಂ ॥
ಮೆಲ್ಲಿರ್ದೆಯೊಳ್* ಪದಂಗೊಳಿಸಯುತ್ಪಲಪತ್ರದೊಳೊಲ್ದು ಬೀಸಿಯುಂ ।
ತ್ಪುಲ್ಲಶರಾಗ್ನಿಯಂ ತವಿಸುವುಜ್ಜ್ವಗಮಂ ತಳಿದಂ ಮನಃಪ್ರಿಯಂ ॥ ೧೦೩.

ಮತ್ತಂ ಪಲ್ಲವದ ಪೂಸಿಕೆಯಿಂ, ಪನಿನೀರ ತುಷಾರದಿಂ, ಲಾವುಂಚದ ಬಿಜ್ಜಿಗೆಯಿಂ, ಮೃಣಾಳವಲಯಂಗಳಿಂ, ಮಲಯೋದ್ಭವದ ಪಂಕದಿಂ, ಸೇವಂತಿಗೆಯ ಸೌರಭ್ಯದಿಂ, ಕಲ್ಹಾರದ ಕಂಠಿಕೆಯಿಂ, ಕುಸುಮತತಿಯ ಮಕರಂದದಿಂ, ಕರ್ಪೂರಚರಾಗದಿಂ, ನೀರಜದ ಕೇಸರದಿಂ, ಪೊಂಬಾಚೆಯ ತಿರಿದಾನದಿಂ, ಪಾದರಿಯ ಪರ್ಯಂಕದಿಂ, ಅಶೋಕದ ಪೊಸದಳಿರಿಂ, ಶಿಶಿರೋಪಚಾರಮುಂ ಮಾಡುತ್ತುಮಿರೆ

ಯತಿಗಳ ಹೃತ್ಸರೋಜಮುರಳಲ್ ಮಿಗೆ ಕೌಶಿಕಲೋಚನೋತ್ಪಲೋ ।
ನ್ನತಿ ಮುಗಿಯಲ್ ಜಗಜ್ಜನದ ಜಾಡ್ಯತಮಂ ಬಿಯ್ತೆತೋಡೆ ಸತ್ಕವಿ ॥
ಪ್ರತತಿಸುತಿಪ್ರಕಾಶಕಿರಣಂ ಮಿಗೆ ಸಜ್ಜನಚಕ್ರವಾಕದಾ ।
ಯತಿ ಸುಖಮಪ್ಪಲಂದುದಯಶೈಲವನೇಳಿದನಂಬುಜಪ್ರಿಯಂ ॥ ೧೦೪

ಅಂತು ಸೂರ್ಯೋದಯಮಾಗಲೊಡಂ ರಾಜವಾಹನನೆಂತಾನುಂ ಸಂತೈಸಿಕೊಂಡು ಮೆಲ್ಲನೆಬ್ಬಿ ಕುಳ್ಳಿರ್ದು ಪ್ರಪ್ಫೋದ್ಭವನೊಳವಂತಿಸುಂದರಿಯ ರೂಪಾತಿಶಯನುಂ ಬಣ್ಣಿಸಿ ಕಾಮನ ಪಕ್ಷಪಾತಮುಂ ನಿಂದಿಸಿ ಚಿಂತಿಸುತಿರ್ಪಗಳ್

ಉಗುರಿಂ ಕೀಱುಟ್ಟ ಗಂಧಂ ನೊಸಲ ವಿಮಲಬದ್ಧಾಕ್ಷತಂ ಕುಂಡಲಂ ಪಾ ।
ವ್ರಗೆ ತೋಳಿಳೊಳ್ ರಕ್ಷೆ ನುಣ್ಪಿಕ್ಕಿದ ಮುಡಿ ಸುಲಿತಲ್ ಕೆಯ್ಯೆ ಕುಂಚಂ ಕರಂ ಸೋ ॥ ಜಿಗವೆಂಬಂತೊಪ್ಪೆ ಮತೊತ್ತಯ್ಯನೆ ಪದವಿಡುತುಂ ಸಿಂಗರಂ ದೋಱುತುಂ ದಿ । ಟ್ಟಗೆ ಮಾಯಾಜಾಲನುಂ ಬೀಸುತುಮನುನಯದಿಂ ದೊರ್ವ ಮಾಯಾವಿ ಬಂದಂ ॥ ೧೦೫

ಮತ್ತಂ

ತೊಳಗುವ ಮಿಂಚುವಲ್ ಪಣೆಯ ಟಕ್ಕಿನ ಬೊಟ್ಟು ನಿವಿರ್ದ ವೇಣಿ ಬೈ ।
ತಲ್ಪಿಗಳವಟ್ಟ ಸಿಂದುರಮುಳಿಂಕೆಯೊಳಿಬ್ಬಿದ ಕಜ್ಜಳಂ ತಳ ॥
ತ್ತಳಿಸುವ ಶಂಖದೋಲೆ ಕುಚದೊಡ್ಡಿನ ಮೇಲುದು ನೀಳ್ದ ಸೆಳ್ಳುಗುರ್ ।
ಚಲನಯನಂಗಳೊಪ್ಪಿ ನಟನಂಗೆಯೆ ಪಿಂದನೆ ಬಂದನಾಕ್ಷಣಂ ॥ ೧೧೦

ಎಡಗಾಲ ತೊಡರ ಬಾವುಲಿ ।
ನಡೆಗೆಸೆವ ವಿಡಾಯಿ ಜಗಮನಂಗೆಯ್ಯೊಳ್ ನೋ ॥
ಟ್ಟೊಡೆ ತೋರ್ಪೆನೆಂಬ ನುಡಿ ನೇ ।
ರ್ದಡೆದೊಪ್ಪಿರಲಿಂದ್ರಜಾಲಿಗಂ ಮಿಗೆ ಬಂದಂ ॥ ೧೧೧

ಅಂತದ್ಭುತಾಕಾರದಿಂದೊರ್ವನಿಂದ್ರಜಾಲಿಗಂ ಬಂದು ರಾಜವಾಹನನಂ ಕಂಡು

ತೇಜೋವಯಸಂ ಲಕ್ಷಣ ।
ಪೂಜಿತನಂ ಸಕಲಗುಣಗಣಾಲಂಕೃತನಂ ॥
ರಾಜೀವನೇತ್ರನಂ ಯುವ ।
ರಾಜನನಾಧೂರ್ತನತಿಶಯಂ ಮಿಗೆ ಪೊಗಳ್ದಿಂ* ॥ ೧೧೨

ಅಂತು ಪೊಗಳ್ದ ಕೊಂಡಾಡಿದಿಂದ್ರಜಾಲಿಗನಂ ಮೃದುಸಂಭಾಷಣದಿಂ ಮನ್ನಿಸಿ ಯುವರಾಜಂ ಕುಳ್ಳಿರಲ್ವೇೞ್ವುದುಂ,

ಚಿತ್ತವಧಾರು ರಾಜಪರಮೇಶ್ವರ ಲೋಕದೊಳುಳ್ಳ ಸೋಜಿಗಂ ।
ಬಿತ್ತರವಾಗಲೆನ್ನ ಹರಿಮೇಖಲವಿದ್ಯೆಯನಿನ್ನಿ ತೋರ್ಪೆನೊ ॥
ಲ್ದಿತ್ತುದೆ ಕೋಟಿ ದೇವ ಪರಿಭಾವಿಪ್ರದೆಂದೊಸೆದಿಂದ್ರಜಾಲಿಗಂ ।
ಬೆತ್ತದ ಕಾವಿನಿಂದೆಸೆವ ಕುಂಚನನೊಯ್ಯನೆ ನೀವ್ರತಿರ್ದಿನಂ ॥ ೧೧೩

ಜನಪತಿಯಿಂದ್ರಜಾಲಿಗನ ವಿದ್ಯೆಗೆ ಚಿತ್ತಮನೀಯುದಾತನೊ ।
ಳ್ಪಿನ ಮೃದುಚಾಟುವಾಕ್ಯತತಿಯಂ ಮಿಗೆ ಕೇಳದೆ ಸೋಪಚಾರದಿಂ ॥
ವಿನಯಮನಾತನೊಳ್ ಮೆಱೆವುದರ್ಕೆ ಮನಂಬುಗದಿರ್ದನೆಂದೊಡೇ ।
ಕೆನಲತಿದುಃಖಿತೇ ಮನಸಿ ಸರ್ವಮಸಹ್ಯಮದೆಂಬ ಕಾರಣಂ ॥ ೧೧೪

ಅಂತಿದುಮತ್ತಂ

ಎರೆವರ್ ತಮ್ಮಯ ಬಡತನ ।
ದಿರವಿಂಗೆ ತೊಟಿಲ್ವರಲ್ಲದವರ್ಗಳ್ ಪುತ್ತೆ ॥
ಲ್ಲರ ಸುಖದುಃಖದ ಹದನಂ ।
ಪರಿಕಿಸಿದೊಡೆ ಸಂಮದಂ ಧರಿತ್ರೀತಳದೊಳ್ ॥ ೧೧೫

ತೊಳತೊಳತೊಳಗುವ ಮುಕ್ತಾ ।
ವಳಯಿಂ ಮಾಣಿಕದಿನಿಳಿಗೆ ರಂಜಿಸುವೆಕ್ಕಾ ॥
ವಳಯಂ ಮಾಯಾವಿಗೆ ಭೂ ।
ತಳನಾಥಂ ಕೊಟ್ಟನನನ ಬಡತನನುಡಗಲ್ ॥ ೧೧೬

ಅಂತು ಕುಡಲೊಡಂ,

ಅರರೇ! ದಾನವಿನೋದಿ ಜಾಗು! ಭಲರೇ! ಸನ್ಮಾನಸೂಂಧಾತ ಭೂ
ಪುರೆ! ವಿದ್ವಜ್ಜನಕಲ್ಪವೃಕ್ಷ ಮುರುಪ್ರಾಪ್ತು! ಖ್ಯಾತ ನಿರ್ಧೂತ ಖೇ ॥
ಚರ ಮಾನ್ಯಾ! ಕಲಿಕಾಲಕರ್ಣ ಎನುತುಂ ಮೆಯ್ವೆಚ್ಚಿ ತಜ್ಜಾಲಿಕಂ ।
ಧರಣೀವಲ್ಲಭನಂ ಪೊಗಟ್ಟಿನೊಲವಿಂ ಸಂತೋಷಮೀಗೆಯ್ದುದೋ ॥ ೧೧೭

ಅಂತು ಪೊಗಟ್ಟಿ ಮಗುಳ್ದರಸನ ಮೊಗಮುಂ ನೋಡಿ ಇಂದ್ರಜಾ
ಗನಿಂತೆಂದಂ:—

ದೇವರ ಮೊಗದೊಳ್ ಚಿಂತಾ ।
ಭಾವಂ ನೆಲೆಗೊಂಡು ತೋಱುವಪ್ರದೆನ್ನೊಳದ ॥
ಕಾರ್ಯವುದು ಕಾರಣಮೆಂಬುದ ।
ನೋವದೆ ಬೆಸಸಲ್ಕೆವೇೞ್ಕುಮೆನಗನುನಯದಿಂ ॥ ೧೧೮

ಎಂದೊಡರಸಂ ವಿಕಸಿತಮುಖಾರವಿಂದನಾಗಿ

ಎನ್ನಿಂಗಿತಭಾವಮನಱಿ ।
ಪುನ್ನತಮತಿ ನಿನ್ನ ತೆಱಿದಿನಾವವನದಱಿಂ ॥
ದಿನ್ನೆನಗೆ ಮಿತ್ರನೈಯೆನ ।
ಗನ್ನಿನಗಲ್ತೆಂದು ನೃಪಕುಮಾರಂ ಪೊಗೞ್ದಿಂ ॥ ೧೧೯

ಅಂತು ಮನೋಗತಭಾವಮನೆಂದ ಕಾರಣದಿಂ ಯುವರಾಜನಾತನಂ
ಸ್ತೋತ್ರಂಮಾಡಿ ಎನ್ನ ಚಿಂತೆಯ ಕಾರಣಮುಂ ಕೇಳೆಂದು

ಅಲಗರ್ಣ* ಬಿಂಬಾಧರಂ ನಿರ್ಮಳಮುಕುರಕಪೋಲಂ ಸುವೃತ್ತಸ್ತನಂಕ ।
ಲ್ಪಲತಾಬಾಹುದ್ವಯಂ ಬಂಧುರತರತನುಮಧ್ಯಂ ಸಮುದ್ಯನ್ನಿತಂಬ ॥
ಸ್ಥಲನುಭ್ರಾಕಾರವೇಣೀಭರನುತಿನುಗಮಂ ಕಣ್ಗೆ ಬೀಱುತ್ತಿರಲ್ ಕೋ ।
ಮಲೆಯೊರ್ವಳ್ ನಿನ್ನೆ ಬಂದಿನ್ನಿದಿರೊಳ್ ಸೊಬಗಂ ತೋಱಿ ಪೋದಳ್
ಮನೋಜ್ಞಾ ॥ ೧೮೦

ಅಂತು ಸೌಭಾಗ್ಯಸಾರಮುಂ ಸೂಱೆಗೊಳ್ವ ನೀಱಿ ಸುಱಿವುದುಂ,
ಅವಧುವಂ ಕಾಣಲೊಡಂ ।
ಭಾನ್ತೋದ್ಭವನೆನ್ನನೆಯ್ದೆ ತನೆ ನಿಲ್ಮೆಯ ಚಾ ॥
ಕಾವಳಿಯೊಳ್ ಸುಡುತಿರ್ಪ ।
ನೇವೆಂ ಚಿಂತಿಸದೆ ಪೆಱರ್ ಪರಾರ್ಥ ಚರಿತ್ರಾ ॥ ೧೮೧

ಎಂದರಸಂ ಪೇೞ್ದುದುಮಾಜಾಲಿಕನಿಂತೆಂದಂ:—
ಸುರದನುಜನುನುಜಗಂಧ ।
ವರನೊರ್ವೊದಲೆಯ್ದಿ ಸೋೞಿಸುವ ಸತಿಯರನ ॥
ಚ್ಚರಿಯೆನಲೆನ್ನಯ ವಿದ್ಯಾ ।
ಪರಿಣತೆಯಿಂ ಕ್ಷಣಕೆ ಮೋಹಿಪೆಂ ನೃಪತಿಲಕಾ ॥ ೧೮೨

ಎಂದು ಮತ್ತಂ
ಇನಿತೊಂದು ಚಿಂತೆಯೇಕೆಂ ।
ದನುನಯದಿಂ ನಿನಗೆ ಮದುವೆಯಂ ಮಾಡುವೆನಾ ॥
ವನಿತೆಯನೆನ್ನಯ ವಿದ್ಯಾ ।
ವಿನೋದಮಂ ನೋಡೆನುತ್ತೆ ಚಿತ್ತಂಬಡಿಪಿದಂ ॥ ೧೮೩

ಇವಳೆಳವೆ ದೇವಗಂಧ ।
ರ್ವವಿಳಾಸಿನಿಯರ್ಕಳಂ ಕ್ಷಣಾರ್ಧದಿನಿಂತೀ ॥
ಭುವನಕ್ಕೆ ತಂದು ನಿನ್ನೊಳ್ ।
ವಿವಾಹಮಂ ಮಾಜ್ಪೆನೆನ್ನ ವಿದ್ಯಾಬಲದಿಂ ॥ ೧೮೪

ಅದು ಮಾಸ್ಪೊಡಮೀಯನಂತಿಸಾಂದರಿಯಂ ನಿನಗೆ ಮಾಱಿಪ್ಪುದರಿದ
ಲ್ತೆಂಬ ಮಾತಂ ಕುಮಾರಂ ಕೇೞ್ದು ಸಚೇತನನಾಗಿ ಮತ್ತಮಿಂತೆಂದಂ:—

ಮಣಿಮಾಡದೊಳಾಕೆ ಬಹಿಂ ।
ರ್ವಣದೊಳ್ ನಾನಿರ್ದು ಸಂಗಮುಂ ದೊರಕುವ ಕಾ ॥
ರಣಮೆಂತು ಪೇೞೆನಲ್ ಸ ।
ದ್ಗುಣಿ ಮಾಯಾಜಾಲಿಕಂ ನಗುತ್ತಿಂತೆಂದಂ ॥ ೧೮೫

ಮಣಿಮಂತೌಷಧಿನಿಚಯವ ।
ಗುಣದಿಂದಂ ಸಾಧ್ಯಮಾಗದಿರದಾವ್ರದು ತತ್ ॥
ಕ್ಷಣದೊಳ್ ತೋರ್ಪೆಂ ನಿನಗೆ ।
ನ್ನಣಕವ ವಿದ್ಯಾವಿನೋದದೊಳ್ ಕಾಮಿನಿಯಂ ॥ ೧೮೬

ಎಂದಾಂ ನಾಳೆಯವಂತೀಶ್ವರನಂ ಕೇಳಿಸಲ್ ಪೋಪಲ್ಲಿ
ಭೂನಾಥ ನೀನುವೊಲವಿಂ ।
ದಾನೆಂದವಿಯೊಳಿರುವಂತು ಬಂದಿರ್ದುದು ಮು ॥
ತ್ತಾನಾಗಳೀನನೆಸಗುವೆ ।
ನೇನತಿಶಯಮುಂ ನೆಗೞ್ವುವೆಂ ನೀಂ ಕಾಣ್ಬೆ ॥ ೧೮೭

ಎಂದಿಂದ್ರಜಾಲಿಗಂ ಕಳುಪಿಸಿಕೊಂಡು ಅವಂತೀಶ್ವರನರಮನೆಗೆ ಪೋಗಿ ಬಾಗಿಲೊಳಿರ್ದು ಅರಸಂಗೆ ಪೇೞ್ದಿಟ್ಟುನುದುಂ ಆತನಾವುಬುದಿನಸಂ ಕಾರಾಗೃಹನಿಬಂಧದಾಲಸ್ಯಂ ಪರಿಹರಿಸಲೆಂದವನಂ ಬರಿಸೆಂದಂ. ಇತ್ತಲ್,

ಅನುದಿಂದ್ರಜಾಲವಿದ್ಯಾ ।
ಕ್ರಮಮನಪೂರ್ವಂ ದಲೆನಿಸುವಾಶ್ಚರ್ಯವಿನೋ ॥
ದವನೊಸೆದು ನೋಡಲೊಸ್ಪವ ।
ಕುಮಾರಿಯಂ ಕರೆಯಿಮೆಂದನಾಭೂಪಾಲಂ ॥ ೧೮೮

ಅಂತವಂತೀಶ್ವರನವಂತಿಸುಂದರಿಯಂ ಕರೆಯಿಸಲೊಡಂ

ಅಂಗಜತಾಪದಿಂ ಕೊಱಗಿದಬ್ಜವುಖಂ ಪರೆದಿರ್ದ ನುಸ್ಸೊರಲೆ ।
ತುಂಗಕುಚಂಗಳೊಳ್ ತೆಗಳ್ಗೊಂಡ ಲಸನ್ಮಳಯೋದ್ಭವಂ ಬೆಳ ॥
ತ್ತಂಗವುರೋಂತದೊಳ್ ತಳಿದ ಕರ್ಪುರದಣ್ಕೆಯ ರೇಣು ರಂಜಿಸಿ ।
ಸ್ಸಂಗನೆ ಕಾಮದೇವನೆಡೆಯಾಡಿಪ ಪುತ್ರಿಕೆಯಂತಿರೆಯ್ದಿದಳ್ ॥ ೧೮೯

ಅಂತು ವಿರಹಾನಳದಂದಹ್ಯಮಾನಪ್ರದಯೆಯಾದ ಕುಮಾರಿ ಬಂದು ತನ್ನ ತೊಡೆಯಮೇಲೆ ಕುಳ್ಳಿರಿಪ್ಪುದುಂ; ಅರಸನಿಂದ್ರಜಾಲಿಗನನಾಸ್ಥಾನಕ್ಕೆ ಕರೆಸುವುದುಂ;

ಪುಲಿಬೊವಲ ಜೋಗವಟ್ಟಿಗೆ।
ತೊಳಗುವ ಸಿಳ್ಳುಗುರ ಮಿಂಚು ಮೂಯುದ ಕುಂಚಕಂ ॥
ನೆಲನನಲಿವ್ರಡಿಗೆ ರಂಜಿಸೆ ।
ನಲವಿಂ ಮಾಯಾವಿಯೆಯ್ದಿದಂ ನೃಪಸಭೆಯುಂ ॥ ೧೩೦

ತ್ರಿಜಗನ್ಮೋಹನತಿಲಕಂ।
ನಿಜದಿಂ ಬಲಗಿವಿಯೊಳುಲಿನ ಬಾವುಲಿ ಕೆಯ್ಯೊಳ್ ॥
ವಿಜಯಕ್ಕೆ ನೆಗಪಿದುದ್ಯ ।
ದ್ಧ್ವಜವೊಪ್ಪಲ್ ಬಂದನಲ್ಲಿಗಾಕಾಪಟಿಗಂ ॥ ೧೩೧

ಅಂತು ಒಂದು,

ಅಂದಂಬಡೆದಾಭರ್ಟಯಿಂ ।
ನಿಂದುಗುರ್ಗಳ ಬೆಳಗು ದೆಸೆಗೆ ಪಸರಿಸಿ ಕರಮುಂ ॥
ಚಂದಂಬಡೆದಿರಲಿತ್ತಿದ ।
ನೆಂದು ಮುಹೇಂದ್ರಪ್ರಸಾದನೆಂದಾಧೂರ್ತಂ ॥ ೧೩೨

ಅಂತೆಂದು ಮತ್ತಂ,

ದಿಗಧಿಪರಂ ಸರೋಜಭವನಂ ಹರನಂ ಹರಿಯುಂ ಸುರೇಂದ್ರನೋ ।
ಲಗವುನಿತೆಂದು ಮೂರ್ತಿಗಳನಷ್ಟವಸುಸ್ಥಿತಿಯಂ ಗ್ರಹಂಗಳಂ ॥
ಗಗನತರಂಗಿಣೀವಿಭವಮುಂ ಸುರಕಾಂತೆಯರಂ ನಿರೀಕ್ಷಿಸಿ ।
ಲ್ಲಿಗೆ ತರಲಾರ್ಪೆನೆನ್ನ ಧಿಕವಿದ್ಯೆಯನೆಂದನೊಳ್ಳಿಲ್ದ ಜಾಲಿಕಂ ॥ ೧೩೩

ಎಂಬುದುಮವಂತೀಶ್ವರಂ ವಿಸ್ಮಯಂಬಟ್ಟು—ಆದೊಡೆ ನಿನ್ನ ವಿದ್ಯಾವಿನೋದಮಂ ಪ್ರಕಟಿಸೆಂಬುದುಂ;

ಅಲರ್ಗಣ್ಮಗಿದಾಕಾಶಮ ।
ನೊಲಿದೊಯ್ಯನೆ ನೋಡಿ ತುಟಿಗಳಂ ಮಿಡುಕುತೆ ದಿ ॥

ಗ್ವಲಯಕ್ಕೆ ಕೆಯ್ಯಳಂ ಮುಗಿ ।
ದೊಲವಿಂ ಪ್ರೊತೆಯಟ್ಟು ಬೀಸಿದಂ ಚಾಮರಮಂ ॥ ೧೩೮

ಅಂತು ಚಾಮರಮಂ ಬೀಸಿ,

ಮಕುಟಂ ಕೇಯೂರಕಂ ಕುಂಡಲಮೆಸೆವ ಸಹಸ್ರಾಕ್ಷನೈರಾವತಂ ಬೇ ।
ವಕುಲಂ ವಜ್ರಾಯುಧಂ ದಿಕ್ಪತಿತತಿ ಕಡೆ ರಂಭಾದಿದೇವಾಂಗನಾಜಾ ॥
ಲಕಮುಷ್ಟಾಶೀರ್ತಿಮುಷ್ಟಾಗಳಿ ಸುರುಚಿರಗಂಧರ್ವಗೀತಾಮೃತಂ ಕಾ।
ತುಕಮಾಗಿರ್ಪಿಂದ್ರನೊತ್ತೈಲಗುಮನೆಸಗಿದಂ ಧೂರ್ತಮಾಯೋಪಜಂಗಂ॥

ವಿಲಸದ್ಭಾಳವಿಲೋಚನಂ ಬಿಕಲಲಾಯಾಟಂ ಮುರುದ್ವಾಹಿನೀ ।
ಲಲಿತೋತ್ತುಂಗಜಟೂಧರಂ ಗರಳಕಂತಂ ಸರ್ವದಾರಂ ಶಿವಾಂ ॥
ಗಲತಾಲಂಕೃತನಾಮಧೇಯಗಳಿಪಟಕಮಾರ್ಟ್ಟಿಪನಂ ರಂಜಿಪೆ ।
ಜ್ವಲತೇಜೋಮಯನಪ್ಪ ರುದ್ರನನಿಂತಾರಾಧ್ವದೊಳ್ ತೋಱಿದಂ॥

ಶ್ರೀವತ್ಸಂ ಕೌಸ್ತುಭಂ ಪೀರುರನಿಳಸೆಯರಲೆ ಕಂಬು ಚಕ್ರಂ ಗದಾರಾ॥
ಜೀವಂ ಪಸ್ತಂಗಳೊಳ್ ತಳ್ತಿರೆ ಜಘನದೊಳೊಪ್ಪಲ್ಕೆ ಪೀತಾಂಬರಂ ಸ ।
ದ್ಭಾವಂಬೆತ್ತಬ್ಜನೆತ್ರಂ ವಿಕಸಿತವದನಂ ರತ್ನಕೋಟೀರಕಂ ಭ್ಯಂ ॥
ಗೀರ್ವಣರ್ಂ ಮೆಯ್ಗೆ ಚಿಲ್ಮಾವ ಸುರವಿಜಯಿಯಂ ತೋಱಿದಂ ಜಾಲಗಾಱಿಂ॥

ಪರೆಯದ ಜನ್ನನಂ ತೊಲಗದಾಭರಣಂ ಸಲೆ ಮೂಸದಂಬರಂ ।
ತೆರಳದ ಕಾಂತಿ ಕುಂದದನುಲೇಪನಮಾಱದಲಕ್ತ ಕಪ್ರನಂ ॥
ಪರಿನುಳಿವೋಡಿ ಬಾಡಿರದ ಸ್ರಗ್ಗಮುಡಿಯೊಪ್ಪುವ ದೇವಲೋಕಸುಂ ।
ದರಿ ಸುರನಿಂದ್ರಜಾಲಿಕನತೀವಮನೋಹರಮಾಗೆ ತೋಱಿದಂ ॥ †೧೩೯

ಅಂತಹಿತುಂಡಿಕನಂತೆ ಕೌತಿಕವಿಳಾಸದಿಂ, ಅರಣ್ಯಾನ್ಯಳನಂತೆ ಸ್ಥಾಣುಪರಿ
ಪ್ರೇರ್ಣದಿಂ, ಪದ್ಮಿನೀಜನವಂತಂಬುಜನೇತ್ರಾಭಿರಾಮದಿಂ, ಸರೋವರದಂತೆ ಕ
ಮಲಾಜಾತಸಂಪೂರ್ಣದಿಂ, ಮಾನಸಸರಸಿಯಂತೆ ರಾಜಹಂಸಪ್ರಚಾರದಿಂ,

† ಸಲ ನಾಲ್ಕುಂ ದೆಸೆಗಳೊಳ್ ದ್ರಾಪಿಪ್ರತತಿ ಪೊಣ್ಮಲ್ ಸುತ್ತಲುಂ ಸತ್ಕಳಾ ।
ವಲಿಗಳ್ ಕೈವಡೆಗೊಪ್ಪೆ ಯೋಜನಗಳೊಳಿದ್ರಾವ್ಯಗ್ನ್ಯಕಂ ರಾಕ್ಷಸಂ ॥
ಜಲಧೀಸಂ ಪವನಂ ಕುಬೇರನಹಿಭೂಪಂ ರಂಜಿಸಲ್ ಪೆಂಪುವೆ ।
ತ್ತೊಲವಿಂದೊಪ್ಪುವಪೂರ್ವಮಧ್ಯಭವನಂ ಮಾಡುತ್ತವಿಕಂ ತೋಱಿದಂ ॥ ೧೩೯

ಈ ಪದ್ಯವನ್ನು ಬಿಟ್ಟು ಪ್ರತಿಯ ಪ್ಲವಾತ್ಪ ಅಜೆ.

ರಣಭೂಮಿಯಂತೆ ವಿಗ್ರಹವಿತಾನದಿಂ, ಕೋಹಣಾದ್ರಿಯಂತೆ ವಸುವಿಸ್ತಾರದಿಂ, ಪುಣ್ಯಕ್ಷೇತ್ರದಂತೆ ಪುಷ್ಕರಾಪಿನೀವಿಭವದಿಂ, ರಾಜಭವನದಂತೆ ನಾನಾಮಾತ್ಯಕಾಮಿನೀಕಮನೀಯತೆಯಿಂ ಮೆಱೆಯಾಕಾಶದೊಳ್ ಭೂಲೋಕಮುಂ ನೆನೆಯಿಸುತ್ತಿ ದೇವಸಂಕುಳಮುಂ ತೋಱುಂ,

ಕಡೆಯೊಳ್ ತನ್ನ ಪ್ರಪನಾರ್ತ್ತಂ ನೋಡುವ ಪಿತೃಭ್ರಾತೃವ್ರಜಂ ಕುಳ್ಳಿರಿ।
ಪೆಂಡೆಯಂ ಚಕ್ರಸಮೀಪದೊಳ್ ಪದೆಪಿನಿಂ ತೋಱಲ್ಕೆ ಸಂತೋಷಮಿ ॥
ರ್ಮಡಿಸುತ್ತಂತವರಂ ನಿರೀಕ್ಷಿಸಿ ನೃಪಂ ಪಾರೈಸುತುಂ ಮೆಚ್ಚಿ ಸಾ।
ಲಿಡೆ ಕರ್ಪೂರದ ವೀಳೆಯಂಗುಡುವೆನೆಂದೆಂದಾತನಂ ನೋಡಿದಂ ॥ ೧೪೦

ಅಂತವಂತೀಶ್ವರಂ ತನಗೆ ವೀಳೆಯಂಗುಡುವೆನೆಂಬಾಗಳಾಜಾಲಿಕಂ ವುಗುಳ್ದು ಕುಂಚಕನಂ ಬೀಸಲ್ ನೆಪಂಪ ದೇವಸಭೆಯೆಲ್ಲಂ ಪರೆದು ಪ್ರೋಗಲದ ಕರ್ಮಂ ವಿಸ್ಮಯಂಬಡುತ್ತಿರ್ದರಸನಂ ಮಾಯಾವಿಕನಿಂತೆಂದಂ:—

ಇನ್ನೊಂದತಿಕಯಮುಂ ಪೆಂ ।
ಪಿನ್ನೊಡೆಲೆ ದೇವ ಮಾಟ್ಪೆನೆಂದು ಕಳಾಸಂ ॥
ಪನ್ನಂ ಮಾಯಾಭುಜಗಂ ।
ಬಿನ್ನವಿಸಿದನೊಂದು ಕಾರ್ಯಮಂ ನಲವಿಂದಂ ॥ ೧೪೧

ಅದೆಂತೆನೆ—

ಕಡೆಯೊಳ್ ಮಂಗಳಕಾರ್ಯಮು ।
ನೊಡಱರ್ಪೆಂ ದೇವ ಕೇಳ್ದಿದೆಂತೆನೆ ನಿನ್ನೀ ॥
ತೊಡೆಯೊಳ್ ಮೆಱೆವ ಕುಮಾರಿಗೆ ।
ಕಡುಚೆಲ್ವಪ್ಪೆಂದು ಮದುವೆಯಂ ನಯದಿಂದಂ ॥ ೧೪೨

ಆದೊಡಂತೆಗೆಯ್ಯೆಂದರಸಂ ಪೇೞ್ವುದುಂ

ಎನ್ನ ವಿನೋದನಮುಂ ಪದೆದು ಚಿತ್ತ ವಿಸಿಂದತಿವೇಗದಿಂದವಂ ।
ತನ್ನಯ ಕುಂಚಕಮುಂ ತಿರುಪಲಾಕ್ಷಣದೊಳ್ ಪಱೆಕಾಳಿತಾಳದಿಂ ॥
ಚೆನ್ನೆನೆ ಮಾಯದಾಕೃತಿಯೆ ಪುತ್ತಳಿಗಳ್ ನೆರೆದಿರ್ಪುವಂದನೇ ।
ಕನ್ನಟನಾಜ್ಞೆಯಿಂ ಸಭೆ ಕರಂ ಬೆಜಗಾಗಿ ಮಗಳ್ದು ನೋಱ್ಪನಂ ॥ ೧೪೩

ಅಂತು ಪುತ್ತಳಿಗಳೀನಕಮುಂ ನಿರ್ಮಿಸಿ ಮತ್ತಮಿಂತೆಂದಂ:—

ಇದನೊರ್ಬರ್ ಕಂಡೆವ್ರೊರ್ಬರ್ ಮದುವೆಯನೆನೆಸುಂ ಕಾಣೆವೆಂದೆ ।
ನ್ನ ದೆಲ್ಲರ್ ಪದೆಪಿಂದಂ ನೋೞ್ಪಿದೆಂದಾನೆರವಿಯ ಮೊಗಮುಂ ನೋಡಿ ಪೇ
ೞ್ದಿಂತೆ ಮಾಯಾ ॥ ಸದನಂ ತಜ್ಜಾಲಿಕಂ ಮಾಗಧನೃಪಸುತನಂ ಕಂಡು ಕ
ಣ್ಣಿತ್ತಿ ಬಾಯೆಂ । ಬುದುವಾತಂ ಗೆಂಟಱೊಳ್ ಬಂದಿರೆ ಕಳಕಳವುಂ ಮಾ
ಡಿದಂ ಜಾಲಗಾಱುಂ ॥ ೧೪೪

ಸುದತಿಯನೆನಗಾಗಿಪೆನೆಂ ।
ಬುದು ಪ್ರಸಿಯೋ ದಿಟವೊ ಎಂದು ಮಾಯಾವಿಯು ವಾ ॥
ಕ್ಯದ ನೆಲೆಯನಱಿದು ಬರ್ಪೆಂ ।
ಪದುಳದೆ ನೀಂ ಚಂಪೆಯಲ್ಲಿ ಸ್ರೋಗಿರು ಕೆಳೆಯಾ ॥ ೧೪೫

ಎಂದು ಪ್ರಷ್ಠೋಧ್ಭವನಂ ಕಳಿಪಿ ನೆರವಿಯೊಳಿರ್ದು ತನ್ನ ಸಮೀಪಕ್ಕೆ
ಬಂದ ಯುವರಾಜನಂ ಜಾಲಿಕಂ ನೋಡಿ,

ಜಾ ಜಾ ಕಾನೂಹ್ಲಿ ಎನು ।
ತ್ತಾ ಜೋಗಿ ವಿಚಿತ್ರವೆನಿಪ ಮದವಣಿಗಂ ಬಂ ॥
ದೀಜನದ ಬಗೆಗೆ ಬೆಱಗಂ ।
ಸೋಜಿಗಮನೆ ಮಾಱಿ ಪೆಂದು ಚಿಟುಕಿಸಲಾಗಳ್ ॥ ೧೪೬

ಅಗಲಂಬೆತ್ತು ರುವಕ್ಷದಿಂದುರುಲಸದ್ರಕ್ತಾಂಬುಜಾತಾಕ್ಷಿಯಿಂ ।
ಪೊಗರಿಂ ರಂಜಿಪ ಪಕ್ತ್ರದಿಂ ಮಹಿಮೆಯಿಂ ತಾಳ್ದಿಪ್ಪವಾಜಾನುಬಾ ॥
ಹುಗಳ್ದಿಂದುನ್ನತಕಂಠದಿಂ ಕರಿರಿಪುಪ್ರೋನ್ಮಧ್ಯದಿಂದೆಲ್ಲರ ।
ಕ್ಷಿಗೆ ಚೆಲ್ವಂ ಕಱೆಯುತ್ತಿಳಾಪತಿಸುತಂ ಬಂದಿರ್ದನಾಸ್ಥಾಯಿಯೊಳ್ ॥ ೧೪೭

ಅಂತು ಮುಂಗಳಾಕಾರನಾಗಿ ಕುಮಾರು ಬಂದು ನಿಲೆ,

ನೋಡಿಲೆ ಕುಮಾರಿ ನಿನ್ನೊಡ ।
ಗೂಡಲ್ ತಕ್ಕಾತನೆಂದು ನೃಪಸುತನಂ ಕೊಂ ॥
ಡಾಡಿ ನಟನೊಲ್ದು ತೋಱುರ್ ।
ನೀಡುಂ ಭೋಂಕೆನಲವಂತಿಸೌಂದರಿ ಕಂಡಳ್ ॥ ೧೪೮

ಕಾಣಲೊಡಂ ಜಾಜಮ್ಮನೆ ಬೆಮರ್ ಪ್ರೊಱಪೊಮ್ಮೆ ಶರೀರಕಂಪದಿಂ ।
ನಾಣಱಿಯಲ್ ಮನಂ ಬೆಱಗಿನಿಂ ಮೆರವಟ್ಟುರೆ ವಕ್ತ್ರಪಂಕಜಂ ॥

ಕೂಣಿತದೃಷ್ಟಿಯಿಂದೆಸೆಯೆ ಚಿತ್ತಭವಂ ಕುಸುಮಾಸ್ತ್ರಜಾಲಮುಂ ।
ಮಾಣದೆ ಸೂಸೆ ಕಾಂತೆಗೆ ಕರಂ ಮಿಗಿಲಾದುವು ಕಾಮುಕೇಷ್ಟಿಗಳ್ ॥ ೧೪೯

ಅಂತಾಕೇಷ್ಟಿಯಂ ಕಂಡು ಮಾಮಾವಿಕನವಂತೀಶ್ವರಂಗಿಂತೆಂದಂ: —

ನಿನ್ನಳಿಯನೀತನೊಲ್ದೀ ।
ಕನ್ನಿಕೆಯಂ ತತ್ಕುಮಾರಪಾಣಿಗ್ರಹಣ ॥
ಕ್ಕಿನ್ನೆಚ್ಚಿಸೆಂದು ಪೇಳಿ ।
ಲ್ಕಂ ನಗುತೇಕೆಂದನಾಕೆಯಂ ಭೂಪತಿಲಂ ॥ ೧೫೦

ಅಂತವಂತೀಶ್ವರನಿಂದುವೊಂದು ವಿನೋದಮಂ ನೋಲ್ಪೆನೆಂದು ನಗುತ್ತುಂ ಕುಮಾರಿಯನೆಚ್ಚಿಸೆ

ನಸುನಗೆ ವಕ್ತ್ರಗೊಳ್ ಮಿನುಗೆ ಚಿತ್ತ ಬೊಳಿರ್ದನುರಾಗಮಂಗದೊಳ್
ಪಸರಿಸೆ ತೋಳ್ಗಳುನ್ನತಕುಚಂ ಲಲಿತಾಧರಮೆಯ್ದೆ ಕೆತ್ತೆ ಕಂ ॥
ಪಿಸೆ ನಲವಿಂ ನಿತಂಬಯುಗಳಂ ಪ್ರಳಯಂ ತಲೆದೋಱೆ ಕಾಮನಾ ।
ರ್ದಿಸುವುದನೊಯ್ಯನೊಯ್ಯನೆ ನಿಲಲ್ ನೃಪನಂದನೆಯೆಟ್ಟಿಳಟ್ಟಿಯಿಂ ॥

ಅಂತು ಕುಮಾರಿಯೆಚ್ಚಿ ನಿಂದಿರೆ ಜಾಲಿಕಂ ಪ್ರತ್ತಳಿಗಳಿಂ ವಾದ್ಯಮೇಳಾಪಮಂ ಮಾಡಿಸಿ ಮಾಯಾಮೋಹೂರ್ತಿಕನಿಂ ಲಗ್ನಮಾಸನ್ನಮೆನಿಸಿ ಕುಮಾರನಂ ಕುಮಾರಿಯ ಪಾಣಿಗ್ರಹಣಂ ಮಾಡಲ್ವೇೞ್ವುದುಂ

ನಾನಾವಾದ್ಯಂಗಳುಣ್ಮಲ್ ಪಲವು ದಿಸೆಗಳಿಂಳಿ ಮಂಗಳಾಚಾರಮೊಪ್ಪಲ್।
ಗಾನಂ ಕೈಗಣ್ಮೆ ಮೋಹೂರ್ತಿಕರತಿಕುಥಲಗ್ನಂ ಕರಂ ಲೇಸಿನಲ್ ತ ॥
ದ್ಭಾನಾಥಂ ನೋಡಿ ಚೋದ್ಯಂಬಡುವಿನಮೊಲವಿಂ ಸರ್ವಸಂತೋಷದಿಂದಂ।
ದಾನಾರೀರತ್ನಮಂ ಕೈವಿಡಿದು ನಲವಿನಿಂದೊಪ್ಪಿದಂ ರಾಜಪುತ್ರಂ ॥ ೧೫೨

ಅಂತು ಪಾಣಿಗ್ರಹಣಂಮಾಡಿದನಂತರಂ ಮದನಕ್ಕಳಂ ಮನೆಯಂ ತ್ತುಂ ಬಿಸವೇಳ್ಕೆಂದು

ಪುತ್ತಳಿಗಳ್ ದಿಬ್ಬಣಿಗರ್ ।
ಪುತ್ತಳಿಗಳ್ ಸಕಲವಸ್ತುಗಳ ಪೆಟ್ಟಿಗೆಯಂ ॥
ಪೊತ್ತೊಡನೆ ಪೋಪರಾಗಿರೆ ।
ಬಿತ್ತರದಿಂ ಮನೆಗೆ ಕಳಿಪಿದಂ ದಂಪತಿಯಂ ॥ ೧೫೩

ಅಂತು ಮುದವಕ್ಕಳನನೇಕಪುತ್ತಳಿಗಳಂ ಕೂಡಿಯರಮನೆಗೆ ಕಳಿಪಿ ಇಂದ್ರಜಾಲಿಗನರಸಂಗೆ ಕೈಮುಗ್ದಿಗ್ರಿಪ್ಪುದುಮರಸಂ ಮೆಚ್ಚಿ

ಕಟಕಂ ಕುಂಡಲಮಂಗದಂ ಪದಕಮುದ್ಯದ್ಭಾಷಡನಂ ಚಿತ್ರಕ ।
ಪ್ರಟಮಾನಂದಿತವಸ್ತುವಂ ಪಡೆಪಿನಿಂ ಭೂಪಾಲಕಂ ಕೂರ್ತು ಕಾ ॥
ಪಟಿಕಂಗೀಯಲವಂ ಕರಂ ತಣಿಪು ತನ್ನುತ್ಸಾಹದಿಂ ಸಂತತಾ ।
ಭ್ರಟೆಯಿಂದಂ ಪ್ರಗಲ್ಭತ್ತದೇಂ ತಳರ್ದನ್ನೋ ಕೋಲಾಹಲಂ ಮಾಡುತುಂ ॥

ಅಂತಾಜಾಲಿಕಂಗಮಂತೀಶ್ವರಂ ಬೇಱ್ಪಿನಿತುಮಸ್ತುವಂ ಕೊಟ್ಟು ಬೀಡ್ಕೊಂಡವನತ್ತಲ್ ಪೋದಂ. ಇತ್ತಲ್

ಮನದನುರಾಗಮುಂ ತಳಿದು ಜಾಲಿಗನೋಜೆಗೆ ಮೆಚ್ಚಿ ನಲ್ಮೆಯಿಂ ।
ತನುಪ್ರಳಕಂಗಳುಣ್ಮುತಿರೆ ಕಾಮನಿದಾನಮೆ ಕೈಗೆ ಸಾರ್ದವೋಲ್ ॥
ವನಿತೆಯ ಕೋಮಳಾಂಗುಲಿಯನೊಪ್ಪಿರೆ ಬಲ್ಪಿಡಿದಂಗನಾನಿಕೇ ।
ತನುವನಲಂಪಿನಿಂ ಸುಖದೊಳೊಯ್ಯನೆ ಪೊಕ್ಕನಿಳಾಧಿನಾಯಕಂ ॥ ೧೫೬

ಅಂತು ಸ್ರಗಲೊಡನೆವಂತಿಸಂದಂರಿ,

ಬಯಸಿರ್ದ ಪಸ್ತು ಕೂರ್ತೆ ।
ನ್ನಯ ಕಯ್ಗಿಯ್ದಿತ್ತೆಸುತ್ತವಂತೀವಧು ೞೀ ॥
ಲೆಯಿನರಸನನಪ್ಪಿ ಸುಧಾ ।
ಮಯವೆನಿಸಿರ್ದಧರರತ್ನಮುಂ ಜುಂಬಿಸಿದಳ್ ॥ ೧೫೭

ಪ್ರೊಸತೆನಿಸ್ರೊಲ್ಮೆಯುಗ್ಗಣಿಸೆ ಕಸ್ವೊಳಗೊಪ್ಪನ ವಕ್ತ್ರಪದ್ಮದೊಳ್ ।
ಪಸರಿಸೆ ಸಣ್ಣ ಸುಯ್ಲ ನಚುಗೆಂಪು ಪ್ರವಮ್ಮಿರೆ ನುಸ್ಮೊರಲ್ ವಿರಾ ॥
ಜಿಸೆ ಜಲಪಕ್ಷಿಯಂ ಜಯಿಪು ನಾಣ್ಮಿಱಿ ಡಿಳ್ಳವನೈದೆ ನಲ್ಮೆಯಿಂ ।
ಮಿಸುಪಧರಾಗ್ರಮಂ ಸವಿದಳಂಗನೆ ಜಾಣ ಮಿಗೆ ತನ್ನ ಭೂಪಾಲನಾ ॥ ೧೫೮

ಅಂತಧರಗ್ರಹಣಂಗೆಯ್ದನಂತರಂ,

ಸ್ಮರಗಾಢಾಲಿಂಗನಂ ಪೂಂಕೃತಿ ಗಳರವಮನ್ಯೋನ್ಯಸಂಲಾಪವಾದಂ ।
ಕರಘಾತಂ ಚುಂಬನಂ ಸ್ವೀಕೃತಕುಟಿಲಕಚಾಕರ್ಷಣಂ ನೂತಜಿಹ್ವಾ ॥
ವಿರುತಂ ಚಿತ್ತಾನುಮೋದಂ ಪರಿವಿಡಿಯೆ ಮನೋರಾಗದಿಂ ಕಾಮುಕೇೞೀ ।
ತರುಣಪ್ರಾರಂಭಮುಂ ಕೂರ್ತೆಸಗಿದಳೊಲವಿಂ ಕಾಂತೆಯತ್ಯಾರ್ತದಿಂದಂ ॥

ಬಿಸುಬೆಮರಿಂಗುವಂತಗಲ್ವ ಮತ್ತ ಮರ್ದಪ್ಪವ ಮಾಣ್ದು ಮಾಣ್ದ ಚುಂ।
ಬಿಸಿಯಧರೋಷ್ಠಮಂ ಸವಿವ ಸಾನ್ಯಸುಖಂ ತಲೆದೋಱೆ ಮೂರ್ಛೆಯಿಂ॥
ದೆಸೆವ ಮನೋಮುದಂ ಮಿಗುವ ಕೂಟದ ತೋಟಿಗೆ ಮೀಱಿನಲ್ ಕರಂ ।
ಮಿಸುಪ ಮನೋಜಕೇಳಿಯಿನದೇನೆಸೆದರ್ರೊ ನಿತ್ಯಕಾಮಿಗಳ್ ॥ ೧೪೯

ಮತ್ತಂ

ಅಡಿಗಡಿಗೆಪ್ಪಿಕೊಳ್ವ ಚಲುಬುಕಾಗ್ರಮನೊತ್ತಿ ಸುಧಾಧರೋಷ್ಠಮಂ ।
ಪಿಡಿದೊಲವಿಂದೆ ಚುಂಬಿಸುವ ಗಾಸಿಗೆ ಸೂಸಿವ ಕೇರಪಾರಮಂ ॥
ಮುಡಿಸುವ ನಾಣ್ಗೆ ನಾಣ್ಚುವ ವಿಚಿತ್ರವಿನೋದದ ಕೂಟದಿಂ ಸುಖಂ ।
ಬಡೆವ ಲತಾಂಗಿ ಮನ್ಮಥನ ಮುದಿರಸುಂಗಳಲಕ್ಷ್ಮಿ ಪ್ರಮುಲ್ಲಳೇ ॥ ೧೫೦

ಮಲ್ಲಿಗೆಜೊಲ್ಲೆಯಂ ಕುಣಿಯು ಕಾಂಡಮುಮಂತಲನಂತೆ ಕಂಕಣಂ ।
ಮೆಲ್ಲುಲಿಯಿಂ ಪಳಂಚಿಕೆ ಮೃದುಕ್ಕಾಕರವಂ ಸ್ತನಸಂಗಕಾಗೆ ಮಾತುಗಳ್ ॥
ಲಲ್ಲೆಯನಪ್ಪಕೆಯ್ವ ಬೆಮರಂತಸ್ಥೈಸುಖಂ ರತಿತೋಟಿ ನುಗ್ಗಿದಂ ।
ಜೆಲ್ಲನೆ ಪಾಯ್ದು ಚೆಲ್ದಿನ ಪ್ರಮುಖಾಮೃತಮಪಿಂಮಿಂಗಿಸಿತ್ತೆಮಗಾಗಿರೊ ॥ ೧೫೧

ತಪೆಯೆವ ನಲ್ಲಿ ತೋರ್ಪಗಿನದಾಸೆ ಮಗುಳ್ಪಿಸಲಾರದಿಲ್ಲಿಗೆ ।
ಚರ್ಪುವ ಮನೆದೀಱೆ ಕೂಡಿ ತಣಿಯಿಲ್ಲದ ಕೂಪಮೆ ನೀರನಿರ್ದಿರಾ ॥
ಇಪ್ಪವಿರಳವಪ್ಪಿನಂ ನಲಿದು ಕೂಡಿ ಸುಖಾಂಬುಧಿಯೊಳ್ ಮುಮುಗಿಸೊ ।
ಪ್ಪವರವರಾವಗಂ ಸುರತಕಾಲಮೆನಿಸ್ಪ.....ಮಾಡ್ಪಿದುಂ ॥ ೧೫೨

ಅಂತು ನಾನಾಪ್ರಕಾರವ ಕರಣಂಗಳನೊಪ್ಪಿಸಿ ಕೂಡಿದ ಕಪೆಯೊಳ್

ಕೆವಱಿವ ಕುಂತಳಂ ಪರೆದ ಕಜ್ಜಳಮುಣ್ಮುವ ನುಗ್ಗೆಮುಡಿ ಮೆದಂ ।
ಪ್ರದಿವ ವಿಲೋಚನಂ ಬಱಿಯನಟ್ಟುವ ಸುಯ್ ಕಡುಜೊಲ್ಲ ವೇಣಿ ಬ ॥
ತ್ತಿದ ಜೆಳವಾರ್ಮೆಯೆ ಬಿಲ್ಚ ಲುಳಿತಾಂಬರಜೊಮ್ಮೆ ರತಾಂತಜೊಳ್ ಸುಧಾ।
ಸ್ಪದಮನೊಡಚ್ಚುವಂಗನೆಯ ರೂಪು ವಿಚಿತ್ರಮನುಂಟುಮಾಡದೇ॥ ೧೫೩

ಅಂತಾದ ರತ್ಯಂತವಿಳಸನಂತರಸಾಂದರಿ ರಾಜಾವಾಪನನ ಮುಖಾರವಿಂ
ದಮಂ ನೋಡಿ,

ಆವಾವ ದೇಶವಂ ಸ ।
ದ್ಭಾವಂ ಮಿಗೆ ತೊಬಿಲುತಿರ್ದರಸರ್ ನುವಿಂ ॥
ಭಾವಿಸೆ ಬೆಸಸಲ್ವೇಱ್ಪುದು ।
ದೇವರ್ ಪದೆದೆನಗೆ ಕರ್ಣಕಾತುಕಮಾಗಲ್ ॥ ೧೬೮

ಎಂದು ಬಿಸಗೊಳಲೊಡಂ

ವನಿತೆಯು ಬಿನ್ನಪಕ್ಕೆ ಕಡುಮೆಚ್ಚಿ ನೃಪಾಲಕನೊಪ್ಪಲುರ್ವರಾ ।
ಜನಿತವಿಶೇಷನುಂ ಭುವನಕೋಕವನುನ್ನತಕೀರ್ತಿಕಾತುಕಂ ॥
ಮನವನುರಾಗವುಕ್ಕೆ ಮಿಗೆ ಪೇಱಲೊವಚ್ಚಿದನಂಗನಾಸೆನ ।
ಸ್ತನನನವುಕ್ತಿ ಕಾಭರಣನಪ್ರತಿಯಾಗಲಭಂಗವಿಕ್ರಮಂ ॥ ೧೬೯

॥ ಗದ್ಯಂ ॥

ಇದು ನಿಖಿಳಬುಧಜನವನೋವನಜವನವಿಕಾಸಕರಕಿರಣಪ್ರತಿಮಪ್ರಸನ್ನ
ಶ್ರೀನಾಮಧೇಯಗಣಿಪ್ರಣಪಾಂಭೋಜಮತ್ತಷಡ್ಪದ
ಷಡ್ಭಾಷಾಕವಿನಂದನ ಸರಸಕವಿ ಚಕ್ರವರ್ತಿ ವಿರಚಿತನಪ್ಪ

ಅಭಿನವದಶಕುಮಾರಚರಿತೆಯೊಳ್

ಅವಂತೀಸುಂದರೀದರ್ಶನವರ್ಣನಂ

ಪಷ್ಠಾಶ್ವಾಸಂ

ಶ್ರೀಮಗಧೇಶನವಂತೀ ।
ಕೋಮಳಿಗೆ ನೆಗಪ್ಪಿ ಭುವನಕೋಶವನಧಿಕ ॥
ಪ್ರೇಮದೆ ಪೇಳಲೊಡರ್ಚಿದ ।
ನೇಮಾತೋ ಪದೆದಭಂಗವಿಟ್ಟಲಭೃತ್ಯಂ ॥ ೧

ಅದೆಂತೆನೆ—

ನಿರುಪಮಸತ್ತ್ವದಿಂ ಕಮಲಜಾಂಡಕಟಾಹಮನಾದಿಶಕ್ತಿ ತಾ ।
ಳ್ದಿರಲದಱಾಶ್ರಯಂಬಿಡದು ಕೂರ್ಮನಿರಲ್ ತದನೂನಖರ್ಪರೋ ॥
ಪರಿಯೊಳನಂತನಿರ್ಮ ನಿಜಮಸ್ತಕದೊಳ್ ಸಲೆ ಭೂಮಿಯಂ ಚರಾ ।
ಚರಸುಖಭೂಮಿಯಂ ತಳೆದನಲ್ತೆ ಸರೋರುಹಪತ್ರಲೋಚನೇ ॥ ೨

ಅತಳಂ ವಿತಳರಸಾತಳ ।
ಸುತಳಂ ಪಾತಾಳಮಾತಳಾತಳಮಧಿಕ ॥
ಪ್ರತಳಂಗಳಧೋಲೋಕ ।
ಪ್ರತತಿಗಳೆಸೆದಿರ್ಪವಲ್ತೆ ಕಮಲದಳಾಕ್ಷೀ ॥ ೩

ಭೂಲೋಕಭುವರ್ಲೋಕತ ।
ಪ್ಲೋಲೋಕಂ ಸ್ವರ್ಗಲೋಕಜನಲೋಕಂ ಕೇಳ್ ॥
ಬಾಲೆ ಮಹಲೋಕಂ ಸ ।
ಲ್ಲೀಲೆಯೊಳಾಸತ್ಯಲೋಕಮೆಂದೂರ್ಧ್ವಜಗಂ ॥ ೪

ರವಿಮಂಡಲದಿಂ ಮೇಲಾ ।
ಯುತ್ತ ವಿಧುವ ಮಂಡಲಮುದತ್ತ ತಾರಾಗತಿ ಮೇಣ ॥
ವಿವಿಧಂ ವಾಯುಸ್ಕಂಧಂ ।
ನವೀನಮೆನಿಸಿರ್ಪುದಲ್ತೆ ಭುವನಾಧಾರಂ ॥ ೫

ಇಂತು ಚತುರ್ದಶಭುವನಂ ।
ತಿಂತಿಣಿಯಿಂದಿಕ್ಕುಮಿನಱೊಳೊಪ್ಪಿಸರ್ಪ ಧರಾ ॥

ಕಾಂತೆಯ ಮೋಲೆಸೆಗುಂ ನಿ ।
ಶ್ಚಿಂತಂ ಪರಿಭ್ರಮಿಸಲ್ಕೆ ನಾನಾದೇಶಂ ॥ ೬

ಮತ್ತಮಾಭೂಮಿಗೆ ಸೀವೆಯಾಗಿ

ಪೃಥುಸತ್ವರ್ ದೇವದೈತ್ಯರ್ ತಮಗಭಿಮತವಾಗಲ್ಕೆ ಸಂರಂಭದಿಂದಂ ।
ಮಥಿಸಲ್ ಮಾಂಗಲ್ಯವಸ್ತುಪ್ರಕರಮನನೈ ತಾವಾರಮುಂ ಕೊಟ್ಟು ಮತ್ತಂ॥
ವ್ಯಥೆ ತಾಂ ಪುಟ್ಟಲ್ಕೆ ಹಾಲಾಹಲಮನುಗುಳ್ದ ಗಂಭೀರಸಾಮರ್ಥ್ಯತೇಜಃ ।
ಪ್ರಥಿತಪ್ರಖ್ಯಾತಿವೆತ್ತಂ ಸಲೆ ಜಲಚರಸಂಘಾತರೌದ್ರಂ ಸಮುದ್ರಂ ॥ ೭

ಅತಿಲವಣೇಕ್ಷು ವಾರುಣಿ ಘೃತಂ ದಧಿ ಮದ್ಯಮಗಾಧವಾರಿ ಕ್ಕೇ ।
ಳತುಲಸಮುದ್ರವೊಂದಕ್ಕಿನಿಗೊಂದಧಿಕಂ ಪಡೆದಲ್ಲಿ ಸಪ್ತ ಸಂ ॥
ಮಿತವೆನೆ ದೀವಿಯಂತವಳ ಮಧ್ಯದೊಳಿರ್ದುದು ಚಕ್ರನುಧ್ಯದಾ ।
ಯತಿನುತಿಕೀರ್ತಿಯಂಬೊಲನಿಶಂ ಸುಖಮುಂ ತಳೆದಂಬುಜಾನನೇ ॥ ೮

ಸಲೆ ಜಂಬೂಕ್ಷ್ಮಾಕ್ಷಂ ಕಾ ।
ಲ್ಮಲಿ ಕುಶಮಾಕ್ಷಂ ಕ್ರೌಂಚಕ್ಷಪ್ಕರಂ ಶಾಮಂಗರ್ ॥
ಶಿಳಿಯಲ್ ಸಪ್ತದ್ವೀಪಂ ।
ಜಳಜಾನನೆ ಸಾರ್ದಿರ್ಪ್ಪತ್ತಿಪ್ಪ ಪಾಪಂ ॥ ೯

ಮತ್ತಮಾನಸೋತ್ತರಪರ್ವತಮುಮಂ ದಾಟಿ
ಸುರಸಿಕರಂ ಸ್ಫಟಿಂಕರಿಸೆಮಂಗಳೆಯರ್ ವಿಮಾಚಯಂ ದಿವಾ
ಕರಿ ಮೃಗರಾಜೆ ಸಿವ್ಪರಸವೆಂಬಜ್ಜರವೊಲ್ಪಿನ ಪಲ್ಪುಕಾಂತಿ ಭಾ
ಸುರದಮವಿಲ್ಲಿ ರತ್ನನಿಚಯಂ ತ್ರಿಕಲ್ಲಿನೆ ಪದ್ಮರಾಗಂ ಧರಾ ।
ತರುಣಿಗೆ ರಂಜಿಸಿಟ್ಟ ಕೃತಕಾದ್ರಿವೊಲಿರ್ದುದು ಮೇರುಸನ್ನಿಭಂ ॥ ೧೦

ಮತ್ತಮುಮಾ ಗಾಂಗೇಯತೇಜೋರಂಜಿತವಾಗಿಯುಂ, ಭಾರತಸಂಬಂಧಮಲ್ಲಿ ; ಕುಲಗೋತ್ರಪರಿವೇಷ್ಟಿತವಾಗಿಯುಂ, ಸಂಸಾರಿಯಲ್ಲಿ ; ಸುರಾಧಿವಾಸವಾಗಿಯುಂ, ಜನನಿಂದ್ಯವಲ್ಲಿ ; ಧರಣೀಧರನಾಗಿಯುಂ, ವರಾಹಾವತಾರವಲ್ಲಿ ; ಶೃಂಗಾನ್ವಿತವಾಗಿಯುಂ, ಮೃಗರೂಪವಲ್ಲಿ ; ರತ್ನಕಟಕರಂಜಿತವಾಗಿಯುಂ, ಹಸ್ತನ್ಯಸ್ತವಲ್ಲಿಸಿಸಿರ್ದುದು. ಅಂತು ಮಲ್ಲಿನೆಯುಂ

ಅದಱೊಪ್ಪುವ ತೆಂಕಲ್ ಪೆ ।
ರ್ಚಿದ ಹಿಮುವಾನ್ ಹೇಮಕೂಟ ನಿಷಧಂ ಬಡಗಲ್ ॥
ಸದಮಳನೀಲಶ್ವೇತಂ ।
ಪದೆಪಿಂ ಶೃಂಗಿಗಳಿನಲ್ಕೆ ವರ್ಷಗಿರೀಂದ್ರಂ ॥ ೧೧

ಅದಱಿಂ ಮೂಡಲ್ ಮಂದರ ।
ಮದು ತೆಂಕಲ್ ಗಂಧಮಾದನಂ ಪಡುವಲ್ ಪೆ ॥
ರ್ಚಿದ ನಿಷಧಮದಱಿ ಬಡಗಲ್ ।
ಪದೆದು ಸುಪಾರ್ಶ್ವಂ ಸುರಾದ್ರಿಗೆಸೆದಪ್ರದಬಲೇ ॥ ೧೦

ಈವಿವಿಧಗಿರಿಗಳಿಂಗೆ ಸ ।
ದ್ಭಾವಕಿ ಕೇಳ್ ಕಡವು ಜಂಬು ಪಿಪ್ಪಲನಾಲಂ ॥
ತೀವಿರ್ಕುಂ ಮತ್ತವಱೊಳ್ ।
ಭಾವಿಸಿ ಕೇಳ್ ಪೇಳ್ವೆನವಱಿ ನಂದನವನಮುಂ ॥ ೧೩

ಕ್ರಮದಿಂ ಚೈತ್ರರಥಂ ಗಂ ।
ಧಮಾದ ವೈಭ್ರಾಜ ನಂದನಂಗಳೆನಿಪ್ಪವಂ ॥
ಕಮಳನಿಭಾನನೆ ಕೇಳ್ ಮ ।
ತ್ತೆಮುದಂ ಮಿಗೆ ಪೇಳ್ವೆನೆಸೆನ ಸುರಸರಸಿಗಳಂ ॥ ೧೪

ಅರುಣೋದ ಮಹಾಭದ್ರಂ ।
ಸ್ಫುರಿಸಿದೊಡಾಅಗ್ರಮಾನಸಂ ಸರಸಿಗಳಾ ॥
ಗಿರಿಗಳಮೇಲೆಸೆದಿರ್ಕುಂ ।
ಗುರುಕುಚೆ ಕೇಳ್ ಮತ್ತೆ ಪೇಳ್ವೆನಱುಕುಲಗಿರಿಯಂ ॥ ೧೫

ಅದಾವುವೆಂದೊಡೆ–

ಕಾದಲೆ ಕೇಳ್ ಮಹೇಂದ್ರ ಮಲಯಾಚಲ ಸಹ್ಯಗಿರೀಂದ್ರ ಶುಕ್ತಿಮಾ[ಂ]।
ಭೇದಿಸೆ ಋಕ್ಷಪರ್ವತ ಸುವಿಂಧ್ಯ ಮಹೀಧರ ಪಾರಿಯಾತ್ರಮೆಂ ॥
ದಾದುವು ಗೋತ್ರಕೈಲವಿಳಿಗಬ್ಜಭವಂ ಮಿಗೆ ಕೊಟ್ಟ ಕೀಲ್ಗಳಿಂ ।
ದಾದಿ ಜಗಂಗಳಾಂಕೆಯೆನೆ ರಂಜಿಸುಗುಂ ಧವಳಾಬ್ಜಲೋಚನೇ ॥ ೧೬

ಮತ್ತಂ

ಸುರುಚಿರ ಭೂರತ ನಿಂಪ್ರದು ।
ಪ್ಪರಮ್ಯ ಹರಿವರ್ಷಮೆಂಬುವಿಪ್ಪು ವರ್ಷಂ ತ ॥
ದ್ದಿರಿಯೆಸೆವ ತೆಂಕಲಿಕ್ಕುಂ ।
ತೆರಳದಿಳಾವೃತನುದಂ ಕರಂ ಬಳಸಿರ್ಕುಂ ॥ ೧೩

ಅದಲ್ಲದೆಯುಂ

ಜಂಬೂಫಲವೊಂದಾಕಾ ।
ಸ್ತಂಬೇರಮದಂತುಟಲ್ಲಿ ಬೀಜಲ್ಕದಱುಂ ॥
ಜಂಬೂದ್ವೀಪಮದಾದುದು ।
ಬಿಂಬಾಧರೆ ಕೇಳ್ ಪ್ರಸಿದ್ಧವುರ್ವೀತಳದೊಳ್ ॥ ೧೪

ಆಜಂಬೂಫಲರಸಮು ।
ವ್ಯಾಜದಿನಿಳೆಯಲ್ಲಿ ಪರಿಯಲದಱುಂ ಜನಿಸಿ ॥
ತ್ತೀಜಗದೊಳ್ ಹೇಮಂ ನಾ ।
ನಾಜನಸುಕ್ಷೇಮನುಂಬುಜಾಯತನೇತ್ರೇ ॥ ೧೫

ಮತ್ತಮಾಮೇರುಗಿರಿಯೊಳ್
ಜ್ಯೋತಿಶ್ಚಕ್ರಂ ತುದಿಯೊಳ್ ।
ಮಾತೇಂ ಱುಟಳದ ತೆಱದೆ ತಿರುಗುತ್ತಿರ್ಕುಂ ॥
ಖ್ಯಾತಿಯು ಮೇರುವಿನೊಳ್ ನಿ ।
ರ್ಣೀತಂ ತದ್ಭ್ರಮಣನುದಯಮಸ್ತಮಯಂಗಳ್ ॥ ೧೬
ಗ್ರಹಚಾರಸ್ಥಿತಿಯಿಂದಂ ।
ಗ್ರಹಣಮನಾವೃಷ್ಟಿಗಳೀ..... ॥
ಮಹಿಯೊಳ್ ತೋಱುಗುಮದಱುಂ ।
ಸಹಜದೊಳಿರೆ ಸಕಲದೇಶದೊಳ್ ಸುಕ್ಷೇಮಂ ॥ ೧೭

ಅದಲ್ಲದೆಯುಂ

ಪಂಚಾಶತ್ಕೋಟಿವಿಸ್ತೀರ್ಣದೊಳಿಸೆವ ಧರಾದೇವಿಗೊಪ್ಪುರ್ವದೆಂದುಂ ।
ಕಾಂಚೀದಾನುಂಬೊಲುದ್ಯಚ್ಛರನಿಧಿ ನೆಗಟ್ಟಿರ್ಪ ಭೂಮಿ ನೋಡಲ್ಕೆ ಮತ್ತಂ।

ಚಂಚದ್ಭಾಗಾಂತರಂ ಭಾವಿಸಲದು ನವಖಂಡಂ ಮಹಾಹೇಮರತ್ನೋ ।
ದಂಚತ್ಗರ್ಭಂ ನಿತಾಂತಂ ವಿವಿಧಸಕಲಧಾನ್ಯಪ್ರಭೂತಪ್ರದೇಶಂ ॥ ೬೨

ಹಿಮಸೇತುಮಧ್ಯಭೂಮಿಯೊ ।
ಳಮರನದೀತತಿಗಳಿರ್ಪ ವಸುಸಂಕುಳದು ॥
ಗರ್ವಮಕಾನನದಾವಾಗ್ನಿಗ ।
ಳಮರ್ತ್ಯಲೋಕಪ್ರಸಿದ್ಧಿಗಳ್ ತರಳಾಕ್ಷೀ ॥ ೬೩

ಸುರನದಿ ಗಂಗೆ ಗೌತಮಿ ಸರಸ್ವತಿ ನರ್ಮದೆ ಕೃಷ್ಣವೇಣಿ ಭೀ ।
ಮರಥಿ ಪಯೋಷ್ಣಿಕಾದ್ರಿ ಯಮುನಾನದಿ ಸಿಂಧು ಕವೇರಕನ್ಯೆ ಭಾ ॥
ಸುರತರತುಂಗಭದ್ರೆಯೆನಿಪ್ರತ್ತಮತೀರ್ಥವನೇಕಮುರ್ವಿಯೊಳ್ ।
ಪರಿವಿಡಿದಿರ್ಪುವಲ್ತೆ ದುರಿತಕ್ಷಯಕಾರಣಪುಣ್ಯಮೂರ್ತಿಗಳ್ ॥ ೬೪

ಮತ್ತಂ

ಮಾಳವ ಗೌಳ ಘೂರ್ಜರ ವರಾಳ ಕಳಿಂಗ ತುರಷ್ಕ ಸಿಂಧು ನೇ ।
ಪಾಳ ಸುಪಾಂಡ್ಯ ಕೇರಳ ಮಹಾಂಧ್ರ ಸುರಾಷ್ಟ್ರಮಿವಾದಿಯಾದ ಸ ॥
ಲ್ಲೀಲೆಯ ದೇಶಸಂತತಿಯನೇಕಮೆನಲ್ ಮಿಱುದಿರ್ಪುವಲ್ತೆ ಕೇಳ್ ।
ಬಾಲಕಿ ನೋಡಲಲ್ಲಿ ಸುಖಸಂತತಿ ಸಂದೆಸೆಗುಂ ನಿರಂತರಂ ॥ ೬೫

ಈದೇಶಂಗಳೊಳುಳ್ಳ ನಾರಿಯರೊಳಿಂದೊಂದತ್ಯಪೂರ್ವಂ ಕಳಾ ।
ಭೇದಂ ಕೂರ್ಮೆಯೊಳಾದ ಸಂಗಮವಿನೋದಂ ರೂಪಲಾವಣ್ಯಸಂ ॥
ಮೋದಂ ಪೆಂಪಿನೊಳೊಪ್ಪುತಿರ್ಪ ವನಿತಾಸಲ್ಲಕ್ಷಣಂ ಕೇಳವಂ ।
ತೀದೇವೀ ವಿವರಕ್ಕಗೋಚರಮೇಲೇ ಶುಂಭತ್ಪ್ರವಾಳಾಧರೀ ॥ ೬೬

ಇದು ಕರ್ಮಭೂಮಿಯಿದಱೊಳ್ ।
ಸದಮಳಧರ್ಮಾರ್ಥಕಾಮಮಂ ಸಾಧಿಸದು ॥
ಬಿರ್ದ ದುಷ್ಕರ್ಮಮನೆಸಗುವ ।
ಪುಪಮುಖರಿಹಪರಸುಖಕ್ಕೆ ಬಾಹಿರರಲ್ತೇ ॥ ೬೭

ಎಂದನಂತರಂ

ಇದಱ ವಿಶೇಷಮಂ ನಿನಗೆ ಪೇಳ್ವೊಡದಗ್ಗಳಮೆನ್ನ ಬಲ್ಲಪ್ರೋಲ್ ।
ಪದೆವಱಿವಂತುಟಂ ನಿನಗೆ ಪೇಳ್ವೆನೆನಲ್ ಸುಕುಮಾರನಂ ಮನೋ ॥

ಮುದದಿನವಳ್ ವಿಳಾಸಮೆನಲಪ್ಪಿ ತದೋಷ್ಠಮನೀಲ್ದಿ ಚುಂಬಿಸಲ್ ।
ಸದಮಳರಾಗಮಂ ತಳೆದು ತಾಂ ಮಗುಳ್ದಪ್ಪಿದನುರ್ವರಾಧಿಪಂ ॥ ೮೪

ಅಂತಾಭುವನಕೋಶಮಂ ರಾಜವಾಹನನಿಂ ಸೂಚನಮಾತ್ರದಿಂದಱಿದ ಅನಂತೀಸೌಂದರಿ

ಶ್ರೀಮದಶೇಷಸದ್ಭುವನಕೋಶಮನೆಯ್ದೆಯುವಂತಿಸೌಂದರೀ ।
ಕಾಮಿನಿ ರಾಜವಾಹನನೃಪನಿಂ ಸಲೆ ಕೇಳ್ದಿಲೆ ಭೂಪ ಮನ್ಮನಃ ॥।
ಪ್ರೇಮವೆನಿಪ್ಪ ನಿನ್ನ ನುಡಿ ಕರ್ಣರಸಾಯನಮಾಯ್ತನಂತಸೌ ।
ಖ್ಯಾಮೃತಮುಂ ಸಮಂತು ಪಜೆದೆಂ ಸಕಲೇಂದ್ರಿಯಸೌಖ್ಯಸಾರಮುಂ ॥

ಆದೊಡಮಾಂ ನಿನಗೆ ಮಾಪ್ಪಿ ಪ್ರತ್ಯುಪಕಾರಮಾವುದುಮಿಲ್ಲವೊಡಂ

ಕಾರದೆ ರಂಜಿಸಿರ್ಪ ಮುಖಪಂಕಜಮುಂ ಸಲೆ ಲಕ್ಷ್ಮಿಯೊಪ್ಪುವೀ ।
ಪೇರುರಮುಂ ಸಪತ್ನಿಯರಯತ್ನದೆ ಸೋಂಕಿದ ತಾಣಮೆಂಬ ಲ ॥
ಜ್ಜಾರಯಮಿಲ್ಲದಾಂ ಮಗುಳ್ಪ ಚುಂಬಿಸಿಯುಳ್ಳವ ನೈರ್ಯಮುಂ ಮಹೋ
ದಾರದೊಳೀಕ್ಷಿಸೊಲ್ದ ನೃಪನಂದನ ನಿನ್ನ ಗುಣ ಪ್ರತೀಕದಿಂ ॥ ೮೦

ಅಂತೆಂದು

ಈತನ ಸೌಖ್ಯಾಮೃತಸಂ ।
ಪಾತಕ್ಕಿದು ತಾಣಮೆಂದು ತಾಮುದ್ಧರನುಂ ॥
ಪ್ರೀತಿಯಿನೊಪ್ಪಿರೆ ಚುಂಬಿಸಿ ।
ನೂತನಸೌಖ್ಯಕ್ಕೆ ತಾನೆ ನೆಲೆಯೆನಿಸಿರ್ದಳ್ ॥ ೮೧

ಕುಡಿಯಿಡುತಿರ್ಪ ಕಲ್ಪಲತೆ ಕಲ್ಪಕುಜಾಗ್ರಮನಪ್ಪವಂತೆ ನಾಣ ।
ಸಡಿಲೆ ಕುಮಾರನಂ ಭುಜಲತಾವ್ಯಯದಿಂ ಬಿಗಿದಪ್ಪಿ ಪೊಪ್ಪಿನಿಂ ॥
ಪಿಡಿದಧರಾಗ್ರಮಂ ಸವಿದು ಮತ್ತೆ ರತೋತ್ಸವದಿಚ್ಛೆಯಾಗೆ ನಾ ।
ಣ್ದುಡುಕುವ ಕಾಂತೆಯಂ ಮಗುಳ್ದು ತಾನನುರ್ವಪ್ಪಿದನುರ್ವರಾಧಿಪಂ॥ ೮೨

ಅಂತು ಮಗುಳ್ದು ಮಗುಳ್ದನೇಕಕರಣಂಗಳಿಂ ಕಾಮಕಲಹನುನೊಡಚಿ

ನೆಗೆದ ಕುಚಂಗಳೊಡ್ಡಲಿದು ಚಪ್ಪಲದಿರ್ಪಿನನುಂಗನುಂಗದೊಳ್ ।
ಸೊಗಸುವಿನಂ ಪೊಗರ್ ಮಿಗುವ ತೋಳ್ ಸಳತೋಳೊಳಪುರ್ಕೆವೆತ್ತಿರಲ್॥

ಬಿಗಿದಮರ್ವಿಕೊಂಡು ಸುರತಶ್ರಮದಿಂ ಸುಖನಿದ್ರೆಗೈದು ಕಾ ।
ಮಿಗಳಿಸಿದರ್ ಮನೋಭವನ ನಾಟಕದಿಂಬಿನ ಬೊಂಬೆಯೆಂಬಿನಂ॥ ೩೩

ಅಂತು ಕಂದರ್ಪಕೇಳೀಕಲಹದೊಳ್ ಬಬಿಲ್ದು ಸುಖನಿದ್ರೆಯಿಂದಿರ್ದಗಳ್

ಜರತಕಲಹಂಸಚರಣಾಂ ।
ತರದೊಳ್ ತಾವರೆಯ ನೂಲ ಸಂಕಲೆಯಿಕ್ಕಿ ॥
ಪಿರಿವಿನ ಕನಸಂ ಕಂಡರ್ ।
ನರಪತಿಯುಮುವಂತಿಸೌಂದರಿಯುಮಾಕ್ಷಣದೊಳ್ ॥ ೩೪

ಅಂತು ದುಸ್ಸ್ವಪ್ನವಂ ಕಂಡು

ಅರುಣೋದಯಕಾಲದೊಳ ।
ರ್ಬಿರುವೊರ್ವೊರ್ದಲೆಲ್ದು ನೋಡೆ ಭೂಪಾಲನ ಸ ॥
ಚ್ಚರಣಾಗ್ರದೊಳಿರ್ದುದು ಭೀ ।
ಕರಮೆನಿಸುವ ಬೆಳ್ಳಿವೆಸದ ಸಂಕಲೆಯಾಗಳ್ ॥ ೩೫

ಉಡುಗಣಮುಂ ನಿಜಾಂಘ್ರಿನಖದೀಧಿತಿಯಿಂ ಸೆಱೆಗೆಯ್ದಿಯಿನ್ನವಂ ।
ಬಿಡುವ್ರದೆನುತ್ತಿ ಪೂರ್ಣಶಶಿ ಕಾಲ್ವಿಡಿದರ್ದನೊ ಪೇೞೆನಲ್ಕೆ ಬೆ ॥
ಳ್ಪೆಡೆವಿಡದಿರ್ದ ರೂಪ್ಯಮಯಶೃಂಖಲೆ ರಾಜಕುಮಾರನಂಘ್ರಿಯೊಳ್ ।
ತೊಡರ್ದಿರೆ ಕಂಡನಂತಿವಧು ಬಾಯಲಿದಚ್ಚಿಳತೀವಚೋದದೊಳ್ ॥ ೩೬

ಅಂತಶ್ರೀಕರಮಪ್ಪ ಸಂಕಲೆಯಂ ಕುಮಾರನ ಕಾಲೊಳ್ ಭೋಂಕೆನಲ

ವಂತೀಸೌಂದರಿ ಕಂಡು

ಪಾಪಿ ವಿಧಾತ್ರನಿಂ ಕುಸುಮಕೋಮಲದೇಹನ ಕಾಲ್ಗೆ ಬಂಧನಂ ।
ಪ್ರಾಪಿಸಲಕ್ಕುಮೇ ಎನುತೆ ಶೋಕವನೈದೆ ಕುಮಾರಿ ತನ್ನ ಕಾಂ ॥
ತಾಪರಿವಾರಮಂಬೆರಸು ಬೇೞೆಲೆ ವಲ್ಲಭೆ ಶೋಕವೆಂದು ಧಾ ।
ತ್ರೀಪತಿ ಪೇೞ್ದಿನೊಂದೆರಡು ತಿಂಗಳ ಬಂಧನನೆಂದು ಕಾಂತೆಯೊಳ್ ॥ ೩೭

ಆಂ ಪೂರ್ವಭವದೊಳೆರಡು ದಿ ।
ನಂ ಪಿಡಿತಂದೊಂದು ಪಂಸಿಯುಂಘ್ರಿದ್ವಯಮುಂ ॥
ತಂಪಿನ ತಾವರೆನೂಲಿಂ ।
ಪೆಂಪಿಂ ಕಟ್ಟಿರ್ದೆನೆಂಬುಕೇಳಿಯೊಳಬಲ್ತೇ ॥

ಅಂತಾಂ ಪೂರ್ವಭವದೊಳ್ ಶಾಂಭವನೆಂಬರಸಾಗಿರ್ದಲ್ಲಿ ಜಲಕ್ರೀಡಾ
ಸನೆಯದೊಳ್ ಬಂದು ಹಂಸಿಯನೆರಡುದಿನಂ ನಿರ್ಬಂಧಿಸಿದ ಕಾರಣದಿಂದಿ
ನಗೀಜನ್ಮದೊಳಿಂತೀಬಂಧನಂ ಬಂದುದೆಂಬುದಂ ಕೇಳ್ದಜಿವೆನೆಂದೊಡಂ
ಮಾಣದೆ

ಇಂದುವ ಬಿಂಬದಿಂದಮೃತಬಿಂದುಗಳೊಕ್ಕಪ್ರವೆಂಬವೋಲ್ ಮುಸಾ ।
ಕ್ರಂದನವೇಗದಿಂದೆ ಸುರಿವಶ್ರುಜಲಂ ಪೊನಲಾಗೆ ಮತ್ತಮಿಂ ॥
ಟುಂ ದೆಸೆ ತೀವ್ರವಂತೆ ಮಿಗುವಾರ್ತರವಂ ಪೊಸತಾಗೆ ದುಃಖದಿಂ ।
ಮುಂದುಗೆಡುತ್ತೆ ಶೋಕಿಸುವ ಕಾಂತೆಗೆ ಮತ್ತಿನ ಭೀತಿಯೊಪ್ಪದೇ ॥ ೩೯

ಅಂತು ಕಟ್ಟಾಸುದದಿಂದಮಂತೀಸೌಂದರಿ ಕನ್ಯಾವ್ರತದ ಭೀತಿಯಂ ಬಗೆ
ಯದೆ ಶೋಕಿಸುವ ಧ್ವನಿಯನಂತರ್ವಾಸಿಕರ್ ಕೇಳ್ದು ಬಂದು ನೋಱ್ಪಿನಂ

ಕೋವಳದೇಹನನತ್ಯಭಿ ।
ರಾಮನನಬ್ಜತಗಭೀರಮೂರ್ತಿಯನತುಳೋ ॥
ದ್ಭಾವಮುಭುಜನಂ ಮನೋಹರ ।
ಭೂವಿಖ್ಯಾತರಸುತನನಂತವರ್ ವಿಗೆ ಕಂಡರ್ ॥ ೪೦

ಅಂತಿರ್ದ ಕುಮಾರನಂ ಕಂಡು

ಕನ್ಯಾಂತಃಪುರಮುಂ ವಿಚಾರರಹಿತಂ ನಿರ್ಭೀತಿಯಿಂ ಪ್ರೊಕ್ಕನ ।
ತ್ಯನ್ಯಾಯಂ ಬಿಗಿ ಕಟ್ಟಿ ಕಳ್ಳನನೆನುತ್ತುದ್ರೇಕಿಸರ್ ಚಿತ್ತದಾ ॥
ರನ್ಯಂ ಮಿಕ್ಕವನೊರ್ವ ಕಿಂಕರವರಂ ತದ್ಭೂಪನಂ ಕಂಡಿವಂ ।
ಮಾನ್ಯಂ ದಂಡಿಸಲಸ್ಮಿನೊಲ್ದಜಿಸ್ರವೆಂ ಶ್ರೀಚಂಡವರ್ಮಾಖ್ಯನೊಳ್ ॥ ೪೧

ಎಂದು ಚಂಡವರ್ಮಂಗವಂ ಪೋಗಿ ಪೇೞಲವನಂ ಬೇಗದಿಂ ತನ್ನಿಮೆ
ನಲೊಡಂ

ಬೆಳ್ಳಿಯ ಸಂಕಲೆಯೊಡನಾ ।
ಬಲ್ಲಾಳ್ಗಳ್ ಕೆಯ್ಯನಾರ್ಪಿನಿಂ ಪಿಡಿದು ಧರಾ ॥
ವೆಲ್ಲಭನಂ ತಂದರ್ ಸಭೆ ।
ಯೆಲ್ಲಂ ಬೆಗ್ಗಾಗಿ ನೋಱ್ಪಿನಂ ಕಡುವೇಗಂ ॥ ೪೨

ಅಂತು ಪಿಡಿತಂದು ರಾಜಕುಮಾರನಂ ಚಂಡವರ್ಮನ ಮುಂದೆ ನಿಲಿಸಲಾತಂ ನೋಡಿ

ಇನನೇ ಅಂತವನೊಪ್ಪುವೆನ್ನನುಜನಂ ಕನ್ಯಾರ್ಥದಿಂ ಕೊಂದ ಕೈ ।
ತವನುಷ್ಪೋದ್ಭವಮಿತ್ರನೀತನಸುವಂ ವೈವಸ್ವತಂಗೊಪ್ಪಿಸಂ ॥
ಬ ವಿಶೇಷೋಕ್ತಿಯವಂತಿದೇವನನ ಕಳತಸಂಪನ್ನೆ ಮಾದೇವಿಯಾ ।
ಶ್ರವಣಕ್ಕೆಯ್ತರೆ ಚಂಡವರ್ಮಸಚಿವಂಗಿಂತೆಂದು ಪೇಳ್ದಿಟ್ಟಡಳ್ ॥ ೪೩

ಅದೆಂತೆನೆ—

ಅವನಂ ಕೊಂದೊಡವಂತಿದೇವಿ ಮೊದಲೊಳ್ ತ್ರೀಗರ್ಭಂ ದಿಟಂ ತ್ರೀದೊರ್ಡೇ
ನವಳಂ ಪಿಂದಿರವೆಮ್ಮ ಜೀವಮಿರಡೆಂಬೀನಿಶ್ಚಯಕ್ಕಲ್ಲಿ ತ ॥
ನ್ನ ವಿಚಾರಕ್ರಮಮೆಂತುಟೆಂತೆಸಗುಗೆಂಬೀವಾರ್ತೆಯಂ ಕೇಳ್ದು ಮಂ ।
ತ್ರಿವರಂ ಕೊಲ್ಲದೆ ಭೂಪನಂ ಕಳಪಿದಂ ಕಾರಾಗೃಪಕ್ಕಾಕ್ಷಣಂ ॥ ೪೪

ಅಂತಾತನಂ ಸೆಱೆಯಿಡಲ್ ಬಱಿಕ್ಕಿತ್ತಲ್

ಮರುಳಾಗಿಯವಂತೀಶ್ವರ ।
ನರಸಿ ಮಹಾದೇವಿಯಿರ್ವರುಂ ಕನ್ಯಾಂತಃ ॥
ಪುರದೊಳ್ ಸಿಕ್ಕಿದ ಕಳ್ಳನ ।
ನೊರಸಲ್ವೇಡೆಂದಪರ್ ಮಗುಳ್ದೀಗೆಯ್ವೆಂ* ॥ ೪೫

ಎಂದು ಮಹೇಂದ್ರಾಚಲದೊಳ್ ತಪಂಬಡುತಿರ್ದ ನರ್ಮದಾಸಾರಂಗೋಲೆಯಂ ಕಳಪಿ ಕುಳ್ಳಿರ್ದಾಗಳ್

ಚಂಪಾಪುರಪತಿಯೆನಿಸುವ ।
ಪೆಂಪಂ ಪಡೆದಿರ್ದ ಸಿಂಹವರ್ಮನ ಮಗಳಂ ॥
ತ್ತಂ ಪೂರ್ವದೊಳೆರೆದಟ್ಟಿದ ।
ಪೆಂಪಿನ ದೂತಂ ಕನಲ್ದು ಮಗುಳ್ದೈತಂದಂ* ॥ ೪೬

ಅಂತಾದೂತಂ ಬಂದೋಲಗದೊಳಿರ್ದ ಚಂಡವರ್ಮಂಗೆ ಪೊಡೆಮಟ್ಟುಂತೆಂದಂ—

ಎಲ್ಲಿಯು ಚಂಡವರ್ಮನವನಂ ಬಗೆಗೊಳ್ವವನಾವನುರ್ವರಾ ।
ವಲ್ಲಭನಾದವಂಗೆ ಕುಡುವೆಂ ಮಗಳಂ ಬಡನುಂತ್ರಿಗೀಯೆನೆಂ ॥
ದೆಲ್ಲರ ಮುಂದೆ ಧಿಕ್ಕರಿಸಿ ನೂಂಕಿದನೆನ್ನನೆ ಸಿಂಹವರ್ಮನೀ ।
ಪ್ರೋಲ್ಲಮೆಯಂ ವಿಚಾರಿಸುವುದೆಂದುಸಿದರ್ದಂ ಚರನುಕ್ತಿಭೀಕರಂ ॥ ೪೭

ಇಂತಾದೂತಂ ಪೇೞಲೊಡಂ

ಭಂಗುರಭೀಷಣಭ್ರುಕುಟಿ ಕೆಂಪಡರ್ದಕ್ಷಿಯುಗಂ ವಿವರ್ಣವಾ ।
ದಂಗವಮಗುರ್ವಿನಿಂ ಕುಣಿವ ಮೀಸೆ ಕನಲ್ವ ಮುಖಂ ವಿರೋಧಿಯಂ ॥
ನುಂಗಿಯುಗುಳ್ವೆನೆಂಬ ಸುಡಿ ಲೋಕಭಯಂಕರಮಾಗೆ ಚಂಡನ ।
ರ್ಮಂ ಗಡಿಗೆಟ್ಟ ಕೋಪದೊದವಿಂ ದಳಮುಖ್ಯನನಂದು ನೋಡಿದಂ॥ ೪೪

ಅಂತು ದಳಮುಖ್ಯನಂ ನೋಡಿ ಚತುರಂಗಬಲಮುಂ ಬರಿಸೆಂಬುದುಂ,

ಸಿಂಗದ ಸಂಗಮಂತಕನ ತಿಂತ್ರಿಣಿ ಮಾರಿಯು ಮೂರಿ ಕಾಲರು ।
ದ್ರುಂಗನುಸೂರಿ ಭೈರವನ ಭಾರಣೆ ರಕ್ಕಸರುರ್ಕು ಮಿಬ್ಬಿ ಮೊ ॥
ತ್ತಂ ಗಣನಾತಿರೇಕಮೆನಲೊಪ್ಪುವವೋಲ್ ನೆರೆದಿರ್ದುದಾಕ್ಷಣಂ ।
ಸಂಗರದುಜ್ಜಗಕ್ಕೆ ಚತುರಂಗಬಲಂ ನಸು ತಗೆರ್ದ ಭೂತಳಂ ॥ ೪೯

ಅಂತು ಚತುರಂಗಬಲಂ ನೆರೆದು ಬರೆ ಕಂಡು

ಮಾರಿ ಮುಸಗಿತ್ತೆನತ್ ಸಂ ।
ಹಾರಂಮಾಡುವೆನರಾತಿಬಲಮುಂ ಪಿಡಿದಾಂ ॥
ಕೂರಸಿಯನೆಂದು ಭಾಷೆಯ ।
ನೋರಂತಿರಲಿತ್ತು ಘೂರ್ಮಿಸಿತಾತ್ಮಸ್ಥಾನಂ ॥ ೫೦

ಅಲ್ಲಿ

ಎನ್ನಾನೆಯಿಂದೆ ಪಗೆಗಳ ।
ಬೆನ್ನೆಲ್ಬಂ ಮೆಟ್ಟಿ ಮುಱಿಸಿ ಸಪ್ತಾಂಗದ ಸೊಂ ॥
ಪನ್ನಿನಗೆ ತಂದು ಕುಡದೊಡೆ ।
ನಿನ್ನಹಿತನ ಮನೆಗೆ ತೊಲಿಸ್ತಾ ಮಾಡುವುದೆನ್ನಂ ॥ ೫೧

ಎಂದು ನಿಷಾದಿಗಳ್ ಭಾಷೆಯಂ ಕುಡುವುದುಂ,

ತುರಗಖುರಸ್ಪುಟದೊಳರಿಗಳ ।
ಶಿರಂಗಳೆಂ ಚಿಗುಳ್ದುಬಿಸಿ ವಿಜಯಶ್ರೀಯಂ ॥
ನೆರೆಯದೆ ಮಾಣ್ದಪೆವಾದೊಡೆ ।
ಧುರದೊಳ್ ಪಗೆವಂಗೆ ಮಾಱುವೋಪೆವಿಳೇಶಾ ॥ ೫೦

ಎಂದಶ್ವಾರೂಢರುಂ ಪ್ರತಿಜ್ಞೆಗೆಯ್ದರಪ್ಪನಂ,
ರಥದುರವಣೆಯಿಂ ರಿಪುಸಾ ।
ರಥಿಯುಂ ತಪ್ರಥಮನೆದಱ ಕುದುರೆಯನಾಶಾ ॥
ಪಥಮುಂ ಪತ್ತಿಸಿದಪೆವವಿ ।
ತಥಮೆನ್ನದೆ ನೋಪ್ಪೆವೆಮ್ಮ ಕಾಳಿಗದನುವಂ ॥ ೫೧

ಎಂದು ರಥಿಕರ್ ನುಡಿದು ನಿಟ್ಟೆಯಿಂ ನಿಲ್ವುದುಂ,
ಸಂಹಾರರುದ್ರನಂತಿರ ।
ಲಾಹವದೊಳ್ ನಡೆದು ಪಗೆಗಳಂ ಕಾಣಲೊಡಂ ॥
ಬೂಹಾಬಲದಿಂ ಮುರ್ದಿಸಿ ।
ಸಾಹಸಮುಂ ಮೆಱೆವೆವೆಂದರುದ್ಧತವೀರರ್ ॥ ೫೨

ಸಿಡಿಲಿಱುಗುವಂತೆ ಪಗೆಗಳ ।
ನಡುನೆತ್ತಿಯನೆಱಗಿ ಪಾಯ್ವ ನೆತ್ತವ್ರೊನಲಿಂ ॥
ಕಡಲಾಯ್ತಿ ನಿಸುವೆನಾಹವ ।
ಬೆಡೆಯನೆನುತೊ್ರರ್ವ ಲೌಡಿಗಾಱುಂ ಮೆಱೆದಂ ॥ ೫೩

ಕೊಲಿಂ ರಿಪ್ರಗಳ ಪಂದಲೆ ।
ಸಾಲಂ ರಣಭೂಮಿಯಲ್ಲಿ ತೋಱಿದೊಡೆಲೆ ಭೂ ॥
ಪಾಲ ಗುಱಿವಾಱ್ಪೆನ್ನಂ ।
ಸೂಲಕ್ಕಾಹವದೊಳೆಂದರಾಬಿಲ್ಲಾಳ್ಗಳ್ ॥ ೫೪

ಸಬಳಂಬಿಡಿದನಿತಂ ಕೊಂ ।
ದು ಬಾನ್ಗವಂ ಕೆತ್ತಿ ದೇವತತಿಗಂಜಿಕೆಯುಂ ॥
ನಿಬಿಡವೆನೆ ಮಾಡದೊಡೆ ನರ ।
ಕಬಾಳೆಗೊಳಗಪ್ಪೆನರಸ ನಿನ್ನಯ ಕೆಯ್ಯೊಳ್ ॥ ೫೫

ಆನೆ ಒರಲೆನ್ನ ಪರಿಗೆಯೊ ।
ಳಾನದೆ ಪೆಱೆ ಮೆಟ್ಟ ನಿಂದೆನಾದೊಡೆ ಪಗೆಗಾಂ ॥
ವೂನಿನಿಯಾದಪೆನೆಂದಸ ।
ವೂನದ ಬಿರುದೆಸೆನ ಪರಿಗೆಕಾಱರ್ ಮೆಱ್ಪೆದರ್ ॥ ೫೪

ಅಂತು ಸುಭಟನಿಕರಂ ಸಂರಂಭದಿಂದಿರಲದಂ ಚಂಡನರ್ಮಂ ಕಂಡು

ಸಾವುಂ ಪಾರ್ವಂಗೆ ಭೇದಂ ನಿಗಮನಿಕರಕೂನ್ಯಗೆ ದಾನಂ ಮದೇಭ।
ಸ್ತೋಮಕ್ಕಾರಯ್ಯೆ ಮುಖ್ಯಂ ನೃಪತಿಗೆ ಬಗೆಯೊಳ್ ದಂಡಮೀ ಮುಖ್ಯ
ಮೆಂದಾ ॥ ಭೂಮೀಶಂ ಚಂಡನರ್ಮಂ ನಿಜಭುಜಬಲದಿಂ ವೈರಿಭೂಪಾಲ
ರಾಜ್ಯ । ಶ್ರೀಮಾನ್ಯಶ್ರೀಯ ಪಾಣಿಗ್ರಹಣಮನೊಲವಿಂ ವೂಪ್ಪೆನೆಂದೆಲ್ದಿ
ನಾಗಳ್ ॥ ೫೫

ಅಂತೆಲ್ದಿ ಚಂಪಾಪುರಕ್ಕಭಿಮುಖನಪ್ಪದುಂ,

ಕಡಲೇಟುಂ ಕದಡಲ್ ದಿಶಾವಿತತಿಗಳ್ ಬೆಂಡಾಗೆ ಸರ್ವೋರ್ವಿ ಬಾ ।
ಯ್ವಿಡೆ ಗೋತ್ರಾದ್ರಿನಿಕುಂಜದೊಳ್ ಪ್ರತಿರವಂ ಪೊಣ್ಮಲ್ಕ ವಿದ್ವೇಷಿಗಳ್॥
ನಡುಗಲ್ ಭೀಕರಮಪ್ಪಿನಂ ಪದೆಪಿನಿಂ ಶ್ರೀಚಂಡನರ್ಮಂ ಬೆಸಂ ।
ಗುಡೆ ಪೊಣ್ಮಿತ್ತು ಸುವರ್ಣಕೋಣಪತಿಯಿಂ ಪ್ರಸ್ಥಾನಭೇರೀರವಂ ॥ ೫೬

ಅಂತು ಪ್ರಸ್ಥಾನಭೇರಿಯಂ ಪೊಯ್ಸಿ
ಅಂತಃಪುರದೊಳ್ ಸಿಕ್ಕಿದ ।
ನಂತಾತನನೆನ್ನ ಕೂಡೆ ಕೊಂಡುಯ್ವಂ ನಿ ॥
ಶ್ಚಿಂತಮೆನಗಪ್ಪುದೆಂದು ದು ।
ರಂತಮಿನಿಪ್ಪಧಿಕಕೋಪದಿಂ ತರವೇಳ್ದಿಂ ॥ ೫೭

ಅಂತು ಕೋಪಂ ಕೈವಿಕ್ಕು ಚಂಡನರ್ಮಂ ಕಾರಾಗೃಹದೊಳಿರ್ದ
ರಾಜವಾಹನನಂ ತರಿಸಿ

ಕುಂಜರನ ಕೆಯ್ಯೊಳಿವನಂ ।
ಕಂಜಮನೀಡಾಡುವಂತೆ ಕೊಲಿಸುವೆನಿವನಾ ॥
ರ್ಗಂಜುವನಲ್ಲಂ ಭಂಡಿಯ ।
ಪಂಜರದೊಳಗಿಕ್ಕಿಮೆಂದು ಪುಗಿಸಿದನಾಗಳ್ ॥ ೫೮

ಅಂತು ಕುಮಾರನನೊಂದು ಪಂಜರದೊಳ್ ಪುಗಿಸಿ ಕವಾಟಮಂ ಬಂಧಿಸಿ
ಪರಿವೇಷದ ನಡುವೆ ಮನೋ ।
ಹರಪೂರ್ಣಶಶಾಂಕನಿರ್ದ ತೆಱದಿಂದಾಪಂ ॥
ಜರದೊಳಗೆ ತೇಜದಿಂದು ।
ವರ್ತಿಸೆ ಶತನಯಂ ವಿಲಾಸದಿಂ ಕಣ್ಗೆಸೆದಂ ॥ ೬೩

ಕೇಸರಿಯೊಂದುಮನಾರ್ಭಿಂ ।
ದಾಸುರಮೆನಿಸ್ರೊಂದು ಪಂಜರಾಂತದೊಳಿಟ್ಟಂ ॥
ತಾಸಿಂಡವಿಕ್ರಮಂ ಸವಿ ।
ಳಾಸದಿನಿರ್ದಂ ವಿಧಾತೃವಶಮೆನುತಾಗಳ್ ॥ ೬೪

ಚೂಡಾಮಣಿಯಿಂದೆ ತೃಷಾ ।
ಪೀಡೆಯನಗ್ಗಳದ ಪಸಿವನಾರ್ತವನೊಡನೀ ॥
ಡಾಡಿ ಬಡವಾಗದಿರ್ದಂ ।
ಪಾಡಱಿಯದೆ ನೃಪಕುಮಾರಕಂ ಪಂಜರದೊಳ್ ॥ ೬೫

ಅಂತು ಮಾತಂಗಕಂ ಕೊಟ್ಟ ಮಾಣಿಕ್ಯದ ಬಲದಿಂ ಕ್ಷುತ್ಪಿಪಾಸೆಯಂ ಬಗೆಯದಿರ್ಪ ಕುಮಾರನಂ ಪಂಜರದೊಳಿಟ್ಟು ಚಂಪಾಪುರಕ್ಕೆ ಚಂಡನ ವರ್ಮಂ ನಡೆವಾಗಳ್

ಕರಿ ತುರಗಂ ರಥಂ ನಿಜಪದಾತಿ ಭಯಂಕರಕೋಪದಿಂದಮೆ ।
ಯ್ತರೆ ಪದಘಾತದಿಂ ನೆಗೆದ ಧೂಳಿ ಕರಂ ಪ್ರದಿದಂತರಿಕ್ಷದೊಳ್ ॥
ಪರಿನಡೆದಿರ್ದುದೆಯ್ದೆ ಗಗನಂ ಬಯಲೆಂಬರ ಮಾತದೇಕೆ ಕಂ ।
ಡಿರೆ ಗಗನಸ್ಥಳಸ್ಥಿತಿಯನೆಂದುಱೆ ತೋರ್ಪವೊಲೆಲ್ಲಿ ನೋಟಿಪ್ಪೊಡಂ ॥ ೬೬

ಬೆಟ್ಟುಗಳೈದೆ ನುಗ್ಗಿ ಪಜವಟ್ಟೆವೊಲಾಗೆ ನದೀನದಂ ಪದೋ ।
ದ್ಘಟ್ಟನೆಯಿಂ ಮಣಲ್ ಮುಸಗೆ ದಿಗ್ವಿವರಂ ಚತುರಂಗಸೇನೆಗಂ ॥
ದಿಟ್ಟೈಡೆಯಾಗೆ ಭೂಮಿ ದಳಭಾರಣೆಯಿಂ ನಸು ನೆಗ್ದೆ ವೈರಿ ಮುಂ ।
ಗೆಟ್ಟರೆ ಚಂಡವರ್ಮನರಪಂ ನಡೆಗೊಂಡನತೀವಕೋಪದಿಂ ॥ ೬೭

ಅಂತತಿಸಂಭ್ರಮಂಬೆರಸು ಚಂಡನವರ್ಮಂ ನಡೆತರ್ಪುದಂ ನಿಂಪವನರ್ಮಂ
ಕೇಳ್ದು

ಮುಳಿದೀಗಳ್ ಚಂಡವರ್ಮಂ ತನಗೆ ಮಗಳನಾನೀಯೆನೆಂಬುಗ್ರಕೋಪಂ । ನಳನಿಂ ಮೇಲೆತ್ತಿ ಬಂದೆನ್ನಯ ಪುಗೆಳೊಡನೀರಾಜ್ಯಮುಂ ಕೊಳ್ವ ಬಾಹಾ ॥ ಬಳದಿಂದೇಳ್ತಿರ್ದನೇಳ್ತಿರ್ದುದು ಪಡಿಬಲನುಪ್ಪಂತಿರೆನ್ನೊಳ್ ನ್ಯಸರ್ ತೋ । ಳ್ವಳದಿಂದಿಂದೋಲೆಯಂ ನಾಲ್ದಸೆಗೆ ಕಳಿಪಿದಂ ಕೂರ್ಮೆಯಿಂ ಸಿಂಹವರ್ಮಂ ॥ ೬೪

ಅಂತು ತನಗೆ ಮಿತ್ರರಪ್ಪರಸುಗಳಂ ಪಡಿಬಲವಾಗಿ ಬರಲ್ವೇಳ್ದಿ ಸಿಂಹವರ್ಮಂ ತನ್ನುಳ್ಳ ಸೈನ್ಯನುಂ ಕೂಡಿಕೊಂಡು ಚಂಡವರ್ಮಂಗಿದಿರಾಗಿ ಬಿಡಲ್

ಆರೀಸೈನ್ಯವನಾಂಪರ್ ।
ಧಾರಿಣಿಯೊಳೆನಲ್ಕೆ ಚಂಡವರ್ಮಂ ಸಲೆ ದು ॥
ರ್ವಾರಿತಸಂರಂಭದಿನಂ ।
ನೋರಂತಿರೆ ಬಿಟ್ಟನಲ್ತಿ ಚಂಪೆಯ ಗಡಿಯೊಳ್ ॥ ೬೫

ಅಂತುಭಯಬಲನುತ್ಸಾಹನ್ನಮಾಗಿ ಬಿಡುವ್ರದುಂ ಚಂಡನವರ್ಮನ ಸುಭಟರ್ ಮುಂದುವರಿದು

ಕಡುಪುಳ್ಳರ್ ಬಂದು ಕೈದೋಱದೆ ಮುಱಿದಿರೆವೆಂದಿರ್ದೊಡಂ ಚಂಡವರ್ಮಂ। ಬಿಡನೆಂತುಂ ಸಿಂಹವರ್ಮಾತ್ಮಜೆಯನವನಿಯುಂ ಕೊಳ್ಳದೆಂದಾರ್ದುಸೈನ್ಯಂ ॥ ನಡೆಯಲ್ ಬೊಬ್ಬಿಟ್ಟು ಕೋಲಂ ತುಡುಕೆ ಮುಳಿಸಿನಿಂ ಮಾರ್ಬಲಂ ಚೂಣಿಯೊಳ್ ಕೂ । ಗಿಡಿಸಿತ್ತಂದಾಂಪ ವೈರಿಕ್ಷಿತಿಪನ ಭಟರಂ ದಿಂಡುವಾಯ್ದೆಚ್ಚು ಬೇಗಂ ॥ ೭೦

ವೈರಿಕ್ಷಿರೋಜರಕ್ತಮಧುವಂ ತವೆ ಪೀವರ್ ಶಿಳೀಮುಖಂಗಳಾ ।
ಕಾರದೊಳಂಬುಗಳ್ ಗಗನದೊಳ್ ಮಿಗೆ ಪಾಱಿ ವಿರೋಧಿನೌಳಿಯೊಳ್ ॥
ಭೋರೆನಲಾರ್ಪಿನಿಂಬಿಱಿಗೆ ತೊಟ್ಟು ಕಳಿಲ್ದಿದ ಪೂವಿನಂದದಿಂ ।
ಧಾರಿಣಿಯಲ್ಲಿ ಬಿಲ್ದಿವು ಚಿರಂ ಪೊಸತಾಗೆ ಧನುರ್ಧರಾಹವಂ ॥ ೭೧

ಮುತ್ತಿನ ಬಯ್ಕೆಯಂ ತೆಗೆವೊಡಂಜನಮಲ್ತಿ ಮದೀಯಖಡ್ಗಮೆಂ ।
ನೆತ್ತಿನ ದಾಯದಿಂ ಗಜದ ಮಸ್ತಕಮುಂ ಕಡುಕೆಸ್ರು ಪೊಯ್ದೊಡಾ ॥

ನೆತ್ತಿಯ ಮುತ್ತು ರುಳ್ಲಿನೆ ರಣಾಂಗಣದೊಳ್ ಕೆದಱಿಲ್ಕೆ ಜಾಗು ವೀ ।
ರೋತ್ತಮ ಎಂದು ವೀರತತಿ ಬಣ್ಣಿಸೆ ಖಂಡೆಯಕಾಱರೊಪ್ಪಿದರ್ ॥ ೭೦

ಭಾವಿಸೆ ಹಿಂದೆ ಮುಂದೆಡಬಲಂಗಳೊಳಂಬಿನ ಸೋನೆಯಿಂದಣಂ ।
ತೀವೆ ವಿರೋಧಿರಕ್ತಜಲದಿಂ ರಥಿಕರ್ ಕಡುಪಿಂ ರಥಂಗಳಂ ॥
ಡಾವರಿಸುತ್ತ ತೋಳ್ದಣಿಯಲೆಚ್ಚು ವಿರೋಧಿಭಟರ್ಕಳೆಯ್ದಿ ನಿ ।
ಱೇರ್ವನರೆಂಬಿನಂ ಪೊಣರ್ದಂ*ದೇಂ ಪೆಸರ್ವೆತ್ತರೊ ದೋರ್ಬಲಂಗಳಂ॥ ೭೧

ಅಂತುಭಯಬಲಕ್ಕಂ ಸಮಯುದ್ಧಮುಪ್ಪಡಂ, ಚಂಡನವರ್ಮಂ ಕಂಡು

ಇನಿತೇಕೀಸಿಂಹವರ್ಮಂಗೆನುತತಿಭಲದಿಂ ಚಂಡವರ್ಮಂ ಪ್ರತಾಪಾ ।
ರ್ಜುನನಾಗಳ್ ಸೇನೆಯಂ ಮುಂ ಕವಿ ಕವಿಯದಟಿಂ ನೂಂಕು ನೂಂಕೆಂದು ಯುದ್ಧ ॥ ಕ್ಕನುವಾದಂ ತಾನೆ ಜಾತ್ಯಶ್ವಮನನುನಯದಿಂದೇಱಿ ಕೌಕ್ಷೇಯಮಂ ಕಿ ।
ಲ್ತನಿತಂ ಸಂಹಾರಮುಂ ನೂಡುವ ಬಗೆಯೊದವಂ ತಾಳ್ದಿ ಸಂಗ್ರಾಮಭೀಮಂ ॥ ೭೨

ಮೂರಿ ಕನಲ್ದು ಸಂಗರಕೆ ವೊಗ್ಗರವಾಯ್ದವೊಲಾರ್ದು ವಾಜಿಯಂ ।
ಧಾರೆ ಲಸದಾದಿಗಳ್ ಮೆಱೆಯೆ ವೈರಿಪತಾಕಿನಿಯಂ ನಿಜಾಸಿಯಿಂ ॥
.....ಕಟೆಗನ್ನೆಗಮುಂ ಪೊಡೆಸೆಂಡನಾಡಿ ಸಂ ।
ಹಾರಮನೆಯ್ದಿಸುತ್ತಧಿಕಸಾಹಸನುಂ ತಳೆದಂ ನೃಪಾಲಕಂ ॥ ೭೩

ಅಂತು ಚಂಡನವರ್ಮನುರವಣಿಪ್ಪುದುಂ ಸಿಂಹನವರ್ಮನ ಭಟರ್ ಕಂಡು

ವೈಕಕ್ಷಾಬಂ ಮತ್ತಮಾತಂಗದ ಬಿದುವನವಷ್ಟಂಭದಿಂದೇಱಿ ಶೌರ್ಯಾ ।
ಧಿಕನಪ್ಪಿಂ ಧಾತ್ರಿಗೆಂದೋವದೆ ಬಯಸುವವೋಲ್ ಪೆಂಗ್ರವೆತ್ತೊಪ್ಪುವಂಬಾ।
ಲಿಕೆಯಂ ಸ್ತ್ರೀರತ್ನಮುಂ ಕೂಡುವ ಬಯಕೆಯೊಳೈತಂದನೇಕಾಳಿಗಕ್ಕುಂ
ದು ಕನಲ್ದಾಸಿಂಹನವರ್ಮಕ್ಷಿತಿಪನ ಸುಭಟರ್ ಬಲ್ವಿನಿಂದೆಚ್ಚರಾಗಳ್ ॥ ೭೪

ಅಂತು ಸಿಂಹವರ್ಮನ ಸುಭಟರ್ ಮುಂದುಗಿಡಿಸಲದಂ ಚಂಡವರ್ಮಂ ಕಂಡು

ಪ್ರಳಯಾಗ್ನಿಜ್ವಾಲೆಯಂ ಕಣ್ ಕೆದಱುವಿನನುಗುವ್ವಿಪಿನಂ ಕೋಪಮು
ಣ್ಮಾಲ್ । ಮುಳಿಸಿಂದಂ ಸಿಂಹನವೋರ್ವಿಪನ ಬಲಮನೆಚ್ಚಿಟ್ಟ ತದ್ಭೃ

ಪನಂ ತೋ ॥ ಳ್ವಲದಿಂ ಮೇಲ್ವಾಯ್ದು ಬೇಗಂ ಪಿಡಿದು ನಡೆದು ಚಂಪಾ
ಪುರಾವಾಸವಮಂ ಸಿ । ಶ್ವಲಸತ್ವಂ ಪೊಕ್ಕು ಬಾಹಾಬಲದ ಸೊಬಗಿನಿಂದಿ
ರ್ದನಾಚಂಡವರ್ಮಂ॥ ೩೭

ಅಂತು ಸಿಂಹವರ್ಮನು ಪಿಡಿದು ಚಂಪಾಪುರಕ್ಕೆ ಬಂದು ಅರಮನೆಯಂ
ಪೊಕ್ಕು ಮುಱುದೆವಸಂ

ಬರವೇೞ್ಕಿನ್ನಿಲ್ಲಿಗಂಬಾಲಿಕೆಯನಿದು ಮುಹೂರ್ತಂ ವಿವಾಹಕ್ಕೆನುತ್ತಾ ।
ದರದಿಂ ಮಾಂಗಲ್ಯವಸ್ತು ಪ್ರಕರಮನೊಲವಿಂದಾಕ್ಷಣಂ ಮಾಡಿ ತತ್ಸಂ ॥
ದರಿಯಂ ಕೈಗೈದು ಬೇಗಂ ಬರಿಸಿ ಮುದುವೆಯೊಳ್ ನಿಲ್ವ ಸಂರಂಭದಿಂ ನಿ ।
ರ್ಭರಸಂತೋಷಾತಿರೇಕಂ ಮಿಗುವಿನಮೆಸೆದಂ ರಾಗದಿಂ ಚಂಡನರ್ಮಂ ॥

ಅಂತಂಬಾಲಿಕೆಯಂ ಹಸೆಗೆ ಬರಿಸಿ ಮದುವೆಯಪ್ಪೆನೆಂಬ ಸನುಯದೊಳ್

ನಸುಕೆಂಪಾದಕ್ಷಿ ಕೆಂದೂಳಡರ್ದ* ಪದಯುಗಂ ಒಲ್ಬೆಮರ್ ಸೋರ್ವ
ಭೂಳಂ । ಬಿಸುಸುಯ್ಲಿಂ ತೇಂಕುವಂಗಂ ಬಱಿತೊಣಗಿದ ಗಂಟಲ್ ಕರಂ
ಕಂದಿದಾಸ್ಯಂ ॥ ಪ್ರಸತಪ್ಪಾಟೋಪವೊಪ್ಪಲ್ ಸರಭಸಗತಿಯಿಂ ಬಂದನು
ದ್ದಂಡಸತ್ವಾ । ವಸಥಂ ದೂತಪ್ರಸಿದ್ಧಂ ಹರಿಣಚರಣನೆಂಬಂ ಮುನೋವೇ
ಗದಿಂದಂ ೩೯

ಅಂತು ಹರಿಣಚರಣನೆಂಬ ದೂತಂ ಬಂದು ಚಂಡವರ್ಮಂಗೋಲಿಯಂ
ಕುಡಲದಱೊಳ್

ಧರೆಯೊಳ್ ನೀತಿವಿದಂ ವಿಚಾರಪರನೆಂದಾರಾಜ್ಯದಾರೈಕೆಗೆಂ ।
ದಿರಿಸಲ್ ಮುಪ್ಪಿನ ತಂದೆ ತಾಯ ನುಡಿಯಂ ಕೇಳ್ದಲ್ಲಿ ಕನ್ಯಾಗೃಹಾಂ ॥
ತರದೊಳ್ ಸಿಲ್ಕಿದ ಕಳ್ಳನಂ ಸೆಱೆಯೊಳಿಟ್ಟುಂ ಕೊಲ್ಲನೇಕೀಗ ಚಿ ।
ಚ್ಚರದಿಂ ಕೊಲ್ವುದನೇಕಚಿತ್ರವಧೆಯಿಂದೀವೋಲೆಗಂಡಾಕ್ಷಣಂ ॥ ೪೦

ಎಂದಿರಲದಂ ಕಂಡು

ಕಡುಲೇಸಾಯ್ತೀಮದುವೆಯೊ ।
ಳೊಡಗೂಡಿ ಬಱಿಕ್ಕವುವನನಾನೆಯ ಕೈಯಿಂ ॥
ಪೊಡೆಸಿ ರದನಾಗ್ರದಿಂದಿ ।
ರ್ದಡಿಯಂ ಮಾಡಿಸುವೆನೆಲ್ಲರುಂ ನೋೞ್ಪಿನೆಗಂ ॥ ೪೧

ಎಂದು ಮಾನವತಿಗನ ನೊಗಮಂ ನೋಡೆ
ಮದನೊಸರ್ವ* ಚಂಡಸ್ರೋತನ ।
ನದಟಿಂ ಸಿಂಗರಿಸಿ ತಂದು ಬಾಗಿಲೊಳಿರಿಸಿಂ ॥
ಒದವುವಾತನಾಕ್ಷಣಂ ಪೆ ।
ರ್ಚಿದ ಗಜನುಂ ತಂದು ಬಾಗಿಲೊಳ್ ನಿಲಿಸಿದರ್ದಂ ॥ ೪೨

ಅದೆಂತೆನೆ–

ಗಂಡಸ್ಥಾನದೊಳುರ್ಕಿಸೋರ್ವ ಮದದಿಂ ಮುಂಗಾಣದುಚ್ಚೈಕದಿಂ ।
ಕುಂಡಾದಂಡಮನೆತ್ತಿ ತನ್ನ ನೆಲಂ ಮಾಣ್ಪಾನೆಯೆಂದಟ್ಟುವು ॥
ದ್ದಂಡಕೊಲ್ಲಧದಿನೊಂದಿ ನಿಂದುದು ನಗಂ ಮಾತಂಗಮಾದಂತೆ ನೇ ।
ತಂಡಂ ಬಂದುದು ಚಂಡಸ್ರೋತವೆಸರಿಂ ರಾಜಾಲಯದ್ವಾರದೊಳ್ ॥ ೪೩

ಧೃತಪದ್ಮಾನುನಯಂ ಸುಗೋತ್ರಜನನಂ ಭದ್ರಾನ್ವಯಂ ದಾನವಾ ।
ರಿತನಂ ಕೌತುಕಕೀರ್ತನಂ ನೆಲಸಿದತ್ತೆನ್ನಲ್ಲಿ ಪಂಚಾಸ್ಯದೂ ॥
ರಿತಮಾತಂಗವೆಸಗೆಗೆ ನೋಂತೆನೆನುತುಂ ಕೈವೆಚ್ಚಿ ಸುಯ್ವಂತೆ ಘ್ರೂ।
ತ್ಕೃತಿಯಿಂ ರಂಜಿಸುತಿರ್ದುದನ್ಮದಗಜಂ ರಾಜಾಲಯದ್ವಾರದೊಳ್ ॥ ೪೪

ಅಂತು ರಾಜವಾಹನವಧಾರ್ಥಂ ಚಂಡಸ್ರೋತಗಜಮುಂ ಸಿಂಗರಿಸಿ ಬಾಗಿ
ಲೊಳಿರಿಸಿ ಚಂಡವರ್ಮಂ ಪಸೆಯಂ ನಿಲ್ವುದಕೊಳಗಂ ಪುಗಲಿತ್ತಲ್

ಚಳದುರುಕುಂಡಲಂ ಫನತರತ್ರಿಸರಂ ಮಣಿಕಂಕಣಂ ಲಸ ।
ತ್ಕಳಶಕುಚಂ ಕಳಾಪನವಕಿಂಕಿಣಿ ನೂಪುರಕಾಂಚಿ ಸಿಂಗರ ॥
ಕ್ಕಳವಡೆ ರಾಜವಾಹನನೃಪಾಲನ ಕಾಲ್ಗಳೊಳಿರ್ದ ರೂಪ್ಯಶ್ಯಂ ।
ಖಳೆ ಸತಿಯಾಗಿ ಕೈವುಗಿದು ನಿಂದುದದೊಂದು ಮಹಾವಿಲಾಸದಿಂ ॥ ೪೫

ಅಂತು ಕೈವುಗಿದು ನಿಂದ ವಿಳಾಸಿನಿಯಂ ರಾಜವಾಹನಂ ನೋಡಿ

ನೀನಾರ್ಗೆ ಬಂದ ಕಾರ್ಯಮು ।
ದೇನಿಲ್ಲಿಗೆ ಮುತ್ಪದಕ್ಕೆ ಶೃಂಖಲೆಯಾಗಲ್ ॥
ಮಾನಿನಿ ಕಾರಣವೇನೆಂ ।
ದಾನರಪತಿ ಕೇಳೆ ಪೇೞಲುದ್ಯತೆಯಾದಳ್ ॥ ೪೬

ಅಂತೆಂತೆನೆ—

ಮಾಂಡವ್ಯಾತ್ರಿವಸಿಷ್ಠ ಗೌತಮಮುನಿಖ್ಯಾತಂ ಮಹಾಂಭೋಜಗ ।
ಭ್ರಾಂಡಂ ಕೋಟಿಯುಗಂಗಳಿಯ್ದಲಿದೊಡಂ ಸಿಚ್ಚಿಂತದಿಂದಿರ್ದ ನಾ ॥
ಕ್ರಾಂಡೇಯಂ ಪದೆದೊಂದು ಪುಣ್ಯನದಿಯಂ ಮೀಯಲ್ಕೆ ಬಂದಿರ್ದನು ।
ದ್ದಂಡಸ್ಥೈರ್ಯಶರೀರನೊಂದುದೆವಸಂ ಭೂಪಾಲವಿದ್ಯಾಧರಾ ॥ ೪೩

ಅಂತಾಮಹರ್ಷಿ ಸ್ನಾನಂಗೆಯ್ವಾಗಳ್

ಚಿತ್ತದ ಸಂಭ್ರಮಂ ಬೆರಸು ಖೇಚರಮಾರ್ಗದೊಳಾಂ ಬರುತ್ತಿರಲ್ ।
ಮುತ್ತಿನ ಹಾರಮೆನ್ನ ಕೊರಲಿಂ ಪಱಿದಾತನ ಚೆಲ್ವುವೆತ್ತ ನು ॥
ಸ್ನೈತ್ತಿಯ ಮೇಲೆ ಬೀಱೆ ಕಡುನೊಂದು ಶಿರಸ್ತಟಮಂ ಕರಂಗಳಿಂ ।
ದೊತ್ತಿಕೊಳುತ್ತೆ ಮೇಲೆ ಸುಳಿವೆನ್ನನೊನಲ್ದು ಕನಲ್ದು ನೋಡಿದಂ ॥

ಎಲೆ ಪಾತಕಿ ಯೌವನಮದ ।
ವಿಲಾಸದಿಂ ಪೆಱ್ಕುತೀತಕಷ್ಟಮರ್ಷಣನಿ ॥
ಚ್ಚಲಚಿತ್ತನೆನಿಪ್ಪೆನ್ನಂ ।
ತಿಳಯದೆ ಪೇಚ್ ಲೋಪಜಾತಿಯೊಳ್ ನೋಯಿಸಿದೋ ॥ ೪೪

ಎಂದು ಮತ್ತಂ

ಕೋಪಂ ಕೈಗಣ್ಮೆ ಚಿತ್ತ ವ್ಯಥೆಯಿನಪಿಲ್ದು* ಪ್ರೋ ಲೋಹವಾಗೆಂದು ತೀ
ಜೋ । ರೂಪಂ ಕೊಟ್ಟಂ ಮಹಾಶಾಪಮನದನಱಿದಾಂ ಸ್ತೋತ್ರಮುಂ
ಮಾಡೆ ಶಾಪಂ ॥ ಲೋಪಂ ತಾನಕ್ಕೆರಱಿಂಗಳೊಳನವರತಂ ರಾಜವಾಹಾಂ
ಘ್ರಿಸೇವಾ । ವ್ಯಾಪಾರಂ ನಿನ್ನೊಳಾಗಲ್ ಸುದತಿ ತೊಡಳದಲ್ತೆಂದು ಬೀ
ಱಿಕ್ಕೊಟ್ಟನೆನ್ನಂ ॥

ಅಂತು ಬೀಱಿಕ್ಕೊಡಲೊಡಂ

ಅಂತಾಮುನಿಪನ ಶಾಪದಿ ।
ನಂತಸ್ತಾಪದೆ ಕರಂ ಕೊರಂಗಿ ಮನ ॥
ಶ್ಚಿಂತಾಹತಿಯಿಂ ಕಣ್ಣನಿ ।
ಱಿಂ ತನೆ ನೀರುಂಡು ರೂಪ್ಯಶೈಲಿಲೆಯಾದೆಂ ॥ ೪೫

ಅಂತಾಂಸುರಮಂಜರಿಯೆಂಬ ಖೇಚರಸ್ತ್ರೀ ಕಾಪದಿಂ ಬೆಳ್ಳಿಯ ಸಂಕಲೆಯಾಗಿ ಮಹೇಂದ್ರಾಚಲದ ಕೆಲದೊಳ್ ಬಿಟ್ಟಿರೆ

ಖೇಚರಲೋಕದಿನೊರ್ವಂ ।
ಖೇಚರನೆಯ್ತಂದು ದರ್ಪಸಾರನ್ಯಪಾಲಂ ॥
ಗಾಚಾರವನೆಸಗಿ ಬಳಿ ।
ಕ್ಕಾಚಾತುರ್ಯೋಕ್ತಿಯಿಂದವಂಗಿಂತೆಂದಂ ॥ ೯೩

ಎನ್ನೊಡನೊರ್ವಂ ಖೇಚರ ।
ನುನ್ನತಿಯಿಂ ತೊಡರ್ದೊಡನನೊಳಾಂ ಸೋಲ್ತಂ ನೀ ॥
ನಿನ್ನೆನಗೆ ವಿಜಯಸಿದ್ಧಿಯ ।
ನುನ್ನತಮಪ್ಪಂತೆ ಮಾಡಿಪ್ಪದತಿದೊರ್ವಲದಿಂ ॥ ೯೪

ಎಂದಾವೀರಸೇನನೆಂಬ ಖೇಚರಂ ಮಿತ್ರಭಾವದಿಂ ಮಹೇಂದ್ರಾಚಲದೊಳ್ ತಪಂಗೆಯ್ಯುತ್ತಿರ್ದ ದರ್ಪಸಾರಂಗೆ ಪೇಟ್ಟೊಡಾತನಿಂತೆಂದಂ:—

ನಿನಗಾಂ ಸಹಾಯನಪ್ಪೆಂ ।
ನಿನಗೆ ಜಯಾಭ್ಯುದಯಮಪ್ಪವೊಲ್ ಮಿಗೆ ಮಾಳ್ಪೆಂ ॥
ನಿನಗೆನ್ನನುಜೆಯನಿತ್ತಪೆ ।
ನನುನಯದಿಂದಿನ್ನು ಸಂದೆಯಂ ಪೆಜತುಂಟೇ ॥ ೯೫

ಎಂದು ದರ್ಪಸಾರಂ ಖೇಚರಂಗೆ ಪೇಟ್ಟೊಡಾಖೇಚರಂ ವಿಜಯಸಿದ್ಧಿಯಿಂ ಕನ್ಯಾಸಿದ್ಧಿಯಗ್ಗಳವೆಂದು ಭಾವಿಸಿ ತನಗೆ ಕೊಟ್ಟ ಕನ್ನಿಕೆಯಂ ನೋಳ್ಪೆನೆಂದು ಬರುತ್ತಿನ್ನಂ ಕಂಡು

ಈಸಂಕಲೆಯಂ ಕೊಂಡು ।
ಯ್ದಾಸುರಮೆನಲೆನ್ನ ಪಗೆಯ ಕಾಲ್ಗಿಕ್ಕುವೆನೆಂ॥
ದಾಸುಭಟಖೇಚರೇಶ್ವರ ।
ನೋಸರಿಸದೆ ತೆಗೆದನಲ್ತ ನೃಪಕುಲತಿಲಕಾ ॥ ೯೬

ಅಂತು ಸಂಕಲೆಯಂ ಕೊಂಡು ಬಂದು ಕನ್ನಿಕೆಯಿರ್ದ ಕರುಮಾಡಮಂ ಪೊಗುವ್ದುಂ

ನೀನುಂ ನಚ್ಚಿಸವಂತಿದೇವಿಯುಮನಂಗಕ್ರೀಡೆಯಿಂದಂ ಬಲಿ ।
ಲ್ವಾನಂದಾಂಬುಧಿಯೊಳ್ ಮುಳುಂಗಿ ಸುಖಿನಿದಾ ಪ್ರಸಕ್ತರಾಗಿರ್ದುದಂ ॥
ತಾನುಂ ನೋಡಿಯೆ ಬೇಚರಂ ನಿಗಳವಂ ನಿನ್ನಂಘ್ರಿಯೊಳ್ ಸಾರ್ಚಿದಂ ॥
ಭೂನಾಥಂ ತನಗೀವೆನೆಂಬ ಸತಿಯೊಳ್ ಕೂಡಿರ್ದನೆಂಬೀಪ್ಸೆಯಿಂ॥ ೯೬

ಇದು ಮಚ್ಛಾಪಪ್ರಪಂಚಂ ನಿನಗೆ ರಿಪುಜಯಂ ರಾಜ್ಯಸಂಸಿದ್ಧಿಯಕ್ಕಿ ।
ನ್ನುದಯಂಗೆಯ್ವಮಾಪ್ಪದಂ ನೀಂ ಬೆಸಸುವುದೆನಗೆಂದಸ್ಪರಿಸ್ತ್ರೀವಿಳಾಸಾ
ಸ್ಪದದಿಂದಂ ಪೇಚೆ ಕೆಯ್ಯಂ ಮುಗಿದು ವಿನಯವಾಕ್ಪ್ರೀತಿಯಿಂ ರಾಜವಾಹಂ।
ಮುದದಿಂದಾಬೇಚರಸ್ತ್ರೀಗನುನಯಮೆಸೆಯಲ್ಯಾತನಿಂತೆಂದನಾಗಳ್॥ ೯೭

ಈನೈತ್ಯಾಂತಪನೆನ್ನ ಮ ।
ನೋವಲ್ಲಭೆಯಪ್ಪವಂತಿದೇವಿಗೆ ಪೇಳ್ದಿಂ॥
ದ್ರಾವಾಸಮನೆಯ್ದುವುದೆಂ ।
ದಾವಧುವಿಂಗರಸನುಸಿರ್ದ* ಸಮಯಾಂತರದೊಳ್ ॥ ೯೮

ಅತಿಕೋಳಾಹಳಮಪ್ಪು ।
ರ್ಚಿತಪಥನತರಮಪ್ಪ ಸಂಗಮಿಲ್ಲದೆ ದಿಕ್ಸಂ ॥
ತತಿಯೊಳ್ ಬಳಿದುದು ಬೇಗಂ ।
ಹತೋಹತಶ್ಚಂಡನರ್ಮ ಎಂಬೀವಾಕ್ಯಂ॥ ೯೯

ಆರೆಂದಱಿಯೆನದೊರ್ವಂ ।
ವೀರಂ ಪರಿಣಯನಕಳಕಳಂ ಮಿಗುವಾಗಳ್ ॥
ಕೂರಸಿಯುಂ ಕಿಱ್ತಾಗಳ್ ।
ಕೇರುರವುಂ ತಿವಿಯೆ ಚಂಡವರ್ಮಂ ಮಡಿದಂ ॥ ೧೦೦

ಅಂತು ಹತೋಹತಶ್ಚಂಡವರ್ಮ ಎಂಬ ಧ್ವನಿಯಂ ರಾಜವಾಹಂ ಕೇಳ್ದು

ಭರದಿಂ ಗರ್ಜಿಸಿ ಕೇಸರಂಗೆದಱಿ ಸಿಂಹಂ ಕೋಪದಿಂದದ್ರಿಗ ।
ಳ್ವರದಿಂದಂ ಪೊಱಮಟ್ಟುದೆಂಬ ತೆಱದಿಂ ಬಾಹಾಬಲಂ ಪೆರ್ಚಿ ಪಂ ॥
ಜರದಿಂದಂ ಪೊಱಮಟ್ಟು ಮಾಗಧಧರಿತ್ರೀಪಾಲಗಾತ್ರಂ ಮಜ ।
ದ್ವಿರದಂ ಬಾಗಿಲೊಳೊಪ್ಪಿರಲ್ ಪದೆಪಿನಿಂ ಕಂಡಂತವರ್ಕೆಯ್ದಿದಂ॥ ೧೦೧

ಅಂತು ಮುನ್ನಮೆ ತನ್ನಂ ಕೊಲಲ್ ಸಿಂಗರಿಸಿ ಬಂದ ಚಂಡಪ್ರೋತಗಜ
ಮುಂ ಕಂಡು

ಮಾನತಿಗನ ಕಾಲಂ ಪಿಡಿ ।
ದೋವದೆ ಸೆಳೆದವನನಿಕ್ಕಿಯಂಕುಸನುಂ ಕೊಂ ॥
ಡಾವಾರಣಮುಸ್ತ ಕದಿನಿ ।
ಳಿವಲ್ಲಭನಿರ್ದನತುಳಸತ್ತ್ವಸಮುಗ್ರಂ ॥ ೧೦೯

ಉದಯಗಿರಿಗಲಸಿ ರವಿ ಮೇ ।
ಣುದಿಸಿದನೋ ನೀಲಗಿರಿಯೊಳಿನೆ ಮದಮೂತಂ ॥
ಗದ ಮುಸ್ತ ಕದೊಳ್ ಕುಳ್ಳಿ ।
ರ್ದ್ದಟಂ ಮಿಗೆ ರಾಜವಾಹನಂ ಕಣ್ಗೆಸೆದಂ ॥ ೧೧೩

ಅಂತು ಗಜಸ್ಕಂಧದೊಳಿರ್ದು

ಪ್ರಜೆಯೊಳ್ ಕೂಡೆ ನಿತಾಂತಂ ।
ಗಜಬಜೆ ಮಿಗುತಿರಲದಂ ನೃಪಾಲಂ ಕಂಡಾ ॥
ಗಜದಿಂ ಪಲರಂ ಸೀಱಿಸಿ ।
ವಿಜಯೋದ್ಯೋಗಕ್ಕೆ ದಾರಿದೆಗೆದನಲಂಪಿಂ ॥ ೧೧೪

ಜಗದೊಳ್ ದುರ್ಜಲಚಂಡವರ್ನಿನದಾವಂ ಕೊಂದನಾವೀರನಿ ।
ಲ್ಲಿಗವಂ ಬಂದೊಡೆ ದೇವದಾನವರೊಳಾವಂ ಕೊಲ್ವೊಡಂ ಕಾವೆನೆಂ ॥
ಬ ಗಭೀರಧ್ವನಿಯುಂ ನೃಪಾಲತಿಲಕಂ ಸಂಗ್ರಾಮದೊಳ್ ಬೀಱಿ ಮ ।
ತ್ತ ಗಜಕ್ಕಂಕುಶಮಿಕ್ಕಿ ನೂಂಕಿ ನಡೆದಂ ಸಾನುರ್ವ್ಯದಿಕ್ಕುಂಜರಂ ॥ ೧೧೫

ಅಂತಾತನ ಗಂಭೀರಧ್ವನಿಯಂ ಕೇಳ್ದು

ಕರದೊಳ್ ಕಿಚ್ಚಿ ಕಠಾರಂ ।
ಬಿರಸೆದಟಿಂ ಬೀದಿವರಿಯುತಿರ್ಕ್ಕಿಲನಂ ಸಂ ॥
ಹರಿಸುತಾ ದನಿವಱಿಯಿಂ ।
ದರಸನಿದಿರ್ಗೊರ್ವ ವೀರನೆಯ್ದಿದನಾಗಳ್ ॥ ೧೧೬

ಬಂದಾವೀರನನಾನೆಯ ।
ಪಿಂದೇಱಿಸುತುಂ ತದಾಸ್ಥಮಂ ಕಾಣುತೆ ನ ॥
ಣ್ಪಿಂದಮುಪಹಾರನವರ್ಮನೆ ।
ಎಂದರಸಂ ಪಿಂದುಗೆಯ್ದು ತಳ್ಕಿಸಿಕೊಂಡಂ ॥ ೧೦೩

ಅಂತು ಬಂದಾತಂ ತನ್ನ ತಮ್ಮನಪ್ಪಪಹಾರವರ್ಮನಾದುದಱಿಂ ರಾಜವಾಹನಂ ತಳ್ಕಿಸಿಕೊಳಲೊಡಂ

ಈತಂ ಮುದಗ್ರಜಂ ಧಾ ।
ತ್ರೀತಳಪತಿ ರಾಜವಾಹನಂ ತಪ್ಪದೆನು ॥
ತ್ತೋತೆಱಿಗಿ ಹರ್ಷಪುಳಕ ।
ವ್ರಾತಮನಪಹಾರವರ್ಮನಾಂತೆಸೆದಿರ್ದಂ ॥ ೧೦೪

ಅಂತೊರ್ವರೊರ್ವರನಱಿದು ಸಂತೋಷಮುಂ ತಳೆದಾನೆಯುಂ ಮುಂದಣ್ಗೆನೂಂಕಿ

ಪರಿಪರಿದು ಚಂಡವರ್ಮನ ।
ಪರಿವಾರಮನೆಯ್ದೆ ಮತ್ತಗಜದಿಂ ವಿಗೆ ಸಂ ॥
ಹರಿಸಿ ವಿಜಯಾಂಗನಾನಿಜ ।
ವರನಾದಂ ರಾಜವಾಹನಕ್ಷಿತಿನಾಥಂ ॥ ೧೦೫

ಕರಿಕರಘಾತದಿಂ ಕೆಲಬರಂ ಕೆಲರಂ ಕರಖಡ್ಗಘಾತದಿಂ ।
ದೊಱಿಸಿ ಬಿಸುಟ್ಟು ಭೀತಶರಣಾಗತರಂ ತವೆ ಕಾದು ತತ್ಪರೇ ।
ಶ್ವರರಿಖೇದಮಂ ಕಳೆದು ನಾಲ್ದೆಸೆಯೊಳ್ ಪರೆದಿರ್ದ ವಸ್ತುವಂ ।
ತರಿಸಿ ಭುಜಪ್ರತಾಪದೊದವಿಂದೆಸೆವಂ ನೃಪರಾಜವಾಹನಂ । ೧೦೬

ಅಂತು ಸಿಂಹನವರ್ಮನಂ ಬಿಡಿಸಿ ಪರೆದಿರ್ದ ವಸ್ತುವಂ ನೆರಸುವ ಸಮುಯದೊಳ್

ಕದಪನವುರ್ವ ಕುಂಡಲಮುಮುನ್ಮಣಿಕಂಕಣಮೊಂತ ಕೆಯ್ಯ ಬೆ ।
ತ್ತದ ಸೆಳೆ ತೊಟ್ಟ ಪೊಚ್ಚ ಪೊಸಕುಪ್ಪಸಮೊಪ್ಪಮನಾನೆ ಮುಂದಿಯುಂ ॥
ಕೆದಱಿಸುತಂದು ಬಂದು ಜನಪಂಗೊಲವಿಂ ಪೊಡೆವಟ್ಟು ನಿಂದನಂ ।
ಬುದರನದಿಂದವೊರ್ವನುರುವೇತ್ರಧರಂ ಜನತಾವನೋಹರಂ ॥ ೧೦೭

ಅಂತು ಬಂದಾತನಂ ಕಂಡೀತನಾರೆಂದಪಹಾರವರ್ಮನಂ ರಾಜವಾಹನಂ ಕೇಳ್ವುದುಂ

ಜೀವಗೆ ನ್ನಿಂದಧಿಕಂ ।
ಕೋವಿದನತಿನೀತಿನಂತನಾಪ್ತ ಸಹಾಯಂ ॥
ಭೂವಿನುತಿವೆತ್ತ ವೆಸರಿಂ ।
ಭಾವಿಸೆ ಧನಮಿತ್ರನೆನಗೆ ನಚ್ಚಿನ ಮಿತ್ರಂ ॥ ೧೦೮

ಎಂಬೊಡಾತನಂ ಮನ್ನಿಸಲಾಧನಮಿತ್ರನಿಂತೆಂದಂ:—

ಸಕಳೋರ್ವಿನಾಥರೀಚಂಪೆಯ ನೃಪತಿಗೆ ಸಾಹಾಯ್ಯಮಂ ಮಾಡಲೇಬ್ಪಿಂ।
ಮುಕರಂ ಮಾರ್ಗಶ್ರಮಂ ಪೆರ್ಚಿದೊಡನುಪಮಗಂಗಾನದೀತೀರದೊಳ್ ಸೈ॥
ನಿಕಯುಕ್ತರ್ ಜೀವ ಬಿಟ್ಟರ್ದಪರನುನಯದಿಂ ಪೋಗಿ ಸಂತೋಷದಿಂ ಕಾ।
ಣಿಕೆಯಂ ಕೈಕೊಳ್ವುದೆಂದಲ್ಕಿಱು ಮಿಗೆ ನಲವಿಂ ಬಿನ್ನಪಂಗೆಯ್ದನಾಗಳ್ ॥

ಅಂತು ಬಿನ್ನಪಂಗೆಯ್ಯಲಾಗಳರಮನೆಗೆ ಬಂದು

ಆಪ್ರೌಢಾನೊಳಾಪಸೆಯೊಳ ।
ಮಾಪಂದರೊಳಾಕುಮಾರಿಯಂ ನಲವಿಂ ತ ॥
ದ್ಭೂಪನಪಹಾರವರ್ಮಂ ।
ಗೋಪಳಿನಲ್ ಪದೆದು ಮುದುವೆಱುಂ ವಿರಚಿಸಿದಂ ॥ ೧೦೪

ಏಗೆಯ್ದೊಡಮೆಲ್ಲಿರ್ದೊಡ ।
ಮೀಗಳ್ ಸಾಹಸಮನೆಸಗಿದೊಡಮಧಿಕಮೆನಿ ॥
ಪ್ಪಾಗುಂಚೇಗಿಯುಮೆಂಬಿನ್ ।
ಭೋಗಾದೃಷ್ಟಾನುಸಾರಿಯೆಂಬುದು ಪ್ರಸಿಯೇ ॥ ೧೦೫

ಅಂತುನ್ನತಿಕೆಯನಂಬಾಲಿಕೆಯಿನಪಹಾರವರ್ಮಂಗೆ ಸಿಂಹವರ್ಮನಿಂ ಧಾರೆಯನೆಱೆಯಿಸಿ ಸಿಂಹವರ್ಮನಂ ಪ್ರತಿಷ್ಠಿಸಿ

ವಿಲಸನ್ಮುಕ್ತ್ಯವತಾರಮಂ ಸಕಲಪ್ರಜ್ಞಾಧಾರಮಂ ಪಾಪಸಂ ।
ಕುಲಸಂಹಾರಮನುರ್ವಿಚಾರವನುನಿಳಾವಿಸ್ತಾರಮಂ ನಿತ್ಯನಿ ॥
ರ್ಮಲನಾಕಾರಮನುದ್ಯಸಾರಮನದೃಷ್ಟದ್ವಾರಮಂ ಜ್ಞಾನಕ ।
ಲ್ಪಲತಾಗಾರನನೆಯ್ದಿದಂ ನೃಪವರಂ ಕೋಭಾನದೀತೀರಮಂ ॥ ೧೦೬

ಲಳಿತತರಂಗಮೊಳ್ಳಿಱಿ ಲಸತ್ಫುಳಿನಸ್ಥಳಿ ಸತ್ಕಟೀತಟಂ ।
ಸುಳಿ ಸುಳಿನಾಭಿ ಕೋಕಯುಗಳಿಂ ಕುಚಮಾಡುವ ವೀಂಗಳಕ್ಷಿಯು ॥
ಜ್ಜ್ವಳಿಮುಮುವಾರಿ ಯೌವನರಸಂ ದಳೆನಿಪ್ಪ ವಿಯತ್ತರಂಗಿಣೀ ।
ಲಳನೆಯ ನೀಳ್ದ ತೋಳಿನಿಪ ಕೂಲಮನೆಯ್ದಿದನಾನೃಪಾಲಕಂ ॥ ೧೧೬

ಮದಗಜಮಂ ವಿಲಾಸಮೆನಲೀಱಿ ಸಮಸ್ತನೃಪಾಲಸೈನ್ಯಮಂ ।
ಪದೆಪಿನೊಳೊಲ್ದು ಕಾಣಿಸಿಕುಡಲ್ ನಚೆತಂದನತೀವಮಂಗಳಾ ॥
ಭ್ಯುದಯಸಮನ್ವಿತಂ ನೃಪಶಿರೋಮಣಿ ಕೂರ್ತಪಹಾರವರ್ಮನ ।
ಮ್ಮದಸಹಿತಂ ನದೀಪರಿಸರಕ್ಕಭಿಧೇಯನಭಂಗವಿಕ್ರಮಂ ॥ ೧೧೯

॥ ಗದ್ಯಂ ॥

ಇದು ನಿಖಿಳಬುಧಜನಪುನೋವನಜವನವಿಕಾಸಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚೌಂಡರಾಜ ವಿರಚಿತವಪ್ಪ

ಅಭಿನವ ದಶಕುಮಾರಚರಿತೆಯೊಳ್

ರಾಜವಾಹನಕಥಾವೃತ್ತಾಂತಂ

ಸಪ್ತಮಾಶ್ವಾಸಂ

ಪ್ರಥಮ ಸಂಪುಟಂ ಸಂಪೂರ್ಣಂ.

ದ್ವಿತೀಯಾಶ್ವಾಸಂ.

॥ ಅಷ್ಟಮೂರ್ತ್ಯಾಶ್ವಾಸಂ ॥

—ಉಪಹಾರನವರ್ಧನ ಕಥೆ —

ಶ್ರೀಮದ್ಗಂಗಾತೀರ ।
ಕ್ಷ್ಮಾಮಹಿನುಂ ಬಂದದೊಂದು ಪುಳಿನಸ್ಥಳದೊಳ್ ॥
ಪ್ರೇಮದಿನಿರ್ದಂ ಗುಣನಿ ।
ಸ್ಸೀಮಂ ನಲವಿಂದಭಂಗವಿಟ್ಟಲಭೃತ್ಯಂ ॥ ೧

ಅಂತು ಬಂದಸಹಾರವರ್ಮನಿಂ ಮನಃಪ್ರಸಾದನೆಯನೆಲಂ ಕರಿಸಿರ್ದಿನಂ,

ಅಂದಣಮುಂ ಪುಬ್ಬೇಭತತಿಯುಂ ತುರಗಂಗಳನೇಕ ಭೂಸರಾ ।
ನಂದದೆ ಛತ್ರಚಾಮರದ ತಿಂತಿಣಿಯೊಳ್ ನಡೆತಂದು ಚಿತ್ತದು ॥
ಬೊಂದಿರೆ ರಾಜವಾಹನನೃಪಾಲಕನಂ ಮಿಗೆ ಕಾಣಲತ್ಯಪೂ ।
ರ್ವಂ ದಲೆನಲ್ಕವರ್ ನಿಜಸಹೋದರರಾದವಿವಲ್ತೆ ವಿಸ್ಮಯಂ ॥ ೨

ಅಂತು ಧನಮಿತ್ರಂ ತಂದು ಕಾಣಿಸಿದರಸುಗಳಿಲ್ಲರಸಂಗೆ ತಮ್ಮುಂದಿರಾದರ್; ಅದೆಂತೆನೆ:—

ತನಗೆ ಕೃತಪ್ರಣ್ಯಮಿಲ್ಲವ ।
ದಿನವೀನಂ ಮಾಡಲದು ನಿರರ್ಥಕಮಕ್ಕುಂ ॥
ತನಗಧಿಕಪ್ರಣ್ಯವೊದವುವ ।
ದಿನವಿರ್ದೆಡೆಗೆಯ್ದುಗುಂ ನಿಜಾಭೀಷ್ಟಫಲಂ ॥ ೩

ಅಂತವರೆಲ್ಲರುಂ ನೃಪನನೀಕ್ಷಿಸಿಯೆಮ್ಮವೋಲಾರ್ ಕೃತಾರ್ಥರೆ ।
ಮ್ಮಂತತಿಭಾಗ್ಯಮುಂ ಪಡೆದರಾರೆನುತುಂ ನೃಪನಂಘ್ರಿಪದ್ಮಮುಂ ॥
ತಂತಮಗಪ್ಪಿ ಕೆಮ್ಮುಗಿದು ದೇವರೆ ನಿಮ್ಮಯ ಪಾದ ಬಂದ ವೃ ।
ತ್ತಾಂತಮನೆಮ್ಮೊಳೊಲ್ದು ಬೆಸಸಲ್ ದಯೆಗೆಯ್ ನೃಪರೂಪಮನ್ಯಥಾ ೪

ಎಂದವರ್ ಬಿನ್ನಪಂಗೆಯ್ಯಲರಸಂ ತನ್ನವೃತ್ತಾಂತಮುಂ ಪ್ರಶ್ನೋದ್ಭವ

ಸೋಮದತ್ತರ ಪ್ರಸಂಗಮುಂ ಪೇಳ್ದು, ಅನಂತರಮುಪಪ್ರಾರವರ್ಮನ ಮೊಗಮುಂ ನೋಡಿ ನೀನೆಸಗಿದ ಬಿಸಮಂದಮುಂ ಪೇಚೆನಲಾತಂ ಕೆಯ್ಗಳಂ ಮುಗಿದಿಂತೆಂದಂ:—

ಎಲ್ಲರ ತೆಱದಿಂ ನಿಜಪದ ।
ಪಲ್ಲವಮುಂ ಭಕ್ತಿಪೂರ್ವಮಜಿಸುವ ಒಗೆಯಿಂ ॥
ದಲ್ಲಲ್ಲಿ ತೊಱಲುತುಂ ಚಿ ।
ತ್ತೊಲ್ಲಾಸದೊಳಂಗದೇಶಮುಂ ಮಿಗೆ ಪ್ರಾಕ್ಕಂ ॥ ೫

ಏಪೊಗ*ವ್ವಂಗರಾಜವಿಷಯಾಂತರದೊಳ್ ಬುಧಕಾವ್ಯಮಂಗಳ ।
ಶ್ರೀಪದದಿಂ ಲಸತ್ತ್ರಿದಿನಮುಂ ಪನೆಗೊಗ್ಗಿನನಂತಭೋಗಶೋ ॥
ಭಾಪರಿಪೂರ್ಣದಿಂ ಭುಜಗಮಂದಿರಮುಂ ಮಿಗೆ ಪ್ರೋಲ್ತು ಚೆಲ್ವ ಚಂ ।
ಪಾಪಾರವೊಪ್ಪಗುಂ ಸಕಳಸಂಪದಸಾಧ್ಯವಿಳಾಸದೇಳ್ಗೆಯಿಂ ॥ ೬

ಅಂತಾಪಟ್ಟಣದ ಪೊಱಪೊಱಲೊಳ್ ತ್ರಿಕಾಲಜ್ಞಾನಿಯಪ್ಪ ಮರೀಚಿ ಮಹರ್ಷಿಯಿರ್ಪನೆಂದು ಕೇಳ್ದಾನಿಂ ದೇವರ ವೃತ್ತಾಂತಮಂ ಕೇಳ್ವೆನೆಂದು ಪೋಗಿ ನೋಱ್ಪಿನಮಲ್ಲಿ,

ಪಸುರ್ದಳಿರ್ದೊಂಗಲಿಂ ಪುದಿದ ಬಲ್ಮನೆಯಿಂ ಮುಗುಳಂದಲರ್ಗಳಂ ।
ಪಸುಮಿರ್ಡಿಯಿಂ ಜೆಳತೊಲೆವ ಕಾಯ್ಗಳನೊಪ್ಪುವ ಪಣ್ಗಳಂ ಕರಂ ॥
ಪಸರಿಸಿ ಗುಜ್ಜಗೊಂಡು ಮಧುಪಾವಳಿಸಂಗತಮಾಗಿಯುಂ ಹರಂ ।
ಗೆಸೆವುದೊಂದು ಬಿಲ್ವಕುಜಮೆನ್ನಿದಿರೊಳ್ ವೆಱದಿರ್ದುವರ್ವಿಪಾ॥ ೭

ಅದಱ ಮೊದಲೊಳ್ ಮುನೀಂದ್ರ ।
ಹೃದಯಂ ನಿರ್ವಿಣ್ಣಚಿತ್ತನಭಿನವಚಿಂತಾ ॥
ಸದನಂ ತಾಪಸಜನವೇ ।
ಷ್ಪದೊಳಿರ್ದನದೊರ್ವನಾತನಾರೆಂದಱಿಯೆಂ ॥ ೮

ಇಲ್ಲಿ ಮರೀಚಿಯೆಂಬ ಋಷಿಯಿರ್ಪನಲ್ತೆ ಮಹಾನುಭಾವನೆಂ ।
ದೆಲ್ಲರುಸಿರ್ದರಾತನ ಪದಾಬ್ಜಮನೀಕ್ಷಿಸಲೆಂದು ಬಂದೆನಿಂ ॥
ದೆಲ್ಲಿಗೆ ಪೋದನೆಂದು ಪದೆದಾಂ ಬೆಸಗೊಳ್ವಿನಮಾತನಲ್ಲಿಱಿಂ ।
ಮೆಲ್ಲನೆ ಕಣ್ಗಳಂ ತೆಱೆದು ನೋಡಿದನೆನ್ನ ನಿಳಾಧಿನಾಯಕಾ ॥ ೯

ಬಸೆದೆನ್ನ ಮೊಗವನಂದೀ ।
ಹೃಸಿ ಚಿತ್ತದೊಳೊಗೆದ ಚಿಂತೆ ತನ್ನಾನನದೊಳ್ ॥
ಪಸರಿಸುವಂತಿರೆ ಭೋಂಕನೆ ।
ಬಿಸುಸುಯ್ದಿಂತೆಂದನಾತನೆನ್ನೊಡನಾಗಳ್ ॥ ೧೦

ಗುರುಕುಚಕೆ ಕಾಮುಮುಂಜರಿಯೆನಿಪ್ಪವಳಿಲ್ಲಿಗೆ ಬಂದು ತನ್ಮನೀ ।
ಶ್ವರಚರಣಾಂಬುಜಕ್ಕೆಱಗಿ ದೇವರೆ ದೀಕ್ಷೆಯನೀವ್ರದೆಂದು ಸ ।
ತ್ಕರಕಮಳಂಗಳಂ ಮುಗಿದು ಬಿನ್ನವಿಸುತ್ತಿರಲೆಯ್ದಿದತ್ತು ತ ।
ತ್ತರುಣಿಯ ಪಿಂದುಗೊಂಡಖಿಳಬಂಧುಜನಂ ಪಿತೃಮಾತೃಸೋದರರ್ ॥ ೧೧

ಅದಲ್ಲದೆಯುಂ,

ನರೆದಲೆ ಬೇರ್ಬಱಿದ್ದ ಪಜಿವಲ್ ಕಲಿಗಳ್ ತುಱುಗಿರ್ದ ಮೆಯ್ಯ್ಗ ।
ಲ್ದುರವೆಮೆಯಿಲ್ಲದಕ್ಷಿ ಬಸಿಱೊಳ್ ಮಿಗೆ ನೇಲ್ವ ಕುಚದ್ವಯಂ ನುಡೋ ।
ದರಮೆಸೆಯಲ್ಕೆ ಕೋಕಿಸುತೆ ಪಿಂದನೆ ಬಂದಳೊಱಿಲ್ದ ಕಾಮುಮಂ ।
ಜರಿಯಲಿಲಿಂ ಬಳಾರಿಯಪ್ಪೊಲೊಪ್ಪುವ ಮಾಧವಸೇನೆಯೆಂಬವಳ್ ॥ ೧೨

ಅಂತವಳ ತಾಯಪ್ಪ ಮಾಧವಸೇನೆ ಬರಲೊಡಂ ಕಾಮುಮುಂಜರಿ ಕೆಯ್ಯು
ಳಂ ಮುಗಿದಿಂತೆಂದಳ್:—

ಎಲೆ ಮುನಿಯೈಹಿಕದೀಕ್ಷೋ ।
ಟಲೆಯೆನಗಿಂ ಸಾಲ್ಗು ಪೆಱಿದಾವುಪಿಕ್ಷಕಱೊಳ್ ॥
ನೆಲೆಗೊಳಿಸಲ್ವೇಱ್ಕೆನ್ನಂ ।
ಲಲಿತಭವತ್ಪಾದಪದ್ಮಮಂ ಪ್ರಾರ್ಥಿಸುವೆಂ ॥ ೧೩

ಎಂದು ಮುನಿನಾಥಂಗೆ ಕಾಮುಮುಂಜರಿ ಬಿನ್ನಪಂಗೆಯ್ಯಲದಂ ಕೇಳ್ದು
ಮಾಧವಸೇನೆಯಿಂತೆಂದಳ್:—

ಬಿನ್ನಪಮಂ ಚಿತ್ತೈಸಿವ ।
ಳೆನ್ನಯ ದೋಷಂಗಳಂ ಕರಂ ಪ್ರಕಟಿಸಲಿಂ ॥
ದೆನ್ನೊಡನೆ ಮುನಿದು ಬಂದಳ್ ।
ನಿನ್ನಾಣೆ ಮುನೀಂದ್ರ ತನಗೆ ತಪಕೆದು ದಿಗ್ಭವೆಂ ॥ ೧೪

ಎಂದು ಮತ್ತಂ

ನೋಡಿರೆ ಪುಟ್ಟಿದೈದು ಬರಿಸಂಬರವಿಾಕಡುಧೂರ್ತಿಯಂಗವಂ ।
ಗಾಡಿ ಮಿಗಲ್ ಪಿತಂಗೆ ವೊಡಲಾಗಿಯುವೇರ್ಮೆಯಿ ತೋಱಿದಿಚ್ಚಿ ಕೈ ॥
ಗೂಡುವ ಲಜ್ಜೆ ಪಜ್ಜಳಿಸುವನ್ನೆಗವೊಪ್ಪಿರೆ ಸಾಕಿದೆನ್ನೊಳೀ ।
ಜೋಡೆ ಕನಲ್ದು ಬಂದು ತಗವಂ ತಳೆವಳ್ ಗಡ ಕೇಳತಕ್ಕುಮೇ ॥ ೧೫

ಅವಯವಕೋಭೆಯಂ ಸಸಿನೆಗೆಯ್ವ ಮಿತಾಶನಮಿಕ್ಕಿ ಧಾತುದೋ ।
ಷನನೊಡವೆರ್ಚದಂತೆಸಗುವಾಪ್ತ ಜನಂಗಳಿನೆಮ್ಮ ವಿದ್ಯೆಯಂ ॥
ನವವಿಧವಾಗೆ ಕಲ್ಪಿಸುವ ಜೋಯಿಸರಿಂ ನಿಜಲಕ್ಷಣಂಗಳಂ ।
ಭುವನದೊಳಿರ್ಪ್ಪ ಸಾಟಿಸುವ ಬಲ್ಬಗೆ ಸೂಳೆಯರಬ್ಬೆಗೊಪ್ಪಗುಂ ॥ ೧೬

ಈಂತುಮಹೋತ್ಸವಂ ರತಿಯ ನೋಂಪಿ ವಸಂತನೃಪಾಲ ಪೂಜೆಯೊ ।
ಡ್ಡಂತಿಯಪೂರ್ವದಾನತಿಥಿ ಮಾಲಿಗೆವ್ರಂಟಿಗೆ (?) ಜನ್ಮತಾರೆಯಿಂ ॥
ದಿಂತತಿಕೀರ್ತಿಯುಂ ಪ್ರತಿದಿನಂ ತನಗಾಂ ಮಿಗೆ ಮಾಡಿದಳ್ಗೆ ದುಃ ।
ಖಂ ತಲೆದೋರ್ಪವೋಲ್ ಮುನಿದು ಬಂಪಳಿಲ್ಲಿಗೆ ದೀಕ್ಷೆಗೋಸುಗಂ॥ ೧೭

ದೇವಿಯ ಜಾತ್ರೆಯೆಂದು ಮಿಗೆ ಸಾಟಿಸಿ ಸಂಭ್ರಮದಿಂದನಂತವೇ ।
ಶ್ಯಾವಧುನಾಗರೀಕತತಿ ಸೈವೆಱಿಗಿಂ ನಡೆನೋಲ್ಪಿನಂ ತುರಂ ॥
ಗಾವಳಿಮಧ್ಯದೊಳ್ ವಿಸುಸಿಯಂಗಳ ಮೇಱಿಸಿ ದಟ್ಟಿಮುಚ್ಚಿ ಚೋ ।
ಭಾವಹಮಂ ನೆಗಲ್ಚ್ವಿವುದು ಸೂಳೆಯ ರಬ್ಬೆಗೆ ತಕ್ಕುನಲ್ಲವೇ ॥ ೧೮

ಅದಲ್ಲದೆಯುಂ

ನಯದಿಂದರ್ಥಮನೀವವಂಗೆ ನಲವಿಂ ಕೂರ್ತಿರ್ಪುದುದ್ದಂಡಲೋ ।
ಭಿಯೊಳರ್ಥಂ ದೊರೆಕೊಳ್ವದಿರ್ದೊಡವನುಂ ಕೊಟ್ಟಂತೆ ಸಂತೋಷಕು॥
ದ್ಧಿಯನುಂಟಾಗಿಸ್ವದೀಯದಾರ್ಪಿನಡಟಂ ತೋರ್ಪಾರ್ತನಂ ಸೂಳೆಗೇ ।
ರಿಯೊಳಿಲ್ಲರ್ ನಡೆನೋಲ್ಪಿನಂ ತಗೆವ್ರದಾಂ ಮಾಡಲ್ಕೆ ತಕ್ಕುಜ್ಜುಗಂ ॥ ೧೯

ಕೂಡುವನಿತರ್ಥಮುಳ್ಳ ವಿಟನೊಳ್ ಮಿಗೆ ಕೂರ್ಪುದು ವಿತ್ತಹೀನನಂ ।
ಬಿಡುವುದು ಮಾತನಾಡೆ ಕಡುಮೆಲ್ಲಿದಳಪ್ಪದು ಚಿತ್ತವೃತ್ತಿಯಂ ॥
ಮೃಡನೊಳಗಾಗೆ ಕಾಣದವೊಲಿರ್ದಿಹಿಯೊಳ್ ಗಣಿಕಾಧಿಪತ್ಯಮಂ ।
ಪಡೆವುದು ಸೂಳೆಯರ್ಗುಚಿತಮೆಂಪುಱೆ ಪೇೞ್ದೊಡಿದೊಂದು ದೋಷಮೇ॥

ಕಡೆಗಣ್ಣೊಳ್ ಮಾತಾಡುವ್ರು ।
ಬೆಡೆನುಡಿಯೊಳ್ ಮುಚ್ಚುಬೋರ್ಪುದನ್ಯಗೊರ್ಲವಂ ॥
ಪಡೆದವೊಲಿರ್ಪುದು ವಿಟಗರ್ಗೆ ।
ಳ್ಕೊಡವೆಯನೀಱೊಳ್ಳುದಿದುವೆ ವೇಶ್ಯಾಧರ್ಮಂ ॥ ೨೧

ನಗೆ ಬಗೆಯೊಲ್ಮೆ ನಲ್ಮೆ ಪ್ರೊಸಜಾಣ್ಮುಡಿ ನಾಣ್ಮುಡಿ ಪುಬ್ರುಜಬ್ರುಗೆ ಕೆವ್ಮುಗೆ ಮಿಗೆ ಕೆಲ್ಲೆನೋಟವೊಡಗೂಟನುಗಲ್ಚದ ಕೂಮೆರ್ಪ ಪ್ರೋವೆರ್ಪ ಪ್ರೌರ್ದುಗೆಯೊಗೆವಿಚ್ಚೆ ಮಚ್ಚು ವಿಟರಂ ಕೊಱಚಾಡುವ ಪಾಡುವ ಗಾಡಿಯೆಂ ಬಗಣಿತಚೇಷ್ಟೆಗಳ್ ವೆಱದಿರಲ್ ತಱುಸಲ್ವುದು ಸೂಳೆವಿಜ್ಜೆಯೊಳ್ ॥ ೨೨

ಮುಳಿಸಂ ಮಾಣ್ ಮಾಣ್ ನೂರ್ಗಂಗನೆ ನಡೆ ನಸೆಯಿಂ ಪೇಳ್ದಿದಂ ಮಾಡು ಮಾಡೆಂ । ಚಲವೆನ್ನೊಳ್ ಬೇಡ ಬೇಲ್ಕೆನ್ನಯ ನುಡಿಯಿನಿತಂ ಮಿಱಿದಿರ್ ಮಿಱುವೆಂ ವು ॥ ತ್ಕುಲಮುಂ ಕೀರ್ತ್ಯಾಡದಿರ್ ಮಾಡುವೆನಧಿಕತಪಂಗೆಯ್ಯದಿರ್ ಗೆಯ್ವೆನೆಂದ । ಗ್ಗಳಮಾಗಳ್ ತನ್ನ ತಾಯಂ ತೊಱೆದು ಜಱೆದು ವೈರಾಗ್ಯಮಂ ತಾಳ್ದ ನಿಂದಳ್ ॥ ೨೩

ಅಂತೆಂತಾನುಂ ತಿಳಿಪಿದೊಡಂ ತಿಳಿಯದಂತಿರ್ದ ಕಾಮನುಮಂಜರಿಯುಂ ಕಂಡು ಕೆಯ್ಗೊಳಂ ಮುಗಿದು ಮತ್ತಿಂತೆಂದಳ್:—

ಬಿಸಸಲ್ವೀಱಿವ್ವುದು ಕಾಮವುಮಂಜರಿಗೆಲೇ ಯೋಗೀಂದ್ರ ವೈರಾಗ್ಯಮಂ।
ಬಿಸುಡೆಂದಲ್ಲದೊಡಿಲ್ಲಿ ಬಂದಿನಿಬರೀಗಳ್ ತೀರ್ಗುಮಿದ್ದಂ ಪದಾ ॥
ಬ್ಜಸಮಿಾಪಂ ದೊರಕಿತ್ತು ಪುಣ್ಯಮೆನುತುಂ ಮೆಯ್ಯೊಕ್ಕಿದಳ್ ತನ್ನಬಂ ।
ಧುಸಹಸ್ರಂ ಬೆರಸಂತನಳ್ ಮುನಿನರಂಗೇಱೇಱಿಮೆಂಬನ್ನೆಗಂ ॥ ೨೪

ಅಂತನೇಕಬಂಧುಜನಂ ಬೆರಸು ದಂಡಪ್ರಣತೆಯಾದ ಮಾಧವಸೇನೆಯು ದೀನಭಾವಮುಂ ಮುನೀಶ್ವರಂ ಕಂಡು ಕಾಮನುಮಂಜರಿಗಿಂತೆಂದಂ:—

ಎಲೆ ಮರುಳಿಯುಗ್ರತಪದಿಂ ।
ಫಲವೇಂ ನಿಜಬಂಧುವರ್ಗಮುಂ ನಲವಿಂದಂ ॥
ಸಲಹುವ್ರದೆ ಕೋಟಿತಪದಿಂ ।
ಬಿಳಿಯೊಳ್ ಮಿಗಿಲಲ್ತೆ ಸಕಲಶಾಸ್ತ್ರ ಸಿದ್ಧವುದಿಂ ॥ ೨೫

ಎಂಬುದುಂ ಕಾಮುಮನುಂಜರಿ |

ಕಳಿಪಿದ ಸುಖಂಗಳಂ ಪರೆದ ಜವ್ವನಮುಂ ದೊರೆಕೊಳ್ಳದರ್ಥಮುಂ |
ಚಳಿಸಿದ ರಾಜ್ಯಮುಂ ಸವೆದ ಸಂಪದಮುಂ ಮಗುಟ್ಟಿಸಮಾಡಿಯುಂ ||
ಮ್ಮಲಿಸುವರೇಕೆ ದುರ್ಮತಿಗಳಾಗದುದಾಗದಪ್ಪುದಪ್ಪಂ |
ದಳವಡೆ ಚಿತ್ತಮುಂ ಪಿಡಿಮು ನಿಲ್ಲದೆ ತಲ್ಲ ದಿಂ ಧರಿತ್ರಿಯೊಳ್ || ೬೬

ಎಂದು ತನ್ನಾಸೆಯ ದೆಸೆಯಂ ಮಾಧವಸೇನೆಗೆ ಬಿಡಿಸಿ ಮತ್ತಂ ಮುನಿಗಿಂತೆಂದಳ್:—

ಅವರಿನರ ಮಾತು ನಿನ್ನಯ |
ಕಿವಿವೊಕ್ಕೆನ್ನಂ ಮಗುಟ್ಟಿ ಕಳಿಪುವೊಡಾಂ ಜೀ ||
ವವನಿಲ್ಲಿ ತೊಟ್ಟೆವೆನೆಂದಾ |
ಕೆ ವಧಾರ್ಥಂ ಮುನಿಯ ಕೆಯ್ಗಡಾಯುಧಮಿತ್ತಳ್ || ೬೭

ಅಂತು ತನ್ನಂ ಪರಿಚ್ಛೇದಿಸಿದ ಕಾಮುಮಂಜರಿಯ ಮಾತಂ ಮುನಿನಾಥಂ ಕೇಳ್ದು ಮಾಧವಸೇನೆಗಿಂತೆಂದಂ:—

ಈವನವಾಸಾಯಾಸದ |
ಬೀವಸದಿಂ ತಾನೆ ಬರ್ಪಳಯ್ದಾಳುದಿನ ||
ಕ್ಕಾವೆಡೆಗೆ ಪೋವಪಳ್ ಸಲೆ |
ನೀವೆಲ್ಲರ್ ಪೋಗಿ ನಿಜನಿವಾಸಕ್ಕೀಗಳ್ || ೬೮

ಎಂಬುದುಂ ಮಾಧವಸೇನೆ ತನ್ನ ಮಗಳ ಮೊಗಮುಂ ನೋಡಿ,

ಮುಳಯಜಚರ್ಚೆಯಂ ತಳೆದ ದೀಹದೊಳೆಂತು ವಿಭೂತಿಯಾಂಪೆಯು |
ಜ್ವ್ವಳಮಣಿಕಾಂಬಿಯಿಂಬಸೆವ ಮಧ್ಯದೊಳೆಂತುಗೆ ನಾಳ ಸೀರೆಯಂ ||
ತಳಿವೆ ಸುಗಂಧಕುಂತಳದೊಳೊಪ್ಪುವ ಮೌಳಿಯೊಳೆಂತು ತಾಳ್ವ್ ಕೋ |
ಮುಳಿ ಜಡೆಯಂ ರಸಾಯನಮನೊಲ್ಲದೆ ಪೆಲ್ವಿಯದೆಂತು ಕಂದಮುಂ || ೬೯

ಹಾಸುಗಳಲ್ಲದೊಡೆಂತುಗೆ |
ಪಾಸಜೆಯೊಳ್ ಪಡುವೆ ದಂಬುದೊಜವೆಯದೆಂತ ||
ಭ್ಯಾಸಿಸುವೆಯಜೆಲಿಯಂ (?) ಮು |
ತ್ತೋಸರಿಸಲ್ಕೆಂತು ತಾಳ್ವ್ ರುದ್ರಾಕ್ಷಿಗಳಂ || ೭೦

ಕೆಳದಿಯರನುಜ್ಞೆದು ಪೇಟಿಂ ।
ಬರ್ಪಳಿಂತು ಕಾನನದೊಳಿರ್ಪ ಋಷಿಸರಿಚಯಕ್ಕೆ ॥
ಬಳವೆಂತಪ್ಪದು ನಿನಗು ।
ಜ್ವಾಳಾಕ್ಷಿ ಬಿಡು ಮುಳಿಸನೂಗೆರ್ ನಮೆ ಪೊಡೆಮಡುವೆಂ ॥ ೫೧

ಎಂದೊಡವಳಿಂತುಂ ಬಾರದಿರ್ದುದಂ ಕಂಡು ಶೋಕಾನಳದಂದಹ್ಯಮಾನೆಯಾಗಿ ಬಂಧುಜನಂಬೆರಸು ಮಾಧವಸೇನೆ ನಿಜನಿವಾಸಕ್ಕೆ ಪೋದಳ್. ಇತ್ತಲಾದಿನಂ ಮೊದಲಾಗಿ ಕಾಮುಮುಂ ರಿ

ಪೂಗಿಡುಗಳ್ಗೆ ನೀರೆಱೆವ ಪ್ರಷ್ಪವನೊಪ್ಪಿರೆ ತರ್ಪ ತತ್ತ್ವವಿ ।
ದ್ಯಾಗಮುಮುಂ ಮನಂಬಡೆದು ಕೇಳ್ವ ಯತೀಂದ್ರಪದಾಬ್ಜಸೇವೆಯುಂ ॥
ಬೇಗದೆ ಮಾಪ್ಪಿ ವಲ್ಕವಸನಂಗಳನುಂ ಧ್ರುವ ಸೋಪಚಾರದಿಂ ।
ದಾಗಣಿಕಾಪುರಂಧ್ರಿ ಕೆಲವುಂ ದಿನಮಿರ್ದಳತೀವಭಕ್ತಿಯಿಂ ॥ ೫೨

ಕಮಲದಳಾಕ್ಷಿ ತನ್ಮುನಿವರೇಣ್ಯನ ಪಾವನದೇವತಾರ್ಚನಾ ।
ಸಮಯದೊಳಂಗಹಾರಕರಣಾಯತಪಸ್ತಪರೋಜದೃಷ್ಟಿನಿ ॥
ಭ್ರಮುವನೊಡರ್ಚಿ ಲಾಸ್ಯರಸದಿಂ ಮರುಳಾಗಿಸುವಳ್ ವನಾಂತದು ।
ದ್ಭ್ರಮುಮೃಗಪಕ್ಷಿಸಂಕುಳಮನೀಪರಿಯಿಂದೆಸೆದಿಪ ಳಾಸಗಂ ॥ ೫೩

ಉಪಹಾರಕ್ಕೆ ಸನುಸ್ತಭಕ್ಷ್ಯತತಿಯುಂ ಮಾಧುರ್ಯವಪ್ಪಂತು ಮಾ ।
ಡಿ ಪದಾರ್ಥಂಗಳನಿತ್ತು ತನ್ನ ಕರಸೈಗ್ರಣ್ಯಂಗಳಂ ಯೋಗಿಯೊಳ್ ॥
ಕೃಪೆಯಂ ಪೆತ್ತು ನಿರಂತರಂ ಪ್ರತಿದಿನಂ ಶಿಕ್ಷೋಪೆಯಂ ಮಾಪ್ಪಳ ।
ನ್ಯಪಥಂ ದುಷ್ಪಥಮೆಂದು ದೇಹಸುಖಮಂ ತಾನಾವಗಂ ಲಿಕ್ಕಿಸಳ್ ॥ ೫೪

ಇಂತನೇಕಪರಿಚರ್ಯಮಂ ಮಾಡುತುಂ

ಎಂದಿನ ತೆಱದಿಂ ಸತಿ ಮುನಿ ।
ವೃಂದಾರಕನಂಭ್ರಿಯುಂ ಕರಾಬ್ಜದಿನೊತ್ತು ॥
ತ್ತೊಂದುಂ ಕಾರಣಮಿಲ್ಲದೆ ।
ಮುಂದಸ್ಮಿತವೆಸೆಯಲಂತವಳ್ ನಸುನಕ್ಕಳ್ ॥ ೫೫

ಅಂತವಳ ನಸುನಕ್ಕುದಂ ಮುನಿನಾಥಂ ಕಂಡು,

ಏನುಂ ಕಾರಣಮಿಲ್ಲದೆ ।
ಮಾನಿನಿ ನಸುನಕ್ಕೆಯೇಕೆಯೆಂದಾಮುನಿಪಂ ॥
ತಾನೊಸೆದು ಕೇಳ್ದೊಡಾಕೆ ನಿ ।
ಜಾನನನಂ ಬಾಗಿ ಬಾಗಿ ಮುತ್ತೆ ಮುತ್ತಿಂತೆಂದಳ್ ॥ ೪೨

ಲೋಕಂ ತ್ರಿವರ್ಗಮುಂ ಸಮು ।
ವೀಕೆಂಬುದು ಧರ್ಮಮಧಿಕಮೆನ್ನದೆ ದೇವಾ ॥
ನೀಕಕ್ಕೆ ಮರ್ತ್ಯರಂ ನಿ ।
ರ್ವ್ಯಾಕುಳದಿಂ ಸಮನೆನಿಪ್ಪ ತೆಱದಿಂದೀಗಳ್ ॥ ೪೩

ಸತತಂ ಪೂಜ್ಯಮನಾತ್ಮದೇಹಹಿತಮುಂ ಸ್ವರ್ಗಾಪವರ್ಗೈಕಪ ।
ದ್ಧತಿಯುಂ ಪಾನನವಸ್ತುವಂ ಪರಮರಕ್ಷಾಸಿದ್ಧಿಯುಂ ದೋಷವ ॥
ರ್ಜಿತಮುಂ ಜ್ಞಾನಲತಾಭಿವೃದ್ಧಿಯನಶೇಷಪ್ರೀತಿಯುಂ ಲೋಕವಿ ॥
ಶ್ರುತಮುಂ ಧರ್ಮಮನೇಕೆ ಮಿಕ್ಕ ಪುರುಷಾರ್ಥಕ್ಕಂ ಸಮಂ ಮಾಪ್ಪಿರೋ॥

ಗಾಡಿಯೊಳರ್ಥಕಾಮವೆರಡುಂ ಗಳಸಲ್ಬಗೆದಂದು ಧರ್ಮಮುಂ ।
ನೋಡಿದೊಡಂತದೆಲ್ಲಿಯೆದು ಸಂತತನಿರ್ಮಳಮಪ್ಪ ಧರ್ಮಮುಂ ॥
ಮಾಡುಪ್ರೌಢರ್ಥಕಾಮವೆರಡುಂ ಕಿಡವೆಂವಱಿವಿರ್ದು ಧರ್ಮದೊಳ್ ।
ಕೂಡುವರೇಕೆ ಮಿಕ್ಕ ಪುರುಷಾರ್ಥಮನಜ್ಞಾರೆನಿಪ್ಪ ಮಾನವರ್ ॥ ೪೫

ತಿಳಿಪ್ರೌಢಿದಲ್ತೆ ತತ್ತ್ವದ ತಿರುಳ್ಮಿಗೆ ಧರ್ಮವ ಧರ್ಮವಾಕ್ಯಮುಂ ॥
ಗಳ ವಿವರಪ್ರತಿಷ್ಠೆ ಪರಮಾರ್ಥದ ಸಾರವನೇಕದರ್ಶನಂ ॥
ಗಳ ಮತವಲ್ತೆ ಲೌಕಿಕದ ಸೀಮೆಯೆನಿಸ್ಪದು ಕಾಮಮುಂಜರೀ ।
ಲಳನೆಯ ವಾಕ್ಯದೋಜೆ ಪರಿಭಾವಿಸೆ ಪೂರ್ಣರಸಾತಿರೇಕದಿಂ ॥ ೪೬

ಎಂದ ಕಾಮಮುಂಜರಿಯೋಜೆಗೆ ಮುನಿನಾಥಂ ಪರಿತೋಷಂಬಡುವುದುಂ ಮುತ್ತವಳಿಂತೆಂದಳ್—

ಸುರಪಂ ತಾಪಸಕಾಂತೆಯೊಳ್ ಶಶಿ ಗುರುಸ್ತ್ರೀಯೊಳ್ ಮುಕುಂದಂನಿರಂ।
ತರಗೋಪೀಜನದೊಳ್ ಸರೋರುಹಭವಂ ತತ್ಪತ್ನಿಯೊಳ್ ಮಾರುತಂ ॥
ಭರದಿಂ ಕೇಶಿಯ ನಾರಿಯೊಳ್ ಬಡಬೆಯೊಳ್ ಚಂಡಾಂಶುವೀಶಂ ಸಮು ।
ಸ್ತ್ರರುಷಿಸ್ತ್ರೀಯರೊಳೊಪ್ಪನಿಂ ಬೈರಸಲುಂ ದೇವತ್ವವೇಂ ಪೋದುದೇ ॥

ಎಂದು ಕಾನುಮುಂಜರಿ ಅರ್ಥಕಾಮಂಗಳನೆಸಗಲ್ ಧರ್ಮಕ್ಕೆ ಹಾನಿಯಿಲ್ಲೆಂಬುದುಂ, ಋಷಿಯಿಂತೆಂದಂ—

ಸುಲಲಿತಧರ್ಮಮನಱಿವೆಂ ।
ತಿಳಿಯವು ಕೇಳರ್ಥಕಾಮಮುಮಱಭಿರೂಪಂ ॥
ಫಲಮಂ ಪೇೞ್ ಬಲ್ಲೊಡೆ ಕೋ ।
ಮಳಿ ಕೇಳ್ವಿಂ ಪ್ರಿಯದಿನೆಂದನಾಮುನಿಮುಖ್ಯಂ ॥ ೪೯

ಎಂಬುದುಂ;

ಪಶುಗಳನೋವಿಯೊಲ್ದು ಕೃಷಿಯೊಳ್ ವ್ಯವಹಾರಮನೊಲ್ದು ಮಾಡಿ ಯೂ । ರ್ಜಿಸುವುದು ವಿತ್ತಮಂ ಪಡೆದು ಸದ್ವ್ಯಯದೊಳ್ ಸಲಿಪಿಟ್ಟು ಕೂರ್ತು ಸಾ।ಧಿಸುವುದು ಧರ್ಮಮಂ ಧರೆಯೊಳೀಕ್ರಮಮರ್ಥದ ಸಿದ್ಧಿರಕ್ಷೆ ಭೂ । ವಿಸು ಮುನಿನಾಥ ಧರ್ಮದೆಣೆಯಪ್ಪುದು ಲೋಕದಳುಂಟೆ ಸಂತತಂ॥

ಎಂಬುದುಮರ್ಥಸ್ವರೂಪಸಿದ್ಧಿಯಱಿಯಲ್ ಬಂದುದು; ಕಾಮಮೆಂತಿರ್ದುದು ? ಎಂಬುದುಂ;

ನಿರುಪಮಕಾನುಮಂ ಪೆಸಗೊ*ಳಲ್ ಫಲವಂ ತಿಳಿಯಲ್ಕೆ ಬಾರದ ।
ಚ್ಛರಿಯೆನೆ ದೃಷ್ಟಮಲ್ಲದೆ ಶ್ರುತಕ್ಕದು ಗೋಚರನುಲ್ತು ಸಂತತಂ ॥
ಪರಿಕಿಸಲಂತರಂಗಬಹಿರಂಗಸುಖಂ ತನಿವೆರ್ಚಿ ಯೋಗಮುಂ ।
ಬ್ಬರಿಸೆಯನೂನಧರ್ಮವೊದಗಿಪ್ಪುದು ತಪ್ಪದೆಲೇ ಮುನೀಶ್ವರಾ ॥ ೫೦

ನಿತ್ಯಂ ಚಿತ್ತಪ್ರಸನ್ನಂ ನಿರತಿಶಯಸುಖಂ ಜಾಡ್ಯವಿದ್ರಾವಣಂ ಮೇ ।
ಣತ್ಯಂತಪ್ರೀತಿಕಾಂತಿಪ್ರದಮಭಯಮನಂಗೋತ್ಸವಂ ಸರ್ವಲೋಕ॥
ಸ್ತುತ್ಯಂ ಜಾತುರ್ಯಪೂರ್ವಂ ನಿರುಪಮವಿಭವಂ ಕಾಮಕೇಳೀವಿಲಾಸಂ ।
ಸತ್ಯಂ ಕೇಳ್ ಯೋಗಿವೃಂದಾರಕ ಪಶುಮೃಗಪಕ್ಷಿಪ್ರತಾನಕ್ಕೆ ಸಾಧ್ಯಂ ॥

ಎಂಬುದುಮಿಂತಿವರುಷಾರ್ಥದ ಫಲಮಿನಗೆ ಸಿದ್ಧಿಸುವುಪಾಯಮುಂ ಮಾಡೆಂಬುದುಂ;

ಮೆಲ್ಲನೆ ಪೊದ್ದಿ ಕಾಮುಕಳಿಯಂ ಪಡೆದೋಷ್ಮಮನೀಂಟಿ ಮುಂಜಿಯುಂ
ಪಲ್ಲವಹಸ್ತದಿಂ ಸೆಳೆದು ಕುಂಭಕುಚಂಗಳೊಳಾಂಕಲಪ್ಪಿ ಮೈ ॥

ಳ್ಬಿಲ್ಲಪೊಳಾಕೆ ನಾಣ್ದುಡುಕಿ ನುಣ್ಗೊರಲಿಂ ದನಿ ಪ್ರಾಣ್ಕೆ ಚುಂಬಿಸು ।
ತ್ತೆಲ್ಲ ಸುಖಕ್ಕೆ ಸೀಮೆಯೆನಲಂಗಜಕೇಳಿಯನುಂಟುಮಾಡಿದಳ್ ॥ ೫೦

ಅನಂತರಂ,

ಜಡೆಗೆದಱಲ್ ವಿಭೂತಿ ಪರಿಯಲ್ ಪ್ರೌಸಕಾಪಜಿಯಲ್ ಸಮಾಧಿ ಯುಂ ।
ಗಿಡಲುಪವೀತಮೆಂಬ್ಪ ಪಱಿಯಲ್ ತಪವೋಜ [ವಿನಿಶ್ಚಲಂ] ಮನಂ ॥
ಸಡಿಲಲನಂತರಂ ಮುನಿವರಂ ಸವಿಗಂಡವೊಲಂದು ತಾನೆ ಕೂ ।
ತೊಡರಿಸಿದಂ ಕರಂ ಸುರತಕೇಳಿಯನಾಕೆಯೊಳತ್ಯಪೂರ್ವಮುಂ ॥ ೫೧

ಮತ್ತಂ,

ಪೂರ್ಣಕುಟೀರದೊಳ್ ತಳರಿ ತಳ್ಪದೊಳಮರ್ ಲಸತ್ಕುಚಾಗ್ರದಿಂ ।
[ಸ್ವರ್ಣದ ಕಾಂತಿಯಂ] ಮಿಗುವ ಕೆಂಪಿಡಯಂ ಪಿಡಿದೋಷ್ಠಮಂ ಪ್ರಭಾ॥
ಕೀರ್ಣಮೆನಲ್ಕೆ ಚುಂಬಿಸಿ ಕರಂ ಬಿಗಿಯಪ್ಪಿದ ಕಾಮುನುಂಜರೀ ।
ಪೂರ್ಣಕುಚಾವ್ರಯೊಳ್ ಸುಖಿಸನಾಧಿಯನಾಂತೆಸೆದಂ ಮುನೀಶ್ವರಂ ॥

ಸುರತಸ್ವೇದಾಂಬುವಿಂ ಮುಜ್ಜನಕೆಯ್ದೆಬೊಡನೀಡಾಡಿ ಲಜ್ಜಾಪ್ರಸೂನೋ
ತ್ಕರಮಂ ಧೈರ್ಯಾದಿನಾನಾಗುಣಸಮುದಯನೈವೇದ್ಯಮಂ ತೀವಿ ಕಾಂತಾ॥
ಗುರುವಕ್ಷೋಜಾತಲಿಂಗಕ್ಕೆ ಅಗಿ ಪದೆದಲರ್ಗಣ್ಗಳಂ ಮುಚ್ಚಿ ಯೋಗಂ ।
ಬೆರಸೊಪ್ಪಿರ್ದಂ ಮಯೂರಾಸನಮೆಸೆಯೆ ಮುನೀಜೆವ್ರತೀಂದ್ರಂ ನಿತಾಂತಂ॥

ಅಂತು ಪರಿವರ್ತಿಸಿದ ಕಾಮುಪುರುಷಾರ್ಥಫಲಸಿದ್ಧಿಯಂ ಪಡೆದು ಮತ್ತಂ

ಎಲೆ ಸತಿಯೆ ಕಾಮುಮೆಂಬುದು ।
ತಿಳಿಯಿತ್ತದಱುಳ್ಳ ಪರಿಕರಂಗಳನೆವೇನೆಂ ॥
ದಳವಡೆ ಪೇೞೆಂದೊಡೆ ಕೋ ।
ವುಳಿ ಪದೆದಾಯತಿವರಂಗೆ ಮತ್ತಿಂತೆಂದಳ್ ॥ ೫೨

ಕುಸುಮಂ ಕರ್ಪೂರತಾಂಬೂಲಕನುನುಪಮಕಸ್ತೂರಿಕಾಚಂದನಂ ನಿ।
ರ್ವ್ಯಸನಂಗಳ್ ಕಾಮುಸಂದೀಪನಕರಮುವು ಚಂಪಾಪ್ರಸೂನಪೊಳ್ ನಾ ॥
ಡೆ ಸಮಗ್ರಂ ದೇವ ನೀಮಲ್ಲಿಗೆ ಪದೆದು ಬರಲ್ತೋರ್ಪೆನೆಂದಂತವಳ್ ತಾ।
ಪಸನಂ ಬೇಳ್ಕ್ಕಾಡಿ ಬೇಗಂ ನಲವಿನೊಳೊಡಗೊಂಡುಯ್ದಳಾರ್ಯರ್ಮನೋಗಲ ॥ ೫೩

ಅದೆಂತೆನೆ .

ಮುದನೊಸಪಂ ಮುತಾಸೆ ಗುಣಮುಂ ಧನಲೋಭಮುನೂನವಿದ್ಯೆಯುಂ ।
ಮದಮೆನುನಾರಾಗಮುಂ ಬಹಳಚಿಂತೆ ಪರಾಕ್ರಮುನುಂ ದರಿದ್ರಮು ॥
ಭ್ಯುದಯವನೆಯ್ದೆ ದುರ್ಗುಣಚಯಂ ಕೆಡಿಪಂತೆ ಮುನೀಂದ್ರ ಚಿತ್ತನುಂ ।
ಕವಡಿಸಿ ತನ್ನ ಬಂಬಲಿಯೊಳುಯ್ದುಳಿದೋಷನೆನಾಮುನೀಶನಂ ॥ ೫೪

ತಲೆಯುಂ ಬೊಳ್ಳಿಸಿ ಪೂಗಳಂ ಕವಿಗಳೊಳ್ ಸೆಕ್ಕಿಟ್ಟು ಕಣ್ಗಳ್ಗೆ ಕ ।
ಜ್ಜಳನುಂ ತೀವಿ ಪರಿದ್ರವಂ ತೊಪಪು ಮೆಯ್ಯೊಳ್ ಧೌತಕಾಷೀನದೊಳ್ ॥
ಬಳಿಕಂದೊಪ್ಪಿನ ಭಂಡಿಯೊಳ್ ಸಿಕುಸಿ ತನ್ನೊಗ್ಗಾಕೆ ಕೊಂಡುಯ್ಯಲಾ ।
ಗಳದಿರ್ದಂದುದನೊಕಪಾದನಿಕರಂ ನೊಡಲ್ಕೆ ಯೋಗೀಂದ್ರನಂ ॥ ೫೫

ಅಂತಾವಮುನಿಯುಂ ತಂದು ಚಂಪಾ ಪುರದೊಳಗಣ್ಣಂ ಕೊಂಡು ಪ್ರೀಗಿ
ಆಮುನಿನಾಥಸವೀತಂ ।
ಕೊಂಪುಳಿ ಸಲೆ ಸಿಂಹಸಮರ್ಪಿತಾಸ್ಥಾನಮನು ॥
ದ್ದಾಮವೆಸೆಯುಲ್ಲ ಪ್ರಭುತ್ವ ಸ ।
ಭಾಮಧ್ಯದೊಳಾಕೆ ನಿಂದಿರಲ್ ನಲಸಿಂದಂ ॥ ೫೬

ಚೀರಂ ವಾರುನಕೋಟಿಯುಂ ಗೆ[illegible]ನಂತ ಧನಂ ಪುಂಜಕ್ಕುತೆ ।
ಲ್ಲಾರತ್ನಾಭರಣಾಂಗಳಂ ಪಸಲು ಚೊಕ್ಕಂ ಸಿಂಪುಣಾ ಪೆಮ್ಮಿನೀ ।
ನಾರೀಸಂತತಿಯುಂ ನಿಜಂ ಕಳಿಪಿಮಂ ಚಿತ್ರೈಸು ಸೀಸಂಬ ತ ।
ತ್ಸಾರಂಭಂ ಮಿಗೆ ಸಂಧಿಮಿಗ್ರಹಿಗಳಿಂಸೊಪ್ಪಿದು ದೊಡ್ಡೋಲಗಂ ॥

ಅಂತಿರ್ದೊಡ್ಡೋಲಗದೊಳ್ ಕಾಮುಮುಂಜಾ ಮುನಿಪನ ಪೆಗಲೊಳ್ ಕೈ
ಯ್ಯನಿಟ್ಟಿರ್ದಳಂತದಂ ನೃಪಂ ಕಂಡು,
ನಸುನಗುತೆ ನೃಪವರಂ ತಾ ।
ಪಸಸಹಿತಂ ಕುಳ್ಳಿರಬಲೆಯೆನುಲಾಕ್ಷಣಂ ॥
ದಿಸಿ ರುಷಿಯ ತೊಡೆಯು ಮೆಲ್ಲೊ ।
ಳ್ಪಿಸೆಯುಲ್ ಕುಳ್ಳಿರ್ದಳಿದಕ್ ಸಮಯಾಂತರದೊಳ್ ॥ ೫೭

ನೆರೆದಾಸ್ಥಾನದೊಳಿರ್ದ ಬಂದು ಪೊಡೆಮಟ್ಟಾಂ ಸೋಲ್ತೆನೀಕಾಮಮುಂ
ಜರಿಗೆಲ್ದಳ್ ಕಡುಬಾಪೆಗೆಯ್ದ ತೆಱದಿಂ ತೋಱುತ್ತಿದೆ ನಾನೀಕಗಂ ॥

ದರಸಂಗೊರ್ವ ವಿದಗ್ಧೆ ಕೈವಮುಗಿದು ಪೋಗಲ್ ಮತ್ತೆ ತದ್ಭಾಷನಾ ।
ದರದಿಂ ಮನ್ನಿಸಿ ಕಾಮಮಂಜರಿಯನಿಂ ಪೋಗೊಂದನಾನಂದದಿಂ॥ ೬೩

ಅಂತರಸಂ ಕಾಮಮಂಜರಿಗೆ ಗಣಿಕಾಧಿಪತ್ಯಮಂ ಕೊಟ್ಟು ಕಳಿಪಲಾ
ಕಾಂತೆಯಾಸ್ಥಾನದಿಂ ಪೊಱಮಟ್ಟು ತನ್ಮನಿಯ ಮುಖಾರವಿಂದಮಂ ನೋಡಿ
ಮುನಿಗೆ ಕರಕಮಳಿಯಮಂ ಮುಗಿ ।
ದಿನಿತಾಯಾಸಕ್ಕೆ ತಂದೆ ನಾಂ ನಿನ್ನಂ ಮೆ ॥
ಲ್ಲನೆ ನಿನ್ನ ಪರ್ಣಕಾಲೆಗೆ ।
ಮುನಿ ಬಿಜಯಂಗೆಯ್ಯೆನುತ್ತೆ ಕಾಲ್ಗಱಗಿರ್ದಳ್ ॥ ೬೪

ಆನುಡಿ ಕರ್ಣಕೂಲಮೆರ್ದೆಯಂ ಬಗಿದುಬರ್ದುವ ವಜ್ರಮಂತ್ಯಕಾ ।
ಲಾನಲನೇಳ್ಗೆಯೆಂಬ ತೆಱನಾಗಿರೆ ಸುಟ್ಟಿನೆ ಸುಯ್ದು ಪೂರ್ವಮಂ ॥
ಜಾನಿಸಿ ಚೇಷ್ಟೆಗುಂದಿ ಮತಿಗೆಟ್ಟು ಮನಃಪರಿತಾಪದಿಂ ಸರೋ ।
ಜಾನನಮೆಯ್ದೆ ಬಾಡೆ ಬೆಱಗಂ ಪಿಡಿದಂ ಮುನಿಮುಖ್ಯನಾಕ್ಷಣಂ ॥ ೬೫

ಅಂತು ಬೞಿಕ್ಕಾಗಿ,
ಎಲೆ ಸೊಬಗೆ ನಿನ್ನ ದೆಸೆಯಿಂ ।
ತೊಲಗಲ್ ಕಾಲೀಲವೇವೆನೇಕಾರಣಮೆ ॥
ನ್ನೊಲವಂ ಕಿಡಿಸಿ ಕರಂ ಕೋ ।
ಟಲಿಗೊಳಗಾಗಿಸುವೆ ಪೇಟ್ ಸರೋಜದಳಾಕ್ಷೀ॥ ೬೬

ಎನ್ನೊಡನೊರ್ವಳ್ ಮಚ್ಚರ ।
ದಿನ್ನಾಣುಳ್ಳಾಕೆಯಾವುರೀಚಿವ್ರತಿಯಂ ॥
ತನ್ನಯ ಸೊಬಗಿಂ ತಂದಪ ।
ಳೆನ್ನಯ ದೊರೆಯೆಂದೊಡಾನೆ ತಂದೆಪೆನೆಂದೆಂ ॥ ೬೭

ಎಂದೊಡೆನ್ನ ವಿರೋಧಿಯ-ಪ್ಪ ಮದನಮಂಜರಿ ಮತ್ತಮಿಂತೆಂದಳ್ —
ಸುಂದರಿ ಮರೀಚಿಯಂ ನೀಂ ।
ತಂದೊಡೆಯಾಂ ನಿನಗೆ ದಾಸಿಯಾದಪೆನಿನು ಮಾ ॥
ನ್ದಿಂದೆನಗೆ ದಾಸಿ ನೀನೆನ ।
ಗೆಂದೊಡೆ ಬಂದೆಂ ನಿಜಾಶ್ರಮಕ್ಕೆ ದರದಿಂ ॥ ೬೮

ಅಂತು ಬಂದು ನಿನ್ಮಡಿಯನೆಂತಾನುಮೊಂದುಪಾಯದಿಂ ತಂದು,
ನಿನ್ನ ದೆಸೆಯಿಂದಿಳೀಶನ ।
ಮನ್ನಣೆಯಂ ಪಡೆದೆನೆನ್ನ ಪಗೆಯಂ ಗೆಲ್ದಿಂ ॥
ನಿನ್ನ ಪದಸೇವೆ ಭಾವಿಸ ।
ಲೆನ್ನರುವಂ ರಕ್ಷಿಗೆಯ್ವುದೆಲೆ ವನಿಮುಖ್ಯಾ ॥ ೬೯

ಎಂದು ಕೆಯ್ಗಳಂ ಮುಗಿದನುಷ್ಣಾನಂಗೆಟ್ಟಗ್ನಿದಾಶ್ರಮಕ್ಕೆ ಬಿಜಯಂಗೆಯ್ಯಿಮೆಂಬುದುಂ;

ಜಡೆಗಳ್ ಪೋದುವು ತನುವಿನೊ ।
ಳಡರ್ದರಿಸಿನಮಾಱಿದೆನ್ನ ಕೌಪೀನಂ ಪೋ*
ಯ್ತು ಡಿ ನಡೆಯುವತ್ತಲಿನ್ನಾ ।
ವೆಡೆಯೊಳ್ ಪೋಗಿರ್ಪೆನಬಲೆ ಪೋಲ್ಕು ದಯ ೭೦

ಬಗೆಗೆರವಾದೆನೆನ್ನ ನಿಜನೃತ್ತಿಗೆ ಸಲ್ಲದೆ ಪೋದೆನೆಲ್ಲರಾ ।
ನಗೆಗೆಡೆಯಾದೆನಲ್ಪ ಸುಖಮೆಂದು ವಿಚಾರಿಸದಾದೆನೆದ್ದೆ
ಜ್ಜೆಗೆ ಪೊಱಿಗಾದೆನಂಗಜನ ಬಾಣವ ಕೋಳ್ಗೊಳಗಾದೆನಂಸೆ ಕೈ
ಮಿಗೆ ಲಘವಾದೆನಿನ್ನು ನಿರ್ವ*ದೀನೆಲೆ ಕಾಮಿನಿ ನಿನ್ನ ದೂಸಱುಂ ॥ ೭೧

ಎಂದೊಡಂ ಮಱುಮಾತುಗುಡದಿರ್ದುದುಂ;

ಕುಲವುಂ ಚಾರಿತ್ರಮುಂ ಸುವ್ರತನಿಯತಮನಾಚಾರಮುಂ ಧರ್ಮಮುಂ ವೆ । ಯ್ದೋಲವುಂ ಸನ್ಮಾರ್ಗಮುಂ ಭಾವಿಸಲಿಹಪರಲೋಕಂಗಳಂ ನೀತಿಯುಂ ನಿ ॥ ರ್ಮಲಯೋಗಧ್ಯಾನಮುಂ ತತ್ಕ್ಷಣದೊಳೆ ಕಿಡಿಸಿತ್ತದ್ಭುತಂ ನೋಡಲಿಂತೀ । ಲಲನಾಸಂಸರ್ಗಮೆಂದುಮ್ಮಳಿಸಿ ಕಡುಬಲಿಲ್ದಂ ಮುರೀಚಿವ್ರತೀಂದ್ರಂ ॥ ೭೨

ಅಂತು ವಿಹ್ವಳೀಭೂತಹೃದಯನಾಗಿ,

ಮದನಮಱಿದಾನೆಯಂತೆ ವಿಷವೋಡಿದ ಪನ್ನಗದಂತೆ ಬಲ್ಪುಗುಂ।
ದಿದ ಮೃಗವೈರಿಯಂತೆ ಕಡುಪಾಱುದ ಭಾಸ್ಕರನಂತೆ ಕಾಂತಿ ಬ ॥
ತ್ತಿದ ಸಸಿಯಂತೆ ಬೇರುಡಿದ ಪಾದಪದಂತೆ ಕುಲಭ್ರಸಿದ್ದಿ ಪಿಂ ।
ಗಿದ ಬುಧನಂತೆ ಸತ್ವಮಱಿದಾಯೆಯಿಂ ತಳರ್ದಂ* ಮುನೀಶ್ವರಂ ॥ ೭೩

ಎಂದು ಬಿಲ್ವಕುಜದ ಮೆಂದಲೊಳಿರ್ದ ನಿಜೇಷ್ಟಸಹಾಯಂ ಕಾರಯೋ
ಳಿಂತೆಂದಂ:—

ಆಪಾತಕಕೊಳಗಾದನು ।
ತಾಪಂ ತನಿವರ್ಚಿ ವತ್ತ ಸ್ವಾರ್ಥಕ್ಷಯದಿಂ ॥
ರೂಪಂ ಪಡೆದಪೆನೆಂಬಾ ।
ಪಾಪಿಷ್ಠಮರೀಚಿಯೋಳಿ ತಾನೆಂದೆಂದಂ ॥ ೩೪

ಎಂದಾತಂ ಪೇಳೆಲ್ಲಂ ಪೊಸ್ಮಯಿಸುವ್ಯಂತಸಾಗಿ ಕ್ರೂರಮುಂ ಮಗುಳು ಕ್ಷ
ಮಹಿಷ್ಠಯಿಂತೆಂದಂ —

ದುಸ್ಸಂಗದಿಂ ಮದೀಯತ ।
ಪಸ್ಸಾಮರ್ಥ್ಯಂ ಸಡಿಲ್ದುದೊಲಮೊಂ ದಾಗ್ದಾ ॥
ನಿಸ್ಸಂದೇಹಮೆನಲ್ಕೆ ಕ್ರ ।
ನಸ್ಸಂಧಾನದೊಳೊಜಿಲ್ದ ನಿಸ್ಸಾಧಿಪಮಂ ॥ ೩೫

ಅನ್ನೆಗವಿಾಚಕಂಪಾ ಪರಮೂ ಗಿರಿಯಾದಿನಂಗಳಂ ಕಳೆಯೆಂಬುದುವಪಾಂ
ಮುಹಾಪ್ರಸಾದವುಂದೆಂಬ ಸವಾಯದೊಳ್

ಎನ್ನಿಂದಂ ದ್ವಿಜರಾಜಸತ್ಪ್ರಮುಖಾದೇಡಂ ಕರಂ ಕಂದಿಪ ।
ತ್ತೆನ್ನಿಂದಂ ಕುಮುಪಂ ಮಸುಳ್ದ ಕೊರಗಿತಾ ದೋಷಮಂತಿರ್ಕೆ ಮೆ ॥
ತ್ತೆನ್ನಿಂ ವಿಷ್ಣುಪದಕ್ಕೆ ಕಾಯ್ದೊದಗಿದತ್ತೆಂದಬ್ಜಿನೀವಲ್ಲಭಂ ।
ತನ್ನುದ್ಯೋಗದೊಳಿರ್ದಂ ತಪಮಿರಲ್ ತತ್ಪ್ರಭಾಕಾಂತ್ರಿಯಂ ॥ ೩೬

ಅಂತು ಪಗಲೊಡೆಯನ ಮರೀಚಿ ಮರೀಚಿಯೊಡನಂತರ್ಹಿತಮಾಗೆ
ಲೊಡಂ,

ಮೃಗಗಣಮಿಕ್ಕೆಯಂ ಖಗಕುಲಂ ನಿಜಕೋಟರವಂ ಬಲಿಲ್ಕೆಯು ।
ಧ್ವಗತತಿಯೂರ್ಗಳಿಂ ವಿಟಜನಂ ಗಣಿಕಾಜನದಾಲಯಂಗಳಿಂ ॥
ಗಗನಮನುರ್ವಿಯಂ ತಿಮಿರಮಕ್ಷಿಗಳಂ ಸುಖನಿದ್ರೆ ಸಾರ್ದಿರಲ್ ।
ಖಗನಪರಾದ್ರಿಯಂ ಪದೆದು ಸಾರ್ದನನಂಗನೊಳಿೋಜೆ ಕೈಮಿಗಲ್ ॥ ೩೭

ಅಂತೊಂದೆಡೆಯನೊಂದೊಂದು ಸಾರ್ದಿರಲ್ ಮರೀಚಿ ಎನ್ನಂ ತನ್ನಾಶ್ರಮ
ದೊಳಿರುಳಂ ಕಳೆಯಲ್ವೇಱೊಡಂತೆಗೆಯ್ವೆನೆಂದುಷಾರಾತ್ರಿಯನಲ್ಲಿ ಕಳಿದು
ದಯವಾಗಲೊಡನಾತನಿಂ ಬೀಳ್ಕೊಂಡು ಚಂಪಾಪುರದೊಳಗನೆ ಬರ್ಪಾಗಳ್,

ಅವನತಕಂಧರಂ ಧನವಿಹೀನಮನಸದೇವನತೀವದುಃಖಿಸಂ ।
ಭವಮು ಖನಲ್ಪ ವಾಗಿಪರಿಲಗ್ನ ನಿಜಾವಯವಂ ದುರಂತಮೂ ॥
ಗನಿಶಳಕೇಪಚಿಪ ಸತಿಚಿಂತೆಯೆ ಳಿವರ್ನನೊರುಜಾಡ್ಯವೆ ।
ಧನಸೊಲಿಕೂಂಗಮೊಬ್ಬನಧಿ ಧಾನವನೊಕ್ಕು ರಗಂಬರತ್ವದಿಂ ॥ ೫೯

ಅಂತಿವಾಕ್ಯಮಂ ಕಂಡು - ನೀನಾರಿಂದಮೂ ಧಾಜನಮುಪ್ಪ ತಪಕ್ಕೆ ಕಾರಣ
ವೇಂ, ನಿನ್ನ ಪ ರ ನೆಂಬುದುಮಾತನಿಂತ ಂದಂ —

ಎನ್ನ ಪೆಸರೆ ಸೌಂದರಕಂ ।
ವನ್ನಂ ಬಲುಕಂ ವಿರೂಪಕಂ ನೀನೆಂದಂ ॥
ಪೆನ್ನ ನತಿಧೂತ ರಲ್ಲರೆ ।
ಬನ್ನಂಬಡಿಸಿದೂಡಮಿತವಕ್ಕೊಳಗಾದೆಂ ॥ ೬೦

ಂಂದೊತ್ತಾಧೂರ್ತನಿಕರಂ ನಿನ್ನಂ ನಿಷ್ಕಾರಣಂ ಬಂಗೆಂಬಡಿಸಿದ ತೆಱಿನೆಂ
ತೆಂದಾಂ ಕೂರ್ತಾತನೆನ್ನೊಳಿಂತೆಂದಂ —

ಸಂವ ಧನಮಿತ್ರನೆಂಬಂ ।
ಸೌಂದರ್ಯಕರೀತನಪ್ಪನಾತನೊಳನ್ನೊಳೆ ॥
ಕುಂದದ ಮಿಕ್ಕರಿಂದಂ ಕಡು ।
ಪಿಂದೆಸಗಿತ್ತಿಲ್ಲಿ ಸುಖಿಪ ಧೂರ್ತಸಮೂಹಂ ॥ ೬೧

ಧನಹೀನಂ ಧನಮಿತ್ರಂ ।
ಧನಮುಳ್ಳವನಾವನಸ್ಸರಾಜಂ ಚಿದಮ್ಮಾ ॥
ಪನಿವಾಸಿಯಾನದರ್ಕಂ ।
ದೆನಗವುವಂಗಂ ವಿಮೂಢಕರೆ ಪಗೆಯೊಯ್ದರೆ ॥ ೬೨

ರೂಪು ಗುಣಂ ಶೀಲಂ ವಿ ।
ದ್ಯಾಪರಿಣತೆ ಸೌಕುಮಾರ್ಯನುತಿಚಾತುರ್ಯಾ ॥
ಳಾಪಮಿವುಳ್ಳೊಡೆ ಧನಕೂಪ ।
ತಾಪವನುದೇವುದೊ ನರಗೆ ವಸುಧಾತಳದೊಳ್ ॥ ೬೩

ಮನಸಿಜರೂಪಂ ಕುಲಜಂ ।
ವಿನಯುವಿದಂ ಸುಭಗಮೂರ್ತಿ ವಿದ್ಯಾಧಾರಂ ॥

ವಸಿಕಾಜನಪ್ರಿಯಂ ಬಹ ।
ಧನವುಳ್ಳವನಲ್ತೆ ಲೋಕನೀತಿಕ್ರಮದಿಂ ॥ ೪೩

ಎಂದರ್ಥಪಕ್ಷಪಾತದಿಂದೆನ್ನಂ ಸ್ವರೂಪಪಕ್ಷಪಾತದಿಂ ಧನಮಿತ್ರನಂ ಕೊಂಡು ಕೊನೆದಿವರ್ಗರ್ಗಂ ವೈರಮಂ ಬಳಿಸೆ ವೈರಂ ಕೈಗಟ್ಟಿಯಾಂ ಮಿಗಿಲ್ ತಾಂ ಮಿಗಿಲೆಂಬುದಂ ಧೂರ್ತಜನಂಗಳ್ ಕೇಳ್ದಿಂತೆಂದರ್:—

ನಿಮ್ಮಿರ್ಬರ ಸೌಭಾಗ್ಯದ ।
ಹಮ್ಮುಗೆಯಂ ಸುಭಗೆ ಕಾಮವೆಂಜರಿ ಪದಿಪಿಂ ॥
ದೊರ್ಮೆ ಪರೀಕ್ಷಿಸಿ ಪೇಳೊಡೆ ।
ನಿಮ್ಮಯ ಹೀನಾಧಿಕತ್ವಮತಿನುತಿವಡೆಗುಂ ॥ ೪೪

ಎಂದೊಡಾವಿರ್ವರುಂ ಕಾಮನುಂಜರಿಯೆಡೆಗೆ ಧೂರ್ತದೂತರಂ ಕಳುಪಲುಂ

ಧನವುಳ್ಳಾತಂ ದಿಟಂ ಜಾಣೊಡೆಯನಧಿಕನುರ್ವೀಶ್ವರಂ ಮನ್ಮಥಂ ಸಜ್ಜನವೆಲ್ಲಾ ವಿದ್ಯೆಯೊಳ್ ಬಲ್ಲವನತಿಸುಭಗಂ ಭೋಗಿಲೋಕಪ್ರಿಯಂ ಮೋಹನರೂಪಂ ಸತ್ಕಳಾಪಂ ಸಕಲಗುಣಯುತಂ ಸತ್ಕುಲೀನಂ ಜಗತ್ಖ್ಯಾತನಿಳಾಸಂಪ್ರೀತನುತ್ಪಾದಿತಶುಭಚರಿತಂ ಸಂತತಾಕಾರಪೂಜ್ಯಂ ॥ ೪೫

ಎಂದವಳೆನ್ನಂ ಪರಿಗ್ರಹಿಸಿ ಧನಮಿತ್ರನನುದಾಸೀನನೆಂಗೆಯ್ದುದಱಿನಾನವಳೊಳ್ ಪ್ರೀತಿಯಿಂ ಪುದುವಾಳ್ತೆಯಿಂದಿರಲ್ ಕಿಱಿದು ದಿನದಿಂ ಮೇಲೆ

ಗಳಿಸಿರ್ದರ್ಥವನವಳೀ ।
ಟ್ಟುಳಿಗೊಂಡಾ ಕಾಮನುಂಜರೀಸತಿಯೆನ್ನಂ ॥
ಕಳವೂವನುಟೀವ ತುಂಬಿವೊ ।
ಲಳಕುಂತಳೆ ಪೊಱಗೆ ನೂಂಕಿ ಕಳೆದಳ್ ಬೇಗಂ ॥ ೪೬

ಅಂತವಳ್ ನೂಂಕಿದೆನ್ನಂ ಕಂಡು ಧೂರ್ತರ್ ವಿರೂಪಕನೆಂದು ಪೆಸರಂ ಕೊಟ್ಟುಪಹಾಸ್ಯಂಗೆಯ್ಯುಲೊಡಂ ಖಿನ್ನನಾಗಿ ದಿಗಂಬರತ್ವನುಂ ಪಡೆದೆನೆಂಬುದುಮಾತನನಾಶ್ವಾಸಿಸಿ ಅಲ್ಲಿಂ ತಳದುರ್ ಪುರದೊಳಗೆ ಬರ್ಪಾಗಳ್

ರಾಜಕುಮಾರಕರ್ ನಿಜವಿನೋದಿಗಳಂಗವಿಕಾರಿಗಳ್ ಕಳಾ ।
ಭೋಜಕರರ್ಥಿಗಳ್ ಸುಭಗಮೂರ್ತಿಗಳೊಪ್ಪುವ ನಾಗರೀಕನಾ ॥

ನಾಜನಮುಂದು ಸೆಂಪಿಸಿವ ಮುಂತಯುದೊಳ್ ನೆರಿಮುತ್ಸವಂ ಮಿಗಳ್ ।
ಜಾಜಿಗಳಂ ಸಮಗ್ರಮೆನಲಾಡುತಿರಲ್ ಪದೆದಲ್ಲಿಗೆಯ್ದಿದೆಂ ॥ ೪೩

ಸಂದಿ ಕಳಂತಿ ಗಜಾಗರ ।
ಮೊದಚ್ಚಂ ಕೊಂಡು ಕವಡೆಯಂ ತೂಗಿಯಿನಿ ॥
ತ್ತಿಂದುಖಿ ಕೈಚಳಕಂ ಮಿಗೆ ।
ಚೆಂದಮಿನಲ್ ಲಗ್ಗಿದೋಲಲಾಡುತ್ತಿದ್ದರ್ ॥ ೪೪

ಅದಲ್ಲದೆಯುಂ,

ಸದರದೆ ದಾಯಮುಂ ಪಿಡಿವ ವಿತ್ತಮನೊಡ್ಡುವ ಜೊತ್ತುಗಾಱರಿಂ ।
ದಿದಿರವರಂ ಕೆಗಳ್ಚಿಸುವ ಢಾಳಿಸಿ ಮೆಯ್ಯುಖದಕ್ಷಮುಂ ಕರಾ ॥
ಗ್ರದಿನುಖಿ ದಂಡಿಗೊಳ್ವ ತೆಗೆಯೂಗಳಿ ತಾಗಿತೆನಲ್ಕೆ ಸಾರಿಯುಂ ।
ಕೆದಱುವ ನೆತ್ತಗಾಱರ ವಿನೋದನುನೀಕ್ಷಿಸುತಿರ್ದೆನುವಿರ್ಪಂ ॥ ೪೫

ಅಂತಾವಿನೋದಮುಂ ನೋಡುವೆನೆಂದು ಕುಳ್ಳಿರ್ದಾಗಳುಂ,

ಸಾರಿಯನುಂಟುಮಾಡಿ ನೆನೆದೊಡ್ಡಿದ ದಾಯವೆ ಬೀಱಲಾಮರ್ ವಿ ।
ಸ್ತಾರಮನೊಯ್ವಿನೀದ್ವಿಗುಣದಿಂ ದಶದಾಯನನೊಯ್ದು ಲೀಸು ಕೈ ॥
ವಾರದೊಳಕ್ಷಮುಂ ಪಿಡಿದು ಢಾಳಿಪನಾವನನೆನ್ನ ಮುಂದೆನು ।
ತ್ತೂರಿಗದಿಟ್ಟನೊವರ್ನತಿಭಾಷೆಯನಗ್ಗಳಮಾಗಲಾಡಿದಂ ॥ ೪೬

ಅಂತನನುಚ್ಚಕ್ಷಂಖಿಲವಾಗ್ಜಾಲಮುಂ ಬೆಸಕೆತಾಡು ತ್ರದಂ ಕಂಡಾನಿಂತೆಂದೆಂ: –

ಬೇಡಿದು ಭಾಷೆಯೇಕೆ ಪಿಡಿ ದಾಯನನಾಱುದೊಡೇಱೆನುತ್ತಲಾ ।
ನೇಡಿಸಲಂತನಂ ಜರೆದು ಕೋಪಿಸಿ ಬಲ್ಲೊಡೆ ಬಂದು ಕುಳ್ಳಿರಾ ॥
ನಾಡುವೆನೆನ್ನ ನಿನ್ನ ಧನವುಳ್ಳನಿತಕ್ಕೆನಲೆಬ್ಬಿ ಸಾರಿಯುಂ ।
ಪೂಡಿದೆನಕ್ಷಮುಂ ಪಿಡಿದು ಹಾವುಗೆಯಾವನವನೆಂದು ನೋಡಿದೆಂ ॥ ೪೭

ಎಂಬುದುಂ ವುತ್ತಮವನಿಂತೆಂದಂ:—

ಆರಿದಿರಾದೊಢಾಡಿದಱೆನೆಕ್ಕಡಿಯಂ ಪತೆ ಪಂಚದಾಯಮುಂ ।
ವೀರವಿಳಾಸಮುಂ ತಗರಸನ್ನೆಯನೈದೆರಡಂ ನೆಗಲ್ಚಿ ಚ ॥
ಸಾರಿಯನಾಖಿ ಪನ್ನೆರಡನೊಪ್ಪುವ ರಾಜಕುಮಾರನಂ ವುಹೋ ।
ದಾರವನೊಡ್ಡಿದೊಡ್ಡನೆನುತೆನ್ನನಮಂ ಕಡುಮುಂ ಕೆರಳ್ಚಿದಂ ॥ ೪೮

ಇನ್ನು ಮೊದಲಾಗಿ ಪತ್ತು ವಿಧದ ನೆತ್ತವನಾಡುವೆನೆಂದೆನ್ನಂ ಕೆರಳ್ಚಲಾಂ
ವಿಮರ್ದಕನೆಂಬ ಪಾವುಗೆಕಾಱಿನ ಮೊಗಮುಂ ನೋಡಲಾತಂ ಅರ್ಥಮನೊ
ಡ್ಡಿ ಬುದುಂ,

ಪಲಗೆಯನಳವಱಿದಿಟ್ಟು ।
ಗಳಿ ಮೆಯ್ಯಱಿನಕ್ಷಯುಗಳಮಂ ಢಾಳಿಸಿ ಮೇ ॥
ಲಿನಿಸುವೊಡ್ಡವಂ ನುಡಿ ।
ದಳುಪಿಲ್ಲದೆ ಜೂಜುಗಾಱಿರಂ ಕೆಳಿಗೊಂಡೆಂ ॥ ೯೩

ಅಲ್ಲಿಂ ಬಳಿಯಿಂ

ತಾಗುವ ದಾಯಮುಂ ತಪೆವ ತಪ್ಪಿದ ಸಾರಿಯನೊಡ್ಡಿಕೊಳ್ವ ಗೆ ।
ಲ್ವಾಗಱಿವೊಡ್ಡನೇಱಿಸುವ ಮೆಯ್ಯಱಿನಕ್ಷಮನೊಯ್ಯನೆತ್ತಿ ಕೈ ॥
ವೇಗದೊಳಾರ್ದ ಢಾಳಿಸುವ ಪಾವುಗೆ ಸಾಕೆನಲೇಱ್ಪಿ ಬಿನ್ನಣ ।
ಕ್ಕಾಗರವನ್ಮಾಗಲಾಂ ಪನೆದು ನೆತ್ತಮನಾಡಿದೆನುರ್ವರಾಧಿಪ ॥ ೯೪

ಷೋಡಶಸಹಸ್ರವಿತ್ತ ।
ಕ್ಕಾಡಿಯದಂ ಗೆಲ್ದು ಪಾವುಗೆಗೆ ಕಿಱಿದಂ ಕೊಂ ॥
ಡಾಡುವನರ್ಗಂ ಕಿಱಿದುಮು ।
ನೀಡಾಡಿ ಬಱಿಕ್ಕವಿಕ್ಕುದಂ ಕೊಂಡೆಲ್ದೆಂ ॥ ೯೫

ಅಂತೇಱಿಲೊಡಂ,

ಪಾವುಗೆಯಾದ ವಿಮರ್ದಕ ।
ನಾವಾಸಕ್ಕೆನ್ನನೆಯ್ತಂ ಯಿಂ ಕೊಂಡೊಯ್ದು ರಸಂ ॥
ತೀವಿದ ಭೋಜನದಿಂ ಸಂ ।
ಭಾವಿಸೆ ಬಲಿಕನೊಳಾಯ್ತು ಮಿತ್ರಸ್ನೇಹಂ ॥ ೯೬

ಆಂತಾವಿನುರ್ದಕಂಗಮೆನಗಮತ್ಯಂತಸ್ನೇಹಂ ವಿಗಲಾತನಿಂ ಪುರದೊ
ಳಗಣ ಲುಬ್ಧಕಗೃಹಂಗಳ ವೃತ್ತಾಂತಮೆಲ್ಲಮಂ ತಿಳಿದಾಮಱುದಿವಸಂ

ಕಮಳಭವಾಂಡದೋವರಿಯ ಭಾಸ್ಕರದೀಪಿಕೆ ನಂದೆ ವಸ್ತು ಭೇ ।
ದವ ನಱಿಯಲ್ಕೆ ಬಾರದಪೊಲುಬಿರ್ದ ಕಟ್ಟಲೆ ಪಬಿರ್ ದಿಕ್ಕನಾ ॥
ಕ್ಕವಿಸಿ ಕಱುಂಗಿ ಕಟ್ಟಲಿಸಿ ಸೂಚಿಗಭೇದ್ಯಮೆನಲ್ಕೆ ಮತ್ಸ್ಯದೃ ।
ಕ್ಕವಳನಿರೋಧಮಂ ಪಣೆಗುಗೇವೊಗೆಚ್ವೆಂ ತಿಮಿರಾತಿರೇಕಮುಂ ॥ ೯೭

ಅದು ಕೃಷ್ಣಪಕ್ಷವಾಗಿಯು ।
ಮೊದವಿದ ಕಮಳಾನನೋದನಂ ಪಡೆಯದು ಚ ॥
ಕ್ರದೊಳನುರಾಗಂ ಪಿಂಗಿ ।
ಪೃದು ಚೋದ್ಯವೆನಿಪ್ಪ ಮರ್ಬನೊಲ್ಪಿಂಕ್ಷಿಸಿದೆಂ ॥ ೯೪

ಅಂತು ಪರ್ಬಿದ ಮರ್ಬಂ ಕಂಡು,

ವಿಳಸಿತಯೋಗಚೂರ್ಣತತಿ ಕರ್ಕಟರಜ್ಜು ಸುದೀಪನರ್ತಿಗಳ್ ।
ಶಳಭಕರಂಡಕಂ ನುರದ ಮಾಟದ ಪೆರ್ದಲೆ ಮಾನಸೋತ್ರಕಂ ॥
ಪಳಹವೆನಿಪ್ಪ ಪಾಯಶತಮುಂ ತಳೆದುರ್ಬಿದ ಮರ್ಬಿನೊಳ್ ನಿರಾ ।
ಕುಳವೆನೆ ಕನ್ನಗತ್ತಿ ಸಹಿತಂ ಪ್ರೊಳನುಟ್ಟಿನಿಳಾಧಿನಾಯಕಾ ॥ ೯೫

ಅಂತು ನಿದ್ರೆಯುಂ ವಿಗಿಲಾಗಿಸುವ ಯೋಗಚೂರ್ಣವುಂ, ಮಗಿಲೊಳ್ ಸಿಕ್ಕಿಸಿ ಪಿಡಿದೇಳುವೇಳುವರ್ಗವುಂ, ಸಜ್ಜರಸನನೂಡಿದ ದೀಪನರ್ತಿಯುಂ, ಬಳಗಿದ ದೀವಿಗೆಯುಂ ನಂದಿಸುವ ಪತಂಗನ ಕರಡಗೆಯುಂ, ಕನ್ನದೊಳ್ ನೀಡಿಯೊಳಗಣೆಲ್ಲ ಜುಕೆಯುಜುವ ಮರದ ತಲೆಯುಂ, ಬಳಗಣುಗ್ರಾಣವುನ ರಿಯಲಟೆವ ಮಾನಸೂತ್ರವುಂ, ಕನ್ನದಿಂ ಗಾಳಿ ಬಾರದಂತೆ ಮುಚ್ಚುವ ಪಳಹವುಂ, ಕನ್ನದೊಳ್ ಸಂದಿಸಿದ ಕಲ್ಲಂ ತೆಗೆವಿಕ್ರಮಂ, ಮತ್ತವುನೇ ಕಳವಾರ್ಯಸಾಧನಂಗಳಂ ಕೊಂಡು,

ಸೊಗಸೆಸೆಯಲ್ಕೆ ಪ್ರೌಢ್ಢಪ್ರೌಸ ಕಾಗಿನ ಕಚ್ಚೆಯನುಟ್ಟು ಕನ್ನಗ ।
ತ್ತಿಗೆಯುನಲಂಪಿನಿಂ ಪಿಡಿದು ಕಟ್ಟಿಲೆಯೊಳ್ ಪ್ರೊಳನುಟ್ಟು ಮೆಲ್ಲವೆ ॥
ಲ್ಲಗೆ ನತೆಗೊಂಡು ಮುಂದೆಡಬಲಂಗಳನಾಲಿಸುತುಂ ನೆಲಲ್ಕೆ ಮೆ ।
ಯ್ಪೆಗೆಯುತುಮಾರ್ಪಿನಿಂ ನಗರವೀಧಿಯೊಳಿರ್ದಿರುತಿರ್ದನರ್ವಿಪಾ ॥ ೯೦೦

ಅಂತು ಬಪರ್ಗಳ್ ಮುಂದೆ

ನಗರಾಧಿನೇತೆಯ ಮೆ ।
ಲ್ಲನೆಯೋ ಬೆಳ್ದಿಂಗಳಗೆಯೊ ರನ್ನದ ಕೈದೀ ॥
ವಿಗೆಯೋ ಮಿಂಚಿನ ಗೊಂಚಲ ।
ಬಗೆಯೋ ಎನಲೊಂದು ಬೆಳಗು ತೋಱುತ್ತಾಗಳ್ ॥ ೯೦೧

ಅಂತಾಬೆಳಗಂ ಭಾವಿಸಿ ನೋಲ್ಪನ್ನೆಗಂ,

ಸುಲಿಪಲೊಳ್ಗಳ್ವಿಳಗಿಂ ಕಟಾಕ್ಷರುಚಿಯಿಂ ಚಂಚನ್ನಖಜ್ಯೋತ್ಸ್ನೆಯಿಂ।
ವಿಲಸದ್ಭೂಷಣರತ್ನದೀಧಿತಿಗಳಿಂದುರ್ಬಿಪ್ಪ ಪರ್ಬಿರ್ದ ಕ ॥
ಲ್ತುಲಿಯಂ ವಾಂಕರಿಸುತ್ತನೂನಕಚಿರೇಖಾವಿಭ್ರಮಂ ಕೂರ್ತು ಕೋ ।
ಮಲೆಯಾಯ್ತುಂಬಿನವೆೊಪ್ಪಿ ಬರ್ಪ ಸತಿಯುಂ ಕಂಡೆಂ ಕಳಾವಲ್ಲಭಾ॥೧೦೨

ಮತ್ತಂ ಪಲೆ ಗಲ್ಲಂ ನತೆ ।
ಮುತ್ತಿನ ಕನ್ನಡಿಯ ಪಡಿಯೆ ಕಾಂತೆಯ ಚೆ ॥
ಲ್ವೆತ್ತಳಕಂ ಭ್ರೂವಿಭ್ಯಂ ।
ಬಿತ್ತರವೆನಿಪಂತು ಫನಧನುರ್ಗುಣದಿಂದಂ ॥ ೧೦೩

ಅಂತಿರ್ದ ಕಾಂತೆಯುಂ ಕುಡವಳಂ ವಿಚಾರಿಸುವೆನೆಂದವಳಧಿಗೆ ಮಂದು ಪ್ರೋಗದಿರೆಂಬುದುಂ;

ನೀನಾರಾಂ ಕಳ್ಳನೆನ ।
ಲ್ಕೇನಂ ಮಾಡಲ್ಕೆ ವೇಱಿಪ್ಪಿದೆಂದಾಗಳ್ ಚಂ ॥
ದ್ರಾನನೆ ತೊಡವಿನ ಪೆಟ್ಟಿಯ ।
ನಾನಂದದಿನೀಯಲಾಂ ಬಱಿಕ್ಕಿಂತೆಂದೆಂ ॥ ೧೦೪

ಆರ ಮಗಳ್ ನೀಂ ಪೆಸರೇ ।
ನೀರಾತ್ರಿಯೊಳಿಲ್ಲಿಗೆಯ್ದಿದಪೆಯೊರ್ಬಳೆ ನೀ ॥
ರೇರುಹಲೋಚನೆ ಪೇರ್ ವಿ ।
ಸ್ತಾರದೊಳಿನಗೆಂಗೊಡಾಕೆ ಮಗುಳ್ದಿಂತೆಂದಳ್ ॥ ೧೦೫

ನೆಗಳ್ದಾ ಕುಬೇರದತ್ತನ ।
ಮಗಳಾಂ ಕುಲಪಾಲಿಕಾಖ್ಯೆಯಿನ್ನಂ ಮುನ್ನಂ ॥
ಬಗೆ ಮಿಗೆ ಧನಮಿತ್ರಂಗಿ ।
ತ್ತು ಗಡೀಗಳ್ ಕುಡುವನಲ್ತೆ ಪೆಱಿಗೆನ್ಮಿಱ್ಪುಂ ॥ ೧೦೬

ಧನಮಿತ್ರನರ್ಥಮುಂ ವಂ ।
ದಿನಿಕಾಯಕ್ಕಿತ್ತು ಬಡವನಾಗಲೊಡಂ ಭೂ ॥
ಜನವೊಲ್ದುದಾರಕಂ ನಿ ।
ನ್ನ ನಾಮಮೆಂದಾತನಂ ಪ್ರೋಗ್ದಿಪರ್ಗಳ್ ॥ ೧೦೭

ಅಂತಾತಂ ತ್ಯಾಗಶೀಲದಿಂ ಬಡಪಟ್ಟು ದಾರಕನೆಂಬ ಪೆಸರಂ ಪಡೆಯೆ,
ಪೆಱನೊರ್ವನರ್ಥಪತಿಯೆಂ ।
ಬಱಿಕೆಯ ವೈಶ್ಯೇಂದ್ರನಿಪರ್ನಾತಂಗೆನ್ನಂ ॥
ಮಱುಮಾತಿಲ್ಲದೆ ತಾಂ ಪೊ ।
ಟ್ಟಿಱಿ ಕೊಟ್ಟಪನೆಂಬ ಮಾತನೀಗಳ್ ಕೇಳ್ದಿಂ ॥ ೧೦೪

ಅದಂ ಕೇಳ್ದು
ಇಂತಿರೆಯಮುಂಗಲವನಾ ।
ನೆಂತನುಭವಿಸಿವಪೆನೆನ್ನನಯ್ಯಂ ಮುನ್ನೊ ॥
ಲ್ದಿಂತಾವಂಗಿತ್ತನೆಂ ।
ಕಾಂತನೆನುತ್ತವನ ಮನೆಗೆ ಪೋದಪೆನೀಗಳ್ ॥ ೧೦೫

ಕುಡುವೆನೆಯೊಳ್ ಸಂಪದಮಂ ।
ಬಡತನಮಂ ಕುಲಮನಾದಿಯೊಳೆ ತಿಳಿದೊಲವಿಂ ॥
ಕುಡುವುದು ಕೊಟ್ಟ ಬಱಿಕ್ಕಂ ।
ಪಡಿಮಾತಾಡುವುದು ನೀತಿಧರ್ಮವಿರೋಧಂ ॥ ೧೦೬

ಎಂದಾಂ ಧನಮಿತ್ರನ ಮನೆಗೆ ಪೋದಪೆಂ ನಿನಗೆ ಬೇಱ್ಪರ್ಥಮಾಯಿತ್ತು, ಪೋಗೆಂಬುದುಮಾನಾಕುಪಾಲಕಿಗಿಂತೆಂದೆಂ:—

ನಿನ್ನೊಡನೆ ಬಂದು ಪಟಿಪಿಂ ।
ನಿನ್ನಧಿಪನ ಮುಂದಿರಕ್ಕೆ ಕಳಿಸ್ಪವೆನೊಲವಿಂ ॥
ಕನ್ನೆ ನಡೆಯೆಂದು ಸತಿಯಂ ।
ಬೆನ್ನಿಕ್ಕಿ ಬಱಿಕ್ಕನೊರ್ವೊದಲ್ ನಡೆಗೊಂಡೆಂ ॥ ೧೦೭

ಅಂತು ನಡೆಗೊಳಲ್ ಮುಂದೆ

ಜಡಿವ ರವಂಗಳಿಂ ಸೆಳೆದ ಕೈದುಗಳಿಂ ಕರದೀಪಕೊಂಟಿಯಿಂ ।
ಬೊಡನೆಯು ವೀರರಿಂ ಪೊಡೆವ ಜೇಗಟೆಯಿಂ ಕಡುಕೆಯ್ವ ಡಾಡೆಯು ॥
ಗ್ಗಡಣೆಗಳಿಂ ಮಹಾಧ್ವನಿಯು ಕೊಂಬುಗಳಿಂ ಭಯಮಂ ನೆಗಟ್ಟುತ ।
ರ್ದೆಡೆಯೊಳೆ ಮುಂದೆ ಸಂದಣಿಸಿದರ್ ಪುರ್ಗರಕ್ಷಕರರ್ಧರಾತ್ರಿಯೊಳ್ ॥ ೧೦೮

ಅಂತು ಘೋರಾಕಾರನ ಕಾರಿರುಳೊಳ್ ಘೋರೆನೆ ಬಗ್ಗ ತಳುವಿರಬ್ಬರಮುಂ ಕೇಳ್ದು,

ಮೃಗಕಾಬಂ ಮಿಗೆ ಕಾದೊಡ್ ।
ಲಗಜರ್ದಿತಕ್ಕಂಜುವಂತೆ ತದ್ರಾತ್ರಿಯೊಳು ॥
ಮೃಗಕಾಬನೇತ್ರೆ ಬೆಚ್ಚಿದ ।
ಳಗಣಿತಪ್ರರರಕ್ಷಕರ್ಕಳಬ್ಬರಕಾಗಳ್ ॥ ೧೧೩

ಅಂತಾಕೆಯುಂಜಿಕೆಯುಂ ಕಂಡಾಂ ಸ್ತ್ರೀಗದಿಲ್ಲಿಗೊಂದುಪಾಯಮನುಂ ಬಗೆಯಲೆಂದಾನಾಕೆಯೊಳಿಂತೆಂದೆಂ:—

ಉರಗಂ ಪಿಡಿನೋಜೆಯನನು ।
ಕರಿಸಿ ಬಲಿಲ್ದಂತಿ ಪಜೆಯ ಮುಂರೆಮುನ್ನೊಳ್ ನು ॥
ಮುರಣಾಕಾರವೊಳಿರ್ಪಂ ।
ಪರವಶನಾದಂತಿರೊಳಗಿಮುಸಿರ್ಗೆಗೆದೀಗಳ್ ॥ ೧೧೪

ಎಂದವಳ್ಗೆ ಪೇಳ್ದು

ನೊರೆ ಬಾಯೊಳ್ ಸುತ್ತಿ ಕಣ್ಗಳ್ ಮುಗಿದುಸಿರೆನಿಸುಂ ಭೇದಿಸಲ್ಬಾರದಂತು। ಬ್ಬರಿಸಿಲ್ ಬಿಣ್ಪಂ ಬಸಿಗೊರ್ಗಣುಜ್ಜಿಗಿ ತನು ಬಲಿಲ್ದಂತಿರಿರ್ದೊಂದು ವೇಷಾಂ ॥ ತರವುಂ ಕೈಕೊಂಡು ನೋಲ್ಪಿಗರ್ಕಟ ಭುಜಗವಪ್ಯಾಂಗನಾಗಿದರ್ನೆಂಬಂ । ತಿರಲಿರ್ದೆಂ ರಾತ್ರಿಯೊಳ್ ಕೋಕಿಸೆ ಸತಿ ಕೆಲದೊಳ್ ಧೂರ್ತಿನಿಂ ರಾಜಪ್ರತಾ ॥ ೧೧೫

ಅಂತಿರ್ದ ಸನುಯನೊಳ್ ತಳವಾಜಿರ್ ಮುಟ್ಟಿವಂದು ಕುಸುಮಕೋಮಳೆಯಪ್ಪ ಕೋಮಳೆಯ ಕೆಲದೊಳಿರ್ದ ಪೆಟ್ಟಿಗೆಯಂ ಬಿಚ್ಚಿರ್ದೆನ್ನಂ ಕಂಡಿದೇನೆಂಬುದುಂ,

ಕಡುವೆಂಪೊಪ್ಪುವ ರಾಜಧಾನಿಯಿವಜೊಳ್ ಪದ್ವಿದ್ಯೆಯಿಂದರ್ಥಮುಂ ।
ಪಡೆನೊಂದಾಸೆಯೊಳಿಲ್ಲಿ ಬಿಟ್ಟುರಲದೊಂದುಗ್ರೋರಗಂ ಬಲ್ಲಿನಿಂ ॥
ಪಿಡಿಯಲ್ ನಾಯಕನಿಂತು ತೀರ್ದನಸುನಂ ಕಾಣುಣ್ಬುದಿಂದಣ್ಣ ಗಾ ।
ರುಡಮಂ ಬಲ್ಲನೆಕೆತ್ತಿವೆಂದು ಕೆತೆದಳ್ ತತ್ಕಾಂತೆ ಭೂಭಾಗದೊಳ್ ॥ ೧೧೬

ಅಂತು ಸೊರಬ್ಬಿ ಕಾಂತೆಯನಾರ್ತ್ತರವಮುಂ ಸಂತೈಸಿಯವರೊಳ್

ಮಿಗೆ ಗರುಡನಮಂತ್ರಯಂ ಪಿಡಿ ।
ದಗಣಿತಪಂಚಾಕ್ಷರಾದಿಮಂತ್ರಂಗಳನಾ ॥
ವಗನೋದಿ ಯಂತ್ರ ಮುಂ ಬರೆ ।
ದು ಗಾರುಡಂ ಕೊಳ್ಳದೆಂದು ತೊಲಗಿದನೊರ್ವಂ ॥ ೧೧೩

ಈತೆಱದಿಂ ಗಾರುಡಿಸಲ್ ।
ಚೈತನ್ಯಂ ತೋಱದಂತು ಬೆಮೆತಿರೆ ಕಂಡು ॥
ತಾತಳವಾಱಿರ್ ಬೇಸ ।
ತ್ತೀತಂಗಿದು ಕಾಲವೆಂದು ಸತ್ತಗಿಂತೆಂದರ್ ॥ ೧೧೪

ಉದಯಮದೊಳೀತನ ಸಂಸ್ಕೃ ।
ರದ ದೆಸೆಗಿಂಧನವನೀವೆವೆಂದವರಲ್ಲಿಂ ॥
ದೊರದುತ್ತಿ ಪ್ರೋದರಿತ್ತಲ್ ।
ಪಗುಳದಿನಾನೆಟ್ಟಿ ಪ್ರೋದೆನಲ್ಲಿಂದಾಗಳ್ ॥ ೧೧೫

ಅಲ್ಲಿಂ ತಳರ್ದಾಂ ಕುಲಪಾಲಕಿವೆರಸು ಧನಮಿತ್ರನ ಮನೆಗೆಯ್ದಿ ಪಡಿಯುಂ ತೆಱೆಯಿಸಿ ಪ್ರಗಲೊಡಂ .

ಭೋಂಕೆನಲಾಗಳಾಕೆ ಸಹಿತಾಂಬರಲಾಧನಮಿತ್ರನೊರ್ವನದರ್ ।
ಸಂಕಿಸಿದಂ ಮಗುಳ್ದು ಮುದಮುಂ ತಳೆದಂ ಕಡುಲಜ್ಜೆ ತನ್ನೊಳೊ ॥
ಲ್ದಂಕುರಿಸಲ್ ಕರಂ ತಲೆಯನೊಯ್ಯನೆ ಬಾಗಿದನಾಪ್ತ ಬಂಧುವೀ ।
ತಂ ಕೆಳೆಯಂ ದಿಟಂ ಪಿಱಿವನಲ್ತೆನುತೆನ್ನನೊಸಲ್ಪು ನೋಡಿದಂ ॥ ೧೧೬

ಅಂತಾತಂ ಪಲವ್ರಭಾನಂಬೆರಸೆನ್ನಂ ನೋಡಲೊಡಂ

ನಿನ್ನರಸಿಯಾಕೆಯಾಕೆಯ ।
ರನ್ನದ ತೊಡವುಗಳ ಪೆಟ್ಟಿಯಿದೆಕೊಳ್ಳಿಂದು ॥
ಪ್ಪನ್ನಮತಿಗಿತ್ತಿ ನೀಯಲ್ ।
ತನ್ನುತ್ಸಾಹದೊಳಿವಂ ಮಗುಳ್ದಿಂತೆಂದಂ ॥ ೧೧೭

ನಿನಗೇನಂ ಮಾಡ್ಪೆನೀಸೊತ್ತೆ ಸಗಿನುಚಿತಕಾರ್ಯಕ್ಕೆ ಭಾವಿಪ್ಪೊಡಿಂತೀ ।
ತನು ಜೀವಂ ನಿನ್ನವಾವೆಂದಱಿವಿಸಿತೆನಿಸು ಸ್ತೋತ್ರದಿಂ ಭಕ್ತಿಯಿಂ ವಂ ॥
ದನೆಯುಂ ಮಾಣ್ಬಿಂಗವೆಂಬಂತತಿಲಲಿತನೆನಿಸಾರಿಯುಂ ತನ್ನ ದೀಜೀ ।

ವನಬೊಳ್ ಕೂರ್ತರ್ಥ್ಯರೀವೊಂದಣಕವನನಿಯೊಳ್ ಮಾಪ್ಪಿವೋಲ್ ತೋ
ಪ್ರುದೆನ್ನೊಳ್ ॥ ೧೦೨

ಮತ್ತ ಗಜಗಮನೆ ತಡೆವಳಿ ।
ನುತ್ತಸು ತನುವಿಂದಗಲ್ದುದೀಪಧುವಂ ತಂ ॥
ವಿತ್ತುದಱಿಂ ತನು ಜೀವಂ ।
ವಿತ್ತಂ ನೀನಿತ್ತ ವಸ್ತುವೆಂಬುದು ಪ್ರಸಿವೋ ॥ ೧೦೩

ಇನಿತಂ ಮಾಪ್ಪಿವರಾರೊ ಕೇಳ್ ಮನುಜರೊಳ್ ಸ್ತ್ರೀರತ್ನವಂ ರತ್ನವಂ
ಧನವಂ ನಿರ್ನಿರವಿಂತು ತಂದು ಪೆಱರೊಳ್ ಪ್ರತ್ಯರ್ಪಣಾಕಾಂಕ್ಷೆಗೆ ॥
ಟ್ಟನಸುಂ ಕೊಟ್ಟಪಲೋಕದೊಳ್ಪ ಪರಲೋಕಶ್ರೀ ನಿತಾಂತಂ ಕರಂ ।
ನಿನಗಪ್ಪಂತಿರೆ ಚಿತ್ತದುತ್ತಮಿಕೆಯುಂ ಕೇಳ್ ಮಿತ್ರಕಲ್ಪದ್ರುಮಾ ॥ ೧೦೪

ಎನ್ನಯ ನುಡಿಯಂ ಕೊಂಡೀ ।
ಕನ್ನೆಯನೊಲ್ದಿತ್ತೆಯೆಂಬುದದು ವಿಕ್ರಯದೋ ॥
ಷನ್ನಿನಗೆ ಬಕುಳೆಯೆಂತೆನೆ ।
ರನ್ನವನಳಗಿತ್ತರೆಂಬ ನಾಣ್ಯಾತಿನವೊಲ್ ॥ ೧೦೫

ವ್ಯರ್ಥಾಳಾಪದೊಳೀಂ ಧನ ।
ಮರ್ಥಂ ಪ್ರಾಣಂ ನಿಜಕ್ಕೆ ನಿನ್ನದು ನಿಜಕಾ ॥
ತೀರ್ಥಂ ನೀಂ ಪದೆಪಿಂ ಮ ।
ತ್ಪ್ರಾರ್ಥನೆಯಿದು ರಕ್ಷಿಸೆಂದು ಚರಣಂಬಿಡಿದಂ ॥ ೧೦೬

ಅಂತಾಧನಮಿತ್ರನೆನ್ನನರ್ಥವಾದದಿಂ ತುಷ್ಟ್ಯವಡಿಸಿ ಕಡೆಯೊಳಿಂತೆಂದಂ—

ಪರಿಕಿಸುವೊಡರ್ಥಪತಿ ಕಡು ।
ಸಿರಿವಂತಂ ಒಡವನಾಂ ನೆಗಟ್ಟಿದ್ದತನ ಮ ॥
ಚ್ಛರದಿಂದಿಲ್ಲಿರ್ದ್ದುದು ತನ ।
ಗೆ ರಕ್ಷಸುತ್ತಿಂದನಶ್ಶಿಯಿಂ ಧನಮಿತ್ರಂ ॥ ೧೦೭

ಎಂದೊಡಾತಂಗಭಯಮುಂ ಕೊಟ್ಟು ಸಂತಮಿಡಲ್ ಮತ್ತಮಿಂತೆಂದಂ—

ಈಕನ್ನಿಕೆಯಂ ತತ್ಪಿತೃ ।
ಲೌಕಿಕವಿಧಿಯಿಂ ವಿವಾಹವಂ ಮಾಡಿದೊಡ ॥

ವ್ಯಾಕುಳದಿಂ ನಿನಗೆಲ್ಲಾ ।
ಲೋಕದೊಳಿಸೆಗುಂ ಜಸಂ ಛಲಂ ನಿಜವಂಶಂ ॥ ೧೮೪

ಎಂದೊಡಾಂ ಕುಬೇರದತ್ತನಿಂ ನಿನಗೆ ಕನ್ನೆಯುಂ ಕೊಡಿಸುವ್ರಪಾಯ ಮುಂ ಮಾಳ್ಪೆಂ. ಅನ್ನೆಗಮಿಲ್ಲಿಕುಮಾರಿಯುಂ ನಿವಾಸಕ್ಕೆ ಕಳಪಿವಪೆ"ನೆಂ ದಾನುಂ ಧನಮಿತ್ರನುಮವಳಂ ಕುಬೇರದತ್ತನ ಮನೆಯುಂ ಪ್ರಗಿಸೆ

ಎನಸುಂ ಕುಬೇರದತ್ತನ ।
ಮನೆಯರ್ಥಮನೊಡೆದ ಮಡಕೆ ಪೊಱಗಾಗೆ ತದಂ ॥
ಗನೆ ಪೊಕ್ಕ ಬಾಗಿಲೊಳ್ ಪೊ ।
ಕ್ಕನಿತಂ ಕಳಿರ್ದಂದು ತಿಪ್ಪೆಯೊಳ್ ಪೂಟ್ಟಿದ್ದಟ್ಟಿಂ ॥ ೧೮೫

ಅಂತದೆಲ್ಲಸಂ ಪ್ರಟ್ಟಿಾವಿರ್ದರುಂ ಮಗುಟ್ಟಿದ ಬರ್ಪಾಗಳೆ ಮುಂದೆ

ಸ್ಫೂಳಾಗಾರಂಗಳಂ ನಿರ್ಗ"ವಂದೊಳೆ ಕಿಟ್ಟೆತ್ತಿ ಮೆಯ್ಯಲ್ಲಿಯಿಂ ಕಿ ।
ಟ್ಟಾಳಾನಸ್ತಂಭಮುಂ ಮೇಣ್ ಮುದದೊಡವು ಮಿಗಲ್ ಕೊರ್ಬಿ ಕೋಟ್ಯಾಧಿ ರಾದ್ರಾ ॥ ಛೀಳಂಬೆತ್ತೊಂದು ಮೂವ್ವರ್ಗ್ಗಜಪತಿ ರಜನೀವುಧ್ಯದೊಳ್ ಬರ್ಪುದಂ ಕಂ । ಡಾಳಾಪಂಬೋಱಿ ಭೈಭೈಪಡಿಪಡಿಯೆನುತಾರ್ದೆಱುದೆಂ ಸಾರ್ವಭೌಮಾ ॥ ೧೮೬

ಅಂತು ರಾಜಾಲಯವೆಂಂ ಪೊಱಮಟ್ಟು ಮುಂಡಾಸನದಿಂ ಮುದಮುಕ್ಕಿ ಬರ್ಪ ಆನೆಯಂ ವಾಗಂಕುಶಪ್ರಘಾತದಿಂ ಮಟ್ಟಕ್ಕೆ ತಂದು ಮುಸ್ತಕಕ್ಕೆ ಬಂದು ಪಿಂದೆ ಧನಮಿತ್ರನನೇಱಿಸಿ ವಜ್ರನಖಾಂಕುಶದಿಂದನ್ರಂಕಿ ಬಿಟ್ಟಕ್ಕುವ ಸಮಯದೊಳ್ ತಳವಾಱರ್ ಬಂದು ಮುತ್ತೆ

ರದನಾಗ್ರದಿಂ ಕೆಲಂಬರ ।
ನೊದೆಯಿಸಿ ವೆಱ್ಟಿಸಿ ಪಲಂಬರಂ ಕರಸಂಘಾ ॥
ತದಿನನಿಬರನಾಗಳೆ ಯಮು ।
ಸದನಕ್ಕೊಪ್ಪಿಸಿದೆನಿರ್ದರಳವಱಿದೋಡಲ್ ॥ ೧೮೭

ಅಂತು ಮಿಕ್ಕವರೆಲ್ಲರರಮನೆಯಾನೆ ಮದಮುರ್ಕಿ ಕೊಲುತಿರ್ಪ್ರದೆಂದೋಡಿ ಪೋಗೆ ಬಱಿಯಂ

ಆಳಿನಿಸುವರ್ಥಪತಿಯು ನಿ ।
ಜಾಲಯಮುಂ ತದ್ಗಜೇಂದ್ರನಿಂ ನುರ್ಗಿಸಿ ಸ ॥

ಲ್ಲೀಲೆಯಿನಲ್ಲಿಂ ತಳರ್ದು ವಿ ।
ತಲವೆನಿಸ್ಪೊಂದು ಚಿಲ್ವು ಕುಜವಂ ಕಂಜೆಂ ॥ ೧೩೨

ಅಂತಾಕುಜಕ್ಕಾನೆಯಂ ನೂಂಕಿ ಅದಱ ಮೇಲ್ಗೊಂಬಂ ಪಿಡಿದಾನೆಯುಂ ಬಿಡಲದತ್ತಲ್ಪೋದುದು. ಆನುಂ ಧನವಿಮಿತ್ರನುಂ ಬಟ್ಟಾಕ್ಕಾವರದಿಂದಿಪ್ಪವನ್ನೆಗಂ

ಅಳಿಗಳ್ಳ ಪಾಡುವಿನಂ ಸರೋಜಿನಿ ನಗುತ್ತುಂ ನೋಲ್ಪಿನಿಂ ಕೂಡೆ ಪಾಂ
ಸುಳಿಯರ್ ಬೆಚ್ಚುವಿನಂ ರಥಾಂಗಯುಗಳಂ ಪೂರೈಪಿನಂ ತೆಂಬೆರಲ್ ॥
ಕಳಿವ್ರಾವಂ ಬಲಿಗೆಯ್ವಿನಂ ರವಿನಟಂ ಬಂದಾಡುವಾಗಳ್ ಸುಪಾ ।
ಟಲವಸ್ತ್ರಂ ತೆರೆಯಾದವೋಲ್ ಮೆಱೆದುದಾಪೂರ್ವಾಶೆ ನುಣ್ಗೆಂಪಿನಿಂ ॥

ನಗೆಯಂ ಪಂಕಜವಕ್ತ್ರದೊಳ್ ದುಗುಡಮಂ ನೈದಿಲ್ಗಳೊಳ್ ಲಲ್ಲೆಯ ಪ್ಪಗೆಯಂ ಕೋಕಯುಗಂಗಳೊಳ್ ಪದೆಪಿನಿಂ ಕಣ್ಬೀನೆಯುಂ ಗೂಗೆಯೊಳ್ ಸೊಗಸಂ ದಿಕ್ತಟದೊಳ್ ಪೊದಲ್ದಿ ಭಯಮುಂ ಜಾರಾಂಗನಾನೀಕದೊಳ್ ।
ವಿುಗೆ ಮಾಡುತ್ತುದಯಾದ್ರಿಯೊಳ್ ನೆಲಸಿದಂ ಪಂಕೇಜಿನೀವಲ್ಲಭಂ ॥

ಅಮೃತಕರಸಂಗಮಂ ಪೂ ।
ಡಿ ಮುಗುಳ್ದೆಂತುಷ್ಣಕರಕೆ ಮೆಯ್ಯೊಡ್ಡುವೆನೆಂ ॥
ಬಮೆಳನಸುಕಾನೂರತೆಯಿಂ ।
ಕುಮುದಿನಿ ತಲೆವಾಗಿ ದುಗುಡಮಂ ತಳೆದಿರ್ದಳ್ ॥ ೧೩೪

ಅಂತು ಸೂರ್ಯೋದಯವಾಗಲಾಂ ಮನೆಗೆ ಪೋದೆಂ. ಅತ್ತಲ್

ಎನಸುಂ ಕುಬೇರದತ್ತನು ।
ನುನುತಾಪದಿನರ್ಥಪತಿಯುಮಿರ್ವರ್ ತಂತ ॥
ಮ್ಮ ನೀಕೇತನಂಗಳಂ ನೋ ।
ಡಿ ನೋಡಿ ಕಡುನೊಂದು ಚಿಂತೆಯೊಳ್ ಮುಳುಗಿದರ್ದರ್ ॥ ೧೩೬

ಅಂತವರಿರ್ವರ್ ತಂತಮ್ಮ ಮನೆಯಾದವಸ್ಥೆಯುಂ ಕಂಡವಳಕುನವಾದುದೆಂದಾಲಗ್ನವುಂ ಬಿಟ್ಟು ಮತೊಂದು ಲಗ್ನದೊಳ್ ಮದುವೆಯುಂ ಮಾಪ್ಪೆವೆಂದೊಂದು ತಿಂಗಳ್ ಅರ್ಥಪತಿಯ ಮದುವೆ ನಿಲಲಾನಿತ್ತಲ್,

ಹುಸಿಯಂ ವಂಚನೆಯುಂ ನಿರರ್ಥಕವನತ್ಯುಚ್ಚಾರ್ಯಮಂ ನನ್ಯಸಾ ।
ಹಸವಂ ಪೂರ್ಣದುರಾಶೆಯಂ ಸಕಲಮಿಥ್ಯಾವಾಸವಂ ಕೂಡೆ ತಂ ॥

ತ್ರಿಸಿದಂತೊಸ್ಪವ ಚರ್ಮಭಸ್ತ್ರಿಕೆಯನೊಂದಂ ಚೆಂದಮುಸ್ಪಂತು ನಿ ॥
ರ್ಮಿಸಿದೆಂ ಲಕ್ಷಸುವರ್ಣಮುಂ ಕಱಿವುದೆಂಬೀಸುದ್ದಿಯಂ ಬಿತ್ತಿದೆಂ ॥ ೧೩೭

ಅಂತೊಂದು ತೊಗಲ ಚೀಲವಂ ನಿರ್ಮಿಸಿ ಧನಮಿತ್ರನಂ ಕರೆದು ನೀನೀ ಚಂಪಾವತಿಯ ಸಮೀಪಕ್ಕೆ ಪೋಗಿ ಚರ್ಮಭಸ್ತ್ರಿಕೆ ಬಂದ ಕ್ರಮವುಂ ತನ್ನ ಮಾಹಾತ್ಮ್ಯವುಂ ನಿನ್ನ ದರಿದ್ರತೆಯುಂ ಪೇಳ್ದಿ ಬಾಯಿಂದೊಡಾ ನಿಂತೆಂದು ಪೇಳ್ದೆಂ

ಅನಿಶಂ ದುಃಖನನೇಕಗೋಷ್ಠಿಯೊಳತಿದ್ವೇಷಂ ಮಹಾಪಾಪದೊಳ್ ।
ಮನವತ್ಯಾಶೆ ಕರಂ ಕ್ಷುಧಾಭಯವನಾಚಾರಂ ಮತಿಭ್ರಾಂತಿ ಜೀ ॥
ವನಚಿಂತಾತತಿ ನಿಚ್ಚ ಪೆರ್ಚಿದ ದರಿದ್ರಕ್ಕೆಯ್ದಿ ಬೇಸತ್ತು ಕಾ ।
ನನದೊಳ್ ಬಂದ ಶರೀರವಂ ತೊರೆವೆನೆಂಬುದ್ಯೋಗದಿಂದೆಯ್ದಿದೆಂ ॥ ೧೩೮

ದಾರಿದ್ರ್ಯಂ ಪೆಚ್ಚಿದ ಸಂ ।
ಸಾರಮಿದೇಕಂದು ಚಿತ್ತದುನ್ಮಲಿದಿಂ ಕಾಂ ॥
ತಾರಕ್ಕೆ ಪೋಗಿ ನಿಜತರ ।
ವಾರಿಯೊಳೊಲ್ದೆನ್ನ ಶಿರವನಾನಱಿವಾಗಳ್ ॥ ೧೩೯

ನಿಡುಜಡೆ ಕರ್ಣದೊಳ್ ಪಳಕಿನೊಸ್ಪವ ಕಾಂಡಲವುಂಗಬೊಳ್ ನಯಂ ।
ಬಡೆದ ವಿಭೂತಿ ಮೈಲ್ಗೆ ತುಳುಂಕುವ ಮುದ್ದುವೊಗಂ ಕರಾಗ್ರದೊಳ್ ॥
ಪಿಡಿದ ವಿಪಂಚಿ ತನ್ನೊಳತ್ತಿಕಾತುಕಮಾಗಿರೆ ಭೋಂಕೆನಲ್ಲಿಗೊ ।
ಳ್ಪಡರ್ದಿರೆ* ಬಂದನೊರ್ವ ನವಪಾಶುಪತಾಸ್ತ್ರಕಧಾರಿತಾಪಸಂ ॥ ೧೪೦

ಅಂತು ಬಂದಾತಪ್ರೋಧನನೆನ್ನಂ ಕಂಡು
ಈಸಾಹಸವುಂ ಮಾಡಲ ।
ಬೇಸುಂ ಮನವೇಕೆ ರಂಜಿಪಾತ್ಮದ್ರೋಹಾ ॥
ಭ್ಯಾಸವುನೆಸಗುವೆ ಪೇಳ್ವಾ ।
ಶ್ವಾಸಿಸುವೆಂ ಪದೆದು ನಿನ್ನನೆಲೆ ದುರ್ಜೋಧಾ ॥ ೧೪೧

ಎಂದಾತಪ್ರೋಧನಂ ಪೇಳ್ತೊಡಾನಿಂತೆಂದೆಂ:—

ಅತಿದಾರಿದ್ರ್ಯಂ ಮಾನ ।
ಚ್ಯುತಿ ದುಃಖಂ ಪೆರ್ಚಲೆನ್ನೊಳೀ ಜೀವನದು ॥

ಗರ್ತಿಯಿಂ ಮರಣಂ ಸುಖವೆಂ ।
ದತಿವೇಗದಿನಿಲ್ಲಿಗೆಯ್ದಿ ತೀರ್ದಪೆನೀಗಳ್ ॥ ೧೪೨

ಎಂಬುದುಂ;

ಬಿಡು ಮರುಳೆ ಮರಣವಾರ್ತೆಯ ।
ನೊಡವೆಯನೆಂತಾನುವೊಂದುಪಾಯದಿನಿನಿತಂ ॥
ಪಡೆಯಲ್ಬಕ್ಕುಂ ಮರಣಂ ।
ಒಡೆಯಲ್ಬಕ್ಕುಮೆ ನೆಗಲ್ದುಪಾಯಕ್ರಮದಿಂ ॥ ೧೪೩

ಎಂಬುದುಮಾನಿಂತೆಂದೆಂ—

ಭಾವಿಸೆ ದರಿದ್ರನನಿಶಂ ।
ಸೇವಕನತಿಮೂರ್ಖನಪ್ರವಾಸಿ ಮಹಾರೋ ॥
ಗಾವಿಷ್ಟನೆಂಬ ಮನುಜಂ ।
ಜೀವನ್ಮೃತನಲ್ತೆ ಬೇವ ನೀವಱಿಯದುದೇ ॥ ೧೪೪

ಎಂಬುದುಮಾತಪ್ರೋಧನನೆನಗೆ ಕರುಣಿಸಿ

ಅಕ್ಷಯನಿಧಿಯೆನಲೊಪ್ಪಿರೆ ।
ಲಕ್ಷಸುವರ್ಣಪ್ರವಾಹಮುಂ ಕಱೆದ್ರದಿದಂ ॥
ರಕ್ಷಿಸಿಕೊಳ್ಳಿಂದಿತ್ತ ಮು ।
ಮುಕ್ಷುವರಂ ಚರ್ಮಭಸ್ತ್ರಕಾಖ್ಯಮನೊಂದಂ ॥ ೧೪೫

ಕುಱೆನನ್ಯೆರ್ಗಾಂ ತಪದಿಂ ।
ಪಡೆದೆಂ ನಾಂ ಪೂರ್ವಕಾಮದೇಶದೊಳೊಲವಿಂ ॥
ಮೃಡನ ವರದಿಂದೆ ನಿನ್ನೀ ।
ಒಡತನಮುಂ ಕಂಡು ಕೊಟ್ಟೆನಿಲ್ಲದೊಡೀಯೆಂ ॥ ೧೪೬

ಎಂದು ಲಕ್ಷಸುವರ್ಣಮುಂ ಕಱೆವ ಚರ್ಮಭಸ್ತ್ರಕೆಯುಂ ಕೊಟ್ಟು ಮತ್ತಮಿಂತೆಂದಂ—

ಇದಱ ವಿಧಾನಂ ವೇಶ್ಯಾ ।
ಸುದತಿಯರ್ಗೆ* ವಣಿಗ್ವರರ್ಗೆ ಕಱೆವುದು ಮಿಕ್ಕ ॥
ರ್ಗಿದು ಕಾಣಿಯರ್ಥವಂ ಕಱೆ ।
ಯೆದೆಂದು ಮುನಿನಾಥನುಸಿದುರ್* ಮೆತ್ತಿಂತೆಂದಂ ॥ ೧೪೭

ಮುನ್ನಾವನರ್ಥಪಂ ಮುಳಿ ।
ದನ್ನೆಯದಿಂ ಕೊಂಡೊಡವರೊಳಾಧನಮಂ ಪೆಂ ॥
ಪಿಂ ನಯದಿಂದೀವ್ರದು ಮಿಗೆ ।
ತನ್ನರ್ಥಮನೀವ್ರದಾಗಳಧನಗೊಲಪಿಂ ॥ ೧೪೪

ಎಂದು ಪೇಳ್ದ
ಆತಾಪಸಂ ಒಬ್ಬಿಕ್ಕಂ ।
ಪಾತಾಳಸ್ವರ್ಗಭೋಗಮಂ ಭೋಗಿಸಲೆಂ ॥
ದಾತಂ ಬಿಲದೊಳಗಿಂದಂ ।
ಭೂತಳಪತಿ ಕೇಳ್ ಪ್ರಸಾದದಿಂದಿನ್ನೊಂದಂ ॥ ೧೪೫

ಅದೇನೆಂದರಸಂ ಕೇಳ್ವುದುಂ,
ವಸುಧೇಶ ಪರ್ಮರತ್ನದ ।
ದೆಸೆಯಿಂದೀನರಪ್ರಾಂತನೊಳ್ ಪದೆದಿಂ ಜೀ ॥
ವಿಸಿದಪೆನದಂ ಕ್ಷೇಮಂ ।
ನಿಸದಂ ನಿನ್ಮಡಿಯದೆಂದು ಪೇಟ್ ಪೋಗೆಂದೆಂ ॥ ೧೪೬

ಎಂದೊಡಾತನುಮಂತೆ ಪೋಗಿ
ಜನಪತಿಗೆ ತತ್ಪ್ರಪಂಚಮು ।
ನನಿತಂ ಧನಮಿತ್ರನೊಲ್ದು ಪೇಟಿಲ್ಕೇಳ್ದ ॥
ತನದರ್ಕ್ ಕೂರ್ತು ಕರುಣಿಸಿ ।
ನಿನಗತಿಸಖಮಪ್ಪ ತೆಱದಿನಿರು ಪೋಗೆಂದಂ ॥

ಅಂತರಸನಿಂ ಧನಮಿತ್ರಂ ಬೀಜಕ್ಕೊಂಡು ಬಂದು ಕಾರ್ಯದ ಹದನನನ್ನೊಳ್ ಪೇಳಿಲನಂತರಂ
ಭರದಿಂ ವಿಮರ್ದಕನನಾ ।
ದರದಿಂದೊಲ್ದರ್ಥಪತಿಯನೋಲಗಿಸೆಂದಿ ॥
ಲ್ಲಿರಿಸಿದೆನುತ್ಸವದಿಂ ನಿ ।
ರ್ಭರಬಂಧುರಮಂತ್ರಭಿನ್ನವಾಗದ ತೆಱದಿಂ ॥ ೧೪೭

ಅಂತೆನಗೆ ಜಾಜಿಂ ಮಿತ್ರನಾದ ವಿಮರ್ದಕನರ್ಥಪತಿಯನೋಲಗಿಸಿದುರ್ ಧನಮಿತ್ರನೊಳ್ ಟಕ್ಕಿನ ಜಗಳವನಂದೆಂದಿಂಗೆಸಗೆಂದು ಪೇಳ್ದಿ ಬಜಿಯಂ

ಸಕಳನಿಧೀಧಿಯೊಳ್ ಲು ।
ಬ್ಧಕನಿಕರದ ಮನೆಯ ಧನವನನಿತಂ ಮುಲಮು ॥
ಲ್ಲಕಕೇಷನಾಗಿ ನಾಂ ನಿ ।
ಚ್ಚ್ವಕನ್ನಗಳನಿಕ್ಕಿ ಕಳಲೆಂಡಚರ್ಚಿದೆನರಸಾ ॥ ೧೫೩

ಅದೆಂತೆನೆ–

ಮನೆಯುರಕಿಲ್ಲರುಂಕೊಱಿಗಿ ನಿದ್ರೆಯು ಸೊಕ್ಕೆಡೆಗೊಂಡರೆಂಬುದಂ।
ಮನದನುರಾಗದಿಂದಱಿತು ಭಿತ್ತಿಗೆ ಸೂತ್ರನುನಿಕ್ಕಿ ನೋಡಿ ಭಾ ॥
ಜನನವವಸ್ತ್ರವೀಯೆಜೆಯೊಳಸ್ಪರ್ಧವು ತಪ್ಪದೆನುತ್ತೆ ಪನ್ನಗಾ ।
ನನಬೊಳೆ ಕನ್ನವುಂ ಸವೆವು ಲುಬ್ಧಕರರ್ಥವನೆಯ್ದೆ ತೀರ್ಚಿದೆಂ ॥ ೧೫೪

ಅಂತು ಕಳ್ದುಚರ್ಮಭಸ್ತ್ರಕ್ಕೆಕಱೆ ಗ್ರದೆಂಬ ನೆವದಿಂ ಬೇಪ್ಪಿರ್ದವನಾ
ಚರ್ಚಿಸಿ ಬೀಸುಂಗೆಯ್ದು ಧನಮಿತ್ರನುವಾನುಂ ಸುಖದಿನಿರೆ

ಎನ್ನೊಳ್ ಬೇಪ್ಪಿನಿತರ್ಥವ ।
ನುನ್ನತಿಯಿಂ ಪಡೆದು ಧನಿಕರಾದರ್ಥಿಗಳಿಂ ॥
ಖಿನ್ನವುಖರಾಗಿ ಬಂದೆರೆ ।
ವನ್ನರೆನಲೆ ಪುರದೊಳಿಸಗಿದೆಂ ಲುಬ್ಧಕರಂ ॥ ೧೫೫

ಅಂತು ಪುರದ ಲುಬ್ಧಕರ ಮನೆಯಂ ಕವಱೊಂದು ದಿನಮಾಕಳ್ದ
ಪಟ್ಟಣದ ವಿಭವನಮಂ ನೋಡಲೆಂದು ಧನಮಿತ್ರಂಬೆರಸಂಗಡಿಗೇರಿಯೊಳ್
ಬಪರ್ಗಳ್

ಕಂತಾವಿವುರ್ದಕಂ ಮಿಗೆ ।
ಮಿಂಡಿನೊಳಿರ್ದರ್ಥಪತಿಯು ಪಕ್ಷದೊಳವನು ॥
ದ್ದಂಡತೆಯಿಂ ಧನಮಿತ್ರನ ।
ನಂಡಲೆಯುತ್ತಿರದೆ ಬೈದನೆಲ್ಲರ್ ಕೇಳಲ್ ॥ ೧೫೬

ಅದೆಂತೆನೆ–

ಅಕಟ ಕುಬೇರದತ್ತನ ಮಗಳ್ಗನಿತಾಟಿಸಿ ಕೆಟ್ಟು ಪೋಗದಿರ ।
ವಿಕಳಮನಸ್ಕನಾಗಿ ಧನಮಿತ್ರ ನೆಗಚೆಯ ನಿನ್ನ ಚರ್ಮಭ ॥
ಸ್ತ್ರಕೆಯತಿಗರ್ವಮಂ ನಿಲಿಸುವೆಂ ಮುಳಿದೊಂದಿರುಳಿರ್ದಿನಾದೊಡಂ ।
ಬಿಕೆ ನಿನಗಾಗಲೆಂದುಸಿರ್ವೆನಲ್ತಿದು ಸತ್ಯಮಿನಲ್ಕೆ ಮಾಡುವೆಂ॥ ೧೫೭

ಎಂದಾವಿಮರ್ದಕಂ ಧನಮಿತ್ರನಂ ಜರೆದೊಡಾಧನಮಿತ್ರನದಿ ಕೋಪ
ದೊಳನ್ಯಾಯದೊಳಿನ್ನಂ ಬೈದಪನೆಂದಿಲ್ಲಿಗೆ ಪೇಳ್ದೊಡಾವಿಮರ್ದಕಂ ಮ
ಗುಳ್ದಿಂತೆಂದಂ---

ಅನ್ಯಾಯಮುಲ್ತ್ತ ಮತ್ಪತಿ ।
ಮಾನ್ಯಂ ಮತ್ತಾತನೊಲ್ದು ಕೂಡುವ ಸತಿಯಂ ॥
ನ್ಯಂ ನ್ಯಾಯವಿದನರ್ಪೋಲ್ ತ ।
ತ್ಕನ್ಯಾಯಂ ಕೂರ್ತು ಮದುವೆಯಪ್ಪಿ ಗಡೀಗಳ್ ॥ ೧೫೪

ಎಂದು ವಿಮರ್ದಕಂ ಧಿಕ್ಕರಿಸಿದೊಡು ಕೇಳ್ದು ಕೇಳದಂತಾವಿರ್ಬರುಂ
ಪ್ರೇಪಾಗಳಂತಂಗಡಿಗೇರಿಯೊಳ್ ಮುಂಟೆ

ನಯನಸುಖಾವಹಂ ದಲಿನಿಪಂಗಡಿವೇರಿಯೊಳಲ್ಲಿಗಲ್ಲಿ ವಿ ।
ಸ್ಮಯವನೊಡರ್ಚುವಗ್ಗಳದ ಗಾಯಕಪಾಠಕಸತ್ಕವೀಂದ್ರಸಂ ॥
ಚಯನುಮನೊಪ್ಪಲ್ದು ನೋಡುತೊಲವಿಂ ಬರಲೊಪ್ಪುವ ಪಂಚವೀರಗೋ ॥
ಷ್ಠಿಯೊಳನುರಾಗದಿಂ ಪದೆದು ನೆರ್ತಿಸೆ ತಿರ್ದಳದೊರ್ವಳುವಿಪಾ ॥ ೧೫೫

ಮನಸಿಜನ ಮಂತ್ರದೇವತೆ ।
ಜನಚೇತಸ್ಸತ್ವವಿತ್ತಹಾರಿಣಿ ವಿಕಸ ॥
ದ್ವನಜಮುಖಿ ಕಾಮುಮಂಜರಿ ।
ಯನುಜೆ ಕಳಾವಂತೆ ರಾಗನುಂಜರಿಯೆಂಬಳ್ ॥ ೧೫೬

ವನಿತೆಯೊಳೊಪ್ಪುಗುಂ ಕಮಲಕುಂತಳಮದ್ರಿಸಮೋಷ್ಠಿಯುಂಬರಾ ।
ನನನಿಭಕುಂಭದಂತವಸನಂ ಮಣಿಸತ್ಕುಚಮಿಂದುಮಧ್ಯಮು ॥
ಜ್ಜ್ವನಿಭನಿತಂಬಮುದಭ್ರಮರಪಾದಮಲಕ್ತರಸಪ್ರ ಕಾಶವೋ ।
ಹನರುಚಿಧಾತುನೃತ್ತತನುಕರ್ಕಶದಿಂದೆಸೆದಿರ್ದ ಪಾಂಗಿನಿಂ ॥ ೧೫೭

ಅದಲ್ಲದೆಯುಂ,

ಶಿರದಿಂದಂ ಪ್ರೊಸತಾಗೆ ಹಸ್ತವಲನಂ ಚೆಲ್ವಾಗೆ ಕಣ್ಣೆಲ್ಲಮ ।
ಚ್ಚರಿಯೆಂಬಂತಿರೆ ಸ್ಫುರ್ಜಗುರ್ಬಿಸೆ ಪದನ್ಯಾಸಂ ರಸಾವಾಸಮಾ ॥
ಗಿರೆ ನಾನಾಕರಣಂ ಕರಂ ಮೆಱೆಯೆ ಪೆಂಪಿಂದಂಗಹಾರಂ ಪೊದ ।
ಬ್ದಿರೆ ನೃತ್ಯಾಭಿನಯಕ್ಕೆ ದೇಂ ಮೆಱೆದಳೋ ತತ್ಕಾಲತೆ ರಂಗಾಗ್ರದೊಳ್ ॥

ಮನದನುರಾಗಮಂ ಮುಖವಿಳಾಸಬೊಳಾಸ್ಯವಿಳಾಸಮಂ ವಿಲೋ ।
ಚನಯುಗದೊಳ್ ಸಿತಾಕ್ಷಿಗಳವಿಭ್ರಮಮಂ ಪಡೆಪಿಂ ಶಿರೋಜಕಂ ॥
ಪನದೊಳೆ ತಚ್ಛಿರೋವಿಧವನೊಪ್ಪವ ಹಸ್ತದೊಳಗ್ರಹಸ್ತಭಾ ।
ವನೆಯನಲಂಪಿನಿಂ ಕರಣದೊಳ್ ಕವಿಲಾನನೆ ತೋಱಿಯಾಡಿದಳ್ ॥೧೬೩

ಪದವಿನ್ಯಾಸವಿಳಾಸದಿಂ ತನುಲತಾವಿಕ್ಷೇಪದಿಂ ಲೋಚನಾ ।
ಗ್ರದ ಸನ್ನತ್ತನದಿಂ ಕಪೋಳರುಚಿಯಿಂ ನುಣ್ದೋಳ ಡಿಳ್ಳಾಯಿ ಯಿಂ ॥
ವ್ಯದ ಹಸನ್ಮಾಯತದಿಂ ಲಸದ್ಭ್ರಮರಿಯಿಂ ಮೇಳಾಪದೊಳ್ಪಂ ತ್ರಿಜಂ ।
ಗದ ಸೊಂಪಿಂ ಸಲೆ ರಾಗಮುಂಜರಿ ಕರಂ ಮೇಳೈಸಿದಳ್ ಲಾಸ್ಯಮಂ ॥೧೬೪

ಅಂತು ಭರತಕಮಾರ್ಗನಿರೂಪಣಕ್ರಮದಿಂ ಲಾಸ್ಯನುನೆಸಗುವಾಗಳ್

ನೆರವಿಯೊಳಿನ್ನನದಾರ್ಗಂ ।
ಪರಿಕಿಸಲರಿದೆಂಬ ತೆಱದಿನಾಲಾಸ್ಯನುನ ॥
ಚ್ಚರಿಯಿಂದೆನೆ ನೋಱ್ಪಾಗಳ್ ।
ನಿರವಧಿಯಿಂದೆನ್ನ ಮೊಗಮನೀಕ್ಷಿಸುತಿರ್ದಳ್ ॥ ೧೬೫

ಮನಬೊಲವಿಂದೆನ್ನಂ ನೋ ।
ಡಿ ನಸುನಗಲ್ಕಿರದದರ್ಕ ನಾಂ ಸೋಲ್ತಂ ॥
ಗನೆಗೊಳಗಾದೆಂ ಕಾಂತಾ ।
ಜನಚೇಷ್ಟಗಳೀನನೆಸಗವೆಲೆ ನೃಪತಿಲಕಾ ॥ ೧೬೬

ಕೂಣಿತದೃಷ್ಟಿಯೊಳೆನ್ನಂ ।
ಜಾಣೆಸೆನಂತಾಕೆ ನೋಡಲಾಗಳ್ ಸುಮನೋ ॥
ಬಾಣಂ ತನ್ನೆ ದೃದಂಬಂ ।
ಮಾಣದೆ ಮುಳಿದೆನ್ನ ಮೇಲೆ ಕಡಿಪಿಂ ಕಱುದಂ ॥ ೧೬೭

ಅಂತಾನವಳ್ಗಾಗಿ,

ಮದನವಿಷಾಹಿ ಪ್ರಷ್ಪಚಯದಾಷ್ಟ್ರಚಯಂಗಳನಾಗಳಟ್ಟಿ ಕ ।
ಚ್ಚಿದೊಡುಸಿರುಚ್ಚಿ ಮೈಯ್ನ ವಿರಡರ್ಗ ಕರಂ ತನು ಕಾಸ್ದು ಕಂದಿ ಚಿ ॥
ತ್ತದ ನೆಲೆದಪ್ಪಿ ಮಾತಿನಿತುದೋಱದೆ ಸೈವೆಱುಗಾಗಿ ಮುಂದ ಗಾ ।
ಣದೆ ಮಱುದಾನಿರಲ್ ಮನೆಗೆ ಮೆಲ್ಲನೆ ತಂದನುಜೀವಿಯೋವಿದಂ ॥ ೧೬೮

ಅಂತು ಧನಮಿತ್ರನಿಂತಾನುಮೆನ್ನಂ ಮನೆಗೆ ಕೊಂಡು ಬಂದು

ಕುಳಿರ್ವ* ತುಷಾರದಿಂ ಮೃದುಮೃಣಾಳದಿನುತ್ಪಳತಾಳವೃಂತದಿಂ ।
ಮುಳಯುಜಡಪ್ಪಿನಿಂ ತಳರ ಪಾಸಿಕೆಯಿಂ ಮದನಾಗ್ನಿದರ್ಪಂ ॥
ನಿಲಿಸಿ ಮಗುಚ್ಚಿ ನೋಡಿ ಧನಮಿತ್ರನೆಲೇ ಅಪಹಾರವರ್ಮ ಸಂ ।
ಚಳವನನಾದ ಕಾರಣಮನೋವದೆ ಪೇಚೆನಗೆಂದನಚ್ಚಿಯಿಂ ॥ ೧೬೯

ಎನಲೊಡಂ,

ಇಂಗಿತಮನಱಿದುಮಱಿಯದ ।
ಭಂಗಿಯನನುಕರಿಸಲೇಕೆ ಕೆಳಿಯನೆ ಸಾಕಿ ॥
ನ್ನಂಗಜತಾಪಮನಾರ್ಪಿಂ ।
ಪಿಂಗಿಸಿ ಬಾಟ್ವಿಂತುಪಾಯಮಿನ್ನೆಂತೆಂದೆಂ ॥ ೧೭೦

ಅಂತು ರಾಗಮಂಜರಿಯಿಂದೆನಗಾದವಸ್ಥೆಯಂ ಪೇಟಿಲ್ ಧನಮಿತ್ರನಿಂ ತೆಂದಂ:—

ಅವಳೊರ್ವಂಗಲ್ಲದೆ ಧೂ ।
ರ್ತವಿಟರ್ ಪಲಬರ್ಗೆ ತನ್ನ ಜವ್ವನನಂ ಬೀ ॥
ಱುವಳಲ್ತು ಗಣಿಕೆಯರ ಧ ।
ರ್ಮವನೊಲ್ವವಳಲ್ಲೆನಿಸ್ಪುದಂ ಕೇಳ್ದಱಿವೆಂ ॥ ೧೭೧

ಅಂತವಳ್ ವೇಶ್ಯಾಧರ್ಮವಂ ಬಿಟ್ಟು ಕುಲಸ್ತ್ರೀಪ್ರತಿಜ್ಞೆಯಂ ಮಾಡಲ್ ಮಾಧವಸೇನೆಯುಂ ಕಾಮಮಂಜರಿಯುಂ ಚಂಪಾಪತಿಯೋಲಗಕ್ಕೆ ರಾಗಮಂಜರಿಯನೊಡಗೊಂಡು ಪೋಗಿ

ಇವಳೆಮ್ಮ ಗಣಿಕೆಯರ ಧ ।
ರ್ಮವನೊಲ್ಲದೆ ಸಾಧ್ವಿಯಾಗಿ ಜೀವಿಸಿದಪೆನೆಂ ॥
ದು ವಿಟರ್ಕಳಂ ಕರಂ ನೋ ।
ಡುವ ಬಗೆಯುಂ ಮಾಣ್ದಳೆಮಗೆ ಜೀವನಮೆಂತೋ ॥ ೧೭೨

ಮದದಿಂ ಸ್ವಧರ್ಮವಂ ವಿಾ।
ಱಿದರಂ ದಂಡಿಸುವುದುಚಿತಮುರ್ವೀಶಂಗೆಂ ॥
ಬುದನಱಿದು ದೇವ ನೀನೀ ।
ಸುದತಿಯನೆಮ್ಮಂತಿರಲ್ಕೆ ಪೇಟ್ ದಯೆಯಿಂದಂ ॥ ೧೭೩

ಎಂದು ಬಿನ್ನಪಂಗೆಯ್ಯಲರಸಂ ರಾಗವುಂಜರಿಯಂ ರಘುಂಕೆಸಿ ನಿನ್ನ ವೇ
ಶ್ಯಾಧರ್ಮದೊಳಿರೆಂಬುದುವಳಿಂತೆಂದಳ್:—

ಲಲಿತಶರೀರವನೊಂದಂ ।
ಪಲಬುರ್ಗಾಂ ಮಾಱುವಂದವೆಂತೆಂಬೊಲವಿಂ ॥
ಕುಲಪಾಲಿಕಾಪ್ರಕಾರದಿ ।
ನಿಳೀಶ ಜೀವಿಸುವೆನಲ್ಲದಿರ್ದೊಡೆ ತ್ರೀವ್ರೆಂ ॥ ೧೭೮

ಎಂದವಳ್ ಗಾಢಪ್ರತಿಜ್ಞೆಯುಂ ಮಾಡಲರಸನೆಂತಾನುಂ ತಿಳಿಪಲಱಿಯದ
ವಳ್ ತನ್ನಿಚ್ಛೆಯೊಳಿರ್ಕೆಂದವರಂ ಕಳಿಪಲ್ ಮಗುಟ್ಟಿ ಮಾಧವಸೇನೆಯಿಂ
ತೆಂದಳ್:—

ದೇವರ್ ಚಿತ್ತವಿಸುದಿವ ।
ಳ್ಗಾವಂ ಪತಿಯಾಗಿ ಬರ್ಪನವನೊಲವಿಂದೆ ॥
ನ್ನಾವಾಸದಿಂ ಮಗುಟ್ಟಿ ।
ನ್ನಾವೆತೆಯುಂ ಪೊಕ್ಕೊಡವನತೀವದೊಲ್ಪಂ ॥ ೧೭೯

ಎಂದನರರಸನಿಂ ಕರುಣಂಬಡೆದು ಪೋದುದಂ ಕೇಳ್ದಜುವೆನೆಂದು ಧನ
ಮಿತ್ರಂ ಪೇೞ್ದ ಸಮಯದೊಳ್

ಜಳಜಂ ಮುಕುಳವನೆಯ್ದ ।
ಲ್ಕುಲಟಾಂಗನೆಯರ್ ಮನೋನುರಾಗಮನೆಯ್ದಲ್ ॥
ತಳವೆಳಗಾಗಲ್ ಕೋಕಂ ।
ನಲವಿಂದಪರಾಬ್ದಿಗೆಯ್ದಿದಂ ದಿನನಾಥಂ ॥ ೧೮೦

ಅಂತು ಸೂರ್ಯಾಸ್ತಮಯವಾಗಲೊಡಂ ಕಟ್ಟಿಲೆಯೊಳಾಂ ಕಾವು
ಮುಂಜರಿಯು ಮನೆಗೆಯ್ದಿ

ವನಜಮುಖಿ ಕಾವುಮುಂಜರಿ ।
ಧನಮಿತ ನ ಮನೆಯ ಚರ್ಮಭಸ್ತ್ರಿಕೆಯುಂ ತಂ ॥
ದನುನಯದೊಳತ್ತಪೆಂ ನಿ।
ನ್ನನ ಜೆಯನೆನಗೀವುದೆಂದೆನತ್ಯುತ್ಸವದಿಂ ॥ ೧೮೧

ಎಂಬುದುಂ;

ನವನಿಧಿ ಬೊರಕಲ್ಕೆಡೆನೂಂ ।
ಕುವರೊಳರೆ ನೆಗಳ್ದಿ ಚರ್ಮಭಸ್ತ್ರಕೆಯುಂ ಕೊ ॥
ಟ್ಟುವಳಂ ಕುಲವಧುವೆನಲನು ।
ಭವಿಸುವ್ರದೆಲ್ಲಗೆ ಸಮ್ಮತಂ ಪ್ರೋಗೆಂದಳ್ ॥ ೧೭೪

ಎಂದೊಡಾರಾತ್ರಿಯೊಳಾಂ ಚರ್ಮಭಸ್ತ್ರಕೆಯ ಪ್ರವರ್ತವಿಧಾನಮುಂ ಪೇಳ್ದಿ ಕುಡಲವಳಾರಾಗಮಂಜರಿಯಂ ಕುಲಸ್ತ್ರೀರೂಪದಿಂ ಕೈವರ್ತಿಸಲ್ ಬಲ್ಲಿಕ್ಕಾಂ ಧನಮಿತ್ರನಂ ಕರೆದಿಂತೆಂದೆಂ:—

ನಿನ್ನಿರುಳೆ ಚರ್ಮರತ್ನವ ।
ನೆನ್ನರದೆಂದಱಿಯೆನಾರೊ ಕಳ್ದರದರ್ಕಾ ॥
ನಿನ್ನೇವೆನೆಂದು ಮೊರೆಯಿಡು ।
ನಿನ್ನಾರ್ಪಿಂದುಸಿನ್ರ್ದರ್ಥಪತಿಯು ಕಳಂಕಂ ॥ ೧೭೫

ಎನಲಾತನಾಮಱಿವೆವಸಮುರಸನೋಲಗಕ್ಕೆ ಪ್ರೋಗಿ
ಪಿಗೆಯ್ವಿನರಸ ಎನ್ನನು ।
ರಾಗಂ ಪ್ರೋದತ್ತು ಚರ್ಮರತ್ನದ ಸಿರಿಯುಂ ॥
ನೀಗಿದೆನಿನ್ನಸುವಂ ನಿನ ।
ಗೀಗೊಪ್ಪಿಸುವೆಂ ವಿಚಾರಿಸ್ರದು ದಯೆಯಿಂದಂ ॥ ೧೭೬

ಎಂದೊಡರಸನಾತಂಗೆ ಕರುಣಿಸಿ ನಿನ್ನ ಚರ್ಮರತ್ನಂ ಪ್ರೋದ ಪೊಲಂಬಂ ಬಲ್ಲೊಡೆ ಪೇಳೆಂಬುದುಂ

ಪಲಕಾಲಮರ್ಥಪತಿಯುಂ ।
ನಲವಿಂದೋಲಗಿಸುವಂ ವಿಮರ್ದಕನೆಂಬಂ ॥
ಮುಳಿದಾತನೆಲ್ಲರಱಿಯಲ್ ।
ಪಱಿಯಿಲ್ಲದೆ ನಿನ್ನೆ ಬ್ಯೆದನೆನ್ನ ನಿಳೀಕಾ ॥ ೧೭೭

ಅದಲ್ಲದೆಯುಂ,

ಎಲವೆಲವ್ರೊ ಚರ್ಮರತ್ನದ ।
ಬಲವಂ ತಗ್ಗಿಸುವೆನೊಂದಿರುಳ್ ನಿದ್ರೆಯು ಹಂ ॥
ಬಲನೊಲ್ಲದಿರ್ದೊಡೆನುತ ।
ಗ್ಗಲಿಸಿ ದುರುಕ್ತಿಯನುಸಿರ್ದನೆಲ್ಲರ್ ಕೇಳಿಲ್ ॥ ೧೭೮

ಎಂದು ಪೇಟಿಲರಸನಾನದಂ ವಿಚಾರಿಸಿ ಕೊಟ್ಟಪೆನೆಂದು ಧನಮಿತ್ರನಂ ಕಳಿಪಿಯರ್ಥಪತಿಯಂ ಕರಸಿ

ನಿನಗೆ ವಿಮರ್ದಕನೆಂಬೊ ।
ರ್ನನುಂಟೆ ಪೇಟೆಂದೊಡರ್ಥಪತಿಯೆನ್ನಯ ನ ॥
ಚ್ಚಿನ ವಿಶ್ವಾಸಿಯುವಂ ಮ ।
ತ್ತನುಪಮನುಂಟೆಂದೊಡಾತನಂ ಕರಸೆಂದಂ ॥ ೧೪೩

ಎಂದೊಡೆ ಮಹಾಪ್ರಸಾದಮೆಂದರ್ಥಪತಿ ವಿಮರ್ದಕನಂ ನೋಡಲೆಂದು

ಸೂಳೆಯರ ಮನೆಗಳೊಳ್ ಜೂ ।
ಜಾಳಿಗಳಾಲಯದೊಳಂಗಡಿಯೊಳಱಸಿ ಬಜೂ ॥
ಕ್ಕಾಳಂ ಕಾಣದೆ ತದ್ಭೂ ।
ಪಾಳನ ಮುಂದಣ್ಗೆ ಬಂದು ಬೆಱಗಾಗಿರ್ದಂ ॥ ೧೪೪

ತಾನವನನೆಲ್ಲಿ ಕಂಡಪ ।
ನಾನೊಲವಿಂ ನಿಮ್ಮ ಕುಱುಪನಱಿಪಿ ಬಜಿಕ್ಕಂ ॥
ನೀನೀಗಳ್ ಪೋಗೆಂದು ।
ಜ್ಜೈನಿಗೆ ಕಳಿಪಿದೆನವಂ ತೆರಳ್ದಂ ಬೀಗಂ ॥ ೧೪೫

ಅಂತಾವಿವಮರ್ದಕನಂ ಧನಮಿತ್ರನೊಳ್ ತೋಟಿಯಾಡಿದಿರುಳೆ ನಿಮ್ಮಡಿಯನಱಸಲ್‌ಕಳಪಿ ಅದುಕಾರಣಮರ್ಥಪತಿಯವನಂ ಕಾಣದೆ ಮಗುಲ್ದಿರಸನೆಡೆಗೆ ಬಂದು ಕರಂಗಳಂ ಮುಗಿದು ನಿಲ್ವುದುಂ; ಅರಸನಿಂತೆಂದಂ:—

ಮರುಳ ವಿಮರ್ದಕನಿಂ ಚ ।
ರ್ಮರತ್ನವಂ ಕಳಿಸಿಯವನನೋಡಿಸಿ ತಾನೆ ॥
ಲ್ಲರ ಮುಂದೆ ಸಭ್ಯನಾಗಿ ।
ರ್ಪಿರವಂ ನೋಡೆಂದು ಕೋಪಿಸಿದನುರ್ವೀಶಂ ॥ ೧೪೬

ಅಂತು ಕೋಪಿಸುವುದುಂ;

ಮಱೆದಿರ್ದರ ಮಸ್ತಕಮಂ ।
ಬಱಸಿಡಿಲಾರ್ದೆಱಗಿದಂತೆ ತನ್ನಯ ಭಯದಿಂ ॥
ಬೆಱಗಾದನರ್ಥಪತಿ ತಾ ।
ನಱಿಯುದನರ್ಥಕ್ಕೆ ಸಂದೆಯಂ ಪುಟ್ಟಲೊಡಂ ॥ ೧೪೭

ಅಂತು ಬಿಱಿಗಾಗಲೊಡಮದುಂ ಸಂದೇಹವಾಗಿಯರಸಂ ಕಳ್ಳನಂ ತರಿಸಿ ಕೊಡೆಂಬೊಡರ್ಥಪತಿ-ನಾಲ್ಕಿರಡುದಿನದೊಳ್ ತರಿಸಿ ಕೊಟ್ಪಪೆನಂಬುದುಂ;

ಅನ್ನೆಗಮಿತಾತನನುಱೆ ಬ।
ಲ್ಪಿನ್ನಿಗಡನಿರೋಧದಲ್ಲಿ ಕುಳ್ಳಿರಿಸಿ ಬಲು ॥
ಕ್ಕನ್ನೊಲ್ಪಿಮಿವನ ಕಲ್ಲಿರ್ದೆ ।
ಯನ್ನಿಷ್ಟುರಶಸ್ತ್ರಪತಿಯಿನೆಂದನಿಳೀಶಂ ॥ ೧೪೪

ಎಂದು ಅರ್ಥಪತಿಯಂ ನಿಗಡನಿರೋಧಮುಂ ಮಾಡಿಸಿದಂ. ಇತ್ತಲ್ ವಸಂ ಧವಸೇನೆ ಕಾಮುಮಂಜರಿಯುಂ ಚರ್ಮಭಸ್ತ್ರಿಕೆಯ ಫಲವಂ ಪಡೆಯುಲೆಂದು

ಅಪಲಾಪಿಸಿ ಕೊಂಡರ್ಥವ ।
ನುಪಚರಿಸಿ ವಿರೂಪಕಂಗೆ ಕೊಟ್ಟು ಬಲಿಕ್ಕಿ ॥
ರ್ದುಪನಿಧಿಯನೆಲ್ಲವಂ ದೈ ।
ನ್ಯಪಾತ್ರದೊಳೆ ಕೊಟ್ಟರೆಲ್ಲರಱಿವಂತಾಗಳ್ ॥ ೧೪೫

ಆದನಾಂ ಕಂಡಿನ್ನೀಚರ್ಮಭಸ್ತ್ರಿಕೆಯಂ ಪರೀಕ್ಷಿಸುವರೆಂದಱಿದು ಧನಮಿತ್ರನಂ ಕರೆದು ಚರ್ಮಭಸ್ತ್ರಿಕೆಯ ವಿಧಾನಂ ಕಾಮುಮಂಜರಿಯ ಮನೆಯೊಳಗಿರ್ದಪ್ರದೆಂದರಸಂಗೆ ಪೇೞೆಂಬುದುಮಾತಂ ಪೋಗಿ

ಕೇಳರಸ ಕಾಮುಮಂಜರಿ ।
ಯಾಲಯದೊಳ್ ಚರ್ಮರತ್ನಮಿಪ್ಪುದೊಲನಱಿಂ ॥
ಸ್ಥೂಲವಿದಾನಂ ನಡೆದಪ್ಪು ।
ದಾಲಿಸುವಂತೊರ್ಬ ದೂತನಂ ಕಳಿಪೆಂದಂ ॥ ೧೪೬

ಕಾಣಿಗೆ ಕಾಣಿಯನರ್ಚಿಪ ।
ಕೇಣಂ ಮಾಣ್ದೀಗಳುಳ್ಳ ತನ್ನರ್ಥಮನು ॥
ಗ್ರಾಣಿಸದಿತ್ತ ಪಳೀಬಿ ।
ನ್ನಾಣಮುಮಾಚರ್ಮಭಸ್ತ್ರಿಕೆಯ ಬಲನುಳ್ತೀ ॥ ೧೪೭

ಅಂತೆಯುಂತರ್ಧನಬಹಿರ್ಧನನುಂ ಮುಸಲೋಲೂಖಸಹಿತಂ ವ್ಯಯುಂಗೆಯ್ದು ಚರ್ಮಭಸ್ತ್ರಿಕೆಯಿಂದುಕ್ಕುವ ಬಹುಧನಾಪೇಕ್ಷೆಯಿಂದೆಂದರಸಂಗೆ ಪೇೞ್ವುದುಮಾತನೊರ್ಬ ದೂತನಂ ಕಳಿಸಿಲವಂ ಪೋಗಿ ಬಂದು

ಅತಿವಿಸ್ಮಯದಾನಮನ ।
ಪ್ರತಿಯಾಗಲ್ ದೇವ ಕಾಮುಮುಂಜರಿ ಮೂಟ್ಪಿ ॥
ನ್ನತಿಯಂ ಕಾಣಿಯೊಳರ್ಥಂ ।
ಸ್ಥಿತವಾಗಿರಲಱಿಯದಿನ್ನದೇನಂ ಪೇೞ್ವೆಂ ॥ ೧೯೨

ಎಂದಾದೂತಂ ಬಂದು ಪೇೞೊಡೆ ಅದು ಚರ್ಮಭಸ್ತ್ರಕಾವಿಧಾನಂ ತಪ್ಪದೆಂದು

ಭರದಿಂ ಮಾಧವಸೇನೆಯು ।
ನರವರಿಸದೆ ಕಾಮುಮುಂಜರಿಯನೀಕ್ಷಣಮಿ ॥
ರ್ಚಿರುಮನೊಡಗೊಂಡು ಬರಲೆಂ ।
ದರಸಂ ಕಳಿಪಿದನದೊರ್ವ ಭೀಕರನುಱನಂ ॥ ೧೯೩

ಅಂತಾದೂತಂ ಬಂದು ತವಕದಿಂ ಕರೆವುದಂ ಕಂಡಾಮಾಧವಸೇನೆಗಿಂತೆಂದೆಂ:—

ಇದು ಚರ್ಮಭಸ್ತ್ರಕಾಸಂ ।
ಪದವಂ ತಿಳಿಯಲ್ಕೆ ಬಂದ ಪರಿ ನೀವತ್ತಿಗೂ ॥
ಧವ ಕಾರ್ಯಮುಂ ಜಗತ್ಪ್ರಕ ।
ಟದಿನೆಸಗಿದಿರೆಂತು ಕಳಿವೆವೀದುರ್ಘಟನಮುಂ ॥ ೧೯೪

ಎಂದಾನರೊಳ್ ಸಮಾಲೋಚನಂಗೆಯ್ಯಲವರ್ ದೀನವದನರಾಗಿರಲದಂ ಕಂಡಾಂ ಮತ್ತಮಿಂತೆಂದೆಂ:—

ಎನ್ನ ಸುವಂ ನಿಮ್ಮ ಸುಗಳ ।
ನುನ್ನತಿಯಿಂ ಕಾಪ್ಪೊಡಾನುಪಾಯವನೊಂದಂ ॥
ಚೆನ್ನೆಸೆಯೆ ಪೇೞ್ವೆನೆನಲವ ।
ರೆನ್ನಂಘ್ರಿದ್ವಯದೊಳೆಱಗಿ ಬದುರ್ಕಿಪ್ರದೆಂದರ್ ॥ ೧೯೫

ಎಂದೊಡಾನವರ್ಗಿಂತೆಂದೆಂ:—

ಆದಿವಿಡಿದರ್ಥಪತ್ತಿಗಪ ।
ವಾದಂ ಪೊರ್ದಿರ್ಪುದದಱಿನವನಿತ್ತಂ ಚೆಲ್ವಾ ॥
ಲ್ವಾದಜಿನರತ್ನಮುಂ ಕೇಳ್ ।
ಮೇದಿನಿಪತಿಯೆಂದು ಪೇೞ್ವುದಿದು ಸತ್ಕಾರ್ಯಂ ॥ ೧೯೬

ಎಂದಾಂ ಪೇಟೆ ಮಾಧವಸೇನೆಯುಂತೆಗೆಯ್ವೆನೆಂದು

ನರೆಗೂದಲ್ಗಿಕ್ಕಿ ನುಣ್ಪಂ ಮುಡಿಯನಳವಡಲ್ಸಿಕ್ಕಿ ಬತ್ತಿರ್ದ ವ
ಕ್ತ್ರಂ । ಬುರುಹಂ ಮಿಂಚಾಗಲಿಪರ್ಂ ತೊಪೆದು ತೊಡವರ್ಂ* ಲಂಬಿಸ್ತ
ನದ್ವಂದ್ವಮುಂ ಮೇ ॥ ಳ್ವರೆ ಬಲ್ಪಿಂ ಸೊಂಕಿಲಿಂದಂ ಬಿಗಿದು ಮುಸುಕನಿ
ಟ್ಟೈದಿದಳ್ ವೃದ್ಧೆ ಚೇಟೋ । ಭರದಿಂ ತದ್ಭೂಪನಾಸ್ಥಾನಮನವಿರಳಹ
ಸ್ತಾಬ್ಜಸಂಕೋಚೆಯಾಗಳ್ ॥ ೧೯೩

ಅಂತು ಮಾಧವಸೇನೆಪೂಸ್ಥಾನಮುಂ ಪೊಕ್ಕಗಸಂಗೆ ಪೊಡೆಮಟ್ಟು ನಿ
ಲ್ವುದುಮವಳಂ ಕಂಡರಸನಿಂತೆಂದಂ:—

ವಿನೆಲೆಗೆ ಚರ್ಮರತ್ನವಿ ।
ಧಾನಂ ನಿಜಗೇಹದಲ್ಲಿ ನಡೆದಪ್ಪುದದನೀ ॥
ಸ್ಥಾನದೊಳಿತ್ತವನಾವನ ।
ದೇನೆಂಬುದನುಸಿರ್ವುದೀವುದೀಗಳ್ ಬೇಗಂ ॥ ೧೯೪

ಎಂಬುದುಂ; ಮಾಧವಸೇನೆಯಿಂತೆಂದಳ್:—

ಕ್ಷಿತಿಪತಿ ಬಂದಿಕಾಜನಧನಮಂ ಕಿತವಂ ಮನೆಗಳ್ಳನ ನ್ಮಡೋ ॥
ದ್ಧತವಿಟನಧ್ವಜೋರನತಿಯೌವನಮತ್ತನನೀತನರ್ಥಗ ॥
ರ್ವಿತನೆನಿಸಿಪರ್ ದುರ್ವ್ಯಸನಿಯಲ್ಲದೆ ಪಣ್ಯವಧೂಜನಕ್ಕೆ ಜೀ ।
ವಿತಧನದೇಹವೆಂಬಿನಿತನೀವನೆ ಕಾಮುಕವೃತ್ತಿಯೀಜ್ಞೆಯೊಳ್ ॥ ೧೯೫

ಎನಲಿವರೊಳ್ ನಿನಗಿತ್ತವನಾವಂ ಪೇಟೆಂಬುದುಂ;

ಚಿತ್ತವಿಸಿತ್ತಲ್ ಧರಣೀ ।
ಕೋತ್ತಮ ಮತ್ಸುತೆಗೆ ಕಾಮನುಂಜರಿಗೊಲವಂ ॥
ಪಿತ್ತಜಿನರತ್ನವುಂ ಕೂ ।
ರ್ತಿತ್ತನ್ನಲಿದರ್ಥಪತಿಯೆಲ್ತ ವಿಧಾನಂ ॥ ೧೯೬

ಎಂದು ಮಾಧವಸೇನೆ ಪೇಳ್ದಿದುಮಾಗಳಿ ಕಾಲರಾಗೃಹದೊಳಿರ್ದರ್ಥಪತಿ
ಯನರಸಂ ಕರಿಸಿ,

ಎಲೆ ಕಿತವ ಚರ್ಮರತ್ನವ ।
ನೊಲವಿಂದಂ ಕಾಮುಮುಂಜರಿಗೆ ಕೊಟ್ಟೆನ್ನೊಳ್ ॥

ಹೊಲಬಂ ಪೇಟಿದೆ ನೀಂ ಸಂ ।
ಕಲಿಯೊಳ್ ಬೀಟಿಲ್ಕಿ ಬಿಡುವೆನೆಲೆ ದುರ್ವೃತ್ತಾ ॥ ೦೦೧

ಎಂದರಸಂ ಕೋಪಿಸಿ ಸರ್ವಕವರ್ತಿಯುಂ ಮಾಡಿಮೆಂದು ಸಮೀಪ ಸ್ಥಗೆ ಪೇಟ್ಟಿದುಂ

ನವರತ್ನಮನವನುಳ್ಳ ।
ರ್ಥವನಾಭರಣಂಗಳಂ ಲಸದ್ವಾಹನಮುಂ ॥
ವಿವಿಧಾಂಬರಮುಂ ಪಕುದಾ ।
ಸಿವರ್ಗಮುಂ ಕವರ್ದು* ತಂದರರಮನೆಗಾಗಳ್ ॥ ೦೦೨

ಅದಲ್ಲದೆಯುಂ

ಬರಳೊನಕೆವುಡಕೆಯೊಳಗೆವ ।
ಧರಿಸದೆ ಸಲೆ ಸರ್ವವಸ್ತುವಂ ಕವರ್ದಿವನಂ* ॥
ನರಕಿಯನಂತಕನಿಲಯದ ।
ನೆರಿಮನೆಗಟ್ಟೆಂದನರ್ಥಪತಿಯನಿಳೀಶಂ ॥ ೦೦೩

ಅಂತು ಸರ್ವಸ್ವಾಪಹಾರಂಗೆಯ್ದುವನನಂತಕವಂದಿರಕ್ಕೆ ಕಳಿಸುವುದಂ ಧನವಿ ತ್ರಂ ಕಂಡು

ತನಗುಪಕಾರಂಗೆಯ್ದಂ ।
ಗೆನಸುಂ ಲೇಸಂ ನೆಗಟ್ಟಿವುದು ಕರ್ತವ್ಯಂ ॥
ತನಗಪಕಾರಂಗೆಯ್ದಂ ।
ಗನವರತಂ ಲೇಸನೆಸಗುವುದು ಸನ್ಮಾರ್ಗಂ ॥ ೦೦೪

ಎಂಬುದಂ ತಿಳಿದು ಧನಮಿತ್ರನರಸನ ಕೂಡೆಯಿಂತೆಂದಂ:—

ಧಾರಿಣಿಯೊಳರಸುಗಳ್ ವ್ಯಪ ।
ಹಾರಿಗಳಂ ತೀರ್ಚಲಾಗದೀಗೆಯ್ದೊಡಮೆಂ ॥
ಬೀರಾಜನೀತಿಗಾದೆಯು ।
ಮಾಜುವನರುಮುಂಟೆ ಪೇಟ್ ಕೃಪಾಳುನೃಪಾಲಾ ॥ ೦೦೫

ಎಂದು ಧನಮಿತ್ರಂ ಪೇಟೆರ್ದಿಡರ್ಥಪತಿಯನರಸಂ ಕಾಯ್ದಿಂತೆಂದಂ—

ನಲವಿಂ ಮಾಧವಸೇನೆಯ ।
ನಿಲಯದೊಳರ್ಚಿನರತ್ನವುಂ ಧನಮಿತ್ರಂ ॥
ಗೊಲವಿಂ ತರಿಸಿತ್ತಂ ನೃಪ ।
ತಿಲಕಂ ಲಕ್ಷ್ಮೀನಿವಾಸನಿಜಹೃತ್ಪದ್ಮಂ ॥ ೧೦೬

ಅಂತಾಚಕರ್ಮಭಸ್ತ್ರಾಕೆಯುಂ ಧನಮಿತ್ರಂಗೆ ತರಿಸಿ ಕುಡಲಾಧನಮಿತ್ರಂ ಮಾಧವಸೇನೆಯ ದೀನಭಾವಮುಂ ಕಂಡು

ಮುಖೆಯುದಕದ ಬರವಿಂಗಂ ।
ಕೊಳದುದಕಮನೆಯ್ದಿ ತುಬ್ಬಿಕಿದೆಗ್ಗನೆ ತೆಱನೀ ॥
ಗಳುವಿಮಾಧವಸೇನೆಗೆ ।
ನೆಲೆಯಾಯ್ತೆಂದವನಿಪತಿಗೆ ಮತ್ತಿಂತೆಂದಂ ॥ ೧೦೭

ಇನಿತಜಿನರತ್ನವುಂ ನ ।
ಚ್ಚಿ ನಿಜಾಲಯದರ್ಥಮೆಲ್ಲನುಂ ಬೀಯುಂಗೆ ॥
ಯ್ದೆನಸುಂ ದರಿದ್ರೆಯಾವಳ್ ।
ಜನಪತಿಯಿಂತಾಯರ್ಥಪತಿಯು ಧನದೊಳ್ ಕಿಱಿದಂ ॥ ೧೦೮

ಎಂದು ಕಿಱಿದರ್ಥಮುಂ ಕುಡಿಸಿ ಕಳಿಪಿಸಿ ಧನಮಿತ್ರಂ ಕೃತಾರ್ಥತೆಯಿಂ ದರಸನಿಂ ತಾನುಂ ಕಳಿಪಿಸಿಕೊಂಡು ನಿಜಾಲಯಕ್ಕೆ ಪೋಗಿ ಕತಿಪಯದಿನಂಗಳ್ಗೆ

ಜನವಱಿಯಲರ್ಥಪತಿ ನಿ ।
ರ್ಧನನಾದುದನಱಿದು ಮೆಱೆವ ಕುಲಪಾಲಕಿಯುಂ ॥
ವಿನುತಿಯು ಕುಬೇರದತ್ತಂ ।
ಧನಮಿತ್ರಂಗಿತ್ತನೊಳ್ಮಹೂರ್ತದೊಳಾಗಳ್ ॥ ೧೦೯

ಅಂತು ಚಿಂತಿಸಿದುವೆಲ್ಲಂ ಸಂತತವಾಗಲಾಂ ಬಱಿಯುಂ,

ಸಕಲೋಪಾಯಂಗಳಿಂ ತತ್ಪುರದ ಧನಿಕರುಳ್ಳರ್ಥಮುಂ ಕಳ್ದು ಭೋಗಾ । ಧಿಕದಿಂ ತ್ಯಾಗಪ್ರದಾನೋನ್ನತಿಯಿನನುಪಮಾತ್ಮಪ್ರಯಾಸಂಗದಿಂ ಕಾ ॥ ತುಕಮುಂ ತಾಳ್ದಿರ್ದನಂ ಭೋಗಕೆನೆ ಮನದೊಲವಿಂದೊಮ್ಮೆ ಕೇಳ್ ಭೂಪ ಮತ್ತಾ । ಖ್ಯಕೆ ಭಂಗಂ ಪುರ್ದಿತಾರ್ಪಿಂ ವಿಧಿಲಿಖಿತವನುಲ್ಲಂಘಿಸಲ್ಬಲ್ಲನಾವಂ ॥ ೧೧೦

ಎಂಬುದುಮದೇನೆಂದರಸಂ ಕೇಳಿ,

ಮನದೊಳ್ ಕೂರ್ಪಾಸ್ಯದೊಳ್ ವ್ಯಾನತೆ ಒಗೆಯೊಳಿ ರೋಷಂ ಲಸ
ದ್ವಾಕ್ಯದೊಳ್ ಭ । ತ್ಸನೆ ಚಂಚತ್ಪೃಷ್ಟ್ಯವಿಕ್ಷೇಪಣದೊಳನುನಯಂ
ಪುರ್ಬಿನೊಳ್ ಜಬ್ಬು ದೂತೀ ॥ ಜನದೊಳ್ ಚಿತ್ತಾನುತಾಪಪ್ರಿಯರತಿ
ಮುಖದೊಳ್ ಕೋಪನೊಪ್ಪಲ್ಕೆ ಪೆಂಪಾ । ದ ನವೀನಪಾರ್ಥಿಯಿಂದಂ ಪ್ರ
ಣಯಕಲಹಮಾಯ್ತೆನ್ನೊಳಬ್ಜಾಕ್ಷಿಗಾಗಳ್ ॥ ೬೧

ಆ ಪ್ರಣಯಕಲಹದ ಪ್ರಗಿಲೊಳ್

ಶಿಶಿರದಿನಂಬುಜಕ್ಕೆ ದುಗುಡಂ ಘನಮೀಘದಿನಾಗಸಕ್ಕೆ ಕ।
ರ್ಕಶನಿಯಿನವ್ರಿಗಳ್ಗಿ ಭಯಮುರ್ಜಿತಮೀಷೋಷದಿನುತ್ತಮಗೆ ದು ॥
ರ್ಯಶಮದಲೀಷದಿಂ ಬುಧಗೆ* ದುರ್ಗತಿಯಪ್ಪ ಪೊಲೆನ್ನೊಳಾಮದಾ।
ಶಮುಖಿಯಿಂದನೊಂದವಗುಣಂ ವಿಧಿಯಿಚ್ಛೆಯಿನುರ್ವರಾಧಿಪಾ ॥ ೬೨

ಅದೆಂತೆನೆ—

ಸಕಳಸುಗಂಧಸಾರದೊಡವಿಂ ಪೊರೆಮುತ್ತಮಗಂಧದಿಂದೆ ಕಾ ।
ತುಕವೆನಲೊಪ್ಪವೆತ್ತ ತಿಳಿಗಳ್ಗಳನೊಪ್ಪವ ಜೇಮಪಾತ್ರದೊಳ್ ॥
ಸುಕರವೆನಲ್ಕೆ ತುಂಬಿ ಸಲಿಸುರ್ಬಿರಸುತ್ಸವದಿಂದೆ ಪೀರ್ದಳು ।
ತ್ಸುಕಮೆನೆ ರಾಗನಂಜರಿಯದೊಂದು ದಿನಂ ಪಿಸವೆರ್ದೆತ್ತ ಜೊನ್ನದೊಳ್ ॥

ಅಲ್ಲಿ ಕೆಲಂಬರ್

ಕಡುನ್ರಜಿಗಳ್ಳನೊಂದು ತಿಳಿವಟ್ಟಲನಿಟ್ಟೆಜಿಯೆಲ್ಕೆ ಮೂಱು ಸೂಚ್ ।
ಮಿಡಿಮಿಡಿದರ್ಥಮುಂ ಕುಡಿದು ಚಪ್ಪಿಜಿದಿಕ್ಕಿದ ಸಣ್ಣಮ್ರಿಂಗಳ್ ॥
ಮಿಡಿಚಿಗಳುಂ ಕುಜಿಂಕಿ ಮುಗುಜ್ಜಿಂಟೀಮೆ* ಘಟ್ಟನೆ ತೇಗಿ ಬಾಜ್ಜೆಯಿ ।
ನ್ನೊಡೆಮನೆನುತ್ತ ದೇಂವೆ ಜಿವರೋ ಸಖಿಯರ್ಮಧುಪಾನಗೊಜ್ಜಿಯೊಳ್
ಪ್ರಲಿ ಘನವಾಗೆ ಕೊಕ್ಕರಿಸಿ ಗುಗ್ಗುರಿಯುಂ ಕೊಳಿಮುಕ್ಕಿ ಮಿಕ್ಕುದಂ।
ಕೆಲದವಗಿತ್ತು* ಮುತ್ತೆ ತಿಳಿಗಳ್ಳಿಜಿಯಲ್ ಕುಡಿಸುಳ್ಳಿ ಪಿಲ್ಗಿಲಾ ॥
ಗಳಿ ಕುಡಿದೆಜಿದ್ದಿ ಡೆಂಕ್ಷಣಿಸಿ ಬಿಜಿದ್ದ ನೆಜಿಲ್ ಸುಜಿಯಲ್ಕೆ ನಕ್ಕು ಕ ।
ಣ್ಗಳನರೆಮುಚ್ಚಿ ಮುಚ್ಚಿ ತೆಜಿಯುತ್ತೆ ಸೆವರ್ ಮಧುಪಾನಕೋವಿದರ್॥ ೬೩

ಅಂತೊಂದು ದಿನಸಮುನರೆಲ್ಲರುಂ ಮಧುಪಾನವಂ ಮಾಡಿರ್ಪಾಗಳ್
ಪ್ರಣಯಕಲಹದೊಳ್ ವುಳಿದಿರ್ದೆನ್ನಂ ರಾಗಮಂಜರಿ ಕಂಡು

ಕೆಳದಿಯರ ಮಧ್ಯದೊಳ್ ಕೋ।
ಮುಳಿ ಮಧುಪಾನಪ್ರಸಂಗದಿಂದಿರ್ದಿನ್ನೊಳ್ ॥
ಮುಳಿಸಿಲ್ಲದೆ ಮಧುವಂ ಪು ।
ಕ್ಕುಳಿಸಿ ನುದೀಪ್ತಾಸ್ಯಕಮಳವುಂ ಚುಂಬಿಸಿದಳ್ ॥ ೧೧೬

ಂತು ಚುಂಬಿಸಿ ಮತ್ತಂ ಸ್ವಾದುರಸವಾಗಿರ್ದಪುದೆಂದೆನ್ನಂ ತನ್ನಂತೆ ಮಾಡಲ್ವೇಱಿದುಂ;

ಸ್ತ್ರೀವಶವಾವರನ್ವಯ ।
ಜೀವನವುಂ ಪಾಪಪುಣ್ಯವುಂ ನೀತಿಗಳಂ ॥
ತೀವಿದಿಪರವ ಸುಖವಂ ।
ಭಾವಿಸುವರೆ ಪಾಮರತ್ವಮಚ್ಚರಿಯಲ್ತೇ ॥ ೧೧೭

ಅದಲ್ಲದೆಯುಂ,

ಚತುರಕಳಾಜ್ಞರಂ ಕುಶಲಜೀವನರಂ ಸುಕೃತಾತ್ಮರಂ ಕರಂ ।
ಯತಿಗಳನುತ್ತಮಾರ್ವಯವಸ್ಥಿತರಂ ಸಕಲಾಗಮಜ್ಞರಂ ॥
ಗತಿಗೆಡಿಸಲ್ಕೆ ಮುತ್ತೆ ನಿಶಿತಾವ್ರದೊ ಭಾವಿಸೆ ಠಾವ್ರ ದೇವ ಕೇಳ್ ।
ಸತಿಯರ ಸಂಗಮಲ್ಲದೆ ಮನೋಜನ ಜಾಸ್ತ್ರಮನಾರೊ ವಿಾಱುವರ್।

ಆದುಕಾರಣಮಾನವಳಂ ವಿಾಱಿಲರಿಯದೆ,

ಅಲಗರ್ಣ* ಕೆಂಪಡರಲ್ಕೆ ಪ್ರೌಂಗಿದಧರಂ ಬೆಳ್ಪಾಗೆ ರೋಷೋದ್ಗಮಂ ।
ತಲೆದೋಱಲ್ ಬಿಮರುಸ್ತ್ರೈ ಲಜ್ಜೆ ತೊಲಗಲ್ ನಿತಾಂತಮಾಗಲ್ ಮದಂ ॥
ಬಲಿಯಲ್ ಕಣ್ಮಾಗಿಯುತ್ತೆ ಮೂರ್ಛೆ ವಿಗೆ ತೋಱಲ್ ನಾಡೆ ಚೆಲ್ವಾದುವ।
ಗ್ಗಳವೆಂಬಂತಿರಲಿನ್ನದೇಪೊಗಱಿಪ್ಪುದೋ* ಕಾದಂಬರೀಪಾನಮಂ ॥ ೧೧೮

ಅನಂತರಂ,

ಉನ್ಮಾದಂ ತಲೆದೋಱಲ್ ।
ಮನ್ಮಾನಸಂ ನಿಲಿಸಲರಿಯದಲ್ಲಿಂದಾಗಳ್ ॥
ತನ್ಮಾತ್ರದೊಳಾರಾತ್ರಿಯೊ ।
ಳುನ್ಮೀಳಿತವೃಷ್ಟಿಯಾಗಿ ಪುರದೊಳ್ ಪರಿದೆಂ ॥ ೧೧೯

ಅನ್ನೆಗಮೆನ್ನ ಪಿಂತನೆ

ಗುಣಿ ರಾಗಮುಂಜರಿಗೆ ಸ ।
ದ್ಗುಣಿಕಾರತ್ನಕ್ಕೆ ನಲ್ಮೆಯಿಂ ಧೂರ್ತಕಿವಾ ॥
ಮಣಿ ನೀತಿವಂತೆ ಪುಮಗುಂ ।
ಟಣಿಯಪ್ಪಳ್ ಮಾತೆಪ್ಪೋಲ್ ಸೈಗಾಲಿಕೆಯೆಂಬಳ್ ॥ ೨೦೧

ಪರಹೃದಯಪ್ರವೀಣತೆಯನೊಗಪೆಯ ಧರ್ಮನೂರ್ಧ್ವಬುದ್ಧಿಯು ।
ಚ್ಚರಿಯನನನ್ವಯಾಭರ್ಣಘಟನಾವಿಧಿಯಂ ಸತತಂ ಲಸತ್ಕಳಾ ॥
ಪರಿಣತಿಯಂ ಸಮಸ್ತಜನವೈಭವಮಂ ವಿಧಿಯೊಂದುಗೂಡಿದಂ ।
ಧರಣಿಯೊಳೆಂಬಿನಂ ಮಿಱುಪಿನಳಾವುದುಗುಂಪಣಿಯುರ್ವರಾಧಿಪಾ ॥ ೨೦೨

ಅಂತವಳಿನ್ನೆ ಪಿಂದನೆ ಪರಿತಪ್ಪಾಗಳ್
ತಿಂತಿಣಿಯ ರಾತ್ರಿಯೊಳ್ ಕಾ ।
ಲಾಂತಕರಂತಿರ್ಪ ನಗರರಕ್ಷಕರಾಗಳ್ ॥
ಭ್ರಾಂತಿಂ ಪರಿದೆನ್ನಂ ಪಿಡಿ ।
ದೆಂತೋಡುವೆಯೆಂದು ಪಲವು ಪರಿಯಿಂ ಪ್ರೌಢೆವರ್ ॥ ೨೦೩

ಅಂತವರೆನ್ನಂ ಪಿಡಿದು ಪ್ರೌಢೆಯಲೊಡಂ
ಆವಂಗಾರದು ಕರ್ಮಂ ।
ಭಾವಿಸಲುನ್ಮತ್ತನಾದ ಪ್ರೌಢಿನು ವಚನ ॥
ಕ್ಕಾವಗಮನೇಕವಿಧದಿಂ ।
ತೀವಿರ್ದುದು ಸಹಜಮಲ್ತೆ ನೃಪಕುಲತಿಲಕಾ ॥ ೨೦೪

ಅದುಕಾರಣಂ
ಪಿಡಿವನನೆನ್ನನದಾವಂ ।
ಪ್ರೌಢೆದಿರ್ಕಡಿಮಾಲ್ಪೆನೆನ್ನ ಪಿಡ್ಗದಿನಾತಂ ॥
ವ್ಯಡನಾಬೊಡಾಗಲೆಂದು ।
ಗ್ಗಡಿಸಿದೆನಾನತಿಭಯಂ ಕರಂ ಪ್ರೌಢ್ಮವಿನಂ॥ ೨೦೫

ಅಂತಾಂ ಪೂರ್ವವಾಸನೆಯಪ್ಪ ಕತೋರವಚನಮುಂ ನುಡಿಯೆ,
ಅನ್ನೆಗಮವರೆಲ್ಲರ್ ಪ್ರೌಢೆ ।
ಬೆನ್ನಂ ಕೈವಿಡಿದು ಕಟ್ಟಿ ಮನದತಿಮುಳಿಸಿಂ ॥

ಬನ್ನಕ್ಕೆ ತಂದೊಡೆನ್ನ ಮು ।
ದನ್ನೆಟ್ಟನೆ ಪ್ರೋಗೆ ತಿಳಿವು ಪ್ರಟ್ಟತ್ತಾಗಳ್ ॥ ೨೦೬

ಆಸನಮಯದೊಳ್ ಸೃಗಾಲಿಕೆಯಬಿತ್ತುಂ ಬರಲದನಾಂ ಕಂಡು
ಎನಗಾಪ್ತಂ ಧನಮಿತ್ರನೆಂದಱಿವುದೀಲೋಕಂ ಮದೀಯಾಪ್ತಕಾ ।
ಮಿನಿಯಿಂಗುಂ ಧರೆ ರಾಗಮಂಜರಿಸುನೀಯಿರ್ಬರ್ಗರ್ತಿಕ್ಲೇಶಮಿಂ ॥
ದೆನಸುಂ ಬಂದವುದಿಂತಿದಂ ತೊಲಗಿಸಲ್ವೇಱ್ಕೆಂದುಪಾಯಪ್ರಚಿಂ ।
ತನೆಯುಂ ಚಿಂತಿಸುತುಂ ಸೃಗಾಲಿಕೆಯನಾಂ ಸಕೊ ್ರೀಧದಿಂ ನೋಡಿದೆಂ ॥
ಪ್ರೋಗೆಲೆ ಕುಂಟಣಿ ಕುಟಿಲೋ ।
ದ್ಯೋಗಂ ಮಿಗೆ ರಾಗಮಂಜರಿಯನಾನಿರ್ದಂ ॥
ತೀಗಳ್ ಧನಮಿತ್ರಂಗೊಳ ।
ಗಾಗಿರ್ದಂತೆಸಗುತ್ತಿರ್ದೆ ನಾನಱಿಯದುದೇ ॥ ೨೦೭

ಎಂದು ಮತ್ತಂ
ಎನಗಾಪ್ತ ಮಿತ್ರನೆಂಬೊಂ ।
ದು ನೆನಂದೋಱುತ್ತಿ ರಾಗಮಂಜರಿಯಂ ತಾ ॥
ನನುನಯದಿಂ ಬೆರಸಿರ್ದಂ ।
ಧನಮಿತ್ರಂ ದುಷ್ಟಮಿತ್ರನೆಂಬುದು ಪುಸಿಯೇ ॥ ೨೦೮

ಅದುಕಾರಣಂ
ಎಲಗೆ ನಿಜಸುತೆಯ ಭೂಷಣ ।
ಕುಲವಂ ಧನಮಿತ್ರನಜಿನರತ್ನವನೀಕ ॥
ಟ್ಟಿಲೆಯೊಳ್ ಕಳ್ದಂ ನಿನ್ಮಯ।
ಬಲವಂ ನಪೆ ನೋಱ್ಪೆನಿನ್ನೆಲೇ ಕುಟಿಲಾತ್ಮೇ ॥ ೨೦೯

ಎಂಬುದುಮೆವಳತಿನಿಸ್ರಣೆಯಪ್ಪುದಱಿಂದೆನ್ನ ವಚನಭಾವಕಾಶಲವನಱಿ
ದದಂ ನೆಲೆವೂಡಲೆಂದು,
ನೀನಾರ್ಜಿಸಿದರ್ಥವೆ, ಕೊಳೆ ।
ಮಾನಿನಿಯರ ಧನವನುತ್ತಮರ್ಕಳೆ ವಿಟವಿ ॥
ದ್ಯಾನಿಲಯ ಮತ್ತನೂಜೆಗ ।
ನೂನವಿಭೂಷಣವನೀವ್ರದಾಂ ಪೊಡೆಮಡುವೆಂ ॥ ೨೧೦

ಧನಮಿತ್ರನಕ್ರಜಿನರತ್ನವ ।
ನನುನಯದಿಂದೀಗೆ ಬಾಳ್ಗೆ ಮತ್ಪುತ್ರಿಯುಮಂ ॥
ಡನಮಂ ದಯೆಗೆಯ್ ವೀಕ್ಷ್ಯ ।
ವನಿತೆಯರಾವಲ್ಪಜೀವಿಗಳ್ ವಿಟಮಲ್ತೀ ॥ ೨೩೦

ಎಂದೊಡಾಂ ಕರುಣಿಸಿವಂತೆ
ನಿನ್ನೊಡವೆಯನಿತೊಡವೇ ।
ನೆನ್ನಂ ವಂಚಿಸಿದ ಧೂರ್ತ ಧನಮಿತ್ರನ ಗ ॥
ರ್ವಂ ನೆಲೆವ ಚರ್ಮರತ್ನಕೆ ।
ಯುಂ ನೆಟ್ಟನೆ ಕೂಡುವೆನಲ್ಲ ಬಗೆ ನಿಶ್ಚಯಿಸುಂ ॥ ೨೩೧

ಎಂಬುದನುವರ್ತ್ರರರಕ್ಷಕಗೆಗ್ ಕೈಮುಗಿದು ಧನಮಿತ್ರನ ಚರ್ಮರತ್ನವಂ ಕೂಡಲೊಡವೇನೆನ್ನ ಮಗಳಾಭರಣಮುಂ ಕೂಡುಮಂತೆ ಪೇಳಿಮೆನಲವರಿಂತೆಂದರ್:—

ಎಲನೆಲವೊ ನಾಳೆ ನಿನ್ನಯ ।
ತಲೆಯಂ ಕೊಯ್ದು ಜಿನರತ್ನವಂ ಕೊಂಡಪೆವೀ ॥
ಲಲನೆಯ ಭೂಷಣಮಂ ಕೋ ।
ಟಲೆಗೊಳಿಸದೆ ಕೂಡುವುದೀಗಳೊಲ್ವೊಡೆ ತನುವಂ ॥ ೨೩೨

ಎಂದೊಡಾಂ ಬಳಿಕಾತ್ಮಾಭರಣಮಿದ್ದ ಠಾವನೇಕಾಂತದೊಳ್ ಪೇಳ್ವೆನೆಂದವಳಂ ನಂಬರಸಂಗೆ ಕರೆದು
ನಿನ್ನ ಸಖಂ ಸಿಲ್ಕಿದಪಂ ।
ನಿನ್ನಿರುಳಿಂದವಱ ದಿಸೆಯಿನೆನಗಂ ನಿನಗಂ ॥
ಬನ್ನಂ ಬರ್ಪುದೆನಲ್ ಕೇ ।
ಳ್ದಿನ್ನಂ ನಿನ್ನೆಡೆಗೆ ಕಳಿಪಿವಂ ಧನಮಿತ್ರಂ ॥ ೨೩೩

ಎಂದು ಧನಮಿತ್ರಂಗೆ ಪ್ರೋಗಿ ಪೇಟೆಂದು ಮತ್ತಮಿಂತೆಂದೆಂ:—

ಇಂತಾಂ ಸಿಲ್ಕಿದೆನೆಂದಡಿ ।
ಚಿಂತಿಸದಿನ್ನೆನ್ನನೊಲ್ದು ಬಿಡಿಸುವ ತೆಱನಂ ॥
ಚಿಂತಿಸುವುದು ಧನಮಿತ್ರಂ ।
ಮುಂತಣ ಕಾರ್ಯಕ್ಕೆ ಕಾರಣಂ ನೀನಲ್ತೀ ॥ ೨೩೪

ಎಂದಾಂ ಅಭರಣಮಿರ್ದ ಠಾವಂ ಪೇಳ್ವಿಂತೆ ಪೆಸರೊಂದು ಕಾರ್ಯವಂ
ಪೇಳಲವಂ ಕೇಳ್ದು ಕಯ್ಗಳಂ ಮುಗಿದು

ನಿನಗಂಗರಾಜನೊಲ್ಗೀ ।
ಜನಮಸಿತುಂ ಹಿತನನೆಸಗುಗಧಿಜೀವತೆಯೊ ॥
ಲ್ಬನುಕೂಲವಕ್ಕೆಸುತ್ತುಂ ।
ಧನಮಿತ್ರನ ಪ್ರೌಢಿಗೆ ಪ್ರೋದಳಾಗಳ್ ಬೇಗಂ ॥ ೬೩೭

ಅಂತಾಸೃಗಾಲಿಕೆ ಪ್ರೇಪ್ರುಮಿತ್ತಲ್

ಚಿಂತೆಯು ಮುಂತಣಂ ದುಗುಡದೊಳವರಿ ಜಾಡ್ಯದ ಬೀಡು ದುಃಖಗೇ ।
ಹಂ ತನುಬಾಧೆಯಾಲಯಮಮಂಗಲದಿಕ್ಕೆಯಮಾಗರ್ದಾಗರಂ ॥
ಭ್ರಾಂತಿನ ಜನ್ಮಭೂಮಿಯೆನಿಪಗ್ಗಳಬಂಧನಮಂದಿರಕ್ಕದೇ ।
ನುಂ ತಡವಿಲ್ಲದೊಯ್ದಿನಗೆ ಸಂಕಲೆಯುಂ ಮುಳಿಸಿಂ ತೊಡಚಿರ್ದರ್ ॥ ೬೩೮

ಉಭಯಕಟಂಗಳಿಂದೊಸವರ್ ಮೀಱ್ಕದದಿ ಕಡುಸೊಕ್ಕಿನಿಕ್ಕುಪಾ ।
ಯ್ವಿಭವನನೇಕವಂಡಪತಿಯಿಂ ಸ್ವಜನೈತಿದಿನಾರ್ಮಪಾಯದಿಂ ॥
ದಭಿಭವವಂ ನಿವಿರ್ಚಿ ದೃಢತ್ವಯಂತ್ರಲೆಯಿಂ ಸಲೆ ಯಂತ್ರಿಪಂದದಿಂ ।
ರಭಸದೊಳಿನ್ನು ಕಾಲ್ಗವರ್ಗಳಾಗಳೆ ಸಂಕಲೆಯಂ ತೊಡರ್ಚಿದರ್ ॥ ೬೩೯

ಅಂತು ತೊಡರ್ಚಲ್ಲಿಗೆ ಪಱಿದಿನಂ ಸೃಗಾಲಿಕೆ ಬಂದು

ನೀನೆನ್ನೊಳ್ ಪೇಳ್ದಿ ಕಾರ್ಯಸ್ಥಿತಿಯನೊಸೆವ ತನ್ಮಿತ್ರನೊಳ್ ಪೇ
ಳ್ದೊಡಾತಂ । ತಾನೆಲ್ಲ ಕಾರ್ಯಂವಂ ಸ್ವೈತೆಗಿವನವನಿಂತೆಲ್ಲವಂ ಕೇಳ್ ಮು
ನುಪ್ಪೇ ॥ ಮಾನಂವಂ ಪೆರ್ಚಲೀಬಂಧನಮುಱಿಯಲಿನ ತ್ತಂತವರ್ ತನ್ನ
ಬುದ್ಧಿ । ಜ್ಞಾನಂ ಚಿತ್ರಾಗಲೇಕಾಂತದೊಳಿನಗಿಸಿತಂ ಪೇಳಿಲುದ್ಯುಕ್ತೆಯಾ
ದಳ್ ॥ ೬೪೦

ಅದೆಂತೆನೆ:—

ಸರಭಸದಿಂ ಧನಮಿತ್ರನ ।
ಪೊರೆಗಾಂ ಪದೆದ್ಯೆದೆ ನಿನ್ನ ನಿಜಮಿತ್ರಂ ಪೋ ॥
ದಿರುಳೇ ಪ್ರರರಕ್ಷಕರಿಂ ।
ಪರವಶನಾಗಿರ್ದು ಸಿಲ್ಕಿದಂ ವಿಧಿವಶದಿಂ ॥ ೬೪೧

ಎಂದು ಪೇಲಿಬೊಡಂ

ತಳವೆಳಗಾಗಿ ಮಾತಿನಿತು ತೋಱಿದೆ ಮೆಯ್ಮರವಟ್ಟು ಬುದ್ದಿಸಂ ।
ಚಲಿಸಿ ಮನಂ ಕಲಂಕಿ ಮತಿಗುಂದಿ ಕರಂ ಬಿಸುಸುಯ್ದು ಮಾನನರ್ ॥
ಕಳೆವವರಾರ್ ವಿಧಾತೃಬಲಮುಂ ನಿಜಬುದ್ಧಿಯೊಳೆಂದು ನುತ್ತವಂ ।
ತಿಳಿದು ಮಗುಳ್ದಿ ಮನ್ಮುಖವನೀಕ್ಷಿಸಿದಂ ಧನಮಿತ್ರನಾಕ್ಷಣಂ ॥ ೨೪೨

ಅಂತಾತನೆನ್ನ ಮುಖಮುಂ ನೋಡಲಾಂ ಮತ್ತ ಮಿಂತೆಂದೆಂ:—

ನೀನುವ್ಮಳಿಸಲ್ಬೇಡ ನಿ ।
ಜಾನುಜರಂ ನಿನಗಮಿನಗಮಿಯುದ್ದವ ಭಯಮುಂ ॥
ತಾನದನಱಿಯಲ್ ತನ್ನನ ।
ನೂನದೆ ಪೇಳ್ದಿಟ್ಟದಂತೆ ಮಾಡಿಪ್ಪದು ಕೆಳೆಯಾ ॥ ೨೪೩

ಅದೆಂತೆಂದಾತಂ ಬೆಸಗೊಳ್ವುದುಂ;

ಅಂಗನೃಪೇಶ್ವರನ ಸಭಾ ।
ರಂಗಕ್ಕತಿದೀನಭಾವದಿಂ ಪ್ರೋಗಿಯೆ ಸಾ ॥
ಷ್ಟಾಂಗನನುಸ್ಮಾರಂಗೆ ।
ಯ್ದಿಂಗಿತವಱಿದಿತ್ತ ಚಿತ್ತವೆಂಬುದು ಕೆಳೆಯಾ ॥ ೨೪೪

ಕವಿತೆಯೊಳಕ್ಷದ್ಯೂತಾ ।
ದಿವಿನೋದನವಿದ್ಯೆಯೊಳ್ ಕಳಾಗಮಚಾತು ॥
ರ್ಯವಿಧಾನದೊಳ್ ಸಮಂತೊ ।
ಪ್ಪವನಿಪರ್ಗಂ ರಾಗಮುಂಜರಿಯು ಪತಿಯೆಂಬಂ ॥ ೨೪೫

ಆತಂಗವೆನಗವೊಲ್ದಿತ ।
ರೇತರಸೌಹಾರ್ದವಾಗಲಾನಾತನ ತ ॥
ತ್ಕಾಂತೆಗೆ ಮಿತ್ರವಧೂಸು ।
ಪ್ರೀತಿಯಿನುಪಚಾರಭಾವನುಂ ಮಿಗೆ ಮಾಟ್ಪೆಂ ॥ ೨೪೬

ಅಂತಾಂ ಮಿತ್ರಸ್ತ್ರಿಯೆಂಬ ಭಾವದಿಂ ಸ್ನೇಪಂಗೆಯ್ದನೇಕಸುಗಂಧವಸ್ತು ಪ್ರದಾನಸನ್ಮಾನದಿಂ ಸ್ನೇಹಂಗೆಯ್ಯಲದನಾನುರೂಪ್ಯಂ ವಿಪರೀತಭಾವಂಗೆಯ್ದು

ಅಂತಾವಮೂರ್ಖಂ ವಿದ್ಯಾ ।
ವಂತಂ ಮುಳಿದೆನ್ನ ಚರ್ಮಭಸ್ತ್ರಿಕೆಯಂ ಕ ॥
ಳ್ದಂ ತರಿಸಿ ಕೊಟ್ಟು ಬರ್ದುಕಿಸ್ಪ ।
ದೆಂತಾನುಂ ಪದೆದು ದುರ್ಬಲಂಗೆ ನೃಪಾಲಾ ॥ ೪೮೯

ಮುನ್ನರ್ಥಪತಿಗೆ ನಿಲ್ಕಿ ।
ದೆನ್ನ ಜಿನಾನರ್ಘ್ಯರತ್ನವುಂ ಕುಡಿಸಿದೆ ಕೇ ॥
ಳನ್ನೊಯ್ದು ಧೂರ್ತನಿಂ ಕುಡಿ ।
ಸುನ್ನತಿಯಿಂದಜಿನರತ್ನವುಂ ಧರಣೀಶಾ ॥ ೪೯೦

ಅದಲ್ಲದೆಯುಮವನೆನ್ನ ಚರ್ಮರತ್ನವುಂ ಕಳ್ಪಿ ಪೋಗುತ್ತುಂ ನಗರರ
ಕ್ಷಕರ ಕೆಯ್ಯೊಳ್ ನಿಲ್ಕಿದನೆಂದರಸಂಗೆ ಪೋಗಿ ಪೇಟಿಲೆಂದೆನ್ನಂ ನಿನ್ನೆಡೆಗೆ ಕ
ಳುಹಿದನೆಂದಾಂ ಪೇಟಿಲ್, ಧನಮಿತ್ರನಾಗಳರಸನ ಸಾರಣ್ಗೆ ಪೋಗಿಯಾಂ
ಪೇಳ್ದಿ ಕ್ರಮದಿಂದೆ ಪೇಟಿಲರಸಂ ಸರೋಷನಾಗಿ

ನೀಂ ಪೋಗು ಚರ್ಮಭಸ್ತ್ರಿಕೆ ।
ಯಂ ಪೆಂಪಿಂ ತರಿಸಿ ಕುಡುವೆನೆಂದು ಮಹೀಪಾ ॥
ಲಂ ಪದೆದು ಕಳಿಸಲಾತನ ।
ಲಂಪಿಂ ಬಂದಂ ನಿಜಾಲಯಕೆ ಧನಮಿತ್ರಂ ॥ ೪೯೧

ಅಂತು ಧನಮಿತ್ರಂ ಬಂದು ಸಂತಸದಿಂದೆನ್ನಂ ಕರೆದು, ನೀಂ ಪೋಗಿ ಮು
ನ್ನಿತ್ರಂಗೆ ತದ್ವೃತ್ತಾಂತಮುಂ ಪೇಳೆಂದೆನ್ನಂ ಮಗುಚ್ಚಿ ಕಳಿಪಿದನೆಂದು
ಸೃಗಾಲಿಕೆ ಪೇಟಿಲಾನನರ್ಕ್ಕೆ ಪರಿಣಾಮಿಸಿ,

ಇನ್ನೆನ್ನಂ ಬಿಡಿಸುನ ಕಾ ।
ರ್ಯಂ ನಿನ್ನಿಂದಲ್ಲದಾಗದೆಂದವಳೊಳ್ ಪ್ರ ॥
ಚ್ಛನ್ನವೆನಿಸಿಪ್ಪ ಮಾತುಗ ।
ಳನ್ನಯದಿಂ ಪೇಳ್ದೆನಱಿವ ತೆಱದಿಂದಾಗಳ್ ॥ ೪೯೨

ಅಂತು ಪೇಟಿಲ್ಲಾಂ ಸೃಗಾಲಿಕೆಯಂ ಕಳಿಪಿ
ಮುಳಿದೆನ್ನ ಕಾಲ ಬಲ್ಸಂ ।
ಕಲೆಯುಂ ಮುಱುದಿಕ್ಕಲಾಪ್ಪ ದುಳಿಕೊಳ್ಕವೀಂ ನಿ ॥

ಕ್ಷ್ಮಲವೆನಿಪ ರಾಗವುಂಜರಿ ।
ಯೊಲವಂ ಬಿಡಲಾಱದಿರ್ದೆನಲ್ತ್ತಿ ನೃಪಾಲಾ ॥ ೨೫೩

ಅದಱಂ ಬಂಧನದುಃಖವುಂ ಕೆಲವು ದಿನವುನುಭವಿಸುತ್ತಿರ್ದೆನಂ, ಕೆಲು ದಿನದಿಂ ಮೇಲೆ ಮಗುಟ್ಟಿ ಸೈಗಾಲಿಕೆ ಒಂದು,

ಏಂ ಕೆಳೆಯಾ ಪಲದಿವಸಂ ।
ಸಂಕಲೆಯಾಯಾಸದುಃಖಮುಂ ತಳಿದೆಯದ ॥
ಕಾರ್ಂ ಕಂಡೆನೊಂದು ತೆಱನಂ ।
ನೀಂ ಕಲ್ಪಿಸಿದಂತೆ ಕೇಳಿನುತ್ತಿಂತೆಂದಳ್ ॥ ೨೫೪

ಅದೆಂತೆನೆ:—

ಭೂಲಲನೇಶನೆಂಬ ಪೆಸರ್ವೆತ್ತ* ಸೆವಂಗನೃಪಾಲಪುತ್ರಿಯಂ ।
ಬಾಲಿಕೆಗೊರ್ಬ್ಬಮಂಗಲಿಕೆಯುಂಬಿಕೆಯುಂಬಿಕೆಯಾಸವಿಸಾಪದೊಳ್ ॥
ಲೀಲೆಯಿನಿಪ್ಪ ಭಿಕ್ಷುಕಿಯು ಜೆಂಬುಜಿಯೊಳ್ ಪದೆದಾಂ ತದುರ್ವರಾ ।
ಪಾಲಕನಾಲಯಕ್ಕೆ ಪದೆದೆಯ್ದಿದೆನೊಂದು ದಿನಂ ಕುಮಾರಕಾ ॥ ೨೫೫

ಸುರಗಿರಿಯಂ ಸರೋಜಭವನೆಂಬ ಮಹಾರಥಕಾರನೊಲ್ದ ಕಂ ।
ಡರಿಸಿ ವಿಚಿತ್ರಪುತ್ರಿಕೆಗಳಂ ಪರಿರಂಜಿಸಿ ಚಂಪೆಯಲ್ಲಿ ತಂ ॥
ದಿರಿಸಿದನೆಂಬಿನಂ ಜನವುನೋಹರವಾಗಿ ಪೊಗಟ್ತೆಗೊಸ್ಪವು ।
ಪ್ಪರಿಗೆಗಳಂ ನೆಗಟ್ತೆವಡೆದಿರ್ದುದು ಸೌಂದರರಾಜಮಂದಿರಂ ॥ ೨೫೬

ಅಂತೆಸೆವ ರಾಜಮಂದಿರದಲ್ಲಿ

ನಗುವಲಗರ್ಣ್ಣ* ಕಾಂತಿ ಸುಲಿಸಲ್ಗಳ ಕಾಂತಿ ಕಪೋಲಕಾಂತಿ ಸೆ ।
ಳ್ಗುಗುಗರ್ಗಳ* ಕಾಂತಿ ಪಚ್ಚಳಿಸುವಂಗಲತಾಕೆಯ ಕಾಂತಿ ಬಳ್ಕೆಯುಂ ॥
ಚುಗಳೆಳವೆಂಡಿರಾದುವೆನಿಪೊಂದಭಿಶಂಕೆಯನುಂಟುಮಾಟ್ಪಿನಂ ।
ವೃಗಶಿಶುನೇತ್ರೆಯರ್ ವೆಱೆದರೋಲಗದೊಳ್ ಧರಣೀಶಪುತ್ರಿಯಾ ॥ ೨೫೭

ರತಿಯು ವಿಲಾಸವಂ ಶಚಿಯು ಸಂಪದನುಂ ಗಿರಿಜಾತೆಯೋಜೆಯುಂ ।
ಕ್ಷಿತಿಸುತೆಯೊಳ್ಪವುಂ ಸಿರಿಯು ಸೌಷ್ಠವನುಂ ವುನವೊಲ್ದು ಭಾರತೀ ॥
ಪತಿ ನಲಿದೊಂದುಗೂಡಿ ಪಡೆದಂತೆವೊಲೊಸ್ಪವಳಂ ವಸುಂಧರಾ ।
ಪತಿಯು ಕುಮಾರಿಯಂ ಪಡೆದು ಕಂಡೆನತೀವನುನೋನುರಾಗದಿಂ ॥ ೨೫೮

ಅಂತಾಕುಮಾರಿಯುಂ ಕಂಡು ಪ್ರತಿದಿನಸಂ ರಾಗಮುಂಜರಿಯಿಂ ಬೀಚ್ಚಿ ಚಿತವಸ್ತುಗಳಂ ತಂದು ಕೊಟ್ಟವರಿರ್ಬರ್ಗಮನ್ಯೋನ್ಯಸ್ನೇಹಂ ನಿಮಿರ್ಚಿ ಯಾನಂಬಾಲಿಕೆಯಿಂ ಪ್ರಸಾದಂಬಡೆದು ನಿತ್ಯಸವಿಾಪಸೇವೆಯುಂ ಮಾಡುತಿರ್ಪಿನವೊಂದುದಿನಂ

ಗಗನಶ್ರೀಗನುರಾಗಮುಂ ಮಿಱುಯುತುಂ ಸಂಪ್ರೀತಿಯಿಂ ಜೊನ್ನವ ।
ಕ್ಕಿಗೆ ಬೆಳ್ದಿಂಗಳ ಸಾರಮುಂ ಕಱುಯುತುಂ ಪಂಕೇಜಿನೀಪಚ್ಚೆ ತ್ತಾಂ ।
ತಿಗಳಂ ದರ್ಶನಮಾತ್ರದಿಂ ಜಱಿಯುತುಂ ಕಾಮಾಂಧಸಂದೋಹದಂ ।
ತಿಗಳುತ್ತುಂಗರದಂಗಳಂ ಮುಱಿಯುತುಂ ಮಿಯ್ದೋಱಿದಂ ಚಂದ್ರಮಂ ॥

ಅಂತು ಚಂದ್ರೋದಯದೊಳ್

ಸುಕರಾಬ್ಧಿಯೊಳ್ ಸುಧಾಕಾ ।
ತುಕದಿಂ ಪಾಂಡವನಿವಾಸದಂತಿರೆ ಪಾಂಚಾ ॥
ಲಿಕೆಯಂತೆಸೆವುಪ್ಪರಿಗೆಯೊ ।
ಳಕಳಂಕಶಶಾಂಕಮುಖಿ ಕರಂ ಮಿಱಿದಿರ್ದಳ್ ॥ ೬೬೦

ನಿರುತಂ ಸೌಹಾರ್ದ್ರ ಸತ್ಕೋಮಳತನುಲತಿಕಾಚಿತ್ರೆ ಗಾಂಭೀರ್ಯನ ವ್ಯೋ । ತ್ತರೆ ಮಿತ್ರಾಶ್ಲೇಷೆ ರತ್ನಕ್ರವಣೆ ಸುರಭಿದೋರ್ಮೂಲಸಂಪನ್ನೆ ಹಸಾಂತಂ ॥ ಬುರುಹಶ್ರೀರವೈ ಮುಗಾರುಣಮುಣಿಕಿರಣಾಕೀರ್ಣಸೌಂದ ರ್ಯಪೂರ್ವಾ । ಧರೆ ತಾರಾಟೇವಿಯಂತುತ್ಪಲನಯನೆ ಕರಂ ಕಾಂತಿಯಿಂ ದೊಪ್ಪತಿರ್ದಳ್ ॥ ೬೬೧

ಅಂತು ಕನುನೀಯಕಾಂತಿಯುಂ ತಳೆದ ಕಾಂತೆಯುಂತವನಱಿದು

ಅಡಿ ಮುಡಿ ಜಂಘೆ ನುಣ್ಗುರುಳ್ಗಳೊಳ್ಗಡೆ ಪ್ರಬ್ರುಟ್ಟಿನಿತಂಬಮಕ್ಷಿಗಳ್ ।
ನಡು ಮೊಲೆ ಮೆಲ್ಪು ಬಿಣ್ಪಿಸಿದು ಕೊಂಕು ಸುದೀಧಿತಿ ಕರ್ಪ್ರ ಗೌರವಂ ॥
ಕಡುನಿಡಿದಲ್ಪಮುನ್ನತವೆನಿಪ್ಪನಱಿಂ ಸುಕುಮಾರವೃತ್ತಿಯುಂ ।
ಪಡೆದ ನೃಪಾಲನಂದನೆಯನೊಯ್ಯನೆ ಪೊರ್ದಿದೆನಾಂ ಕುಮಾರಕಾ ॥ ೬೬೨

ಅಂತು ಪೊರ್ದಿ,

ಕಾರುಳಂ ನುಣ್ಣಿಪ ವೇಣಿಯುಂ ಸಸಿನೆಗೆಯ್ವೀಕಾವಳೀರತ್ನಮುಂ।
ರತದಿಂ ಲಿಕ್ಕಿಪ ಪತ್ರವಲ್ಲಿಗಳ ಕೊಂಕಾ ತಿರ್ದುವಿಕ್ಕಿರ್ದ ನೂ ॥

ಪುರವಂ ಸೈತಿಡುವೆಂಬ್ಗೆಯುಜ್ಜುಗದೊಳಾಂ ಮೆಯ್ಸೋಂಕಿ ತತ್ಕಾಮಿನೀ।
ಕರುಣಾಲೋಕನಸಿದ್ಧಿಯಂ ಪಡೆದುಮಂತಿರ್ದೆಂ ಸಮುಭ್ಭರ್ಣದೊಳ್ ॥

ಅಂತಿರ್ದು,

ಅಂಬಾಲಿಕೆ ನಿನ್ನಯ ಕಿವಿ ।
ಯಿಂ ಬಿಟ್ಟಿಪ್ಪುದೆಂದು ಜಗುಟ್ಟಿ* ಚೆನ್ನೆಯ್ದಿಲ ಪೂ ॥
ವಂ ಭರದೆ ತೆಗೆದು ಬೀಸಿದೆ ।
ನಂಬರದೊಳ್ ಪಾರಿವಾಳವುಂ ಬೆದಱಿಪವೋಲ್ ॥ ೬೬

ಆಸನಮಯದೊಳ್

ತನುಸೌಮ್ಯಾ ನಾಡೆ ಮೂರ್ಖಿಂ ಜನಕೆ ವಿರಹಿತಂ ಸುಸ್ವತಂತ್ರಂ ಮುಹಾಯಂ । ವನವುತ್ತಂ ನೀತಿಮೂಢಂ ವಿಬುಜನಸುಲಭಂ ನೂತ್ನಸೇವಾಭಿರಾಮಂ ॥ ಧನಿಕಂ ಸ್ತ್ರೀಲಂಪಟಂ ಕಾಮುಕತತಿಪರಿವಾರಂ ಕುಮಾರ್ಗಾನ್ವಿತಂ ಸ । ಜ್ಞನದೂರಂ ತತ್ಪರೀರಕ್ಷಕನಧಿಕಬಳಂ ರಂಜಿಪಂ ಕಾಂತಕಾಖ್ಯಂ ॥ ೬೬

ಅಂತಾಕಾಂತಕನೆಂಬ ತಳವಾಱಿನಾಯಕಂ ಅರಸನೋಲಗದಿಂ ಕಳಿಪಿಸಿಕೊಂಡಂಬಾಲಿಕೆ ಕುಳ್ಳಿರ್ದುಪ್ಪರಿಗೆಯ ಕೆಳಗೆನೆ ಪೋಗುತ್ತಿರೆ,

ನಲಿದೆನ್ನ ಕಯ್ಯ ಚೆನ್ನೆ ।
ಯ್ದಿಲ ಪೂವಂ ನೋಡಿ ಕಾಂತಕನ ಮುಸ್ತಕದೊಳ್ ॥
ಫಲಿಲನೆ ಬಿಸುಡಲನಂ ತ।
ನ್ನೊಲವಿಂದಂ ಮೇಲನೀಕ್ಷಿಸುತೆ ನಸು ನಕ್ಕಂ ॥ ೬೭

ಇದನೆಲ್ಲವನಂಬಾಲಿಕೆ ।
ಮುದವೆಸೆಯಲ್ ಕಂಡು ಮುಂದಹಾಸಂ ತುಳ್ಕಿಲ್ ॥
ಪದೆದೆನ್ನಂ ನೋಡಲ್ಕ್ಕಾ ।
ನದನಾಮೂರ್ಖಂಗೆ ತೋಱುವೆಂ ಕಣ್ಗುಱುಪಿಂ ॥ ೬೮

ಅಂತಾಕಾಂತಕಂಗೆ ಕುಮಾರಿಯ ಸ್ವಭಾವಚೇಷ್ಟೆಗಳಂ ವಿಪರೀತಚೇಷ್ಟೆಗಳೆಂಬಂತು ತೋಱುವ

ಎನ್ನವೊಲಾರ್ ಕೃತಾರ್ಥರಿಳೆಯೊಳ್ ಮೀಱುವಗ್ಗದ ರಾಜಪುತ್ರಿಯೊ ।
ಲ್ದೆನ್ನನವೇಕ್ಷೆಯಿಂ ಪಿಡಿದ ನೆಯ್ದಿಲ ಪೂವಿನೊಳಟ್ಟು ತನ್ನ ಪಾಂ ॥

ಗನ್ನಿಮಿರ್ದಂತಿರೊಯ್ಯನೊಸೆದೀಕ್ಷಿಸಿ ಮೆಲ್ನಗೆಯಂ ತುಳುಂಕಿದಳ್ ।
ತನ್ನಿದಿರೊಳ್ ದಿಟಕ್ಕೆನುತೆ ಮೆಯ್ಮಱೆದಂ ಕಡುಕೆಯ್ದು ಕಾಂತಕಂ ॥ ೬೬

ಅಂತಾತಂ ಮೆಯ್ಮಱೆದು ತನ್ನಾಸೆಯಂ ಸಂಬಂಧನಾರ್ತಿಗೆ ಪಿಂತಿರಿಸಿ ಎಂ
ತಾನುಂ ಮಂದಗತಿಯಿಂ ನಿಜಮಂದಿರಕ್ಕೆ ಪೋಗಲಾ ಮುಖುದೆವಸಮುವನ
ಭವನಕ್ಕೆ ಪೋಗೆಲ್

ತನ್ನಸು ಬಂದವೊಲೊಲವಿಂ।
ದೆನ್ನಂ ಸನಾಥಾನದಾನಪೂಜಾಕ್ರಮದಿಂ ॥
ಮನ್ನಿಸಿ ಕಾಂತಕನೆನ್ನೊಳ್ ।
ಕನ್ನೆಯ ಸಂಬಂಧವಾರ್ತೆಗೆಳಸುತ್ತಿರ್ದಂ ॥ ೬೭

ಅಂತಿರ್ದ ಭಾವನನುಡಿದು,

ಮುಕರಾಂಕಂ ಬಂದೊಡಂ ಮೆಚ್ಚದ ನಿರುಪಮಸೌಭಾಗ್ಯಸಂಪನ್ನೆಯುಂ
ಬಾ । ಲಿಕೆ ನಿನ್ನಂ ಕಂಡು ಕಣ್ಣೊಲ್ತ ತಿಪಯುನುದನಾಸ್ತ್ರಗ್ನಿಸಂತಾಪ
ದಿಂ ಚಂ॥ ದ್ರಿಕೆಯೊಳ್.....ನೀರ್ವಸೆಯೊಳೊಡಲನಟ್ಟಾಡುವೋಲ್ ಮಾ
ಡಿದೈ ಕಾಂ। ತಕ ಕಾಂತಾಜಿತ್ತವಶ್ಯಂ ವಿವಿಧನವಕಳಾವಮೂರ್ತಿ ನೀಂ ಸತ್ಯ
ಮುಲ್ತೀ ॥ ೬೮

ಎಂಬುದುಂ,

ತಾನೆ ಮನೋಜರಾಜ್ಯಪತಿ ತಾನೆ ವಿಟಾಗ್ರಣಿ ತಾನೆ ಕೋವಿದಂ।
ತಾನೆ ವಯೋವಿಳಾಸ.....ಕಂ ॥
ತಾನೆ ವಿಳಾಸಿನೀಜನದ ಕೂಟದ ಜಾಣ್ಮೆಗೆ ತಾನೆ ಮೋಹನಂ ।
ತಾನೆನಿಸ್ಪೊಂದಹಂಕೃತಿ ಕರಂ ನೆಲಸಿದ್ದುದು ಕಾಂತಕಾಖ್ಯನೊಳ್ ॥ ೬೯

ಅಂತಾತಂಗೆ ನಿಷ್ಕಾರಣದಿನೆಂತಾನುಂ ಕಾಮೋದ್ದೀಪನವನೊಡರ್ಚಿಯಾ
ದಿನಸಮಾನವನಿಂದಮೆಂತಾನುಂ ಕಳಪಿಸಿಕೊಂಡು ರಾಗಮಂಜರಿಯು ಮನೆಗೆ
ಬಂದು ಮಗುಟ್ಟಿದ್ದ ಮುಖುದೆವಸಂ,

ಲಲಿತಾಂಬರವೊಂದಂ ಪೂ ।
ಗಳ ಮಾಲೆಯನೊಳ್ಪುವೆತ್ತ ತಾಂಬೂಲಕಮುಂ ॥
ನಲಿದೆನ್ನ ಮನೆಯಿನುಯೆಂದಂ ।
ಕೆಲಬರ್ ಚೇಟಿಕೆಯರೊಡನೆ ಬರಲನುನ್ನಯದಿಂ ॥ ೭೦

ಅಂತವಂ ಕೊಂಡು ಪ್ರೋಗಿ

ಅಟ್ಟುದಳೊಲ್ದು ತನ್ನ ಮನದುತ್ಸವದಿಂ ಧರಣೀಶಪುತ್ರಿ ತಾ।
ನುಟ್ಟ ಸುವಸ್ತ್ರವಂ ಕುಸುಮಮಾಲಿಕೆಯಂ ಪ್ರೊಸವೀಳೆಯಂಗಳಂ ॥
ಕೊಟ್ಟು ಬರಲ್ಕೆ ತನ್ನೆಸವ ಚೇಟಿಯರಂ ನಿನಗೀಸಿ ಕೊಂಡು ನೀಂ।
ನೆಟ್ಟನೆ ಕೂರ್ಪುದಾಕೆಗೆ ಮನಃಪ್ರಿಯರಿಂ ಪಿಱರಾರೊ ಕಾಂತಕಾ ॥ ೨೩

ಅದಲ್ಲದೆಯುಂ,

ಜ್ಞಾನಿಗಳಿಂದೆ ಕೇಳ್ದಱಿವೆನಾಂ ನಿಜಲಕ್ಷಣಮಂ ತದೀಯಧಾ ।
ತ್ರೀನರಪಾಲಕತ್ವವನಿಶಂ ನೃಪನಂದನೆಯಂಗಸಂಗದಿಂ ॥
ತಾನಿದಿವರ್*ಪ್ರ್ದೆಂದು ಪದೆಪಿಂದಿದು ಸತ್ಯವಿಳೀಶ್ವರಂಗೆ ಸಂ ।
ಜಾನವುದಿಲ್ಲದಿರ್ಪ ಕುಱುಪಿಂಗಿದು ಕಾರಣಮುಲ್ತೆ ಕಾಂತಕಾ ॥ ೨೪

ಎಂಬುದುಮವನಿಂತೆಂದಂ:—

ಶಂಬರಸೂದನನಾದ್ಯೆರ್ ।
ದಂಬುಗಳ್ಳೈಸಾಸಿರಂಬೆನಲ್ ಪೂಣಿಸಿಯಾ ॥
ಪಿರಿಂ ಬಿಡದೆಚ್ಚಪನೆನ್ನಂ ।
ನೀಂ ಬಲ್ಲಂತೆಸಗು ಕಾರ್ಯಮಂ ಕವಿಳಾಕ್ಷೀ॥ ೨೫

ಎಂದು ಮತ್ತಮಿಂತೆಂದಂ:—

ಎಲೆ ಕೆಳದಿ ನೃಪಸುತೆಯ ತಂ ।
ಬುಲವಂ ನಾಳೆನಗೆ ತಂದು ಕೊಟ್ಟೆನ್ನ ಸುವಂ ॥
ನೆಲೆಗೊಳಿಪುದೆಂದೊಡಾನಾ ।
ಗಲಿ ಎಂದಲ್ಲಿಂ ತಳರ್ದ್ದು ಮನೆಗೆಯ್ತಂದೆಂ ॥ ೨೬

ಅಂತಾದಿನಂ ಮನೆಗೆ ಬಂದು ಮಱುದಿವಸಂ,

ಮಿಸುಪೆನ್ನ ತಂಬುಲವನೊ ।
ಳ್ಪಿಸೆಯಲ್ ತಂದಿತ್ತು ನಿನ್ನ ತಂಬುಲಮಂ ಬೇ ॥
ಟ್ಪಿ ಸುವಸ್ತುವಂ ಕುಪೂರಿಗೆ ।
ಪ್ರೊಸತೆನೆ ಕರುಣಿಸುವುದಲ್ತೆ ಕಾಂತಕ ನಯದಿಂ ॥ ೨೭

ಎಂದೊಡವಂ ಬೇಟ್ಪಿ ಸುವಸ್ತುವಂ ತಂಬುಲಮಂ ಕೊಟ್ಟೆನ್ನಂ ಕಳಿಪೆ,

ಅವನೊಲ್ದಿತ್ತನುಪನುಸಕ ।
ಲವಸ್ತುವಂ ಕೊಂಡು ಬಿಸುಟು ತಂಬುಲವಂ ಸಂ ॥
ಭವಿಸಿತ್ತು ಮಿತ್ರಕಾರ್ಯಂ ।
ನವೀನವೆಂಬಂತೆನುತ್ತೆ ಮನೆಗೆಯ್ತಂದೆಂ ॥ ೨೭೭

ಅಂತು ಬಂದು ಮಱುದಿವಸಂ

ಮದನದವಾಗ್ನಿ ಯೌವನವನಾಂತಬೊಳರ್ಚಿಸೆ ಚಂದ್ರಕಾಹಿಮಂ ।
ವದನಸರೋಜಮಂ ಮುಸುಕೆ ತದ್ವಿರಹೋಗ್ರಮಹಾಂಧಕಾರಮು ॥
ನ್ಮದಕುಚಕೋಕಮಂ ಕವಿಯೆ ಸೈರಿಸಲಾರ್ಪಳಿ ಸೌಕುಮಾರ್ಯಸಂ ।
ಪದದ ಸರೋವರಂಬೊಲಿಸೆವಂಗನೆ ಪೇಟ್ ಮನವೊಲ್ದು ಕಾಂತಕಾ ॥

ಎಂದು ಮತ್ತಂ

ನಳರಾಜಂ ದನುಯಂತಿಯಂ ಪದೆಪಿನಿಂ ದುಷ್ಯಂತಭೂಪಂ ಶಕುಂ ।
ತಳಿಯಂ ಭಾವಿಸಿ ಚಂದ್ರಚೂಡನೊಲವಿಂ ಕಾದಂಬರೀದೇವಿಯುಂ ॥
ನಲವಿಂ ಪಾಂಡು ನೆಗಳ್ದಿ ಮಾದ್ರಿಯನಲಂಪಿಂ ಕೂಡಿದಂತೊಲ್ದು ನಿ ।
ಶ್ಚಲದಿಂ ಕಾಂತಕ ಕೂಡು ನೀಂ ಮೆಱೆಯುತಿರ್ಪಂಬಾಲಿಕಾದೇವಿಯುಂ ॥

ಎಂದೊಡನುವನೆನ್ನೊಳಿಂತೆಂದಂ:—

ಕಮಳಿನಿಯಂ ದಿನಪತಿ ತ ।
ನ್ನ ಮರೀಚಿಯಿನೊಲ್ದಲರ್ಚಿದಲ್ಲದೆ ಮುಕರಂ ॥
ದನುನೀಟಲುಂಟೆ ಮತ್ತ ।
ಭ್ರಮರಕ್ಕಿದು [ಸಹಜಮಲ್ತಿ] ಕಮಲದಳಾಕ್ಷೀ ॥ ೨೮೦

ಎಂದು ಮತ್ತಂ

ಕಾರಣಮಿಲ್ಲದೆ ಕಾರ್ಯವಿ ।
ಚಾರಂ ಸಿದ್ಧಿಸದು ಮನ್ಮನಃಪ್ರೀತಿಗೆ ನೀಂ ॥
ಕಾರಣಮಪ್ಪುದಱಿಂ ತ ।
ನ್ನಾರಿಯ ಕೂಟಮನೊಡಚರ್ಪುದು ಪದೆದೆನ್ನೊಳ್ ॥ ೨೮೧

ಅದಲ್ಲದೆಯುಂ

ತೊಳಗುವ ಕನ್ಯಾಂತಃಪುರ ।
ದೊಳಗಿರ್ಪಳನೆಂತು ಭೇದಿಸಲ್ಬಲ್ಲಂ ಕೋ ॥

ಮುಳಿಯುನುಱೆ ಪೇೞ್ ಸೈಗಾಳಕೆ ।
ತಿಳಿವಂತೆನಗೆಂದು ಕಾಂತಕಂ ಬೆಸಗೊಂಡಂ ॥ ೨೪-೨

ಅಂತು ಬೆಸಗೊಳಲಾತಂಗಿಂತೆಂದೆಂ:—

ಅವನಂ ಬಲ್ಲೆಂ ಕಾಂತಕ ।
ನವೀನಮೆನೆ ಚಮರ್ತ್ಕಾರಮಂ ಕಳ್ದ ಕಳಾ ॥
ಧವನಂ ಸಮಸ್ತ ಚಾರ್ಯರ್ ।
ಪ್ರವೀಣನಂ ಲೋಕಜನದೊಳತಿಸಾಹಸಿಯುಂ ॥ ೨೪-೩

ಆಕಳ್ಳನ ಸಮೀಪಕ್ಕೆ ಪೋಗಿ,

ನಿನ್ನಂ ಬಿಡಿಸಿದಪೆಂ ನಂ ।
ಬೆನ್ನಂ ಸಂದೇಹಮಿಲ್ಲವೆಂದೊಲವಿಂದಂ ॥
ನನ್ನಿಯನೀಯೆ ಬಱಿಕ್ಕವ ।
ನಿನ್ನಿನ್ನಯ ಕಾರ್ಯಸಿದ್ಧಿಯಕ್ಕುಮೆಮೋಘಂ ॥ ೨೪-೪

ಅದೆಂತೆನೆ: —

ಕಾರಾನಿಲಯಕ್ಕರಮನೆ ।
ಸೂರೆಯದಂ ಕನ್ನವಿಕ್ಕಿಸುವಮವನಿಂ ಮು ॥
ತ್ತಾರಱಿಯದನ್ನೋಲಿಕ್ಕುವ ।
ಮೋರಣದಿಂದವನ ಕಾಲ್ಗೆ ಬಲ್ಸಂಕಲೆಯಂ ॥ ೨೪-೫

ಫಣಿಮುಖನುಂ ಕೊಂಡೊಡನಂ ।
ಫಣಿರಾಜಸಮಸ್ತಲೋಕಪರ್ಯಂತಂ ಮೆ ॥
ಯ್ದಣಿಯದೆ ಕನ್ನವನಿಕ್ಕುವ ।
ನಣಕವಿದಲ್ತಱಿವೆನೆವನ ಬಲ್ವಿನ ಹವಣಂ ॥ ೨೪-೬

ಅಂತವನಂ ಕನ್ನವಿಕ್ಕಲ್ ಬಱಿಯಂ

ಯುವತಿಯೆ ಸಾರಣ್ಗೆ ಸುರಂ ।
ಗವದೊಳಗಣಿನೆಯ್ದೆ ಪಲವು ದಿವಸಂ ಚಿತ್ತೋ ॥
ದ್ಭವಕೇಳೀಸಾಖ್ಯಂ ಸಂ ।
ಭವಿಸಿಕುಂ ನಿನಗೆ ಕೇಳ ಕಾಂತಕ ಸತ್ಯಂ ॥ ೨೪-೭

ಎಂದಾಂ ಪೇಟಿಲನಂ ಗೃಹದ್ವಾರದೊಳ್ ಬಂದಿರ್ದಪನೆಂದು ಪೇಳ್ದು ಸೈ
ಗಾಳಕೆ ಮತ್ತಮಿಂತೆಂದಳ್ :—

ಕನ್ನವನಿಕ್ಕಿದ ಬಟ್ಟಾಕಂ ।
ನಿನ್ನಂ ಕೊಲ್ವಂ ದುರಾತ್ಮಕಂ ಕಾಂತಕನೆಂ ॥
ದೆನ್ನೊಡನೆ ಪೇಟ್ದಿಳಾಕೆ ಲ ।
ಸನ್ನೀತಿಯೊಳಿರ್ದೆಂದು ತನ್ನನುಯದಿಂ ॥ ೮೪೪

ಎಂದೊಡಾನಂತೆಗೆಯ್ವೆನೆಂದು ಕಾಂತಕನಂ ಬರಿಸೆಂಬುದುವಳ್ ಕರೆ
ಯಲವಂ ಬಂದು

ಆಯಾಸಂಬಡಿಸಿದನ ।
ನ್ಯಾಯಂ ನಿನ್ನಂ ನೃಪಂ ಮಗುೞ್ದಾತಂಗ ॥
ತ್ಯಾಯತದಿಂ ಬಿನ್ನವಿಸಿಯು ।
ಪಾಯದೆ ನಾಂ ನಿನ್ನ ಬಿಡಿಸುವೆಂ ನಂಬೆನ್ನಂ ॥ ೮೪೫

ಎಂದು ಪ್ರತ್ಯಯವಂ ಮಾಡಿಯನಂತರಂ ಸುರಂಗದ ವೃತ್ತಾಂತಮುಂ
ಪೇೞ್ದೊಡಾನದಕೊರ್ಡಂಬಡಲವನೆನ್ನ ಸಂಕಲೆಯುಂ ಕಡಿಯಲ್

ಆನಿರ್ದೊಳಗಣಿನುರುಭುಜ ।
ಗಾನನದಿಂ ಕನ್ನವಿಕ್ಕಿ ಕನ್ಯಾಭವನ ॥
ಕ್ಕಾನಂದದಿಂ ಮದೀಯಾ ।
ಸ್ಥಾನಮನೆಯುದ್ದವನೊಲೆಯಿದೆಂ ನಿರ್ಭಯದಿಂ ॥ ೮೪೬

ಸ್ಫಟಿಕದ ಕುಟ್ಟಿಮಂ ಶಶಿಲಾಮಯಭಿತ್ತಿ ನವೀನವಪ್ರಸಂ ।
ಘಟಿತನಿಕಾಮತೂಣತತಿ ವಿನ್ಯಾಮವಂದನಮಾಲೆ ಚಂದ್ರಿಕಾ ॥
ಪಟಲಸದೃಗ್ವಿತಾನರುಚಿ ಮುಕ್ತಿಕಪತ್ರಿಕೆ ಪಕ್ಕಬಾಪಸಂ ।
ಕಟಕಬಲಪ್ರಕಾಶದೊದವಂ ತಳೆಯಲ್ ನೆಱೆಗುಂ ನೃಪಾಲಯಂ ॥ ೮೪೭

ಅದಱೊಳ್

ಕುಂಜರದಂತದಿಂದೆಸೆವ ಮಂಚದೊಳೊಪ್ಪುವ ಹಂಸತೂಲತ ।
ಲ್ಪಂ ಜಿತಚಂದ್ರಿಕಾಪಟಲಮೆಂದೆನೆ ಚಿತ್ರವಿಧಾನದೇೞ್ಪಿಯಿಂ ॥
ರಂಜಿಸಿ ಕಂಖದಿಂ ತೊಪೆದ ಭಿತ್ತಿ ಸುನುಷ್ಕಿ ಕದರ್ಪಣಂಬೊಲೊ ।
ಳ್ಪಂ ಜನವಕ್ತ್ರಮಂ ಬೆಳಗಲೀಂ ನೆಱೆದಿರ್ಪುದೊ ಸಜ್ಜೆಯಾಲಯಂ ॥

ಆಸಜ್ಜೆಯ ಮನೆಯೊಳ್ ಮಂಚದ ಮೇಲೆ,
ಎಡಗೆಯ್ಯಂ ತಲೆಗಿಂಬಿನೊಳ್ ಮಡಗಿ ವೃತ್ತಂಬೆತ್ತು ಕೆಂಪಪ್ಪ ನು ।
ಣ್ಮಡನುಂ ವಾಮಸದಪ್ರಗುಲ್ಫದೆಡೆಯೊಳ್ ಸೈತಿಟ್ಟು ಪಸಾ ಬ್ಜಮುಂ ॥
ಕಡುಚೆಲ್ವಪ್ಪ ನಿತಂಬದೊಳ್ ನಿಱಿಸಿ ಕಿಂಚಿಚ್ಛಾ ಸದಿಂ ಕಂತದೊಳ್ ।
ತೊಡಮಲ್ಲಾಡೆ ಮೃದೂರುತಲ್ಪದೆಸೆಯೊಳ್ ನಿದ್ರಾಂಗಿ ಕಣ್ಮುಚ್ಚಿದಳ್ ॥

ಮಿಸುಗುವ ಚೀನಪಟಂ ಲೀ ।
ಪಿಸಿವಂದದಿನೊಪ್ಪೆ ತನ್ನ ತನುಲತೆಯೊಳ್ ಕ ॥
ನ್ಗೆಸೆದಳ್ ದುಗ್ಧಾಂಬುಧಿಫೇ ।
ನಸಹಸ್ರಂ ತುಱುಗಿದಿಂದಿರಾಮೂರ್ತಿಯ ಪೋಲೆ ॥ ೯೪

ಚಂದ್ರಿಕೆಯೊಳ್ವಾಸಿಕೆಯೊಳ್ ।
ಚಂದ್ರಕಳಾಕಾಂತೆ ಶಯನದಿಂದೆಸೆದಳ್ನಿಲ್ ॥
ಚಂದ್ರಾನನೆ ಶಯ್ಯಾತಳ ।
ಸಾಂದ್ರದಿನೆಸೆದಿರ್ದಳಮಳನಿದ್ರಾಭರದಿಂ ॥ ೯೫

ಮತ್ತಮಲಕ್ತಕರಸದಿಂದಡಿಮೂಡಿದಂಘ್ರಿನಖದೀಪ್ತಿ ಲಾವಣ್ಯರಸಮೆಡೆ ವಿಡದೆ ಕಡೆಗೋಡಿವರಿವಂತಿರೆ ಕೆಂಪಚಿವ್ವಳಿತವಿಳಾಸದಿಂದೆಸೆವ ದಕ್ಷಿಣಜಾನುಪ್ರದೇಶಮುಂ, ಆಕಾಶಪರಿಷ್ಕಲ್ಪಮೆಂಬ ಕವಿಸಮಯಪ್ರಸಿದ್ಧಿಯಂ ಪಡೆದೆನಿಂದು ಪಾತಾಳಪರಿಲಗ್ನಮೆಂಬುಪಮೆಗಾಸ್ಪದಮುಪ್ಪೆನೆಂಬಂತೆಯನಲ್ಪ ತಲ್ಪದೊಳಿಲ್ದಿ ಮಧ್ಯಪ್ರದೇಶಮುಂ, ನಿತಂಬವಲ್ಲೀಕಮಂ ಪುಗಲೆಳಸಿದ ಫಣಾಧರಫಣಾಮಣಿಗಳೆಂಬಂತೆಸೆವ ಸೆಳ್ಳುಗುರ ಕಾಂತಿ ಬಳ್ಳಿವರಿಯೆ ನೀಡಿದ ದಕ್ಷಿಣಬಾಹುಲತೆಯುಂ, ಗಂಡವ ಂಡಲಪೂರ್ಣಚಂದ್ರಗೆ ಪರಿವೇಷಮಾದಂತಿರ್ದ ದಕ್ಷಿಣಕರ್ಣಪತ್ರಮುಂ, ವಾಮಕುಚಶೈಲತಟದೊಳ್ ಚೀನಪಟಚಂದನಚರ್ಚೆಯಿಂ ರಂಜಿಸುವಪಸವ್ಯಕುಚಲಿಂಗಮುಂ, ಮುಖಪದ್ಮದೊಳ್ ಗಱುವೊಯ್ವ ಪಱುವೆಯ ಮಱುಗಳಂತರಮೆ ಅರಲ್ದ ಕಣ್ಮಲರ್ಗಳುಂ, ಅರುಣಸರಸಿರುಹಚುಂಬನಕ್ಕೆಳಸಿದ ತರಣಿಮಂಡಲದಂತೆ ಎಡಗಿವಿಯೊಳ್ ಕಡುಚೆಲ್ವಿಂದೆಸೆವ ರತ್ನದೋಲೆಯುಂ, ನಾಗಕನ್ಯಕಾನಿರ್ಮುಕ್ತಸಿವೋರ್ಕದಂತಿಪನ್ನಿರ್ಮಲವಸ್ತ್ರಾಭರಣಮುಂ. ಸುಧಾಬ್ಧಿತುಷಾರಮುಂ ತಳೆದ ಸುಧಾ

ಸೂತಿಯುಂತಿರ್ದ ಮುಖಮೃಗಾಂಕಮಂಡಲಮುಂ, ನವರತ್ನಮಯತ್ರಿಸ
ರಹಾರನುನೋರಣದಿಂದಲ್ಲಾಡಿಸುವ ಮೆಲ್ಲುಸಿರ್ಗಳುನುತಿರವುಣೀಯುಮಾ
ದುವ್ರು. ಅಂತುಮಲ್ಲದೆಯುಂ,

ಸುರುಚಿರಮಾದ ದಂತವಸನಂ ನಸುಗೆತ್ತುವಿನಂ ಸಿತಾಕ್ಷಿ ನೀ ।
ಳ್ದರೆನುಗಿದಿರ್ಪಿನಂ ಕದಸ್ರು ನುಸ್ಪೆವುರೋಳ್ಗುನಾಂಪಿನಂ ಕುಚಾಂ ॥
ತರದ ನಿಜೋತ್ತರೀಯವಸನಂ ತೊಲಗಿರ್ಪಿನನುಲ್ಪಮಧ್ಯಮಂ ।
ಟ್ಟಿರೆ ಮೃದುತಲ್ಪದೊಳ್ ಮೆಱೆದಳಂಗನೆ ಮಂಗಳಮಾದ ನಿದ್ರೆಯಿಂ ॥
ದುಗ್ಧಾಂಬುಧಿಯೊಳ್ ಜನಿಸುವ ।
ಮುಗ್ಧೇಂದುಕಳಾವಿಳಾಸದಂತನುನಯದಿಂ ॥
ದಿಗ್ದವಳತಲ್ಪದೊಳೆ ವಿ ।
ದಗ್ಧಾಂಗನೆ ಮೆಱೆದಳೆಸೆವ ನಿದ್ರಾಭರದಿಂ ॥ ೮೯

ಕೆಳದಿಯರೆಲ್ಲರ್ ತಂತ ।
ವ್ಮಳವಡಿಕೆಯು ಠಾವಿನಲ್ಲಿ ಕಲ್ಪಲತಾಕೋ ॥
ಮುಳಿವೊಳ್ ಮೃದುತರಶಯ್ಯಾ ।
ತಳದೊಳ್ ಮೆಱೆದಿರ್ದರೆನ್ನ ಕಣ್ ಸೋಲ್ವಿನೆಗಂ ॥ ೯೦

ಅಂತಿರ್ದ ಕಾಂತೆಯಂ ಕಂಡು

ಇಂದೆನ್ನಪ್ಪಿಗೆ ಪರ್ವಮಾಯ್ತು ಮದನಶ್ರೀರಾಜ್ಯಮುಂ ಕಂಜೆನಾ ॥
ನಂದಂ ಮಿಕ್ಕುದು ಧೂಪವಾಸಿತಲಸತ್ಕನ್ಯಾಲಯಂಬೊಕ್ಕನೀ ॥
ಮುಂದಶ್ವಾಸೆಯು ನಿದ್ರೆಯುಂ ತೊಲಗಿಸಲ್ಕೀನೆಂಬಳೋ ಎನ್ನನೆಂ ।
ಬೊಂದುದ್ವೇಗದೊಳಿರ್ದೆನೊಂದು ನಿಮಿಷಂ ಸಾರ್ದಾಮಣಿಸ್ತಂಭಮಂ ॥

ಅಂತವಳಂ ಕಂಡು ಪರವಶನಾದಂತೆಯುಂ, ರತಿಸಮಾಧಿಯಂ ಪಡೆದಂ
ತೆಯುಂ, ಸ್ವರ್ಗಲೋಕಂಬೊಕ್ಕಂತೆಯುಂ, ಕಾಮನಿಧಾನವಂ ಕಂಡಂತೆ
ಯುಂ, ಸುಖಸಾಗರದೊಳ್ ಮುಟಿಂಗಿದಂತೆಯುಂ, ಕುಸುಮಶರದಿಂ ಬದ್ಧ
ನಾದಂತೆಯುಂ, ಮನಮುಂ ಮಾಱುಗೊಟ್ಟಂತೆಯುಂ ಇರ್ದು ಎಂತಾನುಂ
ತಿಳಿದು ಕೆಲದ ಭಿತ್ತಿಭಾಗಮುಂ ನೋಲ್ಪಿನ್ನೆಗಂ

ತಳತಳಿಸಿ ಪೊಳೆವ ನಿರ್ಮಳ ।
ಫಲಕಂ ನೇಱುವಿದೊರ್ವಡಂತದಂ ತೆಗೆದಧ್ಯೊಳ್ ॥

ಬಳಪದಿನಾಗಳ್ ಬರೆದೆಂ ।
ಲಳನೆಯ ರೂಪಾತಿಶಯಮನೆನ್ನಳವನಿತಂ ॥ ೩೦೦

ಅದೆಂತೆನೆ—

ತಳರಡಿಯಂ ನಯಂಬಡೆದ ಜಂಘೆಯನೊಳ್ಪಡರ್ದೂರುವಂ ಮೃದೂ ।
ಜ್ಜ್ವಳಕಟಿಯಂ ಸುರುಳ್ದ ಸುಖನಾಭಿಯನೊಳ್ನಡುವಂ ಕಳಾಪವಂ ॥
ಕಳಶಕುಚಂಗಳಂ ಭುಜಲತಾವ್ಯಯಮುಂ ಶಶಿಬಿಂಬವಕ್ತ್ರಮುಂ ॥
ಡಳವನಲಂಪಿನಿಂ ಬರೆದೆನಂಗಜಚಿತ್ರಕನೋಜನಾದಪ್ರೋಲ್ ॥ ೩೦೧

ಅದು ಕುಸುಮಾಸ್ತ್ರಭಾಳಲಿಖಿತಂ ಶಶಿಯೀಕ್ಷ್ಮೆಯ ಸೀಮೆ ಚೈತ್ರನ ।
ಭ್ಯುದಯದ ಮಂತ್ರವೃತ್ತಿ ಮಳಯಾನಿಳನೊಪ್ಪುವ ಜೀವಮೀಕ್ಷಿಸ ॥
ಲ್ಕದು ರತಿಯೋಲೆಬಾಗ್ಯಮುಮು ಮೋಹನ ಮೂರ್ತಿಯೆನಲ್ಕೆ ರಂಜಿಸಿ ।
ರ್ದುದು ಬರೆದಿರ್ದ ಚಿತ್ರಮೆನಗಂ ಬೆಱಗಪ್ಪಿನೆಗಂ ಧರಾಧಿಪಾ ॥ ೩೦೨

ಅದಲ್ಲದೆಯುಂ,

ಉರುತರಮಂಚದೊಳ್ ಮಲಗಿದಂಗನೆಯಾಕೃತಿಯಂ ವಿಳಾಸದಿಂ ।
ಬರೆದು ತದಂಘ್ರಿಪಲ್ಲವಸಮೀಪದೊಳಂಗಜಕೇಳಿಯಾಸೆಯಿಂ ॥
ಕರಕಮಳಂಗಳಂ ಮುಗಿದು ಕಾಲ್ಗೆಱಗಿರ್ಪ ಮದೀಯಭಾವಮುಂ ।
ನಿರವಿಸಿಯಾರ್ಯೆಯೊಂದನೊಲವಿಂ ಬರೆದೆಂ ನೃಪರೂಪಚಂದ್ರಮಾ ॥ ೩೦೩

ಅದೆಂತೆನೆ—

॥ ಆರ್ಯೆ ॥

"ತ್ವಾಮಯಮಾಖಡ್ಯಾಂಜಲಿ ದಾಸಜನಸ್ತ್ವಮಿಮಮಧಿ ಮುಧ್ಯಯಾತೇ ।
ಸ್ವಪಿಹಿ ಮಯಾ ಸಹ ಸುರತವ್ಯತಿಕರಖಿನ್ನೈವ ಮಾ ಪ್ರೇಯಂ ॥"

[ಟೀಕೆ]

ನಿನ್ನೆಯ ದಾಸಂ ಕೆಯ್ಮುಗಿ ।
ದುನ್ನತಿಯಿಂ ಪ್ರಾರ್ಥಿಸುವನಿದಂ ಸತಿ ನೀಂ ಕೇಳ್ ॥
ನಿನ್ನೊಡನೆ ಸುರತಕಲಹದ ।
ಖಿನ್ನತೆಯಿಂದೊಱಗಿ ಸುಖದೊಳಿರ್ಪುವ ತೆಱನಂ ॥ ೩೦೪

ಎಂಬಿದಾ ಬರೆದನಂತರಂ

ಅಲ್ಲಿರ್ದ ಪೆಟ್ಟಿಯೊಳಗಣ ।
ಸಲ್ಲಲಿತಕ್ರಮುಕಪತ್ರಕಪೂರವುನಾ ॥
ಬಲ್ಲನಿತಂ ಕೊಂಡು ಮುದಂ ।
ಪಲ್ಲವಿಸಲ್ ಸವಿದೆನಧಿಕರಾಗಂ ಮೆಱೆಯುಮಲ್ ॥ ೩೦೫

ಅಂತು ಸವಿದು,

ಪೊಳೆವ ಸುಧಾಭಿತ್ತಿಯೊಳ ।
ಗ್ಗಳಮಾಗಲ್ ಪದ್ಮರಾಗವರ್ಣದ ಪೊಸತಂ ॥
ಬುಲವ ರಸನುಂ ವಿಳಾಸದಿ ।
ನಳವಡಲುಗುಲ್ತ್ತೆಂ ರಥಾಂಗರೂಪಪ್ಪಿನೆಗಂ ॥ ೩೦೬

ಬಳಿಕಲ್ಲಿಂ ಪೊಱಮಟ್ಟು ಪೂರ್ವಮಾರ್ಗದಿಂ ಕಾರಾಗೃಹಕ್ಕೆ ಬರಲೆನ್ನಂ ಕಾಂತಕಂ ಕಂಡು ಕನ್ನಕ್ಕೆನ್ನಂ ಬಲಿಗೆಯ್ಯಲೆಂದನುಮಾನಿಸೆ,

ತನ್ನೊಂದಲ್ಪಸುಖಕ್ಕೆ ಕೂರ್ತು ಪರರಂ ನಿಷ್ಕಾರಣಂ ಕೊಲ್ವನಂ ।
ಮುನ್ನಂ ಕೊಂದೊಡೆ ದೋಷಮಿಲ್ಲೆನಿಪ ನಾನಾನೀತಿಯುಂ ಬಲ್ಲೆನಿಂ ॥
ದೆನ್ನಂ ಕೈತವದಿಂ ಕೊಲಲ್ ಬಗೆದನೀಕ್ರೂರಾತ್ಮನೆಂದಾಕ್ಷಣಂ ।
ಛಿನ್ನಾಂಗಾವಯವನಂಗಳಾಗೆ ಪೊಡೆದೆಂ ತತ್ಕಾಂತಕಾಭಿಖ್ಯನಂ ॥ ೩೦೭

ತನ್ನಸಿಯುಂ ಕೊಂಡಾರ್ದಿಂ ।
ಕೆನ್ನಂ ತಱಿದುದನೆ ನೋಡಿ ಕಾರಾಗೃಹದೊಳ್ ॥
ಮುನ್ನಿನ ತಳವಾಱಂ ಕಡು ।
ಬನ್ನದೊಳಿರಲವನೊಳಾಗಳಾನಿಂತೆಂದೆಂ ॥ ೩೦೮

ಎನ್ನಿಂ ಕನ್ನವನಿಕ್ಕಿಸಿ ।
ಕನ್ನಿಕೆಯೊಡನಿರ್ದೆನೆಂದು ತಾನಱಿದಂ ನೀಂ ॥
ಚೆನ್ನಾಗಱಿಪಿದೊಡರಸಂ ।
ಗೆನ್ನಂ ನಿನಗಕ್ಕುಮುಱಿವುಮವನಿಪನೊಲವುಂ ॥ ೩೦೯

ಎಂದು ಪೇಟ್ದಿಲ್ಲಿಂ ಸ್ವಗಾಳಕೆವೆರಸು ಪೊಱಮಡುವಾಗಳ್

ವಿಹಿತಾಸ್ಥಾನವೆನಿಪ್ಪ ವಿಪ್ಲವಪದನುಂ ಬಿಟ್ಟೊರ್ವದಲ್ ಮಧ್ಯಗಂ ।
ಮಿಹಿರಂ ಕ್ಷೀಣವಯಸ್ಕನಾಗಿಯು ಮಿದ್ದೀನಾನಾರ್ಯದಿಂ ವಾರುಣೀ ॥

ಸ್ಪೃಹೆಯುಂ ಮಾಡಿದನೆಂದು ನಾಣ್ಚಿ ತಲೆವಾಗುತ್ತಿರ್ದುದೋ ಪದ್ಮಿನೀ ।
ಮುಹಿಳಾಸಂಕುಳವೆಂಬಿನಂ ದಿನಕರಂ ಪೊಕ್ಕಂ ಪ್ರತೀಚ್ಯಬ್ಧಿಯಂ॥ ೩೧೦

ಅಂತು

ಇನನಸ್ತಾದ್ರಿಯನೆಯ್ದಿ ।
ರ್ದನೆಂಬುದೇಕಱಿಯದೆಯ್ದೆ ನಲಿದು ಜಗಲ್ಲೋ ॥
ಚನಬಿಂಬಂ ಪಡೆಪಿಂದಂ–।
ಜನಸಂಗದಿನೊಳ್ಪನೆತ್ತುದೆನ್ನದೆ ಲೋಕಂ ॥ ೩೧೧

ಅಂತು ಸೂರ್ಯಾಸ್ತಮಾನವಾಗಲೊಡಂ

ದೆಸೆಯಂ ಬಾಸಣಿಸಿರ್ದ ಕಪ್ಪಿಲೆಯೊಳಾಂ ಬರ್ದನ್ನೆಗಂ ನಾಗರೀ ।
ಕಸಮೂಹಂ ತೊಱಲುತ್ತೆ ಮುಂದೆ ಸುಳಿವೆನ್ನಂ ಕಂಡು ಪೊಯ್ಪೊಯ್ದು
ಬಂ ॥ ಧಿಸಲೆಂದೆಯ್ತರೆ ಕಂಡಿದಿರ್ನಡೆದವರ್ಗಿರ್ಕೆಯ್ಗಳಂ ನೀಡಿ ಬಂ ।
ಧಿಸಿಮೆಂಬನ್ನೆಗನೂಸ್ಯಗಾಳಕೆ ಸಮುಂತೆಯ್ತಂದಳತ್ಯಾರ್ತದಿಂ ॥ ೩೧೨

ಅಂತು ಬಂದು

ಕಡುಜರದಿಂ ಕರಂ ನನೆಸು ವಾಯುವಿಕಾರದೊಳಟ್ಟಿ ಕಂಡ ಕಂ ।
ಡೆಡೆಗೆ ನಿಜೇಚ್ಛೆಯಿಂ ಪರಿಯಲಿರ್ಕರನಂ ಮಿಗೆ ಕಟ್ಟಿ ಕೋಣೆಯೊಳ್ ॥
ಮಡಗಿಡಲಿಂದು ಮೂರ್ಜ್ಞ ತೆಱದಿಂದಿರಲಾಂ ಬಿಡೆ ಮತ್ತೆ ವಾಯು ಬಂ ।
ದಡಸಿತು ನೋಡಲಾಂ ಬಡವೆ ಮತ್ಪುತನಂ ಪಿಡಿದೀವ್ರದೆಲ್ಲರುಂ ॥ ೩೧೩

ಎಂಬುದುಂ,

ಎಲೆ ವೈದ್ಯೆಯವಂ ಮರುಳ್ಕೈ ।
ಸಲೆ ನೀಂ ಮರುಳಲ್ತಿಯವನನಾರ್ ಪಿಡಿವರ್ ನೀ ॥
ನೊಲಿದತ್ತ ಪ್ರೋಗೆನಲ್ ಕ ।
ಟ್ಟಲಿಸಿದೆನಾಂ ವಾಯುದೇವರಿಂದಂತಾಗಳ್ ॥ ೩೧೪

ಅಂತಾದುರ್ಘಟಮುಂ ಕಳೆದು ರಾಗಮುಂಜರಿಯು ಮನೆಗೆ ಬಂದು

ಪಿರಿದಾಲಿಂಗಿಸಿದೆಂ ನಲಿ ।
ದು ರಾಗಮುಂಜರಿಯನಾತಳಿೋದರಿಯೆನ್ನೊಳ್ ॥
ಪರಿರಂಭಸುಖದಿನಿರಲೊ ।
ರ್ವರೊರ್ವರಂ ಪ್ರೊದ್ದಿ ಕಳೆದೆನ್ನಂದಿನ ದಿನಮುಂ ॥ ೩೧೫

ಅನ್ನೆಗಂ,

ರವಿ ಶಶಿಯುಂತೆ ತಣ್ಗದಿರ್ಗಳಿಯುದಯಾದ್ರಿಯೊಳುಣ್ಮೆ ಹಸ್ತಪ ।
ಲ್ಲವದಿನೊಱಲ್ದು ಸಾಧುಜನನುಷ್ಯೆವ-ನೆತ್ತ ಸರೋಜಷಂಡಮಂ ॥
ದವಿರಳಪುಷ್ಪಿತಸ್ಥಿತಿಯಿನೊಪ್ಪೆ ಜಗಜ್ಜನನೇತ್ರಪುತ್ರಿಕೋ ।
ತ್ಸವಫಲಮಾಗಲೀನುದಯುವಾವನೊ ಪಂಕಜಜೀವಿತೇಶ್ವರಂ ॥ ೩೧೬

ಅಂತು ಸೂರ್ಯೋದಯುವಾಗಲೊಡಂ ಧನಮಿತ್ರನ ಮನೆಗೆ ಪೋಗಲಾತನೆನ್ನಂ ಕೂಡು

ಇಂದಸು ತುಂಬಿತೆನ್ನ ವಯನಂಗಳೊಳಿಂದಿನಗೊಸ್ಪವೆತ್ತ ಕಣ್ ।
ಬಂದುವು ನೋಡಲಿಂದಿನಗನೇಕವುಪಾವ್ರತಸಿದ್ಧಿ ಸಾಧ್ಯವಾ ॥
ಯ್ತೆಂದನುರಾಗದಿಂ ಪುಳಕಮುಣ್ಮಿವಿನಂ ಧನಮಿತ್ರನಾಕ್ಷಣಂ ।
ಬಂದನಮರ್ದಪ್ಪಿ ಮುನ್ನಿಸಿದನೆನ್ನನತೀವ ಮನಃಪ್ರಮೋದದಿಂ ॥ ೩೧೭

ಅಂತು ಮುನ್ನಿಸಲಾಧನಮಿತ್ರನ ಮನೆಯೊಳ್ ಸುಖದಿನಿರ್ದಿನವೊಂದು ದಿನಂ,

ಲೀಲೆಯೆ ರಾಜ್ಯಮುಂ ನಿಜಶರೀರಮುನೊಲ್ವೊಡೆ ತನ್ನ ಪುತ್ರಿಯಂ ।
ಬಾಲಿಕೆಯಂ ಮನೋಮುದದಿನೀವ್ರದು ಕೂರ್ತೆನಗಲ್ಲದಂದು ಕಾ॥
ಲಾಲಯದತ್ತಲೆಯ್ದಿಸುವೆನೆಂದತಿಗರ್ವಿತಚಂಡನವರ್ಮನಂ ।
ದೋಲೆಯುನಂಗಭೂಪತಿಗೆ ಭೀತಿ ವಿಗಲ್ ಮುಳಿದಾತನಟ್ಟಿದಂ ॥ ೩೧೮

ಅಂತು ಚಂಡವರ್ಮಂ ಸಿಂಹವರ್ಮಂಗೆ ದೂತನಂ ಕಳಿಪಲದರ್ಕೆ ಸಿಂಹವರ್ಮಂ ಕನಲ್ದು

ಕುಡೆನ್ನೆ ತನೂಜೆಯನಾ ।
ಪ್ರೌಡೆ ಯುದ್ಧಕ್ಕೆತ್ತಿ ಚಂಡವರ್ಮಂ ತಾಂ ಬಂ ॥
ದೊಡೆ ನೋಲ್ಪಿನೆಂದು ಚರನಂ ।
ಪಿಡದಲೆಯಂ ಪಿಡಿದು ನೂಂಕಿಸಿದನವನೀಶಂ ॥ ೩೧೯

ಅಂತು ದೂತನಂ ನೂಂಕಿ,

ತನಗನುಕೂಲವುಪ್ಪಖಿಳಭೂಪತಿಗಳ್ಗೆ ಸುಹೃತ್ಪ್ರಸಿದ್ಧನೊ ।
ಲ್ಲನುನಯದಿಂದನೇಕಮಣಿಭೂಷಣಕಾಂಚನದಿನ್ಯನಸ್ತ್ರವಾ ॥

ಹನವನಲಂಪಿನಿಂ ಕಳಿಪಿ ತತ್ಸನುಯುಕ್ತಪ್ರತೀಪ್ರಮಾರ್ಗದಿಂ ।
ಮನದೊಲವಿಂದೆ ಬರ್ಪುದೆನುತೋಲೆಯನಿಟ್ಟುದನಂಗಭೂಭುಜಂ ॥ ೩೦

ಅಂತು ತನ್ನ ಮಿತ್ರಕ್ಷತ್ರಿಯಗೋತ್ರಕ್ಕೆ ಪತ್ರವಂ ಕಳಿಪಲತ್ತಲ್ ತನ್ನಿಂ ದವನೊನಿತನಾದ ದೂತಂ ತನಗಾದ ಮಾನಹಾನಿಯಂ ಚಂಡನರ್ಮಂಗೆ ಪೋಗಿ ಪೇಟೆ

ಗಿರಿಯುಂ ನುಂಗುವ ತಾರೆಯುಂ ತಿಱಿನ ಧಾತ್ರೀಭಾಗಮುಂ ಪೊಲ್ಬಿ ನಾ ॥
ಗರಮುಂ ತುಬ್ಬಿಪ ಚಾತುರಂಗಬಲದಿಂ ಸಾರಂಭಮುಂ ತಾಳ್ದು ನಿ ॥
ರ್ಭರದೋರ್ದರ್ಪದ ಚಂಡವರ್ಮನಬಲಾಸಂವಾಂಛೆಯಿಂದಂಗಭೂ ।
ವರನಂ ಮುತ್ತುವೆನೆಂದು ಬಂದನವಟಂ ಚಾಪಾಪುರಕ್ಕಾಕ್ಷಣಂ ॥ ೩೧

ಅಂತು ಬಂದು

ದಟ್ಟಿದುಬಿವಾಯ್ದುಪೋಲ್ ಸಕಲಸೈನ್ಯಯುತಂ ಧರಿ ಚಂಡವರ್ಮನಾ ।
ಗಳೆ ಮುಳಿದಂಗಭೂಪತಿಯು ಸತ್ವಮನೊರ್ಮೆಯೆ ಸೂಜೆಗೊಂಡು ಕಾ ॥
ಲ್ಗಳೊಳತಿಕೋಪದಿಂ ಪಿರಿಯು ಸಂಕಲಿಯುಂ ಮಿಗೆ ಸಾರ್ಚಿ ತನ್ನ ದೋ ।
ರ್ಬಲದಪಲೇಪದಿಂ ಮದುವೆ ನುಜ್ಜುಗನೆಂ ತಳಿದಿರ್ದನಾಖಳಂ ॥ ೩೨

ಅಂತು ಚಂಡವರ್ಮನಂಗರಾಜನಂ ಭಂಗಿತನಂ ಮಾಡಿ ಮಱುದಿನಮುಂ ಬಾಲಕೆಯಂ ಮದುವೆಯಾಗಲನುಗೆಯ್ಯೆ

ಅವನಂಬಾಲಿಕೆಯೊಳ್ ವಿವಾಹಸುಖಮುಂ ತಾಳ್ದಿರ್ಪನೆಂಬೊಂದು ಕಾ ।
ರ್ಯವಿಶೇಷಕ್ಕತಿಕೋಪಮುಬ್ಬರಿಸಲಾಂ ಮುಂ ಕಂಡ, ಕೂರ್ತಿರ್ದನಾ ॥
ಯುವತೀರತ್ನಮಿದೆನ್ನ ಭೂಷಣಮೆನುತ್ತಾಂ ನಿಶ್ಚಯಂಮಾಡಿಯೊ ।
ಪ್ಪುವಿನಾ ಕಂಕಣದಾರಮುಂ ಕರದೊಳಾಂ ತಾಳ್ದಿಂ ಮನೋರಾಗದಿಂ ॥

ಅಂತು ಕಂಕಣದಾರವಂ ಕಟ್ಟಿಕೊಂಡು ಧನಮಿತ್ರಂಗಿಂತೆಂದೆಂ:—

ಏಗೆಯ್ದು ಚಂಡವರ್ಮನ ।
ನೀಗಳ್ ತೀರ್ಚುವೆನವಕೆಂ ತಾವಂಜದೆ ಚೆ ॥
ಲ್ವಾಗಿರ್ಪುದೆಂದು ಪೇೞಿನು ।
ರಾಗದೆ ಪೋರಗೆ ರಾಗದಿಂ ಧನಮಿತ್ರಾ ॥ ೩೪

ಎಂವಲ್ಲಿ ಪೋರಗೆ ಪೇೞ್ದು,

ಅಂಗನ್ಯಪಾಲನ ಸೀಮಾ ।
ರಂಗಕ್ಕೈತಂದುದವಿಳಭೂಪರ ಸಂಗಂ ॥
ಮಂಗಳವಾರ್ತೆಯನುಸಿದರ್ವ ।
ರಂ ಗುಣದಿಂ ಕೊಂಡು ಬಸ್ರ್ದನುನಯದಿಂಸಂ ॥ ೩೦೫

ಎಂದು ಧನಮಿತ್ರನನತ್ತಲ್ ಕಳುಹಿದೆಂ. ಇತ್ತಲ್ ಚಂಡವರ್ಮನಂಜಾಲಿ ಕೆಯುಂ ಮದುವೆಯಾಗಲ್ ಮದನಿಗನಾಗಿ ಪಸೆಯ ಮೇಲೆ ನಿಂದಿರ್ದಾಗಳ್;

ಮಂಗಳಗಾಯಕರ್ ಸಕಲವಾದ್ಯವಿಚಕ್ಷಣರುದ್ಧನರ್ತಕರ್ ।
ಮಂಗಳಪಾತಕರ್ ಗಣಿಕಸಂತತಿ ಸಂಭ್ರಮದಿಂ ಪ್ರಗುತ್ತಿರರ್ ॥
ಮಂಗಳಗೇಹಮಂ ಮುದದಿನಾನವರೊಳ್ ತಱುಸಂದು ಬೇಗದಿಂ ।
ಮಂಗಳಪಾತಕಾಕೃತಿಯಿನೊಬ್ಬೊಳ ಪ್ರೊಕ್ಕನಿಳಾಧಿನಾಯಕಾ॥ ೩೦೬

ಅಂತಾಂ ಪ್ರಗುವಾಗಳ್ ಜವ ।
ನಾತುಟು ಕಿಱುಸುರಿಗೆಯೊಂದನಾರ್ಪಿಂ ಬಲಗೆ ॥
ಯ್ಯಿಂ ತಳೆದು ಪ್ರೊಕ್ಕು ಮುಂದಿಯ ।
ತಿಂತಿಣಿಯೊಳ್ ನೋಡುತಿರ್ದೆನಾತನ ಕಜೆಯಂ॥ ೩೦೭

ಅನ್ನೆಗಮಾತಂ ತನ್ನಾಯುಷ್ಯಮನೊಸ್ಪಗುಡುವಂತೆ ಪಾಣಿಗ್ರಹಣಾರ್ಥಂ ಕೆಯ್ಯಂ ನೀಡೆ,

ನೀಡಿದ ಕೆಯ್ಯನಾಂ ತುಪುಕಿ ಗಾಢಮೆನಲ್ ಪಿಡಿದೀಟ್ಟು ಬೀಱ್ವೆನಂ ।
ಱೋಡಿಸಿ ಶಸ್ತ್ರದಿಂ ತಿವಿಯಲಂತದು ನುಣ್ಣನೆ ಬೆನ್ನೊಳೊರ್ಮೊಟಿಂ ॥
ಮೂಡಲೊಱಲ್ದ ಬಿಲ್ದಿಸುವನಾಗಳ್ ನೀಗಿದನೆಂದು ಬಂಧುಗಳ್ ।
ನೋಡುವ ಮಾತ್ರೆಯಿಂ ಕೆಯಿಪಿದೆಂ ಪಸಯೂಳ್ ಕಲಿಚಂಡವರ್ಮನಂ ॥

ಅಲ್ಲಿಂ ಬಱಿಯಂ,

ಆರಿಸುವಿನಾಪ್ತ ಬಲಮುಂ ।
ಮಾರಿಯೊಲಾಂ ಬೀದಿನರಿದು ಭುಜಬಲದಿಂ ಸಂ ॥
ಹಾರಂಮಾಱ್ಪಾಗಳ್ ಗಂ ।
ಭೀರರವಂ ಪೊಣ್ಮಲೆಯ್ದಿದೆಂ ನಿಜಪವನಂ ॥ ೩೦೯

ಎಂದು ಅಪಹಾರನರ್ಮಂ ಪೇಳ್ದೊಡದಂ ರಾಜನಾಹನಂ ಕೇಳ್ದು
ವಿವಿವ! ಮರ್ತ್ಯಲೋಕದೊಳಪೂರ್ವಮಗೋಚರಮಿಲ್ತಿ ಭಾವಿಸ।
ಲ್ಕಿವನ ಪರಾಕ್ರಮಂ ಬಗೆಗಮಾನುಷವಿಾತೆಱಿದಿಂ ತೊಬಿಲ್ದನಾ ॥
ನವನತಿಸಾಪಸಂಬೆರಸು ಪೇಳ್ಮಿನುತ್ತ ಪಹಾರವರ್ಮನಂ ।
ನವಸ್ರಳಕಂಗಳುಲ್ಕೆ ಬಿಗಿಯಪ್ಪಿದನಾಗಳಭಂಗವಿಕ್ರಮಂ ॥ ೩೩೦

॥ ಗದ್ಯ ॥

ಇದು ನಿಬಿಲಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ
ಪ್ರೌಢಭಂಗವಿಟ್ಟಲಪದಾಂಭೋಜಮಿತ್ತಮಧುಕರ
ಮಧುಸೂದನನಂದನ ಸರಸಕವಿ ಚಾಂಪರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಅಪಹಾರವರ್ಮ ಕಥಾವೃತ್ತಾಂತಂ

ಏಷ್ಟನೆಯುಚ್ಛ್ವಾಸಂ

॥ ನವಮಾಶ್ವಾಸಂ ॥

—ಅರ್ಘಪಾಲನ ಕಥೆ—

ಶ್ರೀಕೇಳೀಮುಖಕಮುಳಂ ।
ಭೂಕಾಂತಾಧೀಶನರ್ಘಪಾಲಕನಂ ಸಾ ॥
ಮ್ಯಾಕಾರನನೀಕ್ಷಿಸಿದಂ ।
ಲೋಕಜನಸ್ತುತನಭಂಗವಿಟ್ಠಲಭೃತ್ಯಂ ॥ ೧

ಅಂತು ರಾಜವಾಹನನರ್ಘಪಾಲನ ಮುಖಾವಲೋಕನಂಗೆಯ್ದು ನೀನೆಸಗಿದ ಕಾರ್ಯಮಂ ಪೇೞೆನಲಾತಂ ಕೆಯ್ಗಳಂ ಮುಗಿದು,

ಸಹಜರಶ್ಮಿಗಳುಂ ನಿಜಪದಾಂಬುರುಹದ್ವಯಮುಂ ನಿರಂತರಂ ।
ಮಹಿಯೊಳಲಂಪಿನಿಂದಱಿಸಲಿಸ್ಮೈಸೆಗೆಯ್ದಿದೊಡಾನುಮಂತೆ ಸ ॥
ಸ್ಪೃಹೆಯಿನತಿಪ್ರಸಿದ್ಧವೆಡೆದಿರ್ಪ ಮನೋಹರಮಪ್ಪ ಕಾಶಿಯಂ ।
ಬಹಳಸುಖಾಧಿವಾಸಮನಶೇಷವಿನಾಶಿಯನೈದಿದೆಂ ನೃಪಾ ॥ ೨

ದುರಿತವಿನಾಶಿಯಂ ಸುಕೃತಸತ್ಫಲರಾಶಿಯನುಗ್ರಕರ್ಮದು ।
ರ್ಧರಗಳಪಾಶಿಯಂ ಸಕಳಮಂಗಳಸಾರ್ಥಕತೀರ್ಥವಾಸಿಯಂ ॥
ನರಕಹುತಾಶಿಯಂ ಕೃತಯುಗಾಂಬುಜನಿರ್ಮಳಬೀಜಕೋಶಿ ನಂ ।
ನಿರುಪಮಕಾಶಿಯಂ ಭರದಿನೆಯ್ದಿದೆನೊಲ್ದ ಜಗತ್ಪ್ರಕಾಶಿಯಂ ॥ ೩

ಅದು ಸುಕೃತಪ್ರಸಿದ್ಧಿಯ ತವರ್ಮನೆ ಜ್ಞಾನಮಹಾಬ್ಧಿತೀರಮುಂ ।
ಪದುಳದಿನೊಲ್ದ ತೋಱಿಸುವ ಮಾರ್ಗಮನೂನಸುಖಂ ವಿಳಾಸದಿಂ ॥
ಮುದಯಿಪ ಭೂಮಿಯೊಳಾಕನವಿತರ್ಕದಿನಿರ್ಪೆಡೆ ಮೋಕ್ಷಕಾಮಿನೀ ।
ಸದನಮೆನಲ್ಕೆ ವಾರಣಸಿ ರಂಜಿಪುದಲ್ತೆ ಧರಾಧಿನಾಯಕಾ ॥ ೪

ಸ್ಮರಹರನಿರ್ಕ ಶಂಕರನ ಮಂದಿರಮಿಂತನ ಗೇಹಮದ್ರಿಜಾ ।
ವರನ ಗೃಹಂ ಗಿರೀಶನ ನಿಜಾಲಯಮುಗ್ರನ ಶಾಲೆ ಜಾಹ್ನವೀ ॥
ಧರನ ನಿಕೇತನಂ ಭವನ ವೇಶ್ಮ ಯಮಾರಿಯ ಧಾಮಮಿಂದುಳೇ ।
ಶ್ವರನ ನಿವೇಶನಂ ದಲೆನಲೊಪ್ಪುವ ಕಾಶಿಯೆನೆಯ್ದಿದೆಂ ನೃಪಾ ॥ ೫

ಪುಟ್ಟುನ್ಮದಗ್ರೀವಂ ಜಟೆ ಲಲಾಟವಿಲೋಚನಮಿಂದುಲೇಖೆ ಕ ।
ರ್ಪಟ್ಟ ಗಳಂ ಲಸದ್ಭಸಭುಜಾ ಫಣಿಕುಂಡಲಮೊಪ್ಪಿರಲ್ಕೆ ತಂ ॥
ಮುಟ್ಟ ಗಜಾಜಿನಂ ಗಿರಿಜೆ ತುಂಗವೃಷಂ ಸಹಿತಂ ಸಿರಂತರಂ ।
ಪ್ರಟ್ಟುವರೆಂಸೊಡೇವೊಗಲ್ವೆನೊಕ್ಕಪ ಕಾಶಿಯು ಪೊಂಪನುರ್ವಿಪಾ ॥ ೬

ಅಂತು ಕಮನೀಯಮಾದ ಕಾಶೀಕ್ಷೇತ್ರಮನೆಯ್ದಿ
ಈಕ್ಷಣನೆಂಬಾತ್ರದಿ ದಯಿಲಪಾತಕಮುಂ ತವಿಪಭ್ರಗಂಗೆಯುಂ ।
ತೋತ್ಪಕ್ಷಫಲಪ್ರಸಿದ್ಧಿ ನೆಲಸಿರ್ಪ ಲಸದ್ಗುಣಸಂಗಯುಂ ವಿರೂ ॥
ಪೋಕ್ಷಶರಸ್ಸರೋದನವಗಂಧಮುಪಾಲಸಭೃಂಗೆಯುಂ ಜಗ ।
ದ್ರಕ್ಷಣಮೂರ್ತಿಯಪ್ಪ ಮುರಗಂಗಯನಾಂ ಮಿಗೆ ಕಂಡೆನುರ್ವಿಪಾ ॥ ೭

ಮಲಿನಮನುಳ್ಳುದಂ ತವಿಸಲೆಂದು ವಿಯನ್ನದಿಯೊಳ್ ಮುಟಿಂಗೆ ಮುಂ ।
ದಲೆ ಜಡೆಗಟ್ಟಿ ಕಣ್ ವಿಷಮಮಾಗಿ ಕೊರಲ್ ಕಲುಗಟ್ಟಿ ಸರ್ಪಸಂ ॥
ಹುಳವೆನೆಗೊಂಡು ವಾಮತನು ಪೆಣ್ಣೆಯಾಗ ಪಿಶಾಚಸಂಗಮು ।
ಗ್ಗಳಿಸಿತೆ ಪುಟ್ಟುಪೊಂದಿಗೆದಯಲ್ಲದೆ ತೋರ್ಪರಿವಲ್ತೆ ವಿಸ್ಮಯಂ ॥ ೮

ತನ್ನಂ ಭೋಂಕನೆ ಕಂಡವಂ ಕನಸಿನೊಳ್ ಕಾಣಂ ಪುನರ್ಜನ್ಮವುಂ ।
ತನ್ನಂ ಪ್ರಾರ್ದಿಪ ಜೀವಿಗಳ್ ನರಕಮುಂ ಪೊರ್ದರ್ ಮನೋಭೀಷ್ಟಿಯಿಂ ॥
ತನ್ನಾ ಧ್ಯಾನದೊಳಿರ್ಪವಂ ಪಡೆಪಿನಿಂದಿರ್ಪಂ ಮಹಾನಂದದೊಳ್ ।
ತನ್ನೊಳ್ ಸ್ನಾನಮನೊಲ್ದ ಮಾಪ್ಪಿ ಮನುಜಂ ಮಾಪ್ಪಿಂ ಜಗತ್ಸೃಷ್ಟಿಯಂ॥

ಮತ್ತಮದು ನೀರಾಟಕ್ಕಳಿಸಿದ್ಯರಾನತವಾರಣಶರೀರಗೌರವರ್ಣಂ ತೇ
ರೈಸಿದಂತೆಯುಂ, ಜಳಪಾನಕ್ಕೆಳಸಿದ ಅಳಕೇಶ್ವರಪ್ರಿಯನ ವೃಷಭೇಂದ್ರ
ನ ಕಮನೀಯಕಾಂತಿಯಂ ಕವರ್ದಂತೆಯುಂ, ಅವಗಾಹನಪ್ರೀತಿಯಿಂದವತ
ರಿಸಿದಭವನ ಧವಳದೇಪದಿಂದವಿರಳಮಾದಂತೆಯುಂ, ಸಲಿಲಕ್ರೀಡೆಗಲಸ
ಯಾನದಿಂ ಬಂದ ದಿವಿಜನಾರಿಯರ ನಮುನಕಾಂತಿಕಾಮುದಿಯಂ ಕೆಪ್ಪುಗೊಂ
ಡಂತೆಯುಂ, ನೈರ್ಮಲ್ಯದಿಂ ನೂರ್ಮಡಿಸಿರ್ದ ಅನುರನದಿಯಂ ಕಂಡು,

ಅವಜೊಳಗಣ ಕರ್ದಕೆಯೊಳ್ ।
ಸದಮಳವಪ್ಪಂತು ಮಿಂದು ದುರಿತಮನಾರ್ದಿಂ ॥
ಬೊದೆದು ಕೃತಕೃತ್ಯನಾದೆಂ ।
ವಿದಿತಮೆನಿಪ್ಪಳಿಕರ್ಮಮಂ ಪ್ರಕಟಿಸಿದೆಂ ॥ ೧೦

ತತ್ಸ್ನಾನೋಚಿತವಿಧಿಯನ ।
ತಿಸ್ಥಲಮೆನಲ್ಕೆ ಮಾಡಿ ಬಲಿಕಾನಾಗಳ್ ॥
ಸ್ವಸ್ಥಮನನಾಗಿಯಲ್ಲಿ ।
ದ್ ಸ್ನಾಣುವಿನಂಘ್ರಿಪರಿಸರಕ್ಕೆಯ್ತಂದೆಂ ॥ ೧೧

ಶಶ್ವನ್ಮಂಗಲಮೂರ್ತಿ ಪಾತಕಗಿರಿಪ್ರೌದ್ಧಿನ್ನದಂಭೋಳಿ ಸ ।
ಪ್ತಾಶ್ವಶ್ವೇತರುಚಿಪ್ರಸಿದ್ಧನಯನಂ ನೈರ್ಮಲ್ಯಲಿಂಗಂ ಜಗ ॥
ದ್ವಿಶ್ವವ್ಯಾಪ್ತನಪಾರಸಾರಮಹಿಮಂ ಕಾರುಣ್ಯಕಲ್ಪದ್ರುಮಂ ।
ವಿಶ್ವೇಶಂ ಭವನಾಶನದ್ರಿತನಯಾಧೀಶಂ ಸಮುಸ್ತಾಶ್ರಯಂ ॥ ೧೦

ಅಂತಪ್ಪ ಜಗನ್ಮನೋಹರಮೂರ್ತಿಯಾದ ವಿಶ್ವೇಶ್ವರನಂ ನಮಸ್ಕರಿಸಿ,

ಸಂಸಾರಭ್ರಮಣವ ನಿ ।
ಶ್ಚೈಸುವ ಬಗೆಯಂ ಬಿಸುಟ್ಟು ವಿಶ್ವೇಶನಿಜಾ ॥
ವಾಸವನುಚ್ಛ್ರಮಣಂಗೆ ।
ಯ್ದಾಸುಖದಿಂದಿರ್ಪೆನೆಂಬವೋಲ್ ಬಲವಂದೆಂ ॥ ೧೩

ಅಂತು ಬಲವರುತಿರ್ಪಾಗಳ್

ಪೊಸನನೆಯಿಂ ಮುಗುಳ್ಗಳಿನರಲ್ಗಳಿನುಜ್ಜ್ವಲಮಾಗಿ ಗುಜ್ಜುಗೊಂ ।
ಡೆಸೆವುದನೊಂದು ಚೆಲ್ವ ಕರವೀರದ ಕಂಪಿ(?)ನೊಳಿೂಲ್ದ ರಜ್ಜವಂ॥
ಪೊಸೆವ ಕೊರಲ್ಗೆ ಸೇಂದಿಕೊಳುತಿರ್ಪ ತಿಸಾಮಸಕರ್ಮಭೂತನ ।
ಪ್ಪಸಮಬಲಾಢ್ಯನೊರ್ಬ ನಿರಲಾನವನಂ ಮಿಗೆ ಕಂಡೆನುರ್ವಿಪಾ ॥ ೧೪

ತೋರಮೊಗಂ ಸಮುನ್ನತಗಳಂ ನಸುಗೆಂಪಡರ್ದಕ್ಷಿ* ನೀಳ್ದ ತೋಳ್ ।
ಪೇರುರಮುಟ್ಟ ಗಂಡುಡಿಗೆ ಕರ್ಕಶದೀಪಮೆತೀವಭೀಷಣಾ ॥
ಕಾರಮನಶ್ವಕೈಯೆ ಸಲೆ ಸಾಹಸಕರ್ಮದೊಳಿರ್ದನೊರ್ಬನು ।
ದ್ದಾರಿತಬಾಷ್ಪವಾರಿಪರಿಲಗ್ನನವಂ ಮುದಭಗ್ನನುರ್ವಿಪಾ ॥ ೧೫

ನಿರವಧಿಯೊಳಿಶ್ರುಜಲಮಂ ।
ಸುರಿಯಲೊಡಂ ನಯನವಾರಿ ತೀರ್ದ ಬಲಿಕ್ಕಂ ॥
ತಿರುಳಾವ ಮಾಂಸಸುಖಿವಂ ।
ತಿರೆ ಕೆಂಪಡರ್ದಕ್ಷಿಯುಗಳ ಮೊಪ್ಪುದುದವನೊ ॥ ೧೬

ಅಂತಿರ್ದನಂ ಕಂಡು

ಅನನಿಂಗಿತನುಂ ಕಂಡಾ ।
ನಿವನಾತ್ಮಸುಹೃದ್ವಿಯೋಗದಿಂದಸುವಂ ನೀ ॥
ಗುವ ಬಗೆಯೊಳಿರ್ದ ತೆಱನೆಂ ।
ದು ವಿಚಾರಿಸಿ ಬಳಿಯೊಳವನನಾನಿಂತೆಂದೆಂ ॥ ೬೩

ಈಸಾಹಸಕರ್ಮನಿನ ।
ತ್ಯಾಸುರಮೆನೆ ಮೂಲ್ಪೆಯೀಕೆ ನೀನೆತ್ತಣನೆಂ ॥
ದೋಸರಿಸದೆ ನಾಂ ಜಸಗೊಳ ।
ಲಾಸುಭಟಂ ಹೇಳಿಲಾಗಳುದ್ಯತನಾದಂ ॥ ೬೪

ಪೆಸರ್ವೆತ್ತ* ಪೂರ್ವಕಾಮೀ ।
ಪುಕಯವ ದೇಶದೊಳಿರ್ಬ ವೈಶ್ಯನ ಮಗನಾಂ ॥
ಪೊಸತೆನಿಪ ಚಾರ್ಯವೃತ್ತಿ ।
ವ್ಯಸನಂ ನೆಲೆಗೊಂಡುದೆನಗೆ ವಿಧಿವಶದಿಂದಂ ॥ ೬೫

ಆಯುಃಕರ್ಮಂ ವಿತ್ತಾ ।
ದಾಯಂ ವಿದ್ಯಾದಿಲಾಭಮೆಂಬಿವ್ರ ನೊಸಲೊಳ್ ॥
ತಾಯ ಬಸಿಱಿಲ್ಲಿ ಪ್ರಟ್ಟುವ ।
ಕಾಯಕಕ್ಕಾಗಿರ್ದುವಱಿಯಲುಬುದವರಳವೇ ॥ ೬೬

ಎನ್ನ ಪಿತೃನೂತೃಸೋದರ ।
ರೆನ್ನಯ ನಡೆವುಗೆ ಸ್ಪರಿಸದೆ ಪೂಱಿಸುತಿಸರ್ ॥
ಬಿನ್ನಮನನಾಗಿ ಬಂದಪೆ।
ನೆನ್ನ ಪೆಸರ ಸೂರ್ಣಭದ್ರನೆಂಬುದು ಕೆಳಿಯಾ ॥ ೬೭

ಎಂದು ಮತ್ತಂ

ಈವಾರಣಾಸಿಪುರದ ವು ।
ಹಾವೈಶ್ಯಾಧಿಪನ ಮನೆಗೆ ಕನ್ನವನಿಕ್ಕಲ ॥
ಕೋವಿದಪುರರಕ್ಷಕರಱಿ ।
ದೋನದೆ ಬಲ್ವಿಡಿದರೆನ್ನನವಟಿಂದಿರಿ ಳೂೞ್ ॥ ೬೮

ಅಂತವರೆನ್ನಂ ಪಿಡಿದು ಧರ್ಮಾಸನಕರ್ಮಕ್ಕೀಕ್ಷ್ಮಗೆ ತೋಱಿಲನರ್ ಧರ್ಮಸೂಕ್ಷ್ಮಪ್ರಾಯಶ್ಚಿತ್ತವ ನಿಂತೆಂದರ್:—

ಮದರದನಿಯು ಪಾದಾಗ್ರದಿ ।
ನೊದೆಯಿಸುದಿವನುತ್ತಮಾಂಗಮುಂ ನುಚರ್ಪ್ಪಂ ॥
ತಿದು ಧರ್ಮಮಿತನಂ ಜೀ ।
ಗದೆ ಕೊಂಡಯ್ಯೆಂದರನರ್ಗಳವರೊಡನಾಗಳ್ ॥ ೬೩

ಎಂದು ಪೇೞ್ದೊಡವರೀಕಾಕೀವಲ್ಲಭನ ಮಂತ್ರಿಬಾಹತ್ತರನಪ್ಪ ಕಾಮು ಪಾಲಂಗೆ ತದ್ವೃತ್ತಾಂತಮನುಂ ಪೇೞ್ದೊಡಾತನೆನ್ನನಾನೆಗಿಕ್ಕಿಸಲೆಂದುಪ್ಪರಿಗೆಯೊಳಿರ್ದು ಮಾವತನನಾನೆಯುಂ ತರಲ್ವೇೞಲೊಡಂ

ಅವಟಿಂದದ್ರಿಜಿಯೂರ್ಜ್ಜನೊಳ್ ಭುಜಬಲಾನಷ್ಟಂಭದಿಂದಾಂತು ಕಾ ।
ಬಿದ ಸೋನಾಮದಗಜಾಸುರಂ ಸಹಜದಿಂ ತಾನೆಂಬಿನಂ ಘೋರರಾ॥
ದ್ರವಗುರ್ಬಿಂ ದಿಗಿಭಂಗಳಂ ಬೆದಱಿಸುತ್ತಾ ಟೋಪದಿಂ ಬಂದು ನಿಂ ।
ದುದು ಸಂಹಾರಮುಮಂಬೊಲುದ್ಧತಗಜಂ ಮೃತ್ಯುಂಜಯಾಖ್ಯಾನದಿಂ ॥ ೬೪

ಸಿಡಿಲಂ ಬೞಿಂತದೊಳ್ ತಪುಗ್ರಹಿಯಂ ರೌದ್ರೇಕ್ಷಣದ್ವಂದ್ವದೊಳ್ ।
ಕುಡುಮಿಂಜಂ ಕುಡುದಾತೆಯೊಳ್ ಮಿಸುಪ ಕಪರ್ದಂ ಚೇಪದೊಳ್ ವಾರಿಯಂ
ಕಡುಪೆಂಪಿಂ ಮದವಾರಿಯೊಳ್ ಕರಕಮುಂ ಚಂಚತ್ತುಷಾರಂಗಳೊಳ್ ।
ಪಡೆದುದ್ಯತ್ಕರಿ ಕಾಳಮೇಘಘಟೆಯಂತೊಪ್ಪಿರ್ದುದತ್ತೋಪದಿಂ ॥ ೬೫

ಅಂತಿಸ್ಪರ್ದಿಯೊಂದಾನೆಯಂ ನಿಷಾದಿ ತರಲದಱ ಮುಂದೆನ್ನಂ ನಿಲಿಸಿ ಕೊಲಿಸಲೆಂದು

ವ್ಯಾಳನನಾದುರ್ ಮಾವತಿಗನಂಕುಶಮಿಕ್ಕಿ ಬಿಡಲ್ಕೆ ಕಂಡು ಕೈ ।
ಕೋಳಿದೆ ಕೆಯ್ಗಳಂ ನೆಗಪಿ ತತ್ಪ್ರತಿಮಾನನುನಾರ್ಪಿನಂ ಗಜಂ ॥
ಘೀಳಿಡಲಾಂ ನಿಮಿರ್ದು ಪ್ರಡಿಯಲ್ಕದು ನೊಂದು ಮದದ್ವಿಪಂ ಗಜಾ ।
ವಿಳನದಿಂ ನಿರೀಕ್ಷಿಸದೆ ಪೋಗಲೊಡರ್ಚಿತತ್ರಿವಭೀತಿಯಿಂ ॥ ೬೬

ಅಂತಾಂ ಪ್ರಡಿಯಲಾನೆ ನೊಂದು ಪಿಂದುಮುಂದಪ್ಪಿನಂ ಮಾವತಿಗಂ ಕೋಪಿಸಿ

ಸುಡು ಕುಂಪಿರಾಜಕವ ನಿ ।
ನ್ನೊಡಲಾ ನರನಾತ್ರನಂ ಕೊಲಲ್ಕಾಱದೆ ಬೆಂ ॥

ಗೊಡಲಾಂ ಬಿಡುವೆನೆ ನಿನ್ನಂ ।
ಕಡಿದಿಕ್ಕುವೆನೆಂದು ಮುಗುಟ್ಟಿ ನೂಂಕಿದನಿಭನುಂ ॥ ೨೩

ಅಂತು ನೂಂಕಲ್

ಒರಿಕೆಯ್ಯಿಂ ನೆತ್ತಿ ಪ್ರೋಲ್ವಿಂತಿರೆ ಪೊಡೆಯಲತ್ರಿಕ್ರೂರದಂತಾಗ್ರದಿಂ ಮೆ।
ಯ್ಯೊರಡಾಗಲ್ ಸೀಲ್ವಿ ಸಂರಂಭದೊಳಿನಗಿದಿರಾಗೇಂ ತ್ತರಲ್ ವಂತಿಯುಂ ಮು ॥
ತ್ಕರದಿಂದಾನಾರ್ದ್ರನಿಂದಪ್ಪಳಿಸಲವಿಳದಿಗ್ಭಿತ್ತಿಯೊಳ್ ಬೃಂಹಿತಂ ತೀ ।
ವಿರೆ ಫೀಳಾಟ್ಟಾನೆ ಮುಂಗೆಟ್ಟನುಪಮಭಯದಿಂ ನಿಲ್ಲದೋಡಿತ್ತು ಬೇಗಂ ॥

ಅಂತು ಪ್ರೋಪಾನೆಯಂ ಕಂಡು

ಇದುವೆ ನಿಷಾದಿ ಕುಂಜರವೆಸರ್ಗಳ ಕೀಟಕನೆನ್ನ ಮುಂದೆ ನಿ।
ಲ್ಲದು ಮಗುಚೊಂದು* ಮತ್ತಗಜನುಳಿಕೊಳ್ಗೆ ನಿಲ್ಲದೆ ಕೊಂಡು ಬಾ ಬಳಿ॥
ಕ್ಕದಪಿನುವಾನವಂ ತಿಳಿವೆನೆಂದವನಂ ಜಡಿಯಲ್ಕೆ ಕಂಡು ಸಂ ।
ಮದದೊಳ್ ಕಾಮಪಾಲಸಚಿವಂ ಪದೆದೀಕ್ಷಿಸಿದಂ ಮದಾಸ್ಯವುಂ ॥ ೨೪

ಅಂತೆನ್ನಂ ಕಾಮಪಾಲಂ ನೋಡಿ ತನ್ನ ಸಾರಥ್ಯಕ್ಕೆ ಕರೆದಿಂತೆಂದಂ: —

ಈಚಿರ್ಯಾವೃತ್ತಿಯುಂ ಬಿ ।
ಟ್ಟಾಚಾರದಿನೆನ್ನ ಪೊರೆಯೊಳಿರ್ದೊಡೆ ನಿನ್ನಂ ॥
ಭೂಚಕ್ರಂ ಪೊಗಟ್ಟಿಂತತಿ* ।
ವೈಚಿತ್ರ್ಯದಿನೊಲ್ದು ಪೊರೆವೆನೆಂದನಲಂಪಿಂ ॥ ೩೦

ಎಂಬುದುವೊಂ ಮಹಾಪ್ರಸಾದಮುಂತೆಗೆಯ್ವೆನೆಂಬೊಡೆನ್ನ ಕೆಯ್ಯ ಕೋ
ಳಮುಂ ಕಳೆಯಲ್ವೇಟ್ಟುದುಂ;

ನಿನ್ನಾಜ್ಞೆಗೋಸುಗಂ ಕೋ ।
ಳಂ ನೆಲಸಿತ್ತೆನ್ನ ಕರದೊಳಲ್ಲದೆ ಕೇಳಾ ॥
ನಿನ್ನೊರ್ವರ ಬಗೆವೆನೆ ನೋ ।
ಡನ್ನಳವನೆನುತ್ತೆ ನುಗ್ಗಿದೆಂ ಪಟಿವರನಂ ॥ ೩೧

ಅಂತಾಕೋಳಮುಂ ನುಗ್ಗಿ ಕೆಯ್ಗಳಂ ಮುಗಿಯಲೆನ್ನನಾತಂ ಮನ್ನಿಸೆ

ಅಂದು ಮೊದಲಾಗಿ ನೃಪಸಚಿ ।
ವಂ ದಯೆಯಿಂದಾಪ್ತ ಮಿತ್ರಭಾವದಿನೆನ್ನಂ॥

ಮುಂದಿಟ್ಟು ಕೊಂಡು ಸುಖಮಿಸೆ ।
ವಂದದೊಳಿೂಲವಿಂ ಸಮಂತು ರಕ್ಷಿಸುತಿರ್ದಂ ॥ ೩೦

ಅಂತಿರ್ದುಮಾನೊಂದು ದಿನಂ ರಹಸ್ಯಸಮಯದೊಳ್ ಸಂತೋಷದಿನಿರ್ದಾಗಳ್ ಕಾಮಪಾಲಂಗಿಂತೆಂದೆಂ:—

ನಿಜಗುಣಮಪೂರ್ವಮಿನಸಂ ।
ಸುಜನತೆ ಪೊಸತಾವಗಂ ದಯಾಪರತೆ ಘನಂ ॥
ಋಜುವಾಗಿರ್ ನಲ್ಮಿಯಿಂ ನಿ ।
ನ್ನ ಜನ್ಮಮಂ ಪೇೞ್ವೇಲ್ಪಿನಗಧಿನಾಥಾ ॥ ೩೧

ಎಂದಾಂ ಬಿನ್ನಪಂಗೆಯ್ಯಲಾತನಿಂತೆಂದಂ:—

ಮಗಧಧರಾಧಿನಾಥನೆನಲೊಪ್ಪುವ ಮೈಮೆಯು ರಾಜಹಂಸನಾ ।
ವಗವುಱೆ ಕೂರ್ಪ ಮಂತ್ರಿಕುಲಶೇಖರನಪ್ಪ ಸುಮಿತ್ರಪುತ್ರನಾಂ ॥
ಮೃಗಶಿಖುಲೋಚನಾವ್ಯಸನದಿಂದಿರೆ ಪುತ್ರಿತೃಮಾತೃಬಂಧುಗಳ್ ।
ಮಿಗೆ ಜಡಿದೆನ್ನನೀವ್ಯಸನಮಂ ತೊಱೆಯೆಂದರತೀವಕೋಪದಿಂ ॥ ೩೨

ಅಂತವರೆನ್ನಂ ಜಡಿದೊಡಂ ಕಾಂತಾವ್ಯಸನನುನೆ ಪಿಡಿದಿರ್ದುಂ,
ಸಚಿವರಕುಲಕ್ಕನೀತಿಗ ।
ಳುಚಿತಮೆ ಕೇೞ್ ಕಾವ-ಪಾಲ ನಿನ್ನಿಂ ಬಂಧು ॥
ಪ್ರಚಯಂ ಕಿಡುವುದಱಿಂ ನಿ ।
ನ್ನ ಚಿತ್ತಮಿಸೆದತ್ತ ಪೋಪುದಿಲ್ಲಿಂದೀಗಳ್ ॥ ೩೩

ಎಂದವರೆನ್ನಂ ಪುಷ್ಪಪುರದಿಂ ಪೊಱಮಡಿಸಿ,
ಕುಲವುಂ ಸೋಡವಪಾಯಮುಂ ಬಿಡದು ನಿಂದಾಭೀತಿಯುಂ ಪೊರ್ದದು ।
ಜ್ವಲಮಪ್ಪಪ್ಪರ ವಾಕ್ಯಮುಂ ಬಗೆಯದಾರೇನೆಂದೊಡಂ ಲಜ್ಜೆಯಿಂ ॥
ತಲೆಯುಂ ಬಾಗದು ದೇಶವಿಭ್ರಮಣದಿಂ ಬೆಂಡಾಗದೊಳ್ವಿತ್ತ ಮೆ ।
ಯ್ವಲವುಂ ಪಿೞ್ದುದು ಕಾಮುಮೆಂಬೊಡದನಿನ್ನೇವಣ್ಣಿಪಂ ಬಣ್ಣಿಪಂ॥ ೩೪

ಅಲ್ಲಿಂ ತಳರ್ದೊರ್ಬನೆ ಅವ।*
ರೆಲ್ಲರನುಳಿದಧಿಕಮುಖಮುಂ ತಳಿದೊಲವಿಂ ॥
ಸಲ್ಲಲಿತಮೆನಿಪ ಕಾಶಿಗೆ ।
ಮೆಲ್ಲನೆ ಬಂದಿಲ್ಲಿ ಪೊಕ್ಕು ಚರಿಯಿಸುತಿರ್ದೆಂ ॥ ೩೫

ಗಾಡಿಯೊಳಂಗನಾತತಿಯುತಂ ತದಿಳೀಶ್ವರಪುತ್ರಿ ತದ್ವನ ।
ಕ್ರೀಡೆಗೆ ಕೂತರ್ ಕಾಂತಿನುತಿ ಬಂದಿರಲಾಂ ಮಿಗೆ ಕಂಡು ಕಾಮನೆ ॥
ಚ್ಛಾಡುನ ಬಲ್ಲರಲ್ಲಿ ಗುಱಿಯಾಗಿಯನಂಗದವಾಗ್ನಿತಾಪದೊಳ್ ।
ಕೂಡಿದೆನಾಕೆಯುಂ ಮದನಚೇಷ್ಟೆಯೊಳೀಕ್ಷಿಸಲೆನ್ನ ವಕ್ತ್ರಮಂ॥ ೩೪

ಅಂತವಳಂ ಕಂಡಾಂ ಕಾಮವಶಗತನಾಗಿ ಬಱಿಯಂ

ಬಂದಾನೊಂದುಮುಪಾಯದಿಂ ಯುವತಿಯಿರ್ಪಂತಃಪುರಕ್ಕೆಯ್ದಿ ಸಾ ।
ನಂದಂ ತತ್ಸತಿಯೊಳ್ ಮನೋಜವಿವಿಧಕ್ರೀಡಾನುರಾಗಾಬ್ಧಿಯೊಳ್ ॥
ಸಂದಿರ್ಪನ್ನೆಗಮಾಕೆಗೆನ್ನ ದೆಸೆಯಿಂ ಗರ್ಭಂ ನಿಲಲ್ ನಾಡೆ ಪೆಂ ।
ಪಿಂದಂ ನಿತ್ಯರಹಸ್ಯಸೌಖ್ಯದೊದವಂ ತಾಳ್ದಿರ್ದೆನಿರ್ಪನ್ನೆಗಂ ॥ ೩೯

ಮತ್ತೆ ಕೆಲವಾನುಂ ದಿವಸಕ್ಕೆ ಕಾಂತಿಮತಿಗೆ ಪೂರ್ಣಗರ್ಭವಾಗಿ ಕು
ಮಾರನಂ ಪಡೆದು

ಮಾತೃಪಿತೃಬಂಧುಗೋತ್ರಜ ।
ಭೀತಿಯೊಳಬ್ಜಾಕ್ಷಿ ಕಾಂತಿಮತಿ ಪೆತ್ತ ತನೂ ॥
ಜಾತನನಾಗಳೆ ಮೃತಸಂ ।
ಜಾತಂ ತಾನಾವನೆಂದು ಬಿಸುಡುವ ಬಗೆಯಿಂ ॥ ೪೦

ಬರ್ಬ ವೃದ್ಧೆಯ ಕೆಯ್ಯೊಳ್ ಕೂಸಂ ಕೊಟ್ಟುದಂ ಶ್ಮಶಾನದೊಳ್ ಬಿಸು
ಟ್ಟು ಬಾಯೆ ಂದೊಡವಳಂತೆಗೆಯ್ವೆನೆಂದು ಕೊಂಡು ಪೋಗಿ ಬಿಸುಡೆ

ಸುರತರುವಿಂ ಪೊದಪ್ಪಿ ತನಿನಣ್ಣಿಡಿದುರ್ವಿಗೆ ಬಿಚ್ಚಿದೋ ವಿಯ ।
ಚ್ಛರಿಯರ ವೇಣಿಯಿಂ ಜಗುಬ್ಬಿ ತೊಂಡಲ ಪಂತೆಯೊ ಭೂವಿಸಲ್ಕೆ ಭೂ ॥
ಸ್ಮರನ ಕರಾಬ್ಜದಿಂದಿಳೆಗೆ ಬಿಚ್ಚಿರುತಾಬ್ಜಮೊ ಪೇೞೆನಲ್ಕೆ ತ ।
ತ್ಪುರದೆಸೆವ ಶ್ಮಶಾನದೊಳದೇನೆಸೆದಿರ್ದನೊ ತತ್ಕುಮಾರಕಂ ॥ ೪೧

ಅಂತಿರ್ದ ಕುಮಾರಕನಂ ಬಿಸುಟ್ಟು ವೃದ್ಧೆಯೊರ್ಬಳಿ ರಾತ್ರಿಯೊಳ್
ಬರುತಿರ್ಪಾಗಳ್

ಪುರರಕ್ಷಕರೆಣ್ಪೆಸೆಯೊಳ್ ।
ಪರಿಪರಿದಾರೈದು ಕಂಡರಂ ಬಹುವಿಧದಿಂ ॥
ಪರಿಭವಿಸುತಿರ್ಪ ಸಮಯದೊ ।
ಳರವರಿಸದೆ ಬಸರ್ ವೃದ್ಧೆ ಸಿಲ್ಕಿದಳಾಗಳ್ ॥ ೪೨

ಅಂತವಳ್ ನಿಲ್ಕಲವಳಂ ಬಹುಪ್ರಕಾರದಿಂದಂ ದಂಡಿಸಿ ಈರಾತ್ರಿಯೊಳ್ ಲ್ಲಿಗೆ ಪೋದೆಯೆಂದು ಕೇಳ್ದೊಡವಳನೇಕವಿಧದಿಂ ವಂಚಿಸಿ ದಂಡನೆಗಾಱದೆ ಬಱಿಕಿಂತೆಂದಳ್:—

ನೃಪನಂದನೆ ತನಗುದಯಿಸಿ ।
ದ ಪುತ್ರನಂ ರುದ್ರಭೂಮಿಯೊಳ್ ಬಿಸುಟು ಬರಲ್ ॥
ಕೃಪೆಯಿಲ್ಲದೆನ್ನನಟ್ಟಿದ ।
ಳಪರಾಧಂ ಬಂದುದೆನಗೆ ವಿಧಿವಶದಿಂದಂ ॥ ೪೩

ಎಂದೊಡೆ ರಾಜಕನ್ಯೆಯಾವನಿಂದಂತರ್ವತ್ನಿಯಾದಳೆಂದವರ್ ಬೆಸಗೊಳೆ

ಎನ್ನೊಡನೆ ಬಂದೊಡೀಗಳೆ ।
ಕನ್ನೆಗೆ ಪುಕ್ಕವನನೊಲ್ದು ತೋಱಿದಪೆಂ ನೀ ॥
ಪೆನ್ನಂ ಬಿಡಿ ಪರಸೇವೆಯೊ ।
ಳೆನ್ನರುವೀನಾಗರೆನ್ನ ಬಡಿವರಮೀನೋ ॥ ೪೪

ಎಂದವರನೊಡಗೊಂಡು ಬಂದು

ನವರತ್ನಖಚಿತಕೃತಕಾ ।
ದ್ರಿವಿಳಾಸಗೃಹಾಂತದಲ್ಲಿ ಪಟ್ಟರ್ದೆನ್ನಂ ॥
ತವಕದೊಳಾವೃದ್ಧಾಂಗನೆ ।
ಯವಿನೀತರೆನಿಪ್ಪವರ್ಗೆ ತೋಱಿದಳಾಗಳ್ ॥ ೪೫

ಅಂತು ತೋಱಲೊಡಂ

ಉಪವನದ ಲತೆಗಳಂ ಪಱಿ ।
ದು ಪವಡಿಸಿರ್ದೆನ್ನನೀಜ್ಞೆ ಕಟ್ಟಿ ಬಱಿಕ್ಕೆ ॥
ಯ್ದುಪರೋಧಿಸಿ ಕನ್ಯಾಚಾ ।
ರ್ಯಪಾತಕಂ ದಂಡ್ಯನೆಂದವರ್ ಕಡುಮುಳಿಸಿಂ ॥ ೪೬

ಊರಿಂ ಪೊಱಗುಯ್ದಾಗಳ್ ।
ಕೂರಸಿಯಿಂದಿವನ ತಲೆಯನರಿಯೆಂದೊರ್ಬಂ ॥
ಕ್ರೂರಾತ್ಮನ ಕೆಯ್ಗೆನ್ನಂ ।
ಬೇರದೊಳಿತ್ತವರ್ಗಳತ್ತ ಪೋದರ್ ಬಜೆಯಂ ॥ ೪೭

ಅಂತವರತ್ತ ಪೋದರ್. ಇತ್ತಲಾವಾದಿಗನೆನ್ನಂ ಒಂವಟಿಕ್ಕೆ ತಂದು
ಪರಸು ಪರಸೆಲವ್ರೂ ಕಾಣೀ ।
ಪುರೀಕ್ಷನಂ ನೀಡು ಗೋಣನೆಂಬಾಗಳ್ ನಿ ॥
ಭರ್ಗರಸತ್ವದಿನಾನುರ್ಬಲ್ ।
ಭರದಿಂ ಕಟ್ಟಿರ್ದ ಬಳ್ಳಿ ಪಱಿದುದು ಬೇಗಂ ॥ ೪೪
ಅಂತು ಪಱಿಯಲೊಡಂ
ಆವಾದಿಗನೆಸಿಯಂ ಕೊಂ ।
ಡೇನಾತವನಂ ದುರಾತ್ಮನಂ ಪೊಡೆದು ವನಂ ॥
ಪ್ರೇಮದಿನಲ್ಲಿಂ ತಳರ್ದಟ ।
ವೀಮುಧ್ಯನುನೆಯ್ದಿದೆಂ ಪಥಭ್ರಮೆಯಿಂದಂ ॥ ೪೫
ಇನಶಶಿರಶ್ಮಿಸಂತತಿಗಗೋಚರಮಪ್ಪ ವ ಘಾಂಧಕಾರಸಂ ।
ಜನಿತಲತಾಳಿಗುಲ್ಮತರುಸಂಕುಳದಿಂದೆ ಶರಾಘೋರಕಾ ॥
ನನನ್ಯಗರಾಜಿಯಿಂದತಿಭಯಂಕರನುಪ್ಪಟವೀನಿವಾಸಮಂ ।
ಮನಮೊಸೆದೆಯ್ದಿದೆಂ ಪಥಪರಿಭ್ರಮೆಯಂ ಪಡೆದೊರ್ಬನಾಕ್ಷಣಂ ॥ ೪೬
ಅಂತೆಯ್ದಿವರ್ಪಗಳಲ್ಲಿ
ದಿವ್ಯವಧೂಪೂರ್ವಳೊಲ್ದ ಲ ।
ಸದೊ್ಯೀವುದಿನವನಿಗೆಯ್ದಿಯಂಜಲಿಕರದಿಂ ॥
ಶ್ರವ್ಯವಚನಂಗಳಿಂದತಿ ।
ನವ್ಯಾಕೃತಿಯೆನ್ನ ಸಮ್ಮುಖಕ್ಕೊಪ್ಪಿರ್ದಳ್ ॥ ೪೭
ವಿಳಸನ್ಮುಕ್ತಾಗ್ರಹಾರಂ ಸುಲಲಿತನವಮಂದಾರಪ್ರಪ್ಪಾವತಂಸಂ ।
ದಳಿತಶ್ವೇತಾಬ್ಜನೇತ್ರಂ ಘಟಕುಚಯುಗಳಂ ಚಿತ್ರಕಾಂಚೀನಿತಂಬ ॥
ಸ್ಖಳಮುದ್ಯದ್ವಲ್ಲಕೀರಂಜಿತಕರಮೆನಸುಂ ತನ್ನೊಳೊಪ್ಪಲ್ಕೆ ಹಸ್ತಂ ।
ಜಳಯಿಂ ಬಂದೊರ್ಬ ದಿವ್ಯಾಂಗನೆ ಭರವಸದಿಂದೆನ್ನಿದಿರ್ಗಾಗಿ ನಿಂದಳ್ ॥
ಅವತಂಸೀಕೃತಪಾರಿಜಾತಸುಮನಸ್ಸಾರಭ್ಯಮಾಶಾನಿಕಾ ।
ಯವನೆಯ್ದಲ್ ಪರಿವಾದಿನೀಮೃದುರವಂ ಮಾಧುರ್ಯಮಂ ತಾಳಿಡಲ್ ॥
ಧವಳಾಪಾಂಗಮುರೀಚಿ ಸಂತತಸುಧಾಸಂವೃಷ್ಟಿಯುಂ ಬೀಱಲೊ ।
ಪ್ಪವ ದಿವ್ಯಾಂಗನೆ ಭೋಂಕನಲ್ ತನದೊಳಂದೆಯ್ತಂದಳಾನಂದದಿಂ ॥

ಅಂತೆನ್ನ ಸಂಮುಖಕ್ಕೆ ಬಂದನಳಂ ನೀನಾರ್ಗೆಯೆಂದು ಕೇಳಲೊಡಂ
ತಿಳಿ ಮಾಣಿಭದ್ರನಾತ್ಮಜೆ ।
ವಿಳಸಿತಗಂಧರ್ವ ಕುಲಸಮುದ್ಭವೆ ತಾರಾ ॥
ವಳಯೆಂಬಳಗಸತ್ಕ್ಷತ್ರಿಶ್ರಮ ।
ದೊಳಗಿಂ ಪೊಱಮಟ್ಟ ಬರುತುಮಿರ್ದವಸರದೊಳ್ ॥ ೫೮

ಈವಾರಣಸಿಯ ಪಿತೃವನ ।
ದೋವರಿಯೊಳ್ ಶಿಶುವದೂಂದಲಿತ್ತಿರೆ ಕಂಡಾ ॥
ನೋವಿ ಪದೆತ್ತಿ ಕೊಂಡು ಮ ।
ಹಾವಿಭವದಿನೆಯ್ದಿದೆಂ ಕುಬೇರನ ಸಭೆಯುಂ ॥ ೫೯

ಕನಕದ ಭಿತ್ತಿ ಪೊನ್ನ ಪೊಸಕಂಭನುದಂಚಿತಹೇಮಭೂಮಿ ಕಾಂ ।
ಚನನುಯಗೋಪ್ಪರಂ ನವಸುವರ್ಣದ ವೇದಿಕೆ ಶಾತಕುಂಭಸಂ ॥
ಜನಿತಸಮುಲ್ಲಸತ್ಕಳಶವೊಪ್ಪುವ ಓಲಗಸಾಲೆಯೊಳ್ ಕರಂ ।
ಧನಪತಿ ರಂಜಿಸಿರ್ದನಸುರೀಚಯಮಿಕ್ಕುವ ಚಾಮರಂಗಳಂ ॥ ೬೦

ಕೆನ್ನರಸಂಕುಳಂ ಜಯಜಯಧ್ವನಿಯಿಂ ಪರಿವೇಷ್ಟಿಸಿರ್ದಿನಂ ।
ರನ್ನದ ಪಚ್ಚವುಚ್ಚರಿಯೆನಲ್ ಮಿಗೆ ದೇಹದೊಳೊಪ್ಪುತಿರ್ದಿನಂ ॥
ಸೋನ್ನತಹೇಮವಿಷ್ಟರದೊಳಿರ್ದನಶೇಷದಿಶಾಧಿಪೋತ್ತಮಂ ।
ಪನ್ನಗಭೂಷಣಪ್ರಿಯಸಖಂ ಮನವೊಲ್ದಳಕಾಪುರೀಶ್ವರಂ ॥ ೬೧

ಅಂತೆಸೆವ ಕುಬೇರನೋಲಗಕ್ಕಾ ಶಿಶುಸಹಿತಂ ಪೋಗಲಾತನೆನ್ನಂ ಕಂಡು
ಈಹಸುಳಿಯಲ್ಲಿ ನಿನ್ನಯ ।
ವೋಹಂ ಬಗೆಗೆಂತು ತೋಪ್ಪುದೆಂದೊಲವಿಂ ನರ ॥
ವಾಹನನೆನ್ನಂ ಕೇಳ್ದ ।
ದೇಹಜನೆಂಬಂತೆ ತೋಪ್ಪುದೆಂದೆನಲಂಪಿಂ ॥ ೬೨

ಎಂದೊಡುಳ್ಳುದಂ ಪೇೞ್ದೆಯೆಂದಾತನಾಶಿಶುವಿನ ವೃತ್ತಾಂತಮುಂ ಪೇೞಿಲ್ ತಗುಳ್ದನದೆಂತೆನೆ:—

ವಿನಯವಿಳಾಸಿ ಕೇಳಿನಗೆ ಶಾನಕಶೂದ್ರಕಕಾಮುಪಾಲನೆಂ ।
ಬನುಪಮನಾಮಮುಂ ತಳೆದ ಮೂಱು ಭಿನಂ ನಿನಗೊಪ್ಪಲೈವರಂ ॥

ಗನೆಯರವಗೆ ನಿನ್ನೊಡನೆ ಮೂಱು ಭವಂಗಳೊಡರ್ಚೆ ಮೂಱು ಮೂ॥
ಱನುನಯನಪ್ಪ ನಾಮಮವಗಾರ್ದಪ್ರದೆಂದುಸಿರ್ದಂ ಧನೇಶ್ವರಂ ॥ ೪೯

ಅದೆಂತೆನೆ.—

ಕ್ರಮದಿಂದೆ ಬಂಧುಮತಿ ವೇ ।
ದಿಮತಿ ಕರಂ ಚೆಲ್ವನಪ್ಪ ಹಂಸಾವಳಿಯು ॥
ತ್ತಮನಂದಿನಿ ಗೋಪಕುಮಾ ।
ರಿ ಮುಖ್ಯಮೊದಱ್ವರುಂ ಭವದ್ವಧುವಾದರ್ ॥ ೬೦

ಅಂತವಗೆ ನಿನ್ನ ಮೊದಲ ಜನ್ಮದ ಶೈನಕಾವಸ್ಥೆಯಲ್ಲಿ ಬಂಧುಮತಿ, ಎರಡನೆಯ ಶೂದ್ರಕಾವಸ್ಥೆಯಲ್ಲಿ ವಿನಯಮತಿ, ಮೂಱನೆಯ ಕಾಮುಪಾಲಾವಸ್ಥೆಯಲ್ಲಿ ಕಾಂತಿಮತಿಯೆಂಬ ಮೂಱು ಜನ್ಮಂ ಬಂಧುಮತಿಯೊರ್ವಳ್ಗಾದುವು. ಆಕ್ರಮದಿಂ ಮಿಕ್ಕ ನಾಲ್ವರ್ಗಂ ವೇದಿಮತಿ ಯಜ್ಞದಾಸಿ ಕಾಮದೇವಿ, ಹಂಸಾವಳಿ ಶೂರಸೇನಿ ಸುಲೋಚನೆ, ನಂದಿನಿ ರಂಗಪತಾಕೆ ಇಂದ್ರಸೇನೆ, ಗೋಪಕುಮಾರಿ ಆರ್ಯದಾಸಿ ತಾರಾವಳಿ, ಎಂದೀ ಕ್ರಮದಿಂ ಸ್ತ್ರೀಯರಾದರಪ್ಪದಱಿಂ

ನೀಂ ಶೂದ್ರಕನಾಗಿರ್ದಂ ।
ದಾಶಿಶುವಂ ವಿನಯಮತಿ ಕರಂ ಪೊರೆದುದಱಿಂ ॥
ದೀಶಿಶುಜನ್ಮದೊಳತಿವೋ ।
ಡಾಶೆಯೊಳಾಕಾಂತಿಮತಿಗೆ ಜನಿಸಿತ್ತೊಲವಿಂ ॥ ೬೧

ಅದುಕಾರಣದಿಂ ನಿನಗೆ ಪುತ್ರನ ಪುತ್ರನಪ್ಪದಱಿಂ ನಿನ್ನ ಕಣ್ಮೊಲದೊಳಿರ್ದುದೆಂದು ಕುಬೇರಂ ಪೇೞ್ದು ಮತ್ತಮಿಂತೆಂದಂ:—

ಇವನಂ ಕೊಂಡುಯ್ದಂಭೋ ।
ದ್ಧವಲೋಚನೆಯಪ್ಪ ವಸುಮತೀದೇವಿಗೆ ಕೊ ॥
ಟ್ಟು ವಿಳಾಸಿನಿ ನೀಂ ಪೋಗು ।
ತ್ಸವದಿಂದಂ ಕಾಮುಪಾಲನಿರ್ದೆಡೆಗೀಗಳ್ ॥ ೬೨

ಎಂದು ಕುಬೇರಂ ಪೇೞ್ದೊಡಾಕುಮಾರನಂ ವಸುಮತೀದೇವಿಗೆ ಕೊಟ್ಟು ನಿನ್ನ ಪದಪರಿಚರ್ಯಾರ್ಥಮಱಿಸುತ್ತುಂ ಬಂದೀಗಳ್ ಕಂಜೆನೆಂದು ತಾರಾವಳಿ ಪೇೞ್ದಿನಂತರಂ,

ವನಜದಳಾಕ್ಷಿ ತತ್ತರುಣಿ ಕಣ್ಮಗಿದೊಯ್ಯನೆ ತನ್ನ ವಿದ್ಯೆಯಂ ।
ನೆನೆಯಲೊಡಂ ವಿಚಿತ್ರಮೆನಿಸರ್ಪ ಮನೋಹರಚಿತ್ರಶಾಲೆ ಭೋಂ ॥
ಕೆನೆ ನೆಲಸಿತ್ತನೇಕಮಣಿರಂಜಿತಗೋಪುರವೀದಿ ಮಾರುತಾ ।
ಯನಕಮನೀಯಹೇಮಕಲಶಂಗಳಿನಾವಿಪಿನಪ್ರದೇಶದೊಳ್ ॥ ೬೩

ಮೃದುತಲ್ಪಂ ಮುಂಚಂ ಕಂ ।
ಪೊದವಿದ ಪುಷ್ಪಾನುಲೇಪನಂ ತಾಂಬೂಲಂ ॥
ತ್ರಿದಶಾಶನಸಮಭಕ್ಷ್ಯಂ।
ಸುದತಿಯ ವಿದ್ಯೆಗಳಿನಾಗಳೊಪ್ಪಿದುವೆನಸುಂ ॥ ೬೪

ಅಂತೊಪ್ಪಿದರ್ ಗಂಧರ್ವಗೃಹದಲ್ಲಿ
ತವಕದಿನಪ್ಪಿ ತಲ್ಲಣದೆ ಚುಂಬಿಸಿ ನಿಲ್ಲದೆ ನಾಣ್ಗೆ ವಾಯ್ದು ಕೂ ।
ಡುವ ಬಗೆಯಿಂತುಟೆಂದುಸಿರ್ವ* ಬಲ್ಮೆಯನಾನಱಿಯೆಂ ನಿರಂತರಂ ॥
ಸಮಸುಖಮಾಗಲೆನ್ನೊಳೊಡಗೂಡಿರೆ ಚಿತ್ರದ ಕಲ್ಲ ಲೆಪ್ಪದಂ ।
ಗವನೆಡೆಗೊಂಡುದೆನ್ನ ತನುವೀವ್ರೊಗಲ್ವೆಂ* ಖಚರೀವಿನೋದಮುಂ ॥ ೬೫

ಅಂತವಳ್ ಬಹುವಿಧವಿನೋದದಿಂದೆನ್ನೊಳ್ ಸಂಭೋಗಮನೊಡಬರ್ಪು ತುಂ ಕೆಲವು ದಿನಮುಂ ಕಳೆಯುತ್ತಿರಲೊಂದು ಸಮಯದೊಳಾನವಳೊಳಂತೆಂದೆಂ:—

ಕ್ಷಿತಿಪತಿ ಚಂಡಸಿಂಹನೃಪನೆನ್ನನಕಾರಣದಿಂ ಕೊಲಲ್ಕೆ ದು ।
ರ್ಮತಿ ಬಗೆದಂ ಮಗುಳ್ದಿವನೊಳಾಂ ಮಿಗೆ ದುರ್ಘಟಮಪ್ಪ ಶಾಸ್ತಿಯಂ ॥
ಗತಿಗಿತೆ ಮಾಡುವಿಚ್ಛೆಯೆನಗಾವಪ್ರದಂಗನೆ ಪೇಳ್ದುದರ್ಕ ಪ ।
ದ್ಧತಿಯನೆನಲ್ಕವಳ್ ಕದನಕೀರ್ತಿಯ ಬೆಳ್ಪನೆ ನಕ್ಕಳಾಕ್ಷಣಂ ॥ ೬೬

ಅಂತು ನಕ್ಕು
ವನಜಮುಖಿ ಕಾಂತಿಮತಿಯಂ ।
ನೆನೆದಪೆಯಕ್ಕೆಂದು ನಕ್ಕು ತಾರಾವಳಿ ಭೋಂ ॥
ಕೆನೆ ತನ್ನ ವಿದ್ಯೆಯಿಂದಂ ।
ನೆನೆದಳ್ ಸಲೆ ಚಂಡಸಿಂಹನಿದಾರ್ಯಲಯಮುಂ ॥ ೬೭

ಅಂತು ಕಾಶೀಪತಿಯಪ್ಪ ಚಂಡಸಿಂಹನರಮನೆಯುಂ ನೆನೆದು

ತಾರಾವಳಿ ನಿಮಿಷಕೆ ಕಾಂ ।
ತಾರದಿನಳವಟ್ಟ ತನ್ನ ವಿದ್ಯಾಬಲದಿಂ ॥
ವಾರಾಣಸಿಸ್ವರದಧಿಪನ ।
ಗಾರಕ್ಕಾಂ ಸಹಿತಮಿರುಳವಳ್ ನಡೆತಂದಳ್ ॥ ೬೩

ಅಂತವಳರ್ಧರಾತ್ರಿಯೊಳ್ ಬಂದಾರುಮಱಿಯುದಂತೆ ಚಂಡಸಿಂಹನಿರ್ದ ಸಜ್ಜೆಮನೆಯೊಳಿನ್ನಂ ಪ್ರಗಿಸಿ ತಾಂ ಪ್ರೊಱಗಿರ್ದುದುಂ

ತಲೆದಿಸೆಯೊಳಿರ್ದಾಯ್ದನು ।
ನೊಲವಿಂದಾನುಚಿರ್ ನಿದ್ರೆಯಿಂ ತನ್ನೃಪನಂ ॥
ತಿಳಿಪಲತಿಭೀತಿಯಿಂದಂ ।
ತಳವಳಿಗಾಗುತ್ತುಮೆಬ್ಬಿದ ಕುಳ್ಳಿರ್ದಾಗಳ್ ॥ ೬೪

ಅಂತು ಚಂಡಸಿಂಹನೆಬ್ಬಿದ ಕುಳ್ಳಿರಲೊಡಂ

ಸೆಳೆದಿರ್ದಸಿಸಹಿತಂ ಕೆ ।
ಯ್ಗಳನೆರಡಂ ಮುಗಿದು ಕಾಂತಿನುತಿಯುಧಿಪಂ ನಿ ॥
ನ್ನಳಿಯಂ ಯುಕ್ಷಿಣಿ ತಾರಾ ।
ವಳಯೊಡನಾಂ ಬಂದೆನರ್ಧರಾತ್ರಿಯೊಳೀಗಳ್ ॥ ೬೫

ಎಂಬುದುಂ ನೃಪಂ ವಿಸ್ಮಯಸ್ವಾಂತನಾಗಿಂತೆಂದಂ:—

ಎನ್ನರ್ಥಂ ಪ್ರಾಣಮೆನ್ನಾಳ್ವನಿಯನಿತುಮಂ ಕೊಟ್ಟು ಮತ್ಪ್ರಿಯಮಂ ಕೊ ! ಟ್ಟೆನ್ನಾಣ್ಮಾತೇಕೆ ಪೇೞೆಂದೆನಗೆ ಮಱುದಿನಂ ತತ್ತನೂಜಾತೆಯುಂ ಕೊ ॥ ಟ್ಟೆನ್ನಂ ತಾರಾವಳಿಯಾ ಭೀತಿಯೊಳಧಿಕತರಸ್ನೇಹದಿಂ ಕೂಡಿಕೊಂಡಿ । ರ್ದನ್ನೋಡಲ್ಕೀಂ ಜನ್ಮಸ್ಥಿತಿಗತಿಯಿದು ಕೇಳ್ ಪ್ರೀತಿಯಿಂ ಪೂರ್ಣಭದ್ರಾ॥ ೬೬

ಎಂದು ಕಾಮಪಾಲಂ ತನ್ನ ವೃತ್ತಾಂತಮನೆನ್ನೊಳ್ ಪೇೞ್ದಿನೆಂದು ಪೂರ್ಣಭದ್ರಂ ಸುಳ್ಳಿನೆ ಸುಯ್ಯಲ್ಕೆ ಸುಯ್ದುದಕ್ಕೆ ಕಾರಣಮೀನೆಂದು ನಾಂ ಕೇೞಲಾತಂ ಮಗುೞ್ದಿಂತೆಂದಂ:—

ಭಾವಿಪೊಡೆ ಕಾಮಪಾಲನ ।
ಮೂನಂ ಗುಣಿ ಚಂಡಸಿಂಹನಱಿಯಲೊಡಂ ಸ ॥

ದ್ಭಾವದಿನಾತನ ಸುತನಖಿ ।
ಳಾವನಿಗರಸಾಗಿ ನಿಂದಪಂ ಕೆಲವು ದಿನಂ ॥ ೭೧

ಅಂತು ಚಂಡಸಿಂಹಂ ಕಾಲನಿಲಯಮನೆಯ್ದಲಾತನ ಪಿರಿಯ ಮಗನಪ್ಪ ಚಂಡಘೋಷಂ ಪಟ್ಟವುಂ ತಳೆದು

ಕತಿಪಯದಿನಕ್ಕೆ ತದ್ಭೃ ।
ಪತಿ ರಾಜ್ಯಶ್ರೀಯ ಸೌಖ್ಯಮಿನಿತಿಲ್ಲದೆ ಕೇಳ್ ॥
ಗತಜೀವಿತನಾದಂ ಸು ।
ಸ್ಥಿತಿಯಂ ದುಸ್ಸ್ಥಿತಿಯನೆಣಿಸಲಱಿವವರೊಳರೇ ॥ ೭೨

ಅಂತು ಚಂಡಘೋಷನುವಱಿಯಲೊಡಂ,

ಅವನಿಂ ಕಿಱಿಯಂಗೆ ಮನೋ ।
ಭವನಮೂರ್ತಿಗೆ ಸಿಂಹಘೋಷನೆಂಬ ಕುಮಾರಂ ॥
ಗೆ ವಿಲಾಸದಿಂದೆ ತತ್ಪ ।
ಟ್ಟವನಿತ್ತಂ ಕಾಮಪಾಲನತ್ಯುತ್ಸವದಿಂ ॥ ೭೩

ಅಂತಾಕಾಮಪಾಲಂ ಸಿಂಹಘೋಷನೆಂಬ ಕುಮಾರಂಗೆ ಪಟ್ಟವಂ ಕಟ್ಟಲೊಡನುವಂ ಕೆಲವು ದಿನಕ್ಕೆ ಯೌವನವುತ್ತನಾಗಿ ಧೂರ್ತವರ್ಗಮಂ ಕೂಡಿಕೊಂಡು ಪೇಟ್ದಿ ಕೊಂಡೆಯಮಂ ಕೇಳಲ್ ಮನಂದರಲ್ ಪಿಶುನರ್ ಪೊರ್ದಿ ಯಿಂತೆಂದರ್:—

ಸಾಹಸವಂತನಿಂದ್ರಿಯರತಂ ಬಹುಮೂರ್ಖನತೀವಕಾಮುಕಂ ।
ಬಾಹುಪರಾಕ್ರಮಂ ಕುಟಿಲದೈವಪರಂ ಧನಧಾನ್ಯಯುಕ್ತನು ॥
ಗ್ರಾಹವಧೀರನಾದಧಿಕಮಂತ್ರಿಯನೇತಱಿದಿಂದೆ ದುಷ್ಕೃತಾ ।
ಳಾಹಿಯ ಗೋಣನೊತ್ತಿ ಮುಱಿವಂತನನಂ ಮುಱಿದಿಕ್ಕುಗುರ್ವಿ ಪರ್॥

ತನ್ನಂ ಲೆಕ್ಕಿಸದವನಂ ।
ತನ್ನ ಸಮಶ್ರೀಯನುಳ್ಳನಂ ಸಾಹಸಿಯಂ ॥
ತನ್ನಿಂದಧಿಕನನಾರ್ಪಿಂ ।
ಮುನ್ನಿಱಿವುದು ಧೂರ್ತಸಚಿವನಂ ಭೂಪಾಲರ್॥ ೭೪

ಎಂದು ಲೋಕನೀತಿಯಂ ಪೇೞ್ವಂತೆ ಕಾಮಪಾಲಂಗಂ ಸಿಂಹಘೋಷಂಗಂ ವಿರೋಧಮುಂ ಬಳೆಯಿಸಲೆಂದು

ನಿಮ್ಮಯ ತಂದೆಯಂ ನಡುವಿರುಳ್ ಕೊಲಲೆಂದಸಿಯುರ್ಚಿ ಸಜ್ಜೆಯಂ।
ಕೆನ್ಮನೆ ಪೊಕ್ಕನೊರ್ಬ್ ಖಚರೀಸಹಿತಂ ಸಲೆ ಕಾಮಪಾಲನಂ ॥
ದೊಮ್ಮೆ ವಧೂಟಿ ಕಾಂತಿಮತಿಯಂ ನೃಪನಿತ್ತು ಬರ್ದುಂಕೆ ಮತ್ತೆ ಕೊಂ।
ದಂ ಮನದಕ್ಕಿಯುಂ ನೃಪತಿಯುಂ ಕುಟಿಲಂ ಮಿಗೆ ದುಷ್ಟಚೇಷ್ಟೆಯಿಂ॥ ೩೬

ಅವಲ್ಲದೆಯುಂ ನಿಮ್ಮಗ್ರಜನಪ್ಪ ಚಂಡಘೋಷನಂ ಕಪಟದಿಂ ತೀರ್ಚಿದನೆಂದು ಪಲಬರ್ ಕೊಂಪೆಯನಂ ಪೇಲಿಲಾಕುಮಾರನಿಂತೆಂದಂ:—

ಏಗೆಯ್ವೆಂ ಬಲ್ವಗೆಯಂ ।
ನೀಗಲ್ಬಾರದು ಸಮುಖೆ ತಾರಾವಳಿಯೆಂ ॥
ಬಾಗಣಿಕೆಯ ಭಯದಿಂದಂ ।
ಮೂಗರ್ ಮಿಗೆ ಕಂಡ ಕನಸಿನಂತಾಯ್ತೀಗಳ್ ॥ ೩೭

ಎಂದು ತಾರಾವಳಿಯು ಭೀತಿಯಿಂ ಕಾವ ಪಾಲಂಗೆ ಪೊಲ್ಲಿಹವನಸಗೆಲಱಿಯದಿರ್ಪುದುವೊಂದುದಿನಂ ಕಾಂತಿಮತಿ ಸಿಂಹಘೋಷನ ಕಾಂತೆಯಪ್ಪ ಲಕ್ಷಣೆಯ ಸಮೀಪಕ್ಕೆ ಪೋಗಲಾಲಕ್ಷಣೆ ಕಾಂತಿಸುತಿಯ ಮುಖಮಂ ನೋಡಿ,

ಏನೆಲೆಗೆ ಕಾಂತಿಮತಿ ನಿ ।
ನ್ನಾನನಕಮಳಂ ಮುಸುಳ್ದುದೇಕಾರಣಮೆಂ ॥
ದಾನರಪನರಸಿ ಬೆಸಗೊಳ ।
ಲಾನಮ್ರಿರಸ್ತೆ ಕಾಂತಿಮತಿಯಿಂತೆಂದಳ್ ॥ ೩೮

ನಿನಗೇನಂ ವಂಚಿಸೆಂ ಲಕ್ಷಣೆ ಪಣೆದು ಮದೀಯಪ್ರಿಯಂ ಕಾಮಪಾಲಂ ಮನೆಯೊಳ್ ಕುಳ್ಳಿರ್ದು ತಾರಾವಳಿಯನೊಸೆದು ಮನ್ನಾನುದಿಂದಿತ್ತ ಬಾ ಕಾ ॥ ಮಿನಿಯೆಂದುತ್ಸವದಿಂದಂ ಮುಱಿದು ಕರೆಯೆ ತತ್ಕಾಂತೆ ಮಾತ್ಸರ್ಯದಿಂ ಭೋಂ । ಕನೆ ಪ್ರೀದಳ್ ತದ್ವಧೂಚಿಂತೆಯೊಳಗಳವಱಿಯುತ್ತಿರ್ದಪಂ ಮಂತ್ರಿಮುಖ್ಯಂ ॥ ೩೯

ಅದುಕಾರಣಮಾತನ ದುಗುಡವೆಮಿ ಎನ್ನ ದುಗುಡನಾಗಿರ್ದಪೆನೆಂದು ಪೇಲಿಲೊಡಂ

ಈಸುದ್ದಿಯನಾಲಕ್ಷಣೆ ।
ದೇಶಾಧಿಪಸಿಂಹಘೋಷನೊಳ್ ಪೇೞಲೊಡಂ॥

ಕ್ಲೇಶಂ ಪ್ರೋಯ್ತೆಂದು ಧರಾ ।
ಧೀಶಂ ತನ್ನಾಪ್ತವರ್ಗವುಂ ಕರೆಯಿಸಿದಂ ॥ ೪೦

ಅಂತು ಭೂತರ್ವವರ್ಗವುಂ ಕರೆಯಿಸಿಯೋಲಗಂಗೊಟ್ಟುದುರ್ ಎನಸುಂ ತಾರಾವಳೀಕಾಂತೆಯ ವಿರಹದೊಳಂಗಂ ಬೆಳತುರ್ಪ್ಪುದಿಂದಾ । ನನಬಿಂಬಂ ಬಾಡಿ ಚಿತ್ತವ್ಯಥೆ ಪಸರಿಸಿ ಚಿಂತಾಗ್ನಿ ಕೈಕೊಂಡು ಪುಷ್ಪಾ ॥ ಸ್ತ್ರನ ಬಾಣಂ ಮೆಯ್ಗಳೊಳ್ ಕೀಲಿಸಿವಪೂಲಧಕೋನ್ಮಾದದಿಂ ಕಾಮುಪಾಲಂ । ಮನದೊಳ್ ಸುಂಗೆಟ್ಟು ಮತ್ತಂ ಧೃತಿಗಿಡದಿರವಂ ಕಂಡನಾಸಿಂಹಭೂಪಂ ॥ ೪೧

ಅಂತು ಕಂಡು

ನೆರೆದಿರ್ದೋರ್ಲಗದೊಳ್ ಕೂ ।
ರ್ತರನೀಕ್ಷಿಸಿ ಸಂಜ್ಞೆಮಾಡಿ ರಾಜಕುಮಾರಂ ॥
ಭರದಿಂದೆ ಕಾಮುಪಾಲನ ।
ನರವರಿಸದೆ ಪಿಡಿದು ಕಟ್ಟಿಸಿದನಾಕ್ಷಣದೊಳ್ ॥ ೪೨

ಅಂತು ಕಟ್ಟಿಸಿ ಮಿಥ್ಯಾದೋಷಂಗಳನುಗ್ಘಡಿಸಿಯನಂತರಂ

ಸಾಹಸವಿದನಂ ಸ್ವಾಮಿ ।
ದ್ರೋಹನನತ್ಯಧಮನಂ ನೃಪಾಲನ ಕನ್ಯಾ ॥
ಮೋಹಿಯನುಯ್ದಪೇಕ್ಷೆಗಳಂ ।
ಲೋಹದ ಮೊನೆಯಿಂದೆ ಕಳೆಯಿಮೆಂದನಿಳೀಶಂ ॥ ೪೩

ಅಂತು ಭೂಮಿಪಾಲಂ ಗ್ರಾಮಪಾಲರ ಕೆಯ್ಯೊಳ್ ಕಾಮುಪಾಲನಂ ಕುಡಲವರ್ ಚಾವಟಕ್ಕೆ ಕೊಂಡು ಪೋಗಿ ಕುಳ್ಳಿರಿಸುವ್ರದನಾಂ ಕಂಡು,

ದೊರೆವೆತ್ತೆನ್ನಾಪ್ತ ಮಿತ್ರಂಗಿನಿತಳವಡಲುದ್ವೇಗಮಾಪತ್ಸಮೂಹಂ ।
ಒರೆ ಕಂಡಾಂ ಪ್ರಾಣದಿಂ ಜೀವಿಸುವುದುಚಿತಮಲ್ತೆಂದು ಮುದ್ದೀಪಮುಂ ಗೋ ॥ ಣ್ಮುಱಿಗೊಂಡಾನೀಗಳಲ್ಕ್ಕಾಡುವ ಪೊಸವಗೆಯಿಂ ರಜ್ಜುವಂ ಮಾಲ್ಪೆನೆಂದ । ಚ್ಚರಿಯಾಗಲ್ ಪೂರ್ಣಭದ್ರಂ ನಯನಜಲದೊಳಲ್ಕ್ಕಾಡುತುಂ ಪೇೞ್ದಿನೆನ್ನೊಳ್ ॥ ೪೪

ಅಂತು ಪೂರ್ಣಭದ್ರಂ ಪೇೞ್ದ ವೃತ್ತಾಂತಮುಂ ಕೇಳ್ದಾನಿಂತೆಂದೆಂ:—

ತಾರಾವಳಿ ಸಲೆ ವಸುಮತಿ ।
ನಾರಿಗೆ ಕೊಂಡುಯ್ದು ಕೊಟ್ಟಳೆಂಬ ಮಗಂ ವಿ ॥
ಸ್ತಾರಮೆನೆ ಕಾಂತಿಮತಿಯ ಕು ।
ಮಾರಕನಾಂ ನಿನ್ನ ದುಃಖಮುಂ ಬಿಡು ಬೇಗಂ ॥ ೪೫

ಎಂಬುದುವ್ಮಾತಂ ಕಣ್ಬನಿಯಂ ಬಿಟ್ಟೆನ್ನಾಸ್ಯಕಮಳಮಂ ನೋಡಿ ಬ
ಳಿಕಂ ಬಿಗಿಯುಪ್ಪಿ ನಿತಾಂತಸುಖಾಂಬುಧಿಯೊಳ್ ಮುಳುಮುಂಗಿ ದುಃಖವಾರ್ಧಿ
ಯನುಬ್ಬಿದು

ಕಾಂತಿಮತಿಗಾದ ಪುಣ್ಯವ ।
ನಂತಿಂತೆನಲೇಕೆ ಕಾವುಪಾಲನ ಕಣ್ಗಳ್ ॥
ಮುಂತಿರ್ದೊಡಮಿಲ್ಲದೊಡವು ।
ನಂತಸುಖಂ ಪುತ್ರನಾದಪಂ ತನಗೀಗಳ್ ॥ ೪೬

ಎಂದು ಪೂರ್ಣಭದ್ರಂ ಸಂತಸದಂತವನೆಯ್ದಲ್ ಮತ್ತಮಿಂತೆಂದೆಂ:—

ನೆರವಿಯನೆಲ್ಲಮಂ ಭರದೊಳೊರ್ವನೆ ಮತ್ಕರಖಡ್ಗಘಾತದಿಂ ।
ದೊರಸಿ ಬಿಸುಟ್ಟು ನಿಲ್ವ್ವಧಿಕಸಾಹಸಮೆನ್ನೊಳಿ ಕೂರ್ತು ಸಂದೊಡೇಂ ॥
ದೊರಕಿದ ತಂದೆಯಂ ಬಲಿಕ ಕೊಂದಪರಾಖಳರೆಂಬ ಕಂಕೆಗೋ ।
ಸರಿಸುವೆನಲ್ಲದಂದಿನಿತು ಸೈರಿಸಲಾರ್ಪೆನೆ ಪೂರ್ಣಭದ್ರಕಾ ॥ ೪೭

ಎಂದು ಪೇಳ್ದು ಪಿತೃಪ್ರಾಣರಕ್ಷಣೋಪಾಯವಂ ಚಿಂತಿಸುತಿರ್ಪನ್ನೆಗಂ ಆದೇವಾಲಯದ ಕೊಂಟೆಯ ಬಿಲದಿಂ

ಮೊರೆಯುತ್ತುಂ ಕಾಳಕೂಟಜ್ವಲನವನುಗುಟಿಸುತ್ತುಂ ವಿಷಜ್ವಾಲೆಯಿಂ ಕಾ ।
ಯ್ದುರಿಪುತ್ತುಂ ಮಾರ್ಗವಂ ಬಾಯ್ದೆಱೆದೆರೆಗೆಳಸುತ್ತುಂ ನರಚ್ಛಾಯೆ ಮುಂದೇ ॥
ಟ್ಟಿರೆ ಕಣ್ಣಿಂದಾಲಿಸುತ್ತುಂ ಪಸಿವಿನೆಸಕದಿಂದೊಂದು ಗಂಭೀರಛದ್ಮಾಂ ।
ತರದಿಂ ಕಾಳೋರಗಂ ಮೆಲ್ಲನೆ ಪೊಱಮಡಲಾಂ ಕಂಡೆನುರ್ವೀವರೇಣ್ಯಾ ॥ ೪೮

ಅಂತು ಪಾವು ಪೊಱಮಡುವುದಂ ಕಂಡು

ಕಪಿಲಾಕ್ಷಂ ನೀಳ್ದ ತೋಳ್ಗಳ್ ನಿಶಿತಕುಟಿಲದಂಷ್ಟ್ರಾಂಕುರಂವಕ್ರನಾಸಂ।
ತಪನೀಯಪ್ರಾಯಕಾಯಂ ಫಣಿಗಣವಿವಿಧಾಲಂಕೃತಂ ತಳ್ಕಿಗೊಂಡಿ ॥

ದ್ದ ಪತತ್ರಂ ತನ್ನೊಳೊಪ್ಪಿರ್ಪ ಹಿಕುಲರಿಪುವಂ ಸಂತತಂ ಸದ್ವಿಹಂಗಾ ।
ಧಿಪನಂ ಮುಚ್ಚಿತ್ತದೊಳ್ ಭಾವಿಸಿದೆನತುಳಪಂಚಾಕ್ಷರೀಜಾಪ್ಯದಿಂದಂ ॥
ಗರುಡಧ್ಯಾನಮನೊಲ್ದಂ ।
ತರಂಗದೊಳ್ ನಿಱಿಸಿ ಪಂಚಮುಖಮಂತ್ರಮನು ॥
ಚ್ಚರಿಸಿಯುಪಸವ್ಯೇಕರದೊಳ್ ।
ಭರವಸದಿಂ ಪಿಡಿದೆನಾಭುಜಂಗಾಧಿಪನಂ ॥ ೯೦

ಅಂತು ಪಾವಂ ಪಿಡಿದು

ಎಲೆ ಪೂರ್ಣಭದ್ರ ಫಣಿ ಕೆ ।
ಯ್ಗೊಳಗಾಯ್ತು ತೀಕ್ಷ್ಣದಿಂದಮೆಮ್ಮಯ ಕಾರ್ಯಂ ॥
ಫಲಮಾಯ್ತು ಚಿಂತೆಯುಂ ಬಿಡು ।
ತ್ಕೀರ್ಯುಲ್ ದೇಸಿಗರ್ಗೆ ದೈವಮುಳ್ಳುದು ಪುಸಿಯೇ ॥ ೯೧

ಅದೆಂತೆನೆ:—

ಈಪಾವನುಯ್ದು ಮುತ್ತಿದ ।
ಚಾಪಟದೊಳ್ ಪಿತನ ಮೇಲೆ ಬಿಸುಡಲ್ ವಿಷಸಂ ॥
ತಾಪಮನಿದು ಮಾಪ್ಪಿಂ ವೃತ ।
ರೂಪಂ ತಾನಾದನೆಂದು ಜನಮುಬ್ಬಿನೆಗಂ ॥ ೯೨

ಬಬ್ಬಿಳಾಂ ಪ್ರಾಣಪ್ರತಿಷ್ಠೆಯಂ ಮಾಡಿ
ನಾಗಮುತಮುಂತ್ರದಿಂದಾ ।
ನಾಗಳ್ ವಿಷಮಂ ನಿರಂತರಂ ಸ್ತೋಭಿಸಿ ನಾ ॥
ನಾಗಾರುಢಿಗರ್ಗಸದಳ ।
ಮಾಗಲ್ ಮುಟ್ಪೆಂ ಸ್ವಕಾರ್ಯವಶದಿಂದೀಗಳ್ ॥ ೯೩

ಅಂತು ವಿಷಮಂ ಸ್ತೋಭಿಸಲ್ ಕಾಮುಪಾಲಂ ಕಾಲಭವನಮನೆಯ್ದಿದ
ನೆಂದು ನೆರವಿಯೆಲ್ಲಂ ಪರಿದು ಪೋಗಲ್ ಬಬ್ಬಿಕ್ಕಾಕಾಂತಿಮತಿ

ಎನ್ನ ಪತಿಯಬ್ಬಿದನೀಗೆನ ।
ಗಿನ್ನಾರ್ ಶರಣಾತನಲ್ಲದನುಗಮನಕ್ಕಾ ॥
ಸನ್ನಂ ಸಮುಕಟ್ಟುವುದುಱೆ ।
ಮನ್ನಣೆಯಿಂದೆನಗೆ ಸಿಂಹಶೋಷನರೇಂಚ್ರಾ ॥ ೯೪

ಎಂದರಸಂಗೆ ಪೇೞ್ದಿನುಗೆಮುನಕ್ಕನುವಾಗಿ ಸರ್ವಾಲಂಕಾರಂಗೆಯ್ಯಲ್ ಕಾಮುಪಾಲನ ಶಬವಂ ಕೊಂಡು ಪ್ರೋಗಲ್ ಬಟ್ಟಿಕ್ಕಾನಲ್ಲಿಗೆ ಬಂದಾತನ ಪ್ರಾಣಮಂ ಪಡೆವೆನೆಂದು ಪೂರ್ಣಭದ್ರಂಗೆ ಪೇೞ್ದಿ ಮುತ್ ಮಿಂತೆಂದೆಂ: —

ಎನ್ನುವ್ವೆಗೆ ಪೇೞೊಲವಿಂ ।
ಕೆಮ್ಮನೆ ನೀಂ ಬಿಸುಡಲಿತ್ತ ನಿಜಸುತನೇೞ್ತಿಂ ॥
ದವ್ಯಾಣುವ್ಮಳಿಕೆಯನಧಿ ।
ಪವ್ಮರಣದಿನುೞಿನನೆಂಬ ಶುಭವಾಚಕಮುಂ ॥ ೯೫

ಎಂದು ಪೂರ್ಣಭದ್ರನಂ ಕಾಂತಿಮತಿಯು ಸವಿಾಪಕತ್ತಲೆ ಕಳಪಿ ಇತ್ತಲಾಂ ಕಾಮುಪಾಲನಿರ್ದ ಚಾವಟಿಕ್ಕೆ ಬಂದು ನೋೞ್ಪಿನಂ

ವಿಲಸದ್ಯೋಗವಿಲಾಸನುಂ ನಿಜವಪ್ರಸನ್ನಿಭಾಗ್ಯದಿಂ ಧಾತ್ರಿಯೊಳ್ ।
ಬೆಳಗುತ್ತಿರ್ಪ ಮೃತಾಂಶುಬಿಂಬಕಳಿಗಳ್ ಚಂಚತ್ಸುಧಾಬಿಂದುಸಂ ॥
ಮಿಳಿತಂಗಳ್ ತವೆ ಕೊಂಬುಕೊಂಬಿನೆಡೆಯೊಳ್ ಸಿಲ್ಕಿರ್ದಪೊಲ್ ಪ್ರಷ್ಪದಿಂ।
ಫಲದಿಂ ರಂಜಿಸುತಿರ್ಪುದೊಂದು ಸತತಂ ಚೆಲ್ವಾಪ ಚಿಂಚಾವ್ರುಮಂ ॥

ಅಂತಿರ್ದುದೊಂದು ಪ್ರಣಿಸಿಯೆ ಮರನಂ ಪಲಂಬರೇೞ್ದು ಕಾಮುಪಾಲನಂ ನೋಡುತ್ತಿರಲಾನುವೊಂದೆಳಗೊಂಬಿನೊಳ್ ಕುಳ್ಳಿರ್ದಾಗಳ್

ಅರಸನುಮಂ ತತ್ಸುತನುಮು ।
ನರವರಿಸಬೆ ತೀರ್ಚಿದಂ ಮಗುೞ್ದಿರ್ದಂಗಂ ॥
ಗರಳವನಿಕ್ಕಿ ಕೊಲಲ್ ಬಗೆ ।
ಚ್ಚರದಿಂ ಬಗೆದಂ ಸಮಸ್ತಮಿತ್ರದ್ರೋಹಂ ॥ ೯೭

ಎಂದೊರ್ವ ಮಾತಂಗಕಂ ಮುೂಱು ಸೂಟ್ ಸಾಱು ಕಾಮುಪಾಲನ ಕಣ್ಗಳಂ ಗತಜೀವಿತನಪ್ಪ ಮಾಜ್ಕೆಯಿಂ ಪೆಡದಲೆಯೊಳ್ ತೋಡುವೆನೆಂಬ ಸಮಯದೊಳ್

ಮುಸುಕಿನೊಳಗಿರ್ದ ಪಾವಂ ।
ಸಸಿನಂ ಮುತ್ಪಿತನ ಮೇಲೆ ಬಿಸುಡಲೊಡಂ ಮುಂ ॥
ಪಸಿದಿರ್ದುದಾಂಡಿತತಿ ಸರ ।
ಭಸದಿಂ ಪಿತನುಮನೊಜ್ಜ್ವ ಮಾಜಂಗನೆ ಮುಂ ॥ ೯೮

ಅಂತು ಕಾಳೋರಗಂ ಕರ್ಚಲ್ ವರ್ತ್ತಿತನ ಪ್ರಾಣಪ್ರತಿಪ್ಕೈಯನಾರು
ಮುಖಿಯದಂತು ಮಾಡಿ ವಿಷಮಂ ಸ್ತೋಭಿಸೆ,

ವಮಾತಂಗಕಂ ಕೃತಾಂತನಿ ।
ಕೇತನನುಂ ಪೊಕ್ಕನೆಂದೊಡೀವಿಷದಿಂ ವಿ ॥
ತ್ರೀತಂ ಬರ್ಮ್ಕುವನೆ ಎನು ।
ತ್ತೋತ್ರೆಲ್ಲರ್ ಕಾವುಪಾಲನೊಡಲಂ ಬಿಸುಟರ್ ॥ ೯೯

ಜನಪತ್ತಿ ಕೊಲಿಸದೆ ಕಳಿ ಲೋ ।
ಚನಮಿರಡನೆನಲ್ಕೆ ಪಾಪಿ ಮಾಡಿದ ಪಾಪಂ ॥
ಫನಮೊದುದಱಿಂ ದೈವಂ ।
ಮುನಿದಸುವಂ ಕೊಂಡುದಱಿದನಧಿಕದೊಗ್ರಹಂ ॥ ೧೦೦

ಎಂದಲ್ಲಿರ್ದಱೆರೆಲ್ಲರುಂ ಕಾವುಪಾಲನ ಕಳೇವರಮುಂ ಬಿಸುಟ್ಟು ಪೋಗ
ಲಾಂ ಪೇಟ್ದಿ ತೆಱದಿಂ ಮುನ್ನವೆ ಪೂರ್ಣಭದ್ರಂ ಕಾಂತಿಮತಿಗೆ ಬುದ್ಧಿವೇ
ತ್ರೊಡಾಕಾಂತಿಮತಿ ಸಿಂಹಘೋಷನಿರ್ದೆಡೆ ಪೋಗಿ,

ಎನ್ನಧಿಪಂ ನಿನಗೊಡರಿಸಿ ।
ದನ್ನಯದಿಂಗಱಿದನಾತನೊಡನಾಂ ಪೋಗಲ್ ॥
ಮುನ್ನವೆ ಸಿದ್ಧಂ ಸಪಗಮು ।
ನನ್ನೆಟ್ಟನೆ ಧರ್ಮವಲ್ತಿ ನನಗೆ ನೃಪಾಲಾ ॥ ೧೦೧

ಪಾತಕನಾದೊಡಂ ಪಿಶುನನಾದೊಡಮೆಲ್ಲರೊಳುಗ್ರನಾದೊಡಂ ।
ಘಾತುಕನಾದೊಡಂ ಪತಿಯೆ ತನ್ನಧಿದೈವಮೆನಿಪ್ಪ ಕಾಂತೆ ಸಂ ॥
ಪ್ರೀತಿಯನಪ್ಪಕೆಯ್ದು ಪತಿಯಾದಪೊಲಪ್ಪದು ಧರ್ಮವಲ್ತಿ ಕೇಳ್ ।
ಭೂತಳನಾಥ ಕೂರ್ತೆನಗನುಜ್ಞೆಯನಗ್ನಿಯೊಳೀವುದಱ್ತಿಯಿಂ ॥ ೧೦೨

ಎಂದು ಬಿನ್ನಪಂಗೆಯ್ಯಲಾತಂ ಮನದೊಳ್ ಗುಡಿಗಟ್ಟಿ ಕತ್ತುನಿಶ್ಚೈಪ
ಮುಕ್ಕೆಂದಗ್ನಿಪ್ರವೇಶಕ್ಕನುಜ್ಞೆಯುಂ ಕುಡಲೊಡಂ

ಕವಶೃಂಗಾರಂಗೆಯ್ಯಲ್ ।
ಭವನಕ್ಕಾ ಕಾಮುಪಾಲಸಚಿವನ ನಿಜದೇ ॥
ಪವನುಯ್ದೊವರಿಯೊಳ್ ಸಂ ।
ತವಿಟ್ಟು ಮನ್ಮಾರ್ಗಮುಂ ನಿರೀಕ್ಷಿಸುತಿರ್ದಳ್ ॥ ೧೦೩

ಅಂತು ಪೂರ್ಣಭದ್ರನುಂ ಕಾಂತಿಮತಿಯುಮೆನ್ನ ಬರವಂ ಪಾರುತ್ತಿರ
ಲಾಂ ಪ್ರಚ್ಛನ್ನವೇಷದಿಂ ಬಂದು ಪೂರ್ಣಭದ್ರನಿಂ ಕಾಂತಿಮತಿಯ ಕುಱು
ಪನಱಿದು,

ಕಣ್ತೀವಿ ನೋಡಿ ಮುತ್ತಂ ।
ಗೋಣೊತ್ತನೆ ಬಿಗಿಯೆ ಸೆರೆಗಳಂ ವೋಪಕುಜಂ ॥
ಪಣ್ತೆಸೆಯಲಱುಗಿದೆಂ ಸಲೆ ।
ಪೂಣ್ತೆನ್ನಯ ಪುಣ್ಯಸಿದ್ಧಿಯಾಯ್ತೆಂದಾಗಳ್ ॥ ೧೦೪

ಅಂತು ಕಾಂತಿಮತಿಗೆ ನಮಸ್ಕಾರಮುಂ ಮಾಡಲೊಡಂ,

ಸ್ತನದಿಂ ಚುಮ್ಮಿಂದು ಪೊಲ್ಲಳ್ ಸುರಿಯೆ ಭುಜಯುಗಂ ಪೆರ್ಚ್ಚ ವಕ್ತ್ರಾಂ
ಬುಜಂ ಪೆಂ । ಪಿನ ಸೊಂಪಂ ಬೀಱಲಿನ್ನಂ ಪರಸಿ ನೆಗಪಿಯೊಲ್ದಪ್ಪಿ ಮುಂ
ಡಾಡಿ ಮುದಾಳ್ದು ॥ ಗ್ಯನಿಧಾನಂ ಕೆಯ್ಗೆ ಸಾರ್ದತ್ತಿಳೆಯೊಳಧಿಕರಾರಿನ್ನವೋ
ಲೆಂದು ಕಣ್ತುಂ । ಬಿ ನಿತಾಂತಂ ನೋಡುತಿರ್ದಳ್ ಜನನಿ ನಲವಿನಿಂದೆನ್ನ
ನಾಗಳ್ ನರೇಂದ್ರಾ ॥ ೧೦೫

ಅಂತು ನೋಡಿ,

ಅಱುದಿರ್ದುಂ ತಾರಾವಳಿ ।
ಪೆಱಳ್ಗಿ ವಸುಮತಿಗೆ ಕೊಟ್ಟಳಿನ್ನಯ ಮಗನಂ ॥
ನೆಱೆನೋಂಪಿಯನೆಸಗೆದವಳ್ ।
ತಱುಸಲ್ವಳೆ ಪುತ್ರಸುಖದೊಳೆಂತೆಳಸಿದೊಡಂ ॥ ೧೦೬

ತೊದಳಿಸೆವ ನುಡಿಗಳಂ ಚೆ ।
ಲ್ವೊದವಿದ ದಟ್ಟಡಿಯನನುದ್* ದೂಳಾಟದ ಸಂ ॥
ಪದವನುಱಿ ಕೇಳ್ವ ಕಾಣ್ಬ ।
ಭ್ಯುದಯಂ ದೊರೆಕೊಳ್ವ ಪುಣ್ಯಮೆನಗಾದಪುದೇ ॥ ೧೦೭

ಎಂದು ಮಗುಟಿ್ದ ಮಗುಟ್ದಿಪ್ಪವಂಬಿಕೆಗಾನಂದಮನೆಸಗಿಯನಂತರಂ
ಸರ್ದಷ್ಟನಾಗಿ ಶವರೂಪದಿಂದಿರ್ದ ಕಾಮಪಾಲನೆಡೆಗೆ ಬಂದು

ಗಾರುಡಪಂಚಾಕ್ಷರಿಯಿಂ ।
ನೀರಱ ಮಂತ್ರಿಸುತನುಮೃತಪಂಚಾಕ್ಷರಿಯಿಂ ॥

ದಾರಣೆಯಂ ಜಪಿಸುತ್ತಿಂ ।
ಮೂರಾರಿಯ ನೀಲಕಂಠನಂ ಧ್ಯಾನಿಸಿದೆಂ ॥ ೧೦೪

ಸರಸಿಜನೇತ್ರನಿಂದ್ರನಜನಪ್ರಮುಖಾದಿಸುರಾದಿಯಾದ ದೇ ।
ವರ ಗಣಕ್ಕೆ ಭೀತಿಯನೊಡಲ್ಗುವ ದುರ್ದಮಕಾಳಕೂಟಮಂ ॥
ಕರಕಮಳಂಗಳಿಂ ಪ್ರೊಸೆದು ಸಾದಿನ ಮಾಲ್ಕೆಯೊಳೊಲ್ದು ಕಂಠದೊಳ್
ಧರಿಸಿದ ನೀಲಕಂಠನ ನಿಜಾಕೃತಿಯಂ ನೆನೆದೆಂ ನೃಪೋತ್ತಮಾ ॥ ೧೦೫

ಕಪಿಲಾಕ್ಷಂ ನೀಳ್ದ ತೋಳ್ಗಳ್ ಮಿಸುಪ ನಿಶಿತದಂಷ್ಟ್ರಾಂಕುರಂ ವಕ್ರ
ನಾಸಂ । ತಪನೀಯಪ್ರಾಸುಕಾಯಂ ಫಣಿಕುಲವಿವಿಧಾಲಂಕೃತಂ ತಳ್ಕೈ
ಗೊಂಡಿ ॥ ದರ್ ಪತತ್ರಂ ತನೆಂಬಿಳಿಪ್ಪರ್ಪಿಂಗಣರಿಪ್ರವಂ ಶೀಘ್ರದಿಂ ತದ್ವಿ
ಹಂಗಾ । ಧಿಪನಂ ಮುಚ್ಚಿತ್ತದೊಳ್ ಭಾವಿಸಿದೆನನುಪಪಂಚಾಕ್ಷರೀಜಾಪ್ಯ
ದಿಂದಂ ॥ ೧೦೬

ಅಂತು ನೀಲಕಂಠಗರುಡರ ಧ್ಯಾನಮುಂ ಮಾಡಿ ಯಮೃತಪಂಚಾಕ್ಷರಿಯಿಂ
ದುದಕಮನುಂ ಮಂತ್ರಿಸಿ ಮುಖದೊಳ್ ತಳಿದು

ಡಾವೆಂಕ್ಕೆಯ ಹಣ್ಣೊಳ್ಳತಿ ।
ಶ್ಲೇಷ್ಮವದೊಳಿರಿಸಿಟ್ಟ ಸುಂಟಿ ಹಿಪ್ಪಲಿ ಮೆಣಸಿಂ ॥
ಬೀಮೂಜನಾತ್ಮಜಲದಿಂ ।
ಪ್ರೇಮದಿನಾತಂಗೆ ನಲಿದು ನಸ್ಯಂಗೆಯ್ದಿಂ ॥ ೧೦೭

ಅಂತು ನಸ್ಯಂಗೆಯ್ಯಲೊಡಂ,

ತನುವಿನ ಕಾಳಿಮಂ ಪಱಿದು ಸುರ್ಕಿದ ಗೋಣ ಸರಿಸೈತನಾಗಿ ತ ।
ಣ್ಪಿನ ಬೆಮರುಣ್ಮಿ ರೋಮನಿಕರಂ ತಲೆಯೊತ್ತಿ ಬೆರಲ್ ನಿಮಿರ್ದು ಲೋ॥
ಚನವುರೆನೀರಡರ್ದುಸಿರ್ಗಳೊಯ್ಯನೆ ತುಂಬಿ ವಿಷಂ ಕಱಿಲ್ದು ಭೋಂ।
ಕೆನೆ ಪತನೊಲ್ದ ಕಣ್ದೆಱೆದು ನೋಡಿದನೆನ್ನ ಮುಖೇಂದುಬಿಂಬಮಂ ॥

ಅದೆಂತೆನೆ:—

ಮುನ್ನಱಿವಂದದಿಂ ಮುಕುರದೊಳ್ ಪ್ರತಿಬಿಂಬಮನೀಕ್ಷಿಪಂದದಿಂ ।
ತನ್ನ ಶರೀರಮೀಗಳಿರಡಾದ್ರದೆಂಬಭಿಶಂಕೆಯಿಂ ಮಗು ॥
ಟ್ಟಿನ್ನಯ ಜನ್ಮಕಾರಣನಿವಂ ಪೆಱನಲ್ತೆನಿಪಂದದಿಂ ಪೊದ ।
ಟ್ಟಿನ್ನ ಮುಖಾಬ್ಜಮಂ ಪದೆಪಿನಿಂದೆವೆಯಿಕ್ಕದೆ ನೋಡಿದಂ ನೃಪಾ ॥೧೦೮

ಅಂತು ನೋಡಿ ಮೆಯ್ಮುಱಿದೆಬ್ದಿ ಕುಳ್ಳಿರಲೊಡಂ,
ಲಲನೆ ವಸುಮತಿಗೆ ತಾರಾ ।
ವಳಿ ಕೊಟ್ಟರಿಸಿಟ್ಟ ನಿನ್ಮ್ಮ ನಂದನನಾಂ ಕೇ ॥
ಳಲೆ ಪಿತ ಎಂದಾತನ ಪದ ।
ನಳನಕ್ಕಭಿವಾದನೋಕ್ತಿಯಿಂ ಪೊಡೆಮಟ್ಟಿಂ ॥ ೧೧೪

ಅಂತು ಪೊಡೆಮಡಲ್
ಗಾರುಡಮಂತ್ರೌಷಧಿಗಳ ।
ಕಾರಣದಿಂ ಬಂದುದಲ್ತು ಮಜ್ಜೀವಂ ವಿ ॥
ಸ್ತಾರಮೆನಲಾತ್ಮಜಾತಾ ।
ಕಾರಮನಿಕ್ಷಿಸುವುದಕ್ಕೆ ಬಂದುದು ದಿಟದಿಂ ॥ ೧೧೫

ಇಂದೆನ್ನ ಜನ್ಮಫಲಮಾ ।
ಯ್ತಿಂದು ಪುನರ್ಜನ್ಮಮಾಯ್ತು ಮಾನ್ಪೇತ್ರಕಾಳ್ಕ ॥
ನಂದಂ ದೊರಕಿತ್ತೆಂದೊಲ ।
ವಿಂದಂ ಮುಯ್ಯಾಂತು ಪೆರ್ಚಿದಂ ಮಜ್ಜನಕಂ ॥ ೧೧೬

ಅಂತು ಸಂತೋಷಮಂ ತಳೆದಿರ್ದ ತಂದೆಗಾನಿಂತೆಂದೆಂ:—

ಮೇಲಪ್ಪ ಕಾರ್ಯಮುಂ ಪಡೆ ।
ದಾಲೋಚಿಸಿ ನಿಮ್ಮನಿನಿತು ಬಾಧಿಸಿದರಿಯಂ ॥
ಕಾಲನ ಮನೆಗಟ್ಟಿ ಧರಾ ।
ಪಾಲನೆಯಂ ಮಾಡಿ ಪಾಯಮೆಂತುಮೊ ಜನಕಾ ॥ ೧೧೭

ಎಂದೊಡಾಕಾಮುಪಾಲನಿಂತೆಂದಂ:—

ನೃಪನೊಳ್ ಪ್ರತಿಪಕ್ಷಿಗಳಾ ।
ದ ಪರರನೊಳವೈಯ್ದುಕೊಂಡು ನಮ್ಮರಮನೆಯೊಳ್ ॥
ಸಪರಿಗ್ರಹನಾಗಿರ್ದಂ ।
ಗಪಕಾರಮೆನಿಸಗುಮಂ ದಿನಕ್ರಮದಿಂದಂ ॥ ೧೧೮

ಎಂದು ಸಕಲಪರಿವಾರಮನಂತಭೇರ್ದಂಗೆಯ್ವುಪಾಯದಿಂ ಕಾಂತಿಮತಿ ಕಾಮುಪಾಲನೊಳ್ ತನ್ಮಂದಿರದೊಳ್ ಸಪಗಮನಂಗೆಯ್ದಳೆಂಬ ಸುದ್ದಿಯಂ ಪ್ರಸಿದ್ಧಂಮಾಡಿರಲಾನಿತ್ತಲ್,

ಅವನಿಪತಿ ಸಿಂಹಘೋಷಂ ।
ಪವಡಿಸುವಾಲಯ ಮನಱಿದು ರಾತ್ರಿಯೊಳಾಂ ಕ ॥
ನ್ನವನಿಕ್ಕೆ ಪೋಗುತಿರ್ದ ।
ಲ್ಲಿ ವಿಳಾಸದೆ ಕಂಡೆನೊಂದು ನೆಲವಾಳಗೆಯುಂ ॥ ೧೦೯
ಅದಱೊಳ್
ಕಮಲಸನಾಪ್ತಕಾಲಧನವೆಂದಿರಿಸಿಟ್ಟ ಲಸದ್ವಧೂನಿಧಾ ।
ನವೊ ರವಿತಾಪದಿಂ ಸಿಡಿದು ಬಂದಡಗಿರ್ದ ರುಚಂದ್ರಿಕಾಪ್ರತಾ ॥
ನವೊ ಭುಜಗೇಂದ್ರಕನ್ಯೆಯರನೀಕ್ಷಿಸಿ ಪೋಪಮರಾಂಗನಾಸನೂ ।
ಪವೊ ಎನಿಪ್ಪೊಂದು ಶಂಕೆ ನೆಲಸಲ್ ಮೆಱೆದತ್ತ ಬಲಾಕದಂಭಕಂ॥ ೧೧೦
ಅಂತು ನೆಲವಾಳಗೆಯೊಳಿರ್ದ ಕನ್ನೆಯರಿನ್ನಂ ಕಂಡು
ಮಱಿವ್ರಲ್ಲಿಗಳಾದೆ ಸಗುನ ।
ಬಿಱುಗಾಳಿಗೆ ಬೆಱಱುವಂತೆ ಕಾಂತೆಯರೆನ್ನಂ ॥
ನೆಱೆ ಕಂಡು ಲಜ್ಜೆಯಿಂ ಮೆ ।
ಯ್ಮಱೆದು ಕರಂ ಭೀತಿಯಿಂದೆ ತಳವೆಳಗಾದರ್ ॥ ೧೧೧
ಅಂತು ಬೆಚರ್ುವ ಕನ್ನೆಯರ್ಗಾನಂಜದಿರಿಮೆಂಬ ವಾಕ್ಯಸನ್ನಾಹಮುಂ
ತೋಱಿಸಲಲ್ಲಿ,
ತೊಳಪಕ್ಷಿದ್ಯುತಿಯುಂ ರದಚ್ಛವಿಗಳಂ ಕರ್ಣೋತ್ಪಲಜ್ಯೋತ್ಸ್ನೆಯುಂ ।
ವಿಳಸನ್ಮೌಕ್ತಿಕಹಾರದೀಧಿತಿಗಳಂ ಚಂಚನ್ನಖಜ್ಯೋತಿಯುಂ ॥
ತಲೆಯೊಳ್ ಪೆತ್ತೆ ಸೆವಂತೆ ನುಣ್ಗುಱುಗಳಂ ತಾಳ್ದಂಗಕೈಥಿಲ್ಯದಿಂ ।
ಲಲನಾಸಂಕುಳಮಧ್ಯದೊಳ್ ಮೆಱೆವೊರ್ವಳ್ ವೈದ್ಯೆಯಿರ್ದಳ್ ನೃಪಾ॥
ಅಂತಿರ್ದ ವೈದ್ಯೆ ಅಲ್ಲಿರ್ದ ರಾಜಕುಮಾರಿಯನೊರ್ವಳಂ ತೋಱಿ
ಈಲಲನೆಗಿನಿಬರಂ ಪತೆ ।
ದೋಲಗಿಸಲ್ಕಿರಿಸಿಯುನ್ನಪಾನಾದಿಗಳಂ ॥
ಕಾಲಾವಧಿಗಿತ್ತೀಪಾ ।
ತಾಳಗೃಹಾಂತರದೊಳೆಮ್ಮನಿರಿಸಿದನರಸಂ ॥ ೧೧೨
ಕಾಂತಿಮತಿಗಾದ ಕಾರ್ಯ ।
ಚಿಂತೆಯೊಳೀನೃಪಕುಮಾರಿಯುಂ ಧರಣೀಶಂ ॥

ಪೋತಾಳಗೃಹದೊಳರಿಸಿನ ।
ನೀತಿಜ್ಞದಿಂದಂ ದಶಾಬ್ದಮೂಡತ್ತೀಗಳ್ ॥ ೧೦೪

ಎಂದೊಡಾಂ ಕಾಂತಿಮತಿಯ ಕುಮಾರನೆಂದು ಸೂಚಿಸಲವಳ್ ಮತ್ತಮಿಂತೆಂದಳ್:—

ಪೂರ್ವದೊಳೊಲ್ದು ಕಾಂತಿಮತಿಗೊಪ್ಪುವ ಲಕ್ಷಣೆ ನನ್ನಿಯಿತ್ತಳಾ ।
ನೊರ್ವ ಕುಮಾರಿಯಂ ಪಡೆದು ನೀಂ ಮಗನಂ ಪಡೆದಪ್ಪೆಯಾದೊಡೇ ॥
ನುರ್ವರೆ ಮೆಚ್ಚಲೀವೆನವಳಂ ನಿನಗಾದ ಕುಮಾರಕಂಗೆ ಮಾ ।
ತ್ಪೂರ್ವರೊಳೊರ್ವರಿಂತುಸಿದುರ್ದಂ ಪದೆದಾನಱಿವೆಂ ಕುಮಾರಕಾ ॥

ಎಂದು ವೃದ್ಧೆ ಪೇೞ್ದುದಂ ಕೇಳ್ದಾಂ ಸಿಂಹಘೋಷನಿರ್ದೆಡೆಗೆ ಪೋಗಿ ಬಂದು ನಿನ್ನಭಿಮತನುಂ ಮಾಳ್ಪೆನೆಂಬುದುಮಾವೃದ್ಧೆಯಿಂತೆಂದಳ್:—

ಇತ್ತಲಿದೆ ಮೂಲೆಗಂಭವ ।
ನೆತ್ತಲ್ ತಳದಲ್ಲಿ ಬಾಗಿಲಿರ್ದಪುದದಱೊಳ್ ॥
ಬಿತ್ತರದಿಂ ನಡೆಯುಲ್ ಭೂ ।
ಪೋತ್ತಮನಿರ್ದೆಡೆಯನೆಯ್ದಲಕ್ಕುಮವೋಪೆಂ ॥ ೧೦೬

ಎಂದಾವೃದ್ಧೆ ಪೇೞ್ದೊಡಾಕ್ರಮದಿಂ ನೆಲವಾಳಗೆಯ ಮೂಲೆಗಂಭವನೆತ್ತಿ ದಾರಿಯಂ ಕಂಡು ತನ್ಮಾರ್ಗದೊಳ್ ಸಿಂಹಘೋಷನ ಸಜ್ಜೆಯ ಮನೆಯಂ ಪೊಕ್ಕು

ಬಿಲದೊಳಗಿರ್ದಹಿಯಂ ಖಗ ।
ಕುಲಪತಿ ಪಿಡಿದೆತ್ತುವ ಮಾಲ್ಕೆಯಿಂದಂ ನಾಂ ಮೆ ॥
ಯ್ದಲಿ ಸಿಂಹಘೋಷನಂ ಮುಂ ।
ದಲೆಯಂ ಪಿಡಿದೆತ್ತಿದೆನಿರ್ದ ಸಜ್ಜೆಯ ಮನೆಯಿಂ ॥ ೧೦೭

ಅಂತವನಂ ಕೋಡಗಗ ।
ಟ್ಟಂ ತಡೆಯದೆ ಕಟ್ಟಿ ಬಂದ ಬಟ್ಟೆಯೊಳೀಟ್ಟಂ ॥
ದೆಂ ತರುಣಿಯುರಿರ್ದೆಡೆಗೆ ನಿ ।
ತಾಂತಂ ಸಂಕಲ್ಪಸಿದ್ಧನಾಗಿ ನೃಪೇಂದ್ರಾ ॥ ೧೦೮

ಬಲಿಕಲ್ಲಿರ್ದ ಮಣಿಪುತ್ರಿಕೆ ಮೊದಲಾದ ಸ್ತ್ರೀಯರಂ ಸಿಂಹಘೋಷನಂ ಮನ್ಮಾತೃಪಿತೃಸಮೀಪಕ್ಕೆ ತಂದು.

ನಿನಗೆ ವಿರೋಧಮುಂ ಬಗೆದ ದೋಷ್ಟಿಸುನಗ್ಗಳಸಿಂಹಘೋಷಭೂ ।
ರಮಣನನೊಂದು ಚೆಲ್ವ ನೆಲನಾಳಿಗೆಯೊಳ್ ನೆಲಸಿರ್ದ ಕಾವಿನೀ ॥
ಸಮುದಯಮುಂ ನಿಜಾಂಘ್ರಿಯುಗಮಂ ಮಿಗೆ ಕಾಣಿಸಿ ಕೊಳ್ವುದೆಂದು ತ।
ತ್ಕ್ರಮದೊಳೆ ಸಾರ್ಚಿದೆಂ ಪಿತೃಗಳರ್ಬ್ಬರ ಮೆಲ್ಲಡಿಗಳ್ಗೆ ಭೂಪನಂ ॥

ಅಂತು ಸಿಂಹಘೋಷನಂ ತರಲೊಡಂ ಕಾಂತಿಮತಿ ಕಂಡು ಕ್ಲೇಶಿತೆಯಾಗಿ ಬಿಡಲ್ವೇಱೊಡಂ ಬಿಡದೆ ಅದೆ ವಿಹೂರ್ತಮಾಗಿ ಮಣಿಪುತ್ರಿಕೆಯೊಳ್ ಪುದುವಿನೆಱೆದನಂತರಂ ದುಷ್ಟನಿಗ್ರಹಂಗೆಯ್ದು ಕಾಮಪಾಲನಂ ರಾಜ್ಯಸ್ಥನಂ ಮಾಡಿ ದೇವರಂ ವಿಚಾರಿಸಲ್ ಪ್ರೊಲಿಮಡುವಾಗಳ್

ತನಗೆ ಬಲವಾಗಿ ಬರ್ಕಂ ।
ದನ ನಯದಿಂ ಸಿಂಹವರ್ಮನೊಲವಿಂ ಪೇೞ್ದಿ ॥
ಟ್ಟಿ ನಿರಾಕುಳದಿಂದಿಲ್ಲಿಗೆ ।
ಮನವೊಸೆದೇೞ್ತಿಂದು ದೇವ ನಿಮ್ಮಂ ಕಂಡೆಂ ॥ ೧೩೦

ಎಂದರ್ಥಪಾಲಂ ತನ್ನ ವೃತ್ತಾಂತಮುಂ ರಾಜವಾಹನಂಗೆ ಪೇೞ್ದು ಕೆಯ್ಗಳಂ ಮುಗಿದಿರೆ,

ಸುಲಲಿತನೀತಿಯುಂ ಲಸದುಪಾಯವನೊಪ್ಪುವ ಮಂತ್ರತಂತ್ರಸಂ ।
ಕುಳದಿವರಾತಿಯುಂ ಜಯಿಸ ವಾಯತವುಂ ಪದೆದರ್ಥಪಾಲನಂ ॥
ತಿಳಿಯೊಳದಾವವಂ ತಿಳಿಯಲಾರ್ದವನೆಂದನುರಾಗದಿಂ ಕಳಾ ।
ನಿಳಯನನಾರತಂ ಪೊಗೞ್ದಿ* ಮೆಚ್ಚಿದನಾಗಳಭಂಗವಿಕ್ರಮಂ ॥ ೧೩೧

॥ ಗದ್ಯ ॥

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚೌಂಡರಾಜ ವಿರಚಿತವಪ್ಪ

ಅಭಿನವ ದಶಕುಮಾರಚರಿತೆಯೊಳ್

ಅರ್ಥಪಾಲಕಥಾವೃತ್ತಾಂತಂ
ನವಮಾಶ್ವಾಸಂ

———

—ಉಪಹಾರವರ್ಮನ ಕಥೆ—

ಶ್ರೀನಾರೀನಿಳಯುಂ ವಿ ।
ದ್ಯಾನಿಧಿಯುಪಹಾರವರ್ಮನಂ ಕೇಳ್ದಂ ನೀ ॥
ನೇನಂ ಮಾಡಿದೆಯೆಂದ ।
ತ್ಯಾನಂದದಿನೊಲ್ದಭಂಗವಿಟ್ಟಿಲಭೃತ್ಯಂ ॥ ೧

ಎಂದೊಡುಪಹಾರನವರ್ಮಂ ರಾಜವಾಹನಂಗೆ ಕೆಯ್ಗಳಂ ಮುಗಿದಿಂ ತೆಂದಂ:—

ಎಲ್ಲರ ಚಿಂದದಿಂದಱಿಸಲಾಂ ನಿಜಪಾದಪಯೋಜಯುಗ್ಮಮಂ ।
ಪಲ್ಲವ ಪಾರಿಜಾತ್ರ ಮಗಧಾಂದ್ರ ತುರುಷ್ಕ ಕಳಿಂಗದೇಶಮೆಂ ॥
ಬೆಲ್ಲಿಡೆಯಂ ತೊಟಿಲ್ದು ಮಿಥಿಳಾವಿಷಯಾಂತರದೊಳ್ ಬರುತ್ತಿರ ।
ಲ್ಲಲ್ಲಿ ಜಗತ್ಪ್ರಸಿದ್ಧವಡೆದಿರ್ದುದು ಕೇಳ್ ಮಿಥಿಳಾಪುರಂ ನೃಪಾ ॥ ೨

ಅದು ಸತ್ಪಾತ್ರಹಸ್ತದಂತೆ ಪತಾಕಾಭಿರಾಮಮನುಂ, ವಿಶಿಷ್ಟಾಗ್ರಹಾರದಂತೆ ವಿಪ್ರಾಕಾರರಂಜಿತಮುಂ, ಪುಧ ರಾಪುರಿಯುಂತೆ ವಸುದೇವಾಗಾರರವ್ಯಮುಂ, ವ್ಯೋಮವನುಂಡಲದಂತೆ ದ್ವಿಜರಾಜಸನ್ನಿರ್ಗಮುಂ, ಸ್ವರ್ಗಲೋಕದಂತೆ ಸುಧಾಮಯವುಂಬಿರಮುಂ, ಗ್ರಹಸಮೂಹದಂತೆ ಮಿತ್ರರಾಜಗೋತ್ರಜಬುಧಗುರುಕವಿಸೌರಿಸಮೃದ್ಧಿಯುಂ, ಸಾಮಭೂಮಿಯಂತೆ ಭದ್ರಗಜರಂಜಿತಮುಮೆನಿಸಿರ್ದುದು. ಅಂತುಮಲ್ಲದೆಯುಂ,

ವಸುಧಾದೇವಿಯ ನೀಳ್ದ ತೋಳ್ಗಳೆನಿಸಲ್ ಸೋವೂರ್ಕ್ಯಸದ್ವೀಧಿ ರಂ ।
ಜಿಸೆ ನಾನಾನವರತ್ನ ಹೇಮಕಲಶಂ ಸ್ವರ್ಣಾದ್ರಿಯಂ ಸೈತು ಸೋ ॥
ಲಿಸುವಂತೊಪ್ಪೆ ನಿಮಿರ್ಕೆಯುಪ್ಪರಿಗೆಗಳ್ ತಾರಾದ್ರಿಯಂ ಪೋಲ್ತು ಪೆಂ ।
ಪೆಸೆಯಲ್ ನಿತ್ಯವಿಳಾಸದಿಂ ಮಿಥಿಳೆಯೀಂ ಚೆಲ್ವಾಯ್ತೊ ಸಂಪತ್ತಿಯಿಂ ॥ ೩

ಅಂತೆಸೆವ ಮಿಥಿಳಾಪುರಮಂ ಪ್ರಗುವಾಗಳದಱ ಬಹಿರ್ವಾರದ ಪಾಲ್ಕಿತದಲ್ಲಿ

ಸೆರೆಗಳ್ ತಳ್ತಂಗವುಲ್ಲಲ್ಲಿಗೆ ಸುರುಳ್ದಿರೆ ಲಂಬಸ್ತನಂ ಮೆಲ್ವಿನಿಂ ಜೋ ।
ಲ್ದಿರೆ ಗಲ್ಲಂ ಪತ್ತಿ ಕಣ್ಗಳ್ ಕುಳಿತೆರ್ದೆಯುಗಲಂಬೆತ್ತು ತೋಳೊಳ್ ತೊವಲ್

ನೀ ॥ ಳ್ದರೆ ಪಶ್ಚಾತ್ತಾಪಮಂ ತದ್ವದನನುಱಿಪರಿದಳ್ ಕರಂ ವೃದ್ಧೆ ದುಃ
ಖಾ । ತುರೆ ಚಿಂತಾಭ್ರಾಂತಿಯಿಂದಾಪಚೆಯು ಮತಪ ಗೊಂಟಿಂಗೆ ಗೆಂಟಾಗಿ
ಯೊರ್ವಳ್ ॥ ೪

ಅಂತಿರ್ದ ತಾಪಸರೂಪೆಯಪ್ಪ ವೃದ್ಧೆಯಂ ಕಂಡು ನಾಂ ಱಿಮುಹದೊಳ್
ನಿಮಿಷಂ ಕುಳಿಳ್ಳರ್ದುದುಮಾವೃದ್ಧೆ ಎನ್ನಂ ನೋಡಿ,

ಪಾಡಱಿದಾಂ ತನ್ನೊಳ್ ಮಾ ।
ತಾಡದ ಮುನ್ನಾಕೆಯೆನ್ನ ಮುಖಮಂಡಲಮಂ ॥
ನೋಡುತ್ತುಂ ಕಣ್ಣಿನಿಯೊಳ್ ।
ಪೂಡಿ ಮುಱಿಂಗಿರ್ದಳಿನಗೆ ವಿಸ್ಮಯಮಾಗಲ್ ॥ ೫

ಅಂತು ವಿಸ್ಮಯಮೆನ್ನೊಳ್ ಪತ್ತಿ ಇದೇನೀದುಃಖಕ್ಕೆ ಕಾರಣಮೀ
ನೆಂದಾನಾಕೆಯುಂ ಬೆಸಗೊಳ್ವುದುಮವಳಿಂತೆಂದಳ್.—

ಪೃಥುಳಬಳವಾದಿಕೂರ್ಮಂ ।
ಪೃಥಿವೀಕಂಟಕನೃಪಾಲಕುಲಹಿನುಷೆರ್ಮಂ ॥
ಪ್ರಥಿತಪ್ರಹಾರವರ್ಮಂ ।
ಮಿಥಿಳಾಪುರದರಸನೆಂಬ ಮಹಿನೂವರ್ಮಂ ॥ ೬

ಅಂತಾತಂಗಾಪ್ತಮಿತ್ರಂ ನೃಪಕುಲತಿಲಕಂ ರಾಜಹಂಸೋರ್ವಿಪಂ ತ ।
ತ್ಕಾಂತಾಸೀಮಂತಸಂಪ್ರೀತಿಗೆ ಕರೆಸೆ ಮದೀಯೋರ್ವಿಪಂ ಕೇಳ್ದ ಚೇತ ॥
ಸ್ಸಂತೋಷಂ ಮಿಕ್ಕು ತನ್ನಂಗನೆ ನಿಜಸುತರಿರ್ವರ್ ಬಲಂ ಕೂಡೆ ಪೋದಂ ।
ಮುಂತಪ್ಪಾಪಾನಿವೃದ್ಧಿಸ್ಥಿತಿಯನಱಿವರಾರ್ ಪೂರ್ವಸಂಸ್ಕಾರಕಲ್ಪಂ ॥ ೭

ಅಂತೀಮಿಥಿಳಾಪತಿಯಪ್ಪ ಪ್ರಹಾರವರ್ಮಂ ತನ್ನಾಪ್ತಮಿತ್ರ ಮಾಗೆಧೇ
ಶ್ವರನಪ್ಪ ರಾಜಹಂಸನರಸಿ ವಸುಮತೀದೇವಿಯು ಸೀಮಂತಕ್ಕೆ ಪ್ರಿಯಂವ
ದೆಯುಂ ತನ್ನಿರ್ವರ್ ಕುಮಾರರ್ ಸಹಿತಂ ಪುಷ್ಪಪುರಕ್ಕೆ ಪೋಗಲಲ್ಲಿ

ಮಾಳವನೃಪನೆಂಬ ಮಹೀ ।
ಪಾಳಂ ಮುಳಿದೆತ್ತಿ ಬಂದು ಮಾಗಧನೃಪನಂ ॥
ಸೋಲಿಸಲಂದು ಮದೀಯನೃ ।
ಪಾಳಂ ಮಾಳವನ ಕೆಯ್ಗೆ ಸಿಲ್ಕಿದನಾಗಳ್ ॥ ೮

ಅಂತು ಪ್ರಹಾರವರ್ಮಂ ನಿಶ್ಶಿಲೊಡೆ ಮಾಳವೇಶ್ವರನುಪಕಾರಕ್ಕೆ ಬಿಟ್ಟು ಕಳಿಪಲ್ ಬಾಶಿಕ್ಯಾತಂ ತನ್ನ ಕುಟುಂಬಂಬೆರಸು ನಿಜಜನಪದಕ್ಕೆ ಬರ್ಪಾಗಳ್

ದಾಯಾದ್ಯ ವಿಕಟನವರ್ಮಂ ।

ದಾಯಂ ತನಗೆಂದು ಮಿಥಿಳೆಯೊಳ್ ಪಟ್ಟವನ ॥
ತ್ಯಾಯತದಿಂ ತಳೆದಿರ್ದಪ ।
ನೀಯಡೆಗಿನ್ನವ ಬುದ್ಧಿ ಪೇಚ್ ಮಿಥಿಳೇಶಾ ॥ ೯

ಅದಲ್ಲದೆಯುಂ, ನಿನ್ನ ಬರವಂ ಕೇಳ್ದುಳ್ಳ ಸೈನ್ಯಮುಂ ಕೂಡಿಕೊಂಡು ನಿನ್ನಂ ಕೊಲಲ್ ಬರುತಿರ್ದಪನೆಂದೊರ್ವ ದೂತನಿದಿರಾಗಿ ಬಂದು ಪೇಟ್ವುದುಂ ಪ್ರಹಾರವರ್ಮಂ ಬಿಟ್ಟರಣ್ಯಮಾರ್ಗದೊಳ್ ಪೋಪಾಗಳ್

ಶಬರಾಧಿಪರೆಲ್ಲರ್ ನೆರೆ ।
ದು ಬಂದು ಮುತ್ಪತಿಯ ಬಲವನಾರ್ಪಂ ಕವರ ॥
ಲ್ಕಬಲೆಯರತಿಭಯದಿಂ ಪಲ ।
ವು ಬಟ್ಟೆಯಂ ಪತ್ತಿ ಪೋದರಿನ್ನೇವೇೞ್ವೆಂ ॥ ೧೦

ಎಂದು ಮತ್ತಮಿಂತೆಂದರ್:—

ಅಂತು ಕಿರಾತಸಂತತಿ ಮದೀಯನೃಪಾಲಕನಾಪ್ತಸೈನ್ಯನುಂ ।
ತಿಂತಿಣಿಯಪ್ಪರಣ್ಯಪಥದೊಳ್ ಕವರಲ್ ಬಲ್ಲಿಕೆನ್ನ ಚಿತ್ತವಿ ॥
ಭ್ರಾಂತಿಯಿನಂಜಿಯಾಂ ನೃಪಕನೀಯಸಪ್ರತ್ರನನೆತ್ತಿಕೊಂಡು ಪೋ ।
ದೆಂ ತರುಷಂಡಗುಲ್ಮಲತೆ ತೀವಿದಿಡುಂಕುಱೊಳಿೋಡಿಯಾಕ್ಷಣಂ ॥ ೧೧

ಅಂತೋಡಿಯಾತವಾಲಗಲ್ಲದೆಡೆಯೊಳ್ ಭೀತಿಯಿಂ ಕುಳ್ಳಿರಿರ್ಪಾಗಳ್

ಅತಿರೌದ್ರಂ ಕ್ರೂರದಂಷ್ಟ್ರಂ ಜ್ವಲಿತವಿಲಸದಂಗಾರನೇತ್ರಂ ಸಮುನ್ನ । ತ್ತಿತವಜ್ರಶ್ಮಶ್ರು ತೀಕ್ಷ್ಣಸ್ಫುಟನಖಮುಖಮುತ್ಕುಂಚಿತಾಂಗಂ ನಟಿತೊಪ್ಪೇ ॥ ನ್ನತಕರ್ಣಂ ಘೋರವಕ್ತ್ರಂ ಘನಶಿನರನದಿಂದಾರ್ದುಪಾಯ್ದುತ್ತು ಸಿಂಹ । ಪ್ರತಿನುಂ ಕಾಂತಾರದೊಳ್ ಪೆಬ್ಬುಲಿ ಮುಳಿದದಟಿಂದೆನ್ನನಾಗಳ್ ಕುಮಾರಾ ॥ ೧೨

ಅಂತು ಪುಲಿ ಪುಯ್ಯಲಾಂ ಬೆನ್ನಬಿ ಕೆಯ್ಯ ಮಗನಂ ಬಿಸುಡಲಾಮಗಂ

ಪಿರಿಯ ಕಪಿಲಾಕವಂ ಮುಂ ।
ದಿರಲದಱೊಡಲೊಳಗೆ ಭೀತಿಯಿಂ ಸೂಕ್ಕಂ ಭೂ ॥
ವರಸುತನಲ್ಲಿಗೆ ಪೆರ್ಬುಲಿ ।
ಭರದಿಂ ಪಾಯ್ದತ್ತು ಕೋಪದಿಂ ಗರ್ಜಿಸುತುಂ ॥ ೧೩

ಅಂತು ಪುಲಿ ಪಾಯಲೊಡಂ,

ಕಾರಡವಿಯೊಳಟ್ಟಿದಾವಿನ ।
ಹೇರೊಡಲೊಳ್ ನುನ್ನಮುಖದು ಕಬರರ್ ಯಂತ್ರಾ ॥
ಕಾರದೆ ನಿಟ್ಟಂಬಂ ವಿ।
ಸ್ತಾರದಿನೊಲ್ದಿಟ್ಟರಾಗೆ ತಿಳಯದ ತೆಱದಿಂ ॥ ೧೪

ಅಳವಡಲೇಱುಸಿಟ್ಟ ಸರಳಾಂತ್ರದ ಬಲ್ವಿನ ಬಿಲ್ ಸಿಡಿಲ್ದು ಪೆ ।
ಬ್ಬುಲಿಯು ಪ್ರೊದಬ್ದಿ ಗೋಣೀಱಿಯುಲಿರ್ಬಗೆಯಪ್ಪಿನವುರ್ಚಿ ಪಾಯ್ತ್ತರಲ್॥
ಪಟಿವೆಣ್ಣಾದವೋಲ್ ವ ಡಿಯಿತಾಪ್ರುಲಿಯಾನದನೆಯ್ದೆ ಕಂಡು ಪೆ ।
ಪ್ಪಳಸಿ ತೆರಳ್ದಿನೊಂದು ಕತೆಗಾಗಳತೀವಭಯಾತಿರೇಕದಿಂ ॥ ೧೫

ಅಂತಾನಲ್ಲಿಂ ತೆರಳ್ದು ಪ್ರೋಪಾಗಳೊರ್ವ ತಾಪಸಸುಕುಮಾರನಂ ಕಂಡು ತಚ್ಚಿತ್ರವುಂ ಪೇೞ್ದೊಂದೂರಂ ಸಾರ್ವೆನೆಂದು ಪ್ರೋಗುತಿರ್ಪಾಗಳ್

ಪಿರಿಯ ಕುಮಾರನನಾಯ್ದಂ ।
ಬುರುಹಾನನೆ ಮತ್ತನೂಜೆ ಪುಷ್ಕರಿಕೆ ಸುಖೇ ॥
ತರೆಯಾಗಿ ಬರ್ಪುದಂ ಕಂ ।
ಡುರಿದತ್ತೆನ್ನೊಡಲೊಳಗೆಂದು ದುಃಖಜ್ವಲನಂ ॥ ೧೬

ಅಂತೊರ್ವ ಪಟುಭಟಸಹಿತಂ ಬರುತಿರ್ಪ ಪುಷ್ಕರಿಕೆಯನಾಂ ಕಾಣಲೊಡಂ

ಘಾತಕಿಯುಂ ನಿಕೃಷ್ಟೈಯನನಾಪ್ತೆಯನಾತ್ಮವಿರೋಹಿಯುಂ ಮಹಾ ।
ಘಾತುಕಿಯುಂ ಸ್ವಬಂಧುಜನದೂರಿತೆಯುಂ ಖಳೆಯುಂ ದುರಂತದುಃ ॥
ಖಾತುರೆಯುಂ ಕುಮಾರಕನನೀಗಳೆ ನೀಗಿದ ಪಾಪಕರ್ಮಿಯುಂ ।
ಮಾತೆಯಿದೇಕೆ ಕಂಡೆಯೆನುತುರ್ವರೆಯೊಳ್ ಪೊರಬ್ದೆಲ್ತಿಳಾಕ್ಷಣಂ ॥ ೧೭

ಅಂತನಳ್ ದುಃಖಿಸಲದನೆಂತಾನುಂ ಸಂತೈಸಿ ಬಲಿಕೆಲೆ ನೀನೆತ್ತಿಕೊಂಡಿದ ಕುಮಾರಕನೇನಾದನೆಂದಾಂ ಕೇಳಲವಳಿಂತೆಂದಳ್:—

ಬರ್ಬಳಿ ಪೋಗುತ್ತಿರಲಾ ।
ನೊರ್ಬ ಕಿರಾತಂ ಭಯಂಕರಂ ಕಂಡೆನ್ನಂ ॥
ಜರ್ಬಿ ಕುವರಾರಕನಂ ನಿಜ ।
ದೋರ್ಬಲದಿಂ ಸೆಳೆದು ಕೊಂಡು ಗುಹೆಯೊಳ್ ಪೊಕ್ಕಂ ॥ ೧೪

ಅಂತವಂ ಪುಗಲೊಡಂ ಮತೊರ್ಬಂ ಬಂದೆನ್ನಂ ಪಿಡಿದು ತನ್ನಿರ್ಕೆಗೆ ಕೊಂಡು ಪೋಗಿ

ತನಗೆ ಸತಿಯಾಗವೇೞ್ಕೆಂ ।
ದನುನಯವೊಳ್ದಿನ್ನನಲೆಯಲಾನೊಲ್ಲದಿರಲ್ ॥
ಮುನಿದಾ ಕಿರಾತನೆನ್ನಂ ।
ವನದೊಳ್ ಕೊಲಲೆಂದು ನುನೆದೊಳನುಗೆಯ್ವಾಗಳ್ ॥ ೧೫

ಎನ್ನೊಡನಿರ್ಪಾತಂ ಪ್ರ ।
ಚ್ಛನ್ನತೆಯಿಂ ಬಂದು ತತ್ಕಿರಾತನ ಶಿರಮುಂ ॥
ತನ್ನಸಿಯಿಂದರಿದು ಬಲಿ ।
ಕ್ಕೆನ್ನಂ ವಧುವಾಗಿ ಮಾಡಿಕೊಂಡನಲಂಪಿಂ ॥ ೧೬

ಬಲಿಯಿಂದೀತಂ ಪ್ರಹಾರವರ್ಮನಿಂ ಮುನ್ನಿಸಿ ಕೊಳ್ವ ಭೃತ್ಯನೆಂದು ಪೇೞ್ದೊಡದರ್ಕಾಂ ಹರ್ಷಿತೆಯಾಗಲನಂತರಂ,

ನಮ್ಮೊಡೆಯನಿರ್ದ ಠಾವಿಂ ।
ಗುಮ್ಮುಹದಿಂ ಪೋಪೆನೆಂದು ಮುತ್ಪತಿಯೆನ್ನಂ ॥
ಸಮ್ಮಾನಿಸಿಯೊಡಗೊಂಡು ।
ಯ್ದಮ್ಮುದದಿಂ ಮಾತೆ ಕೇಳಿದೆನಗಾದ ಹದಂ ॥ ೧೭

ಎಂಬುದುಮಾನುಂ ನಿನ್ನಂತೆಯಾದೆನೆಂದೆನಗಾದವಸ್ಥೆಯನವಳ್ಗೆ ಪೇೞ್ದಿನಂತರಂ ಆವಿರ್ವರುಂ ಪ್ರಹಾರವರ್ಮನುಂ ಪ್ರಯುಂಜಯುಮಿರ್ದೆಡೆಗೆಯ್ದಿ,

ಧಾತ್ರೀಕನಂ ತದೀಯಕ ।
ಳತ್ರಮನಾಮಿರ್ಬರೆಯ್ದಿ ಕಡುಪಿಡಿದಾಗಳ್ ॥

ಪುತ್ರವಿಯೋಗದ ಶಿಖಿಯಿಂ ।
ಕೊ್ರೀತ್ರಂಗಳನುರಿಪಿ ಕಳೆದೆವಚ್ಚರಿಯಾಗಲ್ ॥ ೬೦

ಅಂತವರಿರ್ವರ್ ಕುಮಾರರ್ ಪೋದರೆಂಬುದನಱಿದು ಕಡುದುಃಖದಿಂ ಪ್ರಹಾರವರ್ಮನಲ್ಲಿಂ ತಳರ್ದು ಸಹ್ಯದೇಶಮಾರ್ಗದೊಳ್ ಮಿಥಿಲಾಪುರಕ್ಕೆ ಪೋಗುತಿರ್ಪಾಗಳ್

ಸಂಹಾರವರ್ಮತನಯಂ ।
ಬಾಹಾಬಲದಿಂದೆ ಮಿಥಿಳೆಯೊಳ್ ಪಟ್ಟವನಾಂ ॥
ತಾಹನಕೆ ಬಂದನುದ್ಧತ ।
ಸಾಹಸದಿಂದಂ ಪ್ರಹಾರವರ್ಮನೊಳಾಗಳ್ ॥ ೬೩

ಅಂತು ಬಂದು,

ಜವದಿಂ ಮುಳಿದಾಗಳ್ ವಿಕ ।
ಟವರ್ಮನಾರ್ಪಿಂ ಪ್ರಹಾರವರ್ಮನ ಸರ್ವ ॥
ಸ್ವವನಂದು ಪಿಡಿದು ತನ್ನು ।
ತ್ಸವದಿಂ ಮಿಥಿಳಾಪುರಕ್ಕೆ ಬಂದನಲಂಪಿಂ ॥ ೬೪

ಅಂತು ಕೊಂಡು ಬಂದು ಪ್ರಹಾರವರ್ಮನಂ ಪ್ರಿಯಂವದೆಯುಂ ವಿಕಟವರ್ಮಂ ಸೆಱೆಗೆಯ್ದನೆಂದು ಮತ್ತಮಿಂತೆಂದಳ್:—

ಇಂದುಮುಖಿ ಪೂರ್ಣಕುಚೆ ಮ ।
ನ್ನಂದನೆ ಪ್ರಪ್ತರಿಕೆ ಕಲ್ಪಸುಂದರಿಯುಂ ಪೆಂ ॥
ಪಿಂದಂದೋಲಗಿಸುತ್ತುಂ ।
ಬೆಂದೊಡಲಂ ಪೊರೆಯುತಿರ್ಪಳ್ ನೋಡೀಗಳ್ ॥ ೬೫

ಅಂತೀವಿಕಟವರ್ಮನರಸಿಯಪ್ಪ ಕಲ್ಪಸುಂದರಿಯನೆನ್ನ ಮಗಳ್ ಪ್ರಪ್ತರಿಕೆ ಸೇವೆಗೆಯ್ವ ಕಾರಣಮಿತಾಣದಿಂ ತೊಲಗಲಾಱದೆ,

ಈಪರಿಯವಸ್ಥೆಗಾಂ ಪರಿ ।
ತಾಪಂಬಟ್ಟಖಿಳಸೌಖ್ಯಮುಂ ತೊಱೆದೀಗಳ್ ॥
ತಾಪಸಿಯಾಗಿರ್ದಪೆನೆಂ ।
ದಾಪರಿಣತನಯನೆ ಪೇೞ್ದ್ರ ಮತ್ತಿಂತೆಂದಳ್ ॥ ೬೬

ಆಕಪಿಲಾಶವದೊಳ್ ಪ್ರೊ ।
ಕ್ಕಾಕುನರಂ ಸುಖದೊಳರ್ದ್ನಾದೆಂಡೆ ನಿನ್ನಂ ॥
ತಾಕಾರಪೂಜ್ಯನಾಗಿ ನಿ ।
ಜಾಕೃತಿಯುಂ ತಳೆವನೆಂದು ಶೋಕಿಸುತಿರ್ದಳ್ ॥ ೨೩

ಮತ್ತಂ,

ಅನುನಯದಿನಾಕುಮಾರಕ ।
ನಿನಿತುದಿನಂ ಸುಖದೊಳಿರ್ದ್ನಾದೊಡೆ ತನ್ನೀ ॥
ಜನನೀಜನಕರ್ಗತಿಬಂ ।
ಧನಮೀಕಾದಪುದು ಪೆಚ್ಚುವನೆ ದಾಯಾದ್ಯಾ ॥ ೨೪

ಎಂಬುದುಂ,.....

ತೊರೆಯೆ ಕುಚಕಂಗಳುನ್ಮೈ ಪ್ರಳಕಾಂಕುರವುಬ್ಬೆ ಮುದಶ್ರು ಗಂಟಲಂ ।
ಸೆರೆ ಬಿಗಿಯಲ್ ನಿಜಾಕೃತಿ ಕರಂ ನಯುವೇಱೆ ಮುಖಂ ಪ್ರಸನ್ನವುಂ ॥
ಬಿರಮಿನಿಸಲ್ ಮನಂ ವಿನಯದಿಂ ಗುಡಿಗಟ್ಟೆ ಮಹಾಪ್ರಮೋದದು ।
ಬ್ಬರದೊಳತೀವಸಂಭ್ರಮದೊಳೆನ್ನ ನಲಂಪಿನೊಳಾಕೆಯಪ್ಪುದಳ್ ॥ ೨೫

ಅಂತು ಸಂತಸದಿಂದಪ್ಪಿಯೆನ್ನ ಮುಖಮುಂ ನೋಲ್ಪುದುಮಾನಿಂತೆಂದೆಂ:—

॥ ಮಲ್ಲಿಕಾಮಾಲೆ ॥

ವಿಕಟವರ್ಮನ ಮುಂಡಮುಂ ಪೊಡೆಸೆಂಡನಾಡಿ ಜಗಕ್ಕೆ ಕಾ।
ತುಕಮನಿತ್ತು ಬಲಿಕ್ಕ ಮುತ್ಪಿತೃಮಾತೃವಂ ಭುಜದಾರ್ಪಿನಿಂ ॥
ಸಕಳರಾಜ್ಯಸುಖಕ್ಕೆ ಭಾಜನನುಪ್ಪವೋಲ್ ನಿಗೆ ಮಾಳ್ಪೆನಂ ।
ಬಿಕೆಯಿದಂ ಪ್ರಕಟಕ್ಕೆ ತಾರದೆ ನೀತಿಯಿಂದಱು ನಿಶ್ಚಯಂ ॥ ೨೬

ಎಂದು ಮತ್ತಂ,

---

† ಕಪಿಲಾಶವದೊಳ್ ಭಯದಿಂ ।
ದೆ ಪೊಕ್ಕನೆಂಬಾಕುಮಾರನಾಂ ಬಲುಕಲ್ಲಿಂ ॥
ದುಪಚರಿಸಿಯೆನ್ನನೊರ್ಬಂ ।
ತಪಸ್ವಿ ಕೊಂಡುಯ್ದನದೆ ಕಥಾವೃತ್ತಾಂತಂ ॥ ಇದು ಮತ್ತೊಂದು ಪ್ರತಿಯ ಕಂದ
ವೆಂದು ಓಲೆಯ ಪುಸ್ತಕದಲ್ಲಿ ಪಕ್ಕದಲ್ಲಿ ಬರೆದಿದೆ.

ಆಂ ಬಂದಿರ್ದನೊಲ್ದಿ ।
ನ್ನಂಬಿಕೆಯುಂ ಜನಕನುಂ ದಿಟಕ್ಕಱಿಯುವರೇ ॥
ಲಿಂಬಿನೊಳಿಸಗುಗೆ ಕಾರ್ಯವು ।
ನಂಬುಜಮುಖಿ ವಿಕಟವರ್ಮನಹಿಯದ ತೆಱದಿಂ ॥ ೩೨

ಎಂದಾಂ ಪೇಟ್ಟ್ವುದುಮಾಕೆ ಸಂತೋಷಂಬಟ್ಟು ಮುಹೂರ್ತಮಾ ಪುರಾ
ಲೋಕನಂಗೆನುದ್ದ,

ಕೂಡಿತೊಲವಿಂ ಪ್ರಿಯಂಗರೆ ।
ಮಾಡಿದ ನೋಂಪಿಯು ಫಲಂ ದಲೆಂದಂದೆನ್ನಂ ॥
ನೋಡಿ ನಿಜಹರ್ಷದಿಂ ಮಾ ।
ತಾಡಿಸುತುಂ ಮಠದೊಳಿೊಲ್ದು ಸುಖಮಿರ್ದಾಗಳ್ ॥ ೩೩

ದಿನಸಶ್ರೀ ರವಿರತ್ನಕುಂಭದಿನಲಂಪಿಂದೊಲ್ಮೆಯಿಂ ಪಶ್ಚಿಮಾ ।
ರ್ಣವಪಾನೀಯವನೊಯ್ವೆನೆನ್ನುದಯಶೈಲಾವಾಸಕಂದಲ್ಲಿ ತುಂ ॥
ಬುವ ಪ್ರೌಢೊಂದು ಮಹೋಗ್ರಕಾಲಮುಕರಂ ತತ್ಕುಂಭಮುಂ ಕಚ್ಚಿ ಪ್ರೋ ।
ಯ್ತುವಳಂ ಕೂಡಿಯೆನಲ್ಕೆ ಪಂಕಜಸಖಂ ಪ್ರೋಕ್ತಂ ಪ್ರತೀಚ್ಯಬ್ಧಿಯುಂ ॥

ಅಂತು ಸೂರ್ಯಾಸ್ತಮಾನವಾಗಲೊಡನೆನಗೊಂದು ಪಱುವ ತಟ್ಟೆಯಂ ಮು
ಠದ ಗೊಂಟಿನೊಳ್ ಪೊಸಿಕೊಟ್ಟೊಡಾಂ ವಿಶ್ರಮಿಸಿಯೂರಾತ್ರಿಯಂ ಕಳೆಯೆ,

ಉದಯಗಿರೀಂದ್ರಮೆಂಬ ಪೊಸಕಂಭದಿನಾರ್ದ್ರ ಗಭಸ್ತಿಕ್ಕರಂ ।
ಬಿದಿರ್ದ್ದ ಕರಂಗಳಂ ನೆಗಪಿ ಮುನ್ನರುಣೋದಯವಿಸ್ಫುಲಿಂಗಮುಂ ॥
ಕೆದಱಿ ತಮಿಸ್ರದೈತ್ಯನೊಡಲಂ ಬಗಿದಾಕಮಳಾನುವೋದದಿಂ ।
ದುದಯಿಸಿದಂ ದಿನಾಧಿಪನ್ಯಕೇಸರಿಧಾತ್ರಿಹರಾತ್ಮಕಂ ಕರಂ ॥ ೩೪

ಅಂತುದಯವಾಗಲುದಯಕರ್ಮವುಂ ತೀರ್ಚಿ ಕುಳ್ಳಿರ್ದ ಸಮಯದೊಳ್

ಮುಡಿಯಂ ಸೆಕ್ಕಿದ ಪುಷ್ಪಗಂಧಮಳಕಾನೀಕಕ್ಕೆ ಕಸ್ತೂರಿ ಸಾ ।
ಲಿಡುವಂತಿಕ್ಕಿದ ಮಿಕ್ಕ ಕಂಪು ಕುಚದೊಳ್ ಶ್ರೀಖಂಡಮುಂ ಚೆಲ್ವಿನಿಂ ॥
ತೊಡೆದಾವೋದಮನಾರತಂ ನೆಲಸೆ ಭೃಂಗಶ್ರೇಣಿ ತನ್ನೊಳ್ ಸರಂ ।
ಗುಡುತೆಯ್ತರ್ಪಿನಮಂದು ಪುಷ್ಕರಿಕೆ ಬಂದಳ್ ಸಂತತೋತ್ಸಾಹದಿಂ ॥ ೩೫

ಅಂತು ಕಲ್ಪಸುಂದರಿಗೆ ಶೃಂಗಾರಂಗೆಯ್ದು ಬಂದ ಪುಷ್ಕರಿಕೆಗೆ ಮುದ್ದಾ
ತ್ರಿಯೆನ್ನಂ ತೋಱಿ

ಈತಂ ನಮ್ಮ ನೃಪತಿಯ ತನು ।
ಜಾತಂ ಕಾನನದೊಳಾಂ ಬಿಸುಟ್ಟೆಡೆಯೊಳ್ ನಿ ॥
ಭೀರ್ತಿಯಿನುಜ್ಜೀವಿಸಿ ದೇ ।
ಕಾಂತರಮುಖನಾಗಿ ಬಂದನಿದು ದಲ್ ಪುಣ್ಯಂ ॥ ೩೬

ಎಂದು ಪೆಱ್ಚಿದುಮಾಪ್ತರಿಕೆಯೆನ್ನಂ ನೋಡಿ
ಮಿಕ್ಕ ಪಸಿವಿಂ ಚಕೋರಿಗ ।
ಳಲ್ಕಿಜದಿಂ ಪಸರಿಸಿರ್ ಬೆಳ್ದಿಂಗಳಂನು ॥
ಡಚ್ಕಿಸಲಾಗದುಗುಬ್ದಿಪು ।
ವಕ್ಕುಮೆನಲ್ ಸುರಿದಳಬಲೆ ಬಿಸುಗಣ್ಬನಿಯಂ ॥ ೩೭

ಅಂತು ಶೋಕಿಸಲವಳಂ ಸಂತೈಸಿಯನಂತರಮುಪಹಾರವರ್ಮಂ ಸುಖದೊಳಿರ್ದಪನೆಂಬ ಸಂತೋಷವನನಳ್ಗೆ ಮಾಡಿ ಬಳಿಕಿಂತೆಂದೆಂ:—

ನಿನ್ನೊಡೆಯಂ ಸುರೂಪಿಯೆ ಗುಣಜ್ಞನೆ ಕಾಮುಕಳಾವಿಳಾಸನಂ ।
ಪನ್ನನೆ ಅಂಗಸೌಷ್ಠವಿಯೆ ನೀತಿನಿವಾಸನೆ ವಿಕ್ರಮಪ್ರಭಾ ॥
ಪ್ರೋನ್ನತಬಾಹುಸಾಹಸಿಯೆ ಸಜ್ಜನಸಂಗಿಯೆ ದೇವತಾರ್ಚನಾ ।
ಸನ್ನನೆ ಪೇಳಿ ಪ್ರಪ್ತರಿಕೆ ಕಾತುಕಮುಪ್ಪಿನೆಗಂ ವಿಳಾವಿಸಿನೀ ॥ ೩೮

ಸುರತವಿನೋದದಿಂ ವಿಕಟವರ್ಮನೃಪಂಗೆ ವಿವಗ್ಧೆ ಕಲ್ಪಸುಂ ।
ದರಿ ಮಿಗೆ ಕೂಪರ್ಪಳೀ ನಿನಗೆ ತನ್ನನುತಾಪಮನೇನನಾದೊಡಂ ॥
ಪರಮರಹಸ್ಯದಿಂದುಸಿರ್ಪಳೀ ನಿಜಮಂದಿರದೊಳ್ ಸ್ವತಂತ್ರಸಾಂ ।
ದರದೊಳಗಿರ್ಪಳೀ ಪದೆದು ಪೇೞೆನಗಂಬುಜಲೋಲಲೋಚನೇ ॥ ೩೯

ಎಂಬುದುಮವಳಿಂತೆಂದಳ್:—

ಧರೆಗೆ ಕುರೂಪಿ ದುರ್ಗುಣಿ ನಮನೋಭವಕೇಳಿನಿಕೃಷ್ಟನೆಂಗದು ।
ರ್ದರನತಿದುರ್ವಿನೀತನನಿಶಂ ವನಸೈರಿಭಸಾಮ್ಯವಿಕ್ರಮುಂ ॥
ನಿರುಪಮದುಷ್ಟಸಂಗಿ ಬಹುನೂರ್ಖನಬೋಧಿತ ದುರ್ವಿವೇಕಿ ದು ।
ಶ್ಚರಿತನದಾವನೀವಿಕಟವರ್ಮನನೋಲ್ ಸುಕುಮಾರಶೇಖರಾ ॥ ೪೦

ವನಜಮುಖಿ ಕಲ್ಪಸುಂದರಿ ।
ಯನುದಿನಮಾವಿಕಟವರ್ಮನಂ ಕಾಣಲೊಡಂ ॥

ಕಿನಿಸುವಳೀಕೆಂದಱಿಯೆಂ ।
ತನಗವನೊಳ್ ಮೋಹಮೆಂಬುದಿನಿತಂ ಕಾಣೆಂ ॥ ೪೧

ಎಂಬುದುಂ ಮುತ್ಪಿತೃಮಾತೃಬಂಧನಮೋಹಕ್ಕಿದೆ ಕಾರಣಮೆಂದವಳ್ಗಂ ತೆಂದೆಂ:—

ಎನ್ನಭಿಮತಮಿದು ನೀಂ ಪೋ ।
ಗಿನ್ನುಂ ಬೇಱ್ಪಿನಿತು ಕೋಪಮುಂ ನೃಪನೊಳ್ ತ ॥
ತ್ಕನ್ನಿಗೆ ಪ್ರಟ್ಟಿಸಿ ಮತ್ತಂ ।
ನಿನ್ನಱಿವಂ ತೋಱ್ಪುದೆನಗೆ ಕಪಿಲದಳಾಕ್ಷೀ ॥ ೪೨

ಎಂಬುದುಮವಳಂತೆಗೆಯ್ವೆನೆಂದು ಬೀಱ್ಕೊಂಡು ರಾಜಭವನಕ್ಕೆ ಪೋಗಿ ಮಗುೞ್ದೆರಡ್ಮಾಱು ದಿನಕ್ಕೆ ಬಂದು ನೀಂ ಪೇೞ್ದಿಂತೆ ಕಲ್ಪಸುಂದರಿಯೊಳಿಂ ತೆಂದೆನೆಂದಳ್:—

ಕಳ್ಳಿಗೆ ಕಲ್ಲವಲ್ಲಿ ರಸಕುಪ್ಪಿಟ್ಟಗೆ ಚಂದನದಣ್ಪು ರೋಗಿಗಿಂ ।
ಪುಳ್ಳ ಸುಭೋಜನಂ ಕಪಿಗೆ ನಿಸ್ತುಲಮಾಕ್ತಿ ಕಹಾರಯುಷ್ಟ ಕಾ ॥
ಲ್ಪಳ್ಳಿಗೆ ಪಂಡಿತೋಕ್ತಿ ಮಿಗೆ ಮೂರ್ಖ ಕುರೂಪಿನ್ನಪಂಗೆ ಕಾಮಿನೀ ।
ಸಲ್ಲಲಿತಪ್ರಸಂಗಮೆಸೆದಿರ್ದುದು ಚಿತ್ರಮಿದಲ್ತಿ ಧಾತ್ರಿಯೊಳ್ ॥ ೪೩

ನಿಸದಮಿಳಾತಳಕ್ಕೆ ಕರಕಾಶಲಮುಂ ಮಿಗೆ ತೋಱಲೆಂದು ಭಾ ।
ವಿಸಿ ವ್ಯೂಢಹಸ್ತದಿಂ ತರುಣಿಯಾಕೃತಿಯಂ ಸವಿಮುದಾಯಶೋಭೆಯುಂ ॥
ಪ್ರೊಸತೆನಿಪಂದದಿಂ ಬರೆದು ಜೀವನಮನೋವಚಿ ತೀವಿ ಪದ್ಮಜಂ ।
ಬಿಸುಟನದೇಕೆ ಮತ್ತೆ ಪಟಿಗಾಲದ ಕೋಚ್ಚೆಸಱೊಳ್ ಜಡಾಶ್ರಯಂ ॥ ೪೪

ಎಂಬುದುಮಾಕಲ್ಪಸುಂದರಿಯೆನ್ನ ಮನಮನಱಿದು ತನ್ನನುತಾಪಮುಂ ಪೇೞಲಿಂದಿಂತೆಂದಳ್:—

ವಾರಿಜಮುಖಿಯೆನ್ನಯ ಸಂ ।
ಸಾರಂ ಮರ್ಕಟನ ಕೆಯ್ಯ ಪೂಮಾಲೆಯು ವಿ ॥
ಸ್ತಾರಮೆನಲಾಕ್ಯೆಯ್ತೆನುತುಂ ।
ಭೋರೆನೆ ಬಿಸುಸುಯ್ದು ತನ್ನ ಪತಿಯುಂ ಬಯ್ದಳ್ ॥ ೪೫

ಅಂತು ಪತಿಯುಂ ಬಯ್ವುದುಮಾನಿಂತೆಂದೆಂ:—

ಕಮಳಾಯತಮುಖಿ ನೀಂ ಪೋರೆ ।
ದ ಮಲ್ಲಿಕಾಲತೆಯ ಪೂಗಳಂ ನಿನ್ನಧಿಪಂ ॥
ದಮಯಂತಿಗೆ ಮುಡಿಸಿದನೆ ।
ನ್ನ ಮುಂದೆ ಕಯ್ಯುಟ್ಟಿ ಮೋಹದಿಂದುಪವನದೊಳ್ ॥ ೪೬

ಎಂಬುದುಮನಾಕಲ್ಪಸುಂದರಿ ಕಡುನುಳಿದು,

ಈನಿಮಾಪಿಯ ಸಂಗಮ ।
ನಾನ ದಿನಂ ಬಿಟ್ಟು ಸುಖದೊಳಾನಿರ್ದೆನಲೇ ॥
ಭಾನಕಿ ಪೇಳೆಂದಾಕೆ ಮ ।
ಹಾವಸ್ಥೆಯನೆಯ್ದುವಂತಿರಿಸಗಿದೆನಾಗಳ್ ॥ ೪೭

ಎಂದು ಪುಷ್ಕರಿಕ ಬಂದು ಪೇಟಲಾಂ ಮತ್ಕಾರ್ಯಸಿದ್ಧಿಯಾಯ್ತೆಂದು ಬಿಜಿಸುಂ,

ಅವಳುನ್ಮಾದಿನಿಯಪ್ಪನೋಲ್ ನೃಪ ಮದೀಯಾಕಾರನುಂ ಪುಷ್ಪಸಂ ।
ಭವಮುಂ(?) ದರ್ಶನಮಾತ್ರಮೋಹನತೆಯುಂ ಸೀಮುಂತಿನೀಚಿತ್ತವ ॥
ಶ್ಯವನೊಂದುಜ್ಜ್ವಲನನ್ಯದಿವ್ಯಪಟದೊಳ್ ಸರ್ವಾಂಗಸೌಂದರ್ಯದೊ ।
ಪ್ಪನನಾಂ ಚಿತ್ರಮೆನಲ್ಕೆ ಕೂರ್ತು ಬರೆದೆಂ ಷಡ್ವರ್ಣಸಂಪೂರ್ಣದಿಂ ॥

ಅದೆಂತೆನೆ:—

ನಗೆಮೊಗಮುಂ ಸಮುನ್ನತಭುಜಂಗಳನಬ್ಜಕರಂಗಳುಂ ನೆಗ ।
ಲ್ದಗಲ್ದುರನುಂ *ಮೃಗಾಧಿಪಕೃಶೋದರಮುಂ ದೃಢಪೀವರೋರುಜಂ ॥
ಘಗಳನತೀವಕೋಮಳಪದದ್ವಯಮುಂ ಸಮುದಾಯಶೋಭೆಯುಂ ।
ಸೊಗಸೆಸೆನೆಂತಿರಿಲ್ದು ಬರೆದೆಂ ಕಡುಕೂರ್ತು ಮದೀಯಮೂರ್ತಿಯಂ ॥

ಅಂತು ಬರೆದ ಚಿತ್ರಪಟಮುಂ ಪುಷ್ಕರಿಕೆಯು ಕೆಯ್ಯೊಳ್ ಕಲ್ಪಸುಂದರಿಗೆ ಕಳಿಪಲವಳಾಪಟಮುಂ ತೋಱಿ ಮುಱುದಿನಂ ಮಗುಟ್ಟಿ ಬಂದೆನ್ನೊಳಿಂತೆಂದಳ್:—

ಆಹಿಮಬಿಂಬರಶ್ಮಿಮುಖಿಯೊರ್ಬಳಿ ಕೂರ್ತು ವಿನೋದದಿಂ ಲತಾ ।
ಗೇಹದೊಳಿರ್ದೊಡೊಂದಿತು ರಹಸ್ಯದ ಪೊತ್ತೆನುತೆಯ್ದು ಲಂತವಳ್ ॥
ಮೋಹದೊಳಂತಿರಲ್ಕೆ ಕರಿಯಲ್ ಪದೆದಾಂ ಬಱಿಕಿತ್ತೆನೊಲ್ದು ಸಂ ।
ಮೋಹನಪಾತ್ರಮುಂ ಸ್ಮರತನುತ್ರಮನಾಕೆಗೆ ನಿನ್ನ ಚಿತ್ರಮುಂ ॥ ೪೮

ಅಂತು ಕುಡಲೊಡಂ,

ಗಳಿಲನೆ ಕಾಂತೆ ಚಿತ್ರಪಟದೊಪ್ಪವನೀಕ್ಷಿಸಿಯಾಗಳೊವೊರ್ದಲೆ ।
ಪುಳಕಿತೆಯಾಗಿ ಕಂಪಿಸಿ ಬೆರಲ್ತರಾಂ ನಸು ಗೆತ್ತು ಲಜ್ಜೆ ಹೈ ॥
ಗಳಿದು ಕಳಾಪವೊಯ್ಯನೆ ಸಡಿಲ್ವ ಕರಂ ಮುರವಟ್ಟು ಚಿತ್ತದೊಳ್ ।
ತಳವೆಳಗಾಗಿ ಮೆಯ್ಮರೆವಳಂತುಟಿನಲ್ ನಿಜಚಿತ್ರವಿಭ್ರಮಂ ॥ ೫೧

ಅಂತು ನೋಡಿ,

ಇದು ಶೃಂಗಾರದ ಸೀಮೆಯೋ ಇದು ಮುನೋಜಾತಂಗೆ ಮೇಲಾಗಿಯೊ।
ದ್ದಿದ ಮಾಱುಮಾಂಕವೊ ಮೇಣಿವಂಗನೆಯರೊಳ್ ಕಾಮಾಗ್ನಿಯುಂ ವರ್ಧಿಸ ॥
ಲ್ಕುದಯಂಗೆಯ್ದವಸಾತನೂರ್ತಿಯೊ ದಿಟಂ ಪೇೞ್ತೆಂಬಿನಂ ಕೂರ್ತು ನೋ।
ಡಿದಳಬ್ಜಾನನೆ ನಿನ್ನ ಚಿತ್ರಪಟಮುಂ ನಮ್ಮಾಶೆ ಬೀೞ್ವಿನ್ನೆಗಂ ॥ ೫೨

ಅಂತೆವೆಯಿಕ್ಕದೆ ನೋಡುತ್ತಿಂದೆಂದಳ್:—

ತೊಳಗುವ ತೋರಕಣ್ಮಲರ್ಗಳುನ್ನತಪೂರ್ಣವಿಶಾಲವಕ್ಷನುಂ ।
ಜ್ಜ್ವಳಿತರದೀರ್ಘಬಾಹು ಪರಿಪುಷ್ಟಮಧ್ಯಮನೂನಲಸತ್ಕಟೀತಟಂ ॥
ತಿಳಿವೊಡಿದಲ್ತೆ ಸತ್ಪುರುಷಲಕ್ಷಣಮೆಂಬ ಕವಿಪ್ರಸಿದ್ಧಿ ಕೀ ।
ಟ್ಟಿಲೆಯೆನಿಸಿತ್ತೆನುತ್ತ ಬಲೆ ಚುಂಬಿಸಿದಳ್ ನಿಜಮೂರ್ತಿಚಿತ್ರಮಂ ॥ ೫೩

ಅಂತು ಚುಂಬಿಸಿ,

ಮದನಂ ತನ್ನಧಿದೈವದಾಕೃತಿಯನೊಲ್ದಾರಾಧಿಸಲ್ಕೆಂದು ಚಿ ।
ತ್ರದ ರೂಪಂ ಬರೆದಂಜೆ ಮತ್ತೆ ರತಿ ತತ್ಸಾಂದರ್ಭಮಂ ಕಂಡು ವೋ ॥
ಪದಗುರ್ವಿಂದಸುವೊಯ್ದಳಾಬೊಡನಖಿಂದಾಂ ರೂಪ್ಗಗೆಟ್ಟಪ್ಪೆನೆಂ ।
ದಿದನ ವೀರ್ತಳದೊಳ್ ಪ್ರತಿಷ್ಠಿಸಿದನೆಂದಾಕಾಂತೆ ಮುಂಡಾಡಿದಳ್ ॥ ೫೪

ಅಂತು ಮುಂಡಾಡಿಯೆನ್ನ ಮುಖಮುಂ ನೋಡಿಯಿಂತೆಂದಳ್:—

ಈಕಾಂತಮೂರ್ತಿ ಮಾನವ ।
ಲೋಕದೊಳಿಲ್ಲೆಂತು ನಿನಗೆ ಸಾರ್ದತ್ತಬಲಾ ॥
ನೀಕತನುವಾಕ್ಯಚಿತ್ತವ ।
ಶೀಕರಣಮೆನಿಸ್ಪ ಚಿತ್ರಮೆಲೆ ಪುಷ್ಕರಿಕೇ ॥ ೫೫

ಎಂಬುದುಮಾನಿಂತೆಂದೆಂ:—

ದೇವಿಯುರಿಂತಪೇಕ್ಷಿಸುವಿನಾನೊತೆ ಚಿತ್ರದ ರೂಪಿನಾತನಂ ।
ಭಾವಕನಂ ಕಳಾನಿಳಯನಂ ಪದೆದಿಲ್ಲಿಗೆ ತಂದು ತೋರ್ಪೆನೆಂ ॥
ದಾವಧುವಿಂಗೆ ಪೇಳಲದು ಪ್ರೋಗದಪೂರ್ವಮವಲ್ಲದಿರ್ದೊಡಿಂ ।
ತೀವಲ್ಲ ತೋರ್ಪುದಾದೊಡತಿಭಾಗ್ಯಮೆನುತ್ತವಳಿನ್ನನಪ್ಪಿದಳ್ ॥ ೫೬

ದ್ವಿಪನಿಭಯಾನೆ ಪೃಷತ್ಕರಿಕೆ ತತ್ಸುಭಗಂ ಸ್ಮರಮೂರ್ತಿ ಸೂರ್ಯನಿಂ ।
ದಪರಗಿರೀಂದ್ರಮಸ್ತಕವನೆಯ್ದಲೊಡಂ ಕಡುಮರ್ಬಿನೊಳ್ ತಳಿ ॥
ರ್ದುಪವನಮಧ್ಯದೊಳ್ ಮೆಱೆವ ಪೃಷತ್ಲತಾಭವನಕ್ಕೆ ಬಂದು ಸ ।
ತ್ಕೃಪೆಯನಲುಪಿನಿಂದೆನಗೆ ತೋರ್ಪುದು ಬೇಱ್ಪೆನಿವಂ ತಳೋದರೀ ॥ ೫೭

ಎಂದೆನ್ನಂ ಕಳಪಿವಳೆಂದು ಪೃಷತ್ಕರಿಕೆ ಪೇಳಿಲಾಂ ಮನದೊಳ್ ಗುಡಿಗ
ಟ್ಟಿ ಕಲ್ಪಸುಂದರಿ ಪೇೞ್ದಿ ಸಂಕೇತಸ್ಥಾನಕ್ಕೆ ಪ್ರೋಪೆನೆಂಬಾಗಳ್,

ಕಮಳಮುಖಿಯುಂಗಸಾಗ ।
ಕ್ರಮಮುಂ ಕಣ್ಣಾಜಿ ನೋಡಲಾಱದ ತೆಱದಿಂ ॥
ಕಮಳಸಹಾಯಂ ಪದೆದ ।
ಸ್ತಮಾನಗಿರಿಗೆಯ್ದಿದಂ ನೃಪಾಲನುನೋೞಾ ॥ ೫೮

ಅಂತಸ್ತಮಾನನಾಗಲೊಡಂ,

ಪಸಿದ ಚಕೋರಿಗಳ್ ದ್ವಿಜಪರೀರಿಗಳೆಂದೆಱೆಯಲ್ಕೆ ಸಂಜೆ ಭಾ ।
ವಿಸಿ ಪೊಸಜೊನ್ನಮಂ ನಿಜೆಯ ಕರ್ಪಿನಿತಿಲ್ಲದ ಮಾಟ್ಕೆಯಿಂದೆ ಕೋ ॥
ಧಿಸಲದು ಕುಗ್ಸಮಾಗೆ ಬಱಿಯಂ ಸಲೆ ಸಿಕ್ಕಿದ ಧಾರೆನಟ್ಟಿಲೊಳ್ ।
ಸಸಿನಿರಿಸಿಟ್ಟಪೋಲ್ ಮೃದುಕಳಂಕದಿನೊಪ್ಪಿದುದಿಂದುಮಂಡಲಂ ॥ ೫೯

ಅಂತು ಚಂದ್ರೋದಯಮಾಗಲೊಡಂ,

ನೆಲೆನೋಡಲ್ ಸುರಗಂಗೆ ಕೋಟಿವದನಂಗಳಿಂದೇಳ್ತಿಂದಳಲ್ತಲ್ತು ನಿ।
ರ್ಮಳದುಗ್ಧಾಂಬುಧಿ ವೀರೆದಪ್ಪಿ ಕವಿದತ್ತಲ್ತಲ್ತು ಗಾರ್ಭೀಕನು ॥
ಜ್ಜ್ವಲಸತ್ಪಂಚಕಮೂರ್ತಿ ಧಾರಿಣಿಯನಿಂದಪ್ಪಿರ್ದುದಲ್ತಲ್ತು ಕೇ ।
ಳಿಳಿಯೊಳ್ ಕೌತುಕಮಪ್ಪಿನಂ ಪಸರಿಸಿತ್ತಾನಂದಚಂದ್ರೋದಯಂ ॥ ೬೦

ಅಂತು ಬೆಳ್ದಿಂಗಳ್ ಪರ್ಬಲೊಡಂ ಚಂದ್ರಾಸ್ತಮಾನಮಪ್ಪನ್ನೆಗಮಿರ್ದ
ನಂತರಂ ಪ್ರೋಪೆನೆಂದಿರ್ಪಾಗಳ್,

ಪರನಾರೀಸಂಗದೋಷಂ ವಿಷಮತರಮಕಾಖಾಂಧವದ್ರೋಹಮೆಂಬು ।
ದ್ದುರಮಪ್ಪೀದುರ್ಯಶಂ ಪೊರ್ದುಗುಮೆನಗದಱಿಂದಲ್ಲದಿನ್ನೊಂದು ಕಾರ್ಯಂ ॥
ಸ್ಥಿರಮಪ್ಪಂತಾಗದೆಂದಾಂ ಪಲವ್ರಪಮೆಗಳಂ ಬಂತಿಸುತ್ತಿರ್ದಿನಂ ನಿ ।
ರ್ಭರನಿದ್ರಾಲಸ್ಯಮಾರಾತ್ರಿಯೊಳನುನಯದಿಂ ಮೋಹಿಸಿತ್ತಾಗಳೆನ್ನಂ ॥

ಅಂತು ನಿದ್ರೆ ಬರಲೊಡಂ,

ಸಿತದೂರ್ವಾಂಕುರರಂಜಿತಾಗ್ರಮಕುಟಂ ನೀಳ್ದೀಕದಂತಂ ಕರಾ ।
ಗ್ರತಲೋದ್ಯದ್ಧೃತನಿಂದ್ರಬದ್ಧಪೃಥುಲೋದ್ಯತ್ಕಕ್ಷೆ ಸಿಂದೂರಕೋ ॥
ಭಿತಕುಂಭಂ ವಿಲಸದ್ಭುಜಂ ಮದಗಜೋದ್ದಂಡಸ್ಫಲಾಶ್ಲಿಷ್ಟ ಪಶ್ಚಾದ್ಭಾಗಂ ।
ಕೃತಭೃಂಗಾವಳಿ ಪೆಂಪ್ರವೆತ್ತಿಭಮುಖಂ ಮಿಯ್ದೋಱುದಂ ಸ್ವಪ್ನದೊಳ್ ॥

ಅಂತು ಸ್ವಪ್ನದೊಳ್ ತೋಱಿ ವಿನಾಯಕನಿಂತೆಂದನಂ:—

ಲಲಿತತರಂಗಸಂಚಯದಿನಣ್ಮಿವ ಬುದ್ಬುದಕೋಟಿಯಿಂ ಸಮು ।
ಜ್ಜ್ವಲಶಫರೌಘದಿಂ ಕಮಳಕೈರವಸಂತತಿಯಿಂ ನಿರಂತರಂ ॥
ಸಲೆ ಮೆಱೆದಿರ್ಪ ದೇವನದಿಯಂ ಮಿಗೆ ಪೊಕ್ಕು ಕಲಂಕಲಾನವಳ್ ।
ಮುಳಿದು ಮನುಷ್ಯನಾಗೆನುತೆ ಶಾಪಮನಂದೆನಗಿತ್ತಳುಗ್ರದಿಂ॥ ೬೩

ಅಂತು ಗಗನಗಂಗೆ ಶಾಪಮಂ ಕುಡಲಾಂ ಮಗುೞ್ದಿ,

ವಾರಣಸಂಕುಲಕ್ಕುಚಿತಮಪ್ಪದನಾನೆಸಗಲ್ಕೆ ಗಂಗೆ ನಿ ।
ಷ್ಕಾರಣಮಿತ್ತೆ ಶಾಪಮನದೇಕೆನಗೆಂದು ಮಗುೞ್ದಿವಳ್ಗೆ ನೀಂ ॥
ಧಾರಿಣಿಯೊಳ್ ಮನುಷ್ಯಸತಿಯಾಗಿ ಪರರ್ ನೆರೆನಂತು ಪ್ರಟ್ಟಿ ವಿ ।
ಸ್ತಾರದೊಳಿರ್ಪೆಯೆಂದು ಮುಳಿದಾಂ ಮಿಗೆ ಶಾಪಮನಿತ್ತೆನಾಕ್ಷಣಂ॥ ೬೪

ಅಂತು ಶಾಪಮಂ ಕುಡಲಾಗಂಗೆಯುಂಜಿ ಇಂತೆಂದಳ್:—

ಕನ್ನೆಯವಸ್ಥೆಯೊಳ್ ಪುರುಷನೊರ್ವನೊಳಿರ್ಪುದು ವಿವಾಹಮಾಗಿ ಮು ।
ತ್ತೆನ್ನೆಯ ಶಾಪದಿಂ ಮನುಜನಾಗಿ ಧರಾತಳದಲ್ಲಿ ನೀಂ ಬರಲ್ ॥
ನಿನ್ನೆಯ ಸಂಗದಿಂ ಸುಖದೊಳಿರ್ಪನಿತೊಂದು ವರಪ್ರಸಾದನುಂ ।
ಪನ್ನಗಭೂಷಣಾತ್ಮಭವ ನೀಂ ದಯೆಗೆಯ್ಯೆನುತಾಕೆ ಬೇಡಿದಳ್ ॥ ೬೫

ಅಂತು ಬೇಡಲೊಡನುಂತಾಗಲೆಂದೆಂ. ಅದಱಿಂ

ಸುರಗಂಗಾಕೃತಿ ಕಲ್ಪಸುಂದರಿ ನಿಜಂ ಮನ್ಮೂರ್ತಿ ನೀನಾಗಿಯು ।
ರ್ವರೆಯೊಳ್ ಸಂಭವಿಸಿರ್ದ ಕಾರಣದೊಳೀಸ್ತ್ರೀಸಂಗದೋಷಂ ನಿರಂ ॥

ತರದಿಂ ಪೊರ್ದದು ನಿನ್ನನೊಲ್ದು ಪಿತೃಮಾತೃಪ್ರಾಣರಕ್ಷಾರ್ಥಮೆ ।
ನ್ನರುಮಂ ಬಾಧಿಸೆ ಪಾಪಮಿಲ್ಲ ನಿನಗೆಂಡಂ ವಾರಣೇಂದ್ರಾನನಂ ॥ ೬೬

ಆವ್ಯತಿಕರದೊಳಾಂ ಕಣ್ಡೆಱೆಯೆ,
ತಾರಾಂಗನಾಸ್ವತಂತ್ರೋ ।
ದಾರಮಹತ್ತೇಜಮೆಯ್ದೆ ಪೆರ್ಚಿತ್ತೆನ್ನಾ ॥
ಕಾರದಿನೆಂಬನುಶಯದಿಂ ।
ಭೋರೆನೆ ಕರಗಿದವೊಲಿಂದು ಕರಗಿದನಾಗಳ್ ॥ ೬೭

ಅಂತು ಚಂದ್ರಾಸ್ತಮಾನವಾಗಲೊಡಂ,
ಲೋಕಜನಕಫರನೇತ್ರಾ ।
ನೀಕವನೊರ್ವೊದಲೆ ಬಂಧಿಸಲ್ ಕಾಲಂ ನಿ ॥
ವ್ಯಾಕುಲದಿಂ ಮಿಗೆ ಬೀಸಿ ।
ಟ್ಟಾಕರ್ಪಿನ ಬಲಿವೊಲೆಯ್ದೆ ಪೆರ್ಚಿತ್ತು ತಮಂ ॥ ೬೮

ಅಂತು ಪೆರ್ಚಿದ ಕಚ್ಚಿಲೆಯೊಳಾಂ ಸಂಕೇತಸ್ಥಾನಕ್ಕೆ ಬರ್ಪಾಗಳ್,
ಪುರದಗಜೊತ್ತಿನೊಳಾಸ್ರ ।
ಷ್ಕರಿಕೆಯು ಮನೆಯಿರ್ದಲ್ಲಿ ಪೆಬಿ-ದಿರೊಂದಂ ॥
ಭರದಿಂ ತೆಗೆದಂಭೋಧಿಗೆ ।
ಸರಿಯೆನಿಸಿರ್ದಗಜಿನೊಲ್ದ ನೋಡಿದೆನಾಗಳ್ ॥ ೬೯

ಅಂತಿರ್ದಗಜಿಂ ನೋಡಿ
ಪಿರಿಯಗಲೊಳ್ ಬಿದಿರಂ ಪ ।
ಟ್ಟರಿಸಿಯದಂ ದಾಂಟಿ ಮತ್ತದಂ ಕೋಂಟೆಗೆ ನಿಂ ॥
ದಿರಿಸಿಯೊಳಬಿಬ್ದಿ ನಡೆದೆಂ ।
ಭರದಿಂ ಪುಷ್ಕರಿಕೆ ಪೆಱ್ದಿ ಪೊಲಬಿಱಿಗಾಗಳ್ ॥ ೭೦

ಅಂತು ನಡೆವಾಗಳ್ ಮುಂದೆ,
ರಸವಂ ಸಾಲಿಡುತಿರ್ಪ ದಾಡಿಮಫಲಂ ಪೆರ್ಚಿರ್ಪ ಚೆಂದೆಂಗು ನು ।
ಣ್ಪಸುರೇಱುರ್ದೆಳಗಾಂಗು ಮೇಣ್ ಡಿಯೆ ಬಿಣ್ಪಿಂ ಜೋಲ್ವ ಪೊಂಬಾಳೆ ಪೆಂ
ಪೆಸೆವಿನ್ಮಾವು ಪೊದಲ್ದಿ ಮುಟ್ಟಿಗೆಯು ಗೊಂಚಲ್ ನೀಳ್ದ ಜಂಬೂಫಲ ।
ಪ್ರಸರಂ ತೀವಿರೆ ಪೊಸ್ತವೆತ್ತು ಪವನಂ ಚೆಲ್ವಾಯ್ತಳಾಧೀಶ್ವರಾ ॥ ೭೧

ಅಂತಿರ್ದುಪವನಮಂ ಕಂಡು ಪುಷ್ಕರಿಕೆ ಕಿಲ್ಬಿ ಮಾರ್ಗದೊಳೆ
ಅಸುಕೆಯು ಕೆಂದಳಿರ್ದುಗಲಂ ಬಗಿದಾವ್ರಸವೂಹವೀಥಿಯಂ ।
ನುಸುಳ್ದತಿವೇಗದಿಂ ಕೃತಕಶೈಲಮನೊಯ್ಯನೆಡರ್ದು ಪೊಕ್ಕು ಸಾ
ತ್ಯಸುನುಲತಾಳಿಯೊಳ್ ತೊಡರ್ದು ಮಂದಸಮೀರನ ಮಾತ್ಸ್ಯೆಯಿಂ ಲತಾ ॥
ವಸಥವನೆಯಿದ್ದ ನಾಲ್ದೆಸೆಯನೀಕ್ಷಿಸಿದೆಂ ಭುವನಾಧಿನಾಯಕಾ ॥ ೭೦

ಅದು ರಂಭಾಸಂಭೂತವಾಗಿಯುಂ ಸುರಾಧಿಪನಿವಾಸಮಲ್ತು; ಪುನ್ನಾಗಪರಿಪೂರ್ಣವಾಗಿಯುಂ ವಿಷಧರನಿಳಯವಮಲ್ತು; ಕೋಮಳಲತಾವೇಷ್ಟಿತವಾಗಿಯುಂ ವೇಶ್ಯಾವಾಟಮಲ್ತು; ಸಕಲಸುಮನೋರಂಜಿತವಾಗಿಯುಂ ಅಮರ್ತ್ಯಭವನಮಲ್ತು; ಮಧುಪ್ರಸವವಾಗಿಯುಂ ಪುರವಿರೋಧಿಯಲ್ತೆನಿಸಿದ ಉಪವನದೊಳ್ ಕದಂಬಕುಸುಮರಾಗದಿಂ ಪಸರಿಸಿಟ್ಟ ನೆಲೆಗಟ್ಟಿನಿಂ ಪಸಿಯಡಕೆಯ ಸ್ಪೋಸಕಂಭದಿಂ, ರಸದಾಳಿಯಸಿಯ ಗಂಧವಟ್ಟಿಗೆಯಿಂ, ಕಾಳವರ್ ಕಾಳವೇರ್ ಕೇಗರ್ಪಿಟ್ಟನಿಂ, ಅಸುಕೆಯ ಕೆಸುದಳಿರ ಸ್ಪೋದಕೆಯಿಂ, ಪಜ್ಜಳಿಸುವ ಪನ್ನೀರ ಚಳೆಯಿಂದಿಂ, ಸಿಱಿಗೊಂಡ ಗಱುವ್ರಾವಿನ ಬಾಳ್ವೀಲೆಯಿಂ, ಲೀಲೆಯಿಡೆದ ಲತಾಗೃಹಂ ಲತಾಂತಶರಜನ್ಮಭವನದಂತಿರ್ದುದು. ಅಂತುಮಲ್ಲದೆಯುಂ,

ಸುರಯಿಯು ಸೇವಂತಿಯು ಪಾ ।
ದರಿಗಳ ಮಲ್ಲಿಗೆಯ ಸಂಪಗೆಯು ಜಾಜಿಯು ತಾ ॥
ವರೆಯು ಸುರಹೊನ್ನೆಯಲರ್ಗಳ ।
ಪರಿಮಳದಲರೆಸೆಯುತಿರ್ಪ ವಾವುಪವನದೊಳ್ ॥ ೭೨

ಅಂತೆಸೆವ ಉಪವನಮನ್ಯೆದ ಲತಾಭವನಮಂ ನೋಱ್ಪಿನಮಲ್ಲಿ,
ಇರ್ದೆಸೆಯಲ್ಲಿ ಮಾಣಿಕದ ದೀವಿಗೆ ಕೆಂದಳಿರ್ದೊಂಗಲಲ್ಲಿ ಪಾ ।
ಸಿರ್ದಮಳತ್ವಮಂ ಪೆಂಪೆಸೆವ ನುಣ್ಪಿನ ತಣ್ಗಳಸಂಗಳಲ್ಲಿ ತೀ ॥
ವಿರ್ದ ಸುಗಂಧಶೈತ್ಯಜಲಮಿರ್ತಲೆಗಿಂಬಿಳತಾಳವೃಂತಮೊ ।
ಪ್ಪಿರ್ದ ಲತಾಗೃಹಂ ನಯನಕೌತುಕಮಂ ಪಡೆದತ್ತಿಳಾಧಿಪಾ ॥ ೭೩

ಅಂತು ಕೌತುಕವಾದ ಲತಾಭವನಮಂ ಪೊಕ್ಕು ಕುಳ್ಳಿರ್ದನ್ನೆಗಂ;
ನೂಪುರಮಂ ಕಟಿಸ್ಥಿ ನವಕಿಂಕಿಣಿರಂಜಿತಕಾಂಚಿಯಂ ಬಿಸು ।
ಟ್ಟೋಪನ ನಿದ್ರೆಯುಬ್ಬರನನಾಲಿಸಿಯೊರ್ಬಳೆ ಮರ್ಬಿನೊಳ್ ಬರಲ್ ॥

ಚಾಪಲನೇತ್ರಕಾಂತಿ ಕಡುಮಿಂಚಿನವೋಲ್ ಪೊಳೆಯಲ್ ಸುಗಂಧಶೋ ।
ಭೂಪವನಂ ಮುಸುಂಕಲದಪುಂದಲುದೆಂ ಸತಿ ಬರ್ಪಳೆಂಬುದಂ॥ ೭೮

ಅಂತಾನಾಕಲ್ಪಸುಂದರಿಯ ಬರವನಱಿದು ಲತಾಭವನದ ಮಾಧವೀಗುಲ್ಮ
ದೊಳ್ ಮೆಯ್ಗರೆದಿರ್ದುದನುವಳ್ ಬಂದು ತದ್ಭವನದಲ್ಲಿನ್ನಂ ಕಾಣದೆ,
ಎಲೆ ಕುಸುಮಾಸ್ತ್ರ ನಿರ್ದಯ ನಿರಂತರಮುಗ್ಧಮುನೆನ್ನನಿಂತು ಕೋ।
ಟಲೆಗೊಳಪಂತಿರಾಂ ನಿನಗೆ ಮಾಡಿದ ಪ್ರೌಢಮಿಯುಂಟೆ ಧಾರಿಣೀ ॥
ತಿಲಕನನೊಲ್ದ ಚಿತ್ರಪಟದೋಪನಸಿಲ್ಲಿಗೆ ತಂದು ತೋಱುದಿಂ ।
ತಲಿಲಿಪಿಯೋಕೆ ಯೆನ್ನ ನೆನುತಂಗನೆ ಮುಂಗಿಡುತಿರ್ದಳಾಕ್ಷಣಂ ॥ ೭೯

ಅಂತು ಮುಂಗಿಡುತಿರ್ದಳಂ ಕಂಡು ಗುಲ್ಮದಿಂ ಪೊಱಮಟ್ಟು

ನಿನ್ನಕ್ಷಿದ್ವಿತಯಂ ಸ್ಮರಾಸ್ತ್ರತತಿಯುಂ ನಿನ್ನಾನನಂ ಚಂದ್ರನಂ ।
ನಿನ್ನುಚ್ಚಸ್ತನಮೆಯ್ದೆ ಮನ್ಮಥನ ಕೇಳೀಕಂತುಕದ್ವಂದ್ವಮುಂ ।
ನನ್ನಂಗಂ ರತಿಯಾರ್ಪನೀಯುಳಿಗೊಳಲ್ ನೀಂ ಲೇಸನೇಗೆಯ್ದೆ ಕೇಳ್ ।
ನಿನ್ನಂ ವೈರಿಗಳುಂಟೆ ಮಾನಸಿಜಗೊಂದೊಲ್ದು ಬಂದಪ್ಪಿದೆಂ ॥ ೮೦

ಅಂತಪ್ಪಿ ಸತಿಯುಂ ನೋಲ್ಪಿನಳ್,

ಸರಸಿಜನೇತ್ರೆಗುಜ್ಜಳಿಪ ತುಂಬಿಗುರುಳ್ ಕವುನೀಯಪಲ್ಲವಾ ।
ಧರೆಗೆ ಪಿಕಸ್ವನಂ ನವಸುಧಾಕಳಶಸ್ತನಿಗಾಕಪ್ರೋಳಬಂ ॥
ಧುರಮಣಿವರ್ಣಂ ಪುಳಿನಪೂರ್ಣಸಿತಂಬೆಗೆ ರಾಜಹಂಸವುಂ ।
ಧರಗತಿ ಸಂತತಂ ವೆಱೆನ್ದುದೆಂಬುದು ನೋಡಲಿದಾವ ವಿಸ್ಮಯಂ ॥ ೮೧

ಅಂತೆಸೆವ ಕಾಂತೆಯುನಾಲಿಂಗನಂಗೆಯ್ದನಂತರಂ

ಘಟಕುಚೆ ಪ್ರಷ್ಕರಿಕೆಯು ನುಡಿ ।
ದಿಟವಾಯ್ತಿಂದಿನಗೆನುತ್ತವಳ್ ನನ್ನನುರ ॥
ಸ್ತಟದೊಳವುರ್ಪ್ಪಿ* ರತಿಲಂ ।
ಪಟದಿಂದಿರಲಾಗಳಱುದೆನಾನಿಂಗಿತನುಂ ॥ ೮೨

ಅಂತಿಂಗಿತಮನಱಿದು,

ರಾಜಶುಕಂ ಕೆಂದಳಿರ್ಗಳ ।
ನೋಜೆಯಿನೊಪ್ಪಿಸೆಯೆ ಸರ್ದುಕುಪಂದದಿನಾಗಳ್ ॥*

ಕೂಜಿತರವದಿಂ ಕರ್ದುಕೆದೆ ।
ನಾಜಂಗವುಕಲ್ಪಲತೆಯ ಬಿಂಬಾಧರಮುಂ ॥ ೭೯

ಅಂತಧರಗ್ರಹಣಂಗೆಯ್ದು,

ನಿಯಮುಸ್ಥಾನವುನಂಟಿ ಸತ್ವದೊದವಂ ಮುಂ ನೋಡಿ ಕಾಲಪ್ರಬೋ।
ಧೆಯನಾರಯ್ದು ನಿರಂತರಪ್ರಕೃತಿಯಂ ಭಾವೇಂಗಿತಜ್ಞಾನನಿ ॥
ರ್ಣಯದಿಂ ಭಾವಿಸಿಯಾತ್ಮಶುಕ್ಲಭರವುಂ ಹೃನ್ಮಾರುತವ್ಯಾಪ್ತಿಯೇ ।
ಟ್ಟಿಯಿನಾಂತಂಗನೆಯಿಚ್ಛೆಯಂ ಸಲಿಸಿದೆಂ ಸಂಭೋಗದೊಳ್ ಯೋಗದೊಳ್

ಸಹಜಪ್ರೀತಿ ಮನೋಹರಾಧರಮಣಿಪ್ರೌಢಚ್ಚುಂಬನಂ ಕುಂತಳ ।
ಗ್ರಹಣಂ ಕೋವುಳದೀನಚಾಟುವಚನಂ ಜಿಹ್ವಾಂಕುರಾಚ್ಛೋಟನಂ॥
ವಿಹಗಾನೀಕಲಸನ್ಮಹಾಗಳರವಂ ಲಜ್ಜಾಭಿಭಂಗಂ ಮುಹು ।
ರ್ಮುಹುರಾಲಿಂಗನನುಂತದೇಂ ಮಿಱುದುದೋ ಸಂಭೋಗಕೋಳಾಹಳಂ॥

ಆಸಂಭೋಗದೊಳ್

ನೆಲಸಿದ ಲಜ್ಜೆಯೋಸರಿಸಿ ಘರ್ಮಜಲಂ ಪೊಱಪೊಣ್ಮಿ ಬುದ್ಧಿ ಸಂ ।
ಚಲಿಸಿ ಪೊದಳ್ದಿ ಲಲ್ಲಿ ಮಿಗಿಲಾಗಿಯುಸಿರ್ ನಿವಿರ್ವೆತ್ತು ಲೋಚನೋ ॥
ತ್ಪಲವುರೆಮುಚ್ಚಿಯಪ್ಪಗೆ ಸಡಿಲ್ದ ಮನಂ ಬೆಱಗಾಗಿ ಪ್ರಪ್ಪಕೋ ।
ಮಲೆ ಮರವಟ್ಟರಲ್ ಸಮರತಿಸ್ಥಿತಿಯಪ್ಪೊಲಾಂ ನೆಗಳ್ಚಿದೆಂ ॥ ೮೦

ಅಂತು ಸಮರತಿಯಾಗೆ

ವಿಲಸತ್ಪಕ್ಷ್ಮವಿಲೋಚನಂ ಶ್ರಮಜಲವ್ಯಾಕೀರ್ಣಗಾತ್ರಂ ಮತಿ ।
ಸ್ಖಲನಂ ಶೀರ್ಣಚಳಾಳಕಂ ಶಿಥಿಲವೇಣೀಬಂಧಮುತ್ತುಂಗನಿ ॥
ರ್ಮಳಬಿಂಬಾಧರಮಾಸ್ಯಸಂಭವನುದಂ ಚಿತ್ತಪ್ರಸನ್ನಂ ಮನ ।
ಕ್ಕೊಲವಂ ಪೆತ್ತುದು ಕಾಂತೆಯಾಕೃತಿ ಕರಂ ರತ್ಯಂತದೊಳ್ ಸಂತತಂ॥ ೮೧

ಅಂತಾದ ರತ್ಯಂತಸಮಯದೊಳ್ ನಲ್ಲಳಂ ಲಲ್ಲೆನುಡಿಯಿಂದೆನಸುಂ ಪರಿ
ತೋಷಂಬಡಿಸಿ ನಿಮಗಾದೊಡೆ ಸಂಕಲ್ಪಸಿದ್ಧಿಯಾಯ್ತಾಂ ದೇವಿಯರಿಂ ಬೀ
ಳ್ಕೊಂಡೆಪೆನೆಂಬುದುಂ,

ಅಲರ್ದ ಮುಖಾಬ್ಜವೆಯ್ದೆ ಕುಡುಬಾಡಿ ಸಿತಾಕ್ಷಿಯುಗಂ ಬೆಱಿಂಗುವೆ ।
ತ್ತಲಘುನಿತಂಬದೊಳ್ ಮುಡಿ ಸಡಿಲ್ದ ತನುಪ್ರಭೆ ಕಂದಿ ಬುದ್ಧಿ ಸಂ ॥

ಚಲಿಸಿ ಮುದಂ ತೊಲಂಗಿಯನುರಾಗರಸಂ ತವೆ ಬತ್ತಿಯಾಕ್ಷಣಂ ।
ಲಲನೆ ವಿಷಾದದಿಂ ದುಗುಡಮಂ ತಳೆದಳ್ ಮುರವಟ್ಟರಿಂದದಿಂ ॥ ೪೪

ಅಂತವಳ್ಗಾದ ದುಗುಡವನಾಂ ಕಂಡು

ಇನಿತುದ್ವೇಗಕ್ಕದೇಂ ಸಮ್ಮದಮಬಲೆಯೆನಲ್ಕಾಮುಕೈವಲ್ಗದೊಳ್ಪಂ ।
ದೆನಗೀಗಳ್ ಸಾರ್ದುವೇಂ ಮತ್ತ ಧನುಪತಿಯ ದುಸ್ಸಂಗದುರ್ವಿದನಾಯಾ ॥
ತನದೊಳ್ ಬೇಱ್ಪಿಂದಮಾಯಿತ್ತೀತೆಱನನಱಿವು ಮುಂಗೆಟ್ಟಳಂ ಬಾಲೆಯುಂ ದುಃ ।
ಖಿನಿಯುಂ ನೀಂ ಕಾವುದೆಂದಂಗನೆ ಮಿಗೆ ಸುರಿದಳ್ ಭೋರೆನಲ್ ಕಣ್ಣ ನೀರಂ ॥ ೪೫

ಬಲುಕ್ಕಾನನಳ ಕಣ್ಣ ನೀರಂ ತೊಡೆದಿಂತೆಂದೆಂ:—

ನಿಜಪತಿಗೆನ್ನ ಚಿತ್ರಪಟದೊಪ್ಪವನೊಯ್ದನೆ ತೋಱಲಂತವಂ ।
ತ್ರಿಗದೊಳತ್ಯಪೂರ್ವಮೆನಿಸಿರ್ಪ ವಿಚಿತ್ರದ ರೂಪಿದೆಂತು ವಾ ॥
ರಿಜಮುಖಿ ನಿನ್ನ ಕೆಯ್ಯೞಗೆ ಸಾರ್ದುದು ಪೇೞಿನೆ ಪೇೞ್ ಧರಿತ್ರಿಗ ।
ದ್ರಿಜೆಣೆ ಧನುರ್ಧರಕ್ಷ್ಮಿತೆಯೆನಿಪ್ಪವಳಿಂದೆನಗೆಂದು ಕಾಮಿನೀ ॥ ೪೬

ಅಂತು ಚಿತ್ರಪಟವನಂ ತೋಱಿ ಇದನೆನ್ನ ಕುಲಗುರುವಪ್ಪ ಧನುರ್ಧರ ಕ್ಷ್ಮಿತೆಯೆಂಬ ಭಿಕ್ಷುಕಿ ಕೊಟ್ಟ ಮತ್ತ ವಿಂತೆಂದಳೆಂದು ಪೇೞ್ದ,

ಈರೂಪಂ ಪಿಡಿದೊಂದು ಹೋಮವನನಲಂಪಿಂ ಗಂಧಕಸ್ತೂರಿಕ ।
ಪ್ರಾರಾಜ್ಯಂಬರನೂಸಸಂತತಿಗಳಿಂ ಮಾಡಲ್ಕೆ ತಚ್ಚಿತ್ರದಾ ॥
ಕಾರಂ ಕೂರ್ತೆನಗಪ್ಪದಾಂ ಪದೆಪಿನಿಂದಪ್ಪಲ್ಕೆ ನಿನ್ನಂ ತದಾ ।
ಕಾರಂ ಕೇೞ್ ನಿನಗಪ್ಪದಾಂ ಸಹಜದಿಂದಿರ್ಪೆಂ ಧರಾವಲ್ಲಭಾ ॥ ೪೭

ಇದು ನಿನ್ನಾಪ್ತಪ್ರಧಾನರ್ಗಖಿಳವರಿಜನಕ್ಕಾತ್ಮಚಿತ್ತಕ್ಕೆ ಪೆಂಪಿಂ ।
ಮುದವಪ್ಪಂತಾದೊಡಾಂ ಹೋಮವನೆಸಗಿದಪೆಂ ದೇವ ನೀವೆಲ್ಲರುಂ ಕೇ ॥
ೞ್ದ ದಯಾಚಿತ್ತಪ್ರಸಾದಂಗೊಡಿಮೆನಲರಸ ತಾನೊಡಂಬಟ್ಟೆನಿಂ ಮಾ ।
ಟ್ಪಿದು ಮುಂತೀಹೋಮವನುಂ ಕಾಮಿನಿಯುಪವನದೊಳ್ ವಸ್ತು ಸಾಮಗ್ರ್ಯದಿಂದಂ ॥ ೪೮

ಎಂಬುದುಂ,

ಹೋಮಸವಮಾಪ್ತಿಯೊಳಿನಗೆ ಮು ।
ಹಾಮಂತ್ರದಿನಾದ ಮೂರ್ತಿಯುಂ ನೀನಗೀಯುಲ್ ॥

ಭೂವಿಖಾಶ ನಿನ್ನ ಕರೆವೆಂ ।
ಹೋಮಸಮಭ್ಯರ್ಣಘಂಟಿಕಾಧ್ವನಿಯಿಂದಂ ॥ ೪೯

ಆಘಂಟೆಯ ಧ್ವನಿಯಾಗಲೊಡಂ ನೀಂ ಹೋಮಕುಂಡಕ್ಕೆ ಬಂದೊಡಾಂ ನಿನ್ನನಪ್ಪಲಿನಗಾದ ಚಿತ್ರದ ರೂಪು ನಿನಗಾಗಿಯಾಂ ಮುನ್ನಿನಂತಿರ್ಪೆನೆಂದು ಭಿಕ್ಷುಕಿ ಪೇಳ್ದಿಳೆಂದು ಪೇಟ್, ಮೇಲಪ್ಪ ಕಾರ್ಯಮನಾನೆಸಗುವೆನೆಂದು ಮತ್ತಂ,

ಕೋಮಳೆ ನೀನೆಸಗಿದ ತ ।
ದ್ದೋಷದ ಘೂರ್ಣೋತ್ಕರಂ ಕರಂ ತಲೆದೋಱಲ್ ॥
ಪ್ರೇಮದೊಳಾನಲ್ಲಿಗೆ ಬಂ ।
ದುಂ ಮಾಡುವ ತೆಱನನಱಿಪುವೆಂ ನಿನಗಾಗಳ್ ॥ ೪೭

ಎಂದಿದೆಲ್ಲನುಂ ಕಲ್ಪಸುಂದರಿಗೆ ಕಲಿಸಿಯನಂತರಂ,

ಆಂ ಬಂದು ಪೋದ ಪಜ್ಜೆಯ ।
ನಂಬುಜಮುಖಿ ಪೆಱನದೊರ್ಬನಱಿಯದ ತೆಱದಿಂ ॥
ಬೆಂಬಱಿಯಿಂ ಪ್ರಷ್ಕರಿಕೆಯಿ ।
ನಿಂಬಿಂ ತೊಡೆಯಿಸುವುದೆನುತುವಾಂ ಪೊಱಮಟ್ಟೆಂ ॥ ೪೮

ಅಂತು ಪೇಟ್ಟಾನಾವನದಿಂ ಪೊಱಮಟ್ಟತ್ತಲ್ ಬಂದೆಂ. ಅವಳತ್ತಲ್ ತನ್ನ ಪತಿಯ ಸವಿಾಪಕ್ಕೆ ಪೋಗಿ ಯಾಂ ಪೇಳ್ದಿಂದದಿಂ ವಿಕಟವರ್ಮಂಗೆ ಪೇಳ್ದೊಡವನದಕೆರ್ೂಡಂಬಟ್ಟರೆ

ದೇವಿಯದೊಂದಪೂರ್ವತರಮೂರ್ತಿಯನೊಪ್ಪಿರೆ ಮಾಡುವಳ್ ಗಡಂ ।
ಭೂವರನಪ್ಪ ತದ್ವಿಕಟವರ್ಮನೃಪಂಗಿದಱೊಳ್ ವಿತರ್ಕಮಿ ॥
ನ್ನಾವುದೆನುತ್ತ ಶೇಷಜನನುಲ್ಕ್ಷರಿವಿಟ್ಟಿರೆ ಕಲ್ಪಸುಂದರೀ ।
ಭಾವಕಿ ಹೋಮಮಂ ಬನದೊಳಿೂರ್ಬಳಿ ಕೇಳ್ ಸಮಕಟ್ಟಿದಳ್ ನೃಪಾ ॥

ರೂಪಪರಾವರ್ತನವಿವಿ ।
ಧೋಪಾಯಮನೆಸಗುವಳ್ ಗಡಂ ನರನಾಥಂ ॥
ಗೋಪಳ್ ಮಣಿಮಂತ್ರೌಷಧಿ ।
ಗೇ ಪೊಸತಾಧಿಕ್ಯಮೆಂದು ಗುಂಪೊಸೆವಿನೆಗಂ ॥ ೫೨

ಅಂತಖಿಳಜನವುತ್ಕೃಷ್ಟಾರ್ಘ್ಯಂಬಡುತಿರಲಗುರುಚಂದನಕುಂಕುಮಕರ್ಪೂ
ರಕಸ್ತೂರಿಕಾದಿಸುಗಂಧವಸ್ತುವಂ ಸಿತಸರ್ಷಪತಿಲವ್ರೀಹಿಯವಾದಿಹೋ
ಮಧಾನ್ಯಮುಂ ಘೃತದುಗ್ಧಪಶುವಸಾದಿರಸದ್ರವ್ಯವುಂ ಚೀನಿವುಹಾಚೀನಿದೇ
ವಾಂಗದುಕೂಲಾದಿಪಟಕರ್ಮಮುಂ ಖದಿರದೇವದಾರುನಿಂಬಲವಂಗಾದಿಸುಗಂ
ಧಶುಷ್ಕಚಯವುಮುಂ ಹೋಮಸಾಧನಂಗಳಾಗಿ ಮಾಡಿ,

ವನಜಮುಖಿ ವಿಕಟವರ್ಮನ ।
ತನುಸಾಧನವುಂ ಚಿತಾಗ್ನಿಯೊಳ್ ಬೇಳ್ವಂತಾ ॥
ವನವುಧ್ಯದಗ್ನಿಕುಂಡದೊ ।
ಳನುನಯದಿಂ ಬೇಳ್ದಳಿಂಬುದ ತತ್ಸಾಧನವುಂ ॥ ೯೮

ಸಕಲಸುಗಂಧವಸ್ತುಗಳನಂಗನೆ ತದ್ವನವುಧ್ಯದೊಳ್ ಹವಿ ।
ಪ್ರಕರವೆನಲ್ಕೆ ಹೋಮವಿಖಿಯೊಳ್ ಮಿಗೆ ಬೇಳಿಂಡೆ ಧೂಮದೇಳ್ಗೆ ದಿ ॥
ಚ್ಚಿಕರದೊಳುರ್ಬಿ ಪರ್ಬಿ ಬರೆ ನಿಶ್ಚಯದಿಂದನಿಶಂ ಸುಗಂಧಕಾ ।
ತುಕಮೆನಿಸಿತ್ತವಲ್ಲದೊಡೆ ಗಂಧಗುಣಂ ಧರೆಗೆಂತು ಸಾರ್ದುದೋ ॥ ೯೯

ಆಹೋಮಧೂಮಸ್ತೋಮಂ ವ್ಯೋಮಮಂಡಲಮುಂ ದಿಶಾಮಂಡಲಮುಂ
ಮಂಡಳಿಸಲದನಾಂ ಕಂಡು

ಭರದಿಂ ಬಂದೆನ್ನ ಮೈಗಾಲ್ಗಳನಮುಳಡಿಯಿಂ ಮೆಟ್ಟಿ ದೂಂಟಕ್ಕಿ ಪ
ಸಾತ್ತಂ । ಬುರುಹಾಗ್ರಶ್ಲೇಷದಿಂ ಬಾಗಿಸಿ ನಯನದ ಡಾಳಂ ಮದೀಯಾಸ್ಯ
ದೊಳ್ ಪ ॥ ರ್ಬಿರೆ ಮಧ್ಯಂ ಬಳ್ಕಿ ಕಕ್ಷಂ ಪೊಗರನುಗುಳಿ ರಾಗಂ ತು
ಟಿಂಕಲ್ಕೆ ತಾಮ್ರಾ । ಧರಮಂ ತತ್ಕಾಂತೆ ಪೆಂಪಿಂ ಮುಗುಟಿದ್ದ ಮುಗುಟಿ
ವಳ್ ಚುಂಬನಂಗೆಯ್ದಳಾಗಳ್ ॥ ೯೬

ಅಂತು ಚುಂಬನಂಗೆಯ್ದನಂತರಮಿಂತೆಂದಳ್:—

ನೀನೆನ್ನೊಳ್ ಪೇಟ್ದ ಕ್ರಮ ।
ಮೇನುಂ ತಪ್ಪದವೊಲೆಸಗಿದೆಂ ಹೋಮಮನಿ ॥
ನ್ನೀನೆಸಪ್ತತ್ತರಕಾರ್ಯವಿ ।
ಧಾನಮೆನೊಲ್ದಂತೆ ಮಾಡ್ಪಿದೆಲೆ ಸುಕುಮಾರಾ ॥ ೯೭

ಎಂದವಳ್ ಮುಗುಳ್ತಾಂಡಲಿಂಗನಂಗೆಯ್ಯೆ,

ಕಾಲಾತಿಕ್ರಮವಾಗದೆ ।
ಕಾಲನ ಫಿಲಯಕ್ಕೆ ವಿಕಟವರ್ಮನನೀಗಳ್ ॥
ಬಾಲೆ ಕಳಿಪಿದಪೆನೆಸೆವ ತ ।
ಮಾಳದೊಳಿರ್ದ್ಧಿಸೆಂದೆನಾನಂಗನೆಯಂ ॥ ೯೪

ಅಂತವಳನೊಂದು ತಮಾಲಗುಲ್ಮದೊಳಿರಿಸಿಯಾಂ ಹೋಮಕುಂಡದ ಸವಿಾಪಕ್ಕೆ ಬರೆ,

ವಿವಿಧಜ್ವಾಳಾಕಳಾಪಂ ತುಡುಕೆ ಗಗನಮಂ ಧೂಮಸಂತಾನಕಂ ದಿ ।
ಗ್ವಿವರಕ್ಕೆಯ್ತಪ್ಪಿನಂ ಪನ್ನಗನಿಲಯಮನಂಗಾರದುಗ್ರೋಷ್ಣವುಂ ತೀ॥
ವುವಿನಂ ಪಾಯ್ತಪ್ಪಿನಂ ಬಲ್ಗಿಡಿಗಳ ಗಡಣಂ ರಂಜಿಸುತ್ತಿರ್ಪ ಹೋಮಾ।
ಗ್ನಿವಿಶೇಷಂ ಮನ್ಮನಕ್ಕಚ್ಚರಿಯನೆಸಗಿದತ್ತಾಗಳುರ್ವೀವರೇಣ್ಯಾ ॥ ೯೯

ಅಂತಳುರ್ವ ಹೋಮಕುಂಡದ ಸವಿಾಪದೊಳ್ ಕುಳ್ಳಿರ್ದು

ಆವಿಕಟವರ್ಮನೃಪತಿಯ ।
ಜೀವನಮಲ್ಲಾಡುವಂತೆ ಘಂಟೆಯನಾಗಳ್ ॥
ಭಾವಿಸಿಯಲ್ಲಾಡಿದೆನಾ ।
ಶಾವಳಯಮನದಱ ಘೋರರವವೆಯೆಯ್ದುವಿನಂ॥ ೧೦೦

ಅದು ಮಿಗೆ [ಘೋಣ್ಮತಂ] ವಿಕಟವರ್ಮನ ಸಂಸೃತಿಭಾಗ್ಯಮೆಯ್ದ
ತೀರ್ದುದನಱಿಘ್ರಂದು ದುಧ್ವರ್ನಿಕೃತಾಂತಲುಲಾಯಗಳಪ್ರಬದ್ಧಸಂ ॥
ಪದನವಘಂಟಿಕಾಧ್ವನಿ ಯುಗಾಂತಮಹೇಶ್ವರನಗ್ರಹಸ್ತದು ।
ರ್ಬಿದ ಡಮರುಪ್ರತಿಧ್ವನಿಯೆನಲ್ ಮಿಗೆ ಪೊಣ್ಮಿತು ಘಂಟಿಕಾರವಂ॥ ೧೦೧

ಆಘಂಟಿಕಾಧ್ವನಿಯಂ ವಿಕಟವರ್ಮಂ ಕೇಳ್ದು

ಮಾರಿಯ ಮಂದಿರಕ್ಕೆ ಕುಱಿ ಸಿಂಹಗೃಹಕ್ಕೆ ಮತಂಗಜಂ ಯನು ।
ದ್ವಾರಕೆ ಪಾತಕಂ ವಿಷಯಸಂತತಿಯಾಪೆಗೆ ಯೋಗಿ ಬರ್ಪವೋಲ್ ॥
ಘೋರನೆ ಬರ್ಪನೇ ಮನದ ಸಂಭ್ರದಿಂ ನತೆತಂದನೊಲ್ದ ಘಂ ।
ಟಾರವದತ್ತಲಾವಿಕಟವರ್ಮನೃಪಂ ಸುಭಗತ್ವದಾಸೆಯಿಂ ॥ ೧೦೨

ಅಂತು ಬಂದು ಹೋಮಸವಿಾಪದೊಳಿರ್ದಿನ್ನಂ ಕಂಡು

ನಿಬಿಡಮತಿ ನೃಪವರಂ ಬಂ ।
ದು ಬನದೊಳಾಂ ಬೇೞ್ದ ಹೋಮವನಂ ಕಂಡೀಗಳ್॥

ಅಬಲೇ ಪೇೞ್ದಿಂತಾಯ್ತಂ ।
ದು ಬೆಕ್ಕಸಂಬಟ್ಟು ನೋಡಿದಂ ಮದೂಪಂ ॥ ೧೦೩

ಅಂತೆನ್ನಂ ನೋಲ್ಪಿ ವಿಕಟವರ್ಮನನಾನಿಂತೆಂದೆಂ:—

ಮುನ್ನ ಮತೀವಕಷ್ಟಮೆನಿಪಾಕೃತಿಯಾಗಿಯುಮೊಲ್ದನೇಕಧೂ ।
ರ್ತೋನ್ನತಿಯಂ ನೆಗಟ್ಟಿಪೆ ನೃಪಾಲಕ ಕೇಳ್ ನಿನಗಿಂದು ದೈವದಿಂ ॥
ಚೆನ್ನ ತರಂ ಬರಲ್ ದ್ವಿಗುಣಮಾಗದೆ ಮಾಣ್ಪುದೆ ನಿನ್ನ ಧೂರ್ತು ಪೇರ್ಚ್ ।
ಮುನ್ನಿನ ಚೆಂದನುಲ್ಲದೊಡೆ ತದ್ವಿಧಮುಂ ನಿನಗೀವೆನೀಕ್ಷಣಂ ॥ ೧೦೪

ಎಂದು ಮತ್ತಂ,

ನಿನಗಾದೊಡೀಗ ದೇವಾಂ ।
ಗನೆಯರನನುಭವಿಪ ಚೆಲ್ವ ರೂಪಾದಪ್ರದೆ ॥
ನ್ನ ನುದಾಸೀನಂ ಮಾಡದೆ ।
ಮನವೊಸೆದಿರ್ಪೊಡೆ ಮದೀಯಮೂರ್ತಿಯನೀವೆಂ ॥ ೧೦೫

ನೀನಿಂತು ಪೇೞ್ವುದಂ ಮ ।
ತ್ತಾನೆಂತುಂ ವಿಾಱುದಪ್ಪೆನಾದೊಡೆ ಬಱಿಕಿಂ ॥
ತಾನಿಹಲೋಕಸುಖಾತಿಶ ।
ಯಾನುನಯಕ್ಕೆಯ್ದೆ ಬಾಧ್ಯನಾಗೆನೆ ಸತತಂ ॥ ೧೦೬

ಎಂದವಂ ಪೇೞಲ್ ಬಱಿಕಾನಿಂತೆಂದೆಂ:—

ಮುನ್ನೆನೆ ಕಾರ್ಯಮುಳ್ಕೊಡ ।
ಮೆನ್ನೊಳ್ ಪೇೞ್ದಿರಿಸು ರೂಪಸಲ್ಲಟಮಾಗಲ್ ॥
ನಿನ್ನ ಮತಿ ಚಲಿಸಿ ನಿಜಕಾ ।
ರ್ಯೋನ್ನತಿ ಕೆಡುಗುಂ ಬಱಿಕ್ಕ ಕೇಳ್ ಭೂಪಾಲಾ ॥ ೧೦೭

ಎಂಬುದುಮವಂ ತನ್ನೊಳ್ ಮುನ್ನಂ ನಿಶ್ಚಯನಾಗಿರ್ದ ಕಾರ್ಯಮು ನೆನ್ನೊಳಂತೆಂದಂ:—

ಉಟುವಂ ಪ್ರಹಾರವರ್ಮಂ ।
ಕಿಱಿಯಯ್ಯಂ ತದ್ಗರೇಶನಿನ್ನಾತನನೆ ॥
ಲ್ಲಿ ಪುದಂತೆ ಜೀರ್ಣವಾಯ್ತಂ ।
ಬಱಿಕೆಯ ನೆವದಿಂದೆ ಕೊಲ್ವುದಾಬಂಗನದೊಳ್ ॥ ೧೦೮

ಕತಪಲಿಯನಂತಪಲಿಗಳ್ ।
ಪ್ರತಿಪಕ್ಷಿಗಳಾಗಿ ತವ್ಮೊಳಿರ್ದ ಪರಾಶೂ ॥
ದ್ರತಮುರನೊರ್ಬರನೊರ್ಬರೂ ।
ಳತಿವುಥನವುನೆಸಗಿ ಕೊಳ್ವುದವರೊಡವೆಗಳಂ ॥ ೧೦೯

ಪದೆಪಿಂದೆ ಧನಜನಂ ಪೆ ।
ರ್ಚಿದ ಪಾಂಡ್ಯಕದೇಶವೆಲ್ಲವುಂ ಕಿಡಿಸೆಂದಾ ॥
ಮೊದಲೊಳ್ ಪೇಟ್ಟೆನದಿನ್ನಾ ।
ಗದೆಂದು ಪೇಳ್ವೆಂ ಮಗುಟಿದ್ದ ಸಚಿವರೊಳೊಲವಿಂ ॥ ೧೧೦

ಮಣಿಯೊಂದಸಿಲ್ಲಿಗೊರ್ವಂ ।
ವಣಿಗ್ವರಂ ತಂದನವಱ ಮೂಲ್ಯಮನಿಂತೀ ॥
ಕ್ಷಣದೊಳ್ ಲಾಭೆವಮಪ್ಪಂ ।
ತಣಿಯರವಾಡುತ್ತೆ ಕೊಳ್ವುದೆಂದಾಂ ಪೇಟ್ಟೆಂ ॥ ೧೧೧

ಎಂದೀರಹಸ್ಯಕಾರ್ಯಮನೆಲ್ಲಮನೆನಗೆ ಪೇಲಿಲನಂತರಂ

ನಿನಗಿಂದಿತ್ತೆನಿದಲ್ತೆ ಸಂಸೃತಿಯು ಸೌಖ್ಯಂ ಜೀವನಂ ನಿನ್ನ ಪ್ರಾ ।
ರ್ಜನಿಬದ್ಧಸ್ಥಿತಿ ಪುಣ್ಯಪಾಪಫಲಮಿನ್ನೆಂತಿರ್ದುದಂತಿರ್ಕೆ ಪೋ ॥
ಗೆನುತುಂ ತಳ್ಕಿಸಿಕೊಂಡು ಪೋವುಶಿಬಿಯೊಳ್ ತದ್ಭೂಪನಂ ನೂಂಕಿ ಚಂ।
ದನಕಪ್ರೂರವನಾಂ ಬಿಸುಟ್ಟೆನದಱೊಳ್ ಕಾಱೀಜಿದಂತಿರ್ಪವೋಲ್॥೧೧೨

ಅಂತಾನವನಂ ಪೋವುಶಿಬಿಯೊಳ್ ನೂಂಕಲವಂ ಛಸ್ಮಾವಶೇಷನಾಗ
ಲೊಡಂ,

ಅತಿಸಾಹಸನಿಷ್ಕಾರ್ಯೋ ।
ನ್ನತಿಯಿಂ ತದ್ವಿಕಟಸರ್ಪಭೂಪನ ಮರಣಾ ॥
ಸ್ಥಿತಿಯಂ ಕಂಡಂಜಿ ಮನೋ ।
ಗತಚಿಂತೆಯೊಳಿರ್ದ್ದ ನಡುಗಿವಳ್ ಸತಿಯಾಗಳ್ ॥ ೧೧೩

ಅಂತು ಭಯಾತುರೆಯಾಗುತ್ತುಂ ಬಂದು

ಆದಿಯೊಳಂಗಜಂ ಜನಕನಾಗಿ ಕರಿಂ ನಿನಗಿತ್ತನೆನ್ನನಿಂ ।
ದಾದರದಿಂದೆ ಪೋವುಶಿಬಿಸಾಕ್ಷಿಯೊಳಿಪ್ಪಿರಲೆನ್ನನಾಂ ನಿಜಾ ॥

ಹ್ಲಾದದಿನಿತ್ತೆನೆಂದಬಲೆ ತನ್ನನುರಾಗದೊಳೆನ್ನನಪ್ಪಿ ಸಂ ।
ವೋದದೊಳೋಷ್ಠಮಂ ಪಿಡಿದು ಚುಂಬಿಸಿದಳ್ ತಣಿವಪ್ಪ ಮಾಜ್ಕೆಯಿಂ॥

ಅಂತಪ್ಪಿದಳಂ

ಮಗುಚಿ*ದ್ದಾಲಿಂಗನಚುಂಬನಕ್ರಿಯೆಗಳಿಂ ಸಂತೋಷಸಂಭೂತಸೂ ।
ಕ್ತಿಗಳಿಂ ಪ್ರೇಮರಸಾತಿರೇಕಗತಿಯಿಂದಾನಾಗಳುತ್ಸಾಹದಿಂ ॥
ಮೃಗಣಾಬಾಕ್ಷಿಯ ಭೀತಿಯುಂ ಬಿಡಿಸಿ ಪೊಂಪಿಂದವಳ್ಗೂಡಿ ರಾ ।
ಜಗೃಹಕ್ಕೆಯ್ದಿದೆನೆಲ್ಲರೀಕ್ಷಿಸುತಿರಲ್ ಮುದ್ದೀಪಕೆಯ್ತಪ್ಪವೋಲ್ ॥ ೧೧೫

ಪಳಿಕಿನ ಬದ್ಧಭೂಮಿಕೆಯಿನುಜ್ಜ್ವಲಶಂಖನಿಷ್ಪನ್ನಭಿತ್ತಿಮಂ ।
ಗಳಮಯನವ್ಯಚಿತ್ರತತಿಯಿಂ ಮಣಿತೋರಣನಿಬದ್ಧಪುತ್ರಿಕಾ ॥
ಕುಳದಿನನೂನನಿರ್ಮಳವಿತಾನಸಮುನ್ನತಶೋಣರತ್ನಸ ।
ತ್ಕಳಶದಿನೊಪ್ಪತಿಪರ್ ನೃಪಗೇಹಮನಾಂ ಪುಗುತಂದೆನುರ್ವಿಪಾ ॥ ೧೧೬

ಸತಿ ಬಂದೆಸಗಿದ ಹೋವೋ ।
ತ್ಥಿತಧೂಮಸ್ತೋಮಮೆಯ್ದೆ ಪರ್ಬಲ್ಕೆ ತಿರೋ ॥
ಹಿತನಾದನೆಂಬ ತೆಱದಿಂ ।
ದೆ ತರಣಿ ಸುಪರಾಂಬುರಾಶಿಯಂ ಮಱೆಗೊಂಡಂ ॥ ೧೧೭

ಅಂತು ಸೂರ್ಯಾಸ್ತಮಾನನಾಗಲೊಡಂ ಸಜ್ಜೆಯ ಮನೆಯೊಳ್ ಕಲ್ಪ ಸುಂದರಿಸಹಿತಮಮನಿರ್ದು,

ಅಂತಃಪ್ರರವನಿ*ರ್ಗಳ ಪೆಸ ।
ರಂ ತರತರದಿಂದೆ ಕಲ್ಪಸುಂದರಿಯಿಂ ಕೇ ॥
ಳ್ದಂತವರೆಲ್ಲರನುಚಿತಾ ।
ರಂ ತವೆ ಮೀಱಿಯು ತ್ತಿ ಕರೆಸು ಮಿಗೆ ಮನ್ನಿಸಿದೆಂ ॥ ೧೧೮

ಅಂತನರಂ ವರ್ನಿಸಿಯಾತ್ರಿಯಂ ಕಳಿಯೆ,

ಉದಯಾದ್ರಿಸಿಂಹಪೀಠಾ ।
ಭ್ಯುದಯನನೊಸೆದೆಯ್ದಿ ಪಂಕಜಪ್ರಿಯನುರ್ವಿ ॥
ಮುದನನೊಡರ್ಚಿದನಂತ ।
ಲ್ತೆ ದಲುತ್ತಮರಪ್ಪ ಪುರುಷರಾದವರ್ಗುದಯಂ ॥ ೧೧೯

ಅಂತು ಸೂರ್ಯೋದಯವಾಗೆಲಾನ ದಿನವ್ಯಾಪಾರಮಂ ತೀರ್ಚಿ ನನರ
ತ್ನರಂಜಿತನವಮಣಿನಿಯವೇದಿಕಾಸುಧಾಮಯಭಿತ್ತಿಭಾಗದಿಂ, ಸ್ಫಟಿಕಪಾಷಾ
ಣಘಟ್ಟಿತಕುಟ್ಟಿಮತಳದಿಂ, ಕದಂಬಮಣಿಕಮನೀಯಲಂಬಿತಭೂಷಣದಿಂ,
ದೀಪಿತಸೋಪಾನದಿಂ ವೆಜ್ಜವಾಸ್ಥಾನಮಂಟಪಕ್ಕೆ ಕಲ್ಪಸುಂದರಿಸಹಿತಂ
ಬರಲೆನಗಿದಿರೇಳ್ವಿ ಪ್ರಧಾನಪಸಾಯಿತಸಾಮಂತಸಂಧಿವಿಗ್ರಹಿಮಂಡಲಿಕವ
ನ್ನೆಯರಾಜಸ್ರತ್ರರಾವೃತರಂ ತಂತನ್ಮ ಸ್ಥಾನದೊಳ್ ಕುಳ್ಳಿರವೇಟಿತುಂ ಕ
ಲ್ಪಸುಂದರಿಯುವಾನುಂ ಸಿಂಹಾಸನಮನಲಂಕರಿಸಿಯೂಂ ಕುಳ್ಳುರ್ದು ಪ್ರ
ಧಾನರ ಮುಖಮಂ ನೋಡಿ,

ಮುನ್ನೆಡೆಗೊಂಡ ದುರ್ಗ್ಗಣಚಯಂ ವಿಕಟಾಂಗಮದೆಯ್ದೆ ಪೋಗಿ ಸಂ।
ಪನ್ನವೆನಲ್ಕೆ ಸದ್ಗುಣಗಣಂ ಸುಭಗಾಕೃತಿ[ಯೆಂಬಿವೆ]ನ್ನೊಳೀ ॥
ಗನ್ನೆಲಸಿತವರ್ಕ್ಕಸುಗುಣಂಗಳಿನತ್ ನಿಜಕಾರ್ಯ್ಯಮಂ ಮಗು ।
ಟ್ಟಿದ್ದನ್ನೆಸಗಲ್ಕೆ ಪೇಟ್ಪುವೆದೊಸೆದೆಂದೆನಿದಂ ನಲವಿಂ ಪ್ರಧಾನರೊಳ್ ॥ ೧೨೦

ಅದೆಂತೆನೆ:— ಮುನ್ನಮಾಳೋಚಿಸಿದ ರಹಸ್ಯಕಾರ್ಯಮಂ ನೀಮಿಂತು
ಗೆಯ್ಯಿಮೆಂದು

ಮುನ್ನಂ ವಿಚಾರಿಸಿದ ಪೊಸ ।
ರನ್ನವನತಿಹೀನಮೂಲ್ಯಮಂ ಕಾಣಲ್ಕೀ ॥
ಕಿನ್ನಾವಣಿಕ್ಪತಿಯು ಚಿ ।
ತ್ತನ್ನಲಿವನಿತರ್ಥಮಿತ್ತು ಕೊಳ್ವುದು ಮಣಿಯಂ ॥ ೧೨೧

ಇರ್ಬರ್ ಕೂದ್ರರ್ ಕಾಂಚನ ।
ಗರ್ಬ*ದಿನೊಬ್ಬೊರ್ಬರೊಳ್ ವಿವಾದಿಸಿದವರ್ಗಿಂ ॥
ದಿರ್ಬಾಗಮನೆಸಗಿದರಾ ।
ಕೊರ್ಬಂ ತರ್ಗಿಸುವೆನವರ್ಗ*ಳಂ ಕರೆಯೆಂದೆಂ ॥ ೧೨೨

ಮುಳಿಸಿಂ ಪೌಂಡ್ರಕದೇಶವ ।
ನಳಿಯಲ್ ಬೇಡೀಗ ಬಹಳದುರ್ಭಿಕ್ಷದ ಕೋ ॥
ಟಲೆಯಿಂದಲ್ಲಿಯ ಜನಮಿ ।
ತ್ತಲೆ ಬರ್ಕುಂ ತನಗೆ ತಾನೆ ಸನ್ಮೆದದಿಂದಂ ॥ ೧೨೩

ನೆಲಸಿಕರ್ಮಂ ವಿಳಿ ದುರ್ಮತಂ ನರಕನುಕ್ಕುಂ ಪೆರ್ಚಿದಾಯುಷ್ಯಮೆ।
ಯ್ದಟ್ಟಿಗುಂ ಬಂಧುಜನಂ ಸಮಸ್ತ ಪರಿವಾರಂ ಪೇಸುಗುಂ ಮೈಮೆ ದು ॥
ರ್ಬಲಮುಕ್ಕುಂ ಕಿಱಿಯುಯ್ಯನಂ ಕೊಲಿಸಲಿನ್ನಂತಾತನಂ ಬಿಟ್ಟ ತ ।
ನ್ನೊಲವಿಂ ರಾಜ್ಯಮನಾಳ್ವ ಪ್ರೋಲಸಗಿಮೆಂದಾಂ ಪೇೞ್ದೆನಂದೆಲ್ಲರೊಳ್ ॥

ಎಂದಿವು ಮೊದಲಾದ ಪೂರ್ವರಹಸ್ಯಕಾರ್ಯಮಂ ಪ್ರಕಟಿಸುವುದುಂ, ಸ
ಭಾಸದರೆಲ್ಲರ್ ವಿಸ್ಮಯಸ್ವಾಂತರಾಗಿ

ಭುವನದೊಳೀಕ್ಷಿಸಲ್ಕೆ ಸತಿಭಕ್ತಿಯೊಳಾವಳೊ ಕಲ್ಪಸುಂದರೀ ।
ಯುವತಿಯಪ್ರೋಲ್ ಮನೋಭವಸಮಾನನಿಜಾಕೃತಿಯಂ ಧರಾಧಿಪಂ ॥
ಗವಚಕ್ರದೊಲ್ದ ಮಾಡಿದಳಿನುತ್ತೆ ಸಭಾಸದರಿಂತಿಯಿಂ ಮುದೀ ।
ಯವಿವಿಧಮೂರ್ತಿಯಂ ಪಡಿಪಿನಿಂ ಪರಿಭಾವಿಸಿದರ್ ಧರಾಧಿಪಾ ॥ ೧೦೫

ಅಂತವರೆನ್ನ ಮೂರ್ತಿಯನೆವೆಯಿಕ್ಕದೆ ನೋಡಿ ಸಂತೋಷಂಬಟ್ಟು ರ
ಹಸ್ಯಕಾರ್ಯಮನಾಂ ಪೇೞ್ದಂದದಿನೆಸಗಲನಂತರಂ,

ಅತಿಸನ್ನುತದಿಂ ಮಾ ।
ಪಿತೃಗಳ ಬಂಧನಮನಾಕ್ಷಣಂ ಕಳೆದು ಸುಖ ॥
ಸ್ಥಿತಿಯವರ್ಗಪ್ಪಂತಂಘ್ರಿ ।
ದ್ವಿತಯಂಗಳ್ಗೆ ಅಗಿದೆಂ ಕರಂ ಮಾನಸದೊಳ್ ॥ ೧೦೬

ಬಲ್ಲಿಕ್ಕೊಲವಿಂದೆಲ್ಲರಂ ಕಳಿಪಿಸುಂತಾಪುರಕ್ಕೆ ಬಂದು ಪಿತೃಮಾತೃಗಳಂ
ಕರೆಯಿಸಿ,

ನಿಜನಾನುಗೋತ್ರಮಂ ಪೇ ।
ಟ್ಟಿದ್ದು ಜಲಕ್ಕೆನೆ ಮಾತೃಪಿತೃಗಳೊಸ್ಪವ ಪದವಾ ॥
ರಿಜಯುಗಳಕಅಗಿ ನಿಮ್ಮಾ ।
ತ್ಮಜನಾನುಪಹಾರವರ್ಮನೆಂದವರ್ಗುಸಿರ್ದೆಂ ॥ ೧೦೭

ಅಂತು ಪೇೞ್ದೊಡಂ

ತನುಸ್ರುಳಿಕಂಗಳುಣ್ಮಿ ಮನದುತ್ಸವನುಬ್ಬಿ ನಿರಂತರಂ ತದಾ ।
ನನವನಲಂಪಿನಿಂದಡರೆ ನೋಡಿ ಬಲ್ಲಿಕ್ಕಮುರ್ದಪ್ಪಿ ಪೂರ್ವಕ ॥
ಲ್ಪನಕೃತ ಪುಣ್ಯವೃಕ್ಷಮೆನಸುಂ ಫಲವಾಯ್ತು ಮಗೆಂದೆನುತ್ತೆ ಮ ।
ಜ್ಜನಕನುನುಂತೆ ಮಜ್ಜನನಿಯುಂ ಪೊರೆಯೇಱಿದರುರ್ವರಾಧಿಪಾ ॥ ೧೦೮

ಅಂತು ಸಂತೋಷವುತನನೆಯ್ದಿದಗೆ್ ಪುನಃಪುನಃಪ್ರಣತನಾಗಿಯನಂತರಂ
ಸವಿನಯದೊಳಾದು ಸಾವಮಾ್ಯ ।
ಜ್ಯನನೆನ್ನಯ ಜನಕನಭಿಗ್ರಹಿಸಿ ತತ್ಪಾ ॥
ದವನೋಲಗಿಸುತ್ತುಂ ನಾಂ ।
ದಿವಸಂಗಳ್ ಕೆಲವ್ರಮುಂ ಸುಖಂ ಮಿಗೆ ಕಳುಂದೆಂ ॥ ೧೬೯

ಅಂತಿರ್ದನಂತರಂ ದೇವರನಭಿಸುನ ಬಂಬಂದಿರ್ದುಂ
ಘನಚತುರಪಾಪುರವಲ್ಲಭಂ ಸುಜನಸಮಿತ್ರಂ ಭೂವಿಸಲ್ ಸಿಂಪನ ।
ರ್ಮನೃಪೇಂದ್ರಂ ಮಿಗೆ ಶತ್ರುಪೀಡೆ ತನಗಾಗಲೆ ನಾಡೆಯುಂ ಮಿತ್ರರಾ ॥
ದ ನರೇಂದ್ರರ್ ಬಲನಾಗಿ ಬರ್ಪುದೆನುತುಂ ಸಂಪ್ರೀತಿಯಿಂ ಪತ್ರಲೇ ।
ಖನನುಂ ತಾಂ ಕಳಿಪಲ್ ಮನೋಮುದದಿನಾವೇಪ್ತಂದೆವುರ್ವೀಶ್ವರಾ ॥೧೭೦

ಪರಹಿತಮನೆಸಗಲೆಂದಾ ।
ದರದಿಂದೇಳ್ತಿಂದ ಪುಣ್ಯಫಲದಿಂದಾಂ ದೇ ॥
ವರ ಪದಯುಗಮುಂ ಕಂಡೆಂ ।
ಪಿರಿದುಂ ಸಂಕಲ್ಪಸಿದ್ಧಿಯಾಯ್ತೆನಗೀಗಳ್ ॥ ೧೭೧

ಎಂದು ಉಪಹಾರವರ್ಮಂ ತಾಂ ಮಾಡಿದ ವೃತ್ತಾಂತಮುಂ ಪೇಳ್ದೊಡ
ದರ್ಕೆ ರಾಜವಾಹನಂ ಸಂತೋಷಂಬಟ್ಟು

ನೆಗಲಿ್ದ*ಪಹಾರವರ್ಮನಪ್ರೊಲಾರ್ಗವಮಸಾಧ್ಯಮೆನಿಪ್ಪ ಸಾಹಸಂ ।
ಮಿಗುವ ದುರಂತಕರ್ಮದೊದವಂ ಸಲೆ ಮಾಬ್ಪಿವನಾವನೆಂದು ಬ ॥
ಳ್ಕಿಗೆ ಮಿಗೆ ಮೆಚ್ಚಿ ಮಸ್ತಕಮನೊಯ್ಯನೆ ತೂಗಿ ಮನಃಪ್ರಸಾದದಿಂ ।
ಪೊಗಳಿ್ದ*ನ ರಾಗಸಾಗರತರಂಗದೊಳಿರ್ದನಭಂಗವಿಕ್ರಮಂ ॥ ೧೭೨

॥ ಗದ್ಯ ॥

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚಾಂಪರಾಜ ವಿರಚಿತಮಪ್ಪ
ಅಭಿನವ ದಶಕುಮಾರಚರಿತೆಯೊಳ್
ಉಪಹಾರವರ್ಮಕಥಾವೃತ್ತಾಂತಂ
ದಶಮಾಶ್ವಾಸಂ

—ಪ್ರಮತಿಯ ಕಥೆ—

ಶ್ರೀವನ್ನಿಂಗಲವೈಭವ ।
ಧಾಮಂ ಪ್ರಮತಿಯನಲಂಪಿನಿಂ ಕೇಳ್ದಂ ನೀಂ ॥
ಪ್ರೇಮದೊಳಿಸಗಿತ್ತೇನೆಂ ।
ದಾಮಹಿಮಂ ಕೂರ್ತಭಂಗವಿಟ್ಟಿಲಭೃತ್ಯಂ ॥ ೧

ಅಂತು ಕೇಳ್ದುದುಂ ಪ್ರಮತಿ ಕೆಯ್ಗಳಂ ಮುಗಿದು,

ನಿಮ್ಮಡಿಯಂ ವಿಚಾರಿಸಲನೇಕಧರಾತಳಮಂ ತೊಱಲ್ದ ಮ ।
ತ್ತೊಮ್ಮೆಯದೊಂದು ಘೋರತರಕಾನನದೊಳ್ ಬರುತಿರ್ದ ತಾಣದೊಳ್॥
ಕೆಮ್ಮುಗಿಲಾಯ್ತು ಪಕ್ಷಿಮನಭಸ್ಸ್ಥಳಿ ನೀಡನಿಕಾಯವತ್ತಲಾ ।
ದನ್ಮನಮಿತ್ತು ವೆಂದ್ದಸೆಯೊಳಳ್ಳಿರಿದಾಡುವ ಪಕ್ಷಿಸಂಕುಳಂ ॥ ೨

ಅಂತು ಸಂಧ್ಯಾಲಕ್ಷಣಂ ತಲೆದೋಱಲಂಧಕಾರದ ಭೀತಿಯಿಂದಾಂ ತ್ವರಿತಗತಿಯಿಂ ಪ್ರೋಗೆ ಮುಂದೆ,

ನಿಮಿದೊಳ್ಪಂಬೆತ್ತು ಬೀಱಲ್ಗರೆದ ಜಡೆಗಳಂ ನೀಳ್ದ ಜೆಲ್ವಾದ ಶಾಖಾ।
ಸಮುದಾಯಂ ಪತ್ತು ತೋಳ್ಗಳ್ ಮಿಸುಗುವ ತನಿವನ್ಗೆಂಪು ಭಾಳಾಕ್ಷಿಯಾಗ
ಲ್॥ಕ್ರಮದಿಂದಂ ತಾಂಡವಾಡಂಬರವನೆಸಗುವೀಕಂಬೊಲೊಪ್ಪಿರ್ದುದಾನಂ।
ದಮಯಂ ವಿಸ್ತಾರಿಯಭ್ರಂಕಷನಟತರು ಪತ್ರಪ್ರವಾಳಪ್ರಸಿದ್ಧಂ ॥ ೩

ಅಂತಿರ್ದುದೊಂದು ವಟಕುಜಮಂ ಕಂಡೆಯ್ದುವ ಸಮಯದೊಳ್

ಲೋಕಮನೆಲ್ಲಮಂ ಸಲೆ ತೊಱಲ್ದ ಬಱಲ್ದ ವರೂಥಮಂ ಹಯಾ ।
ನೀಕಮನೊಯ್ದ ಪೆಂಪಿನಪರಾದ್ರಿನಿಕುಂಜದೊಳಿಟ್ಟ ವತ್ತೆ ನಿ ॥
ರ್ವ್ಯಾಕುಳದಿಂ ತದದ್ರಿತಟದೊಳ್ ಸುಖನಿದ್ರೆಯೊಳಿರ್ದೆನೆಂಬವೋಲ್ ।
ಕೋಕನದಪ್ರಿಯಂ ಪದೆಪಿನಿಂ ಪರಿದೆಯ್ದಿದನಸ್ತಶೈಲಮಂ ॥ ೪

ಅಂತು ಗಭಸ್ತಿಮಾಲಿಯಸ್ತಾಚಲಮನೆಯ್ದುವುದುಂ;

ಅಲ್ಲಿರ್ದ ಪಲ್ವಲೋದಕ ।
ದಲ್ಲಿಯೆ ತತ್ಕಾಲಕರ್ಮಮಂ ತೀರ್ಚಿ ಲಸ ॥

ತ್ಪಲ್ಲನದ ಪಾಸಿಕೆಯನಾಂ ।
ಮೆಲ್ಲಿತ್ತಪ್ಪಂತು ಪಾಸಿದೆಂ ಪುರದಡಿಯೊಳ್ ॥ ೫
ಅಂತು ಸಂಧ್ಯಾವಂದನಂಗೆಯ್ದು ಪಲ್ಲವಮಂ ಪಾಸಿರ್ದಿನಂ
ಧರೆಯೊಳ್ ಸತ್ವರಜೋಗುಣ ।
ಮಿರಡುಂ ಪುಸಿಯಾಗೆ ಘನತಮೋಗುಣವೆಯ್ದೆ ॥
ವರಿಸಿತ್ತು ವಿರ್ಯನೆನಲ ।
ಚ್ಚರಿಯಿಂ ತೀವಿರ್ದುದಂಧಕಾರಂ ಕಾರಂ ॥ ೬
ಅಂತುರ್ಬಿದ ಮುರ್ಬಿನೊಳ್
ತರುವಿನ ಸುತ್ತಲ್ ವೆಲಸಿದ ।
ಪರಾರುಕುಲಮಿನಗೆ ಶರಣೆನುತಾ ತ್ತಗಳಿ ನಿ ॥
ಬ್ಬರಮಿನಿಸುವ ಸುಖನಿದ್ರಾ ।
ಪರವಶನಾಗಿರ್ದೆನಿರ್ದಿನಂ ತತ್ಕ್ಷಣದೊಳ್ ॥ ೭
ಉಪಮಿಸಲರಿದಂತಿಂತೆಂ ।
ದು ಪೇಳಿಲಳವಲ್ತು ವಚನಿಸಲ್ ವಶಮಲ್ತಂ ॥
ಒಪರಿಮಿತಸ್ಪರ್ಶೇಂದ್ರಿಯ ।
ದ ಪರಮಸುಖನಾಯ್ತು ಮುಚ್ಚಿರೀರಕ್ಕಾಗಳ್ ॥ ೮
ಆಪರಮಸುಖದೊಡನೆ ನಿದ್ರೆದಿಳಿದೆಡವ ಪೆಸೆಯಂ ನೋಲ್ಪಿನ್ನೆಗಂ
ರಜತಗಿರೀಂದ್ರಮಂ ಕಡೆದು ಕಂಡರಿಸಿಟ್ಟಪೊಲೊಲ್ದು ಭಾವಿಸಲ್ ।
ತ್ರಿಜಗದೊಳತ್ಯಪೂರ್ವಮೆನಿಸಿರ್ದ ಮನೋಹರಸೌಧಶಾಲೆಯೊಳ್ ॥
ರಜನಿಕರಪ್ರಭಾಪಟಲದಂತೆ ಸುಷುಪ್ತಿಯೊಳಿರ್ಪ್ಪತಿರ್ದ ವಾ ।
ರಿಜನುಖಿಯರ್ ಕೆಲರ್ ನಯನಕೌತುಕಮುಂ ಪಡೆದರ್ ನೃಪಾಧಿಪಾ ॥ ೯
ಆತನುನುದದ್ವಿಪಂ ಬಿನದದಿಂ ಜಲಕ್ರೀಳೆಯೊಳ್ಬಿದ್ದ ಪದ್ಮಿನೀ ।
ಲತೆಯೊ ನಿರಾಶ್ರಯಂ ಗಗನಮೆಂದಿಳಿಯೊಳ್ ನೆಲಸಿರ್ದ ಚಂದ್ರಿಕಾ ॥
ಕ್ಷತಿಯೊ ಹರಂಗೆ ಬೆರ್ಚಿ ಮದನಂ ಬಿಸುಟೋಡಿದ ಪುಷ್ಪಬಾಣಸಂ ।
ಹತಿಯೊ ಎನಲ್ಕೆ ಕೂರ್ತುರ್ ಸುಖನಿದ್ರೆಯೊಳಿರ್ದುದು ಕಾಮಿನೀಜನಂ॥ ೧೦
ಸ್ತನಯುಗಭಾರದಿಂ ಕಚದ ಬಲ್ಪೊಱೆಯಿಂ ಪ್ರಿಯವಾಱಿ ಬಿಟ್ಟಿನಂ ।
ವನಿತೆಯರಾವಗಂ ಪಡೆಪಿನಿಂ ನಜೆಗೆಟ್ಟೊಳಗಿರ್ದರೆಂಬಿನಂ ॥

ವನಜನಿಭಾಸ್ಯೆಯರ್ ಕುಟಿಲಕುಂತಳೆಯರ್ ತನುಮಧ್ಯೆಯರ್ ಮನೋ ।
ಜನೊಳದಿರೊಡ್ಡಿ ಕಾದಿ ಪಡಲಿಟ್ಟವೊಲಿರ್ದರನೂನನಿದ್ರೆಯಿಂ ॥ ೧೧

ಇಂದು ಮನೋಜರಾಜನ ಧನುರ್ಲತೆಗುನ್ಮದಭೃಂಗಮೌರ್ವಿಯುಂ ।
ಸೌಂದರಿಯರ್ ಸಮುಂತು ಪಡೆದಪ್ಪರಿಸಿಪ್ಪವೊಲೊಪ್ಪ ತಿರ್ಪ ಪು ॥
ರ್ಬಿಂದೆಳನೀಲ ವರ್ಣ್ಣದೆವೆಯಿಂ ನಿಡುಗರ್ಣ್ಣಿಕೆಮುಚ್ಚಿ ನಿದ್ರೆಯೊಳ್ ।
ಸಂದಬಲಾಜನಂ ನೆನೆಸಿಪಪ್ಪರನಂಗನ ಶಸ್ತ್ರಕಾಲವಿಲಾಸಮಂ ॥ ೧೨

ಬಿದಿದೊಡೆ ಕೂರ್ತು ಸೂಡಿಸಿಲೊಡೆ ಮಾಣದುಗುಳ್ದೊಡೆ ತೋಳ ನೀಡಿ
ಯ । ಪ್ಪಿದೊಡೆ ಮರಂ ಕೊನರ್ವುದದುಗೆಟ್ಟು ಮರಂಬೊಲಿದೇಕೆ ಭೂವಿಸ
ಲ್ ॥ ಸುದತಿಯರಿರ್ದರಾನಱಿವೆನಾತರುಸಂತತಿ ಸೋಲ್ತು ತಮ್ಮ ದೇ ॥
ಹದ ಸೊಬಗಂ ತದಂಗನೆಯರ್ಗೆತ್ತು ದಿವಲ್ತೆ ಮಹಾತ್ಮರೊಳ್ಗುಣಾ॥ ೧೩

ಅಂತು ಕುಸುಮಾಸ್ತ್ರಮಂ ಕದಱಿದಂತೆಯುಂ, ಕಮನೀಯಕನಕಪು
ತ್ರಿಕೆಗಳಂತೆಯುಂ, ಮುಱಿದೊಱುಗಿದ ಮಱಿಯಿನ್ರಲ್ಲಿಗಳಂತೆಯುಂ, ದಳಿತಸ್ಫು
ಳಪದ್ಮದಂತೆಯುಂ, ನವಮೌಣಿಕ್ಯಶಲಾಕೆಯಂತೆಯುಂ, ಸೋಮಕಳಾಸ
ಮೂಹದಂತೆಯುಂ, ಕರ್ಣ್ಣೆಯ್ವ ಕೇಕೆಗಳಂತೆಯುಂ, ಮೆಯ್ಗೆನುಱಿದ ಮರಾ
ಳಮಂಡಲದಂತೆಯುಂ, ಕುಡಿಯಿಡುವ ಕಲ್ಪಲತೆಗಳಂತೆಯುಂ, ಪುಂಡರೀಕ
ಷಂಡದಂತೆಯುಂ, ಕಾಮರಾಜಕೋಶದಂತೆಯುಂ, ಜಗನ್ಮೋಹನಮಂತ್ರ
ದಂತೆಯುಂ, ಸೌಭಾಗ್ಯಶರಧಿಯಂತೆಯುಂ, ಸುರಕುಸುದ ಸುಮನೋಮಂ
ಜರಿಯುಂತೆಯುಂ, ಮುಱಿದೊಱುಗಿ ನಿದ್ರೆಯೊಳಿರ್ದ ಕೆಲಬರೆ ಸತಿಯರಂ ಕಂ
ಡು ಚಕೋದ್ಗಂಬಟ್ಟು ಬಂದ ದೆಸೆಯಂ ನೋಲ್ಪನ್ನೆಗಂ,

ಶ್ರುತಿರಹಿತಂ ದ್ವಿಜಿಹ್ವನಪದಸ್ಥನನಾರತವಕ್ರಗಂ ವಿಷಾ ।
ನ್ವಿತನುರುಭದ್ರವಾಸಿ ಕುಟಿಲಂ ಫಣಿನಲ್ಲಭನೆಂದು ತತ್ಫಣಾ ॥
ಸ್ಥಿತಿಯನದಂ ಬಿಸುಟ್ಟ ವ್ಯದುಶಯ್ಯೆಗೆ ಬಂದಳೊ ಕೂರ್ತು ಭೂಮಿದೇ
ವತೆಯೆನಿಪಂದದಿಂ ಪವಡಿಸಿರ್ದಳರೆಬೊರ್ವ ಕುವಾರಿಯುರ್ವಿಪಾ ॥ ೧೪

ತರುಣಿಯತಿವ್ಯಗುಳಚೇನಾಂ ।
ಒರವುಂ ಮುಸುಕಿಟ್ಟು ನಿದ್ರೆಯೊಳ್ ಮೆಱೆದಿರ್ದಳ್ ॥
ತೆರೆವುಗಿಲ ಮುಱಿಯ ಮಿಂಚಿನ ।
ತಿರುಳುಸಿರಂ ಪತೆದು ನೆಲಿಗೆ ನಿಂದಂತೊಲಾಗಳ್ ॥ ೧೫

ಸತಿಯು ತಲೆಗಿಂಬಿನೆಡಗೆಯ್ ।
ನುತಶೋಭಿಕೆಯಾಗೆ ಪೆಱಿನೊಸಲ್ಮಿಱಿವ ಮೊಗಂ ॥
ಸತತಂ ಮುಕ್ತಿಕಲಿಂಗಾ ।
ಕೃತಿಯಂತೆಸೆದಿರ್ದುದಾ ರೋಜೇಕ್ಷಣೆಯೂ ॥ ೧೬

ವನಿತೆಯ। ಬಲಗೆಯ್ ಸೆಳ್ಳುಗು ।
ಗೊರ್ನೆ*ವೆಳಗಿಂ ಗುರುನಿತಂಬದೊಳ್ ನೀಡಿ ಕರಂ ॥
ನೆನೆಯಿಸಿದತ್ತದ್ರಿಗುಹಾ ।
ನನದಿಂ ಪ್ರೊಱಮಡುವ ನಿರ್ಘರಾಂಬುಪ್ಲವಮಂ ॥ ೧೭

ಕೋಕನದ ವದನೆ ಸಲೆ ಸಱು ।
ಸ್ಮೈಕನೆಯೊರ್ಮಗ್ಗುಲಾಗಿರಲ್ ಕುಚಕಮೆರಡುಂ ॥
ಏಕೀಕೃತವಾಗಲ್ಕವ ।
ಳೇಕಸ್ತನಿಯೆಂಬ ಮಾತ್ಕೆಯಿಂ ಕನ್ಗೆಸೆದಳ್ ॥ ೧೮

ಅಂತು ನಿದ್ರೆಯೊಳಿರ್ದಳಂ ಕಂಡು ದೇವಸ್ತ್ರೀಯೆಂದು ನಿಶ್ಚಯಂ ಮಾಡಿ ಮತ್ತಂ

ಪೆಱಿನೊಸಲೊಳ್ ಕಪೋಳತಟದೊಳ್ ನಳಿತೋಳ ಮೊದಲ್ಗಳೊತ್ತಿನೊಳ್ । ಕಿಱುಬೆಮರುಣ್ಮುತಿರ್ದಪ್ಪದು ಮೇಲುದಿನಿಕ್ಕಿದ ಚೀನವಸ್ತ್ರದೊ ॥ ಳ್ನಿಱುಗೆನಸುಂ ತೆರಳ್ದಿದಪ್ಪುದಂಗವಣಂ ನನೆಗೆತ್ತಿದಪ್ಪುದೇ ।
ತೆಱದೊಳವಳ್ ಮನುಷ್ಯಸತಿಯೆಂದೊಸೆದೀಕ್ಷಿಸಿದೆಂ ಕುಮಾರಿಯಂ ॥ ೧೯

ನವತಾಂಬೂಲರಸಾಧರಂ ಮೃದುಪರಿದ್ಯಾರಾಗದೇಹಂ ದುಕೂ ।
ಲವಿಶೇಷಂ ಶ್ರಮತೋಯಬಿಂದುನಿವಹಂ ಸುಯ್ಗಂಪು ನೋಡಲ್ ಮನೋ ॥
ಭವಕೇಳೀನಿಜಲಕ್ಷಣಂ ವಿಮಳನಿದ್ರಾಮುದ್ರಿತಾಕ್ಷಿದ್ವಯಂ ।
ದಿವಿಜಸ್ತ್ರೀಯರೊಳುಂಟೆ ತತ್ಸುಭಗರೂಪಾಯತ್ತಸಲ್ಲಕ್ಷಣಂ ॥ ೨೦

ಪೊರೆದ ದುಕೂಲವೊಂದಿನಿಸು ಮಾಸಿದೆ ಭೂಳಿದೊಳಿಟ್ಟ ಚಂದನಂ ।
ತೆರಳಿದೆ ವೇಣಿಯೊಳ್ ತೊಡರ್*ಮುಗಿಗೆ ಬಾಡಿದೆ ನೋಡೆ ನಿದ್ರೆಯುಂ ॥
ಬ್ಬರದೊಳಮರ್ತ್ಯಕಾಂತೆಯಿವಳಲ್ತು ಮನುಷ್ಯಕುಮಾರಿಯೆಂದು ಬಿ ।
ತ್ತರದಿನೊಱಿಲ್ದ ಕಣ್ದಣಿಯೆ ನೋಡಿದೆನಾನವಳಂ ನೃಪಾಲಕಾ ॥ ೨೧

ಅನಿಮಿಷದೃಷ್ಟಿಯಾಗಿಯುಮುಮರ್ತ್ಯವಿಳಾಸಿನಿಯಲ್ತು ಸುಪ್ತಿಸಂ ।
ಜನಿತಶರೀರಿಯಾಗಿಯುವುದಗ್ರತಪಸ್ವಿನಿಯಲ್ತು ಭಾವಿಸಲ್ ॥
ಜನನುತಿ ರಂಜಿಪಬ್ಜಮುಖಿಯಾಗಿಯುಮಿಾಕೆ ಕಳಂಕೆಯಲ್ತೆನು ।
ತ್ತನವಧಿದೃಷ್ಟಿಯಿಂದವಳನೀಕ್ಷಿಸಿದೆಂ ಮಲಗಿರ್ದ ತಾಣದೊಳ್ ॥ ೨೦

ಆನಿರ್ದ ಭೂಜಮೆತ್ತಣ ।
ದೀನೃಪಮಂದಿರಮಿದೆತ್ತಣಿಂ ಬಂದತ್ತೆಂ ॥
ದಾನೊಂದರೆನಿಮಿಷಂ ತ ।
ದ್ಧ್ಯಾನದೊಳಿರ್ದೆಂ ನೃಪಾಲಕುಲಮಣಿದೀಪಾ ॥ ೨೧

ಅಂತು ವಿಸ್ಮಯಂಬಟ್ಟನಂತರಂ,

ಏನಾದೊಡಕ್ಕೆನುತ್ತೊ ।
ಲ್ದಾನೊಯ್ಯನೆ ಪೋಗಿ ತದ್ಸುಧೂಟಿಯ ಶಯನ ॥
ಸ್ಥಾನದೊಳಾಕೆಯ ತೋಳ್ಗಳಿ ।
ನಾನುಂ ಸೋಂಕುವವೊಲಚ್ಚಿಯಿಂದಂ ಸಾರ್ದೆಂ ॥ ೨೨

ಅಂತು ಸಾರ್ದಿರ್ದನ್ನೆಗಂ,

ತೀಡುವ ಗಾಳಿಯಿಂ ಕುಸುಮಶಯ್ಯೆಗೆ ಮೆಲ್ಲನಿಸುಯ್ಗೆ ಮೀಲೆ ಬಂ ।
ದಾಡುವ ತುಂಬಿಯೀಂಚರದಿನೆನ್ನಯ ಮುಯ್ವಿನ ಸೋಂಕಿನಿಂ ಬೆನು ॥
ಮೂಡುವ ತಣ್ಪಿನಿಂ ಪುದಿದ ನಿದ್ರೆ ಕರಂ ತಿಳಿದಾಗಳೊಲ್ದವಳ್ ।
ನೋಡಿದಳೆನ್ನ ಸುಂದರತೆಯಂ ಬೆಱಗಾಗಿ ಧರಾಧಿನಾಯಕಾ ॥ ೨೩

ನಲವಿಂ ಮೆಯ್ಯುಱಿದೆಬ್ಬಿ ಕೆಯ್ಯ ಚಿಟ್ಟುಕ್ಕಂ ಮೆಲ್ಪಿಂ ಕಳಲ್ದೊಯ್ಯನಾ । ಗುಬ್ಬಿ ತೋಱಿಲ್ ಚಿಟುಕಿಕ್ಕಿ ಕಣ್ಗಡವರ್ದ* ನೀರಂ ಜಿವಿಮ್ಮಿ ಜೋಲ್ದಿರ್ದ ಕುಂ ॥ ತಳವಮಂ ತಿರ್ದಿ ಮಗುಬ್ಬಿದ್ದ ಮತ್ತನುವನೊಲ್ದಾಪಾದಮೂರ್ಧಾಂತಮಾ । ಗಲಲಂಪಿಂ ಸತಿ ನೋಡಿ ಮತ್ತೆ ಸುಖದಿಂ ಕಣ್ಮುಚ್ಚಿದಳ್ ಶಯ್ಯೆಯೊಳ್ ॥ ೨೪

ಅಂತವಳ್ ಮಗುಬ್ಬಿದ್ದ ಕಣ್ಗೆಯ್ದುದನಾಂ ಪುಸಿನಿದ್ದೆಯೊಳಿರ್ದಿದೇನೆಂದಾ
ಶ್ಚರ್ಯಂಬಡುವನ್ನೆಗಂ,

ತರುಣಿಯು ಮೆಯ್ಸೋಂಕಿಂ ಬಂ ।
ಧುರಶಯ್ಯಾಸೌಖ್ಯದಿಂ ಪಥಶ್ರಮದಿಂದಂ ॥

ಪರಿಷಾವುನಿದ್ರೆ ಬಂದಾ ।
ವರಿಸಿತ್ತೆನಗೇನನೆಂಬೆನತಿಕಾತುಕಮುಂ ॥ ೨೭
ಅಂ ನಿದ್ರೆಯೊಳ್ ಕೆಲದು ಜೋಗಮಿಪ್ಪುದುಂ,
ಮೊಳಗಲ್ಲಳಾಂಕೆ ಜಂರಘಾ ।
ನಿಳನಾರ್ಪಿಂ ಬೀಸಿ ಶೀತವಾನರಿಸಿ ಪಸು ॥
ರ್ದಳಿರೊಟ್ಟಲೊತ್ತೆ ಬೇಗಂ ।
ತಿಳಿಯಿತ್ತಂದೆನಗೆ ನಿದ್ರೆ ದುಃಖಿಂದೋಅಲ್ ॥ ೨೮
ಅಂತೆನಗೆ ನಿದ್ರೆ ತಿಳಿಯಲೊಡಂ,
ಆನೃಪನುಂದಿರವಾಚಕಂ ।
ದ್ರಾನನೆಯಿರ್ಪಾಸುಮಂಚವಿಲ್ಲದೆ ಮುನ್ನೊ ॥
ಲ್ದಾನಿರ್ದ ಮರವ ಕಠಿನ ।
ಸ್ಥಾನಂ ಮಗುತ್ತೆ*ನಗೆ ಕಾಣಲಾಯ್ತಾಕ್ಷಣದೊಳ್ ॥ ೨೯
ಅಂತು ಮುನ್ನಿರ್ದ ಮರನಂ ಕಂಡು ರಾಜಭವನವುಂ ತತ್ಕುಮಾರಿಯುವುಂ ಕಾಣದೆ
ಇದು ಕನಸೆಂಬೊಡಂ ಕನಸಿದಲ್ತು ದಿಟಂ ದಿಟವೆಂಬೊಡಂ ಮಗು ।
ಬ್ದಿದು ದೊರೆಕೊಳ್ಳದಿರ್ಪ ದೆಸೆಯಿಂ ದಿಟವುಲ್ತು ವುದೀಯುಚಿತ್ತಮಾ ॥
ಸುದತಿಗೆ ವೂಱುವೋಯ್ತು ದಱ ಕಾರಣವುಂ ತಿಳಿವನ್ನೆಗಂ ವನಾಂ ।
ತದೊಳೊಱಗಿರ್ಪೆನೆಂದು ಮುಸುಕಂ ಪದೆದೆನ್ನ ಮುಖಕ್ಕೆ ಸಾರ್ಚಿದೆಂ ॥
ದೊರೆವೆತ್ತ ಪೂರ್ವದಿಗ್ಭೂ ।
ಧರಗುಪ್ಪೆಯುಂ ಕಿರಣನಖರವುಂ ವುಸೆದಿನಕ್ಕೇ ॥
ಸರಿ ಪ್ರೊಱುವುಟ್ಟಿಳೆಯ ತಮಃ ।
ಕರಿಯುಂ ಘುಜಿಕೆಂದು ನುಂಗಿದತ್ತಾಕ್ಷಣದೊಳ್ ॥ ೩೧
ಅಂತು ಸೂರ್ಯೋದಯವಾಗಲಾಂ ನಿದ್ರೆಯಿಂದೆಬ್ದಿ ಸಂಧ್ಯಾವಂದನಂಗೆಯ್ದು ತತ್ಕುಜದ ತಣ್ಪಿನೊಳ್ ಕುಳ್ಳಿರ್ದಾರಾತ್ರಿಯು ವೃತ್ತಾಂತವನುನೆನ್ನೊಳಾಂ ವಿಚಾರಿಸುತಿರ್ಪನ್ನೆಗಂ
ಬಿಡುಜಡೆ ಕರ್ಣಕುಂಡಲಮಡರ್ದ ಘಟಸ್ಥನಮಿಟ್ಟ ಭಸ್ಮಮು ।
ಳ್ಳುಡೆಗಳವಟ್ಟ ವಲ್ಕವಸನಂ ಪ್ರೊಸವುತ್ತೆ ಸೆವಕ್ಷವಾಲೆಯೊ ॥

ಪಿಡಿನಡು ತನ್ನೊಳೊಸ್ಪತಿರಲೊರ್ಬ ತಪಸ್ವಿನಿ ಬಂದು ಕೂರ್ಮೆ ನೂ।
ರ್ಮಡಿಸಿರೆ ಮಾತ್ಯವೋಹವಿಸೆಯಲ್ ಪದೆದಪ್ಪಿದಳೆನ್ನನುರ್ವಿಪಾ ॥ ೩೦

ಅಂತೆನ್ನ ನಾತಪಸ್ವಿನಿಯಪ್ಪಿ,
ಎಲೆ ಮಗನೆ ವನದೊಳೊರ್ಬನೆ ।
ತೊಲಿಲುತ್ತಿ ಪ್ಪೆರ್ಕೆಯೆಂದೊಡಾಂ ನೀನಾರೆಂ ॥
ದೊಲವಿಂ ಕೇಳಲ್ ತಾರಾ ।
ವಳಯಾನೆಂದಾಕೆ ನಗುತೆ ಮುತ್ತಿಂತೆಂದಳ್ ॥ ೩೧

ದೊರೆವೆತೊ ತ್ತರ್ ತಪೋಧನಂ ವನದೊಳಿನ್ನಂ ಕಂಡೆಲೇ ಕಾಂತೆಯಾ ।
ಪರಿ ವೇಷಂ ನಿನಗಕ್ಕೆನುತ್ತೆ ಮುಖಮಾತಂ ಕೇಳದಾತಂ ನಿರಂ ॥
ತರದಿಂ ಶಾಪವನಿತ್ತನೀಯಲನಿಶಂ ಚಂಚಜ್ಜಟಾವಲ್ಕಲಾಂ ।
ಬರಭಸ್ಮಂ ನೆಲಸಿತ್ತು ಮತ್ತನುವಿನೊಳ್ ಕೇಳ್ ಪೆಂವಿನಿಂ ಪುತ್ರಕಾ ॥ ೩೨

ಅಂತಾತಪೋಧನಂ ನಿಷ್ಕಾರಣಂ ಶಾಪಮನೆನಗೆ ಕುಡಲ್,
ಈಶಾಪವೋಕ್ಷಕಾರಣ ।
ವಿಾಶಾನಪದಾಬ್ಜಸೇವೆಗೆಯ್ದಫಕುಲವುಂ ॥
ನಾಶವುನೆಯ್ದಿಸೆ ಪುಣ್ಯದ ।
ರಾಶಿಗೆ ಶಾವಸ್ತಿನಗರಿಗಾಂ ಪೋಪಾಗಳ್ ॥ ೩೩

ಇರುಳೊರ್ಬನೆ ನೀನಾಲದ ।
ಮರದಡಿಯೊಳ್ ನಿದ್ರೆಗೆಯ್ದಿರಲ್ ಕಂಡಾಂ ಮೋ ॥
ಹರಸಂ ಮಿಕ್ಕೆನ್ನಯ ಕರ।
ಸರಸಿಜದೊಳಗಾಂತು ಪೋಗುತಿರ್ಪಾಪದದೊಳ್ ॥ ೩೪

ಜನವಿಖ್ಯಾತಿಯನಾಂತು ರಂಜಿಸುವಿನಂ ಶಾವಸ್ತಿಯೊಳ್ ಧರ್ಮವ ।
ರ್ಧನರಾಜಾತ್ಮಜೆ ಪೆಂಪಿನುಪ್ಪರಿಗೆಯೊಳ್ ಕಾಂತಾಲಸನ್ಮಧ್ಯದ ॥
ಲ್ಲಿ ನಿತಾಂತಂ ನವಮಾಲಿಕಾಖ್ಯೆ ಮೃದುಶಯ್ಯಾಮಂಚದೊಳ್ ನಿದ್ರೆಗೆ ।
ಯ್ವ ನಿವಾಸಂ ಮೆಱೆದಿರ್ದುದಂ ಪದೆದಿನಿಂ ಕಂಡೆಂ ಮುನೀಪ್ರೀತಿಯಿಂ ॥ ೩೫

ಆಂತು ಶಾವಸ್ತಿಯ ಧರ್ಮವರ್ಧನನ ಕುವರಿ ನವಮಾಲಿಕೆ ಉಪ್ಪರಿಗೆ
ಯೊಳಿರ್ದುದಂ ಕಂಡು,

ಪರಿಯದನನಂ ಭವಾನೀ ।
ವರನ ಗಣಸ್ತ್ರೀಯರಿರ್ದ ಠಾವಿಂಗುಯ್ಯಲ್ ॥
ಪರಿಯರದೇನೆಂಬರೆನು ।
ತ್ತರುವುದದಿಂ ನಿನ್ನನಲ್ಲಿ ಮಡಗಿದೆನೊಲವಿಂ ॥ ೩೪

ಅಂತು ನಿನ್ನನಿರಿಸಿಯಾಂ ಶಾಪವಸ್ತಿಯ ಪೊಱವೊಟಿಲ ತ್ರ್ಯಂಬಕನ ದೇವಾಲಯಕ್ಕೆ ಪೋಗಿ,

ಅಂಬಿಕೆಯಾಜ್ಞೆನಂ ಸುರನರೋರಗಕಿನ್ನರವೃಂದವಂದ್ಯಪಾ ।
ದಾಂಬುಜನಂ ಪ್ರದಕ್ಷಿಣಮನೀಕ್ಷಣದಿಂ ತವೆ ಸುಟ್ಟ ವಿಕ್ರಮಾ ॥
ಡಂಬರನಂ ಮನೋಜಮದಕುಂಜರಭಂಜಿತಪಂಚವಕ್ತ್ರನಂ ।
ತ್ರ್ಯಂಬಕನಂ ನಮಸ್ಕರಿಸಿದೆಂ ಮನಮತ್ಸರದಿಂ ಕುಮಾರಕಾ ॥ ೩೫

ಸ್ನಿಗ್ಧಪಿಶಂಗಭಂಗಿಗುರಜಟಾಭರಮಂಬರಗಂಗೆ ಭಾವಿಸಲ್ ।
ಮುಗ್ಧಹಿಮಾಂಶುಲೇಖೆ ನಿಟಿಲಾಕ್ಷಿಯುದಗ್ರಫಣೀಂದ್ರಕಂಕಣಂ ॥
ದಗ್ಧನಿಧಿಪ್ರಕಾಶತನು ರಂಜಿಸುವಂಗೆ ಮುನೀಂದ್ರಶಾಸನಮಂ ।
ದಗ್ಧಮನೆಯ್ದಿಸಲ್ಕೆಱಗಿದೆಂ ನಿಜಸಂಸ್ತವದಿಂ ಕುಮಾರಕಾ ॥ ೩೬

ಅಂತು ತ್ರ್ಯಂಬಕದೇವರನುಪಾಸ್ತಿಗೆಯ್ದು ಶಾಪಮೋಕ್ಷಮಂ ಪಡೆದು ತ್ರ್ಯಂಬಕನಂ ಬೀೞ್ಕೊಂಡ ।

ಲ್ಲಿಂ ಬರ್ಪಾಗಳ್ ಮಗುೞ್ದು ನಿನ್ನನಮನಾಂ ಕೊಂ ॥
ಡಿಂಬಿನ ವಟಕುಜವಡಿಯೊಳ್ ।
ಮುಂ ಬನದೊಳಗಿರ್ದ ತೆಱದಿನಿರಿಸಿದೆನಾಗಳ್ ॥ ೩೭

ಎಂದು ಮತ್ತಮಿಂತೆಂದಳ್:—

ವಸುಮತಿ ನಿನ್ನೊಡನೇನುಮು ।
*ನುಸಿರ್ದಪಳಲ್ಲಕ್ಕುಮೊಯ್ದ ಪುತ್ರನನಾನಿ ॥
ತ್ತೆಸಕದ ಕಾರ್ಯಮುನೆಂದೊ ।
ಲ್ದು ಸರೋರುಹವದನೆ ಕೇಳ್ದಳಿನ್ನಿಸಿಳೀಕಾ ॥ ೩೮

ಅಂತು ಕೇಳ್ದನಂತರಮೆನ್ನಂ ತಂಪಿಡಿದು ಪರಸಿ-ಎನಗೆ ಶಾಪಮೋಕ್ಷಮಾದುದು; ಆಂ ನಿನ್ನ ಸ್ನೇಹಪಿತೃವಪ್ಪ ಕಾಮಪಾಲನ ಪಾದಸೇವೆಗೆ ಪೋದಪೆನೆಂದು ತಾರಾವಳಿ ಪೋಗಲೊಡಂ;

ಅವನಿಪ ತಾರಾವಳಿ ಪೇ ।
ಟ್ಟಿದ ವಿಶೇಷಂ ಕರ್ಣಕಾತುಕಂಬಡೆದಿರಲಾಂ ॥
ನವಮಾಲಿಕೆಯೆಂಬಳನೊ ।
ಲ್ದು ವಿಚಾರಿಪೆನೆಂದು ಮನದೊಳುದ್ಯೋಗಿಸಿದೆಂ ॥ ೪೩
ದೇವತೆಯೆನ್ನುದ್ಯೋಗ ।
ಕ್ಕಾನಗಮನುಕೂಲವುಕ್ಕೆನುತ್ತು ರುವುದದಿಂ ॥
ಶ್ರಾವಸ್ತಿಯೆಂಬ ಪಟ್ಟಣ ।
ದಾನರ್ತಂಬಿಡದು ನಡೆದೆನತ್ಯುತ್ಸವದಿಂ ॥ ೪೪
ಅಂತು ನಡೆಯುಲ್ ಮುಂದೆ
ಮಿಸುನಿಸು ಕೋಂಟೆಯ ತೆನೆಗಳ್ ।
ನಸು ಪೊಳಿಯಲ್ಕೆನ್ನ ಕಣ್ಗೆ ದೂರದೊಳಾಂ ಕಂ ॥
ಪೊಸೆದೆಂ ಮನದುತ್ಸವದಿಂ ।
ಪೆಸರಿಂ ಶ್ರಾವಸ್ತಿ ತಾನಿದಪ್ಪುದೆನುತ್ತುಂ ॥ ೪೫
ಅದಂ ಕಂಡು,
ಚರಣಕ್ಕೆ ಗಱುಗಳಿಗೆದಂ ।
ತಿರೆ ನನವಮಾಲಿಕೆಯನೆಯ್ದಿ ನೋಲ್ಪೆನೆನುತ್ತುಂ ॥
ತ್ವರಿತಗತಿಯಿಂದೆ ನಡೆಯಲ್ ।
ಪುರವೊಪ್ಪಿತ್ತೆನ್ನಿದಿರ್ದಂತೆನೆ ಪೇೞ್ವೆಂ ॥ ೪೬
ಮನೆಮನೆಗಳ್ಗೆ ರಂಜಿಸುವ ಪ್ರೊಂಗಳಸಂ ಮಿಗೆ ಕೇರಿಕೇರಿಯೊಳ್ ।
ಜನನುತಶಸ್ತ್ರಶಾಸ್ತ್ರಪರಿಚಿಂತನೆಯುನ್ನತರಾಜವೇಶ್ಮದೊ ॥
ೞ್ಪಿನ ನನರತ್ನದುಪ್ಪರಿಗೆಗಳ್ ನಿಜಲೀಲೆಯೊಳೊಪ್ಪುತಿರ್ಪ ಪ ।
ದ್ಮಿನಿಯರ ಸಂಕುಳಂ ಮೆಱೆವಿನಂ ಪಸವೆರ್ದತ್ತುದು ನೋಡೆ ತತ್ಪುರಂ ॥ ೪೭
ಅಂತೆಸೆವ ಪುರದ ಕೇರಿಯೊಳಗೆ ನಾಂ ಬರ್ಪಾಗಳ್
ಪಡುವಣ ಮೂಡಣ ಕೇರಿಗ ।
ೞೊಡೆಯರ್ ಕೆಲರೊಡ್ಡಮಿಕ್ಕಿ ಕೋೞುಗಳಿರಡಂ ॥
ಸಡಗರದಿಂ ಕಾದಿಸುತಿ ।
ರ್ದೆಡೆಯಂ ಕಂಡಲ್ಲಿ ನಿಂದು ನೋಡುತ್ತಿರ್ದೆಂ ॥ ೪೮

ತಲೆಯೊಳ್ ವಿದ್ರುಮವುಂ ನಿಜಾಕ್ಷಿಯುಗದೊಳ್ ಮಾಣಿಕ್ಯಮುಂ ಪಕ್ಷಸಂ।
ಕುಳದೊಳ್ ಪಚ್ಚೆಯನಿಂದ್ರನೀಲವನಲಂಪಿಂ ಗರ್ಭದೊಳ್ ಮಾಡಿಕ್ಕಾ ॥
ವಳಿಯಂ ವಜ್ರವನುಗ್ರಚಂಚುಪುಟದೊಳ್ ಪಾದಂಗಳೊಳ್ ಮಿಕ್ಕ ನಿ।
ರ್ಮಳರತ್ನಂಗಳನಾವಗಂ ನೆನೆಯಿಸಲ್ಪಾರ್ದಿರ್ದುವಾಕೋಳಿಗಳ್ ॥ ೪೯

ಚಲಿಸದ ದೃಷ್ಟಿ ಸುಬ್ಬಡರ್ದು* ನೀಡಿದ ಗೋಣ ಶಿಖಿಯಂ ತುಡುಂಕಲ।
ವ್ವಳಿಸುವ ಚಂಚುಘಾತಿಯಿಱಿದಾರ್ದೊಡೆ ವಾರಿ ಮಿಡುಂಕುತಿರ್ಪ ತೊ ॥
ಟ್ಟಳಿಕೆ ಚಲಂ ಕವಲ್ತು ಪೆಱವೆಟ್ಟಿನ ಬಲ್ಪು ವಿರಾಜಿಸಲ್ಕೆ ಮೆ।
ಯ್ಗಲಿತನದಿಂ ತೊಡಚಿರ್ದುವು ಕಾಳಿಗನುಂ ಕಡುಕೆಯ್ದು ಕೋಳಿಗಳ್ ॥ ೫೦

ಅಂತು ಕಾದಾಡುತಿರ್ಪ ಕೋಳಿಗಳಂ ಕಂಡಾಪಡುವಣ ಕೋಳಿಯೊಡೆಯನಪ್ಪ ಮಿತ್ರವರನೆಂಬ ವೈದ್ಯವಿಟನೊಳಿಂತೆಂದೆಂ:—

ನೀಡಿದ ಗೋಣ ಸಿತದೀಪಂ।
ಪೇಡಿನುನಂ ಭೂವಿಸಲ್ ಮೃದುಪ್ರಾಣಂಗಳ್ ॥
ನೋಡೆ ಬಳಾಕಾಜಾತಿಗೆ।
ಕೂಡಿರ್ಪುಂ ಕುಕ್ಕುಟಾಧಮುಂ ತಾನಕ್ಕುಂ ॥ ೫೧

ಕುಸಿದ ಕೊರಲಸಿತದೀಪಂ।
ಮುಸಕಂಗುಂದದ ಮನಂ ಮುಹಾಪ್ರಾಣಂ ರಂ ॥
ಜಿಸಿನ್ರುದದು ನಾರಿಕೇಳಜ।
ನಸಮಾನಬಲಾಢ್ಯಕುಕ್ಕುಟಂ ತಾನಕ್ಕುಂ ॥ ೫೨

ಇಂತು ಬಳಾಕಾಜಾತಿ ನಾಳಿಕೇರಜಾತಿಯೆಂದು ಕೋಳಿ ನಿರ್ಣಯಿಂ. ಅಲ್ಲಿ,

ನಿನ್ನ ಚರಣಾಯುಧಂ ಸ।
ತ್ತ್ವೋನ್ನತನದು ನಾಳಿಕೇರಜಂ ಪ್ರತಿಯದು ಸಂ ॥
ಭಿನ್ನಬಳಾಕಾಜಾತಿಯ।
ದಿನ್ನೀಗಳೆ ಸೋಲ್ವುದೀಕ್ಷಿಸೆಲೆ ಮಿತ್ರಾ ॥ ೫೩

ಎಂದು ನೋಪ್ಪಿನ್ನೆಗಂ,

ಚರಣಾಗ್ರದಿಂ ಬಳಾಕಾ।
ಚರಣಾಯುಧನಂ ಕಡಂಗಿಯೊದೆದುರದಿಂ ಬ ॥

ಲ್ಲರುಳುಣ್ಮೆ ಕೆಡಪಿ ಗೆಲ್ದ ।
ತ್ತುರುಸತ್ವಂ ನಾಳಿಕೇರಜಂ ತತ್ಕ್ಷಣದೊಳ್ ॥ ೫೨
ಆಧಿಕತರಸತ್ವದಿಂ ಸಹ ।
ಜ್ಜೈರ್ಯದಿಂ ನಾಳಿಕೇರಜಂ ಪ ತಿಚರಣಾ ॥
ಯುಧನಂ ಗೆಲೆ ಮಿತ್ರವರಂ ।
ನಿಧಿಯಂ ಪಜೆದಂತೆ ಪರ್ಷದೊಳ್ ನೆಲಸಿರ್ದಂ ॥ ೫೩

ಅಂತು ಮಿತ್ರವರಂ ತನ್ನ ಕೊೞ್ಪು ಗೆಲ್ದುದಂ ಕಂಡೆನ್ನನಾದಿನಂ ಮೊದಲಾತ್ಮಮಿತ್ರನೆಂದು ಬಗೆದು ತನ್ನ ಮನೆಗೊಡಗೊಂಡು ಪೋಗಿ ಎನ್ನಂ ಮನ್ನಿಸಲಲ್ಲಿಯೊದಿನಮುಂ ಕಳೆದು ಮಱುದಿವಸಂ

ಶಾವಸ್ತಿಯ ಪೊಱಪೊಱಮಲಧಿ ।
ದೈವತ್ರ್ಯಂಬಕನ ಜಾತ್ರೆಗೆಲ್ಲರ್ ನಿಜಸ ॥
ದ್ಭಾವದೊಳೊಲವಿಂ ಪೋಗೆ ಮು ।
ಹಾವಿಭವದೊಳವರ ಬೆನ್ನೊಳಾನುಂ ಪೋದೆಂ ॥ ೫೪

ಅಂತು ಪೋಗಿ,

ಅರ್ಧಶರೀರಮುಂ ಗಿರಿಜೆಗಿತ್ತನನಾರ್ತು ನಿಜೋತ್ತಮಾಂಗಮುಂ।
ಸ್ಪರ್ಧನಿಗಿತ್ತನಂ ಸಕಲಮುಂಗಳಕಾರಣಮೊಪ್ಪಲಕ್ಷ್ಮಿಯಂ ॥
ತರ್ಧನನಂ ಶಮಾಂಕಕಳೆಯುಂ ತಳೆದಿರ್ದನಸೊಲ್ದು ಪ್ರಣ್ಯಸಂ ।
ವರ್ಧನನುಂ ಕರಂ ಸ್ತುತಿಸಿ ಭಕ್ತಿಯೊಳಾಂ ಪ್ರಣಮಮಟ್ಟನುರ್ವಿಪಾ ॥ ೫೫

ಅಂತಾಂ ಸ್ತ್ರೀಕಾಮುನಾಮುದಕಂ ಸ್ತ್ರೀಮುಯನಾಗಿರ್ದ ತ್ರ್ಯಂಬಕನ ಪಾದಕ್ಕೆ ನಮಸ್ಕಾರಂಗೆಯ್ದೊಂದು ಬಿಲ್ವಕುಂದ ತಣ್ಣೆಲೆಯೊಳ್ ಕುಳ್ಳಿರಿಸ್ಪದಮನಲ್ಲಿಗೆ

ರಣಿತಂ ನೂಪುರದಿಂಚರಂ ಸ್ಮರಧನುರ್ಜ್ಯಾರಾವಮುಂ ಗೆಲ್ವಿನಂ ।
ಮಣಿಹಾರಂ ವಿಟನೇತ್ರವಾಗುರವೆನಲ್ ಸಾರ್ದರ್ಪಿನಂ ಚೆಲ್ಲಗಣ್ ॥
ಗಣಿಕಾವಲ್ಲಭಸಂಕುಲಕ್ಕೆ ಮಥಿಸಲ್ ಸಾಕೆಂಬಿನಂ ನೀರಜೇ ।
ಕ್ಷಣೆಯೊರ್ವಳ್ ಸಲೆ ಬಂದಳಾರತ್ತಿಪ್ಪಿಂದಾಕಾರಮುಂ ತಾಳ್ದವೋಲ್ ॥ ೫೬

ಆರಮಣಿ ಸಕಳಮಂಗಳ ।
ಕಾರಣನುಂ ಪರನುಪುರುಷಲಕ್ಷಣಕಂದಾ ॥

ಕಾರನುನದೊಂದು ಚಿತ್ರಮು ।
ನಾರಾಧಿಪ ದೈವದಂದದಿಂ ತಳೆದಿರ್ದಳ್ ॥ ೫೯

ಅಂತೊಂದು ಚಿತ್ರಪಟಮುಂ ತಳೆದು
ಅವಳಿನ್ನ ಮೊಗಮುನಾಚಿ ।
ತ್ರವನೊಲವಿಂ ಮಗುಚ್ಚಿದ್ದ ಮಗುಚ್ಚಿದ್ದ ನೋಡುತ್ತಿರಲಾಂ ॥
ಯುವತೀಭಾವನುನಖಿದೇ ।
ಕೆ ವಿಳಾಸಿನಿ ನಿಲ್ವಿ ಕುಳ್ಳಿರೆಂದೆನಿಳೀಪಾ ॥ ೬೦

ಅಂತು ಕುಳ್ಳಿರಲ್ವೀಟ್ಟಿದ್ದ ಅವಳ ಕಯ್ಯ ಚಿತ್ರಪಟಮುಂ ನೋಟ್ಟಿನಮುಲ್ಲಿ
ಉನ್ನತವಕ್ಷಮುಂ ಘನಭುಜದ್ವಯಮುಂ ವಿಳಸಲ್ಲಲಾಟಮುಂ ।
ಪನ್ನಮನೀಷದುನ್ಮಿಷಿತಲಾಧರಸನ್ನಿಭಮುಂ ಮುಖಾಬ್ಜಮುಂ ॥
ತನ್ನೊಡನಟ್ಟಿ ಕುಂದೊಱಗಿದಂದಮನೊಪ್ಪಿರೆ ಚಿತ್ರರೂಪದಿಂ ।
ದೆನ್ನಯ ರೂಪನೊಲ್ದ ನಸಮಾಲಿಕೆ ಚಿತ್ರಿಸಲಿರ್ದುದರ್ವಿಪಾ ॥ ೬೧

ಅಂತೆನ್ನ ಚಿತ್ರಮುಂ ಕಂಡದಱ ಕೆಲದೊಳ್
ಪದಕಮಲಂಗಳಂ ಗುರುನಿತಂಬಮನಲ್ಪಸುನುಧ್ಯಮುಂ ಕದ ।
ಕ್ಕದಿಪ ಕುಚಕುಂಗಳಂ ಮಿಸುಪ ಪಣ್ಬುಟಿಯುಂ ವಿಳಸತ್ಕಪೋಲಮುಂ ॥
ಸದಮಳನೇತ್ರಮುಂ ಪದೆಪಿನಿಂ ಸುಖನಿದ್ರೆಯೊಳಿರ್ದ ಭಾವಮುಂ ।
ಸುದತಿಯ ರೂಪನಾಂ ಮಗುಚ್ಚಿದ್ದ ಚಿತ್ರಿಸಿದೆಂ ಕೆಲದೊಳ್ ವಿಲಾಸದಿಂ ॥ ೬೨

ಅಂತಾಂ ಬರೆದ ಚಿತ್ರಪಟಮನವಳ ಕೆಯ್ಯೊಳ್ ಕುಡುವಳತ್ತಲ್ ಪೋದ
ಳ್. ಇತ್ತಲಾಂ ಕಾರ್ಯಸಿದ್ಧಿಯಾಯ್ತೆಂದು ಮಿತ್ರುವರನೆಡೆಗೆ ಬಂದಿಂತೆಂದೆಂ:—

ಎಡರಡಸಿದೊರ್ಡಂ ಪಗೆಗಳೊತ್ತರಿಸಿದೊರ್ಡಮೆಯ್ದಿ ಮುಂದುಗೆ ।
ಟ್ಟೊಡನುಳಿಪಿಂ ಮಹಾವ್ಯಸನದೊಳ್ ತೊಡರ್ದಿರ್ದೊಡಮನ್ಯದೇಶಮಾ!
ದೊಡವಿಱಿಕೆಯ್ವುದೊಂದೆ ತನುವೆಂಬಪ್ಪೊಲಾಪ್ತಸಹಾಯನಂ ಕರಂ ।
ಬಿಡದೊಡನಿರ್ಪವಂ ಸುಜನಮಿತ್ರನನಂ ಕೃತಕೃತ್ಯನುರ್ವಿಯೊಳ್ ॥ ೬೩

ಎಂಬುದುಮಾಮಿತ್ರವರಂ ತುಷ್ಟನಾಗಿ ನಿನಗಾಂ ಮಾಡಲ್ವೀಪ್ಪಿ ಕಾರ್ಯ
ಮುಂ ಪೇಟೆಂಬುದುಂ;

ಅಂ ಪೇೞ್ದಿ ಕಾರ್ಯಮುಂ ನೀಂ ।
ಭೂಪಾಲಕನೆಡೆಗೆ ಪೋಗಿ ಭೂಸುರರೂಪಿಂ ॥

ದಂ ಪೇಜ್ಪುದೆಂದೊಡಾತನ ।
ದೇಂ ಪೇೞೆನಲಾಂ ಬಱಿಕ್ಕಮಿಂತೆಂದುಸಿರ್ದೆಂ* ॥ ೬೮

ಎನ್ನ ತನೂಜೆಯಂ ಸಕಲಶಾಸ್ತ್ರವಿಚಕ್ಷಣನಪ್ಪನೊರ್ಬನೊಳ್ ।
ಮುನ್ನವೆ ವಾಕ್ಪ್ರದಾನಮನೆಲೇ ನಿನಗಿತ್ತಪೆನೆಂದು ಮಾಡಲಾ ॥
ತನ್ನಿಜದೇಶದಿಂದಮಿನಿತುಂ ದಿನಮಾದುದು ಬಾರನೀಗಳಾ ।
ಕನ್ನೆ ಕರಂ ಪ್ರಬುದ್ಧೆಯೆನಿಸಿರ್ದಪಳೀವೆನಿಳಾಧಿನಾಯಕಾ ॥ ೬೯

ಆಂ ಬಡವನೆನ್ನ ಮನೆಯೊಳ್ ।
ತುಂಬಿದ ಜವ್ವನೆಯನಿರಿಸಲಶ್ಕ್ಯಂ ಜಾಮಾ ॥
ತಂ ಬರ್ಪನ್ನೆಗಮಾಕೆಯ ।
ನಿಂಬಿನೊಳಿಟ್ಟೆನ್ನ ವಂಶಮಂ ಪೊರೆಯರಸಾ ॥ ೭೦

ಎಂದು ಧರ್ಮವರ್ಧನಂಗೆ ಪ್ರೋಗಿ ಪೇೞೆಂಬುದುಮಾತನಂತೆಗೆಯ್ವೆನೆಂ
ದು ಧರ್ಮವರ್ಧನನೆಡೆಗೆ ಪ್ರೋಗಿ ಸನುಯಂಬಿಡೆದು,

ಎನ್ನ ತನೂಜೆಯನೊಸ್ಪುವ ।
ಕನ್ನೆಯನೊರ್ಬಿತ್ತ ಮುದ್ವಿಜಂಗಿತ್ತಪೆನೆಂ ॥
ದೆನ್ನಲೊಡವಾತನೂರಿಂ ।
ದಿನ್ನುಂ ಬಾರಂ ಮಗಳ್ಗೆ ನೆಱೆಮುಮು ಹರೆಯಂ ॥ ೭೧

ಪಿತೆಱಿದೊಳವಳನೆನ್ನ ನಿ ।
ಕೇತನದೊಳ್ ನಿಱಿಸಲರಿನು ಯೌವನೆಯಂ ಜಾ ॥
ಮಾತ್ಯ ತಲೆದೋರ್ಪಿನಂ ನು ।
ಜ್ಞಾತೆಯನರಮನೆಯೊಳಿರಿಸಿ ರಕ್ಷಿಪುದರಸಾ ॥ ೭೨

ಪ್ರಜೆಯಭಿಮಾನನಮಂ ನಿರುಪಮಾಶ್ರಮಮುಂ.....ಲಸ ।
ದ್ವಿಜಕುಲಮಂ ಸಕರ್ಮಪರರಂ ಬಡಸಟ್ಟರನಾರ್ಪಿನಿಂದೆ ಭೂ ॥
ಭುಜರೊಲವಿಂದೆ ರಕ್ಷಿಸುದು ಧರ್ಮಮನಂ ತೊಱೆವಿರ್ದೊಡನ್ನೆಗಂ ।
ಕುಜನುಜೆಯೊಳ್ಪೊದವಿ ಜನಿಸಿರ್ದೊರೆದರ್ಪರಲ್ತೆ ಧಾತ್ರಿಯೊಳ್॥ ೭೩

ಎಂದು ಮಿತ್ರವರಂ ಧರ್ಮವರ್ಧನಂಗೆ ಬಿನ್ನಪಂಗೆಯ್ಯಲಾತಂ ನಿನ್ನ
ಮಗಳನೊಡಗೊಂಡುಬಾಯೆಂದು ಕಳಪಲ್ ಬಜಿಯುಂ

ಪೆಣ್ಣುಡೆಯುಟ್ಟು ಬೈತಲೆಯನೊಳ್ಪಿನಲೊತ್ತಿ ಶಿರೋಜಬಂಧಮಂ ।
ನುಣ್ಣಿಸಿ ಮೆಯ್ಯೊಳೊಪ್ಪುವ ಪರಿದ್ರಮನಪ್ಪಿ ನಿಮಿರ್ದ ಕಣ್ಗಳೊಳ್ ॥
ಸಣ್ಣವೆ ನಲ್ಕೆ ಕಾಡಿಗೆಯು ರೇಖೆಯುನಾಂತು ಬರಲ್ಕೆ ಕಂಡವರ್ ।
ಕಣ್ಣೆರಡೆಯ್ದವೀಕ್ಷಿಸಲಿನಲ್ ತಳಿದೆಂ ಸತಿರೂಪನುರ್ವಿಪಾ ॥ ೭೦

ಅಂತಾಂ ಸ್ತ್ರೀರೂಪಮಂ ತಳಿದು ಮಿತ್ರವರನಪ್ಪವನ ಪಿಂದನೆ ಧರ್ಮವರ್ಧನನಿರ್ದೆಡೆಗೆ ಪೋಗಿ ನಿಲಲರಸನೊಳ್ ಮಿತ್ರವರನಿಂತೆಂದಂ:—

ಎನ್ನಳಯಂ ಬರಲೊಡವಿಸಾ ।
ಕನ್ನಿಕೆಯಂ ಧರ್ಮವರ್ಧನಕ್ಷಿತಿಪತಿ ನೀಂ ॥
ಮನ್ನಿಸಿ ವಿವಾಹಮಂ ಧ ।
ರ್ಮನ್ನಿನಗಪ್ಪಂತು ಮಾಜ್ಪುದಿದನರ್ಥಿಸುವೆಂ ॥ ೭೧

ಎಂದೊಡೆ ಧರ್ಮವರ್ಧನನಂತೆಗೆಯ್ವೆನೆಂದು

ನವನೃಪಾಲಿಕೆ ಮೆಚ್ಚುವವ್ರೋ ।
ಲವಳೊರ್ವಳ್ ಕೆಳದಿಯಾದಳಿಂದಿನ್ನಂ ಭೂ ॥
ಭುವನಪತಿ ನಲ್ಮೆಯಿಂ ಕ ।
ನ್ನೆವಾಡಕಾಕ್ಷ್ಮಾದೊಳಟ್ಟಿದಂ ನೃಪತಿಲಕಾ ॥ ೭೨

ಅಂತೆನ್ನನರಸಂ ಕನ್ಯಾಂತಃಪುರಕ್ಕೆ ಕಳಪಲುಂ ಮಿತ್ರವರನ ಕಾಲ್ಗೆಱಗಿ ಏಕಾಂತದೊಳಿಂತೆಂದೆಂ:—

ತ್ರ್ಯಂಬಕನಿದಿರೊಳ್ ಪರಿತ ।
ರ್ಪಿಂಬಿನ ಕೊಳಿದೊಳಗೆ ತಿಂಗಳಿಂ ಮೇಲೆ ಮುಗು ॥
ಬ್ದಿಂಬರವೆರಡಂ ಕೊಂಡೊಲ ।
ವಿಂ ಬಂದಿರ್ದುದು ರಹಸ್ಯಮಿದು ಮಿತ್ರವರಾ ॥ ೭೩

ಎಂದು ಪೇಟ್ಟಾತನನತ್ತಲ್ ಕಳಿಪಿಯುಂ ನವನೃಪಾಲಿಕೆಯಿರ್ದೆಡೆಗೆ ಪೋಗಲವಳಿನ್ನಂ ಕಂಡು

ಭಾವಕಿಯೆನ್ನನೊರ್ವೊದಲೆ ಕಾಣಲೊಡಂ ಬೆಮರುಣ್ಮಿ ವಿಸ್ಮಯಂ ।
ತೀವಿ ಮುಖಂ ವಿಳಾಸರಸಮುಂ ತಳಿದಂಗರುಹಂ ಕೊನತ್ತು ದೇ ॥
ಪಾವಯವಂ ಕರಂ ಸ್ಫುರಿಸಿ ನಾಣ್ ತಲೆದೋಱಿ ಕಳಾಪಬಂಧಶೋ ।
ಭಾವಳಯಂ ಸಡಿಲ್ದು ನುರನಟ್ಟವೊಲಿರ್ದಳಿಳಾಧಿನಾಯಕಾ ॥ ೭೪

ಅಂತಿರ್ದಳಿಂ ಕಂಡನಂತರಂ

ಅಲಸದ ನೋಟದಿಂ ಸಡಿಲದಪ್ಪಗೆಯಿಂ ಗಳಿಗಟ್ಟಿದೊಲ್ಮೈಯುಂ ।
ಚಲಿಸದ ಚಿತ್ತದಿಂದೆ ತಣಿವಿಲ್ಲದ ಚುಂಬನದಿಂ ನಿರಂತರಂ ॥
ತೊಲಗದ ಕೂಟದಿಂ ಪದಿಪಿನಿಂ ಪೊಸತಾಗೆ ಮನೋನುರಾಗದಿಂ ।
ಕೆಲವುದಿನಂಗಳಂ ಕಳೆದೆನಾನವಳೊಳ್ ನೃಪರೂಪಮನ್ಮಥಾ ॥ ೨೫

ಅಂತಾನವಮಾಲಿಕೆಯೊಳಿಪ್ಪ ಸುಖಕಾಮಭೋಗಂಗಳನನುಭವಿಸುತ್ತಿರಲೊಂದು ದಿನಮಾನವಮಾಲಿಕೆ

ಆನಳಿನಾಸ್ಯೆ ಯೌವನರಸಾಂಬುಧಿರಾಜಮರಾಳಯಾನೆ ಪಾ ।
ಠೀನಸಮಾನನೇತ್ರೆ ವಿಮಳೋತ್ಪಳಕೇಸರವರ್ಣೆ ಸೈಕತ ॥
ಸ್ಥಾನನಿತಂಬೆ ಕೋಕಕುಚಮಂಡಲೆಯಾಂ ಸಹಿತಂ ಪಯಸ್ಯಸಂ ।
ತಾನಸಮನ್ವಿತಂ ಸಲಿಲಕೇಳಿಗೆ ಬಂದಳದೊರ್ಮೆ ಲೀಲೆಯಿಂ ॥ ೨೬

ಅವಳೊಡನೆ

ಜಲರುಹವಕ್ತ್ರೆಯರ್ ಕಫರಲೋಚನೆಯರ್ ನವಕೂರ್ಮಪಾದೆಯರ್।
ಪುಳಿನನಿತಂಬೆಯರ್ ಮಿಸುಪ ಶೈವಳಬಾಹುಳತಾವಿಳಾಸೆಯರ್ ॥
ಸುಲಲಿತಕಂಬುಕಂಧರೆಯರೊಪ್ಪುವವಿಪ್ರಸುಸನ್ನಿಭೋಷ್ಠಿಯರ್ ।
ಲಲನೆಯರೊಪ್ಪಿದರ್ ನಲಿದು ಜಂಗಮಜಾನ್ವಿಯರ್ ನಿರಂತರಂ ॥ ೨೭

ಸುತ್ತಿದ ವೇಣಿಯೊತ್ತಿದ ಕುರುಳ್ ನವಕಂಬುಕಪೆಟ್ಟ ಚಲ್ಲಣಂ ।
ಕತ್ತುರಿಬೊಟ್ಟು ಪಚ್ಚೆದೊಳೊಡಂಬಡೆ ರೌಪ್ಯಸುವರ್ಣಶೃಂಗಮುಂ ॥
ಜೊತ್ತಿನೊಳೊತ್ತಿ ಜೀಕೊರ್ದೆವೆಯಂ ಪಿಡಿದೆಯ್ದಿದರಂಬುಕೇಳಿಗಂ ।
ದುತ್ತಮಕಾಂತೆಯರ್ ವಿನಯವಂತೆಯರಂಗಜತಾಪಶಾಂತೆಯರ್ ॥ ೨೮

ಸೊಕ್ಕಿದ ಪಂಸೆಗಳ್ ನಡೆಗೆ ಕೋಕಯುಗಂ ಕುಚಕಾತುಕಕ್ಕೆ ನೀ ।
ರ್ದಕ್ಕಿಗಳಂಚರಕ್ಕೆ ಕಫರಪ್ರಕರಂ ನಯನಕ್ಕೆ ಭಕ್ತಿಯಿಂ ॥
ಮಿಕ್ಕಿದಿರ್ವರ್ಪಿನಂ ಲಲಿತಯಾನೆಯರುಚ್ಚಕುಚಪ್ರಸಿದ್ಧಿಯರ್ ।
ತಕ್ಕಳಿನಾದೆಯರ್ ವಿಮಳಲೋಚನೆಯರ್ ಜಲಕೇಳಿಗೆಯ್ದಿದರ್ ॥ ೨೯

ಅಂತು ತ್ರ್ಯಂಬಕದೇವರ ಮುಂದಣ ಸರೋವರಕ್ಕೆ ಬಂದು,

ಸುಖಿ ಸುಖಿನಾಭಿಯಿಂ ವಳಿ ವಳಿತ್ರಯದಿಂ ಕವುಳಿಂ ಮುಖಾಬ್ಜ ದಿಂ ।
ಪೊಳೆವೆಳಮಿಾಂಗಳಕ್ಷಿಗಳಂ.....ದ್ವಯದಿಂದೆ ಶೈವಳಂ ।
ಲಲಿತಭುಜಂಗಳಿಂದೊಗೆದ-ವೊಂಬಿನವಂಬುವಿನೊಳ್ ವಿಳಾಸಿನೀ ।
ಕುಲವನುರಾಗದಿಂ ಸಲಿಲಕೇಳಿಯನಂದೆಸಗಿತ್ತು ಲೀಲೆಯಿಂ ॥ ೮೦

ಮದಭೃಂಗಕ್ಕೆಣೆಯಪ್ಪ ನುಣ್ಗುರುಳ ಕರ್ಪಿಂ ಚಾರುಚಂಚತ್ಕಟಾ ।
ಕ್ಷದ ಬೆಳ್ಪಿಂ ನವಪಲ್ಲವಾಧರದ ಕೆಂಪಿಂ ನಾರಿಯರ್ ವಾರಿಯೊಳ್ ॥
ವೃದುಕಸೂತ್ರಿಯನುದ್ಭಚಂದನವಮನೊಳ್ಪಿಂ ಕುಂಕುಮಶ್ರೋಣಿಯಂ ।
ಕದಡಿಟ್ಟಂತಿರೆ ಮಾಡಿಯಾಕೊಳನೊಳೊಲ್ದೀಲಾಡಿದರ್ ಲೀಲೆಯಿಂ ॥ ೮೧

ವಿಕಸದರುಣಾಬ್ಜದೊಳ್ ಚಂ ।
ದ್ರಕಳಾಕೃತಿ ತೋರ್ಪುದಿದು ವಿಚಿತ್ರಮೆನಲ್ ಯಾ ॥
ವಕರಸದಿನೆಸೆವ ಕೆಯ್ಯೊಳ್ ।
ಸುಕರಮೆನಲ್ ಶೃಂಗವಿತತಿಯೇನೊಪ್ಪಿದುದೋ ॥ ೮೨

ಅಂಗಜನೃಪಂಗೆ ಬಾಣನಿ ।
ಷಂಗಮನೊಲ್ದೀವ ರತಿಯವೊಲೆ ಪದೆಪಿಂದು ॥
ತ್ತುಂಗಸ್ತನಿಯರ್ ಜಲಯಂ ।
ತ್ರಂಗಳನುರುಕರದೊಳಾಂತು ಕನ್ನೆಸೆದಿರ್ದರ್ ॥ ೮೩

ಕಡುಪಿಂ ಬಂದೊರ್ಬಳಾರ್ಪಿಂ ಕುಳವರ್* ಜಲವನಾರ್ದಂಡೆಯಿಂ ಪೊಯ್ಯಲಿನ್ನಾ । ವೆಡೆಗೆಂತಾ ಪ್ರೌಢೆಯೊಡ್ಡೊಡ್ಡಿನಗೆ ಮಗುಳ್ಚಿದ್ದು* ನೀಂ ಬೆನ್ನನೆಂದಾಗಳೆಯುತ್ತಂ ॥ ದೆಡಗಾಲಂ ನೀಡಿ ಮುಂದಿಟ್ಟಡರ್* ಘಟಕುಚಂ ತೋಳ್ಗಿ ಪರ್ಬಲ್ಕೆ ಕೃಂಗಂ । ಬಿಡದಂಗೈ ಕನ್ನೆಗೆಪ್ಪುದಲ್ ನಿಮಿದುರ್* ಕೆಳದಿಯುಂ ಪೊಯ್ದು ಪಿಂತಾದಳೊರ್ಬಳ್ ॥ ೮೪

ಭವನ ಲಲಾಟಲೋಚನದ ವಹ್ನಿಗೆ ಭೂಜನವಾದ ಕಾಮನುದಾ ।
ಹವನುಜೆ ನಂದಿಸಲ್ ಮಗುಟ್ಟಿದ್ದ* ಪುಟ್ಟಿಸಲಾರ್ತಪರಾದೊಡೇಂ ಸದಾ ॥
ಶಿವನ ಪರಾಕ್ರಮಕ್ಕೆ ಪಜಿ ಬಂದಪುದೆಂದುಚಿದಂತರಂಗಸಂ ।
ಭವನವನೆಂದು ನೀರ್ದಳವರೊರ್ಬರದೊರ್ಬರೊಳಾದವಿಗ್ದೆಯರ್ ॥ ೮೫

ತರುಣಿಯರಂಬುಕೇಳಿಗೆ ಲಸಜ್ಜಳವಂ ಪುಗುವಾಗಳೊರ್ಬರೊ ।
ರ್ಬರ ನೆಲಿಲೊಂದನೇಕವಿಧದಿಂ ತೆಪೆಯೊಟ್ಟಲೊಳೆಯ್ದೆ ತೋಱಿಲ ॥

ಚ್ಚರಿಯಿನಲೊಪ್ಪುತಿರ್ದುವಹಿಲೋಕದಿನೇಳ್ಗೆಯ ನಾಗಕನ್ಯಕಾ ।
ಪರಿಕರವೊಳ್ಪಿನಿಂ ಸಲಿಲಕೇಳಿಗೆ ಭೋರೆನೆ ಬರ್ಪ ವೂಳ್ಕೆಯಿಂ ॥ ೪೬

ಕೆಳದಿಯರೊರ್ಬರೊರ್ಬರ ಮುಖಾಂಬುಜದೊಳ್ ಪೊಸ ಪೊನ್ನ ಚೆನ್ನ ಜೇ ।
ರ್ಕೊಟವಿಯನೊತ್ತಲಾಸಲಿಲಧಾರೆಯು ಬೆಂಬಲಿಯೊಳ್ ನಿತಾಕ್ಷಿ
ಕೋ ॥ ಮಳರುಚಿ ನೀಳ್ದರಲ್ಕೆ ಜಲಯಂತ್ರದ ನೀರ್ ತವೆ ತೀರ್ದೊಡಂ ದೃ
ಗಂ । ಚಳರುಚಿ ನೀರ್ಗಳಿಂದು ಜಲಯಂತ್ರವನೊತ್ತಿ ಬಲಿಲ್ವರಾಕೆಯರ್ ॥

ಅಂತು ಜಲದೇವತೆಯುರೆ ವಿಳಾಸಿನಿಯುರಾದಂತೆಯುಂ, ಎಳವಿಾಂಗಳಿ ಕೆ
ಳದಿಯುರಾದಂತೆಯುಂ, ತೆರೆದುಱುಗಲೆ ತರುಣಿಯುರಾದಂತೆಯುಂ, ಮುರಾಳ
ಮುಂಡಳಿಯೆ ಮಾನಿನಿಯುರಾದಂತೆಯುಂ, ಜಲರುಪಪಜ್ಜಿ ಯೆ ಲಲನೆಯುರಾ
ದಂತೆಯುಂ, ಕುಮುದಕುಲವೆ ರಮಣಿಯುರಾದಂತೆಯುಂ, ಬಿಸಜಲತೆಯೆ ಶ
ಶಿಮುಖಿಯುರಾದಂತೆಯುಂ, ಲಾವಣ್ಯರಸವೆ ಭಾವಕಿಯುರಾದಂತೆಯುಂ ಜ
ಲಕೇಳಿಯನೆಸಗುವ ಲಲನೆಯುರ ನಡುವೆ

ನೂತನತಾರಕಾತತಿಯುತಂ ಶಶಿಲೇಖೆ ಸುಧಾಬ್ಧಿಯೊಳ್ ಪುನ ।
ರ್ಜಾತವನಾಂತರೊಳ್ ವಿಶದವಪ್ಪ ಜಲಪ್ಲವದೊಳ್ ವಿಳಾಸಿನೀ ॥
ವ್ರಾತಯುತಂ ವಿದಗ್ಧೆ ನವಮೌಳಿಕೆ ವಾರಿವಿನೋದದಿಂ ಮನೋ ।
ಜಾತನ ಬೊಂಬೆಯಂತೆಸೆದಳೀವೊಗಲ್ವೆಂ ಸುಕುಮಾರಶೀಲೆಯುಂ ॥ ೪೭

ಅಂತು ನವಮೌಳಿಕೆ ಸಂಭ್ರಮದಿಂ ಜಲಕ್ರೀಡೆಯನಾಡುವ ಸಮಯದೊಳ್

ನಾರೀವೇಷಮನುಜ್ಞಾಂ ।
ನೀರೊಳಗೆ ಮುಖಮಿಂಗಿ ಬೇಗದಿಂ ಪೈಸುಸುತ್ತಾ ॥
ಕಾರದಿನುಚ್ಚಳಿಸಿ ಕರಂ ।
ದೂರದೊಳಿರ್ದೆಲ್ಲರನಾತುಟಿಂತರ್ಜಲದೊಳ್ ॥ ೪೮

ಮುಂ ನಾಂ ಪೇಳ್ದಿಂದಬೊಳೊಲ ।
ವಿಂ ನದಿಯೊಳದೊಂದು ಕುಱುವದೆಯೊಳ್ ಮಿತ್ರಪರಂ ॥
ತನ್ನಲ್ಲಿಱುನಿರ್ದಂ ಬರ ।
ವಂ ನೋಡುತ್ತಿರಡು ನೀರೆಯಂ ಪಿಡಿದೆನ್ನಾ ॥ ೪೯

ಅಂತಿರ್ದ ಮಿತ್ರವರನಂ ಕಂಡಾತನ ಕೆಯ್ಯೊಳಿರ್ದ ನೀರೆಯನೀಸಿಕೊಂಡು,
ನಿಱುವಿಡಿದು ದುಗುಲವಮಂ ಮುಂ ।
ಜೆಱಗೆಸೆವಂತುಟ್ಟು ಮೇಲನುದಕಪ್ಲವದಿಂ ॥
ಪೊಱವಮಟ್ಟು ಮಿತ್ರವರನೊಳ್ ।
ಮೆಱೆದಿರ್ಪಂತೊಂದು ಮಾತನಾನಿಂತೆಂದೆಂ ॥ ೯೧

ಅದೆಂತೆನೆ—

ಎನ್ನ ನೊಡಗೊಂಡು ಪೋಗಿ ಮ ।
ಹೋನ್ನತಿಯಿಂ ನೃಪನ ಮುಂದೆ ನಿಂದಿರಿಸಿ ಮಗು ॥
ಟ್ಟಿನ್ನಳಿಯನಿಂದು ಬಂದಂ ।
ಕನ್ನಿಕೆಯಂ ಕರಿಸಿ ಕುಡುಸ್ರದೆಲೆ ಭೂಪಾಲಾ ॥ ೯೨

ಅಂತೆಂಬುದುಂ ಬಿಜ್ಞಯುಂ,

ಕನ್ನೆಯನಾತಂ ಕಾಣದೆ ।
ಮುನ್ನಮೆ ಪ್ರೊಯ್ತೆಂಗುಮೆಂದೊಡೆನ್ನ ಸುವಂ ಕೇಳ್ ॥
ನಿನ್ನಲ್ಲಿ ತೊಱೆವೆನೆಂದೊಲ ।
ವಿನ್ನಿಟ್ಟನೆ ವಹ್ನಿ ಕುಂಡಮಂ ಸವೆ ಬೇಗಂ ॥ ೯೩

ಎಂದು ಪೇಬಿಲಾತನಂತೆ ಗೆಯ್ವೆನೆಂದೆನ್ನಂ ಧರ್ಮವರ್ಧನನೆಡೆಗೆ ಕೊಂಡು ಪೋಗಿ

ಎನ್ನಳಿಯನಿಂದು ಬಂದಂ ।
ಮುನ್ನಂ ನಿನ್ನೊಡನೆ ಪೇಳ್ದಿ ತೆಱದಿಂ ವಿದ್ಯಾ ॥
ಸನ್ನುತನಾಚಾರಪರಂ ।
ಮನ್ನಿಸಿ ಕುಡುವೆಱೆಗೆ ತಕ್ಕನೆಂದುಱೆ ಪೇಳ್ದಿಂ ॥ ೯೪

ಅಂತು ಪೇಳ್ದು ಮತ್ತಂ

ಸಕಳಾಮ್ನಾಯಮನೊಸ್ಪವೆತ್ತು ಜನಿಸದ್ವಾಕ್ಕಾರ್ಥಮಂ ಕಾವ್ಯನಾ ।
ಟಕಮಂ ಲೌಕಿಕವಿದ್ಯೆಯಂ ಗಣಿತಮಂ ಷಟ್ತರ್ಕಮಂ ಗೀತವಾ ॥
ದ್ಯಕಳಾಕೌಶಲಮಂ ಗೃಹಸ್ಥಿತಿಯನಾಯುರ್ದಾಯಮಂ ಶಿಲ್ಪಕಾ ।
ತುಕಮಂ ಭೂಪತಿ ನೀಂ ಪರೀಕ್ಷಿಸಿವನೊಳ್ ತೋರ್ಪಂ ಮಹಾಚಿತ್ರಮಂ ॥

ವಾರಣಶಿಕ್ಷೆಯಂ ತುರಗಶಿಕ್ಷೆಯನೊಪ್ಪುವ ಚಾಪವಿದ್ಯೆಯಂ ।
ಚಾರಣಚೂರಣಾದಿ ತರವಾರಿಯ ವಿದ್ಯೆಯನಾಗಮಂಗಳಂ ॥
ಮೂರಮತಂಗಳಂ ಸ್ಮೃತಿಪುರಾಣಕಥಾಕವಿತಾಪ್ರಸಂಗವಿ ।
ಸ್ತಾರಮನೀತನಲ್ಲದಿಳೆಯೊಳ್ ಮಿಗ ಬಲ್ಲವರಾರ್ ನೃಪಾಲಕಾ ॥ ೯೬

ಮತ್ತಂ

ಕನಕಪರೀಕ್ಷೆಯಂ ಸಕಳರತ್ನಪರೀಕ್ಷೆಯನುತ್ತಮಾಂಗನಾ ।
ಜನದ ಪರೀಕ್ಷೆಯಂ ನನಸುಗಂಧಪರೀಕ್ಷೆಯನುದ್ಭವಸ್ತ್ರಸಂ ॥
ಜನಿತಪರೀಕ್ಷೆಯಂ ಭರತಶಾಸ್ತ್ರಪರೀಕ್ಷೆಯನೀತನಲ್ಲದಾ ।
ವನುವುಮಱಿಯಂ ಮದೀಯತನುಜಾತೆಗೆ ತಕ್ಕನಿಳಾಧಿನಾಯಕಾ ॥ ೯೭

ಎಲ್ಲಾ ಭಾಷೆಯನೀತಂ ।
ಬಲ್ಲಂ ದೇಶಾಂತರಂಗಳೊಳ್ ವಿಖ್ಯಾತಂ ॥
ಸಲ್ಲಲಿತನಂಕಜಂ ಭೂ ।
ವಲ್ಲಭ ಕೇಳೆನ್ನ ಕನ್ನೆಗೀತಂ ಕಾಂತಂ ॥ ೯೮

ಎಂದು ಮಿತ್ರವರಂ ಧರ್ಮವರ್ಧನಂಗೆನ್ನಂ ತೋಱಿ ಶೋಭಾವತಿಯಂ ಕರಸೆಂಬುದುಮಾತನೊರ್ವ ಕಂಚುಕಿಯಂ ಕನ್ಯಾಂತಃಪುರಕ್ಕೆ ಕಳಿಪಲಾತಂ ಶೋಭಾವತಿಯಂ ಕಾಣದೆ ಮಗುೞ್ದು ಬಂದು

ಅವಧಾನ ಧರ್ಮವರ್ಧನ ।
ನನಮಾಲಿಕೆ ತನ್ನ ಕೆಳದಿಯಂ ಕಾಣದೆ ದುಃ ॥
ಖನನೆಡೆಗೊಂಡಿರ್ದಪಳೆಂ ।
ತು ವಿಚಾರಮೆನುತ್ತೆ ಸೌವಿದಲ್ಲಂ ಪೇೞ್ದಂ॥ ೯೯

ಅಂತು ಪೇೞಲೊಡಂ

ಭೂವಳಯಾಧಿಪಂ ಬೆಱಗುವೆತ್ತು ಮುದಂ ಪೆಱಪಿಂಗಿ ಪಂದೆಯಂ ।
ಪಾನಡರ್ದಂತೆ* ತೊಟ್ಟನೆ ಕವಿೞ್ದೆಲೆ ಭೂಸುರ ನಿನ್ನ ಕನ್ನೆ ಶೋ ॥
ಭಾವತಿಯೆತ್ತ ಪೋದಳಱಿಯೆಂ ಪಗಭಾವಿಸಲಿಂತಿದರ್ಕೆ ಪೇ ।
ೞಾವುದು ಬಟ್ಟೆ ಧರ್ಮವುಱಿಯಿತ್ತೆನುತುಬ್ಬೆಗದೊಳ್ ಮುಱುಂಗಿದಂ ॥

ಅಂತು ಚಿಂತಿಸುತಿರ್ದ ಭೂಪನೊಳ್ ಮಿತ್ರವರನಿಂತೆಂದಂ:—

ಎಲೆ ಭೂಪಾಲಕ ನಿನ್ನ ನುಂದಿರದೊಳಾಂ ನಿಕ್ಷೇಪಮಾಗಿಟ್ಟ ಮು ।
ತ್ಕುಲಚೂಡಾವಮಣಿಯಪ್ಪ ಮತ್ತನುಜೆಯುಂ ನೀನಿಂತು ಪೋಗಾಡಿ ದು ॥
ರ್ಬಲನಪ್ಪೆನ್ನನುಪಾಯದಿಂ ಕಳಿಪಲಾಂ ಪೋದಪ್ಪೆನೇ ನಿನ್ನ ಕಾ ।
ಲ್ಗೊಲವಿಂ ಜೀವಮನೆಯ್ದಿ ನೀಗುವೆನಿದಂ ಕೇಳಿಂತು ನೀವೆಲ್ಲರುಂ ॥ ೧೦೧

ಎಂದು ಮತ್ತಂ

ಸಕಲೋಪಾಯದಿನಾಕ ।
ನ್ನಿಕೆಯಂ ತಂದಿತ್ತೊಡುಳಿವೆನಲ್ಲದೊಡತಿಕಾ ॥
ತುಕವಾಗಿ ಜೀವಮಂ ಬಿ ।
ಟ್ಟು ಕೆಲರ್ ನಿಂದಿಸಲಧರ್ಮಮಂ ನಿನಗೀವೆಂ ॥ ೧೦೨

ಎಂದನಂತರಂ

ರಾಜದ್ವಾರದೊಳಗ್ನಿಕುಂಡಮನಲಂಪಿಂ ಮಾಡಿ ತಂದಿಕ್ಕಿ ನಾ ।
ನಾಜೀರ್ಣದ್ರುಮಶುಷ್ಕಮಂ ಬಲಿಯಿನಲ್ಲಿ ಪ್ರಾಣಮಂ ನೀಗಲೆಂ ॥
ದಾಜಾಣಂ ಶಿಬಿಯಂ ಸಮಂತು ಬಲವಂದಿರ್ಪಾಗಳಿಚ್ಛಿರ್ವಿಷಂ ।
ರಾಜೀವಾಕ್ಷಿಯನೆನ್ನ ನಂದನೆಯನಾನೊಲ್ದೀವೆನೆಂದಂ ನೃಪಾ ॥ ೧೦೩

ಎಂದಾಗಳ್

ಚಿತ್ತಜಸನ್ನಿಭಂ ದ್ವಿಜವರಂ ಶ್ರುತಿನೀತಿಕಳಾಪ್ರವೀಣನ ।
ತ್ಯುತ್ತಮನೀವರಂಗೆ ನವಮಾಲಿಕೆಯಂ ಕುಡಲಿಷ್ಟರೆಲ್ಲರುಂ ॥
ಸುತ್ತಣ ರಾಯರುಂ ಪೊಗಲ್ವರೆಂದೊಲವಿಂ ಧರಣೀಶನೊಲ್ಮೆಯಿಂ ।
ದಿತ್ತನಲಂಪಿನಿಂದೆನಗೆ ತನ್ನ ತನೂಜೆಯನುರ್ವರಾಧಿಪಾ ॥ ೧೦೪

ಭೂಮಿಪ ಧರ್ಮವರ್ಧನನೃಪಾಲಕನೊಪ್ಪಿರೆ ಕಾಮಧೇನುವಂ ।
ಕಾಮಿಸಿದಂತೆ ಬೇಟ್ಟಿನಿತು ಮಂಗಳಸಾಧನದಿಂ ಸಭಾಗ್ರದೊಳ್ ॥
ಪ್ರೇಮದೊಳಾಕ್ಷಣಂ ಕರೆಸಿ ತನ್ನ ತನೂಜೆಯನೆನ್ನೊಳತ್ತು ಸು ।
ಕ್ಷೇಮವನಾಗಿಸೆಂದೊಸೆದು ಸೇಸೆಯನಿಕ್ಕಿದನಾಮುಹೂರ್ತದೊಳ್ ॥ ೧೦೫

ತನಗೆ ಸುತರಿಲ್ಲದುದಱಿಂ ।
ದೆನಗೈಶ್ವರ್ಯಪ್ರಸಿದ್ಧಿಯಂ ಮಾಡಿದನಾ ॥

ಜನಪಂ ಬಲಿಯಿಂದಾಂ ತ ।
ದ್ವನಿತೆಯೊಳೊಡಗೂಡಿ ಸುಖದೊಳಿರ್ಪನ್ನೆವರಂ ॥ ೧೦೬

ಅಂಗಾಧಿರಾಜನೊಲವಿಂ ।
ಸಂಗರಸಾಹಾಯ್ಯಮಾಗಲೆನ್ನಂ ಕರೆಸಲ್ ॥
ಬಿಂಗಡೆ ಬಂದು ನಿಜಾಂಘ್ರಿಯು ।
ಗಂಗಳ್ಗಿಅಗಿರ್ಪ ಸ್ಮೈಪು ದೊರೆದತ್ತೀಗಳ್ ॥ ೧೦೭

ಎಂದು ರಾಜವಾಹನಂಗೆ ಪ್ರಮತಿ ತನ್ನ ವೃತ್ತಾಂತಮಂ ಪೇೞ್ದ,

ಪರರಱಿವಿಲ್ಲದಂತು ತನಗುತ್ಕಟಪಾತಕಮೆಯ್ದದಂತು ಸ ।
ರ್ವರ ಬಗೆಗೊಪ್ಪುವಂತು ಪುರುಷಾರ್ಥಫಲಂ ತನಗೆಯುಂ ವಂತು ದು ॥
ಸ್ತರತರಕಾರ್ಯಮಂ ಪ್ರಮತಿಯಂತಿರೆ ಮಾಲ್ಪಿವನಾವನೆಂದು ಬಂ ।
ಧುರವಚನಂಗಳಂ ಪೊಗಟ್ಟಿ* ಮೆಚ್ಚಿದನಾಗಳಭಂಗವಿಕ್ರಮಂ ॥ ೧೦೮

॥ ಗದ್ಯ ॥

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚೌಂಡರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಪ್ರಮತಿಕಥಾವೃತ್ತಾಂತಂ

ಏಕಾದಶಾಶ್ವಾಸಂ

॥ ದ್ವಾದಶಾಶ್ವಾಸಂ ॥

—ಮಿತ್ರಗುಪ್ತನ ಕಥೆ—

ಶ್ರೀನಂದನಸನ್ನಿಭನಭಿ ।
ಮಾನಧನಂ ಮಿತ್ರಗುಪ್ತನಂ ನೋಡಿ ಮನೆ ॥
ಕ್ಷಾನಂದಮನೆಸಗೆಂದಂ ।
ಭೂನಾರೀಪತಿಯಭಂಗವಿಟ್ಠಲಭೃತ್ಯಂ ॥ ೧

ಎಂಬುದುಂ ಮಿತ್ರಗುಪ್ತಂ ಕೆಯ್ಗಳಂ ಮುಗಿದು,
ಜನಪತಿ ಬಿನ್ನಪಂ ಸಖರೊಳಿಲ್ಲರ ಮಾತ್ಕೆಯೊಳಾಂ ತ್ವದೀಯಪಾ ।
ವನಪದಪದ್ಮಮುಂ ಪದೆಪಿನಿಂದಱಿಸಲ್ ಪೊಱಮಟ್ಟು ಸಂತತಂ ॥
ಜನಪದವೆಲ್ಲಮುಂ ತಿರಿಗಿ ಧರ್ಮನಿವಾಸದ ಸಿಂಹದೇಶಮುಂ ।
ಮನವೊಸೆದೆಯ್ದಿ ಸಿಂಹಪುರಮುಂ ಮಿಗೆ ಪೊಕ್ಕೆನತೀವರಾಗದಿಂ ॥ ೨

ಅಂತು ಸಿಂಹಪುರಮುಂ ಪೊಕ್ಕಿರ್ದನ್ನೆಗಂ
ಮನಸಿಜಚಿತ್ತವೋಹಿನಿಗೆ ಸತ್ಪಥಗಾಮಿನಿಗುಗ್ರಪಾಶಲೋ ।
ಪಿನಿಗೆ ಪುರಾರಿಕಾಮಿನಿಗೆ ಭೀಕರಶೂಲಿನಿಗಗ್ನಿಭಾಳಲೋ ॥
ಚನಿಗೆ ಮೃಗೇಂದ್ರವಾಹಿನಿಗೆ ವರ್ಣಿತವರ್ಣಿನಿಗೊಲ್ದು ವಿಂಧ್ಯವಾ ।
ಸಿನಿಗೆ ಜಗಜ್ಜನಂ ಪರಕೆಯುಂ ಸಲಿಸಲ್ ನೆರೆದಿರ್ದುರ್ವಿಪಾ ॥ ೩

ಅಂತಾವಿಂಧ್ಯವಾಸಿನಿಗೆ ಜಾತ್ರೆ ನೆರೆದಿರಲಾಂ ಪೋಗಲಲ್ಲಿ
ವಿಕಾಂತಸ್ಥಳದೊಳ್ ಚಿಂ ।
ತಾಕುಳಿವುಂ ನೀಗಲೆಂದು ಕುಳಿ ಳ್ಕುರ್ ವಿಪಂ ॥
ಚೇಕೇಳಿಯೊಳಿರ್ದಂ ನಿ ।
ರ್ವ್ಯಾಕುಳದಿಂದೊರ್ಬ ಸೌಮ್ಯನುರ್ವೀನಾಥಾ ॥ ೪

ತುದಿನೆರಲಿಂದೆ ಮುಟ್ಟಿಯೆಡಗೆಯ್ಯೊಳಮರ್ಚಿ ಸುಡಾಳದಿಂಪ್ರನು ।
ಣ್ಪೊದವಿರೆ ಕೇಳ್ದ ಕೋವಿದರೆ ಕರ್ಣರಸಾಯನಮೆಂಬ ಮಾತ್ಕೆಯಿಂ ।
ತೊದಳಿನಿತಿಲ್ಲದೊಪ್ಪಿಸುವ ವಾಣಿಯ ಜಾಣ್ಮನಿಡಿ ಕೇಳಲಾಯ್ತನಲ್ ।
ಸದನುಳವೀಕ್ಷೆಯುಂ ಪದೆದು ಬಾಚಿಸುತರ್ದನನೇಕರೀತಿಯಿಂ ॥ ೫

ಅಂತಿರ್ದ ವೀಣಾಧರನಂ ಕಂಡು,

ನೆರವಿಯನುಟ್ಟಿದೊರ್ಬನೆ ಬಂ ।
ದು ರಹಸ್ಯದೊಳರ್ಪಿಯೇಕೆ ನಿನ್ನಯ ಪೆಸರೇಂ ॥
ಪರಿವಾದಿನಿಯಂ ಸತತಂ ।
ಪರಮಪ್ರಿಯತಮೆಯನಪ್ಪವಂತಪ್ಪಿರಲೇಂ ॥ ೬

ಎಂದಾಂ ಬೆಸಗೊಳಲಾತನಿಂತೆಂದಂ:—

ತನ್ನಯ ಮನಕ್ಕೆ ಬಾರದ ।
ರೆನ್ನರ್ ನೆರೆದಿರ್ದೊಡೇನದಂತಿರ್ಕೆ ನಿಜ ॥
ಕ್ಕೆನ್ನ ಪೆಸರಂ ವಿಚಾರಿಸೆ ।
ಸನ್ನುತಮತಿ ಕೋಕಿಲದಾಸನೆಂಬುದು ಕಳಿಯಾ ॥ ೭

ಎಂದು ತನ್ನ ಪೆಸರಂ ಪೇೞ್ದೆನ್ನಂ ಮಿತ್ರನಪ್ಪಂತು ಭಾವಿಸಿ ಕೋಕಿಲದಾಸಂ ವೀಣೆಯನಪ್ಪಿದ ಕಾರಣಮುಂ ಪೇೞಲಿಂದಿಂತೆಂದಂ.—

*ಪೆಸರರ್ವೆತ್ತೀಶುಭಸಿಂಹಪತ್ತನದಧೀಶಂ ತುಂಗಧನ್ವಂ ತದೀ ।
ಯಸತಿ ಪ್ರಸ್ತುತಿವೆತ್ತ ಮೋದಿನಿಯವರ್ ಬಂದಿಲ್ಲಿಗೀದುರ್ಗಿಯಂ ॥
ಪಸೆದಿರ್ದರ್ಚಿಸಿ ರತ್ನ ಸಂತತಿಗಳಿಂ ಮತ್ತಂತವರ್ ಬೀಡಿದರ್ ।
ವಸುಧಾವಂದಿತಪುತ್ರನಪ್ಪ ವರಮುಂ ಚಂಚತ್ತ ಪೋನಿಷ್ಠೆಯಿಂ ॥ ೮

ಅಂತವರ್ ತಪೋನಿರ್ಬಂಧದಿಂದಿರಲೊಡಂ ವಿಂಧ್ಯವಾಸಿನಿ ಪ್ರಸನ್ನೆಯಾಗಿ

ಮನಸಿಜನುತ್ತಹಸ್ತಿನಿಯೆನಿಪ್ಪ ಕುಮಾರಿಯನೊರ್ಬಳಂ ಜಗ ।
ಜ್ಜನಹಿತಕಾರಿಯಪ್ಪ ಸುತನೊರ್ಬನನಂತವರ್ಗೊಲ್ದು ವಿಂಧ್ಯವಾ ॥
ಸನಿ ಪದೆದಿತ್ತಿನೆಂದು ವರಮುಂ ದಯೆಗೆಯ್ಯಲೊಡಂ ನೃಪಾಲನುಂ ।
ವನಿತೆಯುಮಿರ್ವರುಂ ಸುಖಸುಧಾಂಬುಧಿಯೊಳ್ ಮುಳುಗಿರ್ದರಲ್ತಿಯಿಂ ॥

ಅಂತು ಸಂಕಲ್ಪಿಸಿದ್ದರಾದ ದಂಪತಿಗಳ್ಗೆ ವಿಂಧ್ಯವಾಸಿನಿ ಮಗುೞ್ದಿಂತೆಂದೞ್

ನಿಮಗಾನಿತ್ತ ತನೂಜೆ ಬಂದೆನಿಗೆ ತತ್ಪೂರ್ವಾರ್ಧ್ಯದೊಳ್ ಕೂರ್ತು ಸಂ ।
ಭ್ರಮದಿಂ ಕಂತುಕಕೇಳಿಯಂ ಸಲಿಸುತಿರ್ಕಾಕಾಂತೆಯೊಳ್ ಕೂರ್ತವಂ ॥
ರಮಣಂ ತಾನೆನಿಸಿರ್ಕೆ ತದ್ರಮಣನಂ ನಿನ್ಮಾತ್ಮಜಂ ಸೇವೆಗೆ ।
ಯ್ದಿ ಮಗಳ್ಗಾಪ್ಪವ ಕಂತುಕಾವತಯೆನಿಪ್ಪನಾಮನುಕ್ಕಾವಗಂ ॥ ೧೦

ಎಂದು ಮತ್ತಮಿಂತೆಂದಳ್:—

ನಿನ್ನ ಮಗಳುತ್ಸವಂ ಮಿಗ ।
ಲಿನ್ನಿದಿರೊಳ್ ಮಾಪ್ಪಿ ಕಂತುಕಕ್ರೀಡಾಸಂ॥
ಪನ್ನದ ದೆಸೆಯಿಂ ತತ್ಸ ।
ರ್ವನ್ನೊೀಡೆ ಸುಕಂತುಕಾಖ್ಯನುಂ ತಳೆದಿರ್ಪಂ ॥ ೧೧

ಎಂದು ಭವಿಷ್ಯದ್ವರ್ತಮಾನನಂ ಪೇಟಿಲಾತುಂಗಧನ್ವಂ ಮಹಾಪ್ರಸಾದಮೆಂದು ವಿಂಧ್ಯವಾಸಿನಿಯಂ ಬೀಳ್ಕೊಂಡು ಮೇದಿನೀಸಹಿತಂ ನಿಜನಿವಾಸಕ್ಕೆ ಬಂದಿರಲ್ ಕೆಲವು ದಿನಕ್ಕೆ

ಧರೆ ಪೊಗಟೆ ತುಂಗಧನ್ವಂ ।
ಗರವಿಂದಾವೋದೆ ಮೇದಿನೀದೇವಿಗೆ ಸು ॥
ಸ್ಥಿರದಿಂದೆ ಜನಿಸಿದರ್ ಭೂ।
ಸ್ಥಿರದೀಧಿತಿಸನ್ನಿಭರ್ ಕುಮಾರಿಕುಮಾರರ್॥ ೧೨

ಅಂತು ಜನಿಸಲೊಡಂ,

ತನಯಂಗೆ ಭೀಮಧನ್ವಂ ।
ತನೂಜೆಗತಿನುದದೆ ಕಂತುಕಾವತಿಯೆಂದೊ ॥
ಪ್ಪಿನ ಪೆಸರ್ಗಳನೊಸೆದಿಟ್ಟಂ ।*
ಜನನಾಥಂ ತುಂಗಧನ್ವನುತ್ಸವದಿಂದಂ ॥ ೧೩

ಅಂತವರ್ಗೆ ಪೆಸರಿಡಲ್ ವರ್ಷಕ್ರಮದಿಂದವರ್ ಪರಿವರ್ಧಿಸೆ

ಪೆಸರ್ವೆತ್ತ ಕಂತುಕಾವತಿ ।*
ಗೆ ಸಖತ್ವಮನಾಂತು ಜೀವದಂತಿರ್ಪಳ್ ಭೂ॥
ವಿಸೆ ಚಂದ್ರಸೇನೆಯೆಂಬಳ್ ।
ಕುಸುಮಾಯುಧನರಲ ಸರಲನೀಲ್ಮಿಳಿಗೊಳ್ವಳ್॥ ೧೪

ಪದನಖಕಾಂತಿ ತಾರಗೆಗಳಂ ಗೆಲೆ ನಿರ್ಮಳದಂತದೀಪ್ತಿ ಕಾ ।
ಮುದಿಗೊಱೆಗಟ್ಟೆ ಲೋಚನೆಯುಗಾಂಚಲರಶ್ಮಿ ಚಕೋರಿಗಳ್ಗೆ ಸಂ ॥
ಪದವನನುರ್ಚೆ ಮೆಲ್ನುಡಿ ಕರಂ ಸುಧೆಯಂಪನೊಡರ್ಚೆ ಕಾಮುಕ।
ರ್ಗದವಟಿಲಂ ಮುಖಮೆಂದು ಕುತೆ ಬಣ್ಣಿಸದಿರ್ಪರೆ ಚಂದ್ರಸೇನೆಯಂ ॥ ೧೫

ಅಚಂದ್ರಸೇನೆಗೆನಗೆ ಮು ।
ಹಾಚೇತಃಪ್ರೀತಿ ಪೆರ್ಚಲಂಗಜನಿರ್ಬ ॥
ರ್ಗಾರ್ಚಾರ್ಯನಾಗಿ ಮುಂಗಳ ।
ವಾಚಕದಿಂದೊಂದುಗೂಡಿದಂ ಮುದವೆಸೆಯುತ್ ॥ ೧೬

ಅಂತಾಚಂದ್ರಸೇನೆಗಮೆನಗಮನ್ಯೋನ್ಯಸ್ನೇಹಂ ಸಂದಿರೆ,
ಈಗಳ್ ಕಾಮುಕಭೀಮಧನ್ವನನಳಂ ತನ್ನೊಳ್ಮೆಯಿಂ ನಿತ್ಯಸಂ ।
ಭೋಗಸ್ತ್ರೀಯನೆ ಮಾಡಿಕೊಂಡಿರಲವಂ ಮತ್ಸ್ವಾವಿಪ್ರತ್ರಂ ಕನೆ ॥
ಲ್ದೀಗೆಯ್ವಂ ಕೊಲಲಾಗದೆಂದು ಮನದೊಳ್ ಕಟ್ಟೇವಮೆಯ್ದಲ್ಕೆ ವೀ।
ಣಾಗಾಂಧರ್ವದ ಸೌಖ್ಯದಿಂ ಮಱುವೆನೆಂದಿರ್ದಪ್ಪೆನೀತಾಣದೊಳ್ ॥ ೧೭

ಮುದದೆಡೆಗೆ ದುಃಖದೆಡೆಗಂ ।
ಸುದತಿಯರ ವಿಯೋಗದೆಡೆಗೆ ಕೂಡಿರ್ದೆಡೆಗಂ ॥
ಕದಡಿರ್ದ ಚಿತ್ತದೆಡೆಗಂ ।
ಪದೆಪಿಂದಂ ಬಂಧುವಲ್ತೆ ಸಂಗೀತರಸಂ ॥ ೧೮

ಎಂದು ಕೋಶದಾಸು ತನ್ನ ವೃತ್ತಾಂತಮುಂ ಪೇಳ್ದಿ ಸಮಯದೊಳ್

ನೂಪುರದಿಂಚರಂ ನನಕಳಾಸಮನೂನ..... ।
.....ರತ್ನವಳಯಧ್ವನಿ ಚಿತ್ತಜಚಾಪಟಂಕೃತಂ॥
ವ್ಯಾಪಿಸಿದತ್ತು ನಾಲ್ದೆಸೆಯನೆಂಬಿನವೊಂದೆಸೆಯುಲ್ಕದೊರ್ವ ಶೋ ।
ಭಾಪರಿಪೂರ್ಣೆ ಬಂದಳತಿಸಂಭ್ರಮದಿಂ ಪದೆದಲ್ಲಿಗಾಕ್ಷಣಂ ॥ ೧೯

ಅಂತವಳ್ ಬರಲೊಡಂ,

ಶಂಕಿಸದೆ ಕೋಶದಾಸಂ ।
ಭೋಂಕೆನಲಿಟ್ಟಿವಳನಪ್ಪಿಯಂತಿಕದೊಳ್ ಪೆಂ ॥
ಪಿಂ ಕುಳ್ಳಿರಿಸಿ ಬಳಿಕ್ಕಾ ।
ತಂ ಕಡುಪಿಂದಂ ಪೇಳ್ದಿನೆನಗೆ ತತ್ಕೃತುಕಮಂ ॥ ೨೦

ಅದೆಂತೆನೆ:—

ನಿನ್ನೊಳ್ ಮುದದಿಂದಾಂ ಪೇ ।
ಟ್ಟೆನ್ನ ಪ್ರಾಣಾಧಿನಾಥೆಯಾಕೆ ಕಳಾಸಂ ॥

ಪನ್ನಗುಣಿ ಚಂದ್ರಸೇನೆ ಮು ।
ಹೋನ್ನ ತಸೌಭಾಗ್ಯವಂತೆ ಭಾವಿಸು ಕೆಳೆಯಾ ॥ ೧೧

ಎಂದಾಚಂದ್ರಸೇನೆಯನೆನೆಗೆ ತೋಱಿ ಮಗುಳ್ದಾಕೆಯೊಳಾತನಿಂತೆಂದಂ:—

ಪೀನನಿತಂಬೆಯರ್ ಗುರುಪಯೋಧರೆಯರ್ ನಳತೋಳ ಬಾಲೆಯರ್ ।
ಮಾನನಿಭಾಕ್ಷಿಯರ್ ಕುಟಿಲಕುಂತಳೆಯರ್ ನವಕಂಬುಕಂಠೆಯರ್ ॥
ಮಾನಿನಿಯರ್ ಕೆಲರ್ ಮದನಲಕ್ಷ್ಮಿ ಯರಂತಿರೆ ವಿಂಧ್ಯವಾಸಿನೀ।
ಸ್ಥಾನಮನೆಯಿ೦ದರ್ ಪದೆದು ನೋಲ್ಪಿರ ಕಣ್ಗಳ ಪರ್ವಮೆಂಬಿನಂ॥ ೧೨

ಅಂತು ನೆರೆದು ಬಂದ ತರುಣಿಯರ ನಡುವೆ

ನಗೆಗಣ್ ಮಿಂಚಿನ ಗೊಂಚಲಂ ಮಿಗುವಿನಂ ಕರ್ಪಿಂ ಲಸದ್ವೀಣೆ ಕಾ ।
ರ್ಮುಗಿಲಂಗೆಲ್ವಿನಮಿಂದ್ರಚಾಪರುಚಿಯಂಭೂಷಾಮಣಿಜ್ಯೋತ್ಸ್ನೆಗಳ್ ॥
ನಗುವಂತಿರ್ದಿನಮಾತ್ತಯೌವನರಸಂ ತೇರೈಪಿನಂ ಧೂರ್ತರಂ ।
ಬೆಗಳಂತಂಜುವಿನಂ ಪಯೋಧರೆಯದೊರ್ಬಳ್ ಕಣ್ಗೆ ವಂದಳ್ ನೃಪಾ ॥

ಅಂತಿರ್ದ ವಿಳಾಸಿನಿಯಂ ಕಂಡಿವಳಾರೆಂದಾಂಚಂದ್ರಸೇನೆಯುಂ ಕೇಳಲವಳಿಂತೆಂದಳ್:—

ಇವಳಲ್ತೆ ಕಂತುಕಾವತಿ ।
ಭುವನೇಶ್ವರಿಯೆನಿಪ ವಿಂಧ್ಯವಾಸಿನಿಗೆ ಮುಹೋ ॥
ತ್ಸವದಿಂ ಕಂತುಕಕೇಳಿಯ ।
ನವಿರಳದಿಂದೆಸಗಲೆಂದು ಬಂದಳ್ ನಲವಿಂ ॥ ೧೫

ಎಂದು ಮತ್ತಂ,

ನಿಮ್ಮಯ ಕಣ್ಗಳ ಪರ್ವಮ ।
ನೆಮ್ಮರಸಿಯ ಸೆಂಡಿನಾಟದೊಳ್ ಪಡೆದೊಡೆ ನೀ ॥
ವ್ಯಮ್ಮಹದಿಂ ನೋಲ್ಕೆಯೆನು ।
ತ್ತೆವ್ವರ್ಬರನಾಕೆಯೆಡೆಗೆ ಸಖಿ ಕೊಂಡುಯ್ದಳ್ ॥ ೧೬

ಅಂತೆವ್ವರ್ಬರಂ ಚಂದ್ರಸೇನೆ ರಂ। ಭೂಮಿಗೊಡಗೊಂಡು ಪೋಗಲವಗಳ್ ಕಂತುಕಾವತಿ

ಅಳಕಂ ಜೋಲ್ಪಿರೆ ಹಾರಮೊಗ್ಗುಡಿಸೆ ಚಂಚತ್ಕರ್ಣಪತ್ರಂ ಕರಂ ।
ಪೊಳೆಯಲ್ ವೇಣಿ ಕೆಲಕ್ಕೆ ಜಾಱೆ ವಿಳಸತ್ಪಂವ್ಯಾನಬಂಧಂ ಕುಚ ॥
ಸ್ಥಳದಿಂದೊಯ್ಯನೆ ಪಿಂಗೆ ತೋಳ್ಗಳ ಮೊದಲ್ ಕೆಲ್ವಾಗಿರಲ್ ಕೋಮಳಾಂ।
ಜಳಿಹಸ್ತಂಗಳಿನೊಲ್ದು ಕಾಂತೆ ಪೊಡೆವುಟ್ಟಳ್ ದೇವಿಗಾನಂದದಿಂ ॥ ೨೬

ಅಂತು ಕಂತುಕಾವತಿ ವಿಂಧ್ಯವಾಸಿನಿಗೆ ನಮಸ್ಕರಿಸಿಯನಂತರಂ,

ಮಣಿಮಯಕಾಂಚಿಯುಂ ಬಿಗಿದು ಕಂಚುಕಮುಂ ಕುಚಮಂಡಲಕ್ಕೆ ಕೇ ।
ವಣಿಸಿಯೆಱಿಲ್ವ ಮುಂಜೆಱಿಗನೊಯ್ಯನೆ ಸಕ್ಕಿ ನವೀನರತ್ನಕಂ ॥
ಕಣಮೆಸೆವಂಗನಂ ದನಿಗುಡಲ್ಕೆ ಭವಾನಿಯ ಮುಂದೆ ಯಾವಕಾ ।
ರುಣಕರದೊಳ್ ಕುಮಾರಿ ತಳಿದಳ್ ಪ್ರಸನಸೆಂಡನನಂಗಪಿಂಡಮಂ ॥ ೨೭

ಮದನನ ಶೃಂಗಾರಮನೊ ।
ರ್ವೊದಲಂಗನೆ ಮುದ್ದಿಮಾಡಿ ತೋರ್ಪವೊಲೊಪ್ಪಿ ॥
ರ್ದುದು ಚೆಲ್ವ ಸೆಂಡು ವಿಟರ ।
ಳ್ಳೈರ್ದೆಯೊಯ್ಯನೆ ಕಂತ ಕಾವತಿಯ ಬಲಗೆಯ್ಯೊಳ್ ॥ ೨೮

ಅಂತಿರ್ದ ಸೆಂಡಂ ಕೊಂಡು

ಮೊದಲೊಳ್ ಮೆಲ್ಲನೆ ಸೆಂಡನಿಟ್ಟು ನೆಗೆಯಲ್ ಮೆಲ್ಪಿಂದಪಳ್ ಪೊಯ್ದುಪೊ
ಣ್ಮಿದ ಸೆಂಡಂ ನಖದೀಪ್ತಿ ರಂಜಿಸುವಿನಂ ಮೇಗೆಯ್ಯೊಳಾಂತಾಗಳಂ ॥
ತದನರ್ಪಿಂ ಮಗುಳಿದ್ದ ರ್ವಿಯೊಳ್ ಪೊಡೆದು ಗೋಮೂತ್ರಂಬೊಲೊರ್ಮೆ
ಯ್ದಿ ತಾ । ಳದ ಸೂಪಿಂ ತಿಳಿದಾಡಿವಳ್ ಸುದತಿ ಪೆಂಪಿಂ ಕಂತುಕಕ್ರೀಡೆಯಂ ॥

॥ ಮಲ್ಲಿಕಾಮಾಲೆ ॥

ವಾರಿಜಾನನೆ ಸೆಂಡನಿರ್ಕ್ಕಲದೊಳ್ ನಿಮಿರ್ದು ಕರಾಗ್ರದಿಂ ।
ಜಾಱಿ ಮೆಟ್ಟುತೆ ಪೊಯ್ಯಲಂಗದರತ್ನಕಂಕಣನೂತ್ನಮಂ ॥
ಜೇರಕಧ್ವನಿ ಪಂಚಬಾಣಶರಾಸನಧ್ವನಿಯಂತೆ ವಿ ।
ಸ್ತಾರದಿಂ ಪೊಱಪೊಣ್ಮಲಾಡಿದಳಂತು ಕಂತುಕಕೇಳಿಯಂ ॥ ೩೦

ಭ್ರಮರಿಗುಡುತ್ತೆ ಕಂತುಕಮನಂಗನೆ ಪೊಯ್ಯಲಲಾತಚಕ್ರನಂ ।
ತಮ್ಮರ್ದಿರೆ ಸೆಂಡು ವೃತ್ತತೆಯೊಳಗಾನೆ ಮಧ್ಯದೊಳೊಪ್ಪುತಿರ್ದಳು ॥
ತ್ತಮಪರಿವೇಷಮಧ್ಯದ ಶಶಾಂಕಕಲಾಕೃತಿಯಂತೆ ಪೆತ್ತವಿ ।
ಭ್ರಮವನೊಡರ್ಚುತಿಲ್ಲರೊಳದೇವೊಗಟ್ವಿಂ ಕವನೀಯಕೇಳಿಯುಂ ॥

ಅಂತು ಭ್ರಮರಿಗುಡುವಾಗಳ್
ಸೊಗಸೆಸೆಯೆ ಕೋಶದಾಸನ ।
ಪಿಗಲೊಳ್ ಮುಂಗೆಯ್ಯನಿಟ್ಟಿಸಿ ನಿಂದಿರ್ದನ್ನಂ ॥
ವ್ಯಗನೇತ್ರೆ ಕಂಡು ಚಿತ್ತಂ ।
ಬುಗುವಂತಿರೆ ಮಗುಬ್ಬಿ* ಮಗುಬ್ಬಿ* ನೋಡಿದಳಾಗಳ್ ॥ ೩೦

ಅಂತು ನೋಡಿ ಮತ್ತಂ,

ಬಡನಡುವಿಂಗೆ ಲಂಘಿಸಿ ಕುಚಕ್ಕೆಡರ್ದಿಂದುಟಿಯಂ ತುಡುಂಕಿ* ಮೀ ।
ಣುಡಿಗಿರಚಿಯೆದ್ದ ಮುಂದಲೆಗೆ ಪಾಯ್ದು ವಿಟಾಗ್ರಣಿಯಂತೆ ಕಂತುಕಂ ॥
ತೊಡರ್ದಪ್ಪುದೆಂದು* ಕಾಂತೆ ವೈದುಹಸ್ತದಿನೋವದೆ ಪ್ರೊಯ್ಯೆ ಮತ್ತೆ ಮೆ ।
ಲ್ಲಡಿಗಳನಂಟಿ ಪೆಚ್ಚುವುದದಲ್ತೆ ಗುಣಾಧಿಕನೀತಿ ಧಾತ್ರಿಯೊಳ್ ॥ ೩೧

ವಿಲಸತ್ಕಂತುಕಮಂ ಪ್ರಟಂನೆಗೆವಪ್ಪೋಲ್ ಮಾರ್ಪ್ರೊಯ್ದು ಸೆಂಡೆಯ್ತರಲ್
ನಲವಿಂದಂ ಪ್ರೊಱುಕೆಯ್ಯೊಳಾಂತು ಮಗುಬ್ಬಿ*ರ್ದಿಂ ಮಾಣದೋರಂತೆ ತಾ॥
ಳಲಯಂ ರಂಜಿಸೆ ಚಿತ್ರಬಂಧಗತಿಯೊಳ್ ಸೂಜ್ಕೆಟ್ಟನೊಳ್ ಪ್ರೊಯ್ದುಕೋ।
ವುಳಿ ಪ್ರಷ್ಪಾಸ್ತ್ರವನೀಡ್ದಿ ಮೂಡಿಗೆಗಳಂ ಪುಷ್ಪಾಸ್ತ್ರಮಂ ಪ್ರೊಯ್ಯಳೀ ॥

ನಡೆಸೆಂಡಂ ಪ್ರೊಡೆಸೆಂಡನಾರ್ಪಿನೊದೆಸೆಂಡಂ ಪೂರ್ವಸೆಂಡಂ ಕರಂ ।
ಪಡಿಸೆಂಡಂ ಸುಱಿಸೆಂಡನಿರ್ದೆಸೆಗಳೊಳ್ ಪ್ರೊಯ್ಸೆಂಡನೂರ್ಧ್ವಕ್ಕೆ ಪ್ರೊ॥
ಯ್ದಿಡುಸೆಂಡಂ ಪ್ರೊಱುಕೆಯ್ಯೊಳಪ್ಪಳಪ ಸೆಂಡಂ ಚಿತ್ರಬಂಧಂಗಳೊಳ್ ।
ತೊಡರ್ದೊಪ್ಪಂಬಡೆದಾಡಿದಳ್ ವಿಟಜನಂ ಕೊಂಡಾಡಿ ಬೆಂಡಪ್ಪಿನಂ* ॥ ೩೨

ಅಂತು ಕಂತುಕಕ್ರೀಡೆಯಂ ಮಾಡಿ ಕಾಮನಂ ಕಾಡಿ ವಿಂಧ್ಯವಾಸಿನಿ
ಯಂ ಬೀೞ್ಕೊಂಡು ವಿಳಾಸಿನೀಜನಂಬೆರಸು ನಿಜನಿವಾಸಕ್ಕೆ ಪೋಗುತ್ತಿ

ಅಂತಾಕೆ ಮನೆಗೆ ಪೋಗು ।
ತ್ತುಂ ತಿರಿಗಿ ಮುದೀಯವಕ್ತ್ರಮಂ ನೋಡಿದಳೋ ॥
ರಂತೆಸೆವ ತನ್ನ ಜೀವಂ ।
ಪಿಂತಿರ್ದತ್ತಿಂಬ ತೆಱನನನುಕರಿಸುತ್ತುಂ ॥ ೩೩

ವಿಣವಿಶಾಲನೇತ್ರೆ ಪದೆದೆನ್ನ ಮನೋಹರವಕ್ತ್ರಪದ್ಮವುಂ ।
ಕೂಣಿತದೃಷ್ಟಿಯಿಂದಡದುರ್* ನೋಡಲೊಡಂ ಕಡುಕೆಯ್ದು ಮನ್ಮಥಂ ॥

ಬಾಣಸಮೂಹವುಂ ಮುಳಿಸಿನಿಂ ಪದೆದಾರ್ದುವುದೆನ್ನ ಮೇಲವಂ ।
ವಾಣಿದೆ ಸೂಸಲಾಂ ವುನದ ಧೈರ್ಯದ ಬಲ್ಪಿನೊಳಿರ್ದೆನುರ್ವಿಪಾ ॥ ೫೬

ಅಂತೆನ್ನಂ ನೋಡುತ್ತವಳತ್ತಲ್ ಪೋದಳ್. ಇತ್ತಲಾನುಂ ಕೋಶದಾಸನುಂ ಪೂರ್ವಸ್ಥಾನಕ್ಕೆ ಬಂದಿರ್ದುದುಮಲ್ಲಿಗೆ ಚಂದ್ರಸೇನೆ ಬಂದು

ಪಾಪಾತ್ಮಭೀಮಧನ್ಯಂ ।
ಕೋಪಿಸುವಂ ಪಿಂದೆ ತಡೆದಿರಲ್ಕೆನ್ನಂ ಕಾಂ ॥
ತಾ ಪತಿಯೊಡನಾಂ ಬೇಗಂ ।
ಪೋಪೆಂ ಕೇಳ್ ಕೋಶದಾಸ ಬೆಸಸೇಗೆಯ್ವೆಂ ॥ ೫೭

ಎಂದು ಚಂದ್ರಸೇನೆ ಕೋಶದಾಸಂಗೆ ಪೇಟ್ದು ಪೋಪೆನೆಂಬಾಗಳಾನವಳ್ಗಿಂತೆಂದೆಂ:—

ಆನೊಂದೌಷಧಿಯಾಯುಲ್ ।
ವಾನರಿಯಾಗಿರ್ಪೆಯವನ ಕಣ್ಗಳ್ಗಿಲೆ ಚಂ ॥
ದ್ರಾನನೆಯದಱಿಂ ಬಿಡುಗುಂ ।
ವಾನಿನಿ ನಿನ್ನಾಸೆ ಭೀಮಧನ್ಯಂಗಾಗಳ್ ॥ ೫೮

ಎಂಬುದುವುವಳಿಂತೆಂದಳ್:—

ಇನಿತೊಂದಾಯಾಸಮೇತಕರ್ಕನಗೆ ಕಪಿನುಖಿಂ ತಾನದೇತಕರ್ಕೆ ಕಾಂತಾ ।
ಜನರತ್ನಂ ತುಂಗಧನ್ಯಾತ್ಮಜೆ ನಿನಗೆನಸುಂ ಕಾಂತೆಯಾಗಲ್ಕೆ ನಿನ್ನಾ ॥
ಳಿನಿಸಿರ್ಕುಂ ಭೀಮಧನ್ಯಂ ಜನನಫಲವವಂಗಾಂ ಬಲಿಕ್ಕಾತನಿಂ ಭೋಂ ।
ಕೆನೆ ಪಿಂಗಿರ್ಪಂತುಟಕ್ಕುಂ ಸತಿಯೆನಿಸುವೆನೀಕೋಶದಾಸಂಗೆ ಸತ್ಯಂ ॥ ೫೯

ಎಂದವಳ್ ಪೇಟೆ ಕಂತುಕಾವತಿ ಕಾಂತೆಯಪ್ಪ ಕಾರಣಮೆಂತೆಂದಾಂ ಕೇಳ್ವುದುಮವಳಿಂತೆಂದಳ್:—

ಸೆಂಡಾಡುತ್ತಮೆ ಕಂತುಕಾವತಿ ಕಳಾಸಂಪನ್ನೆ ನಿನ್ನಾಸ್ಯವುಂ ।
ಕಂಡುನ್ಮಾದವುನೆಯ್ದೆ ಮೆಯ್ಮಱೆದು ತನ್ನೊಳ್ತಾನೆ ಮತ್ತವ್ವುನಂ॥
ಗಂಡಪ್ಪರ್ಕಳರೆಂದು ವಂಚಿಸಿಯನಂಗೋದ್ರೇಕದಿಂ ಪೋಗಲಾಂ ।
ಕಂಡೆಂ ಕಾಂತೆಯ ಭಾವವುಂ ನಿನಗವಳ್ ಸ್ತ್ರೀಯಪ್ಪಳೆಂಬಂದವುಂ ॥ ೬೦

ಭವಮೂರ್ತಿ ವಿಂಧ್ಯವಾಸಿನಿ ।
ಭವಿಷ್ಯದರ್ಥವುನಲಂಪಿನಿಂ ಪೇಟ್ದಿಳ ಕೇಳ್ ॥

ಯುವತಿಗೆ ವಲ್ಲಭನಾಗಿ ।
ರ್ವಂಗೆ ಮಿಗೆ ಭೀಮಧನ್ವನಾಳಿಂಬೊಲವಿಂ ॥ ೪೧

ಅದಱಿಂ ನಿನಗೆ ಕಾಂತಕಾವತಿ ಕಾಂತೆಯುಂ ಭೀಮಧನ್ವಂ ಭೃತ್ಯನುಮಪ್ಪುದು ತಪ್ಪದೆಂದು ಚಂದ್ರಸೇನೆ ಪೇಳ್ದಿ ಮತ್ತಂ,

ಎನ್ನಯ ಮಾತ್ಯ ತನ್ನೃಪತನೂಜೆಗೆ ಧಾತ್ರಿಕೆಯಪ್ಪಳಾನಿದಂ ।
ತನ್ನೊಡನಿಂದು ಪೇಳಿಲವಳೊಪ್ಪುವ ಮೇದಿನಿಗೊಲ್ದು ಪೇಟ್ಮೊಡ ॥
ತ್ಯುನ್ನತತುಂಗಧನ್ವನೃಪನೊಳ್ ಸಲೆ ಮೇದಿನಿ ಪೇಳಿಲಾಕ್ಷಣಂ ।
ನಿನ್ನಯ ಕಾರ್ಯಮುಪ್ಪುದಿದು ದೇವತೆಯಾಜ್ಞೆ ಕುಮಾರಕೇಳರಾ ॥ ೪೦

ಎಂದು ಪೇಳ್ದಿ ಚಂದ್ರಸೇನೆ ಪೋಗಲೊಡಂ,

ಎನ್ನಯ ಹೃದಯದ ತಾಪಂ ।
ತನ್ನಂ ಬಂದೆಯ್ದಲುಪ್ಪಮಿರ್ಮಡಿಸುಗುಮೆಂ ॥
ಬುನ್ನತಚಿಂತೆಯಿನೆಯ್ದಿದ ।
ನನ್ನೆಗಮುಪರಾಬ್ಧಿಗಬ್ಜಿನೀಪತ್ರಾಕ್ಷೇಶಂ ॥ ೪೩

ಅಂತು ಸೂರ್ಯಾಸ್ತಮಯಮಾಗಲೊಡಂ,

ಬಂದಿರುಳನೇಕಯುಗದಂ ।
ತೊಂದಿರಲಿಂತಾನುಮೆನ್ನ ಪ್ರಣ್ಯೋದಯಮೆಂ ॥
ಬಂದದಿನುದಯಾಚಲದೊಳ್ ।
ಬಂದಿರ್ದಂ ಕೂರ್ತು ಪದ್ಮಿನೀನಿಜಕಾಂತಂ ॥ ೪೪

ಅಂತುದಯಮಾಗಲ್ ಸಂಧ್ಯಾವಂದನಂಗೆಯ್ದು ವಿಂಧ್ಯವಾಸಿನಿಗೆ ನಮಸ್ಕಾರಂಗೆಯ್ಯಲೆಂದಾಂ ಪೋಪಾಗಳ್,

ಪೊಡವಿಪತ್ತಿ ಕೂರ್ತು ಕೆಲಬರ ।
ಗಡಣದಿನಾಭೀಮಧನ್ವನೊಲವಿಂದಾನಿ ॥
ರ್ದಿಡೆಗೇಟ್ಟಿಂದೆನ್ನಂ ತ ।
ನ್ನೊಡನೆ ಬರಲ್ವೇಟ್ಟಿ ಪಿರಿದು ಮನ್ನಿಸಿ ಕರೆದಂ ॥ ೪೫

ಅಂತು ಕರೆಯಲ್ಕಾನದಕ್ರೊಡಂಬಡಲೊಡಂ ಭೀಮಧನ್ವನೆನ್ನಂ ಮನೆಗೊಡಗೊಂಡು ಪೋಗಿ ಮಜ್ಜನಭೋಜನಾದಿಕ್ರಿಯೆಗಳಂ ಮಾಡಿಸಿ ಪಗಲಂ ಕಳೆಯಲೊಡಂ

ಗಗನಸ್ಥಲದೊಳ್ ತಿರುಗುವ ।
ಖಗನಪರಾದ್ರೀಂದ್ರಕೋಟರಕ್ಕತಿಮುದದಿಂ ॥
ದೊಗೆಯುಲ್ ಪಟೆಪಿಂದಾಗಳ್ ।
ಜಗಜ್ಜನಂ ನಿದ್ರೆಗೆಳಸಿಯೊಱಗಿತ್ತಾಗಳ್ ॥ ೪೬

ಅಂತಸ್ತಮಾನನಾಗಲೊಡಂ ಪ್ರಾಪ್ತಕಾಲದೊಳ್ ಸಜ್ಜೀವನೆಯೊಳಾನೊಱಗಿರ್ದಾಗಳ್

ನಡುವಿರುಳೆಚ್ಚಿಂದು ಕೆಲರ್ ।
ಪಿಡಿದೆನ್ನಂ ಪೊಡೆದು ಕಟ್ಟಿ ಕುಳ್ಳಿರಿಸಲ್ಕೆ ವಿ ॥
ಗಡ ಭೀಮಧನ್ವನಲ್ಲಿಗೆ ।
ಸಡಗರದಿಂ ಬಂದು ನಸು ನಗುತ್ತಿಂತೆಂದಂ ॥ ೪೭

ನಿಮ್ಮೀಕಾಂತವಿಚಾರದ ।
ಸಮ್ಮಂಧನುನೆಮ್ಮ ದೂತಿ ವಾತಾಯನದಿಂ ॥
ಸುಮ್ಮನೆ ಬಂದಿರ್ದಱಿದಿ ।
ನ್ನೆಮ್ಮೊಳ್ ಪೇೞ್ದಿಳ್ ವಿಚಾರಮದು ದಿಟಮುಲ್ಲೀ ॥ ೪೮

ನೀನರಸಾಗಳ್ ನಿನಗಾಂ ।
ಮಾನಸನಾಗಿರ್ದು ಪೇೞ್ದಿನಂ ಗೆಯ್ವೆಂ ಸ ॥
ನ್ಮಾನನಿಧಿ ಕಂತುಕಾವತಿ ।
ಮಾನಿನಿ ನಿನಗಾದಪಳ್ ಗಡಂ ದಿಟಮುಲ್ಲೀ ॥ ೪೯

ಎಂದೆನ್ನಂ ಭೀಮಧನ್ವಂ ಜಡಿದು
ನಿರ್ಬಂಧಿಸಿ ಸಂಕಲೆಯಂ ।
ಸರ್ಬಾಂಗದೊಳಕ್ಕಿ ಕಡಲ ನಡುನೀರೊಳ್ ತ ॥
ನ್ನುರ್ಬಿಟ್ಟಿಯೆ ಬಿಸುಟು ಬಾಯೆಂ ।
ದೊರ್ಬನ ಕೆಯ್ಗಿತ್ತನೆನ್ನ ನಾನೃಪತನಯಂ ॥ ೫೦

ಅಂತು ಕುಡಲವನೆನ್ನಂ ಕೊಂಡು ಪೋಗಿ
ಲಲಿತಪ್ರೌದ್ಯತ್ತರಂಗೋಚ್ಚಳಿತ ಕಮಠಪಾಠೀನನೀರೇಭಕೋಳಾ ।
ಹಳಚಂಚಚ್ಚಿ ೀಕರೋದ್ಯತ್ಕುಸುಮಿತನವವೇಳಾವನಪ್ರಾಂತದಿಂ ಕ ॥

ಲ್ಲಿಲಿಯೆಂದುಂ ಪಿಂಗದೆಂಬಂತೆಸೆವ ಕಡಲ ತನ್ಮಧ್ಯದೊಳ್ ನಿರ್ದಯಂ ಸಂ।
ಕಲೆಯಿಕ್ಕಿರ್ದೆನ್ನನನ್ಯಾಯದಿನುಜ್ಜಿ ಬಿಸುಟಂ ನೀರ್ಗಳಬ್ಬಾಗಮಾಗಲ್ ॥

ಅಂತವನೆನ್ನಂ ಸಮುದ್ರಮಧ್ಯದೊಳ್ ಬಿಸುಟು ಪೋಗಲ್
ವಡಬಾಜ್ವಾಲೆಯೊಳುಣ್ಬೊಡಂ ವಿಷಧರಂ ಬಾಯಿವಿಟ್ಟು ಮೇಲ್ವಾಯ್ದೊಡಂ
ಕಡಲೊಳ್ ಬಿೞ್ದೊಡಮದ್ರಿಶೃಂಗದಿನಿಳಾಭಾಗಕ್ಕೆ ಪಾಯ್ತೊರ್ದೊಡಂ॥
ಸಿಡಿಲಾರ್ಪಿಂ ಮಿಗೆ ಪಾಯ್ದೊಡಂ ನಿಜಾಲಾಟಪ್ರಾಪ್ತಸಿದ್ಧಾಕ್ಷರಂ।
ತೊಡೆವನ್ನಂ ಭಯಮೇಕೆ ದೇಹಿಂಗೆ ಬಟುಕ್ಕಾರ್ ಬಾಧಿಪರ್ ಬಾಧೆಯಂ॥೫೩

ಎಂದೆನ್ನೊಳ್ ಪರಿಭಾವಿಸುತಿರ್ಪನ್ನೆಗಂ,

ಕಟ್ಟಿದ ಚೌರಿಗಳ್ ಗಗನಮಂ ಮಿಗೆ ಚುಂಬಿಪ ಕೂವಕಂಭವೊ।
ಟ್ಟಟ್ಟ ಸುವರ್ಣರತ್ನತತಿ ಗಾಳಿಯು ಕೋಲ್ಗಳನುಕೂಲಮುಪ್ಪಿನಂ ॥
ಬಿಟ್ಟ ಪಟಂ ಪ್ರಮಾದಫಲಕಸ್ಥಿತನಾದ ವಣಿಗ್ವರಂ ಕರಂ।
ದಿಟ್ಟಿಗೆ ಚೆಲ್ವನಾಗಿ ಕಡಲೊಳ್ ಬರುತಿರ್ದುದು ಯಾನಪಾತ್ರಕಂ ॥ ೫೪

ಅಂತೊಂದು ಬಹಿತ್ರಂ ಬರಲದಱೊಳಿರ್ದ ವಣಿಕ್ಪತಿ

ಮುಡುಪಿಂದೀಸಾಡುತ್ತುಂ।
ಕಡಲೊಳಗಿರ್ದೆನ್ನನಾವಣಿಕ್ಪತಿಯೊಲವಿಂ ॥
ಕಡುಪಿಂ ಕಂಡತಿದಯೆಯಿಂ।
ನಿಡುನೇಣಂ ನೀಡಿ ತೆಗೆದುಕೊಂಡನಿಳೀಶಾ ॥ ೫೫

ಅಂತೆನ್ನಂ ತೆಗೆದು ಮದ್ವೃತ್ತಾಂತಮನಾವಣಿಕ್ಪತಿ ಕೇಳುತ್ತುಮಿ
ರ್ಪಾಗಳ್

ತಂಬಟವುಂ ಸೂಜ್ಯೆಸು।
ತ್ತುಂಬುಧಿಯೊಳ್ ಕಳ್ಳ ಪಡಗಿನವರ್ಗಳ್* ರತ್ನಂ ॥
ತುಂಬಿರ್ದ ತದ್ಬಹಿತ್ರವು।
ನಂಬುಗಳಿಂದೆಚ್ಚು ಮುಂದುಗಿಡಿಸಿದರಾಗಳ್ ॥ ೫೬

ಅಂತೊಂದು ಕಳ್ಳ ಪಡಗು ಬಂದು ವ ಎಂದುಗಿಡಿಸಲದಂ ಕಂಡು ತದ್ಬಹಿ
ತ್ರದ ವಣಿಕ್ಪತಿಯೊಳಾನಿಂತೆಂದೆಂ:—

ಮುಳಿವಾಂತ ಪಡಗಿನವರ್ಗಳ* ।
ಬಲಮುಂ ತತ್ಕ್ಷಣದೊಳಾಂತು ಕಿಡಿಸಿದಪೆಂ ಮು ॥
ದ್ಬಲದಿಂದೆನಗಿಕ್ಕಿದ ಸಂ ।
ಕಲೆಯಂ ಬಿಡಿಮೆಂದೊಡಾತನಾಗಳೆ ಬಿಟ್ಟಂ ॥ ೫೭

ಅಂತೆನ್ನಂ ಬಿಡಲೊಡಂ,

ಕಡುಕಯ್ದಾನಾರ್ಪಿನಂ ಬಿಲ್ವಿಡಿದು ನಿಶಿತಬಾಣೋತ್ಕರಾಸಾರದಿಂ ಮು ।
ರ್ಪಡಗಂ ಪೂಣ್ದೆಯ್ದಿ ಬೇಗಂ ತುಡುಕಿ ಪಿಡಿದು ಕಳ್ಳರ್ಕಳಂ ನೀಳ್ದ ನೇಣಿಂ॥
ಪೆಡಗೆಯ್ಯಂ ಕಟ್ಟಿಯಲ್ಲಿರ್ದವರೊಡೆಯನೆನಿಪ್ಪಾತನಂ ನೋಡಲಿನ್ನೇಂ ।
ಪಡಿಮಾತಂ ಪೇಳ್ವೆನೆನ್ನಾ ನಿಜರಿಪುವೆನಿಪಾಭೀಮಧನ್ವಾಂಕನಾದಂ ॥ ೫೮

ಅಂತಾಂ ಪಿಡಿದ ಪಡಗಿನೊಡೆಯಂ ಭೀಮಧನ್ವನಾಗಿರೆ

ಮಾಡಿತ್ತಂ ಪರಲೋಕದೊ ।
ಳಾಡುತ್ತನುಭವಿಪರೆಂಬರದು ಪ್ರಸಿಯಿಪದೊಳ್ ॥
ನೋಡಲನುಭವಿಪ್ರದದು ದಿಟ ।
ಮಾಡಂಬರಮೀಕದರ್ಕೆ ರಾಜಕುಮಾರಾ ॥ ೫೯

ಎಂದಾತನಂ ಮುಟ್ಟಿ ಮೂದಲಿಸಿಯುನಂತರಂ,

ಮುನ್ನೆನಗಿಕ್ಕಿದ ಸಂಕಲೆ ।
ಯನ್ನೀಳ್ದ ಶರೀರದಲ್ಲಿ ತುಡಿಸಿ ಕುಮಾರಂ ॥
ಗಿನ್ನೀಗೆಯ್ವೆನೆನುತ್ತುಂ ।
ಬಿನ್ನವಿಸಲ್ ಭೀಮಧನ್ವನೆರ್ದೆ*ಗೆಟ್ಟಿರ್ದಂ ॥ ೬೦

ಅಂತು ಕಳ್ಳರಂ ಗೆಲ್ದು ಆತನಂ ಸಂಕಲೆಯೊಳಿಕ್ಕಿದುದರ್ಕೆ ಮೆಚ್ಚಿ ವಣಿಗ್ವರನೆನ್ನಂ ಮನ್ನಿಸಿ ಬಳಿಯಂ,

ಸ್ವಾದೂದಕದಶನಂ ಜೆ ।
ಲ್ವಾದಾತಾಂಬೂಲಮೆಯ್ದಿ ಸವಿಯಲ್ ತತ್ಸಂ ॥
ಪಾದನೆಗೆ ವಣಿಗ್ವರನ ।
ತ್ಯಾದರದಿಂ ಪಟನನೆತ್ತಿ ತಡಿಗೇಗಿಂದಂ॥ ೬೧

ಅಂತು ತಡಿಗೆ ಬರ್ಪನನೂನಂ ತಡಿಗಿಱಿದೊಂದು ಕಡೆಯಂ ನೋಳ್ಪನ್ನೆಗಂ,

ಭೂರಿತದಂತೆ ಭೀಮನಕುಲಾರ್ಜುನವಿಕ್ರಮದಿಂ ನೆಗಲ್ದಿ ದೈ ।
ತ್ಯಾರಿಯ ವಕ್ಷದಂತೆ ಭೃಗುಸಂಪದದಿಂ ಹರನಂತೆ ಸದ್ಗುಹಾ ॥
ಕಾರವಿಳಾಸದಿಂ ರಘುಜನಂತೆ ವಿಚಿತ್ರಧರಿತ್ರಿಸಂಭವೋ ।
ದಾರದಿನಿರ್ದುದೊಂದು ಕುಧರಂ ಗಗನಸ್ಥಳಮಂ ತುಡುಂಕುತುಂ ॥ ೬೦

ಅದಂ ಕಂಡಲ್ಲಿಗೆಯ್ದಲದಱ ನಿತಂಬದಲ್ಲಿ

ಕುಮುದಾಭ್ಜಸ್ಥಿತಿ ರಾಜಹಂಸಗತಿಯಿಂ ಚೆಲ್ವಪ್ಪಿನಂ ತಣ್ಣನ ।
ಪ್ಪವ್ಯತಂ ಸಾರ್ದನಿಮೇಷಸಂತತಿಗೆ ಪೆರ್ಚಂ ಮುಪ್ಪಿನಂ ಕೂಲವಿ ॥
ದ್ರುಮಮೊಳ್ಪಿಂದನುರಾಗಮಂ ಪಥಿಕರೊಳ್ ಕೂರ್ತೀರ್ವಿನಂ ಚಿತ್ತವಿ ।
ಭ್ರಮಮುಂ ಪ್ರಟ್ಟಿಸುತಿರ್ದುದದ್ರಿತಟದೊಳ್ ತಾನಾಗಳುಂ ಪೂಗೊಳಂ ॥

ಅಂತಿರ್ದ ಪೂಗೊಳನಂ ಕಂಡಲ್ಲಿ ನೀರ್ಗುಡಿಯಲೆಂದು ಪ್ರೋಪಲ್ಲಿ

ಕಿಡಿಯಂ ಸೂಸುವ ಕಣ್ಣ ಕರಾಳವದನಂ ಕೂರ್ದಾಡೆ ಕೆವ್ಮ್ಮಾಸೆ ನಿ ।
ಟ್ಟೊಡಲೊರ್ವಾನಳದೇಹದೀಪ್ತಿಯಡರ್ದಿರ್ದೂರುದ್ವಯಂ ನೀಳ್ದ ಕೆಂ ॥
ಜೆಡೆ ಕಾಳಾಯಸದಂಡಹಸ್ತವೆನಿಸುಂ ಚೆಲ್ವಾಗಲೊರ್ಬಂ ಕರಂ ।
ದಡಿಗಂ ರಕ್ಕಸನೆನ್ನಿದಿರ್ಗ್ಗೆ ಮುಳಿಸಿಂದೇಲಿ ತ್ತಿಂದನಾಕ್ಷೈಲದಿಂ ॥ ೬೨

ಅಂತು ಬಂದೊರ್ವ ಬ್ರಹ್ಮರಾಕ್ಷಸನೆನ್ನ ಪ್ರಶ್ನೆಗುತ್ತರಮುಂ ಕೊಟ್ಟು ನೀರ್ಗುಡಿಯೆಂದಿಂತೆಂದಂ:—

(ಪ್ರಶ್ನೆಗಳ)

ಕ್ರೂರಮೆದಾವುದು ಗೃಹವಿ ।
ಸ್ತಾರಂ ತಾನಾವುದೆಸೆವ ಕಾಮದ ನೆಲೆಯೇಂ ॥
ಬಾರಿಯ ದುಃಖದ ಸಾಧನ ।
ಮೊರಯ್ಯಲದಾವ್ರದೆನಗೆ ಪೇೞನುನಯದಿಂ ॥ ೬೩

ಎಂದೊಡಾನಿಂತೆಂದೆಂ:—

ಸ್ತ್ರೀಹೃದಯಂ ಕ್ರೂರಂ ನಿಜ ।
ಗೇಹಸುಖಂ ಸತಿಯರೊಳ್ಪು ಕಾಮಂ ಚಿತ್ತ ॥
ಸ್ನೇಹದ ಸಂಕಲ್ಪಂ ಮತಿ ।
ಯೂಹೆ ಮುಪಹತ್ಕಾರ್ಯಸಾಧನಂ ತಾನಲ್ತೀ ॥ ೬೪

ಎಂದು ಮತ್ತಂ,

ಧೂಮಿನಿ ನೆಗಲ್ತೆ ರಂಜಿಪ ।
ಗೋಮಿನಿ ಪೆಂಪಿಂ ನಿತಂಬವತಿ ನಿಂಬವತೀ ॥
ನಾಮಂ ಮೆಱೆವಬಲೆಯರೊಳ್ ।
ಧೀಮಾ ತ್ವತ್ಪ್ರಶ್ನೆಯರ್ಥಮೆಸೆದಪ್ಪವಸುರಾ॥ ೬೭

ಅದೆಂತೆಂದು ರಾಕ್ಷಸಂ ಕೇಳಲಾನಿಂತೆಂದೆಂ:—

ಮೇದಿನಿಯೊಳ್ ಪ್ರಸಿದ್ಧಿವಡೆದಿರ್ಪ ತ್ರಿಗರ್ತದ ದೇಶದೊಳ್ ನಿಜಾ ।
ಹ್ಲಾದದಿನಾವಗಂ ಧನಿಕಧನ್ಯಕಧಾನ್ಯಕರೆಂಬ ಮೂವರುಂ ॥
ಸೋದರರಾದ ವೈಶ್ಯಪತಿಗಳ್ ಮೆಱೆಯುತ್ತಿರೆ ತದ್ಧರಿತ್ರಿಗಂ ।
ದಾದುದು ಘೋರಮಪ್ಪ ಬಱನೊರ್ಬರನೊರ್ಬರಡುರ್ತು ತಿಂಬವೋಲ್ ॥

ಕ್ಷಾಮಮಡುರ್ತು ಧಾನ್ಯತೃಣಪತ್ರಜಲಂ ತವಿಲಾಗಲೆಲ್ಲರುಂ ।
ಗೋವುಮಹಿಷೀಪ್ರತಾನದಡಗಂ ತವೆ ತಿಂದು ನಿರಂತರಂ ವನು ॥
ಪ್ಯಾಮಿಷಮುಂ ತಿನಲ್ತೊಡಗಲನ್ಯಜನಂ ನೆಱೆ ತೀರ್ದು ಪೆಂಡಿರಂ ।
ಪ್ರೇಮದ ಪುತ್ರರಂ ಸೊಸೆಯರಂ ಕ್ರಮದಿಂ ತಿನುತಿರ್ದರಾವಗಂ ॥ ೬೯

ಅಂತು ಬಱನಱಿಯಟ್ಟಲೊರ್ಬರನೊರ್ಬರ್ ತಿನುತ್ತಿರೆ,

ಧನಿಕಂ ಧನ್ಯಂ ಧಾನ್ಯಕ ।
ನನುಪೂರ್ವಕ್ರಮದಿನೊರ್ಬರೊರ್ಬರ ವನಿತಾ ॥
ಜನಮುಂ ತಿನಲನುಗೆಯ್ದರ್ ।
ಮನಮೆಳಸಲ್ ಜಠರವಹ್ನಿಯೇಂ ಕೇವಲಮೇ ॥ ೭೦

ಅಂತು ಧನಿಕಧನ್ಯಕರ್ ತಮ್ಮಿರ್ಬರ ಕಾಂತೆಯರನೆಲ್ಲರ್ ಕೂಡಿ ತಿಂದನಂತರಂ ಧಾನ್ಯಕನ ಕಾಂತೆಯಪ್ಪ ಧೂಮಿನಿಯುಂ ನಾಳೆ ತಿನಲೆಂದುದ್ಯೋಗಿಸುವುದಂ ಧಾನ್ಯಕನಱಿದು,

ಇವರ್ಗಳ ಸಂಗಮುಂ ತೊಱೆದು ಕಾನನದೊಳ್ ನವಕಂದಮೂಲಪ ।
ಲ್ಲವಚಯಭೈಕ್ಷದಿಂ ಬಱಿನನೊಯ್ಯನೆ ನೀಗುವೆನೆಂದು ಧಾನ್ಯಕಂ ॥
ಯುವತಿಯನಾರ್ಪಿನಿಂ ಪೆಗಲನೇಱಿಸಿ ಕೊಂಡಿರುಳಿಲ್ದಿರಣ್ಯಮಾ*।
ರ್ಗವನೊಲವಿಂದೆ ಪತ್ತಿ ಬರುತಿರ್ದನವಂ ಮಿಗೆ ರಾಕ್ಷಸೇಶ್ವರಾ ॥ ೭೧

ಅಂತರಣ್ಯವಮಾರ್ಗಕ್ಕೆ ಪೋಪಾಗಳ್
ಕರಚರಣರಹಿತನೊರ್ವಂ ।
ಪೊರಟಿತ್ತಿರಲೂರ ಪೊಱಗೆ ವೋಟನನೆನ್ನಂ॥
ಕರುಣಿಸಿ ಪೊರೆದಪರಾರೆಂ ।
ದು ರೋದನಂಗೆಯ್ಯುತುಂ ಈರಂ ಸುಯ್ಯುತ್ತುಂ॥ ೭೦

ಅಂತಿರ್ದ ವೋಟನಂ ಧಾನ್ಯಕಲ ಕಂಡು,
ಕರುಣಿಸಿಯೆವನಂ ಧಾನ್ಯಕ ।
ನುರುಮುದದಿಂದೊಂದು ಪೆಗಲನೇಱಿಸಿ ಕೊಂಡಾ ॥
ದರದಿಂ ಮೆಲ್ಲನೆ ನಡೆಗೊಂ ।
ಡರಣ್ಯಮುಂ ಪೊಕ್ಕದೊಂದು ತಾಣದೊಳಿರ್ದಂ ॥ ೭೧

ಚೂತಕುಜಾತಮಿಕ್ಷಿಯರನೇಱಿಲು ಬಿಕ್ಕೆ ಬೆಳಲ್ ತಳಿರ್ತ ನಾ ।
ನಾತರು ತೀವಿದೊಂದು ತರುಮಧ್ಯದೊಳೊಪ್ಪುವಗಾಧಕೂಪದಿಂ ॥
ನೂತನಶೋಭೆಯಂ ತಳೆದ ತಾಣಮದೊಪ್ಪಿರಲಿರ್ದನಲ್ಲಿ ಸೌ ।
ಖ್ಯಾತಿಶಯಂ ಕರಂ ನೆಲಸೆ ಧೂಮಿನಿಸಂಯುತನೊಲ್ದ ಧಾನ್ಯಕಂ ॥ ೭೨

ಅಂತಿರ್ದು

ಫಲಕಂದಮೂಲನಾನಾ ॥
ಪಲಂಗಳಾನಾರ್ಪಿನಿಂದೆ ತಂದು ನಿತಾಂತಂ॥
ಲಲನೆಯೆನಾವೋಟನನ ।
ಗ್ಗಳದಿಂ ಪೊರೆಯುತ್ತೆ ಧಾನ್ಯಕಂ ಸುಖಮಿರ್ದಂ ॥ ೭೩

ಅಂತಿರ್ದೊಂದು ದಿವಸಂ

ಪಲವು ದಿನಕ್ಕೆ ತಕ್ಕಶನಮುಂ ಕಡುಪಿಂ ಗಳಿಸಲ್ಕೆ ವೇಱ್ಕುಮೆಂ ।
ದಲಸದೆ ಧಾನ್ಯಕಂ ಪಿರಿದು ದೂರದರಣ್ಯಕೆ ಪೋಗಲಿತ್ತಲ ॥
ಗ್ಗಲಿಸಿದನಂಗತಾಪದೊಗವಿಂ ನಿಲಲಾಱದೆ ವೋಟನೊಳ್ ಮನಂ ।
ಚಲಿಸದ ಕೂಟಮುಂ ಬಯಸಿದಳ್ ಮಿಗೆ ಧೂಮಿನಿ ಸೀಮೆಗೆಟ್ಟವಳ್ ॥ ೭೪

ಏಕಾಕಿನಿ ಪತಿವಿರಹಿಣಿ ।
ಯೇಕಾಂತಸ್ಥಾನವೊರ್ವ ಪುರುಷಸವಿಷಂ ॥

ಪ್ರಾಕೃತಸತಿ ತಾನಾಗಿರ ।
ಲಾಕೆಯು ನಿಜಬುದ್ಧಿ ಚಲಿಸದಿರ್ಪುದೆ ಸತತಂ ॥ ೭೭

ಅದುಕಾರಣಂ

ಮೋಟನೊಡಂಬಡದಿರೆಯುಂ ।
ಬೀಟಿದ ಕೋಟಲೆಯೊಳವನ ಮೇಲ್ವಾಯ್ದು ಕರಂ ॥
ಕೂಟವನೊಡರ್ಚಿದಳ್ ಸ್ತ್ರೀ ।
ನಾಟಕಮಂ ನಂಬುವವನೆ ಗಾವಿಲನಲ್ತೀ ॥ ೭೮

ಅಂತಾಧೂಮಿನಿ ಕಾವೋದ್ರೇಕದಿಂ ಮೋಟನೊಳ್ ಕೂಟವನೆಸಗುತ್ತಿರೆ ಮಱುದಿವಸಂ,

ವನತೃಣಧಾನ್ಯಮಂ ಸುರಸಪಕ್ವಫಲಂಗಳನಿಂಪ್ರವೆತ್ತ ವ್ಯಾಂ ।
ಸವನತಿಸೀಪೆಯಪ್ಪ ಮಧುವಂ ಪಲವ್ರಂ ದಿವಸಕ್ಕೆ ತಕ್ಕ ವ ॥
ಸ್ತುವನನುರಾಗದಿಂ ಗಳಿಸಿಕೊಂಡು ನಿಜಾಂಗನೆಯಿರ್ದ ತಾಣಮಂ ।
ತವಕದಿನೆಯ್ದಿದಂ ಪದೆದು ಧಾನ್ಯಕನುಗ್ರನಿದಾಘಕಾಲದೊಳ್ ॥ ೭೯

ಅಂತು ಧಾನ್ಯಕಂ ಬಂದು ಪ್ರೊತ್ತ ಪ್ರೊಜೆಯಂ ಪ್ರೊಱಗಿರಿಸಿ,

ಮಾರ್ಗಶ್ರವುದಿಂ ಬೆಮರ್ಗಳ್ *।
ಭೋರ್ಗರೆದವಯವದೊಳೆಯ್ದಿ ಸುರಿಯುತ್ತಿರೆ ಸ ॥
ನ್ಮಾರ್ಗನಿಧಿ ವೈಶ್ಯಪುತ್ರಂ ।
ನೀರ್ಗುಡಿಯಲ್ ಬೇಡಿದಂ ನಿಜಪ್ರಿಯಸತಿಯಂ ॥ ೮೦

ಅಂತು ನೀರ್ಗುಡಿಯಲ್ ಬೇಡಲೊಡಂ

ನರಳುತ್ತುಂ ಸುಯ್ಯುತ್ತುಂ ।
ಶರೀರ ವಶವೆಲ್ತನುತ್ತೆ ಧೂಮಿನಿ ಪತಿಗ ॥
ಚ್ಚರಿಯೆನೆ ಸೇದೆಯು ನೇಣಂ ।
ಕರಗವನೊಲ್ದಿತ್ತು ಸೇದಿ ನೀರ್ಗುಡಿಯಿಂದಳ್ ॥ ೮೧

ಎಂದೊಡಾತಂ ನೀರನೆಯ್ದುತಿರ್ಪಾಗಳ್,

ಸಲೆ ಸಂಧ್ಯಾಂಗನೆ ಪಶ್ಚಿಮ ।
ಜಲನಿಧಿಯೊಳ್ ಜಲಜಮಿತ್ರನೆಂ ನುಂಕುವವೋಲ್ ॥

ಮುಳಿಸಿಂ ಧೂಮಿನಿ ಕೂಪ ।
ಸ್ಥಲದೊಳ್ ಧಾನ್ಯಕನನಳುರ್ದು ನೂಂಕಿದಳಾಗಳ್ ॥ ೪೦

ತೊಲಗನ ವೈತ್ಯುದೇವತೆಯುವೊಲ್ ಸತಿ ಪಿಂತನೆ ಬಂದು ಗಂಡನಂ ।
ತಲೆಕೆಳಗಾಗಿ ಗುಪ್ಪೆಸೆವ ಬಾವಿಯೊಳೋವದೆ ನೂಂಕಿ ಮೋಟನೊಳ್ ॥
ಚಲಿಸದ ಸಂಗಮಂ ತಳೆದು ತದ್ವನದೊಳ್ ಸಲೆ ನಾಲ್ಕ್ಕರಲ್ದಿನಂ ।
ನೆಲಸಿ ಬಟಿಕ್ಕವಳ್ ಪದೆದು ಮೋಟನನಾಂತು ತಳರ್ದಳಲ್ತಿಯಿಂ ॥ ೪೨

ತಾಟಕೆಯಂತೆ ವರ್ತಿಸುವ ಧೂಮಿನಿ ಬಾವಿಗೆ ನೂಂಕಿಯಾಳ್ದನಂ ।
ಮೋಟನನೆತ್ತಿಕೊಂಡು ಮನಮೊಲ್ದು ಪತಿವ್ರತೆಯೆಂಬುದೊಂದು ಬ ॥
ಲ್ನಾಟಕಮಂ ಕರಂ ನಟಿಸಿ ನಾಲ್ಪೆಸೆಯೊಳ್ ತೊಬಿಲುತ್ತದೊಂದು ಭ ।
ದ್ರಾಟವಿಯೆಂಬ ಪತ್ತನಮನೆಯ್ದಿದಳಾಕೆ ಮನೋನುರಾಗದಿಂ ॥ ೪೩

ಅಂತು ಭದ್ರಾಟವಿಯೆಂಬ ಪತ್ತನಕ್ಕೆ ಬಂದು ಅಲ್ಲಿ ನೀತಿವಿಳಾಸನೆಂಬರ
ಸಿನಿಂ ಮನ್ನಿಸಿಕೊಳುತ್ತಿರೆ,

ಮಡದಿಯ ಭರ್ತೃಭಕ್ತಿ ಪ್ರೊಸತಲ್ತಿ ಕರಂ ಪತಿ ಮೋಟನಾದೊಡಂ ।
ಬಿಡದನುರಾಗದಿಂ ಪೆಗಲನೇಱಿಸಿಕೊಂಡು ತೊಬಿಲ್ದು ನಿಂದೆಯೊಳ್ ॥
ತೊಡರದೆ ಸರ್ವರುಂ ತನಗೆ ಕೆಯ್ಮುಗಿದಿರ್ಪತಿಭಾಗ್ಯಬೊಳ್ಪವುಂ ।
ಪಡೆದವಳಾವಳೀಕೆಯವೊಲೆಂದೊಸೆದಿಸ್ರ್ದು ಪೌರನಾರಿಯರ್ ॥ ೪೪

ಅಂತವಳ್ ಭದ್ರಾಟವಿಯೊಳರಲಿತ್ತಲ್

ಕೆಲವರ್ ಪಥಿಕರ್ ಬರುತ ।
ಗ್ಗಲಿಸಿದ ತೃಷೆಯಿಂ ಬಿಗುರ್ತು ತತ್ಕಾನನದೊಳ್ ॥
ಜಲವನಱಸುತ್ತೆ ಬಂದಾ ।
ಗಳೆ ಕಂಡರ್ ವೈಶ್ಯನಿರ್ದ ಕೂಪಸ್ಥಲಮುಂ ॥ ೪೫

ಅಂತಾಪಥಿಕರಾಬಾವಿಯುಂ ನೋಱ್ಪಿನಂ,

ಸ್ತ್ರೀಗೆ ಕಡುಕೂರ್ತ ಮನುಜರ ।
ಧೋಗತಿಯೊಳ್ ಬೀೞ್ವರೆಂಬುದಂ ಸಲೆ ತೋರ್ಪಂ ॥
ತಾಗಳ್ ಧಾನ್ಯಕನಿರ್ದಂ ।
ನಾಗಾಲಯದಂತಿರೆಸೆವ ಕೂಪಾಂತರದೊಳ್ ॥ ೪೬

ಅಂತಿರ್ದನಂ ಕಂಡು

ತೋಳ ಕಡುಪಿಂದದೊರ್ಚಿ ದ ।
ಯಾಳು ಮಹಾಕೂಪದಿಂದೆ ಧಾನ್ಯಕನಂ ನೇ ॥
ಲ್ಗೊಲಿಂ ತೆಗೆಯಲ್ ಬಂದಂ ।
ಗಾಳದ ನೇಣ ತೊಡರ್ದ* ಮಾನವೋತ್ತಮ ತಡಿಗಾಗಳ್ ॥ ೪೪

ಅಂತು ತೆಗೆಯೆ ಧಾನ್ಯಕಂ ಪುನರ್ಜಾತನಾಗಿ,

ಕೃಪೆಯಿಂದಂ ಪ್ರಾಣಮನೊ ।
ಲ್ದುಪಕರಿಸಿದವಂಗೆ ಮೂಲ್ಪಿನಾವಂ ಕೇಳ್ ಪ್ರ ॥
ತ್ಯುಪಕಾರಮನೆಂದು ನಿಷಾ ।
ಧಿಪನನನಂ ಪಲವು ತೆಱದೊಳೊಲವಿಂ ಪೊಗಳ್ದಿಂ* ॥ ೪೫

ಅಂತು ಪೊಗಳ್ದಿ ಸಂತೋಷಮನೆಯ್ದಿಯನಂತರಂ,

ಅವಿರಳದೇಶಾಂತರವೊ ।
ರ್ಗವಿನೋದದಿನೆಯ್ದಿ ಧಾನ್ಯಕಂ ಬರೆವರೆ ಸಂ ॥
ಭವಿಸಿದ ಮುದದಿಂ ಭದ್ರಾ ।
ಟವಿಗೇಳ್ತಿಂದಂ ಯದೃಚ್ಛೆಯಿಂ ಕೇಳಸುರಾ ॥ ೪೬

ಅಂತು ಭದ್ರಾಟವಿಗೆ ಬಂದು

ಕೇರಿಯ ಚೆಲ್ವನಂಗಡಿಯ ಸೊಂಪನಿಳಾಧಿಪಗೇಹರಮ್ಯಮಂ ।
ವಾರವಿಳಾಸಿನೀಗೃಹವಿಳಾಸಮನೊಪ್ಪುವ ಸೂಳೆಗೇರಿಯಾ ॥
ಕಾರಮನಾನೆಸಾಲೆಗಳ ಸಂಭ್ರಮಮುಂ ಪುರಮಧ್ಯದೇವತಾ ।
ಗಾರವಿಶೇಷಮುಂ ಪದೆದು ಧಾನ್ಯಕನೀಕ್ಷಿಸುತಿರ್ದನಾವಗಂ ॥ ೪೭

ಅಂತೆಲ್ಲೆಡೆಯೊಳ್ ತೊಟಿಲುತ್ತಿರ್ದ ಧಾನ್ಯಕನಂ ಕೈತವಪತಿವ್ರತೆಯಪ್ಪ ಭೂಮಿನಿ ಕಂಡು

ನೀತಿವಿಳಾಸನ್ಯಪಾಲಂ ।
ಗೋತಱಿಪುವೆನಿವನನೀಕ್ಷಣಂ ಕೊಲಿಸುವೆನೆಂ ॥
ದಾತುರದೊಳೆಯ್ದಿದಳ್ ದು ।
ರ್ಮತಿಯೊಳರಮನೆಗೆ ಭೂರ್ತಿ ಭೂಮಿನಿಯಾಗಳ್ ॥ ೪೮

ಅಂತರಮನೆಗೆ ಪೋಗಿ ಬಾಗಿಲೊಳಗ್ಗಡ್ ಪತಿವ್ರತೆ ಬಂದಿರ್ಪಳೆಂದು ನೀತಿವಿಳಾಸಂಗಱಿಪೆಂದು ದ್ವಾರಿಕಗೆ ಪೇೞಲವರ್ ಪೋಗಿ

ನೃಪತಿ ಪತಿವ್ರತೆ ಬಂದಿ ।
ರ್ದಪಳರಮನೆಯೆಸೆವ ಬಾಗಿಲೊಳ್ ಸಮಯಂಬಾ ॥
ರ್ದುಪಚರಿಸಿ ಕರೆಯಲೋ ಕಾ ।
ಣ್ಬ ಪೊೞ್ತಿದಲ್ಲೆಂದು ಕಳಪಲೋ ಬೆಸಸೊಲವಿಂ ॥ ೯೩

ಎಂಬುದುಮುರಸಂ ಪರಮಪತಿಭಕ್ತೆಯಂ ಕರೆಯೆಂದು ಕರೆಯಿಸಲವಳ್ ಬಂದರಮನೆಯುಂ ಪೊಕ್ಕರಸನಂ ಕಂಡಿಂತೆಂದಳ್:—

ನೀತಿವಿಳಾಸ ಕೇೞ್ ಪೆಗಲೊಳಾಂತ ನುದೀಶನ ಹಸ್ತಪಾದಮುಂ ।
ಘಾತಕನಾರ್ಪಿನಿಂ ಕಡಿದ ಪಾತಕನಿಲ್ಲಿಗೆ ಬಂದನಾತನಂ ॥
ಭೂತಪಿಶಾಚಸಂತತಿಗೆ ದಿಗ್ಬಲಿಗೊಟ್ಟ ಕರಂ ಪತಿವ್ರತಾ ।
ಪ್ರೀತಿಯನೀವುದೆಂದು ನೃಪನೊಳ್ ಮಿಗೆ ಧೂವಿನಿ ಪೇೞ್ದಿಳಾಕ್ಷಣಂ ॥ ೯೪

ಅಂತು ಪೇೞ್ದಿ ಮತ್ತಂ
ಅತಿದುಷ್ಟಶಾಸ್ತಿ ಶಿಷ್ಟ ।
ಪ್ರತಿಪಾಲನೆಯಿಲ್ಲದರಸಿನರಸುತನಂ ಪಾ ॥
ಸ್ಥತೆನಡೆದು ಪಗರಣಿಗರರ ।
ಸುತನಂ ತನಗಕ್ಕುಮೆಲ್ತೆ ಕಜ್ಜದ ಕಡೆಯೊಳ್ ॥ ೯೫

ಮಱೆ ಕೊಳ್ಳದು ಕಾಲದೊಳೆಳೆ ।
ಫಲವಾಗದು ಧಾನ್ಯವಸ್ತು ವಾಹನನಿಚಯಂ ॥
ನೆಲಸದು ಪತಿವ್ರತಾವಾ ।
ಕ್ಯಲಂಘನಂಗೆಯ್ಯಲರಸ ಕೇಳದು ಸತ್ಯಂ ॥ ೯೬

ಎಂದು ದೃಢನುಪ್ಪಂತು ಪೇೞ್ದಿವನಂ ಕೊಲ್ಲಿಸಿದೊಡಲ್ಲದೆ ಇಲ್ಲಿಂ ಪೋಗೆನೆಂದಿರ್ದುಂ,

ಪುರಮಿದು ಚೋದ್ಯಮೆನಲ್ಕಾ ।
ದುರಾತ್ಮನಂ ಕೇರಿಕೇರಿಯೊಳ್ ಮೆಱಸಿ ದಿಶಾಂ ॥
ತರದೊಳ್ ಕಡಿದು ಬಿಸುಟ್ಟತಿ ।
ನಿರವಯೆಲೆಯ್ದಿಸುವುದೆಂದು ಬೆಸಸಿದನರಸಂ ॥ ೯೭

ಅಂತು ಬೆಸಸಲೊಡಂ ತಳವಚರ ಪತಿವ್ರತೆಯ ಗಂಡನ ಕೆಯ್ಕಾಲ್ಗಳಂ
ಕಡಿದ ದುರಾತ್ಮಂ ಸಿಲ್ಕಿದನೆಂದಾತನಿರ ಪಿಡಿದು

ಪೆಡಗೆಯ್ಯಂ ಪಿಡಿದೀಲ್ದ ಕಟ್ಟ ತಲೆಯೊಳ್ ಪೂಮಾಲೆಯಂ ಸುತ್ತಿ ಬೊ।
ಬ್ಬಿಡುತುಂ ಭಂಡಿಯು ಮೇಲೆ ಕುಳ್ಳಿರಿಸಿ ನಾನಾವಾದ್ಯದಿಂ ಪೆರ್ಚಿನಿಂ ॥
ಗಡಿಯೊಳ್ ಕೇರಿಯೊಳಾತನಂ ಮೆಱಸಿ ಖಂಡಂಗೊಯ್ವೆನೆಂಬಾಗಳಾಂ ।
ಕಡಿದಂಗಂಗಳ ವೋಟನಂ ಕರೆಸಿಮೆಂದಂ ಧಾನ್ಯಕಂ ಧೈರ್ಯದಿಂ ॥ ೯೪

ಎಂಬುದುಮಾತಳವಚರಿವನಂ ದಿಗ್ಪಲಿಗುಡುವ್ದಂ ನೋಡಲ್ವೀಕ್ಕೆಂದು
ವೋಟನಂ ಧಾನ್ಯಕನೆಡೆಗೆ ಕೊಂಡು ಬರ್ದುದುಂ

ಕಾಣಲೊಡನಶ್ರುವಿಂ ಮುಂ ।
ಗಾಣದೆ ಗಡಗಡನೆ ನಡುಗಿ ವೋಟಂ ತನ್ನಾ ॥
ಪ್ರಾಣಂ ಬಂದಂತಾಗಳ್ ।
ಪೂಣದೆ ಧಾನ್ಯಕನ ಪೆಱಪಿವ ಕಾಲ್ಗಳಿಗಿದರ್ದಂ ॥ ೯೫

ಅಂತು ಕಾಲ್ಗಳಿಗಿ,
ಅರಿವೆಣನಾಗಿರೆ ಪ್ರಣ್ಣೊಳ್ ।
ಮಜುಗುತ್ತಿರ್ದನ್ನನೆತ್ತಿ ಕೊಂಡಾವನೆದೊಳ್ ॥
ಬಜನೊಳ್ ಸಾಕಿದ ನಿನ್ನಂ ।
ಮಟ್ಟೆದೊಡೆ ನರಕಕ್ಕೆ ಭಾಜನಂ ತಾನಲ್ತೇ ॥ ೯೬

ಎಂಬ ವೋಟನ ಮಾತಿಂಗೆ ತಳವಚರ ವಿಸ್ಮಯಂಬಟ್ಟು ಧಾನ್ಯಕನಂ
ವೋಟನಂ ನೀತಿವಿಳಾಸನೆಡೆಗೆ ತಂದು ತತ್ಕಾತುಕಮಂ ಪೇಱೆ, ನೀತಿವಿಳಾಸಂ
ವೋಟನೊಳಿಂತೆಂದಂ:—

ಏಲೆ ಮಹಿಮ ಪಾತಕನ ಕಾ ।
ಲ್ಗಳ ಮೇಲಿಱಗಿರ್ದೆಯೇಕೆ ನಿನ್ನಯ ಕೈಕಾ ॥
ಲ್ಗಳನೋನದೆ ಕಡಿದುಂ ಪುಗು ।
ಬ್ಬಿಳಿಯೊಳ್ ಸಾಧುವಿನ ತೆಱದಿನಿರ್ದಪನಲ್ತೇ ॥ ೯೭

ಎಂಬುದುಂ ವೋಟನಿಂತೆಂದಂ: —

ಎನ್ನ ಪಿತೃವ್ಯಾತೃಗುರುವೀ ।
ತನ್ನೆಟ್ಟನೆ ಪುತ್ರನಪ್ಪೆ ನೀತಂಗಾಂ ಕೇ ॥

ಳಿನ್ನ ಕಥಕರಣಮಾಂ ಮಿಗೆ ।

ಮುನ್ನೆಸಗಿದ ಕರ್ಮದಿಂದೆ ಪೋದುಮಿಳೀಶಾ ॥ ೧೦೭

ಎಂದರಸಂಗೆ ಪೂರ್ವವೃತ್ತಾಂತಮೀನುಮುಬಿಯದಂತು ಪೇಳ್ದು ಮತ್ತ
ಮಿಂತೆಂದಂ:—

ಪಗೆಯೆಂ ದುರ್ಬಲಂ ಧೂಮಿನಿ ವನದಳುಪಿಂ ಮೇಲೆ ಬೀಲಿಲ್ಕೆ ಪೇಡೆಂ।
ದಾಗಂ ನೂಂಕಲ್ಕೆ ಕೆಯ್ಯಿಲ್ಲಳವಿಗಲಿದು ಪೋಗಲ್ಕೆ ಕಾಲಿಲ್ಲ ತನ್ನೊಳ್ ॥
ಕೂಗಿಟ್ಟಾಂ ಪೇಳ್ದೊಡಂ ತನ್ನಯ ಬರವಿನಿತಂ ಕಾಣನಂತಿರ್ದೊಡೆನ್ನೊಳ್
ಬೇಗಂ ನಾಣ್ಗೆಟ್ಟು ತನ್ನಂಗನೆ ನಗೆಗೆಡೆಯಂ ಮಾಡಿದಳ್ ಪೇಳ್ವಿನೇನಂ ॥

ಎಂಬುದುಂ ನೀತಿವಿಳಾಸಂ ವಿಸ್ಮಯಂಬಟ್ಟು, ಅವಿಚಾರದಿಂದೆನಗೆ ದೋ
ಷಂ ಬರುತ್ತಿರ್ದುದೆಂದು ಕೋದೊಳಿರ್ದ ಧೂಮಿನಿಯಂ ನೋಡಿ,

ಎಲೆ ಪತಿವ್ರತಕಿ ನಿಜಕಾಂತನ ।
ನುಜ್ಜೀವಿಪೋಟಂಗೆ ಕೂರ್ತು ಪತಿಹಿತೆಯೆಂಬೀ ॥
ಬಲೆಯಂ ಬೀಸಿ ಧರಾವಮಂ ।
ಡಲಪಮಂ ವಂಚಿಸಿದೆ ನೋಡಲಾಗದು ನಿನ್ನಂ ॥ ೧೦೮

ಎಂದು ಧಾನ್ಯಕಂಗೆ ಮಾಡುವ ಶಾಸ್ತಿಯಂ ಧೂಮಿನಿಗೆ ಮಾಡಿಯನಂತರಂ

ಗುಣನಿಧಿ ಧಾನ್ಯಕಂಗೆ ಸುವುಹೂರ್ತದೊಳೊಲ್ದು ವಿಲಾಸಿನೀಕುಲಾ ।
ಗ್ರಣಿಯೆನಿಸಿರ್ಪ ವೈಶ್ಯಕುಲಕನ್ನಿಕೆಯಂ ತರಿಸಿತ್ತು ನಲ್ಮೆಯಿಂ ॥
ವಣಿಗಧಿನಾಥನೆಂಬ ಪೆಸರಿಟ್ಟೊಲವಿಂ ಪೊರೆದಂ ನೆಗಲ್ದಿ ಧಾ ।
ರಿಣಿಪತಿ ಕೇಳ್ ನಿಶಾಚರ ದುರಾತ್ಮಿಕೆ ಧೂಮಿನಿ ಮಾಡಿದರ್ಥವುಂ ॥ ೧೦೯

ಅದಱಿಂ ಸ್ತ್ರೀಹೃದಯಂ ಕ್ರೂರಮೆಂದು ಬ್ರಹ್ಮರಾಕ್ಷಸಂಗೆ ಪೇಳ್ದು
ಗೋಮಿನೀವೃತ್ತಾಂತಮುಂ ಪೇಳಿಲ್ ತಗುಳ್ದಿನದಂತೆನೆ:—

ಪ್ರಕಟಪ್ರಸ್ತುತಿವೆತ್ತ ಕಾಂಚಿಪುರದೊಳ್ ವಿಖ್ಯಾತಿಯಿಂದಿರ್ಪ ಶ ।
ಕ್ತಿಕುಮಾರಾಖ್ಯನದೊರ್ಬ ತಾಂ ಮದುವೆಯಾಗಲ್ವೇಱುವೊಲ್ದೆನ್ನ ಚಿ ॥
ತ್ತಕೆ ಬರ್ಪಂತು ಸಲಕ್ಷಣಂ ಮೆಱೆವ ಜಾಯಾಸದ್ಗುಣಂ ತೋರ್ಪ ಕ ।
ನ್ನಿಕೆಯಂ ಕಾಣೆನೆನುತ್ತವಂ ಮನದೊಳಂದುದ್ವೇಗಮಂ ತಾಳ್ದಿದಂ ॥ ೧೧೦

ಅಂತು ಚಿಂತೆಯುಂ ತಾಳ್ದಿ ಮತ್ತ

ಅಂತು ಬಿಸಸಲೊಡಂ ತಳವಱರ್ ಪತಿವ್ರತೆಯ ಗಂಡನ ಕೆಯ್ಕಾಲ್ಗಳಂ
ಕಡಿದ ದುರಾತ್ಮಂ ಸಿಲ್ಕಿದನೆಂದಾತನಂ ಪಿಡಿದು

ಪೆಡಗೆಯ್ಯಂ ಪಿಡಿದೀಟ್ಟಿ ಕಟ್ಟಿ ತಲೆಯೊಳ್ ಪೂವಾಲೆಯಂ ಸುತ್ತಿ ಬೊ।
ಬ್ಬಿಡುತುಂ ಭಂಡಿಯ ಮೇಲೆ ಕುಳ್ಳಿರಿಸಿ ನಾನಾವಾದ್ಯದಿಂ ಪೆರ್ಚಿನಿಂ ॥
ಗಡಿಯೊಳ್ ಕೇರಿಯೊಳಾತನಂ ಮೆಱಸಿ ಖಂಡಂಗೊಯ್ವೆನೆಂಬಾಗಳಾಂ ।
ಕಡಿದಂಗಂಗಳ ಮೋಟನಂ ಕರಸಿಮೆಂದಂ ಧಾನ್ಯಕಂ ಧೈರ್ಯದಿಂ ॥ ೯೪

ಎಂಬುದುಮಾತಳವಱಿವನಂ ದಿಗ್ಬಲಿಗುಡುವ್ರದಂ ನೋಡಲ್ವೇಟ್ಕೆಂದು
ಮೋಟನಂ ಧಾನ್ಯಕನೆಡೆಗೆ ಕೊಂಡು ಬರ್ಪುದುಂ

ಕಾಣಲೊಡನಶ್ರುವಿಂ ಮುಂ ।
ಗಾಣದೆ ಗಡಗಡನೆ ನಡುಗಿ ಮೋಟಂ ತನ್ನಾ ॥
ಪ್ರಾಣಂ ಬಂದಂತಾಗಳ್ ।
ಮಾಣದೆ ಧಾನ್ಯಕನ ಮೆಱೆವ ಕಾಲ್ಗಳಿಗಿದರ್ದಂ ॥ ೯೯

ಅಂತು ಕಾಲ್ಗಳಿಗಿ,

ಅರವೆಣನಾಗಿರೆ ಪ್ರಣ್ಣೊಳ್ ।
ಮಜುಗುತ್ತಿರ್ದನ್ನನೆತ್ತಿ ಕೊಂಡಾವನೆದೊಳ್ ॥
ಬಜನೊಳ್ ಸಾಕಿದ ನಿನ್ನಂ ।
ಮಜ್ಜೆದೊಡೆ ನರಕಕ್ಕೆ ಭಾಜನಂ ತಾನಲ್ತೇ ॥ ೧೦೦

ಎಂಬ ಮೋಟನ ಮಾತಿಂಗೆ ತಳವಱರ್ ವಿಸ್ಮಯಂಬಟ್ಟು ಧಾನ್ಯಕನಂ
ಮೋಟನಂ ನೀತಿವಿಳಾಸನೆಡೆಗೆ ತಂದು ತತ್ಕಾರಣಮಂ ಪೇೞೆ, ನೀತಿವಿಳಾಸಂ
ಮೋಟನೊಳಿಂತೆಂದಂ:—

ಏಲೆ ಮಹಿಮ ಪಾತಕನ ಕಾ ।
ಲ್ಗಳ ಮೇಲಿರ್ದಿಗಿದೆಯೇಕೆ ನಿನ್ನಯ ಕೈಕಾ ॥
ಲ್ಗಳನೋವದೆ ಕಡಿದುಂ ಮಗು ।
ಲ್ದಳಿಯೊಳ್ ಸಾಧುವಿನ ತೆಱದಿನಿರ್ದಪನಲ್ತೇ ॥ ೧೦೧

ಎಂಬುದುಂ ಮೋಟನಿಂತೆಂದಂ: —

ಎನ್ನ ಪಿತೃಮಾತೃಗುರುವೀ ।
ತನ್ನೆಟ್ಟನೆ ಪುತ್ರನಪ್ಪೆನೀತಂಗಾಂ ಕೇ ॥

ಳೆನ್ನ ಕಡಹರಣಮಾಂ ಮಿಗೆ ।

ಮುನ್ನೆಸಗಿದ ಕರ್ಮದಿಂದೆ ಪೋದುವಿಳೀಕಾ ॥ ೧೦೨

ಎಂದರಸಂಗೆ ಪೂರ್ವವೃತ್ತಾಂತಮೀನುಮುಚಿಯದಂತು ಪೇಟ್ಟಿ ಮತ್ತ ಮಿಂತೆಂದಂ:—

ಏಗೆಯ್ವೆಂ ದುರ್ಬಲಂ ಧೂಮಿನಿ ವನದಳುಪಿಂ ಮೇಲೆ ಬೀಲಿಕ್ಕೆ ಬೇಡೆಂ।

ದಾಗಂ ನೂಂಕಲ್ಕೆ ಕೆಯ್ಯಿಲ್ಲಳವಿಗಟಿದು ಪೋಗಲ್ಕೆ ಕಾಲಿಲ್ಲ ತನ್ನೊಳ್ ॥

ಕೂಗಿಟ್ಟಾಂ ಪೇಟ್ಕೊಡಂ ತನ್ನಯ ಬರವಿನಿತಂ ಕಾಣೆನಂತಿರ್ದೊಡೆನ್ನೊಳ್

ಬೇಗಂ ನಾಣ್ಗೆಟ್ಟು ತನ್ನಂಗನೆ ನಗೆಗೆಡೆಯಂ ಮಾಡಿದಳ್ ಪೇಳ್ವೆನೇನಂ ॥

ಎಂಬುದುಂ ನೀತಿವಿಳಾಸಂ ವಿಸ್ಮಯಂಬಟ್ಟು, ಅವಿಚಾರದಿಂದೆನಗೆ ದೋಷಂ ಬರುತ್ತಿರ್ದುದೆಂದು ಕೋಪದೊಳಿರ್ದ ಧೂಮಿನಿಯಂ ನೋಡಿ,

ಎಲೆ ಪಾತಕಿ ನಿಜಕಾಂತನ ।

ನುಜ್ಜಿದೀವೋಟಂಗೆ ಕೂರ್ತು ಪತಿಹಿತೆಯೆಂಬೀ ॥

ಬಲೆಯಂ ಬೀಸಿ ಧರಾವಮಂ ।

ಡಲಮಂ ವಂಚಿಸಿದೆ ನೋಡಲಾಗದು ನಿನ್ನಂ ॥ ೧೦೪

ಎಂದು ಧಾನ್ಯಕಂಗೆ ಮಾಡುವ ಶಾಸ್ತಿಯಂ ಧೂಮಿನಿಗೆ ಮಾಡಿಯನಂತರಂ

ಗುಣನಿಧಿ ಧಾನ್ಯಕಂಗೆ ಸುವುಹೂರ್ತದೊಳೊಲ್ದು ವಿಲಾಸಿನೀಕುಲಾ ।

ಗ್ರಣಿಯೆನಿಸಿರ್ಪ ವೈಶ್ಯಕುಲಕನ್ನಿಕೆಯಂ ತರಿಸಿತ್ತು ನಲ್ಮೆಯಿಂ ॥

ವಣಿಗಧಿನಾಥನೆಂಬ ಪೆಸರಿಟ್ಟೊಲವಿಂ ಪೊರೆದಂ ನೆಗಲ್ದು ಧಾ ।

ರಿಣಿಪತಿ ಕೇಳ್ ನಿಶಾಚರ ದುರಾತ್ಮಿಕೆ ಧೂಮಿನಿ ಮಾಡಿದರ್ಥವುಂ ॥ ೧೦೫

ಅದಱಿಂ ಸ್ತ್ರೀಹೃದಯಂ ಕ್ರೂರಮೆಂದು ಬ್ರಹ್ಮರಾಕ್ಷಸಂಗೆ ಪೇಟ್ಟಿದ ಗೋಮಿನೀವೃತ್ತಾಂತಮಂ ಪೇಲಿಲ್ ತಗುಳ್ದಿನದಂತೆನೆ:—

ಪ್ರಕಟಪ್ರಸ್ತುತಿವೆತ್ತ ಕಾಂಚಿಪುರದೊಳ್ ವಿಖ್ಯಾತಿಯಿಂದಿರ್ಪ ಶ ।

ಕ್ತಿಕುಮಾರಾಖ್ಯನದೊರ್ಬ ತಾಂ ಮದುವೆಯಾಗಲ್ವೇಟ್ಕುವೊಲ್ದೆನ್ನ ಚಿ ॥

ತ್ತಕೆ ಬರ್ಪಂತು ಸಲಕ್ಷಣಂ ಮೆಱೆವ ಜಾಯಾಸದ್ಗುಣಂ ತೋರ್ಪ ಕ ।

ನ್ನಿಕೆಯಂ ಕಾಣೆನೆನುತ್ತವಂ ಮನಗೊಳಂದುದ್ವೇಗಮಂ ತಾಳ್ದಿದಂ ॥ ೧೦೬

ಅಂತು ಚಿಂತೆಯುಂ ತಾಳ್ದು ಮತ್ತಂ

ಪತಿಹಿತಕಾರ್ಯೆಯಂ ವಿನಯಭೂಷಣೆಯಂ ಕಮನೀಯಲಕ್ಷಣಾ ।
ನ್ವಿತೆಯುನತೀವಚೀಲವತಿಯಂ ಗೃಹಕಾರ್ಯನಿಮಗ್ನಚಿತ್ತೆಯಂ ॥
ಸತತವಿಕಾಸವಕ್ತ್ರಯನಪಾರಗುಣಾಧಿಕೆಯಂ ಕಳತ್ರಮಂ ।
ದತಿಶಯದಿಂದೆ ಪಾಲಿಸುವುದಲ್ಲದ ಪೆಂಡಿರನಿಕ್ಕು ಕಿಚ್ಚಿನೊಳ್ ॥ ೧೦೫

ಅಂತೆಂದು

ಇಳೆಯೊಳ್ ಪುಟ್ಟಿದ ಕನ್ಯಾ ।
ಕುಳಮಂ ತವೆ ನೋಲ್ಪೆನೆಂದು ಶಕ್ತಿಕುಮಾರಂ ॥
ಫಳಲನೆ ಸಿಲುಗಿನೊಳಂದೊ ।
ರ್ಬಳ ನೆಲ್ಲಂ ಕಟ್ಟಕೊಂಡವಂ ಪೊಱಮಟ್ಟಂ ॥ ೧೦೬

ಕಾಂತಾಲಕ್ಷಣನಂ ನಾ ।
ನಾತಱಿದಿಂ ನೋಡಲಱಿವೆನೆಂಬೆಲ್ಲರುಮಂ ॥
ಕೈತವದಿಂ ನೋಡುತ್ತುಂ ।
ಜ್ಯೋತಿಷ್ಕನುಮೆನಿಪ ನಾಮಮಂ ತಳೆದಿರ್ದಂ ॥ ೧೦೭

ಅಂತು ಶಕ್ತಿಕುಮಾರಂ ಕಾಂತಾರ್ಥಿಕನಾಗಿ ಕಂಡ ಕಂಡ ಕನ್ನಿಕೆಯ ಲಕ್ಷಣಮುಂ ನೋಡಿ ನೋಡಿ,

ಎಲ್ಲೆಲ್ಲಿ ಪುಗುವನವನೊ ।
ಲ್ದಲ್ಲಲ್ಲಿಯ ಕನ್ಯಕಾಗೃಹಂಗಳೊಳಿನಗೊ ॥
ಲ್ದೊಳ್ಳುಣಿಸನಿಕ್ಕೆವೊರ್ಬಳ ।
ನೆಲ್ಲಂ ಕೊಂಡೆಂದು ಕೇಳ್ವನತಿವುದದಿಂದಂ ॥ ೧೦೮

ಆಂತಾತಂ ಕೇಳಲೊಡಂ,

ಇನ್ನೊರ್ಬಳ ನೆಲ್ಲಂ ನಿನ ।
ಗನ್ನಂ ನೆಱಿವಂತು ಕುಡುವೆನೆಂದವರೆಲ್ಲರ್ ॥
ತನ್ನಂ ಕಳಪಲ್ ನಡೆಗೊ ।
ಳ್ವಂ ನಯದಿಂ ಮಗುಟ್ಟಿ*ದ್ದ ಮತ್ತವೊಂದೆಡೆಗಾಗಳ್ ॥ ೧೦೯

ಅಂತೆಲ್ಲಿಯುಂ ತನ್ನ ಮನಕ್ಕನುಗುಣವಪ್ಪ ಕನ್ನಿಕೆ ದೊರಕದಿರ್ದುಂ,

ನಿರವಧಿಬೀಭವಂ ಸಕಳಪತ್ತನಪಂ ಸತತಂ ತೊಱಿಲ್ವು ಬಂ ।
ಧುರಕುಲಕನ್ಯಕಾವಿತತಿಯಂ ತನಗಪ್ಪವೊಲೆಲ್ಲಿ ನೋಡೆಯುಂ ॥

ಬೊರಕದಿರಲ್ಕೆ ಚಿಂತೆ ತಲೆದೋಱಿ ಮಗುಳ್ದಿತಿಭೈರ್ಯವೃತ್ತಿಯಿಂ ।
ಭರವಶದಿಂದವಂ ವಿಬಿಕದೇಶದ ರತ್ನಪುರಕ್ಕೆ ಸಾರಿದಂ ॥ ೧೧೦

ಅಂತು ರತ್ನಪುರಕ್ಕೆ ಬಂದು,

ಮನೆಮನೆದಪ್ಪದೆ ಸತತಂ ।
ವನಿತಾಲಕ್ಷಣಮನೊಲ್ದು ನೋಡುತ್ತುಂ ಬ ॥
ರ್ದನವೊಂದು ಭವನದೊಳ್ ಗೋ ।
ಮಿನಿಯೆಂಬ ಕುಮಾರಿಯಂ ಕುಮಾರಂ ಕಂಡಂ ॥ ೧೧೧

ಅಂತವಳಂ ಕಂಡು ಲಕ್ಷಣಮಂ ನೋಱ್ಪಿನಂ,

ಪೊಂಗಿದ ಪಾದನುಂ ಸಮುಪದಾಂಗುಲಿಯುಂ ಮೃದುಗೂಢಗುಲ್ಫವುಂ ।
ಮುಂಗಳವೃತ್ತ ಜಂಘೆಗಳುಮೊಪ್ಪುವ ಕೋಮಳಪೂರ್ಣ ಜಾನುಯು ॥
ಗ್ಮಂಗಳುಮೊಲ್ಮೆವೆತ್ತು ರುನಿತಂಬಮುಮಲ್ಪ ಸುಮಧ್ಯಮುಂ ಸಮು ।
ತ್ತುಂಗಕುಚಂಗಳುಂ ವಿಕಸಿತಾನನಮುಂ ಮೆಱೆದಿರ್ಪ ವಾಕೆಯೊಳ್ ॥ ೧೧೨

ಎವೆ ವಜ್ರಾಂಕುಶಚಕ್ರಚಾಪಚಪುರೋದ್ಯಚ್ಛಿಹ್ನವುಂಗಯ್ಯೊಳ ।
ರ್ಪ್ಪವಳಂ ನೀರಜಮೂರ್ಧ್ವರೇಖೆ ಪದೆಪಿಂದಂಗಾಲೊಳಿರ್ಪ್ಪರ್ಪಳಂ ॥
ಕಿವಿಯಂ ಚುಂಬಿಪ ಕಣ್ಗಳೊಳ್ ಧವಳನೀಲಾರುಣ್ಯಚಂಚತ್ತ್ರಿಭಾ ॥
ಗವನಾಂತಿರ್ದವಳಂ ವಿಳಾಸಪರನೊಲ್ದಾನಂದದಿಂ ನೋಡಿದಂ ॥ ೧೧೩

ಮುಡಿಯಿನೆಱಲ್ವ ನೀಳಕಚಮುದ್ಯಲಲಾಟಮರೋಮಜಂಘೆ ಮೆ ।
ಲ್ನುಡಿ ಮದಗಂಧಮಾಂಸಳಮನೋಹರವಕ್ಷವುದಭ್ರಗಂಡಮಿ ॥
ಟ್ಟಿಡೆಯೆನಿಸಿರ್ದಡರ್ದ ಜಘನಂ ಪರಿಪೂರ್ಣಪಯೋಧರಂ ಕರಂ ।
ಕುಡಿನಿಮಿರ್ದ* ಕ್ಷಿಗಳ್ ಮೆಱೆವ ಕನ್ನೆಯನೀಕ್ಷಿಸಿದಂ ಕಳಾವಿದಂ ॥ ೧೧೪

ಸಲೆ ಚೆನ್ನೆಯ್ದಿಲ ಕಾವನಿರ್ಮಡಿಸಿದಂತೊಪ್ಪರ್ಪ ಕರ್ಣಂ ನಿಮಿ ।
ರ್ದೆಗಳನೀಲಚ್ಛವಿಯಂತೆ ರಂಜಿಪ ಲಸದ್ಭ್ರೂಲತೆಗಳ್ ಕುಂದಕು ॥
ಟ್ಮಲಮುಂ ಸೇರಿಸಿದಂತೆ ತೋರ್ಪ ರದನೋದ್ಯತ್ಪ್ರಜ್ಞೆ ನೂತ್ನಪ್ರವಾ ।
ಳಲತಾಸಾರದೊಳಲ್ದಿದಂತೆಸೆದುದಾಬಿಂಬಾಧರಂ ಕನ್ನೆಯಾ ॥ ೧೧೫

ಅಂತಿರ್ದ ಗೋಮಿನಿಯನಾಪಾದಮಸ್ತಕಸಂಪೂರ್ಣಲಕ್ಷಣಮುಂ ಶಕ್ತೆ
ಕುಮಾರಂ ನೋಡಿ ಸಂತೋಷಂಬಡುತ್ತಿಂತೆಂದಂ:—

ಈನೆಲ್ಲೊರ್ಬಳನಂ ಕೊಂ ।
ಡೇನಂ ಮತ್ತ ಅಸದೆನಗೆ ಪರ್ಯಾಪ್ತಮೆನಲ್ ।
ಸಾನಂದದಿನುಣಲಿಕ್ಕಲ್ ।
ಮಾನಿನಿ ನೀನಾರ್ಪೆಯೆಂದು ಕೇಳ್ದನಲಂಪಿಂ ॥ ೧೦೪

ಎಂದು ಕೇಳ್ದೊಡವಳಂತೆಗೆಯ್ವನೆಂದು ನೆಲ್ಲನೀಸಿಕೊಂಡು,
ಕಟ್ಟೊಣಗಿಲಾಗದೊಣಗಿಸಿ ।
ಕುಟ್ಟಲ್ ನುರ್ಚಾಗದಂತೆ ನುಪ್ಪೆಸೆವಿನೆಗಂ ॥
ನೆಟ್ಟಕ್ಕಿವಾಡಿಯುಯ್ಯಂ ।
ಕೊಟ್ಟಳ್ ಸತಿ ಕರೆದು ತನ್ನ ದಾದಿಯ ಕೆಯ್ಯೊಳ್ ॥ ೧೦೫

ಅಂತಾವಾದಿಯ ಕೆಯ್ಯೊಳಿಯ್ಯಂ ಕೊಟ್ಟು,
ಇದನಕ್ಕಸಾಲೆಗಳ್ಗೆ ।
ತ್ತದಱಿಂದಂ ಬಂದ ಕಾಸಿನಿಂ ಮಡಕೆಗಳಂ ॥
ಪದೆದಿಂಧನೋಪದಂಶಮ ।
ನ್ನೊದವಿಸಿ ಕೊಂಡೀಗ ಬರ್ಪುದೊಲವಿಂ ಧಾತ್ರೀ ॥ ೧೦೬

ಎಂಬುದುಮವಳಾಪರಿಯೊಳಿಯ್ಯಂ ಕೊಟ್ಟು ಮಡಕೆಯಿಂಧನಮಾದು-
ರಂಗಳಂ ತರ್ಪುದುಂ; ಬಱಿಯುಂ
ಪಹಸನಱುದೆಸಱುಟೊಯ್ಯನೆ ।
ಮೃದುವಹ್ನಿಯನೆಸಗಿ ಪದೆದೆಸಟ್ ಕಾದುಲ್ ನಿ ॥
ಲ್ಲದೆಯಕ್ಕಿಯೆರಡನೊಲೆಯೊಳ್ ।
ವಿಧಿದರ್ಶಿಸಱೊಳ್ ಪ್ರೊಯ್ದಳಕ್ಕಿಯಂ ಸತಿಯಾಗಳ್ ॥ ೧೦೭

ಅಂತಕ್ಕಿಯಂ ಪ್ರೊಯ್ದು ತೊಳಸಿ
ಕುದಿ ಬರಲೊಯ್ಯನೆ ಮೇಲು ।
ರ್ಚಿದ ನೊರೆಯುಂ ತೆಗೆದು ಬಿಸುಟು ಮೇಲೆಸಱುಂ ಸಾ ॥
ಲ್ದುದನೆಱೆದು ಮಗುಲ್ದಿಗುಲ್ಗಿಳ ।
ಪ್ತದನಂ ತೆಗೆದೊತ್ತಿನೋಡಿ ಬಾಗಿ ನಳಾಗಳ್ ॥ ೧೦೮

ಅಂತು ಓಗರವುಂ ಬಾಗಿ,

ತಿಳಿಗಂಜಿಯುನೊಪ್ಪುವ ತಂ ।
ಗಳಿಸದೊಳಿಱಿದಿರಿಸಿ ದೊರಕಿದುಪದಂಶಮೆನಾ ॥
ಗಳಿ ಪಾಕಂಗೆಯ್ದೊಲಿಯೊಳ್ ।
ತಿಳಿನೀರಂ ತಳದು ಮಸಿಯನಾಗಳ್ ತೆಗೆದಳ್ ॥ ೧೦೫

ಅಂತಾಮಸಿಯಂ ತೆಗೆದು ತನ್ನ ದಾಸಿಯಂ ಕರೆದು
ವಿರಣಿಗಗ್ರೀಮಸಿಯಂ ।
ಭೋರೆನೆ ಕೊಟ್ಟುವರ್ಗಳತ್ತ ಕಾಸಿಂಗೀಗಳ್ ॥
ಗೋರಸಮಂ ದೊರಕಿಸಿ ಕೊಂ ।
ಡೋರಂತಿರೆ ಬರ್ಪುದೆಂದು ಕಳಿಪಿದಳವಳಂ ॥ ೧೦೬

ಎಂದು ಕಳಿಪಲವಳಾಕ್ರಮದಿಂ ಸ್ನೇಹದ್ರವ್ಯಮುಂ ಕೊಂಡು ಬ
ಡಂ, ಶಕ್ತಿಕುಮಾರನಂ ಕರೆದು
ತಿಂಗಳ ಬೆಳಗಿನ ದಾರೆಯು ।
ಸಂಗಡಮೆನೆ ಮೆಱೆಯುತಿರ್ಪ ಗಂಜಿಯುನಾಗಳ್ ॥
ತೆಂಗಿನ ತಿಳಿವಟ್ಟಲೊಳಾ ।
ತಂಗೆಱೆದಳ್ ತೊಳಸಿ ತೊಳಸಿ ಸವಿಯುಪ್ಪುನೆಗಂ ॥ ೧೦೭

ಅಂತೆಱೆಯಲಾಗಂಜಿಯಂ ಕುಡಿಯಲೊಡಂ
ನೆರೆಯಮೃತರಸಕ್ಕಿನಿದೆಂ ।
ದೊರೆಗಟ್ಟುವ ಗಂಜಿ ಪೊಕ್ಕು ತತ್ತನುರಸಮುಂ ॥
ಸ್ಫೋಟಿಸುಡಿಸಿದಂತೆ* ಬೆಮರ್ಗಳ್ ।
ಪೊಱಪೊಣ್ಮಿದುವವನೆ ರೋಮಕೂಪದೊಳಾಗಳ್ ॥ ೧೦೮

ಅಂತವನೆ ದೇಹಂ ಬೆಮರಲ್
ಅರೆದಿರಿಸಿದ ನೆಲ್ಲಿಯ ಸ ।
ಟ್ಟುರುಳಿಯೊಳತಿಸಯಮುದಾಗೆಲೆಣ್ಣೆಯ ಪನಿಯುಂ ॥
ಬೆರಸಿಟ್ಟು ಕೊಟ್ಟೆಳಾತಂ ।
ಗಿರದೀಗಳಿ ಮಿಂದು ಬರ್ಪುದೆಂದವಳಾಗಳ್ ॥ ೧೦೯

ಅಂತಾತನಂ ಮಿಂಯಲ್ ಕಳಿಪಿ, ಮಣೆಯೊಳಿಡೆಮಾಡಿಯಿಡಿಸಿ ನುಗುಬಿಚ್ಚಿ
ತಂ ಬರಲೊಡಂ,

ಎಳೆಯಳ್ ಪಿತ್ತಿಲ ಬಾಣೆಗ ।
ಳೆಲೆಯೊಳ್ ಮೂಜನೆಯು ಬಾಗವುಂ ಬಿಟ್ಟಗ್ರಂ ॥
ತಳರೆಸೆಯುತಿಪರ್ ಕದಳ್ಳೀ ।
ದಳಮುಂ ಮೆಲ್ಪೆಸೆಯೆ ಚಿತ್ರಪಟ ತಂದಳ್ ಬೇಗಂ ॥ ೧೬೪

ಅನಂತರಂ

ನೆಲದೊಳ್ ಕುಡಿತೆಯು ನೀರಂ ।
ತಳದೊಯ್ಯನೆ ತೊಡೆದು ಪೆಂಪಿನಿಂ ಚತುರಶ್ರ ॥
ಸ್ಥಳವನೊಸೆಬಿಟ್ಟು ರಂಭಾ ।
ದಳಮುಂ ನೀಗೊರ್ಟ್ಟಳೊಂದು ಪೊಸತಂಬುಗೆಯಿಂ ॥ ೧೬೫

ಅಂತು ನೀಗುರ್ಡಲಾತಂ ಕರಚರಣಪ್ರಕ್ಷಾಳನಂಗೆಯ್ದು ಕುಳಿಕರ್ಸುದುಂ,

ಪವಣಱಿದಿಕ್ಕಿಯೋಗರಮನುಪ್ಪಿನ ಕಾಯ್ಗಳನಿಕ್ಕಿದೊಂದು ಶಾ ।
ಕವನೊಸೆದಿಕ್ಕಿಯಲ್ಪಘೃತಮುಂ ತಲೆದೋಱು ಮಗುಟ್ಟಿ ತುತ್ತುಗಳ್ ॥
ಸವಿವಡೆವಂತು ಪೊಂಬಸಱಿ ಸೂಪವನೊಪ್ಪುವ ಮಾದುರಂಗಳಂ ।
ಯುವತಿ ತೆರಳ್ಚಿ ಬಡ್ಡಿಸಿದಳಾಸುಖಿಯೊಳ್ ಪರಿತೃಪ್ತಿಯುಪ್ಪಿನಂ ॥ ೧೬೬

ಅಂತಾತಂ ಭೋಜನದಿಂ ತುಪ್ಪಟನಾಗೆ

ಸುರುಚಿರಮಪ್ಪ ತೆಂಗಿನೆಳನೀರ್ಗಳಸಂದಳದಂತೆ ಕಾಂತೆ ತ ।
ಣ್ಣಿರಗಮನೆತ್ತಿ ಶೈತ್ಯಜಲಮುಂ ಪದೆಪಿಂದೆಱೆಯುಲ್ಕೆ ಶೀಕರೋ ॥
ತ್ಕರಮೆದೆ*ಯೊಳ್ ನಿಮಿದ್ದಿರ್ಪಸೆವ ವಿಾಸೆಗಳೊಳ್ ತುಱುಗಲ್ ಪೊದಲ್ದಿ ಕ ।
ಣ್ಣಿರೆಮುಗಿವಂತಿರೀಂಟಿ ಕಡೆಯೊಳ್ ತಲೆದೂಗಿ ಮಗುಟ್ಟಿ ತೇಗಿದಂ ॥೧೬೭

ಅಂತು ತೇಗಿ ಗೊಟ್ಟಂಗೊಂಡು ಕೈದೊಳೆದು ಗೃಹೀತತಾಂಬೂಲನಾಗಿ ಸಂತೋಷಂಬಟ್ಟನಳಂ ವಿವಾಹಮಾಗಿ ಸುಖದಿನಿರ್ದಂ.

ಅದಱಿಂ ಗೃಹಸುಖಂ ಸತಿಯರೊಳ್ಪೆಂದು ರಾಕ್ಷಸಂಗೆ ಪೇಳಿಲ್ ಸಂ
ತೋಷಂಬಟ್ಟು ನಿಂಬವತಿಯ ಕ್ರಮಮೆಂತೆಂದು ಕೇಳಲಾತಂ ಪೇಳಿಲ್ ತಗು
ಳ್ದನದೆಂತೆನೆ:—

ಪದೆಪಿಂಸಾರಾಷ್ಟ್ರದೊಳ್ರಂಜಿಪ್ಪುದು ವಳಭಿ ವಾಣೀವಿಲಾಸಕ್ಕೆಕೋಭಾ।
ಸದನಂ ತಾನೆಂಬಿನಂ ತತ್ಪುರದೊಳಿ ಗೃಹಗುಪ್ತಂ ವಣಿಜ್ಮುಖ್ಯನಿರ್ದಂ ॥

ಮುದದಿಂ ಕಲ್ಯಾಣದಿಂದಂ ತವೆಯದ ನವರತ್ನಂಗಳಿಂ ರಾಜರಾಜಾ।
ಭ್ಯುದಯಂ ತನ್ನೈಕದೇಶಕ್ಕೆಣೆವಡೆಯದೆನಿಪ್ಪಂದದಿಂ ಸಂದಗುರ್ಬಿಂ ॥

ಅಂತಿರ್ದ ಗೃಹಗುಪ್ತಂಗೆ

ಸತತಂ ರೋಹಣಶೈಲದೊಳ್ ಮಣಿ ಸುಧಾಂಭೋರಾಶಿಯೊಳ್ ಚಂದ್ರಲೇ।
ಖೆ ತಪತ್ಯಕ್ತಿಯೊಳುದ್ಭಶಾಂತಿ ಕವಿತಾವಿಸ್ತಾರದೊಳ್ ಪೌಢಿ ಪು ॥
ಪ್ಪಿತಪದ್ಮಸ್ಥಳದೊಳ್ ಲಸತ್ಕಮಳಿ ಪೆಂಪಿಂ ಪುಟ್ಟುವಂತಾವನಿ ।
ಕ್ಷಿತಿಯೊಳ್ ಪುಟ್ಟಿದಳೊಲ್ದು ರತ್ನವತಿಯೆಂಬಳ್ ಶಂಬರಾರಿಪ್ರಿಯಳ್ ॥

ವಿಲಸನ್ಮಾಣಿಕ್ಯಮಂ ಚೆಲ್ವುಧರದ ರುಚಿಯಿಂ ನವ್ಯನೈರ್ಮಲ್ಯಮುಕ್ತಾ।
ವಲಿಯುಂ ದಂತಪ್ರಭಾಸಂಪದದಿನುರುಮರುನ್ನೀಲಮಂ ಸಂತತಂ ಕುಂ ॥
ತಲಚಂಚತ್ಕಾಂತಿಯಿಂ ವಿದ್ರುಮಮನಳಹಸ್ತಾಬ್ಜದಿಂ ಗೆಲ್ದು ತತ್ಕೋ।
ಮಲೆ ಮತ್ತಂ ರತ್ನಪಾಂಚಾಲಿಕೆಯೆನಲೆಸೆವಳ್ ತನ್ನ ದೃಗ್ದೀಪ್ತಿಯಿಂದಂ॥

ಅಂತೆಸೆದಿರ್ದ ರತ್ನವತಿಯುಂ ಗೃಹಗುಪ್ತನೊಳಿಲ್ದು ತತ್ಕಳಾ ।
ವಂತನೆನಲ್ಕೆ ಸಾಲ್ವ ಬಲಭದ್ರನೆನಿಪ್ಪ ವಣಿಗ್ವರಂಗೆ ಕೊ ॥
ಟ್ಟಂ ತಪನೀಯರತ್ನ ವಿವಿಧಾಂಬರಸಂತತಿಯಿಂ ಸುಹೃಜ್ಜನಂ ।
ಸಂತತವರ್ತಿಗಳ್ ತಣಿವಿನಂ ವಿಭವಸ್ಥಿತಿ ಚೆಲ್ವನಪ್ಪಿನಂ ॥ ೧೩೫

ಅಂತು ರತ್ನವತಿಯುಂ ಮಧುರಾಪುರಿಯ ಬಲಭದ್ರಂಗೆ ಗೃಹಗುಪ್ತಂ ಕು
ಡಲೊಡಂ,

ರಜನಿಕರಾಸ್ಯೆ ರತ್ನವತಿ ಪೂರ್ವದೊಳಾರ್ಜಿಸಿದುಗ್ರಕರ್ಮದಿಂ ।
ನಿಜಪತಿ ಸಂತತಂ ಮದುವೆಯಾದ ದಿನಂ ಮೊದಲಾಗಿ ತನ್ನ ವಾ ॥
ರಿಜನಮುಖಮಂ ನಿರೀಕ್ಷಿಸದೆ ತನ್ನೊಡಗೂಡದಿರಲ್ ದುರಾತ್ಮನಂ ।
ಗಜನ ಸುಮಾಸ್ತ್ರಸಂತತಿಗೆ ತತ್ಸತಿಯುಂ ಗುರಿಮಾಡಿ ಕಾಡಿದಂ॥ ೧೩೬

ಅಂತಿರ್ದ ರತ್ನವತಿಯಂ ಕಂಡು

ಈವನಿತೆ ರತ್ನವತಿಯ ।
ಲ್ತಾವಗಮಿನ್ನೀಕೆ ನಿಂಬವತಿಯೆಂದು ಸ್ಮರ ।
ಸ್ತ್ರೀವೃಂದಂ ಪೆಸರಿಡೆ ತ ।
ದ್ಭಾವಕಿ ಕಡುನಾಚ್ಚಿ ಚಿಂತೆಯುಂ ತಳೆದರ್ದಳ್ ॥ ೧೩೭

ಅಂತು ಚಿಂತಿಸುತ್ತಿರ್ದಾಗಳ್
ತನಗನುರಕ್ತೆಯೆನಲ್ ಮು ।
ನ್ನನುಕೂಲೆಯೆನಲ್ಕೆ ವಿಘ್ನಿನ ಭಿಕ್ಷುಕಿಯೊರ್ವಳ್ ॥
ಮನೆಗೆ ಬರಲ್ಕಾಕೆಗೆ ಭೋಂ ।
ಕೆನೆ ದುಗುಡಮನಾಂತ ರತ್ನವತಿಯಿಂತೆಂದಳ್ ॥ ೧೩೪

ಎನ್ನಿನಿಸುನೆನ್ನನೆಂದುಂ ।
ಮನ್ನಿಸನೇನೆಂದು ನುಡಿಸನೇಕಾರಣಮಾ ॥
ಮುನ್ನೆಸಗಿದ ದುಷ್ಕರ್ಮಮೊ ।
ತನ್ನಯ ದೌರ್ಭಾಗ್ಯಲಕ್ಷಣಮೊ ಪೇೞೊಲವಿಂ ॥ ೧೩೫

ಅದಂ ಕಂಡಲ್ಲಿಯು ವಿಳಾಸಿನಿಯುರ್ ರತ್ನವತಿಯೆಂಬುವಂ ಮೊಣ್ಣಂ ನಿಂಬ ವತಿಯೆಂಬ ಪೆಸರಂ ಕೊಟ್ಟರೆಂದು ಭಿಕ್ಷುಕಿಗೆ ಪೇೞಲವಳಿಂತೆಂದಳ್:—

ವನಜಮುಖಿ ರತ್ನವತಿ ನಿ ।
ನ್ನಿನಿಯಂ ನಿಧಿಪತಿ ವಣಿಗ್ವರೇಣ್ಯನ ಸುತೆ ತ ॥
ತ್ಕನಕಲತಾಖ್ಯೆಗೆ ಕೂಪರ ।
ನಿನಗಮವಳ್ಗಂ ಸ್ವರೂಪವೊಂದೆನಿಸಿರ್ಪಂ ॥ ೧೩೬

ಎಂಬುದುನಾಭಿಕ್ಷುಕಿಗೆ ರತ್ನವತಿಯಿಂತೆಂದಳ್:—

ಆದೊಡೆ ನಿಧಿಪತಿಯ ಪುತ್ರಿ ।
ನಾದಪ ಮೇಲಿರ್ದ ಕನಕಲತೆಯಪ್ರೊಲಾ ಸ ॥
ಮ್ಮೋದದೆ ಸಂಡಾಡುವ ಪೊ ।
ಟ್ಟಾದರದಿಂದಲ್ಲಿಗಧಿಪನಂ ಬರಿಸೊಲವಿಂ ॥ ೧೩೭

ಅಂತು ಬರಿಸಲೊಡಂ,

ಸಂಡಂ ಭೋಂಕೆನೆ ಕಾಂತನ ।
ಮಂಡೆಯೊಳಾಂ ವಿಲ್ಲನಿಡಲೊಡಂ ನೀನಾಗಳ್ ॥
ಕಂಡಾಸತಿಯೊಲವಂ ನೀಂ ।
ಕೊಂಡುಯ್ಯಲ್ಲಿಂದೆ ಕನಕಲತೆಯುಂ ಜೀಗಂ ॥ ೧೩೮

ಎಂದು ನೀಂ ಪೇೞ್ದೊಡಾತನೆನ್ನಂ ಕನಕಲತೆಯೆಂಬ ಭಾವನೆಯಿಂದಿಲ್ಲಿಂದಂ

ಕೊಂಡುಯ್ಯಲಾಂ ಕೂಡೆ ಸುಖದಿನಿರ್ಪೆನೆಂಬುದುಂ ಭಿಕ್ಷುಕಿಯುಂತೆಗೆಯ್ವು
ನೆಂದು,

ಬಲಭದ್ರನೆಡೆಗೆ ಭಿಕ್ಷುಕಿ ।
ನಲವಿಂದಂ ಪೋಗಿ ಕೇಳ್ ಮನೋಹರೆ ತತ್ಕ್ಷೀ ॥
ಮಲೆ ಸೆಂಡನಾಡುವಳ್ ಕನ ।
ಕಲತಾವಧು ನೋಲ್ಪಿವೇಚೆನುತ್ತುಂ ಪೇಳ್ದಿಳ್ ॥ ೧೪೩

ಅಂತು ಪೇಳಿಲಾತನಾಗಳೆ ನಿಧಿಪತಿಯ ರಮನೆಯು ಪ್ರಾಸಾದದ ಕೆಳಗೆ
ಬಂದಿರ್ದುದುಂ,

ತ್ರಿಜಗನ್ಮೋಹನಮಿಶ್ರಿತಾಂಜನಕರಂಡಂ ವಶ್ಯಕುಂಡಂ ರುಷ ।
ಧ್ವಜಕಾಂಡಂ ವಿಟಚಿತ್ತ ಖಂಡನಮುರಾಗಾಪೂರ್ಣಭಾಂಡಂ ಗುಣ ॥
ವ್ರಜಷಂಡಂ ಖರದಂಡತುಂಡಮುಕುಳಿಶೋದ್ದಂಡಂ ದಿಟಕ್ಕೆಂಬಿನಂ ।
ನಿಜದಿಂ ರಂಜಿಪ ಸೆಂಡನಿಟ್ಟಳದಿರೊಳ್ ತತ್ಕಾಂತೆ ತನ್ನೋವನಾ ॥ ೧೪೪

ಅಂತು ನಿಂಬವತಿ ಕನಕಲತಾವ್ಯಾಜದಿಂ ಕಂತುಕಮುಂ ಕಾಂತನ ಮೇಲಿ
ಡಲೊಡಮಾತಂ ಪರಮಾನಂದದಿಂ ಪ್ರಾಸಾದದ ಮೇಲಂ ನೋಲ್ಪಿನಂ,

ಪ್ರಾಸಾದಶಿಖರಗಗನಾ ।
ವಾಸದೊಳಮಳಾಂಗಿನಿಂಬವತಿರುಚಿರಾಂಶು ॥
ನ್ಯಾಸಂ ಬಲಭದ್ರನ ಕ ।
ಣ್ಗಾಸುರಮೆನಿಪಂತು ತೋಱುಸಿತ್ತನುನಯದಿಂ ॥ ೧೪೫

ಅಂತಿರ್ದ ಸತಿಯನಾತಂ ನೋಡಲ್ ಭಿಕ್ಷುಕಿಯಿಂತೆಂದಳ್:—

ಮನಸಿಜನವ್ಯಮೂರ್ತಿ ಬಲಭದ್ರವಣಿಗ್ವರ ಕೇಳ್ ನಿರಂತರಂ ।
ಕನಕಲತಾಖ್ಯೆ ನಿನ್ನೊಡನಿರಲ್ ಬಯಸಿರ್ದಪಳಲ್ಲಿರಲ್ತ ॥
ಜ್ಞನಕನ ಬಾಧೆಗಂಜಿ ವಳಿರುಳ್ ಕವಿದಾಕ್ಷಣಮನ್ಯದೇಶದ ।
ತ್ತನುನಯದಿಂದೆ ಪೋಪುದವಳಂ ಧನಮುಂ ವಿ.. ಕೊಂಡು ಬೇಗದಿಂ ॥

ಎಂದು ಮತ್ತಂ

ಇಂದಿರುಳಾಂ ಕನಕಲತಾ ।
ಸುಂದರಿಯುಂ ಬೇಱೆ ರತ್ನಮುಂ ಬಹುಧನಮುಂ ॥

ತಂದಿತ್ತಪೆನಾಂ ನೀನಿ ।
ಲ್ಲಿಂದಂ ಪೋಗನ್ಯದೇಶದತ್ತಲ್ ನಲವಿಂ ॥ ೧೪೭

ಎಂದೊಡಾತನಂತೆಗೆಯ್ವೆನೆಂಬುದುವೊಂದುದಿನಂ,
ದೆಸೆಯಂ ಬಾಸಣಿಸಿರ್ದ ಕಲ್ತಿ ಲೆಯೊಳಂದೀಷ್ಯಾಳ್ಯುವೋಹಂ ವಿಗು ।
ರ್ದಿಸೆ ತದ್ಭಿಕ್ಷುಕಿ ಕೂತು ನಿಂಬವತಿಯಂ ಬೇಲ್ಪಿರ್ದವಂ ರತ್ನಮುಂ ।
ಪೊಸತಪ್ಪಂಬರವುಂ ನೆಗಟ್ಪಿ ಬಲಭದ್ರಂಗಾಕೆ ತಂದಿತ್ತು ಪೋ ।
ಗು ಸುಖಂ ರಂಜಿಸುವಂತಿವಂ ತಳಿದು ನೀಂ ದೂರಕ್ಕನುತ್ತಾ ತನೊಳ್ ॥

ಅಂತೆನಲವಂ ನಿಂಬವತಿಯುಂ ಕನಕವತಿಯುವೊಂದೆ ಚಂದವುಪ್ಪಿದ
ಱಿಂದವಳಂ ಕೊಂಡು ನಿಶಾವಸಾರ್ಗದಿಂದೆ ವಳಭಿಯಂ ಪೊಱಮಟ್ಟು ಪೋ
ಗುತುಂ ದಾರಿಯೊಳ್,

ಪ್ರಿಯೆಗೆ ನುಡಿ ನೆರವು ಪರಿಚ ।
ರ್ಯೆಯನೊಲವಿಂ ಮಾಪ್ಪಿಳಿಂದು ಬಲಭದ್ರಂ ಡಾ ॥
ಸಿಯನೊರ್ಬಳಂ ನಿತಾಂತ ।
ಕ್ರಯವಾಗಲ್‌ಕೊಂಡು ಪ್ರೊಱಿಸಿದಂ ಬಲ್ವೊಱೆಯುಂ ॥ ೧೪೯

ಅಂತವಳ ಮುಂಡೆಯೊಳ್ ಪೊಱೆಯನಿಟ್ಟು,
ದಿವಸಕ್ರಮದಿಂ ಪೊಕ್ಕಂ ।
ಯುವತಿಯುತಂ ಶೂರಸೇನದೇಶದೊಳಂದೊ ।
ಪ್ಪುವ ಮಧುಮತಿಪತ್ತನಮುಂ ।
ನವರತ್ನಾಧಿಪನಣ್ಗ್ವರಂ ಬಲಭದ್ರಂ ॥ ೧೫೦

ಅಂತಾಮಧುಮತೀಪತ್ತನಮಂ ಪೊಕ್ಕು
ದಿನದಿನದೊಳ್ ಬಲಭದ್ರಂ ।
ಧನಕನಕಸಮೃದ್ಧಿಯಿಂ ಕರಂ ಪೆರ್ಚಿ ದಿಶಾ ॥
ನನದೊಳ್ ಕೀರ್ತಿಯನಾಂತಂ ।
ತನಗಾರ್ಜಿತಪುಣ್ಯಮುಳ್ಳೊಡೆಲ್ಲಿರ್ದೊಡಮೇಂ ॥ ೧೫೧

ಅಂತಿರ್ಪುದುಂ,

ಇತ್ತಲ್ ಗೃಹಗುಪ್ತಂ ನಿಜ ।
ಚಿತ್ತದೊಳತಿಚಿಂತಿಸುತ್ತುಮಿನ್ನಳಯುಂ ತಾ ॥

ನೆತ್ತಲ್ ಪೋದಪನೊಡಗೊಂ ।
ಡುತ್ತ ಮಗಜಗವನೆ ರತ್ನವತಿಯನಲಂಪಿಂ ॥ ೧೫೬

ಎಂದು ಚಿಂತಿಸುತ್ತಿರ್ದುಮತ್ತಲ್ ಮಧುಮತಿಸತ್ತನದೊಳ್
ಅಡಿಗಳನೊತ್ತುತ್ತುಂ ತೂಂ ।
ಕಡಿಸುವ ನಿಜದಾಸಿಯಂದಮಂ ಕಂಡಾಗಳ್ ॥
ತುಡುಗುಣಿ ತೊಟ್ಟೆಯೆನುತ್ತುಂ ।
ಪೊಡೆದಳ್ ಕಡುಮುಳಿದು ನಿಂಬವತಿಯಂತವಳಂ ॥ ೧೫೭

ಅಂತು ಅತೊಟ್ಟಿಂ ಜಡಿದು ಪ್ರೌಢೆಯಪ್ಪವಳ್
ಕಂಡವರೆಲ್ಲರೊಳ್ ಕಪಟದಿಂ ಬಲಭದ್ರನದೊರ್ಬ ಸೆಟ್ಟಿಯಾ ।
ಪೆಂಡತಿಯುಂ ಸನುಸ್ಥನಮುಂ ನವರತ್ನಮನೀಂಟ್ಟಿ ತಂದು ಭೂ ॥
ಮುಂಡಲದೊಳ್ ಕರಂ ಶುಚಿಯೆನಿಪ್ಪ ಪ್ರಾಲಿರ್ದಪನೆಂದು ಕೋಪದು ।
ದ್ದಂಡತೆಯಿಂದೆ ಪೇಟ್ದಿಳತಿಜೋಪ್ಯಮೆನಲ್ ನಿಜದಾಸಿ ಸಾಸದಿಂ ॥ ೧೫೮

ಅಂತು ಪೇಟ್ಟಿದುಮಲ್ಲಿಯ ಸಮಯಸಂಕೇತದವರೊಂದುಗೂಡಿ ಬಲಭದ್ರನಂ ಕರೆಯಿಸಿ

ಪರಸತಿಯಂ ಪರಾತ್ಮಧನನುಂ ಮಿಗೆ ವಂಚಿಸಿ ತಂದ ದೋಷಿ ನೆ ।
ತ್ಪುರದೊಳಿರಲ್ಕೆ ನಿಂದೆಯೆಮಗಪ್ಪುದೆನುತ್ತೆ ವಣಿಗ್ವರರ್ಕಳುಂ ॥
ಪರಿಭವಮಪ್ಪಿನಂ ಪೊಱಮಡೀಪ್ರೋಲಿಲಿ ಪರಸತ್ಪ್ರಿಯಂ ಪರರ್ ।
ದೊರಕಿಸಿದರ್ಥನುಂ ಸುಖದೊಳಿಲ್ಲಿರಿಸೆಂದವರೆಲ್ಲರಾತನಂ ॥ ೧೫೯

ಅಂತೆಂಬುದುಮಾಬಲಭದ್ರಂ ಚಿಂತಾಕ್ರಾಂತನಾಗಿ ಮನೆಗೆ ಬಂದು ನಿಜ ಸತಿಯೊಳ್ ಪೇಟಿಲಾಕೆಯಿಂತೆಂದಳ್ :—

ಪರಸತಿಯಲ್ತು ಮತ್ಸತಿ ಪರಾರ್ಥಮದಲ್ತು ಮದೀಯವಿತ್ತಮೆಂ ।
ದರಸಿನ ಮುಂದೆ ನಿಂದು ಕಡುಬಾಸೆಯನೊಲ್ಲದೊಡೋಲೆಯಂ ಮನು ॥
ಷ್ಯರನತಿವೇಗದಿಂ ವಳಭಿಗಟ್ಟಿ ವಿಚಾರಿಸ್ರದೆನ್ನ ಕಾಂತೆಯಿ ।
ರ್ದಿರವನ .....† ೧೬೦

ಎಂದೊಡಾತಂ ಮಗುಳ್ದಿರಸನಿರ್ದೆಡೆಗೆ ಪೋಗಿ ಬಿನ್ನವಿಸಿ ಸಕಲರಂ

† ಪಲ್ಕದೀಯೆಡೆಗೆ ಖಂದನು ಪಡೆದಿಂದುವಲ್ಲಭಾ, ಎಂದು ಬಂದು ಪ್ರತಿಯುಲ್ಲಿದೆ.

ಕರೆಯಿಸಿ ತನ್ನ ಕಾಂತೆ ಪೇಳ್ದ ಕ್ರಮಮನುಂ ಪೇಟಲವರಿದು ನ್ಯಾಯಮೆಂದು ವಳಭಿಗೋಲೆಯುಂ ಕಳಪಲನಜೊಳ್,

ಇಲ್ಲಿ ಬಲಭದ್ರನೆಂಬವ ।
ನಲ್ಲಿಂದಂ ಕನಕಲತೆಯೆನಿಪ್ಪಂಗನೆಯುಂ ॥
ಬಲ್ಲಿದತನದಿಂ ತಂದೆ ।
ವೆಲ್ಲರೊಳವಳೆನ್ನ ಕಾಂತೆಯುಂ ಚಿನುತಿರ್ಪಂ ॥ ೧೫೭

ಎಂದಿರ್ದ ಲೇಖಾರ್ಥಮುಂ ಗೃಹಗುಪ್ತಂ ಕಂಡು

ಇಂದು ತನೂಜೆಯುಂ ಪಡೆದೆನೆನ್ನಳಿಯಂ ನಲವಿಂದೆ ಕೂರ್ತು ಮ ।
ನ್ನಂದನೆಯೊಳ್ ಸುಖಂಬಡೆಯುತಿರ್ಪನಿಲ್ಲಿಗೆ ನಾಳ್ಕಿ ಮುತ್ತೆ ಬೇ ॥
ಱೊಂದು ವಿಳಾಸದಿಂ ಮಧುಮತೀಶ್ವರಮೆಂಬುದಱೊಳ್ ಪ್ರಸಿದ್ಧಿಯಿಂ ॥
ದೆಂದು ಮನೋ ನುರಾಗದೊದವಿಂ ಗೃಹಗುಪ್ತನವರ್ಗೆ ಮೆಚ್ಚಿದಂ ॥ ೧೫೮

ಅಂತು ಗೃಹಗುಪ್ತನೋಲೆಯುಂ ತಂದವರ್ಗೆ ಬೇಱಿಪ್ಪುದಂ ಕೊಟ್ಟನಂತರಂ

ಬಹಳಾಲಂಕಾರಮುಂ ಮಾಡಿಸಿ ನಿಜಸುತೆಯಂ ನೋಡಲೆಂದಿಷ್ಟವರ್ಗಂ।
ಸುಹೃದಾಪ್ತರ್ ಬಂಧುಗಳ್ ಸೇವಕತತಿ ಬುಧಸಂತಾನಕಂ ತನ್ನ ಕಾಂತಾ॥
ಸಹಿತಂ ಸಂರಂಭದಿಂದಂ ಮಧುಮತಿನಗರಕ್ಕೆಯ್ದಿದಂ ನಲ್ಮೆಯಿಂದಂ ।
ಗೃಹಗುಪ್ತಂ ಲೇಖ್ಯಮುಂ ತಂದವರೊಡನೊಲವಿಂ ಸಂತತಂ ಶೀಘ್ರಯಾನಂ॥

ಅಂತು ಮಧುಮತೀಪತ್ತನಕ್ಕೆ ಬಂದು ಬಲಭದ್ರನ ಮನೆಯಂ ಪ್ರಗುವುದುಂ,

ಜನಕಂ ಮಾತೃಸಹೋದರರಿ ಪರಮಬಂಧುಶ್ರೇಣಿಗಳ್ ಭೋಂಕೆನಲ್ ।
ಮನೆಗೇಳ್ತಂದೊಡೆ ಪೆಱರ್ ನಿಂಬವತಿಯುತ್ಸಾಹದಿಂ ತಂದೆಗೊ ॥
ಲ್ದಿನಸುಂ ವಂದಿಸಲಂದು ಕಂಡು ಬಲಭದ್ರಂ ವಿಸ್ಮಯಂಬಟ್ಟುದೇ ।
ನೆನುತುಂ ನೋಡಿನನಲ್ತಿ ರತ್ನವತಿಯುಂ ಮತ್ಕಾಂತೆಯೆಂದಾವಗಂ ॥ ೧೬೦

ಬಿಱಿಕ್ಕಾ ಬಲಭದ್ರಂ ತನ್ನ ಕಾಂತೆಯಪ್ಪ ರತ್ನವತಿಯೆ ಕನಕಲತಾಭ್ರಾಂತಿಯಂ ಮಾಡಿದಳ್. ಇಂದೆನ್ನ ಮಾನಮುಳಿಯಿತ್ತೆಂದು ಸಂತೋಷಂಬಟ್ಟು

ನೆಲೆದಪ್ಪಿದೆಡೆಗೆ ಮತಿ ಸಂ ।
ಚಲಿಸಿರ್ದೆಡೆಗನ್ಯದೇಶಮಾದೆಡೆಗೆ ಮಳರಿ ॥

ಮುಳಿದೆಡೆಗೆ ಬುದ್ಧಿವೇಲಿಲ್ ।
ಕುಲವಧುನೇ ಕಾರಣಂ ಪರೀಕ್ಷೆಯಿಪಲ್ತೀ ॥ ೧೬೧

ಎಂದು ಬಲಿಕಂ ಬಲಭದ್ರಂ ಗೃಹಗುಪ್ತಂಗೆ ನಮಸ್ಕರಿಸಿ ಕ್ಷೇಮಕುಶಲವಂ ಕೇಳ್ದನಂತರಂ,

† .....ಮುಧುಮತಿಪತ್ತನ ।
ದವರೆಲ್ಲರ್ ಬಂದುಬಂದು ಸಮ್ಮುದದಿಂ ಬೆಸಕೊ ॥
ಪ್ಪವ ಗೃಹಗುಪ್ತನನಪ್ಪಲ್ ।
ಸವಿಲಾಸದಿನಂದು ನೋಡಿದಂ ಬಲಭದ್ರಂ ॥ ೧೬೨

ಅಂತು ನೋಲ್ಪ ಬಲಭದ್ರನಂ ತನ್ನಳಿಯನೆಂದಲ್ಲಗೆ ಪೋಲಿಲನರ್ ಬಲಿಕಾತನಂ ಸಂಪ್ರೀತಿಯಿಂದೊಡಗೂಡಿದರ್.

ಅದಱಿಂ ಕಾಮಸಂಕಲ್ಪಮೆಂದಾರಾಕ್ಷಸಂಗೆ ನಿಂಬವತ್ತೀವೃತ್ತಾಂತವಂ ಪೇಳ್ದೊಡವರ್ಕಾತಂ ಮೆಚ್ಚಿ – ನಿತಂಬವತಿ ಏಗೆಯ್ದಳೆಂದು ಕೇಳಲಾಪೇಲಿಲ್ ತಗುಳ್ದನದೆಂತೆನೆ.—

ಬವವಿವ ಪೆಂಪಿನಿಂ ವಸುಮತೀವಧುಮಂಡಿತಪರ್ಣಮಾದವಂತಿದೇ ।
ಶದೊಳಿಸೆದಿರ್ಪುಗುಜ್ಜಯಿನಿಯೆಂಬ ಪುರಂ ಸಲೆ ತತ್ಪುರಾಧಿಪಂ ॥
ಮುದವದರಾತಿಮತ್ತಗಜಮರ್ದನಸಿಂಹನನಂತಕೀರ್ತಿಯೆಂ ।
ಬುದಿತಯಶೋಧಿಕಂ ಭುವನಸಾಧಕನರ್ಥಿದರಿದ್ರಬಾಧಕಂ ॥ ೧೬೩

ಅಂತಿಪರ್ನಂತಕೀರ್ತಿಗೆ

ಅತಿರೂಪವಂತೆ ಕುಸುಮಾ ।
ಯಿತತನು ಪೆಂಪಿಂ ನಿತಂಬವತಿಯೆಂಬಿಳ್ ಭೂ ॥
ಪತಿಯಪ್ಪನಂತಕೀರ್ತಿಗೆ ।
ಸತಿಯಾದಳ್ ನಿಚ್ಚ ನಲ್ಮೆಯಿಸೆದಿರ್ಪಿನೆಗಂ ॥ ೧೬೪

ಲತೆಯಿಂ ಕಲ್ಪಕುಜಂ ಮದಾಳಿಯಿನರಲ್ದೊಂಟಂ ಮೆರಾಳ್ದೀಲಸ ।
ದ್ಗತಿಯಿಂ ಪುಪ್ಪಸರೋವರಂ ಪ್ರತಿಭೆಯಿಂ ವಾಕ್ಯಂ ಶಮಾಸಂಗದಿಂ ॥
ಯತಿ ದಾನೋನ್ನತಿಯಿಂ ಧನಂ ಮೆಱೆವವೋಲ್ ಪ್ರಾಣೇಶ್ವರೀಸ್ನೇಹದಿಂ ।
ಸತತಂ ರಂಜಿಸುವಂ ನಿತಂಬವತಿಯಿಂ ತದ್ಭೂಭುಜಂ ಭೂಮಿಯೊಳ್ ॥

† ನಲವಿಂ. ಎಂದು ಒಂದು ಪ್ರತಿಯು ಪಾಠ.

ಅಂತಾನಿತಂಬವತಿ

ಕುವಲಯನೇತ್ರೆ ಸುವರ್ಣವರ್ಣೆ ವೇಣಿ ಸಕೋಮಳ ದೇಹದೀಪ್ತಿಸಂ ।
ಭವಿ ವಿಲಸತ್ಪಟೋಧರಿಯೆನಿಸ್ಪುದಱಿಂ ರವಿರಶ್ಮಿಗಳ್ಗೆ ಬೀ ॥
ಸುವ ಬಿಱುಗಾಳಿಗಳ್ಗೆಯೊಳಗಿದೊಡವೇಂ ಸೊಗಸು ಪ್ರಸಿದ್ಧಿ ದಿ ।
ಗ್ವಿವರದೊಳೊಪ್ಪುಗು ಸ್ಫಟಿಕಭಾಂಡದ ದೀಪ್ತಿಕೆವೋಲ್ ನಿರಂತರಂ ॥

ಅಂತು ನಿತಂಬವತಿ ಮಾನ್ಯತೆಯು ಮಹಿಮೆಯಿಂ ಪ್ರಸಿದ್ಧವಪ್ಪಿದಿರೆ,

ಬೆಸನಮನಾರತಂ ಪತುವನಾಗುತುಮೊ ಕೈತವವೈಯ್ದೆ ರೂಢವೆ ।
ತ್ತೆಸೆದುದೊ ಧೂರ್ತವಿದ್ಯೆ ವಿಗೆ ವೆಯ್ಪುಡೆದಿರ್ದುದೊ ವಂಚನಾಗುಣಂ ॥
ಪ್ರಸಿ ಕುಟಿಲಪ್ರಸಿದ್ಧಿ ನಿಜನೂರ್ತಿಯೊಳಿದು ದೊ ಪೇೞಿನಲ್ಕೆ ರಂ ।
ಚಿಸಿವನದೊರ್ವಂ ಕಲಹಕಂಟಕನೆಂಬನನೇಕಬುದ್ಧಿಯಿಂ ॥ ೧೬೫

ಅಂತಿರ್ದ ಕಲಹಕಂಟಕನೆಂಬ ಧೂರ್ತಂ ನಿತಂಬವತಿಯ ಪ್ರಸಿದ್ಧಿಯುಂ ಕೇಳ್ದಜ್ಜಯಿನಿಗೆ ಬಂದು

ಕಾಲಜ್ಞಂ ಜ್ಯೋತಿಷ್ಕಂ ।
ಸ್ತ್ರೀಲಕ್ಷಣದೊಳ್ಪನಱಿವನತಿಮುಂತ್ರಜ್ಞಂ ॥
ಭೂಲೋಕದೊಳಾನಲ್ಲದೆ ।
ಮೇಲಾರೆನಗೆಂದು ಪೊಲಿಲೊಳಾಡುತ್ತಿರ್ಪಂ ॥ ೧೬೬

ಪಗಲೆಲ್ಲಂ ಪೊಲಿಲೊಳ್ ತಿರು ।
ಗಿ ಗಿರೀಶವಿಹಾರದೆಡೆಯೊಳಿರುಳೆಲ್ಲಂ ಕ ॥
ಣ್ಮುಗಿದು ತನಸಿಯವೊಲಿರ್ಪಂ ।
ಮಿಗೆ ಧೂರ್ತನೆನಿಪ್ಪ ಕಲಹಕಂಟಕನೊಲವಿಂ ॥ ೧೬೭

ಅಂತು ಕೆಲವು ದಿನಮಲ್ಲಿರ್ದುಕೊಂಡೊಂದು ದಿನಂ ನಿತಂಬವತಿಯ ಪರಿಚಯೆರ್ಯಾನುಳಿಕ್ಕೊಬ್ಬ ಭಿಕ್ಷುಕಿಯಂ ಕಂಡು

ಭಿಕ್ಷುಕಿ ಕೇೞ್ ನಿನ್ನರಸಿಯ ।
ಚಕ್ಷುಃಕರಪಾದದೆಡೆಗಳಂ ನೋಡಿ ಲಸ ॥
ಲ್ಲಕ್ಷಣಮಂ ಪೇೞ್ವೆಂ ನೀಂ ।
ಸೂಕ್ಷ್ಮೇಮದೊಳುಯ್ವುದೆನ್ನ ನರಮನೆಗೀಗಳ್ ॥ ೧೬೮

ಎಂದು ಕಲಹಕಂಟಕಂ ಪೇಳ್ದೊಡನಳಂತೆ ಗಮ್ಮನೆಂದು ಭಿಕ್ಷುಕಿಯುವ
ನನಾರುಮುಖಿಯುದಂತೊಡಗೊಂಡು ಪೋಗಿಯರಮನೆಯ ಬಾಗಿಲೊಳಿರಿಸಿ
ತತ್ಪ್ರಪಂಚನುನರಸಿಗೆ ಪೇಟೆ ನಿತಂಬವತಿಯಿಂತೆಂದಳ್:—

ಪರಪುರುಷಮುಖನಿರೀಕ್ಷಣ ।
ನರಕಕ್ಕಾಂ ಪಾತ್ರಮಲ್ತೆನೆ ಕೇಳ್ ಸತಿಯು ॥
ಬರ್ದರ ನಡುವೆ ತೆಱೆಯನಿಟ್ಟಾ ।
ದರದಿಂ ಪೊಱಗಣ್ಗೆ ನೀಡು ಚರಣಮನರಸೀ ॥ ೧೭

ಎಂದು ಭಿಕ್ಷುಕಿ ಪೇಟೆಯ್ದಾತನನೊಡಗೊಂದು ಬಾಯೆಂಬುದುಂ, ತವ
ಳೊಡಗೊಂಡು ಬಂದು, ನಿತಂಬವತಿಯ ಕಲಹಕಂಟಕನ ನಡುವೆ ತೆಱೆಯನಿ
ಟ್ಟನ್ನುದೇವಿ ಪಾದಮುಂ ಲಕ್ಷಣಮುಂ ನೋಡಲ್ ಪೊಱಗೆ ನೀಡೆಂಬುದುಂ

ಸೋಲದೊಳಾತ್ಮವಲ್ಲಭನಲಂಪ್ರ ಮಿಗಲ್ ಪರಿಚುಂಬಿಸಲ್ಕೆ ತಾಂ ।
ಬೂಲರಸದ್ರವಂ ವಿಮಳತದ್ಗಕನನ್ಯೋತಿ ಪತ್ತಿದಂತೆ ಸ ॥
ಲ್ಲೀಲೆಯೊಳಾಂತಲಕ್ತ ಕರಸಂ ನಖದೀಪ್ತಿ ಕರಂ ಕವಲ್ತಿರಲ್ ।
ಬಾಲಕಿ ನೀಡಿದಳ್ ಪಟೆದು ನೂಪ್ಪರರಂಜಿತಪಾದಪದ್ಮಮುಂ ॥ ೧೭-೦

ಅಂತು ನಿತಂಬವತಿ ಪೊಱಗಣ್ಗೆ ಪಾದಮುಂ ನೀಡಲದಂ ಕಲಹಕಂಟಕಂ
ಪಿಡಿದು,

ಜಗತ್ಪೀಕಾಂತನ ಸತಿಯಂ ।
ಭ್ರಗೆ ಲಕ್ಷಣಮುಂ ನಿದಾನಿಸಲ್ಕಱಿಯೆಂ ಕೇಳ್ ॥
ಮೃಗನಯನೆ ನಿನ್ನ ಪದಮುಂ ।
ಬಗೆ ಮಿಗಲಾಂ ಸೋಂಕಿ ಲಕ್ಷಣಂಬಡೆದಿರ್ದೆಂ ॥ ೧೭-೫

ಎಂದನಂತರಂ,

ಚರಣಾಂಗುಷ್ಠಮನೀಕ್ಷಿಸಿ ನೂಪ್ಪರಮನಾರ್ಪಿಂದುಚರ್ಚಿ ಕೈನೀಡಿ ಬಳಿ
ಧುರಮಪ್ಪೊಳ್ದೊಡೆಯೊಳ್ ನಖಾಗ್ರಪತಿಯಿಂ ಸೀಲ್ವಿಂದದಿಂ ರೇಖೆಯೋ ।
ದೆರಡಂ ಮಾಡಿ ಕಱಿಲ್ದ ನೂಪ್ಪರಮನೊಂದಂ ಕೊಂಡು ತದ್ರಾಜಮುಂ ।
ದಿರದಿಂದಂ ತಳೆದರ್ಂ ಮಹಾತ್ವರಿತದಿಂದಾಧೂರ್ತನಿಂಪ್ರದ್ವಿಷಾ ॥ ೧೭-೬

ಅಂತವನೊಳ್ದೊಡೆಯಂ ಕೇಳ್ದು ನೂಪ್ಪರಮುಂ ಕೊಂಡು ಪೋಗಲೊಡಂ,

ಏಗೆಯ್ವೆನಿದೇಕಾರಣ ।
ಮೀಗಳ್ ಧೂರ್ತಂಗೆ ಚರಣಮುಂ ತೋಱಿಸೆನು ॥

ದ್ವೀಗಮನೇತೆಱದಿಂದಂ ।
ನೀಗುವೆನಾನೆಂದು ಕಾಂತೆ ತಳವೆಳಗಾದಳ್ ॥ ೧೭೫

ಅಂತು ನಿತಂಬವತಿ ದುಗ್ಗಡದಿಂ ಮುಸುಕಿಟ್ಟೊಱಗಿರಲಿತ್ತಲ್,
ಸುರಗಿರಿಯೊಳ್ ವಿನತಾಯುಕ ।
ಕಿರಣಂ ಮೆಱೆವಂತ ತಪ್ತ ಹೇಮಾಶ್ರಯಬಂ ॥
ಧುರರತ್ನ ದಿನೊಸ್ಪವ ನೂ ।
ಪುರಮಂ ಪೊಗರಿಗೆ ತೋಱುದಂ ತದ್ಗರ್ತಂ ॥ ೧೭೬

ಅಲ್ಲಲ್ಲಿ ತೋಱಿಸುತ್ತುಂ ।
ವೆಲ್ಲನೆ ಕೊಂಡಾಯ್ದನಂತಕೀರ್ತಿಗೆ ತೋಱಿಲ ॥
ವಲ್ಲಭೆಯು ನೂಪುರಂ ತಾ ।
ನಿಲ್ಲಿಗೆ ಬಂದಂದನಾವುದೆಂದನಿಳೀಶಂ ॥ ೧೭೭

ಎಂದನಂತಕೀರ್ತಿಯೆಂಬುದುಂ ಕಲಹಕಂಟಕನಿಂತೆಂದಂ:—

ನಿನ್ನಿರುಳಾಂ ಶ್ಮಶಾನದೆಡೆಯಲ್ಲಿ ಸಮಾಧಿಯೊಳಿರ್ದ ವೇಳೆಯೊಳ್ ।
ಕನ್ನೆಯ ರೂಪಿನಿಂ ಪಿಣನನೀಲ್ದಿ ತಿನಲ್ಬರುತಿರ್ದ ದೈತ್ಯೆಯುಂ ॥
ಬನ್ನಮನೆಯ್ದಿಸಲ್ವಿಡಿದು ಸೂಲದೊಳಾನಿಱಿಯಲ್ಕೆ ನೊಂದವಳ್ ।
ತನ್ನನಡುರ್ತು ಪೋಗುತಿರೆ ಬಿೞ್ದುದು ನೂಪುರಮಾಕೆಯಂಘ್ರಿಯಿಂ ॥ ೧೭೮

ಎಂಬುದುಮನಂತಕೀರ್ತಿ ವಿಚಾರಂಗೆಯ್ದು,
ಪರಿಕಿಸಿ ನಿತಂಬವತಿ ತ ।
ನ್ನಿರಡುಂ ನೇವುರಮನೊಲ್ದ ಕಳಸುವುದೆಂದಾ ॥
ದರದಿಂ ಕಂಚುಕಿಯುಂ ನೃಪ ।
ವರನಟ್ಟಲ್ ಪೋಗಿ ಬಂದನನನಾಕ್ಷಣದಿಂ ॥ ೧೭೯

ಅಂತಾಕಂಚುಕಿ ಬಂದು

ದೇವಿಯುರಿದೊಂದು ನೇವ್ರರ ।
ಮಾವೆಡೆಯೊಳ್ ಬಿೞ್ದುದೆಂದು ತಿಳಿಯುಂ ನೀನೊ ॥
ಳ್ದೀವೊಂದು ನೇವುರಮನವ ।
ನೀವಲ್ಲಭೆನೆಡೆಗೆ ಕೊಂಡು ಪೋಗೆಂದಿತ್ತಳ್ ॥ ೧೮೦

ಅದಲ್ಲದೆಯುಂ,

ತೊಡೆಯೊಳ್ ಪುಣ್ಣೊಂದಾದ ।
ತ್ತಡಿಯನಿಡಲ್ಬಾರದೆಂದು ನರಳುತ್ತುಂ ತೂಂ ॥
ಕಡಿಕೆಯನೊಳಕೊಂಡಿರ್ದಳ್ ।
ಮುಡದಿ ಕರಂ ದುಗುಡದಿಂ ಧರಿತ್ರೀನಾಥಾ ॥ ೧೪೦

ಎಂದು ಪೇಟಿಲೊಡಂ,

ಪೆಱತೇಂ ವಿಚಾರಮಂಗನೆ ।
ನೆಜೆ ರಕ್ಕಸಿಯಾದಳಲ್ಲದಿರ್ದೊಡೆ ರತ್ನಂ ॥
ತುಱುಗಿದ ಪೊಸಕಾಲ್ದೊಡವೇ ।
ತೆಱದಿಂದೀತಂಗೆ ಬಂದುದಾಪತ್ಯವನದೊಳ್ ॥ ೧೪೧

ಎಂದನಂತಕೀರ್ತಿ ಮುತ್ತಂ,

ಇಲ್ಲಿರ್ದೊಡೆ ತತ್ಸತಿ ನ ।
ಮ್ಮಿಲ್ಲರನಿಂದಿರುಳಿ ತಿಂದು ನುಂಗುವಳದಱಿಂ ॥
ಮೆಲ್ಲನೆ ತತ್ಪಿತೃವನದೊಳ್ ಬ ।
ಲ್ಲಂದದಿನಿರ್ದುದೆಂದು ನೂಂಕುವೆನೆವಳಂ ॥ ೧೪೨

ಎಂದನಂತಕೀರ್ತಿ ನಿತಂಬವತಿಯಂ ನಡುವಿರುಳೊಳೆಯ್ದಿ ಶ್ಮಶಾನದೊಳ್ ನೂಂಕಿ ಪೋಗೆ,

ಮುದಮಱಿಯಲ್ ನಿತಂಬವತಿ ತನ್ನ ಮನೋವ್ಯಥೆಯಿಂ ಶ್ಮಶಾನಮ।
ಧ್ಯದೊಳಿಸೆದಿರ್ದ ತತ್ಕಲಹಕಂಟಕನಂ ತವೆ ಕಂಡು ನೀನೆ ಮಾ ॥
ಡಿದ ಕುಹಕಂ ಫಲಂಬಡೆದುದಿನ್ನೆನಗಾರ್ ಗತಿ ನೀನೆ ರಕ್ಷಿಸೋ ।
ವಿದೆ ತನುವೆಂದು ಬಿಬ್ಬಿಳಡಿಯೊಳ್ ಕರುಣಂ ಕಡೆಗಣ್ಮತಿರ್ಪಿನಂ ॥ ೧೪೩

ಅಂತವಳ್ ದೈನ್ಯಭಾವದಿಂ ಪೇಟಿಲೊಡಂ

ತಾನೆಸಗಿದ ಕಾರ್ಯಂ ಸ ।
ನ್ಮಾನದಿನೆಯ್ದುಂದುದಿರ್ದ ತಾವಿಂಗೆಂದಾ ॥
ಮಾನಿನಿಯುಂ ಕೊಂಡೊಯ್ದಂ ।
ತಾನೊಲವಿಂ ಕಲಹಕಂಟಕಂ ಸುರವೈರೀ ॥ ೧೪೪

ಅದಱಿಂ ಮತಿಯೂಹೆಗೆ ಸಾಧ್ಯಮಪ್ಪುದಿಲ್ಲೆಂದು ಬ್ರಹ್ಮರಾಕ್ಷಸಂಗಾಂ ಪೇಟಿಲಾತನತಿಪ್ರಸ್ತುನಾಗಿ ಎನ್ನಂ ಮನ್ನಿಸಿದಪೆನೆಂಬ ಸಮಯದೊಳ್,

ಆಲಿವರಲ್ಗಳುಂ ಮೀಡೆಯ ಬಲ್ವಸಿಯುಂ ಮುಗಿಲಿಂದೊಸರ್ವ ವೋಲ್ ।
ಡಾಳದ ಕಣ್ಣ ನೀರ್ವನಿಗಳುಂ ಪ್ರಾಣಮುತ್ತುಗಳುಂ ನಭೋಂತದೊಳ್ ॥
ಸಾಲಿಡಲುವಿಲ್ಲೆಯೊಳ್ ಪದೆದು ಕಂಡಿದು ಚೋದ್ಯಮೆನುತ್ತೆ ಭೋಂಕೆನಲ್ ।
ವೇಲನೊಱಿಲ್ಲ ನೋಡಿ ಮಿಗೆ ಕಂಡನದೊರ್ಬ ಮಹೋಗ್ರದೈತ್ಯನಂ ॥

ಕಗ್ಗಣ್ಣಿನೆಯುಳ್ಳ ಪೂರ್ಣಶಶಿಮಂಡಲಮಂ ಮುಳಿಸಿಂ ವಿಧುಂತುದಂ ।
ಪಿಡಿದೆಂಬಂತೆ ಚಂದ್ರಮುಖಿಯೊರ್ಬಳನಂದು ಮಹೋಗ್ರರಾಕ್ಷಸಂ ॥
ಜಡಿಯುತ್ತಿರೆ ಕಾರಕಾಪಥದೊಳಾರ್ಪಿನೊಳಂಜದೆ ಕೊಂಡು ಪೋಪನಂ ।
ತಡೆಯದೆ ಕಂಡು ವಿಸ್ಮಯದೊಳೀಕ್ಷಿಸುತಿರ್ದೆನಿಳಾಧಿನಾಯಕಾ ॥ ೧೪೩

ಆತನು ನೋಡಿ,

ಗಡುಗಿ ಕಿಱಿ ಮುಚ್ಚಿ ರೀರದಿರವಂ ಪವನಾಧ್ವದೊಳಾರ್ದು ರಾಕ್ಷಸಂ ।
ಮಡದಿಯನೊರ್ಬಳಂ ಕಡುಪಿನಿಂದೆತೆದಯ್ದುದನೆಯ್ದೆ ಕಂಡು ಬೆಂ ॥
ಬಿಡಿಯದೆ ನೋಡುತಿರ್ಪ ತೆಱನಾಯ್ತನಗಂಬರಯಾನವಿದ್ಯೆಯುಂ ।
ಕಾಡನೆ ವಿಧಾತ್ರನೆಂದುಸಿದೆಂ*ನೆನ್ನೊಡನಿರ್ದ ನಿಶಾಚರೇಂದ್ರನೊಳ್ ॥೧೪೪

ಅಂತೆನ್ನೊಡನಿರ್ದ ಬ್ರಹ್ಮರಾಕ್ಷಸಂಗೆ ಪೇೞ್ದಾಕಾಶದೊಳ್ ಪೋಪ ರಾಕ್ಷಸನಂ ತೋಱಿಲವನಂ ಬ್ರಹ್ಮರಾಕ್ಷಸಂ ಕಂಡು

ಬಿಡುಬಿಡು ದೈತ್ಯ ಕೋಪಮುಳಿಯನೆಲ್ಲಿಗೆ ಪೋದಪೆಯೆಂದು ದಾಡೆಯಂ ।
ಜಡಿದು ಪದಾಗ್ರದಿಂ ನೆಲವನುಯ್ದು ಪುಟಿಂನೆಗೆದಂಬರಕ್ಕೆ ಬೆಂ ॥
ಬಿಡದೆ ತುಡುಂಕಿ ತದ್ದನುಜನಂ ಗಗನಸ್ಥಳದಲ್ಲಿ ಮಿಱಿಯೊಂ ।
ದಡಿಯಿಡಲೀಸದಾಂತು ಕಡುಪಿಂ ಪೊಣರ್ದಂ*ಕಲಿ ಬೊಮ್ಮರಕ್ಕಸಂ ॥೧೪೫

ಅದೆಂತೆನೆ:—

ದಾಡೆಗೆ ದಾಡೆ ಗಜ್ಜನೆಗೆ ಗರ್ಜನೆ ಘಾತಿಗೆ ಘಾತಿ ತೋಳ ಬ ।
ಲ್ಗಾಡಿಗೆ ಗಾಡಿ ಕಂಚನೆಗೆ ಕಂಚನೆಯುಗ್ರತೆಗುಗ್ರಮುಸ್ತ್ರಸಂ ॥
ಪೀಡೆಗೆ ಪೀಡನಂ ನಿಜಕರಾಳಮುಖಕ್ಕೆ ಕರಾಳವಕ್ತ್ರಮು ।
ಲ್ಗಾಡದೆ ನಿಂದು ತಳ್ತು ಱಿನರೊರ್ಬರನೊರ್ಬರುದಗ್ರದಾನವರ್ ॥ ೧೪೬

ಅಂತವರಿರ್ಬರಾಕಾಶದೊಳತ್ಯಾಸುರಭಾವಿ ಕಾದುವ ಸಮಯದೊಳ್

ಸೂಸುವ ಕುಂತಳಂ ನಸು ಬಟಲ್ದ ಕುಚಂ ಪಱಿಪಟ್ಟ ಹಾರಮು।
ಚ್ಛ್ವಾಸದೊಳ್ ತೊಡರ್ದ ನಱುಸುಯ್ ಕುಚದಿಂ ತೆರಳ್ದ*ತ್ತುರೀಯಕಂ॥

ಗಾಸಿಗೆ ಕಂದಿದಂಗಮೆನಸುಂ ಭಯಮುಂ ತಳಿದಿರ್ದ ಚಿತ್ತವು ।
ತ್ಯಾಸುರಮಪ್ಪಿನಂ ಗಗನದಿಂ ಸತಿ ಭೋಂಕೆನೆ ಬಿಟ್ಟಿಳುರ್ವಿಯೊಳ್ ॥ ೧೯೧

ಅಂತೊರ್ಬ್ಬ ಕಾಂತೆ ಗಗನದಿಂದವನಿಗೆ ಬಿಟ್ಟಿದಂ ಭೋಂಕೆನೆ ಕಂಡಾಂ ಪ್ರೌರ್ದಿ ನೋಪ್ಪಿನಂ

ಅದನೇವೇಪ್ಪುದೊ ಕಂತುಕಾವತಿಯನಳ್ ತಾನಾದಳಾಂ ನೋಪ್ಪಿದಂ ।
ಕದಪಂ ಕೆಯ್ಯೊಳನುಚ್ಚಿ ಪೂರ್ಣಕುಚಯುಗ್ಮಕ್ಕೊಪ್ಪೆ ಸಂವ್ಯಾನಮುಂ॥
ಪದುಳಂ ಮಾಡಿ ನಭೋಂತರಿಂದಿಳೆಗೆ ಬಿಟ್ಟಿರ್ಪ್ ಕ್ಲೇಶದಿಂ ನಾಣ್ಚಿ ಬಾ ।
ಡಿದ ವಕ್ತ್ರಾಂಬುಜದಿಂ ಮದೀಯಮುಖಮುಂ ಸಾಪೇಕ್ಷದಿಂ ನೋಡಿದಳ್ ॥

ಅಂತವಳಿನ್ನಂ ನೋಪ್ಪಿ ಸಮಯದೊಳ್

ಗಗನಸ್ಥಳದೊಳ್ ದಾನವ।
ರಗಣಿತಶಸ್ತ್ರಾಸ್ತ್ರಪತಿಗಳಂ ತಳ್ತಿಱಿದು ॥
ರ್ವಿಗೆ ಕಡಿಗಳಾಗಿ ಬಿಟ್ಟಿರ್ ।
ಮಿಗೆ ರೌದ್ರಕರೀರಿಗಳ್ ಗತಪ್ರಾಣರ್ಕಳ್ ॥ ೧೯೩

ಅಂತಿರ್ಬ್ಬರ್ ದೈತ್ಯರ್ ಗತಪ್ರಾಣರಾಗಿ ಬಿಟ್ಟಿರ್ದಂ ಕಂಡನಂತರಂ ಕಂತು ಕಾವತಿಯನಾಶ್ವಾಸಿಸಿ ತತ್ಕಾಂತೆಸಹಿತಲ್ಲಿಂ ತೆರಳ್ದು ಪೂರ್ವಬಹಿಪ್ರದೇಶಮನೇ ಅಲೊಡಂ,

ಸ್ಫುಟದಿಂ ಭಾವಿಸಿ ಸಿಂಹದೇಕದ ದಿಶಾಭಾಗಕ್ಕೆ ಪ್ರೋಪಂದಬೊಳ್ ।
ಪಟಿಮಂ ಬಿಟ್ಟೊಡೆ ತದ್ಭ್ರಹಿತ್ರಮನಿಲೋದ್ಧ್ಯಸ್ಯಾರ್ಗದೊಳ್ ಬೇಗದಿಂ ॥
ತಟಮಂ ಸಾರ್ದಿರೆ ಕಂತುಕಾವತಿಯನಾಗಳ್ ಭೀಮಬಂಧನ್ವಾಂಕನಂ ।
ದಿಟಮಾಂ ಕೊಂಡಿಳಿದೆಂ ನೆಲಕ್ಕೆ ಪದೆಪಿಂದಾಯಿರ್ವರಂ ಭೂಮಿಪಾ॥ ೧೯೪

ಅಂತಾಂ ತಡಿಗಿಳಿಯಲೊಡಂ,

ಸುತೆಯಂ ರಾಕ್ಷಸನುಯ್ದನಾತ್ಮತನಯಂ ವಾರಾಸಿಯೊಳ್ ಪ್ರೋದನೆ ।
ನ್ನ ತನೂಜೀವನಮೇಗ್ರದೆಂಬ ಬಹುಚಿಂತಾವಹ್ನಿಯಿಂ ಜೀವಮುಂ॥
ಕ್ಷಿತಿನಾಥಂ ಮಿಗೆ ತುಂಗಧನ್ವನೊಲವಿಂ ಬಿಟ್ಟಂದಮೆಂದೆಂಬ ವಾ ।
ರ್ತೆ ತರಂಗೊಂಡಿರೆ ಕೇಳ್ದನಲ್ತೆ ತಡಿಂಗೊಳ್ ಭೂಪಾಲಚೂಡಾಮಣೀ ॥

ಅಂತಾನಾವಾರ್ತೆಯುಂ ಕೇಳುತ್ತುಂ ಸಿಂಹಸ್ಥರಕ್ಕೆ ಬಂದು

ಅನುವಾಗಿರ್ದ ನೃಪಾಲಯಂ ವಿವಿಧಲೋಕಂ ನೂತ್ನಸಾಮ್ರಾಜ್ಯಮುಂ ।
ಗನೆಯರ್ ತಚ್ಚತುರಂಗಸೇನೆ ಜನತಾವಿಸ್ತಾರಸಂಪತ್ತಿಯುಂ ॥
ದೆಸಗಾಗಲೆ ಸಲೆ ಭೀಮಧನ್ವನದಱಿಂ ಮದ್ಭೃತ್ಯನಾದಂ ಮನ ।
ಕ್ಕನುರಾಗಂ ಮಿಗೆ ಕಂತುಕಾವತಿಯೊಳಾಂ ಕೂಡಿರ್ದೆನುರ್ವೀಶ್ವರಾ ॥

ಅಂತು ಭೀಮಧನ್ವನೆನಗೆ ಭೃತ್ಯನಾಗಿ ಕಂತುಕಾವತಿ ಸತಿಯೆನಗಾಗಿರೆ ಕೋಶದಾಸಂಗೆ ಚಂದ್ರಸೇನೆಯಂ ಕೊಟ್ಟನಂತರಂ ನಿಮ್ಮಡಿಯನಱಿಸಲೆಂದಿರ್ಪಾಗಳ್

ನಿಮ್ಮಡಿಗಳ್ಗೆ ಮಿತ್ರನೆನಲೊಪ್ಪುವ ಸದ್ಗುಣಿಯಂಗರಾಜನೆ ।
ನ್ನಮ್ಮುದದಿಂ ಸಹಾಯಗುಣಮುಂ ಮೆಱೆಯಲ್ಕಱಸಲ್ಕೆ ಸೇನೆಯಂ ॥
ಗಮ್ಮನೆ ಕೂಡಿಕೊಂಡು ಮನದುತ್ಸವದಿಂ ನಡೆತಂದು ದೇವ ಕಂ ।
ಡೆಮ್ಮೃದುಪಾದಪದ್ಮಯುಗಮುಂ ನಿಜಮೂರ್ತಿಯನೆನ್ನ ಪುಣ್ಯದಿಂ ॥೧೯೩
ಎಂದು ಮಿತ್ರಗುಪ್ತಂ ತನ್ನ ವೃತ್ತಾಂತವುಂವಾಜವಾಹನಂಗೆ ಹೇಳಿಪ್ಪುದುಂ,

ಕೂಡಿದ ವಿಂಧ್ಯವಾಸಿನಿಯು ಜಾತ್ರೆಗೆ ಪೋಗಿ ವಿಪಂಚಿನಾದಮುಂ ।
ಗಾಡಿ ಮಿಗಲ್ಕೆ ಕೇಳ್ದು ನಯನೇಂದ್ರಿಯವುಬ್ಬುತಿರಲ್ಕೆ ಕಂತುಕ ॥
ಕ್ರೀಡೆಯನೊಲ್ದು ನೋಡಿ ಸುಖದಿಂ ಪರರಾಜ್ಯಮನಿಂತು ಸಾಧ್ಯಮುಂ ।
ಮಾಡಿದ ಮಿತ್ರಗುಪ್ತ ನಿನಗಾರ್ ಸರಿಯೆಂದನಭಂಗವಿಕ್ರಮಂ ॥ ೧೯೪

॥ ಗದ್ಯ ॥

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗವಿಟ್ಕಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚಾಂಡರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಮಿತ್ರಗುಪ್ತಕಥಾವೃತ್ತಾಂತಂ

ದ್ವಾದಶಾಶ್ವಾಸಂ

—ಮಂತ್ರಿಗುಪ್ತನ ನಿರೋಷ್ಠ್ಯದ ಕಥೆ—

ಶ್ರೀರಂಜಿತವಕ್ಷಂ ಧಾ ।
ತ್ರೀರಮಣಂ ಮಂತ್ರಿಗುಪ್ತನಂ ನೋಡಿ ತದಾ ॥
ಕಾರಸ್ಥಿತಿಯಂ ಕೇಳ್ದಂ ।
ಧೀರಂ ಕಡುಗೂರ್ತಭಂಗವಿಟ್ಟಲಭೃತ್ಯಂ ॥ ೧

ಅಂತು ರಾಜವಾಹನಂ ಮಂತ್ರಿಗುಪ್ತನ ಮುಖಮುಂ ನೋಡಿ ನೀನೆಸಗಿದ ಕಾರ್ಯಮುಂ ಪೇೞೆಂಬುದುಂ,

ತನ್ನ ಧರಂ ಮನೋರಮೆಯು ದಂತಪರಿಕ್ಷತದಿಂ ಪಿಸುಳ್ದ ರ ।
ಕ್ತಂ ನೆಲೆಗಟ್ಟಿರಲ್ಕೆ ತುಟಿ ಮುಟ್ಟದೆ ಕೂರ್ತು ಕಥಾಪ್ರಪಂಚಮುಂ ॥
ಬಿನ್ನವಿಸಲ್ಕೆವೇಟ್ಪುದೆನುತುಂ ಸುಭಗಂ ಸುಖಿ ಮಂತ್ರಿಗುಪ್ತನ ।
ತ್ಯುನ್ನತಬುದ್ಧಿಯಿಂ ಸಹಜಕಾರ್ಯಮನೆಂದುಸಿದರ್ಂ ನಿರೋಷ್ಠ್ಯದಿಂ ॥ ೨

ಅದೆಂತೆನೆ:—

ಧರಣೀನಾಯಕ ಕೇಳ್ ನಿಜಾಂಘ್ರಿಸರಸೀಜಾತಂಗಳಿಂ ಕಾಣಲಾ ।
ದರದಿಂ ಸಾಗರಚೇಲಧಾರಿಣಿಯನೆಲ್ಲಂ ಬೆಂದದಿಂ ಸಂತತಂ ॥
ತಿರುಗಿ ಶ್ರೀಗೆ ನಿರಂತರಂ ನೆಲೆಯೆನಲ್ ಸಾರ್ದಿರ್ದ ಸಲ್ಲಕ್ಷಣಂ ।
ಸ್ಥಿರದಿಂದಿರ್ದ ಕಳಿಂಗದೇಶದೆಡೆಯಂ ಸಾರ್ದೆಂ ಸದಾನಂದದಿಂ ॥ ೩

ಅಂತು ಕಳಿಂಗದೇಶಮನೆಯ್ದಿ

ಧರಣಿಯ ಕಂಠದೆಕ್ಕಸರದಂದದಿನಗ್ಗಳದಿಂ ನೆಗೞ್ದಿಯಿಂ ।
ದಿರೆಯು ನಿಜಾನನಕ್ಕಡರ್ದ ರತ್ನದ ಕನ್ನಡಿಯಂದದಿಂ ನಿರಂ ॥
ತರನಯಕಾಂತಿಯಂ ತಳೆದ ಸಜ್ಜನಸಂತತಿಯಿಂದೆ ಕೀರ್ತಿಯಂ ।
ಧರಿಸಿದ ತತ್ಕಳಿಂಗನಗರಾವತಿಯಂ ಸಲೆ ಕಂಡೆನುರ್ವಿಪಾ ॥ ೪

ಅಂತಾಕಳಿಂಗನಗರಿಯಂ ಕಂಡಾಕ್ಷಣದಿಂ

ಸಂತತರಥಾಂಗತತಿಗತಿ ।
ಚಿಂತಾಹತಿ ನೆಲಸೆ ಧರೆಗೆ ಸಿದ್ಧಾಲಸ್ಯಂ ॥

ತಿಂತಿಣಿಯಿನಾಗೆ ಸರಸಿಜ ।
ಕಾಂತಂ ತಾನಸ್ತ ಗಿರಿಗೆ ನೆಟ್ಟನೆ ಸಾರ್ದಂ ॥ ೫

ಅಂತಸ್ತ ಗಿರಿಯನೆಯ್ದಲ್ಕಾಕಳಿಂಗನಗರಿಯುಂತಿಕಶಾಖೆಗಳಲ್ಲಿ ಕಣ್ಗೆಯ್ಯಲೆಂದಿರ್ದ ಕೆನ್ನೆರಜಾಯೂಕಾಂತರ

ಇನಿತಾಯಾಸಂಗೆಯ್ಯಲ್ ।
ತನಗೇತಱಿ ಸಿದ್ದಿ ತಾನದೆಲ್ಲಿಯು ಸಿದ್ದಂ ॥
ಸನಯಂ ತಾನಲ್ತೆನಿಸಿವ ।
ದನಿ ಕರ್ಣಕ್ಕೆಯ್ದಲನಱಿ ಸರಿಸಕೆ ನತೆದೆಂ ॥ ೬

ಆವನಿಯು ಪಿಂದನೆ ನಡೆಯೆ,

ಪರಯದ ಜಾಯೂಕಾಂತರ್ ।
ತರದಿಂ ಕೆನ್ನೆರಕರೀರಿಗಳ್ ಸಡಗರದಿಂ ॥
ದಿರದೆಪ್ಪಿದರಾಕ್ಷಣದಿಂ ।
ಪರಧರಣಿಗೆ ಕಂಪೆನಾನದಂ ಧರಣೀಶಾ ॥ ೭

ಅಂತಾಕೆನ್ನೆರಜಾಯೂಕಾಂತರ್ ಚಿತಾಗ್ನಿಸ್ಥಾನಕ್ಕೆಯ್ದಲೊಡಂ,

ಬಾತ ಚಾಂಚತ್ಕಂಪೆ ರಕ್ಷಾಂಕಿತನಿಖಿಳರೀರಂ ಸಸಿದ್ಧಾರ್ಥಹಸ್ತಂ ।
ಕೆಡಿಗಡ ಕಾರ್ಯಾರ್ಧಚಿತ್ತಂ ನರನಿಕರಲಸಜ್ಜಾಂಗಲಸ್ಥಾಲಿ ಲೆಕ್ಕಂ ॥
ಗಡಿಗೆಟ್ಟುರ್ವಿಂಧನಂ ತನ್ನಿ ದಿರ್ಗತಿತಯದಿಂದಿರ್ದ ಕೆರ್ಚೆಯ್ದೆ ಚೆನ್ನಿಂ ।
ಗೆಡೆಯಾಗರ್ಕಿರ್ದನೆಂದಗ್ಗಳದ ಯತಿಗಣಶ್ರೇಷ್ಠನಾಗಳ್ ಯಥೇಷ್ಟಂ ॥ ೮

ಏತೆಱಿದಱಿಯೆಂ ಘನತಾ ।
ಖ್ಯಾತತಿಯಿಂದಲಗರ್ಳೀಚ್ಛೆಯಿಂದೆಸೆದಿರ್ದ ॥
ತ್ತಾತನ ಕೆಲವಲ್ಲಿ ದಳ ।
ವ್ರಾತಂ ತಱಿದಿರ್ದ ಶಾಖೆ ದೆಸೆಗಡರ್ದನಿಶಂ ॥ ೯

ಅಂತಾಪರಧರಣಿಯ ಶಾಖೆಯಲ್ಲಿರ್ದ ಯತಿಶ್ರೇಷ್ಠಂ ಕೆನ್ನೆರಜಾಯೂಕಾಂತರಂ ನಿರೀಕ್ಷಿಸಿಂತೆಂದಂ:—

ಸರಸಿಜನೇತ್ರೆಯಂ ಘನಚಳಾಳಕಿಯುಂ ಕಳಕಂಠನಾದೆಯುಂ ।
ತರಳಕಟಾಕ್ಷೆಯುಂ ಕನಕಕಾಂತಿಶರೀರೆಯುನ್ನಿಲ್ಲಿಗೆಯ್ದಿಸಾ ॥

ದರದೆ ಕಳಿಂಗಕನ್ಯಕೆಯನೆಂದೆನಿ ಸಾಹಸದಲ್ಲಿ ಸಂದ ಕಿ ।
ನ್ನರನಿರದೆಬ್ಬಿ ತತ್ಪತಿಯನಾಯುತಿಯೊಜ್ಜೆಗೆ ತಂದನಾಕ್ಷಣಂ ॥ ೧೦

ಕನಕಘಟಿಸ್ತನಂ ರಜನಿರಂಜಿತದೀರ್ಘಲಸತ್ಕಳಾಳಕಾ ।
ನನ ಗಜಯಾನಸದ್ಗತಿಯನಂಗಶರಾಗ್ರಕಟಾಕ್ಷಕಾಂತಿ ಚಂ ॥
ದನಘನಸಾರಗಂಧ ನಿಜದೇಹಲತಾಸ್ಥಿತಿ ಜಾತರಕ್ಷೆಗಳ್ ।
ಮುನಿದೆರ್ದಿಗಿಚರ್ಚನೀಯದೆಲೆ ರಾಜಗಶೇಶ ಶಶಾಂಕಲೇಖೆಯೊ ॥ ೧೧

ಅಂತಿರ್ದ ಕಳಿಂಗಕನ್ನೆಯೆನಿಸಿರ್ದ ಶಶಾಂಕಲೇಖೆಯನಾಕಷ್ಯ್ಯಯತಿಗಾ
ಕಿನ್ನರಂ ತಂದೀಯೆ,

ಯತಿಯತಿಶೀಘ್ರದಿನಾಗಳ್ ।
ಸತಿಯಡಗಿಂದಗ್ನಿಯಾನನಕ್ಕಾನಂದ ॥
ಸ್ಥಿತಿಯನೆಸಗಲ್ಕೆ ತಾಂ ತ ।
ತ್ಪತಿಯಂ ನೆನೆದಸಿಯನಂಗಲತೆಗಾಗಿಸಿದಂ ॥ ೧೨

ಅಂತಾಯತಿ ಶಶಾಂಕಲೇಖೆಯಂ ಹತಂಗೆಯ್ಯಲಾನದಂ ಕಾಣಲಾಜಿದೆ

ಎಲೆಲೆಲೆ ಕಷ್ಟ ನೀಂ ಯತಿಯೆ ಅಂತಕನಲ್ಲದೆ ಖಡ್ಗಧಾರೆಯಂ ।
ಲಲನೆಯ ಕಂಧರಕ್ಕೆ ಜಡಿದಾನಿಸದಿರ್ ತೆಗೆಯೆಂದಗಲ್ದಿ ತ ॥
ತ್ಕಳಯತಿನಾಥನಂ ನಿಜಕರಾಸಿಯಿನಿರ್ದಡಿಗೆಬ್ಬಿನಾತನಾಂ ।
ತೆಳಿ ಜಡೆ ಕಂಥೆಯಂ ಸಸಿನೆ ಶಾಖೆಯ ಸಂಧಿಗೆ ಸೈತೆ ಸಾರ್ಚಿದೆಂ ॥ ೧೩

ಅದಲ್ಲದಾಯತಿಯ ಕಡಿಖಂಡಂಗಳಂ ಚಿತಾಗ್ನಿಗೀಡಾಡಲದಂ ಶಶಾಂಕಲೇ
ಖೆ ನಿರೀಕ್ಷಿಸಿ

ಎನ್ನ ಶರೀರಂ ಸತತಂ ।
ನಿನ್ನಿಂ ವಿಶಸನದ ದೆಸೆಯಿನಗಲಿತ್ತ ದಱಂ ॥
ನಿನ್ನೆಡೆಗೆ ತೆರಳ್ಚಲ್ಲದೊ ।
ಡೆನ್ನೆಡೆಗೆಯ್ತಂದೊಡೆನಗೆ ಸಲೆ ನೀಂ ಕಳೆಯುಂ ॥ ೧೪

ಅದಲ್ಲದೆಯುಂ,

ಹರಣಕ್ಕೆ ನೀನೆ ಕರ್ತಂ ।
ನಿರಾಕೆಯಿನ್ನಿತರಕಾಂತರೆನಗದಱಿಂದಾ ॥

ದರದಿಂ ಕಳಿಂಗನಗರಿಗೆ ।
ತೆರಳಲ್ಕಿನಿತರ್ಥಸಿದ್ಧಿಯೆಂದಳ್ ನಯದಿಂ ॥ ೧೫

ಎಂದೆನ್ನಂ ಕಳಾಂಕಲೇಖೆ ತನ್ನ ನಗರಿಗೆ ತೆರಳ್ಚಲಿಂದಾಗ್ರಹಿಸಲನಂತರಂ ಕಿನ್ನರನಿಂತೆಂದಂ:—

ಜಾಯಾಕಾಂತರ ನಿಚ್ಛ್ಚ ।
ಕ್ಕಾಯಾಸಂ ನಿನ್ನ ದೆಸೆಯಿನೀಗಳ್ ಕಳಿದ ॥
ತ್ತೀಯಿಜೆಗಾನೇಗೆಯ್ವಲ್ ।
ಶ್ರೇಯಸ್ಕರಕಾರ್ಯದೀಕ್ಷೆಯಂ ಮಯಿಗೆಯ್ಯಾ ॥ ೧೬

ಎನಲಾತಂಗಿಂತೆಂದಳಿಂ:—

ಎನ್ನಂ ಕಳಾಂಕಲೇಖಾ ।
ಕನ್ನಿಕೆಯಂ ತತ್ಕಳಿಂಗನಗರಿಗೆ ಶೀಘ್ರಂ ॥
ಕಿನ್ನರ ನಡಸೆನಲಾತಂ ।
ತನ್ನಾಜ್ಞೆಯಿನಾಗಳಿಟ್ಟನಲ್ಲಿ ನಿತಾಂತಂ ॥ ೧೭

ಅಂತೆನ್ನಂ ಕಳಿಂಗಕನ್ಯೆಯಂ ಕಿನ್ನರಂ ಕಳಿಂಗನಗರಿಯಲ್ಲಿರಿಸಿ ತಾಂ ತನ್ನ ದೇಶಕಕ್ಕೆ ತೆರಳ್ದಂ ಇತ್ತಲ್ ಕಳಿಂಗಕನ್ಯೆ ತನ್ನ ಕನ್ಯಾಸ್ಥಾನದಲ್ಲಿ
ತನ್ನ ಸಖಿ ಚಂದ್ರಲೇಖೆಯು ।
ನೆನ್ನಯ ಕಲದಲ್ಲಿ ನಿಱಿಸಿ ತದನಂತರದಿಂ ॥
ಕನ್ನೆ ಸಿಜಜನನಿಜನಕ ।
ರ್ಗನ್ನೆಟ್ಟನೆ ತಿಳುಹಲೆಯ್ದಿದಳ್ ತತ್ಕಥೆಯಂ ॥ ೧೮

ಅಂತಾಕೆ ರಾಜಾಲಯಕ್ಕೆಯ್ದಿ ತನಗಾಯತಿಯಿಂದಾವ ಸಂಕಟಸ್ಥಿತಿಯು ನಱಿಹಿಯನಂತರಂ

ತೆರಳಿವ ನೇಹದಿಂ ಧರಣಿನಾಥನ ನಂದನೆ ನಿಚ್ಛ್ಚನಿಚ್ಛ್ಚಲಾ ।
ದರಿಸಿಯನೇಕತಂತ್ರಿಗಳನಗ್ಗನ ಗೀತರಸಾತಿರೇಕದಿಂ ॥
ಸ್ಫಿರತರರಂಗದಿಂ ಸಕಲಗಂಧದಿನೆಂಟ್ಟಿಯಲರ್ಗಳಂ ಕಳಾ ।
ಧರೆ ನಲಿವೆನ್ನ ನೀತೆಱದಿನಾರಿಸಿಟ್ಟಳಧಿನಾಯಕಾ ॥ ೧೯

ಅಂತಾನಲ್ಲಿರಲಾಕೆ ನಾಲ್ಕೈರಱ್ವಿನಂ ಕಳಿಯೆ ಚಂದ್ರಲೇಖೆಯಾದಿಯಾದ ಸಖೀಜನರ್ ಸಹಿತಂ,

ನೆರೆದ ಸಖೀಜನಂ ಸಹಿತ ಸತ್ವರಕೆಯ್ದಿ ಕಳಾಂಕಲೇಖೆಯು ।
ಚ್ಚರಿಯೆನಲಾಗಳಲ್ಲಿ ಜಲಕೇಳಿಯನಂದೆಸಗಲ್ಕೆ ನೀಳ್ದ ತ ॥
ತ್ಸರಸಿಯನೆಯ್ದಲಂತ್ರದರಸಂ ಜಯಸಿಂಹನಗಲ್ದಿ ತಾಣದಿಂ ।
ತರಳೆಯನಾಕ್ಷಣಾ ನಡೆಸಿದಂ ನಿಜದೇಶಕೆ ತನ್ನ ಕಾಂಕ್ಷೆಯಿಂ ॥ ೮೦

ಅಂತಂತ್ರದೇಶದರಸು ಜಯಸಿಂಹಂ ಕಳಾಂಕಲೇಖೆ ಜಲಕ್ರೀಡೆಯೊಡ
ಲದಂ ಕಂಡಾಕೆಯಂ ಚಂದ್ರಲೇಖೆಯಾದಿಯಾದ ಸಕಲಸ್ತ್ರೀಯರಂ ನೇಹ
ದಿಂ ತನ್ನದೇವಿಕ್ಷಿ ನಡೆಯಿಸಲಂತವರನಾಂ ಕೇಳ್ದೆನ್ನಲ್ಲಿಯಾನಿಂತೆಂದೆಂ:—

ಎಲ್ಲಿಯು ಕಿನ್ನರಂ ಯತಿಯಬೆಲ್ಲಿದನೆಲ್ಲಿಯ ದೇಶಧಾತ್ರಿ ತಾ ।
ನೆಲ್ಲಿದಳಾಕಳಿಂಗನರನಾಥನ ನಂದನೆಯಾಕೆಯಿಂದೆನಾ ॥
ನಿಲ್ಲಿರಲಂತ್ರರಾಜಜಯಸಿಂಹನದೇಶಸಗಲ್ದಿಯಾಕೆಯಂ ।
ನಿಲ್ಲವೆ ತಾಳ್ದಿ ತನ್ನ ಧರೆಗೆಯ್ದಿದನೆಂದಱಿಲ್ದೆಂ ನಿರಂತರಂ ॥ ೮೧

ಎಂದಾಚಿಂತೆಯಿಂ ಕಳಿಂಗನಗರಿಯಲ್ಲಿರೆ

ನಾನಾದೇಶಂಗಳನ ।
ತ್ಯಾನಂದದಿಯೆಯ್ದಿ ತಿರುಗಿದಾಯಾಸಂ ತ ॥
ನ್ನಿನನದೊಳಱಿಯಲಾಗಿರೆ ।
ದೀನಂ ನಡೆತಂದನಲ್ಲಿಗಾರೆಂದಱಿಯೆಂ ॥ ೮೨

ಅಂತಿದಕ್ ದೇಶಾಂತರಿಯಾನಿರ್ವಲ್ಲಿಗೆಯ್ದಿರಲಾತನಂ ಕಂಡಿಂತೆಂದೆಂ:—

ನೀನೆತ್ತಣನೆಂದಾಂ ತ ।
ದ್ದೀನನನತ್ಯರ್ತದಿಂದೆ ಕೇಳಲ್ ನೀಂ ಕೇ ॥
ಳಾನಂತ್ರದೇಶದಿಂ ತತ ।
ಸ್ಥಾನಕ್ಕೆಯ್ದುಂಟೆನೆಂದನಾತಂ ನಯದಿಂ ॥ ೮೩

ಆಮೊಡಂತ್ರದೇಶದಲ್ಲಿಯ ಹದನೇನೆಂದಾಂ ಕೇಳಲಾತನಿಂತೆಂದಂ:—

ಜಯಸಿಂಹಕ್ಷಿತಿನಾಥನೀಯೆಯಿನಂದೇಳ್ತಿಂದ ಚಂದ್ರಾಸ್ಯೆ ನಿ ।
ಶ್ಚಯದಿಂ ಚಿನ್ನೆ ಕಳಿಂಗಕನ್ನೆ ನಿಜದಿಂ ಕಷ್ಟಗ್ರಹಾವಿಷ್ಟೆಯಾ ॥
ಗಿಯದಾರಂ ನೆನೆದೀಕ್ಷಿಸಳ್ ಕರೆಯೆ ಕೇಳಳ್ ನಾಪ ತಜ್ಞಾತಚಿಂ ।
ತೆಯಿನಿರ್ದಂ ತದಿಳೀಶನೀಹದನನಾಂ ಕೇಳ್ದಿಂ ಕರಂ ಸಂತತಂ ॥ ೮೪

॥ ಪೃಥ್ವೀ ॥

ಗ್ರಹಂ ನೆಲಸಿ ಕಾಂತೆ ಕಣ್ದೆಱೆಯಳಾಗಳನ್ನಕ್ಕ ಕಾ ।
ಯ್ದುಹಂ ಸತತರಾತ್ರಿಯೆಂದಱಿಯದೆಯ್ದೆ ಚಿಂತಾಕುಲಂ ॥
ರಹಸ್ಯದೆಡೆಗೆಯ್ದಿ ತನ್ನಯ ಸಖೀಜನಂ ಕಾಯ್ದಿರ ।
ಲ್ಕಿಹಂ ತನಗೆ ಹೇಳ್ದಿಳೀನಿಖಿಲವೃತ್ತವಂ ಕಾಣ್ಕೆಯಿಂ ॥ ೨೫

ಅಂತಾಕೆಯಿರಲ್ ಜಯಸಿಂಹಂ

ಈಕನ್ನಿಕೆಯಂಗದಿನಾ ।
ರೀಕಷ್ಟಗ್ರಹದ ಚೇಷ್ಟೆಯಂ ಸಲೆ ಯಂತಾ ॥
ನೀಕದಿನೀಗಳೆ ಕಳೆಯಲ್ ।
ಸಾಕೆನಿಸಿರ್ದರ್ಥತತಿಯನೀಯೆನೆ ಸತತಂ ॥ ೨೬

ಎಂದತಿಚಿಂತೆಯಂ ಧರಿಸಿ

ಎಲ್ಲಾ ದೇಶದ ಹಿರಿಯರ ।
ನೆಲ್ಲಲ್ಲಿಗೆ ಚರರನಟ್ಟಿ ಕರಸಿದನಾತಂ ॥
ನಲ್ಲಳ್ಗಾದ ಗರಂ ತಾಂ ।
ನಿಲ್ಲದುದರ್ಕೆಯ್ದಿ ಚಿಂತೆಯೊಳಾಂತನಿಳೀಶಂ ॥ ೨೭

ಇದಾನಱಿದ ಪದನೆಂದಾದೇಶಾಂತರಿಯೆನಗಱಿಪಲೆನ್ನ ಚಿತ್ತದೊಳಾನಿಂ
ತೆಂದೆಂ:—

ಕದಡಿಲ್ಲದೆನ್ನ ಕಾರ್ಯಂ ।
ಕ್ಕಿದಲೆತ್ತ ಪದನಾಶಕಾಂಕಲೇಖೆಯನೀಯಂ ॥
ದದಿನಿಲ್ಲಿಗೆಯ್ದಿಸಲ್ಕಿಂ ।
ದದಟಿಂದಾಂ ನೆನೆದೆನಧಿಕಧಿಷಣಸ್ಥಿತಿಯೊಂ ॥ ೨೮

ಅದೆಂತೆನೆ:

ಹಿಂದೆ ಶಕಾಂಕಶೇಖರಧರಾತಳದಂತಿಕದಲ್ಲಿ ಶಾಖೆಯಿಂ ।
ಚೆಂದದಿನಿರ್ದ ಶಾಖೆಯೆಡೆಯಲ್ಲಿರಿಸಿಟ್ಟ ಜಟಾಳಕಂಥೆಯುಂ ॥
ತಂದತಿರಾಗದಿಂ ತಳಿದೆನಾಯತಿಯಂತಿರಲಂತ್ರದೇಶಕಾ ।
ನಂದದಿನೆಯ್ದಿ ರಾಜನಗರಕ್ಕಿರದಾಂ ಸಲೆ ಸಾರ್ದೆನಾಕ್ಷಣಂ ॥ ೨೯

ಅಂತಾನಂತ್ರನಗರಕ್ಕೆಯ್ದಲವಱಂತಿಕದಲ್ಲಿ

ಕಳಹಂಸಯಾನದಿಂ ಶೀ ।
ತಳಜಳದಿಂ ಸರಸಿಜಾತಸಂತತಿಯಿಂದಂ ॥
ತಿಳಿದಿರ್ದ ತೀರಸಹಕಾ ।
ರಳತಾಳಯಿನಲ್ಲಿ ರಂಜಿಸಿತ್ತ ಧಿಕಸರಂ ॥ ೩೦

ಧೀರನರೇಂದ್ರನೀತಿನಯದಂತನಿಶಂ ಖರದಂಡರಂಜಿತಂ ॥
ತಾರಗೆದಾಣದಂತೆ ಯತಿಸಂತತಿಯಂತಿರೆ ಹಂಸಸಂಗತಂ ॥
ನಾರಿಯರಗ್ರಹಸ್ತ ಚಯದಂತೆ ನಿರಂತರಕಂಕಣಸ್ಥಿತಂ ।
ಸಾರಸದೇಳ್ಗೆಯಿಂ ಸರಸಿ ಕಣ್ಗೆಸೆದಿರ್ದುದಿಳಾಧಿನಾಯಕಾ ॥ ೩೧

ಅಂತಿರೆ,

ಜಯಸಿಂಹನ ನಗರಿಗೆ ಸಾ ।
ರೆಯಾದ ಖರದಂಡಷಂಡದಂತಿಕದಲ್ಲಿ ॥
ಕೆರ್ಯನೆಸಗಿ ಯತಿಯು ಚೆಂದದಿ।
ನಿಯತಿಯಿನಿರ್ದಂತ್ರರಾಜನುಂ ನಲಿದೆಜಗಲ್ ॥ ೩೨

ಆಗಳ್ ಕೆಲರಂ ಶಿಷ್ಯರ ।
ನಾಗಿಸಿಯಾರಾಧ್ಯನಾಟನಧಿಕಧ್ಯಾನ ॥
ಕ್ಕಾಗರನಾದಂತೆ ನಿಜಕ್ಕಾ ।
ಗಗನಕ್ಕಡರ್ದ* ದೃಷ್ಟಿಯಿಂದೆಸೆದಿರ್ದಿಂ ॥ ೩೩

ಅರಿದೆನೆ ಧರಾತಳಕ್ಕ ।
ಕ್ಷರಜ್ಞನಾಯಂತ್ರತಂತ್ರಸಾಧನನೆಂದೆ ॥
ಲ್ಲರ ಸನ್ನಿಧಿಯಲ್ಲಿ ನಿರಂ ।
ತರದಿಂದೆಲ್ಲಿ ಱಿಸೆ ಕೇಳ್ದನಾಜಯಸಿಂಹಂ ॥ ೩೪

ಅಂತಾನಾಸರಸಿಯ ತಡಿಯಲ್ಲಿರ್ಕೆಯನೆಸಗಿಯನಿಲಧಾರಣೆಯಿನಿರ್ದ ತೆಱ
ನಂ ಜಯಸಿಂಹನಾಗಳ್ ಕೇಳ್ದು,

ತಪೆಯದೆಯಂತ್ರಬೀಕದರಸಂ ಸಲೆಯೆನ್ನೆಡೆಗೆಯ್ದ ಶ್ಲೋಕದಿಂ ।
ದಡಿಗೆಱಗಿರ್ದೆ-ಲೇ ಯತಿಯೆ ಕೇಳ್ ದಯೆಯಿಂದೆ ಶಕಾಂಕಲೇಖೆಯಂ ॥
ಹಿಡಿವ ಗರಕ್ಕೆ ಶಾಸ್ತಿಗಳನಂಜದೆ ನೀನೆಸಗಂತದಂ ಕರಂ ।
ಜಡಿಯದೊಡೆನ್ನ ದೇಹಗತಿ ನಿಲ್ಲದಿದೇನೆಲೆಯೆಂದನಾಹ್ವಣಂ ॥ ೩೫

ಅಂತೆನಲಾಗಳಾನತಿಧ್ಯಾನದಿಂ ಕಣ್ದೆಱೆಯದಿರ್ದೊಡೆ
ಕೆಲದಲ್ಲಿ ನಿಂದ ಶಿಷ್ಯರ್ ।
ಕೆಲರೆಲೆ ಯತಿನಾಥ ಜಾನದಿಂದೆ ನಿಶಾಂತಂ ॥
ನೆಲಸಿರದೆ ದಯೆಯಿನೀಕ್ಷಿಸಿ ।
ಸಲಹಂತ್ರಧರೇಶನಂ ಧರಾಧರಧೈರ್ಯಾ ॥ ೩೬
ಕಂಗಳನರೆದೆಱೆದೀಕ್ಷಿಸಿ ।
ಯಂಗಜಹರರಕ್ಷೆ ನಿನಗೆ ನೆಲಸಲಿ ಘನದೇ ॥
ಕಂಗಳ್ ನಿನಗಾಗಲಿ ನಿಜ ।
ಸಂಗತಜಯಸಿದ್ಧಿಯಕ್ಕೆ ಕೇಳ್ ಜಯಸಿಂಹಾ ॥ ೩೭

ಎಂದಾತನಂ ಹರಸಿಯನಂತರಂ ಶಶಾಂಕಲೇಖೆಗಾದ ಗ್ರಹಸಂಚಾರಸ್ಥಿತಿಯನಿಂತೆಂದಂ:—

ಧರೆಯಧಿನಾಥ ಕೇಳ್ ನಿನಗೆ ರಕ್ಷೆಯನಂತಿಕದಲ್ಲಿ ಕಟ್ಟಿ ತ ।
ಳ್ತರೆ ನಿಜಕರ್ಣದಲ್ಲಿ ಕಿಱಿದಕ್ಕರದಾಯತಿಯಂ ತೆರಳ್ತಲೀ ॥
ಸರಸಿಯ ನೀಳ್ದಗಾಧಜಲದಲ್ಲಿರಲನ್ಯಶರೀರಿಯಾಗಿ ನೀಂ ।
ತರಳಿಯನಂಟಲಾಕೆಯ ಗರಂ ಸಲೆ ನಿಲ್ಲದಿದಲ್ತೆ ಸಾಧನಂ ॥ ೩೮

ಎಂದಾತನನಾಸರಸಿಯ ಜಲಾಂತದಲ್ಲಿರಲಾಜ್ಞೆಗೆಯ್ಯಲಾತನದನಂಗೀಕರಿಸಿ, ಆಬೊಡೆ ರಕ್ಷೆಯ ಸಿದ್ಧಾಕ್ಷರಂಗಳಂ ನೀನೆನಗೆ ದಯೆಗೆಯ್ಯಿನಲಾನಿಂತೆಂದೆಂ:—

ಕಡೆಗಣಿಸಿ ನಾಲ್ಕಕ್ಷರಮ್ಮಿನ ।
ದೆಡೆಯಂ ಸೈರಿಸಿಯನಂತರಂ ನೀನಾನಿ ॥
ರ್ದೆಡೆಗೆಯ್ತರೆ ತವ ರಕ್ಷೆಯ ।
ನಡಿಯಿಡದಿತ್ತಲ್ಲದಿಲ್ಲಿ ಜಾನಂಗೆಯ್ಯಂ ॥ ೩೯

ಎಂಬೊಡಂತೆಗೆಯ್ವೆನೆಂದಾತಂ ನಿಜಾಲಯಕ್ಕೆಯ್ದಿದಂ. ಇತ್ತಲಾಂ

ಸಿಕ್ಕಿದ ನರಸಂತತಿಯಂ ।
ಚಕ್ಕನೆ ತದ್ಗರಿಯನೀಗಳಾಳಲ್ಕಾನೇ ॥
ತಕ್ಕನೆನಿಸಲ್ಕೆ ಸಂದೆಗ ।
ದಕ್ಕಜದೆಡೆಯಿಲ್ಲ ನಿಶ್ಚಯಂ ತಾನಲ್ತೇ ॥ ೪೦

ಎಂದನಂತರಂ,

ಸರಸಿಯು ನೀಳ್ದಗಾಧಜಲದಲ್ಲಿ ನಿಜೇಚ್ಛೆಯಿನಗ್ರಪಾಲಿಯುಂ ।
ಸರಸದಿನಾಗಳಾನೆಸಗಿಯಿಟ್ಟುಗೆಯಿಂ ನೆರೆ ಕಟ್ಟಿ ಚಿಕ್ಕ ಛಿ ॥
ದ್ರವಜನೆಯುಂ ತೆರಳ್ದಿ ಯಗಲುಂ ನೆಱೆದಿರ್ದಱಿಗಲ್ಲನಲ್ಲಿ ತಾ ।
ದಿರಿಸಿದುನಂತರಂ ಸರಸಿಯಿಂ ತದ್ದೆಂ ತಡಿಗಂಜದಲ್ಲಿ ಯಿಂ ॥ ೪೧

ಅಂತಾನೀರಲ್ಲಿ ಪಾಲಿಯುನೆಸಗಿ ತಡಿಗೆಯ್ದಿ ನಾಲ್ಕೆರಲ್ದಿನಂ ಕಟಯೆ

॥ ಉಪೇಂದ್ರವಜ್ರೆ ॥

ಕಳಿಂಗಕನ್ಯಾಗ್ರಪದೇಹದಾಹ ।
ಕ್ಕೆಳಾಧಿನಾಥಂ ಸರಸೀತಪಕ್ಕಂ ॥
ಸಲೀಲೆಯಿಂದೆಯ್ದು ರಲಾನಂತ ।
ರ್ದಳಾತಯಕ್ಕಾನಿಱಿಸಲ್ ನೆಗಟ್ವಂ ॥ ೪೨

ಅಂತಾತಂಗೆ,

ರಕ್ಷೆಗಳಂ ಕಟ್ಟಿ ಲಸ ।
ದ್ವೀಕ್ಷೆಯನಾನೆಸಗಿ ಸರಸಿಯಲ್ಲಿ ನಿತಾಂತಂ ॥
ರಕ್ಷೆಯನಿರ್ಕೆಲದಿಂದಾ ।
ನಕ್ಷಯನಿಧಿಗೆಯ್ದಿ ತಂತ್ರಿಸಿದೆನತಿನಯದಿಂ ॥ ೪೩

ಅಂತಾನಾತಂಗೆ ರಕ್ಷೆಯುಂ ಕಟ್ಟಿ

ಎಲೆ ಜಯಸಿಂಹನೆ ಸರಸಿಯು ।
ಕೆಲನಂ ನಾಲ್ದೆಸೆಯನನ್ಯರಿಲ್ಲದ ತೆಱದಿಂ॥
ತಿಳಿದಾಗಳ್ ಜ್ಞೇಗಟೆಯ್ದುಂ ।
ಸಲೆ ತಾಟಸಲಾಗಳಲ್ಲಿ ಜಲಕ್ಕತಿಶಯದಿಂ ॥ ೪೪

ತಳತಂತ್ರಸಂತತಿಯನಾ ।
ಜಳಜಾಕರದೆಲ್ಲ ದೆಸೆಗಳಲ್ಲಿರಿಸಿ ಜಲ ॥
ಕ್ಕೆಳಿದಾಗಳ್ ಜಾನದೊಳಿರೆ।
ಲಳನೆಯ ಗರದೇಟ್ಗೆ ನಿಲ್ವುದಿದು ಸಿದ್ಧಾಂತಂ ॥ ೪೫

ನಿನಗಲ್ಲದೆ ದೀಕ್ಷೆಯನ ।
ನ್ಯನರಗಾರ್ನೀಯೆನವಱಿನನ್ಯಶರೀರಂ ॥

ನಿನಗಾಗಿ ಕತೆಗೆ ನಿನ್ನಂ ।
ಗನೆಯು ಗರಂ ನಿಲ್ವುದೀಗಳೀಕ್ಷಿಸಿಯಲ್ತೇ ॥ ೪೬
ಈತೆಱನಂ ನಾಳೆಸಗಿಂ ।
ದೀತಡಿಯಿಂದಿಚ್ಛೆಯಾದ ತಾಣಕ್ಕಾನಿಂ ॥
ದೇತಿರುಗಿ ತೆರಳ ನಾನಾ ।
ಖ್ಯಾತಿಯನಱಿಸಲ್ಕೆ ಹದನಿವಂ ಕೇಳ್ ನಯದಿಂ ॥ ೪೭
ಎಂದಾಗಳಾನಾತನಿದಿರಿಂ ತೆರಳ್ದಂತೆಗೆಯ್ದಾರಾತ್ರಿಯಲ್ಲಿಗೆ ತಿರುಗಿಯಾಸ
ರಸಿಯುಡಿಯಲ್ಲಿಯಾನೆಸಗಿದ ಶಾಲೆಗೆ
ಆನಾರಱಿಯದ ತೆಱದಿಂ ।
ಸಾನಂದದಿನೆಯ್ದಿ ರಾತ್ರಿಯಲ್ಲಿ ನಯುಂಗಂ ॥
ಡಾನಳನಾಕರಜಲದೆಡೆ।
ಗಾನೆಸಗಿದ ಶಾಲೆಯಲ್ಲಿ ನೆಲಸಿದೆನರಸಾ ॥ ೪೮
ಅಂತಾನಲ್ಲಿಯಡಂಗಿರೆ,
ಜಲಜಾಕರದೆಸ್ದೆಸೆಯಂ ।
ತಳತಂತ್ರದಿನೆಯ್ದಿ ರಕ್ಷೆಗೆಯ್ದರಸಂ ತ ॥
ಜ್ವಳದಂತಕ್ಕತಿಶಯದಿಂ ।
ಗಳಲನೆ ಜೇಗಟೆಯು ದನಿಯನೆಸಗಲ್ಕಾಗಳ್ ॥ ೪೯
ಅಂತಲ್ಲಿರ್ದ ಜೇಗಟೆಯು ದನಿಯನೆಸಗಲಾನಿರ್ದ ಶಾಲೆಯು ಕ್ಷಿಪ್ರದಿಂದಾ
ದನಿಯಂ ಕೇಳ್ದು,
ಜಯಸಿಂಹಕ್ಷಿತಿನಾಥನಿರ್ದ ಜಲದತ್ತಲ್ ಶೀಘ್ರದಿಂದಾಗಳಾ ।
ಲಯದಿಂದಾಂ ನಿಜಕಾರ್ಯಸಿದ್ಧಿತರದಿಂದೀಸಾಡಿ ಕಂಡಾಗ ನಿ ॥
ರ್ದಯದಿಂದಾತನನೆನ್ನ ಶಾಲೆಗೆಱತಂದಲ್ಲಿರ್ದ ಕಲ್ಲಿಂ ಕರಂ ।
ರಯದಿಂದಿಕ್ಕಿದೆನಳ್ಳಿಯಟ್ಟಿ ಸವದೆಂ ತದ್ರಾಜನಂ ತೀವ್ರದಿಂ॥ ೫೦
ದಾನವೆಗಜಂ ಲಸತ್ಸರಸಿಗಾರ್ತಿಬಿಂದಲ್ಲಿಯು ನೀರಜಂಗಳಂ।
ತಾನೆ ಕರಾಗ್ರದಿಂ ಕವಡಿ ಕಿಲ್ತಿಡಿಯಿಕ್ಕಿದೊಡಂದದಿಂ ನೆಗ ॥
ಲ್ದಾನರನಾಥನೇಱೆಯೆನಿಸಿರ್ದ ಶಿರಸ್ಸರಸೀಜದಿಂಡೆಯಂ ।
ಜಾನಿಸದಾಗಳಾಂ ಜಲದ ಜಕ್ಕಿಯುಗ್ಗೇಱಿಸಿಟಂ ನಿರಂತರಂ ॥ ೫೧

ಇಡಿದಿಡಿದಱಿಗಲ್ಲಿಂದಾ ।
ಜಡನಂ ಗಟ್ಟಸಿದೆನಾಗಳಿಟ್ಟಗೆಯಿಂದಾ ॥
ಯಿಡೆವುಂ ಕಟ್ಟಿದೆನಾತನ ।
ಕಪೆ ತೀರಿತನಱಿದೆನಾಕ್ಷಣಂ ನರನಾಥಾ ॥ ೫೨

ಅಂತದನಱಿದನಂತರಂ

ಜವೆಯಂ ಕಂಪೆಯುನಾಸರಸ್ಸಲಿಲವಲ್ಲೀಡಾಡಿ ಕೇಶಾಳಿಯಂ ।
ಕವೆಗಂಟಿಕ್ಕಿ ಧರೇಶನಾಂತ ಸಿಚಯಾಲಂಕಾರರತ್ನಾದಿಯಂ ॥
ಗಡಣಂ ರಂಜಿಸಿ ತಾಳ್ದಿ ಸಂಚಯದ ಚಿಪ್ಪಂ ಚೆಪ್ಪೆಯೊಂದಿಲ್ಲದಾಂ ।
ತಡಿಗೇಱಿಂದೆನನೇಕರೀಕ್ಷಿಸಿ ಲಸಚ್ಚಿತ್ರಂ ಜಗಕ್ಕೆಂದೆನಲ್ ॥ ೫೩

ಇದೆ ಚಿತ್ರಂ ಜಯಸಿಂಹನೀಸರಸಿಯಲ್ಲಿರ್ದ್ದಗಳಂ ಕೇಳಲಿ ।
ಕ್ಕಿದಲಂಕಾರಚಯಂ ಲಸತ್ಸಿಚಯಸಂಘಂ ದೇವದಿಂದಂ ಕಲಿ ॥
ಲ್ಪದೆ ತಾನನ್ಯಶರೀರಿಯೂಹಿಸದೆ ಯಂತ್ರಂ ತಂತ್ರಸಂಸಿದ್ಧಿಯಿಂ ।
ದದನೆಲ್ಲರ್ ಸಲೆ ಕೀರ್ತಿಸಲ್ಕೆ ನವದೆಂ ರಾಜಾಲಯಕ್ಕಾಕ್ಷಣಂ ॥ ೫೪

ಅಂತಾಂ ನವೆಯೆ

ಎನಗಿದಿರಲ್ಲಿ ರಂಜಿಸಿತಳಂಕೆಯು ದೇಹಳಿಯಿಂ ನೆಗಲ್ದಿ ಕಾಂ ।
ಚನಕಲಕಂಗಳಿಂ ಸಕಲರತ್ನನಿಘಟ್ಟಿತಚಂದ್ರಶಾಲೆಯಿಂ ॥
ಘನತರನಿಸ್ತುಳಸ್ಸಗಿತಜಾಳಕದಿಂ ಶಶಿಕಾಂತಖಂಡಸಂ ।
ಜನಿತಘರಾಚಿಯಿಂ ನಿಖಳಚಿತ್ರದಿನಾನರನಾಥಸಾಲಯಂ ॥ ೫೫

ಅಂತಾರಾಜಶಾಲೆಯನೀಕ್ಷಿಸಿ ನವೆಯಲಿದಿರಲ್ಲಿ,

ನಯನಾನಂದಕರಂ ನಿರಂತರಲಸದ್ರತ್ನಾರ್ಚಿ ಕಾಂತಂ ಕಥಾ ।
ಶ್ರಯಚಿತ್ರಂ ಜಯಘಂಟಿಕಾಂಚಿತದಿಶಂ ಸಿಂಹಾಸನಾಧಿಷ್ಠಿತಂ ॥
ಜಯಸಿಂಹಕ್ಷಿತಿನಾಥನಾದರಿಸಿದೈದೇತೇಱ್ಗೆಯಾಸ್ಥಾನಶಾ ।
ಲೆಯನಾನೀಕ್ಷಿಸಿಯಾಕ್ಷಣಂ ನೆಲಸಿದೆಂ ಸಂದೇಹಿಗಳ್ ಕಣ್ಗಿಡಲ್ ॥ ೫೬

ಅದಲ್ಲದೆ ಆಸ್ಥಾನಗೇಹಂ ಚಿತ್ರಾಂಕಿತದಿಂದಾಕಾಶದೇಱ್ಗೆಯಂ, ಚಂದ್ರಶಾಲಾರಂಜಿತದಿಂ ಚಂದ್ರಿಕಾರಾತ್ರಿಯಂ, ಸಿಂಹಾಸನಾಸ್ಥಾನದಿಂದರಣ್ಯರಾಜೆಯಂ, ಜಾಳಕಸಂತಾನದಿಂದಲರ್ಗಳ ಲತೆಯಂ, ಘನಸಾರಖಂಡಿತದಿಂ ಕಾ

ರ್ಗಾಲದಗ್ಗಳಕೆಯುಂ, ರತ್ನರಜಸ್ಸಲ್ಲೀಷದಿಂ ಕನಕಾದ್ರಿಯುಂ, ಕಾಷ್ಠಾದಿಜಾತಕನ್ಯಾಕಾರದಿಂ ದಿಶಾರಾಶಿಯಬ್ಬೆಯುಂ ಗೆಲಲ್ಕೆ ಸಾರ್ದಿರ್ದಾಸ್ಥಾನದೆಡೆಗೆ

ನರನಾಥಂಗೆ ಕಳಿಂಗಕನ್ನಿಕೆಯ ದೇಹಗ್ರಸ್ತಕಷ್ಟಗ್ರಹ ।
ಕ್ಕಿರದೀಗಳ್ ಘನಕಾಸ್ತಿಯುಂ ನೆಗಳಿಲೆಂದಾಯ್ತನ್ಯದೇಹಂ ಗಡಾ ॥
ದರದಿಂದಾನವಸೀಹ್ಮಸಲ್ ಮುಖಿದೆನೆಂದೆಯ್ತಂದಳಾಚಂದ್ರಲೇ ।
ಖಿ ರಣತ್ಕಂಕಣಕಿಂಕಿಣೀಪಸನದಿಂದಾಸ್ಥಾನಕಂದಲ್ತಿಯಿಂ ॥ ೫೭

ಅಂತಾಶಶಾಂಕಲೇಖೆಯು ಕೆಳದಿ ಚಂದ್ರಲೇಖೆಯಾಸ್ಥಾನದಲ್ಲಿರ್ದಿನ್ನನೀಕ್ಷಿಸಿ

ಈಯರಸಂ ಕಳಿಂಗಸತಿಯುಂ ಜಯೆಯಿಂ ಪರನಿಕ್ಕೆದಾಣದಿಂ ।
ದಾಮುತಿನಾಥನಂ ಹತಿಸಿ ತಂದತಿಸಾಹಸಿಯಂತಿರಿರ್ದನೆಂ ॥
ದಾಯತನೇತ್ರೆಯೀಕ್ಷಿಸಿದ ರೀತಿ ತದಾಸ್ಯದ ಚೇಷ್ಟೆಯಿಂ ಧರಾ ।
ಶ್ರೀಯಧಿನಾಥ ಕೇಳಱಿಯಲಾಯ್ತೆನಗಂದಿದಿರಲ್ಲಿ ನಿಶ್ಚಯಂ ॥ ೫೮

ಅಂತಾಕೆಯಾಸ್ಯಚೇಷ್ಟೆಯನಱಿದಾಗಳಿಂತೆಂದೆಂ:—

ಕಂಡೆಗ ಚಂದ್ರಲೇಖೆ ಜಯಸಿಂಹನನಂತಕನಿಕ್ಕೆಗಟ್ಟಿಯಾಂ ।
ಗಂಡಿಗನಾಗಿ ತನ್ನಿಲಯಕೆಯ್ದಿದೆನೀಹವನಂ ಸವೀಕ್ಷೆದಿಂ ॥
ಖಂಡಶಶಾಂಕಸನ್ನುತಲಲಾಟೆಗೆ ಚೆನ್ನೆ ಕಳಿಂಗಕನ್ನೆಗಾ ।
ದಂಡಿಗಳೀಗಳೆಂತಱಿಯದಂತಱಿವೆಂದೆನಿಳಾಧಿನಾಯಕಾ ॥ ೫೯

ಎನಲಾಚಂದ್ರಲೇಖೆ,

ಸಲಿಸವೆಯಿಯಾಕಾರಂ ।
ನೆಲೆಯಾದೊಡೆ ತತ್ಕಳಿಂಗಕನ್ನಿಕೆಯ ಗರಂ ॥
ನೆಲೆಯಲ್ತದಲ್ಲದಿರ್ದೊಡೆ ।
ನೆಲೆಯಾಕೆಗೆ ಕಡೆಗೆ ಗರವ ಚೇಷ್ಟೆ ನಿತಾಂತಂ ॥ ೬೦

ಎಂದೊಡಾಕೆಗಿಂತೆಂದೆಂ:—

ಸಂದೇಪಂ ನಿನಗೇಕೆ ಶಂಕರಧರಾಸ್ಥಾನಾಂತದಿಂ ಕನ್ನೆಯುಂ ।
ತಂದಾತಂ ಜಯಸಿಂಹನಂ ಹತಿಸಿ ತದ್ರಾಜ್ಯಕ್ಕೆ ಕೇಳೀಗಳೆ ॥
ಯ್ತಂದಾತಂ ನಿಜರೀತಿಯಿಂದಱಿಯಲಿಂ ನಿನ್ನಾಕೆಯೆಂದಾಕೆಯುಂ ।
ಚಂದಂ ರಂಜಿಸಲಿಟ್ಟಿಬೆಂ ಕೆಳದಿಯಿರ್ವಾರ್ತಾಣಕಾನಂದದಿಂ ॥ ೬೧

ಅಂತಾಕೆಯನತ್ತಲ್‌ಕಳುಹಿ ಇತ್ತಲಾಸ್ಥಾನದಲ್ಲಿರ್ದ್ದಲ್ಲರಂ ಸಶ್ಕರಿಸಿ ಕಳಿಂಗಕನ್ನೆಯು ಗ್ರಪಕಾರಣಂ ತದಾಕಾರಸ್ಥಿತಿಯೆನಗಾಯ್ತೆಂದಱಿಪಿಯನಂತರಂ ಶಕಾಂಕಲೇಖೆಯಿರ್ದೆಡೆಗೆಯ್ದಿ

ಎನ್ನಂ ಕಂಡಾಗಳಾಕನ್ನಿಕೆಯತಿಶಯದಿಂ'ಕಾಂತಿಯಂ ತಾಳ್ದಿಯೆನ್ನಂ।
ತನ್ನಿರ್ಕೆಯ್ಯಿಂ ಕರಂ ತಳ್ಕಿಸಿಯಧರಲಸತ್ಪಾರದಿಂ ಪೆಚ್ಚಿ ನಿಚ್ಚಂ ॥
ತನ್ನಂಗಶ್ರೀಷ್ಮಸಂಗಸ್ಥಿತಿಯಿನಧಿಕರಾಗಾಧಿಕಂ ಸಂದಿರಲ್ ಕಂ।
ಡೆನ್ನಂ ತನ್ನಿಂದೆ ಕಾರ್ಯ್ಯಂ ನೆಲೆಯೆಸಿಸಿರಲಾನಂದದಿಂದಿರ್ದೆನಾಗಳ್ ॥ ೬೦

ಅಂತೆನ್ನ ಸ್ನೇಹದಿಂ ಕಳಿಂಗಕನ್ನೆಗಾವ ಗರಂ ಕಱಿದಾಕಾರ್ಯ್ಯದೀಕ್ಷೆಯಂ ಕಳಿಂಗರಾಜಂಗಱುಹಲ್ ಚರರಂ ಕಳುಹಿಯನಂತರಂ ನಿನ್ನಂಭ್ರಯನಱಿಸಲೆಂದಿರಲನ್ನೆಗಂ

ಜಗದಧಿನಾಥ ಕೇಳ್ ನಿಜಸಹಾಯನೆನಲ್ ನೆಱೆದಂಗರಾಜನೇ।
ಲ್ಕಿಗೆ ನಿಱದಿಂ ಸಹಾಯವೆನಗೆಂದೆನಗಾಜ್ಞೆಯನಟ್ಟಲೀಗಳಿ ॥
ಲ್ಲಿಗೆ ನಲಿದೆಯ್ದಿ ನಿನ್ನ ಚರಣಂಗಳನೀಕ್ಷಿಸಿ ಧನ್ಯನಾದೆನಿಂ ॥
ದಗಣಿತಕಾರ್ಯ್ಯಸಿದ್ಧಿ ನೆಲೆಯಾಯ್ತೆನಗೆಂದಱಿದೆಂ ನಿರಂತರಂ ॥ ೬೫
ಎಂದು ರಾಜವಾಹನಂಗೆ ಮಂತ್ರಗುಪ್ತಂ ತನ್ನ ವೃತ್ತಾಂತಮಂ ಪೇಟ್ಪಿದುಂ;

ಧರಣಿಗೆ ನಿನ್ನ ಮಂತ್ರಮೆ ಫಲಂ ನಿಜಸತ್ವಮತೀವವಿಸ್ಮಯಂ।
ಪಿರಿಯು ತಪಂ ಕರಂ ಪೊಸತು ಬುದ್ಧಿ ವಿಚಿತ್ರಮೆನುತ್ತನೇಕಸಾಂ ॥
ದರವಚನಂಗಳಿಂ ಪದೆದು ಮನ್ನಿಸಿ ಸನ್ನುತಮಂತ್ರಗುಪ್ತನಂ।
ನಿರವಧಿತುಷ್ಟಿಯಿಂ ನಲಿದು ಮೆಚ್ಚಿದನಾಗಳಭಂಗವಿಕ್ರಮಂ ॥ ೬೮

॥ ಗದ್ಯ ॥

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗವಿಟ್ಕಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚಾಂಡರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ಮಂತ್ರಗುಪ್ತ ನಿರೋಷ್ಮಕಥಾವೃತ್ತಾಂತಂ

ತ್ರಯೋದಶಾಶ್ವಾಸಂ

—ವಿಶ್ರುತನ ಕಥೆ—

ಶ್ರೀನಂದನಮೂರ್ತಿ ಕಳಾ ।
ಸ್ನಾನಂ ವಿಶ್ರುತನ ಮುಖಮನೀಕ್ಷಿಸಿ ಕೇಳ್ದಂ ॥
ನೀನೆಸಗಿತ್ತೀನೆಂದಭಿ ।
ಮಾನಧನಂ ಕೂರ್ತಭಂಗವಿಟ್ಟಿಲಭೃತ್ಯಂ ॥ ೧

ಅಂತು ಕೇಳ್ದ ರಾಜವಾಹನಂಗೆ ವಿಶ್ರುತಂ ಕೆಯ್ಗಳಂ ಮುಗಿದು,

ಸೋದರರಿಲ್ಲರಂದದಿನಿಳಾತಳದೆಸ್ದೆಸೆಯೊಳ್ ತ್ವದೀಯಸ ।
ತ್ಪಾದಸದೋಜಮಂ ತ್ವರಿತದಿಂದಸುತ್ತಿರಲೆನ್ನ ಪೂರ್ವಪು ॥
ಣ್ಯೋದಯದಿಂದನೇಕಸುಕೃತಂ ನೆಲೆಗೊಂಡಪುಲಿರ್ದೊಂದು ಚೆ ।
ಲ್ವಾದೆಡೆಯಂ ಮನೋಜ್ಞಮುದಿನೆಯ್ದಿದೆನಾಂ ಭುವನಾಧಿನಾಯಕಾ ॥ ೨

ಅದಾವ್ರದೆನೆ:— †

ಹರಿಪದಸಂಗಮಂ ವಿವಿಧವೋಕ್ಷವಧೂನವನೈತ್ಯರಂಗಮಂ ।
ಪರಮುದಯೂಂಗನಂ ಸುರಸುಧಾಬ್ಧಿತರಂಗಮನುಗ್ರಪಾಪಸಿಂ ॥
ಧುರನುದಭಂಗಮಂ ಭುವನಮಂಗಳಗೇಹಸ್ಯವಂಗಮಂ ।
ಸ್ಥಿರಗಿರಿಶೃಂಗಮುಂ ಭರದಿನೆಯ್ದಿನೆನೊಸ್ಪಸ ಪಾಂಡುರಂಗಮುಂ ॥ ೩

ಅದಱ ಮಹತ್ವಮುಂ ಪ್ರಾಗಟಿಲೆನ್ನಳವಲ್ತು ಸಸುಸ್ತವೇಷತಾ ।
ಸದನಮನಂತತೀರ್ಥನಿಲಯಂ ಸಕಲೋರ್ವ್ಯಮಳಭೂಮಿ ವಿಷ್ಣು ವಿ ॥
ಚ್ಚಿದ ಮನೆ ಲೋಕಲೋಚನಮಸೋಹರಮಾಗಮಶಾಸ್ತ್ರಕೋಟಿಪು ।
ಟ್ಟಿದ ನೆಲೆ ಪಾಂಡುರಂಗಿ ಸುಜನಂಗಳಿವೆಯಾಟಿದ ತಾಣಮೆಂಬಿನಂ ॥ ೪

ಅದಲ್ಲದೆಯುಂ,

ಅದಱೊಳ್ ಗೋಪಾಲಕೇಳೀವ್ಯಸನಮನುಚ್ಚದಾನಂದದಿಂ ಕೃಷ್ಣರಾ
ಯಂ । ಪದುಳಂ ನಿಂದಿರ್ದು ಬೇಲ್ಪಿರ್ಗಭಿಮತಫಲಮಂ ಕೊಟ್ಟು ಸನ್ಮೂರ್ತಿಸಾಕಾ ॥ ರದ ಚಕ್ಕಿಲ್ವಿಂದಂ ನಿರಾಕಾರಿಗಳ ಬಗೆಯನೀಡಾಡಿ ಸಂದೇಹಮುಂ

† ಇಲ್ಲಿಂದ ಮುಂದೆ ಬರುವ ಪಂಡರಪುರದ ವರ್ಣನೆಯು ಸಂಸ್ಕೃತದಶಕುಮಾರ ಚರಿತ್ರೆಯಲ್ಲಿಲ್ಲ.

ಪೊ । ರ್ದದೆ ತೋರ್ಪಂ ದಿವ್ಯರೂಪಂ ಮನುಜತತ್ತಿಗೆ ಕೇಳ್ ವಿಟ್ಠಲಾಖ್ಯಾ
ನದಿಂದಂ ॥ ೫

ಮತ್ತಮಲ್ಲಿ,

ತಾವಿಪಯೋಷ್ಣಿ ನರ್ಮದೆ ಸುಗಾತಮಿ ಜಾಹ್ನವಿ ಕೃಷ್ಣವೇಣಿ ಗೋ।
ದಾವರಿ ತುಂಗಭದ್ರೆ ಸುರಗಂಗೆ ಕವೇರತನೂಜೆಯೆಂಬ ನಾ ॥
ನಾವಿಧಮಪ್ಪನೇಕನದಿಗಳ್ಗಧಿಕಂ ಹರಿಸನ್ನಿಧಾನಮು ।
ರ್ವೀವಳಯಪ್ರಸಿದ್ಧಮೆನೆ ಭೀಮರಥೀನಯೆಂಬುದೊಪ್ಪಗುಂ ॥ ೬

ಹರಿ ಗೋಪಾಲರೊಳಾಡಿದೊಂದೆಡೆ[1] ಪೆಗಲ್ಗೊಟ್ಟಿಂಡ ತಾಣಂ ಮನೋ।
ಡರಕೇಳೀಸ್ಥಳಿ ಗೋವ್ರಜಂ ನಲಿದ ಚಿಪ್ಪಂ ತನ್ನ ದೀತೀರದೊಳ್ ॥
ತರದಿಂ ರಂಜಿಪ ಪ್ರವೆಲ್ಲರೀಕ್ಷಿಸಲೆನಲ್ ಸತ್ಪಾಂಡುರಂಗಕ್ಕೆ ಭೀ ।
ಮರಥೀದೇವಿ ಸುದರ್ಪಣಂ ಗಡಮೆನಲ್ ಚೆಲ್ವಾಗಿ ಕಣ್ಗೊಪ್ಪಗುಂ ॥ ೭

ಮತ್ತಮಲ್ಲಿ,

ಪಲವ್ರ ಯುಗಂ ಸಮುದ್ರನದಿಕಾನನದೇವಗೃಹಾದ್ರಿಯೆಂಬ ಸು ।
ಸ್ಥಳದೊಳತೀವಘೋರತಪದಿಂ ಯತಿಗಳ್ ಮಿಗ ಕಾಣದಿರ್ಪ ವಿ ॥
ಟ್ಠಲನನನಂತರೀಕ್ಷಿಸಿ ನಿಜೇಚ್ಛೆಗೆ ಬೆಂಬಲಿಯಾಗಿ ತಂದ ನಿ ।
ಶ್ಚಳಮತಿ ಪುಂಡರೀಕಮುನಿ ತೀರದೊಳಿರ್ದ ನಿಳಾಧಿನಾಯಕಾ ॥ ೮

ಅಂತಿರ್ದ ದಿವ್ಯಕ್ಷೇತ್ರಮುಂ ಕಂಡು

ಎಲ್ಲಾ ತೀರ್ಥಂಗಳಿಂದಗ್ಗಳಮೆನಿಸುವ ತತ್ತೀರ್ಥಮುಂ ಮಿಂದು ಮತ್ತಾ ।
ನಲ್ಲಿಂ ಮೆಯ್ಯೊಕ್ಕುತುಂ ವಿಟ್ಠಲ ಜಯಜಯಮು ಎಂಬುತ್ತಮುದ್ಧ್ವಾನದಿಂ ಚಿ ॥
ತ್ತೊಲ್ಲಾಸಂಮಿಕ್ಕುಬರ್ಪನ್ನೆಗಮಿನಗಿದಿರೊಳ್ತೋಱಿದತ್ತು ಚ್ಛಕಾಖಾ ।
ಸಲ್ಲೀಲಂ ರಂಜಿಪುಂದುನ್ನತತರಪಿಚುಮಂದಾಳವಾಳಂ ಕುಜಾಳಂ ॥

ಬೇವಿನ ಕಟ್ಟೆ ಪುಣ್ಯವಧು ತನ್ನೊಲವಿಂ ಬರುತಿರ್ಪ ಬಟ್ಟೆ ನಾ ।
ನಾವಿಧಪಾಪದುಷ್ಟಮೃಗಮಂ ಕೆಡೆಯೆಚ್ಚುವ ಮಿಟ್ಟೆ ನವ್ಯಪು ॥
ಣ್ಯಾವಳರತ್ನಮಂ ಬಯಸಿ ಕಟ್ಟಿದ ಮೊಟ್ಟೆ ಕುಶಾಸ್ತ್ರಮಾರ್ಗಮಂ ।
ಭಾವಿಸೆ ಗೆಲ್ದ ಬಟ್ಟೆಯೆನೆ ರಂಜಿಪ್ರದಲ್ತೆ ಧರಾಧಿನಾಯಕಾ ॥ ೯

1. ಪಸಲ್ಗೊ. ಎಂದು ಪ್ರತಿಗಳ ಪಾ.

ಸನಕಾದಿಗಳಖಿಳಾಗಮ ।
ವಿಸಿಷ್ಟಯುಕ್ತಿಪ್ಪ ತಾಣಮೆಂದಾನಾಗಳ್ ॥
ಮನವೊಲ್ದದಕ್ಕೆ ಪೊಡೆಮ ।
ಟ್ಟನುನುಮುದಿಂ ಮತ್ತೆ ಮುಂದೆ ನಡೆಗೊಳ್ವಾಗಳ್ ॥ ೧೦

ನಲಿನಶವಾದಿದೇವನಿಕರಕ್ಕಮಗೋಚರಮಾದಭಂಗವಿ ।
ಟ್ಟಲನ ಮನೋಹರಾಕೃತಿಯನಾತನ ಪಾದಪಯೋಜಯುಗ್ಮಮುಂ ॥
ಚಲಿಸದ ದೃಷ್ಟಿಯಿಂ ಪದೆದು ನೋಡುತೆ ಕೈಮುಗಿದಿರ್ದ ಪಕ್ಷಿಸಂ ।
ಕುಲಪತಿಯುಪ್ಪ ಭೀಕರಗರುತ್ಮನನಾಂ ಮಿಗೆ ಕಂಡೆನುರ್ವಿಪಾ ॥ ೧೧

ಅಂತಾಗರುಡಂಗೆ ನಮಸ್ಕರಿಸಿ ಮತ್ತಂ ಪೋಗೆ ಮುಂದೆ
ಮದಗಂಧಕ್ಕೆ ಮದಾಳಿಗಳ್ ಮುಸುಱುದೋಲ್ ಸರ್ವಾಂಗದೊಳ್ ನೀಲರು।
ತ್ನನಲಂಕಾರಮನಾತ.....ಪರಮಹಸ್ತಂ ಶೂರ್ಪಕರ್ಣದ್ವಯುಂ ॥
ರದನೈಕಂ ನವರಕ್ತ ಚಂದನವಿಲಿಪ್ತಾಂಗಂ ಗಜಾಸ್ಯಂ ವರ ।
ಪ್ರದನಿರ್ದಂ ಪೊಡೆಮಟ್ಟಿನೆನ್ನ ಬಗೆಯುಕ್ಕೆಲ್ಲಾಗಳುರ್ವೀಶ್ವರಾ ॥ ೧೨

ಅಂತಾಂ ವಿನಾಯಕಂಗೆ ಪೊಡೆಮಟ್ಟಿಳಿಂ ತಳರ್ದು ಮುಂದೆ
ಜ್ವಲನಾಕ್ಷಂ ಕ್ರೂರದಂಷ್ಟ್ರಾಪ್ರಹಸಿತವದನಂ ಕುಂಡಲಂ ರುಂಡಮಾಲಾ।
ಗಲನುಗ್ರಾಹಿಂದ್ರಹಾರಂ ಡಮರುಗವಿಲಸತ್ಕೂಲಕಾಪಾಲಖಡ್ಗ ॥
ವಿಲಹಸ್ತಂ ಕ್ಷುದ್ರಘಂಟಾಚಿತಜಘನತಟಂ ರಂಜಿಸಲ್ ಕ್ಷೇತ್ರಪಾಲಂ ।
ನೆಲಸಿರ್ದಂ ಬಾಗಿಲೊಳ್ ಕಂಡೆಱಗಿದೆನೆನಸುಂ ಭಕ್ತಿಯಿಂದಂ ನೃಪಾಲಾ ॥

ಅಂತಾಂ ಕ್ಷೇತ್ರಪಾಲಂಗೆಱಗಿ ಮುಂದಂ ನೋಪ್ಪಿನಂ
ಅಭಿನವರತ್ನತೋರಣಮನೇಕಲಸತ್ಕಲಶಂ ಗರುತ್ಮವ ।
ಲ್ಲಭನ ಪತಾಕೆ ವೈಷ್ಣವಜಯಧ್ವನಿ ನಿರ್ಮಳಭಿತ್ತಿಕಾಸುಧಾ ॥
ಪ್ರಭೆ ನವಧೂಪಧೂಮಲತೆ ಮುಂಗಳವಾದಕಗೇಯನರ್ತಕೀ ।
ರಭಸಮನಾರತಂ ಮೆಱೆವ ವಿಷ್ಣುಲರಾಯಗೃಹಂ ವಿರಾಜಿಕುಂ ॥ ೧೪

ಅಂತಾದೇವತಾಯತನಮುಂ ಕಂಡಾಂ ಪ್ರದಕ್ಷಿಣಂಗೆಯ್ಯುತ್ತಲ್ಲಿ
ದೇವನಿತಂಬಿನೀಸಮುನಯುಂ ಬೆಸಕೆಯ್ವ ಸಮಸ್ತಭಾಗ್ಯಜ ।
ನ್ಮಾವನಿಯಾದ ತನ್ನ ನಯನಾಂಚಲದಿಂ ಭುವನಕ್ಕೆ ಸಂತತಂ ॥

ಜೀವನನುಂ ಪ್ರತಿಷ್ಠಿ ಸುವ ವಿಟ್ಠಲರಾಯನ ರಾಣಿ ರುಕ್ಮಿಣೀ ।
ದೇವಿಯರಭಿಗಾಂ ನಲಿದು ದೂರದೊಳಿರ್ದಿಱಿಗಿರ್ದಿನುರ್ವಿಪಾ ॥ ೧೫

ಅಂತಾದೇವಿಯರಂ ನಮಸ್ಕರಿಸಿಯನಂತರಂ

ಹಿಮಕರವಕ್ತ್ರೆಯರ್ ತ್ರಿದಶಕಾಮಿನಿಯರ್ ನವತಾರಕಾಸಮು ।
ದ್ಗಮನಮನಲರ್ಚಿ ತಮ್ಮ ನಯನಪ್ರಭೆಯಿಂ ಸಮಕಟ್ಟಿ ರುಕ್ಮಿಣೀ ॥
ರಮಣನ ಕೋಮಳಾಂಘ್ರಿಯುಗಳಕ್ಕ ನಿವೇದಿಸುವ ದದಿಂ ಸವಿ ।
ಭ್ರಮನುನೋಡರ್ಚಿ ಪ್ರೌಢ್ಢಪ್ರೌಢವಾಲೆಯನೆತ್ತು ವರಲ್ಲಿ ಬಾಲೆಯರ್ ॥ ೧೬

ಅಂತವಱೊಳ್ ಪವಣಿಲ್ಲದ ಪುಗಳಂ ಪರಮಪುರುಷಂಗೆ ಪಡೆದನಂತರಂ

ಪುಲಕಂಗಳ್ ಮೆಯ್ಯೊಳಪ್ಪೆದ್ವಯದೊಳಸುರಜಿನ್ಮೂರ್ತಿ ಜಿಹ್ವಾಗ್ರದೊಳ್ ನಿ।ರ್ಮಲನಾವಂ ಭಾಳದೊಳ್ ಸಂಪುಟಕರಮೆನಸುಂ ಚಿತ್ತದೊಳ್ ಭಕ್ತಿ ಭಾವಂ ॥ ನೆಲಸಲ್ ಮದಭ್ಯಗ್ರಸಂವೃದ್ಧಿಗೆ ಮಿಗೆ ನಲಿಯುತ್ತುಂ ಮುನಿಪ್ರೀತಿಯಿಂ ವಿ । ಟ್ಠಲನಂ ಕಂಡಾರ್ತರ್ದಂ ಮೆಲ್ಲಡಿಗೆಱಗಿ ಕೃತಾರ್ಥಾತ್ಮನಾದೆಂ ನೃಪಾಲಾ ॥ ೧೭

ಅಂತೆಱಗಿ,

ಅಡಿಗೆಱಗಿರ್ದೊಡೆ ರೂಪಿನ ।
ಸಡಗರಮಂ ಕಾಣಲರಿದೆನುತ್ತಾನಾಗಳ್ ॥
ಕಡುಪಿಂ ವಿಟ್ಠಲಮೂರ್ತಿಯ ।
ನೆಡವಱಿಯದೆ ನೋಡುತಿರ್ದೆನನಿಮಿಷಗತಿಯಿಂ ॥ ೧೮

ವರಮಕುಟಂ ಮುಗುಳ್ನಗೆ ತುಳುಂಕುವ ಮುದ್ದುವೊಗಂ ಜಗನ್ಮನೋ ।
ಹರಕರಕುಂಡಲಂ ಪೆಗಲ ಕಲ್ಲಿ ಲಸತ್ಪದಕಂ ನಿತಂಬದೊಳ್ ॥
ಸ್ಥಿರಮೆನಲಿಟ್ಟ ಹಸ್ತಯುಗಳಂ ಪೊಸಗೋವಳಗೋಲ್ ನಿಲೀನಸ ।
ಚ್ಚರಣಸರೋರುಹಂ ವೆಱಿವ ಚೆನ್ನಿಗ ವಿಟ್ಠಲರಾಯನೊಪ್ಪಿದಂ ॥ ೧೯

ನವಮೇಘಚ್ಛವಿ ಮೆಯ್ಗೆ ಮಂದಹಸಿತಂ ವಕ್ತ್ರಕ್ಕೆ ಶಂಖಿಂ ನವೀ ।
ನವೆನಲ್ ವಾಮಕರಕ್ಕೆ ಸತ್ಕಟಿಗೆ ಸತ್ಪಾಣಿವ್ಯಯಂ ಪಾದಪ ।
ಲ್ಲವಯುಗ್ಮಕ್ಕೆ ನೆಗಟ್ಟೆ ಯಿಟ್ಟಗೆ ಲಸತ್ಸಾಂದರ್ಯಭಾಗ್ಯಂ ಸಮು ।
ತ್ಸವವಿಶೇಷಂ ಸಮುದಾಯಕೋಭೆಯಸೆಯುಲ್ಕಂದೊಪ್ಪಿದಂ ವಿಟ್ಠಲಂ ॥ ೨೦

ಅಂತಿರ್ದ ವಿಟ್ಠಲದೇವನಂ ಕಂಡು

॥ ಪದ್ಯಗಳು ॥

ಜಯ ಜಯ ಜಯ ಜಗನ್ಮೋಹನಮೂರ್ತಿ ।
ಜಯ ದೇವ ಸುರಾಸುರಚಕ್ರವರ್ತಿ ॥
ಜಯ ಭಾಗವತಸ್ಮರಭಾಗ್ಯರೂಪ ।
ಜಯ ನಾಗನಿವಾಸಚಿತಪ್ರತಾಪ ॥
ಜಯ ನಿತ್ಯನಿರ್ಮಳಮುಖಪ್ರಸಾದ ।
ಜಯ ಸತ್ಯಲೋಕಲಂಘಿತಸುಪಾದ ॥
ಜಯ ಸರ್ವಲೋಕಪರಿಪೂರ್ಣದೇಹ ।
ಜಯ ಗರ್ವಿತಾಸುರಮುಖಾಬ್ಜದಾಹ ॥
ಜಯ ಜನ್ಮದುರ್ಘಟಮಹಾಬ್ಧಿತೀರ ।
ಜಯ ಮನ್ಮಥಾದಿವಿಜನೋಪಕಾರ ॥
ಜಯ ಪೂತನಾಪ್ರಬಲಜೀವಘಾತ ।
ಜಯ ದೂತದುಶ್ಯಕಟನಷ್ಟಭೂತ ॥
ಜಯ ವೃಕ್ಷರೂಪಯಮಳಾರ್ಜುನಾರಿ ।
ಜಯ ರಾಕ್ಷಸಪ್ರಕರಜನ್ಮವೈರಿ ॥
ಜಯ ನಂದಗೋಪಕುಲಕಲ್ಪವೃಕ್ಷ ।
ಜಯ ಚಂದ್ರಸೂರ್ಯರಂಜಿತನಿಜಾಕ್ಷ ॥
ಜಯ ಧೇನುವೃಂದನಿತ್ಯಪ್ರಸಾದ ।
ಜಯ ಗಾನನಿರ್ಗಳಿತವೇಣುನಾದ ॥
ಜಯ ಘೋರಕಾಳಿಯಭುಜಂಗಕಾಲ ।
ಜಯ ವೀರಕೇಶಿದುರ್ಮದಯುಗೂಲ ॥
ಜಯ ಕಷ್ಟಕುಕ್ಕುಟಕೃತಾಂತರೀಡ ।
ಜಯ ದುಷ್ಟರಜಕದಾನವವಿಭಾಡ ॥
ಜಯ ಪಂಡರೀಪುರವರಪ್ರವೇದ ।
ಜಯ ಪುಂಡರೀಕಮುನಿಪಪ್ರಸಾದ ॥
ಜಯ ಪಾಂಡವಪ್ರಕರಜೀವರೂಪ ।
ಜಯ ಪಾಂಡವಪ್ರಚುರರತ್ನದೀಪ ॥

ಜಯ ಭುಕ್ತಿಮುಕ್ತಿ ಫಲಸಿದ್ಧಿಕಾಯಂ।
ಜಯ ಭಕ್ತವತ್ಸ ಸುರೇಂದ್ರವಂದ್ಯ ॥
ಜಯ ರುಕ್ಮಿಣೀಸ ಮುಖಸರೋಜಭೃಂಗ ।
ಜಯ ರುಕ್ಮಿಣೀ ವಿಮಳಹೃದಯಾಂಗ ॥
ಜಯ ಪನ್ನಗೇಂದ್ರಕವನೀಂತಲ್ಪ ।
ಜಯ ಚೆನ್ನ ವಿಟ್ಠಲ ಸುರಕ್ಷಕಲ್ಪ ॥

—ಷಟ್ಪದಾಷ್ಟಕಂ—

ಶ್ರೀಗೆ ನಿರಂತರಂ ಬಹುದುರ್ನಿರಂ ಸಲೆ ಸೇವೆಗೆಯ್ದು ಬೆ ।
ಳ್ಳಿಗಿ ದುರಾಶೆಯಿಂದಿಹಪಕ್ಷತಿನಿಂದಿತನಾಗಿ ತೀವ್ರದೈ ॥
ನ್ಯಾಗವುಮುಂ ಕಟಿಲ್ಲಿ ಜಪಾದಪಯೋರುಹಭಕ್ತಿ ಭಾಗ್ಯಸಂ ।
ಯೋಗದೊಳಿರ್ಪ ಚಿತ್ತಮನಲಂಪಿನೊಳೀವ್ರದಭಂಗವಿಟ್ಠಲಾ ॥ ೧
ಸಿರಿ ಬೆರಕಲ್ಲ ಮಯ್ಮಱೆಯುಮ ಗರ್ವಿಸಿ ಮತ್ತೆ ದರಿದ್ರನಾಗಿ ।
ಲ್ಲರ ಮನೆಗಳ್ಗೆ ಮಾಡೆಡೆಯಾಡಿ ನಿವ್ಮಾರಿಸಿಕೊಂಡು ಸುಯ್ವ ಕಾ
ತರಿಸುವ ದುರ್ವಿಷಕಾಗುಣಮುಂ ಮಿಗೆ ಮಾಣಿಸಿ ನಿನ್ನ ಭಕ್ತಿ ಸಿಂ ।
ಪರಿಣತಮಪ್ಪ ಸಿದ್ಧಿಯನಲಂಪಿನೊಳೀವ್ರದಭಂಗವಿಟ್ಠಲಾ ॥ ೨
ನಿಜಗುಣನಮುಮಂ ಭುವನಮೋಹನಮಂಗಳಮೂರ್ತಿ ಯಂ ನು
ಭಜಿಸುವಿನಿಬ ಪೊಲ್ತು ಧನಪುತ್ರಕಳತ್ರನಿವಾಸಚಿಂತೆಯೊಂ ॥
ಬಹುಗರ್ವಮಯಿದ್ದ ನುಂಗಿ ನೆರೆ ದುರ್ಗತಿಗಿಕ್ಕುವ ದಂ ಖಗೇಶ್ವರ ।
ಧ್ವಜ ಕಿಂಗಿಕ್ಕಿ ನಿನ್ನಧಿಕಭಕ್ತಿಯನೀವ್ರದಭಂಗವಿಟ್ಠಲಾ ॥ ೩
ಪೃಥ್ವಿಯೊಳಿಮರ್ಮೆ ದೈವವಶದಿಂ ಮಿಗೆ ಮಾನುಷಜನ್ಮಮುಂ ಪ್ಪದಾ ।
ಡೆ ನಿಜದೈವಮುಂ ಭಜಿಸಲೊಲ್ಲದೆ ದುರ್ನಿರಂ ಪೊಗಟ್ಟು ಬೆ ॥
ಲೆಲನನಾರತಂ ಪೊರೆವೆನೆಂಬ ದುರಾಸೆಯನೊಕ್ಕು ನಿನ್ನ ಮೆ ।
ಗಳನಾವಗಂ ಭಜಿಪ ಬುದ್ಧಿಯನೀವ್ರದಭಂಗವಿಟ್ಠಲಾ ॥ ೪
ಪೆಱರ ಗುಣಾಗುಣಂಗಳನನೇಕವಿಧಂ ಪಲಱುಲ್ ನಿಮಿರ್ದ
ರಿಯೆನೆ ಜಿಹ್ವೆಯಾತ್ಮಗುಣಮುಂ ಪೊಗಲಿಲ್ ಮಿಗಿಲಪ್ಪದಂಬುಜೋ
ದರ ನಿಜನಾಮಮುಂ ಭಜಿಸಲೊಲ್ಲದದರ್ಕೆ ಸುಬುದ್ಧಿವೇಱ್ದು ನಿ ।
ನ್ನೊಲುತರನಾಮಮುಂ ಭಜಿಪ ಚಿತ್ತಮನೀವ್ರದಭಂಗವಿಟ್ಠಲಾ ॥ ೫ ೪

ಹಿತಮುಹಿತಂಗಳೆಂಬೆರಡಱೊ
ಳ್ಪ್ರತಿಮತಪಾಸ್ಪಮುಂ ಸಮುಯುಭೆ
ಗ್ರತಿಗಳವಸ್ಪ ಮುನ್ಮತಿಗೆ ಸತ್ಪಥವ
ಪತಿ ಭರದೀ ಸುಭಕ್ತಿಯನಲಂಪಿನೊಳ

ಮಾನವಭೋಗಭೂಮಿಯೊಳನಂತ
ನೀನೊಲವಿಂದೆ ಸೃಷ್ಟಿಸಿ ಮಗುಟ್ಟಿದಱಿಲ್ಲಿ
ದಾನವವೈರಿ ಭಾವಿಪ್ರದು ನೀತಿಯೆ ಮತ್ತನ
ತಾನಮನಿತ್ತು ನಿನ್ನ ದಯೆಯಿಂ ಪರಿರಕ್ಷಿಸಭ

ಎನಿತು ದಿನಂ ಬದುರ್ಮಂಕುವನಿತುಂ ದಿನವೆಂ
ತನೆಯನತೀವಪೂಜ್ಯನೆನೆ ಮಾಡಿ ಬಱಿಕ್ಕನಸಾ
ನವರತಿವೋಪದಿಂ ಚಲಿಸದಂತು ನಿಜಾಂಘ್ರಿನಿವಾ
ಟ್ಟನೆ ನೆಲಸಿರ್ಪ ಬಲ್ಬಗೆಯನೀಪ್ರದು ಬೇಱ್ಪೆನಭಂಗಂ ॥ 8

ಎಂದು ಮನೋರಥಸಿದ್ಧಿಯುಂ ಪಡೆಯಲೆಂದಾನಭಿ
ಹೃದಯಸರೋಜದೊಳ್ ನಲಿದು ವಿಟ
ಪದುಳದೊಳಿಟ್ಟು ನಾಮಬಲದಿಂದಸಿಕೊಟ್ಟಿಯನೆಯ್ದೆ ಗೆ
ರ್ಚಿರ್ದ ಸುಖಿರಾಜ್ಯಮುಂ ಪಡೆದು ವೈಷ್ಣವಬಂಧುಸಮೂಹಕ್ಕೆ ।
ಸದಮಳಬೋಧೆಯುಂ ತಿಳಿದು ಸತ್ಪಥನುಂ ಮಿಗೆ ಕಂಡೆನುರ್ವಿ

ಬಱಿಯಂ,

ಜೀಯ ನಿಜಾಂಘ್ರಿಯನಱಿಸ ।
ಲ್ಕಾಯೆಡೆಯಿಂದಂ ತೆರಳ್ದು ಪೋಪಾಗಳ್ ಕುಂ ॥
ಜಾಯಿತಸುಪುಣ್ಯವೃಷ್ಟಿ ।
ಕಾಯಮುಂ ತೀವಿರ್ದಣ್ಯಮುಂ ಮಿಗೆ ಕಂಡೆಂ ॥

ಫಲಮೆಸೆದಿರ್ದ ಮಾಮರನನುಳ್ದಿಳಿರೊಪ್ಪವ ಶಾಖೆ ಸ್ರಸ್ತ್ರಸಂ
ಕುಲಮಲದಿರ್ದವ ಸಂಪಗೆ ಮುಗುಳ್ಗಳನಾಂತದಿಪರ್ಮ್ಮತ್ತೆ ನನ್ಯಶೀ ।
ತಲಘನರಾಂಗಮುಳ್ಳಲದವ ಪಾವರಿ ಕಂಪಿನೆ ನುಣ್ಪವೆತ್ತ ಕೋ ।
ಮಲಸುರಪರ್ಣಿಕಾವಿತತಿ ರಂಜಿಪರಣ್ಯಮನೆಯ್ದಿದೆಂ ನೃಪಾ ॥

ಅಂತೆಯ್ದಲಲ್ಲಿ

ಜಿತಸಂವರ್ಧಿತತಾಪಂ ಘನಪ್ರತಿಲೋಪಮಂ ತೀರ್ಥಸಂ ।
ತತಿಸಂಕ್ಷೇಪನುನುರ್ವಿಂಕುಲಲಸದ್ವೀಪಮುಂ ಭೀಕರಾ ॥
ಕೃತಿಘೋರಾಂಬುಚಯಲೇಪವ ಮೊನದ್ವೀಪಮುಂ ಪಕ್ಷಿಸಂ ।
ತತಿಸಲ್ಲಾಪಮನೊಳ್ಕ ಕಂಡೆನೆಂ ಸದೂಪನುಂ ಕೂಪಮುಂ ॥ ೧೧

ಅದಲ್ಲದೆಯುಂ

ತ್ರಿದಶಾಂಗನೆಯರ್ ಪನ್ನ ।
ಸುದತಿಯರಂ ನೋಡಲಿಬ್ಬ ಪಾತಾಳನಿವಾ ॥
ಸದ ಬಟ್ಟೆಯ ಮೆಱೆ ।
ದ್ದುದು ಕೂಪ ಸಲೀವತಾನಿಜರೂಪಂ ॥ ೧೨

ಆಕೂಪತಡಿಯೊಳ್ ಸಾ ।
ಮ್ಯಾಕಾರಸೊಂಪಸನ್ನಿಭಂ ಕುಳ್ಳಿರ್ದಂ ॥
ಕೋಕನಿಭಂಡಬದೊಳ್ ।
ತೂಕಡಿಸುವ ವಾಸನಂತಿರೊರ್ಬ್ಬ ಕುಮಾರಂ ॥ ೧೩

ಆತಕೆಯೊಳ್ ದೀರ್ಘವು ।
ಪಾತನಸ್ಯಂಕಚಿತ್ತನಧಿಕಬಲಂ ಸಂ ॥
ಪ್ರೀತನಿದರ್ಂ ನೀತಿಕ ।
ಳಾತಸನ್ಮೂರ್ತಿವಪೆದಪೋಲೆ ಮುತ್ತೊರ್ಬರ್ಂ ॥ ೧೪

ತವರಿರ್ಬರಂ ಕಂಡಾನಾಬಾವಿಯ ತಡಿಗೆ ಪೋಗಿ

ಮುನದಿನೀಂಟುವಂತೆ ತಡಿಯೊಳ್ ಮಿಗೆ ನಿಂದು ಕಾನುಂಗಿ ಕೂಪವಾ ।
ರಿಗಮಿಗೆ ನೋಡಿ ನೀರೊಳ್ಗೆವ್ವುಪಾಯಮನಾಂ ಮಿಗೆ ಕಂಡದೊಂದು ಬ॥
ಳ್ಳಿ ಕಡೆಯಲ್ಲಿ ಪೆರ್ಬಿದಿರ ನಾಳಿಯನಾರ್ದಿನೆ ಕಟ್ಟಿ ಮೆಲ್ಲನೆ ।
ಲ್ಲಿ ಲಲಿತಾಂಬುವಂ ಪದೆದು ಸೇಂದಿದೆವಾಗಳಳಾಧಿನಾಯಕಾ ॥ ೧೫

ಅಂತು ಸೇಂದಿ

ಕರಚರಣಾದ್ಯವಯವಮುಂ ।
ರಸದಿಂ ಕರ್ಚಿ ಮಿಕ್ಕ ಶೀತಾಂಬುವನ್ಕಾ ॥

ದರದಿಂದೀಂಟಿ ಬಿಟ್ಟಿಕ್ಕಾಂ ।
ಪರಿಹರಿಸಿದೆನಧ್ವಖೇದಮಂ ನೃಪತಿಲಕ್ಷ ೧೬
ಅಂತು ಬಲಿಲ್ಕೆಯಂ ಪಿಂಗಿಸಿಯಾಕಾರನ ಬದೊಳಿದಾತನ ಮೊ
ಗಮಂ ನೋಡಿ ನೀನೆತ್ತಣವನೆಂದಾಂ ಕೆಯಾತನಿಂದಂ:—
ಕೇಳಿಲೆ ಜೀವದಯಾಪರ ।
ಭೂಲೋಕವಿಳಾಸಮಖಿಳವಿದ್ಯಾವಾಸಂ ॥
ಶ್ರೀಲಲನಾಜನ್ಮಗೃಹಂ ।
ಲೀಲೆಯೊಳಿ ವಿದರ್ಭದೇಶಮತಿರಮಣೀಯಂ ॥ ೧೭
ದೇಶಂ ಸೌಖ್ಯಪ್ರದೇಶಂ ಸಕಲಸುಕೃತಕೋಶಪವಿ ಕೃಪಂಚಕ ।
ಕ್ಲೇಶಂ ನಿತ್ಯಪ್ರಕಾಶಂ ದುರಿತನಿಕರಪಾಶಂ ವಿಶಾಳಾಭ್ರ ॥
ಕಾಶಂ ಸ್ತೋತ್ರಪ್ರದೇಶಂ ಮದನಕದನದೇಶಂ ಜಗನ್ಮಿತ್ರವಾಸ ।
ದ್ಯಾಸಂ ತಾನೆಂಬ ಪೆಂಪಂ ತಳೆದು ಮೆಱೆವುದಾನೇವೊಗಳ್ವೆನಿತಾಂತಂ ॥
ಅಂತಾವಿದರ್ಭದೊಳ್ ಜನ ।
ಸಂತತಿಗಾನಂದಮಂ ನಿರಂತರವೀಯಲ್ ॥
ಕಾಂತುವಿನ ನಗರಿಯಂತೆ ನಿ ।
ತಾಂತಂ ರಂಜಿಪ್ಪುದು ನೋಡೆ ಧಾರಾನಗರಂ ॥ ೧೮
ನರರೆಲ್ಲರ್ ಚತುರರ್ ವಿಳಾಸಿನಿಯರೆಲ್ಲರ್ ಪ್ರೌಢೆಯರ್ ವಾಕ್ಯದ
ಚ್ಛರಿಯೆಲ್ಲಂ ಸ್ಮರಶಾಸ್ತ್ರದೋಜೆ ದಿನವೆಲ್ಲಂ ಕಾಮಪರ್ವಂ ಸ್ಮೇ ॥
ವರವೆಲ್ಲಂ ಜಲಕೇಳಿಯಿಕ್ಕೆ ವನವೆಲ್ಲಂ ಕಂತುಗೇಹಂ ಫಲೋ ।
ತ್ಕರವೆಲ್ಲಂ ರಸನತ್ಪಲಂ ನಿಜವೆನಲ್ ತತ್ಪತ್ತನಂ ರಂಜಿಕುಂ ॥ ೧೯
ಪುರಮವನಿದೇವಿಯಾನೂ ।
ಪುರನುಖಿಳಜಗನ್ನಿವಾಸದಿದಿರ್ಗೊಪ್ಪವ ಗೋ ॥
ಪುರಮೆಸೆವ ವಿಟರ ಮೆಯ್ಸೊಂ ।
ಪು ರತ್ನೀಶನ ಪೆಂಪು ಸುಜನರಂಸ ನಿತಾಂತಂ ॥ ೨೦
ಅಪುರದರಸಂ ಸಕಳಕ ।
ಳಾಪತಿ ಪೆಸರಿರ್ತ್ತ ಭೋಜವಂಶಂ ನಿಖಿಳಾ ॥

ಶಾಪರಿಪೂರಿತಕೀರ್ತಿಧ ।
ರಾಪಾಲಂ ಪುಣ್ಯವರ್ಮನೆಂಬ ನರೇಂದ್ರಂ॥ ೧೧

ಆಪುಣ್ಯವರ್ಮಂಗೆ

ನೀತಿಗಳೋಜೆಯಂ ಸಕಳಧರ್ಮರಹಸ್ಯಮನೊಪ್ಪುವಾಗಮ ।
ಖ್ಯಾತಿಯನುದ್ಭಟಾಸ್ತ್ರದಖಿವಂ ಪರನಾರ್ಥನಿಧಾನವಂ ಪರ ॥
ಪ್ರೀತಿಯನೊಂದುಗೂಡಿ ಪಡೆದಾ ಕಮಳೋದ್ಭವನೆಂಬ ಮಾಟ್ಕೆಯಿಂ ।
ಭೂತಳವಲ್ಲಭಂಗೆ ವಸುರಕ್ಷಿತನೆಂಬನಮಾತ್ಯಶೇಖರಂ ॥ ೧೨

ಬಳಿಕ್ಕಾ ಪುಣ್ಯವರ್ಮಂ ಕೆಲವ್ರಕಾಲದಿಂ ಮೇಲೆ ಕಾಲಮಂದಿರಮನೆಯ್ದೆ

ಜನವಿನುತಪುಣ್ಯವರ್ಮನ ।
ತನಯಂ ಖಿಸರ್ವೆತ್ತನಂತವರ್ಮಂ ನವಯೌ ॥
ವನಮನದಿಂ ವ್ಯಸನೋನ್ಮ ।
ತ್ತನಾಗಿ ದುರ್ವೃತ್ತಸಂಗದಿಂದಿರ್ದಿನೆಗಂ ॥ ೧೩

ಅದಂ ಕಂಡು ವಸುರಕ್ಷಿತಂ ಬುದ್ಧಿವೇಲಿಲೆಂದನಂತವರ್ಮಂಗಿಂತೆಂದಂ:—

ಅಷ್ಟವದಂಗಳಂ ತೊಱೆದು ಸಾತ್ವಿಕಭಾವದೊಳಿರ್ದು ಧರ್ಮದೊಳ್।
ಚೇಷ್ಟಿಸಿ ಶಾಸ್ತ್ರದೊಳ್ ತಿಳಿದು ಸಜ್ಜನಗೋಷ್ಠಿಯೊಳಿರ್ದು ಸಂತತಂ ॥
ಶಿಷ್ಟರನೊಲ್ಮೆಯಿಂ ಪೊರೆದು ದುಷ್ಟರನೋವದೆ ತೀರ್ಚಿ ಸರ್ವಸಂ।
ತುಷ್ಟವೆನಲ್ಕೆ ಜೀವಿಸ್ಪದು ನೀತಿಯಿದಲ್ತೆ ಧರಾಧಿನಾಯಕಾ ॥ ೧೪

ನನವಿಧವೇವತಾರ್ಚನೆಗಳಂ ದ್ವಿಜಪಾಲನೆಯಿಂ ಸವಿಸ್ತರಜ್ಞೀ ।
ವನನೊಸೆದಾತ್ಮವೆಂಬ ಬಗೆಯಿಂ ಮನವೊಲ್ದು ಗುರೂಪದೇಶಮಾ ॥
ರ್ಗವನೊಳಕೊಂಡು ಸಚ್ಚರಿತದಿಂ ವ್ಯಸನಕ್ಕೊಳಗಾಗದೋಜೆಯಿಂ ।
ತವೆಯದ ಪಾಪಪುಣ್ಯದಱವಿಂದಿರದಾತನ ಬಾಳ್ಕೆ ನಿಷ್ಫಲಂ ॥ ೧೫

ಕನಸಿನ ರಾಜ್ಯದಂತೆ ಮುಗಿಲೊಡ್ಡಿನ ರೂಪುಗಳಂತೆ ವಾರ್ಧಿಯೊ ।
ಗ್ಗಿನ ತೆರೆಯಂತೆ ಗಾಳಿಗಿದಿರೊಡ್ಡಿದ ಕೆಂಜೊಡರಂತೆ ಪುಲ್ಲ ಕಿ ॥
ಚ್ಚಿನ ಸಿರಿಯಂತೆ ಜೋಡೆಯರ ಮೆಚ್ಚಿನ ಮೋಹನವಂತೆ ..... ।
† .....ರಂದವೆಂದಱಿದು ಪೋಪುದು ಸತ್ಪಥದೊಳ್ ಕಳಾವಿದಂ ॥ ೧೬

† ಜೀವವಜಿರಂ ಎಂದು ಪಾಠ.

ಮುದಮುಖಿಗಳ್ಗೆ ದುರ್ವ್ಯಸನಿಗಳ್ಗೆ ನಿರಂತರಪಾಪಕರ್ಮಿಗ ।
ಳ್ಗೊದಗಿದ ನಾಸ್ತಿಕರ್ಗೆ ಪ್ರಸಿಕರ್ಗೆ ಕರಂ ಪಿಶುನಪ್ರಿಯರ್ಗೆ ಧ ॥
ರ್ಮದ ರುಚಿಯಿಲ್ಲದರ್ಗೆ ಬಿಳನೀತ್ರಿಗಳಂ ಮಿಗೆ ಪೇಳಲೇಕೆ ಬ ।
ರ್ದೆದೆ ಹೃದಯಕ್ಕೆ ಪುಣ್ಯಗತಿ ಸಜ್ಜನಸಂಗಮುದಿಲ್ಲದಿರ್ದರೊಳ್ ॥ ೨೩

* * * * †

॥ ಗದ್ಯ ॥

ಇದು ನಿಖಿಲಬುಧಜನಮನೋವನಜವನದಿವಾಕರಕಿರಣಪ್ರತಿಮಪ್ರಸನ್ನ
ಶ್ರೀಮದಭಂಗವಿಟ್ಠಲಪದಾಂಭೋಜಮತ್ತಮಧುಕರ
ಮಧುಸೂದನನಂದನ ಸರಸಕವಿ ಚಾಂಡರಾಜ ವಿರಚಿತಮಪ್ಪ

ಅಭಿನವ ದಶಕುಮಾರಚರಿತೆಯೊಳ್

ವಿಶ್ರುತಕಥಾವೃತ್ತಾಂತಂ

ಚತುರ್ದಶಾಶ್ವಾಸಂ

ಅ ಭಿ ನ ವ ದ ಶ ಕು ಮಾ ರ ಚ ರಿ ತೆ

ಸಂ ಪೂ ರ್ಣಂ.

† ನಮಗೆ ದೊರೆತ ಪ್ರತಿಗಳಲ್ಲೆಲ್ಲಾ ಇಲ್ಲಿಂದ ಮುಂದೆ ಗ್ರಂಥವಿಲ್ಲ.